ಸಂಖ್ಯೆ : ೧೦೬೫ 1931-32-ನೆಯ ಸಾಲಿನವರು

ಜೀವನಚರಿತ್ರೆ ಪುಸ್ತಕವು

ಪ್ರಥಮಾನುಬಂಧ ಬೆಳ್ಳಿ ಪದಕ

ಪುಸ್ತಕ ಪ್ರದರ್ಶನ ೧೯೮೯

ಪ್ರಥಮಾನುಬಂಧ ಕನ್ನಡ

ಡಿ.ಚನ್ನಬಸಪ್ಪನವರ

(ಮುಖ್ಯ-ಅಧ್ಯಾಪಕರು)

ಪ್ರಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಸರಮೇಳ ವಿದ್ಯಾಲಯ

ಹೆಪ್ಪೂಟಿ ಚನ್ನಬಸಪ್ಪ ವ್ಯಕ್ತಿ. ದೊಡ್ಡಬಸ್ಸೆ. ಧಾರವಾಡ

ಜನವರಿ–೧೯೩೨ Reg. No. B. 3691

(ಇದರಲ್ಲಿ ಕನ್ನಡ ಬಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	ಪಾಚನ ಪಾಕಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಪಚ್ಚುಕಡಮೆಗಳು	೧
೨.	ಶಿಶುಶಾಲೆಗಳು	೯
೩.	ಮುಂಬೈ ಸ್ಥಾಪನೆಯು	೧೩
೪.	ಬಿಲ್ಲ ಹಾಗು ತುಳಸೀಗಿಡಗಳು	೧೪
೫.	ಬಾಕಿಗಳ ತಾಳೆಯ ವಿಷಯವಾಗಿ ಕೆಲವು ವಿಚಾರಗಳು ...	೨೨
೬.	ಪುಸ್ತಕ ಪರಿಚಯ	೨೫
೭.	೧೯೩೧ನೆಯ ಇಸವಿಯಲ್ಲಾಗುವ ಗ. ಮುಕ್ತಳ ವ್ಹ. ಫಾ. ಪರೀಕ್ಷೆಗೆ ಗೊತ್ತು ಪಡಿಸಿದ ವಿಷಯಗಳು	೨೯
೮.	೧೯೩೧ನೆಯ ಇಸ್ಪಿಯಲ್ಲಾಗುವ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ವಿಷಯಗಳು ...	೩೧
೯.	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು ೧೯೩೨	೩೨

Printed by K R, Bhise at the Karnatak Printing Works, Dharwar
and Published by D. V. Kale, B. A., Head Master,
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದ

	ಬೆಲೆ ರೂ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಿಕೃತ)	೦-
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧-
ಲಘುವ್ಯಾಕರಣ (ವೈ. ಕಟ್ಟೀಕೃತ)	೦-
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-(
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ ಗೆ	೦-
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-
,, ೩ನೇ ,,	೦-
,, ,, ೪ನೇ ,,	೦-
ಅಂಕಗಣಿತ (ಗಾಂವಕರಕೃತ) ೩ನೇ ,,	೦-
ಧಾರವಾಡ ಜಿಲ್ಲಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦-
ವಿಜಾಪೂರ ,, ,, (,,) ೩ನೇ ,,	೦-
ಧಾರವಾಡ ಜಿಲ್ಲಾ ,, (ಕುರಡೀಕೃತ)	೦-
ಹಿಂದುಸ್ತಾನ ಭೂಗೋಲು (ಮಗದಾಲಕೃತ)	೦-
ನುಡಿಗನ್ನಡಿ ೩ನೇ ಭಾ. (ಪಂ. ಪೂಜ್ಹಾರಕೃತ)	೦-(
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-(
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-
ಭೂಮಿತಿ (ಚಂದಾವರಕರ ಕೃತ)	೦-
ಸರಸ್ವತೀ ವಿಜಯ (ಬೂದೀಹಾಳಕೃತ)	೮-

ಪತ್ರೆ:— **ವಿ. ಆರ್. ಶಿವನಾಗಪ್ಪ**
ಬುಕ್‌ಸೇಲರ ಹುಬ್ಬ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫ | ಜನವರಿ ೧೯೬೭ | ವರ್ಷ ೮ ಸಂ. ೧೦

ವಾಚನಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಮೆಗಳು

ಲೇಖಕ:— ಶ್ರೀ. ಎಂ. ಪಿ. ಪೂಜಾರ್; ಕ. ಪಂಡಿತ, ಟ್ರೇ. ಸ್ಕೂ. ಧಾರವಾಡ

೧೯೫೬ನೆಯ ಇಸವಿಯಲ್ಲಿ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಜರುಗಿದ ಶಿಕ್ಷಕ ಸಮ್ಮೇಲನದಲ್ಲಿ "**ಶಿಕ್ಷಣ ಸಂಸ್ಥೆಗಳಲ್ಲಿ ವಾಚನಪಾಠಗಳನ್ನು ಕಲಿಸುವ ಪದ್ಧತಿಗಳು**" ಎಂಬ ವಿಷಯವನ್ನು ಕುರಿತು ಮಾತಾಡಿದ್ದೆವು. ಆ ವಿಷಯವು ಅದೇ ವರ್ಷದ ಆಗಸ್ಟ್ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಲೇಖರೂಪವಾಗಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ವಾಚನಪಾಠಗಳನ್ನು ಕಲಿಸುವ ಮೆಟ್ಟುಗಳು, ಅವುಗಳ ಪ್ರಯೋಜನಗಳು ಮೊದಲಾದುವುಗಳ ವಿವೇಚನೆಯಿದೆ. ಈಗ 'ವಾಚನಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಿಮೆಗಳು' ಎಂಬ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಿದೆ. ಇದು ತಿಳಿವುದಕ್ಕೆ ಲೇಖವನ್ನು ಓದುವುದು ಅವಶ್ಯವಾದುದರಿಂದ ಅದನ್ನು ಮೊದಲು ಒಮ್ಮೆ ಓದಬೇಕೆಂದು ಪಾಠಕರನ್ನು ವಿನ್ನಯಿಸುವೆವು.

ವಾಚನಪಾಠವನ್ನು ಕಲಿಸುವುದೆಂದರೆ ಪಾಠದಲ್ಲಿ ಬಂದ ವಿಷಯವನ್ನು ತಿಳಿಸುವುದು, ಪಾಠವೋದುವುದನ್ನು ಕಲಿಸುವುದು ಹೀಗೆ ಎರಡು ಭಾಗಗಳನ್ನು

ಅದು ಒಳಗೊಂಡಿದೆ; ಎಂದರೆ **ವಿಷಯಜ್ಞಾನದ ಪಾಠ, ಓದನ್ನು ಕಲಿಸುವ ಪಾಠ** ಎಂದು ಒಂದು ವಾಚನಪಾಠದಲ್ಲಿ **ಎರಡು ಪಾಠ**ಗಳಾಗುವುವು. ಈ ಎರಡು ಪಾಠಗಳಿಗಾಗಿ ಕೆಳಗೆ ಹೇಳಿದ ೮ ಮೆಟ್ಟುಗಳು ಗೊತ್ತುಮಾಡಲ್ಪಟ್ಟಿವೆ:—

೧. **ಆರಂಭ. (ಉಪೋದ್ಘಾತ)**
೨. **ಶಿಕ್ಷಕನ (ಭಾವಬೋಧಕ) ವಾಚನ.**
೩. **ವಿದ್ಯಾರ್ಥಿಗಳ ಮೌನವಾಚನ.**
೪. **ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.**
೫. **ಅರ್ಥವಿವರಣೆ.**
೬. **ಶಿಕ್ಷಕನ ಮಾದರಿವಾಚನ.**
೭. **ವಿದ್ಯಾರ್ಥಿಗಳ ವಾಚನ.**
೮. **ಮುಗಿಸುವುದು. (ಉಪಸಂಹಾರ)**

[ಪಾಠದೊಳಗಿನ ಹೊಸ ಕಠಿಣ ಶಬ್ದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸುವುದು, ವ್ಯಾಕರಣವಿಚಾರ ಮುಂತಾದುವುಗಳೊಡನೆ.]

ಈ ಪದ್ಧತಿಯು ಟ್ರೇ. ಸ್ಕೂ. ನಲ್ಲಿ ೪।೫ ವರ್ಷಗಳಿಂದ ಸಾಗುತ್ತಬಂದಿದೆ. ಪದ್ಧತಿಯೆಂಬುದು ಒಂದು ರೂಢವಾದ ದಾರಿ. ಮುಟ್ಟಬೇಕಾದ ಸ್ಥಳಕ್ಕೆ ಇಲ್ಲವೆ ಗುರಿಗೆ ದಾರಿಗಳು ಬೇರೆಬೇರೆ ಇರುವಂತೆ ಸುಲಭತೆ, ಸವಿೂಪ ಮೊದಲಾದ ತತ್ತ್ವಗಳಿಂದ ಪದ್ಧತಿಗಳೂ ಬೇರೆಬೇರೆ ಇರಬಹುದು. ಒಂದು ಪದ್ಧತಿ ಇದಿರಿಗೆ ಬಂದರೆ ಅದನ್ನೇ ಯಾವಾಗಲೂ ಹಿಡಿದುಹೋಗಬೇಕೆಂಬ ನಿರ್ಬಂಧವಿಲ್ಲ. ಗುರಿಗೆ ಹೋಗಿ ಮುಟ್ಟುವುದೇ ಮುಖ್ಯವಾದ ಕೆಲಸವು. **ಶಿಕ್ಷಕನು ಯಾವದೊಂದು ಪದ್ಧತಿಯ ದಾಸನಾಗಬಾರದು.** ವಾಚನ ಪಾಠಗಳನ್ನು ಕಲಿಸುವುದಕ್ಕಾಗಿ ಮೇಲೆ ಹೇಳಿದ ಮೆಟ್ಟುಗಳಲ್ಲಿ ಕೆಲವು ಹೆಚ್ಚು ಕಡಮೆಗಳನ್ನು ಇಲ್ಲಿ ಹೇಳುವೆವು.

ಶಿಕ್ಷಕನ (ಭಾವಬೋಧಕ) ವಾಚನವು ೨ನೆಯ ಮೆಟ್ಟು; ಈ ವಾಚನದ ಉದ್ದೇಶವೇನೆಂದರೆ, ಶಿಕ್ಷಕನು ತಾನು ಪಾಠವನ್ನು ಚೆನ್ನಾಗಿಯೂ ಸಾವಕಾಶವಾಗಿಯೂ ಓದುತ್ತ ಪಾಠದ ಭಾವವನ್ನು ಬಾಲಕರು ಗ್ರಹಿಸುತ್ತಹೋಗುವಂತೆ ಮಾಡುವುದು. ಈ ವಾಚನದಿಂದ ಪಾಠದ ಎಲ್ಲ ಭಾವವನ್ನು ಮಕ್ಕಳು ಗ್ರಹಿಸಲಾರರೆಂಬುದು ನಿಜವು; ಸ್ಥೂಲವಾಗಿಯಾದರೂ ಅವರು ಗ್ರಹಿಸುವುದಕ್ಕೆ ಶಿಕ್ಷಕನ ವಾಚನವು ನೆರವಾಗುವುದು. ಇದು ಹಲವು ಪಾಠಗಳಲ್ಲಿ ಬೇಕಾದುದಾದರೂ

ಕೆಲವು ಪಾಠಗಳಲ್ಲಿ ಅಷ್ಟೊಂದು ಪ್ರಯೋಜನಕಾರಿಯಾಗುವುದಿಲ್ಲ. ಸುಲಭವಾದ, ಕಥಾತ್ಮಕವಾದ ಪಾಠಗಳಿದ್ದರೆ ಶಿಕ್ಷಕನ ಈ ವಾಚನದ ಉಪಯೋಗವಾಗುವುದು. ಉದಾ : ಮೊಹರಮ್ ಹಬ್ಬ ಳನೆಯ ಪು. ೧೬ನೆಯ ಪಾಠ; ಕಳ್ಳರನ್ನು ಮೋಸಗೊಳಿಸಿದ್ದು ಳ. ೧೭; ಪನ್ನಾದಾಸಿ ಳ ೧೮; ಮುಂ. ತಾತ್ತ್ವಿಕವಾದ, ಚರ್ಚಾತ್ಮಕವಾದ, ಕಠಿಣ ಪಾಠಗಳಿದ್ದರೆ ಶಿಕ್ಷಕನ ಆರಂಭದ ವಾಚನವು ಅಷ್ಟೊಂದು ಫಲಕಾರಿಯಾಗುವುದಿಲ್ಲ. ಉದಾ : ದೇವರು ಸರ್ವಜ್ಞನು ಳ. ೧೨; ದೇವರ ನ್ಯಾಯವೂ ಪ್ರೀತಿಯೂ ಳ. ೧೩; ನಿಯಮಿತತನವೂ ಸಮಯನಿಷ್ಠತೆಯೂ ಳ. ೨೫; ಮುಂ. ಇಂತಹ ಪಾಠಗಳನ್ನು ಬಾಲಕರು ತಾವೇ ಸಾವಕಾಶವಾಗಿ ಓದಿಕೊಳ್ಳುವುದರಿಂದಮಾತ್ರ ಪಾಠದ ಭಾವವನ್ನು ಕೆಲ ಮಟ್ಟಿಗೆ ತಿಳಿದು ಕೊಳ್ಳಲಾಪರು.

ಬಾಲಕರು ತಾವೇ ಪಾಠವನ್ನು ಸರಿಯಾಗಿ ಓದಿಕೊಂಡು ತಿಳಿದುಕೊಳ್ಳುವಷ್ಟು ಪ್ರಬುದ್ಧರಾದಾಗಲೂ ಶಿಕ್ಷಕನ ಆರಂಭದ ವಾಚನವು ಬೇಕಾಗುವುದಿಲ್ಲ. ಈ ಕಾರಣದಿಂದಲೇ ಇಲ್ಲಿಯ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿಯೂ, ಟೀಕಾಪಾಠ ಮಾದರಿಪಾಠಗಳಲ್ಲಿಯೂ ೫ನೆಯ ಇಯತ್ತೆಯಿಂದ ಹಿಡಿದು ಮೇಲಿನ ತರಗತಿಗಳಿಗೆ ವಾಚನಪಾಠಗಳನ್ನು ಕಲಿಸುವಾಗ ಈ ಮೆಟ್ಟನ್ನು ಬಿಡುವುದು ವಾಡಿಕೆಯಾಗಿದೆ.

ವಿದ್ಯಾರ್ಥಿಗಳ ಮೌನವಾಚನವು ೫ನೆಯ ಮೆಟ್ಟು. ಇದು ನಡೆದಾಗ ವಿದ್ಯಾರ್ಥಿಗಳಿಗೆ ತಿಳಿಯದಿರುವ ವಾಕ್ಯ, ಶಬ್ದ ಇವುಗಳನ್ನು ಒಬ್ಬೊಬ್ಬರಿಗೆ ತಿಳಿಸಿ ಹೇಳುವುದು ಈಗ ನಡೆದ ಶಿಕ್ಷಕನ ಕೆಲಸವು. ಆದರೆ ಅಲಸರಾದ ಕೆಲ ವಿದ್ಯಾರ್ಥಿಗಳು ಪಾಠವನ್ನು ಸರಿಯಾಗಿ ಓದಿಕೊಳ್ಳುವುದಿಲ್ಲ; ಕೆಲವರು ಓದಿಕೊಂಡರೂ ಅದರಲ್ಲಿ ಮುಖ್ಯವಾದ ಅಂಶಗಳು ಯಾವವೆಂಬುದನ್ನು ಗ್ರಹಿಸುವುದಿಲ್ಲ. ಕೆಲವರು ಕಠಿಣ ಶಬ್ದಗಳ ಅರ್ಥವನ್ನು ಮಾತ್ರ ತಿಳಿದುಕೊಂಡರಾಯಿತೆಂದು ಬಗೆಯುವರು. ಈ ತರದ ದೋಷಗಳನ್ನು ತಪ್ಪಿಸುವುದಕ್ಕೆ ಒಂದು ಉಪಾಯವನ್ನು ಪೂಡಬಹುದು. ಬಾಲಕರು ಮೌನವಾಚನವನ್ನು ಆರಂಭಿಸುವ ಮುಂಚೆ ಶಿಕ್ಷಕನು ಆ ಪಾಠದ ಮುಖ್ಯಾಂಶಗಳನ್ನು ಕುರಿತು ೪।೫ ಪ್ರಶ್ನೆಗಳನ್ನು ಕರಿಯಹಲಗೆಯ ಮೇಲೆ ಬರೆದಿಡಬೇಕು; ಮತ್ತು "ನೀವು ಓದಿಕೊಂಡ ಬಳಿಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕಾಗುವುದು" ಎಂದು ಬಾಲಕರನ್ನು ಎಚ್ಚರಿಸಬೇಕು. ಈ ಪ್ರಶ್ನೆಗಳು ಪಾಠದ ಸಾರಾಂಶವನ್ನೆಲ್ಲ ಕುರಿತು ಇರಬೇಕು. ಮೌನವಾಚನವನ್ನು ಆರಂಭಿಸುವ ಮೊದಲು ಕ. ಹ. ಯ ಮೇಲಿನ ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು ಪ್ರಯೋಜನಕರವಾಗಿದೆ. ಮೊದಲೇ ಪ್ರಶ್ನೆಗಳನ್ನು

ವಿದ್ಯಾರ್ಥಿಗಳ ಇದಿರಿಗೆ ಇಡುವುದರಿಂದ ಅವರು ಪಾಠದ ಕಡೆಗೆ ಲಕ್ಷ್ಯಗೊಟ್ಟು ಓದುವುದಕ್ಕೆ ಪ್ರೇರಣೆ ದೊರೆಯುವುದು.

೩ನೆಯ ೪ನೆಯ ಇಯತ್ತೆಗಳನ್ನು ಹಿಡಿದು ಮುಂದಿನ ಇಯತ್ತೆಗ ವಿದ್ಯಾರ್ಥಿಗಳಿಗೆ ಮೌನವಾಚನದಿಂದ ಉಪಯೋಗವಾಗುವುದು. ಅವರ ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು, ನಿಂತಲ್ಲಿ ಶಿಕ್ಷಕನನ್ನು ಕೇಳಿ ತಿಳಿದ ಕೊಂಡು ಪಾಠದ ಭಾವವನ್ನು ಗ್ರಹಿಸುವ ಶಕ್ತಿಯುಳ್ಳವರಾಗಿರುವರು. ಆದ ೧ನೆಯ ೨ನೆಯ ಇಯತ್ತೆಗಳ ವಿದ್ಯಾರ್ಥಿಗಳು ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು ಪಾಠದ ಭಾವವನ್ನು ಗ್ರಹಿಸಲಾರರು. ಅವರಿಗೆ ಮನಸ್ಸಿ ನಲ್ಲಿ ಓದಿಕೊಳ್ಳುವುದೇ ಮೊದಲು ಕಠಿಣವೆನಿಸುವುದು. ೧ನೆಯ ಇಯತ್ತೆಯವರ ಕಣ್ಣಿನಿಂದ ಇಡಿ ಶಬ್ದವನ್ನು ಒಮ್ಮೆಲಿ ಓದಲಾರರು; ಅಕ್ಷರಗಳನ್ನು ಹೊಂದಿಸಿ ಕೊಂಡು ಶಬ್ದಗಳನ್ನು ಗ್ರಹಿಸುತ್ತ ವಾಕ್ಯಗಳನ್ನು ಓದುವುದರಲ್ಲಿಯೇ ಅವ ಶಕ್ತಿಯ ವ್ಯಯವಾಗುವುದು. ಆದುದರಿಂದ ಭಾವವನ್ನು ಗ್ರಹಿಸುವುದು ಅವರಿಗೆ ಸುಲಭವಾಗುವುದಿಲ್ಲ. ಇದರಿಂದ ಅವರ ಮೌನವಾಚನಕ್ಕೆ ಬಹಳ ವೇಳೆ ಹಿಡಿ ಯುವುದು. ಆದರೆ ಮೌನವಾಚನವು ಬಹಳ ಉಪಯುಕ್ತವಾದುದು. ಇಡಿ ಆಯುಷ್ಯದಲ್ಲಿ ಮನುಷ್ಯನು ತನಗಾಗಿ ಓದುವುದು ಮೌನವಾಗಿಯೇ ನಡೆಯು ವುದು; ನಡೆಯಬೇಕು. ಬಾಲಕರಿಗೆ ಇದರ ರೂಢಿಯನ್ನು ಶಿಕ್ಷಕರು ಮಾಡಿ ಸಲೇಬೇಕು. ರೂಢಿಯು ಕ್ರಮವಾಗಿ ಉಂಟಾಗುವುದು. ಬಾಲಕರು ೩ನೆಯ ಇಯತ್ತೆಯನ್ನು ದಾಟುವ ವೇಳೆಗೆ ಅವರು ಸರಿಯಾದ ಮೌನವಾಚನದ ರೂಢಿ ಯುಳ್ಳವರಾಗಬೇಕು. ಆದುದರಿಂದ ೩ನೆಯ ಇಯತ್ತೆಯಿಂದ ಮೌನವಾಚನ ವನ್ನು ಆರಂಭಿಸುವುದು ಲೇಸು. ೩ನೆಯ ಇಯತ್ತೆಯಲ್ಲಿ ಅಷ್ಟೊಂದು ಫಲಕಾರಿ ಯಾಗದಿದ್ದರೂ ಮೌನವಾಚನದ ಅಭ್ಯಾಸವು ಅವರಲ್ಲಿ ಉಂಟಾಗುವುದು. ೧ನೆಯ ಇಯತ್ತೆಯವರಿಗೆ ಮೌನವಾಚನದ ಫಲವು ಸಾಕಷ್ಟು ಕಾಣಲಾರದು. ಈ ವಿಚಾರ ಗಳಿಂದ ಟ್ರೇ. ಸ್ಕೂ. ನ ವಿದ್ಯಾರ್ಥಿಶಿಕ್ಷಕರು ಕೊಡುವ ಪಾಠಗಳಲ್ಲಿಯೂ ಶಿಕ್ಷಕರು ಕೊಡುವ ಪಾಠಗಳಲ್ಲಿಯೂ ೧ನೆಯ ಇಯತ್ತೆಯಲ್ಲಿ ಮೌನವಾಚನದ ಮೆಟ್ಟು ಇಲ್ಲ; ೩ನೆಯ ಇಯತ್ತೆಯಲ್ಲಿ ಮೌನವಾಚನದಿಂದ ಆಗಬೇಕಾದ ಪ್ರಯೋಜನವು ಆಗುವುದೆಂದು ನಿರೀಕ್ಷಿಸುವುದಿಲ್ಲ.

ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು ೪ನೆಯ ಮೆಟ್ಟು. ಈಗ ಸಾಧಾರಣವಾಗಿ ಪಾಠದಲ್ಲಿ ಬಂದ ವಿಷಯದ ಅನುಕ್ರಮದಿಂದ ಸಾರಾಂಶವನ್ನು ಕೇಳಿಕೊಳ್ಳುವುದುಂಟು; ಎಂದರೆ ೧ನೆಯ ವಾಕ್ಯವೃಂದ (ಪ್ಯಾರಾ) ದಲ್ಲಿ ಬಂದ

ವಿಷಯವನ್ನು ಕುರಿತು ಮೊದಲು, ತರುವಾಯ ಶಿನೆಯ ವಾಕ್ಯವೃಂದದಲ್ಲಿ ಬಂದ ವಿಷಯವನ್ನು ಕುರಿತು ಈ ಕ್ರಮವನ್ನನುಸರಿಸುವರು. ಕೆಲವು ಪಾಠಗಳು ಈ ಕ್ರಮಕ್ಕೆ ಅನುಕೂಲವಾಗಿರುವುವು. ರಾಮನು ವನಕ್ಕೆ ತೆರಳಿದ್ದು, ಳ. ೪; ಕಳ ಕೊಂಡ ಒಂಟೆಯ ಕಥೆ ಳ. ೬; ಮಹಮ್ಮದಪೈಗಂಬರರ ಶಾಂತಗುಣ, ಳ. ೧೦; ಕಳ್ಳರನ್ನು ಮೋಸಗೊಳಿಸಿದ್ದು ಳ. ೧೭. ಮುಂ. ಇಂತಹ ಪಾಠಗಳಲ್ಲಿ ಸುಲಭ ದಿಂದ ಕಠಿಣ ವಿಷಯಗಳು, ಇಲ್ಲವೆ ಸಂಗತಿಗಳು ನಡೆದ ಅನುಕ್ರಮದಿಂದ ಬರೆದ ವಿಷಯಗಳು ಬಂದಿರುವುವು. ಎಡ್ವರ್ಡ್ ಬಾದಶಹರು ಳ. ೨೭; ಭೀಷ್ಮನ ಪ್ರತಿಜ್ಞೆ ಳ. ೪೩. ಈ ತರದ ಚರಿತ್ರಾತ್ಮಕ ಪಾಠಗಳಲ್ಲಿಯೂ ವಾಕ್ಯವೃಂದಗಳ ಅನುಕ್ರಮ ದಿಂದ ಸಾರಾಂಶವನ್ನು ಕೇಳಿಕೊಳ್ಳಬೇಕು. ಆದರೆ ಕೆಲವು ಪಾಠಗಳಲ್ಲಿ ಸುಲಭ ದಿಂದ ಕಠಿಣಕ್ಕೆ ಸಾಗುವದು, ಇಲ್ಲವೆ ಸಂಗತಿ ನಡೆದ ಅನುಕ್ರಮ ಮುಂ. ತತ್ತ್ವ ವನ್ನನುಸರಿಸಿರುವುದಿಲ್ಲ. ಬಿಕ್ಕಟ್ಟಿನ ಪ್ರಸಂಗದಲ್ಲಿ ಹೆದರದಿರುವುದು ಳ. ೩೧. ಈ ಪಾಠದಲ್ಲಿ ಮೊದಲು ಧೈರ್ಯದ ಸ್ವರೂಪವಿವೇಚನೆಯಿದೆ. ಬಳಿಕ ಧೈರ್ಯಶಾಲಿ ಗಳಾದ ಶಿವಾಜಿ, ವಿಲ್ಬರ್ ಫೋರ್ಸ್, ಲೆಸೆಪ್ಸ್ ಇವರ ಕಾರ್ಯಗಳನ್ನು ಉದಾ ಹರಿಸಿದ್ದಾರೆ. ಪಾಠದ ಕೊನೆಯಲ್ಲಿ, ಧೈರ್ಯದ ಮಹತ್ತ್ವದ ವಿವೇಚನೆಯಿದೆ. ಕರ್ತವ್ಯದಕ್ಷತೆ ಳ. ೧೫. ಈ ಪಾಠದಲ್ಲಿ ಮೊದಲು ಕರ್ತವ್ಯದಕ್ಷತೆ ಎಂದರೇನೆಂಬು ದರ ವಿವೇಚನೆಯಿದೆ; ಬಳಿಕ ಕರ್ತವ್ಯದಕ್ಷನಾದ ಬರ್ಕನ್‌ಹೆಡ್ ಹಡಗದ ಕಪ್ತಾನನ ಕರ್ತವ್ಯದಕ್ಷತೆಯ ಪ್ರಸಂಗದ ವರ್ಣನೆಯಿದೆ. ಇಂತಹ ಪಾಠಗಳಲ್ಲಿ ಉದಾಹರಣಗಳನ್ನು ಮೊದಲು ಕೇಳಿಕೊಂಡು ಅವುಗಳಲ್ಲಿ ತೋರಿಬರುವ ಗುಣಗಳ ಕಡೆಗೆ ಸಾಗಿದರೆ **"ವಿಶೇಷದಿಂದ ಸಾಮಾನ್ಯದ ಕಡೆಗೆ ಸಾಗು"** ಎಂಬ ಶಿಕ್ಷಣ ತತ್ತ್ವವನ್ನನುಸರಿಸಿದಂತಾಗುವುದು. "ನಿಯಮಿತತನವೂ, ಸಮಯನಿಷ್ಠತೆಯೂ" ಈ ಪಾಠದಲ್ಲಿ ನಿಯಮದಿಂದ ಕೆಲಸ ಮಾಡುವುದು, ವೇಳೆಗೆ ಸರಿಯಾಗಿ ಕೆಲಸ ಮಾಡುವುದು ಎಂಬ ಎರಡು ಗುಣಗಳ ವಿವೇಚನೆಯಿದೆ; ಉದಾಹರಣಗಳೂ, ಗುಣಗಳ ಸ್ವರೂಪವಿವೇಚನೆಗಳೂ ಬೆರೆತು ಹೋಗಿವೆ. ಈ ಸ್ಥಳದಲ್ಲಿ ಸಾರಾಂಶ ವನ್ನು ಕೇಳಿಕೊಳ್ಳುವಾಗ ಆ ಎರಡು ಗುಣಗಳ ಉದಾಹರಣಗಳು, ಅವುಗಳ ಸ್ವರೂಪ ಇವುಗಳನ್ನು ಏಂಗಡಿಸಿ ಕೇಳಿಕೊಳ್ಳುವುದು ಯೋಗ್ಯವಾಗುವುದು. ಆಗ ಪಾಠದ ಅನುಕ್ರಮವನ್ನು ಕೆಲಮಟ್ಟಿಗೆ ಬಿಡಬೇಕಾಗುವುದು.

ಅರ್ಥವಿವರಣೆಯು ಶಿನೆಯ ಮೆಟ್ಟು. ಈ ಮೆಟ್ಟಿನಲ್ಲಿ ಶಿಕ್ಷಕನು ಪಾಠವನ್ನು ಮೊದಲಿನಿಂದ ಓದುತ್ತ ಪಾಠದ ಭಾವ, ಕಠಿಣಶಬ್ದ ವಾಕ್ಯ, ಇವುಗಳ ವಿವರಣೆಯನ್ನು ಮಾಡುತ್ತ ಸಾಗುವುದು ವಾಡಿಕೆಯಾಗಿದೆ. ಆದರೆ ಈ ಮೆಟ್ಟಿ

ವಿದ್ಯಾರ್ಥಿಗಳ ಇದಿರಿಗೆ ಇಡುವುದರಿಂದ ಅವರು ಪಾಠದ ಕಡೆಗೆ ಲಕ್ಷ್ಯಗೊಟ್ಟು ಓದುವುದಕ್ಕೆ ಪ್ರೇರಣೆ ದೊರೆಯುವುದು.

೩ನೆಯ ೪ನೆಯ ಇಯತ್ತೆಗಳನ್ನು ಹಿಡಿದು ಮುಂದಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ ಮೌನವಾಚನದಿಂದ ಉಪಯೋಗವಾಗುವುದು. ಅವರು ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು, ನಿಂತಲ್ಲಿ ಶಿಕ್ಷಕನನ್ನು ಕೇಳಿ ತಿಳಿದುಕೊಂಡು ಪಾಠದ ಭಾವವನ್ನು ಗ್ರಹಿಸುವ ಶಕ್ತಿಯುಳ್ಳವರಾಗಿರುವರು. ಆದರೆ ೧ನೆಯ ೨ನೆಯ ಇಯತ್ತೆಗಳ ವಿದ್ಯಾರ್ಥಿಗಳು ಪಾಠವನ್ನು ಮನಸ್ಸಿನಲ್ಲಿ ಓದಿಕೊಂಡು ಪಾಠದ ಭಾವವನ್ನು ಗ್ರಹಿಸಲಾರರು. ಅವರಿಗೆ ಮನಸ್ಸಿನಲ್ಲಿ ಓದಿಕೊಳ್ಳುವುದೇ ಮೊದಲು ಕಠಿಣವೆನಿಸುವುದು. ೧ನೆಯ ಇಯತ್ತೆಯವರು ಕಣ್ಣಿನಿಂದ ಇಡಿ ಶಬ್ದವನ್ನು ಒಮ್ಮೆಲಿ ಓದಲಾರರು; ಅಕ್ಷರಗಳನ್ನು ಹೊಂದಿಸಿಕೊಂಡು ಶಬ್ದಗಳನ್ನು ಗ್ರಹಿಸುತ್ತ ವಾಕ್ಯಗಳನ್ನು ಓದುವುದರಲ್ಲಿಯೇ ಅವರ ಶಕ್ತಿಯ ವ್ಯಯವಾಗುವುದು. ಆದುದರಿಂದ ಭಾವವನ್ನು ಗ್ರಹಿಸುವುದು ಅವರಿಗೆ ಸುಲಭವಾಗುವುದಿಲ್ಲ. ಇದರಿಂದ ಅವರ ಮೌನವಾಚನಕ್ಕೆ ಬಹಳ ವೇಳೆ ಹಿಡಿಯುವುದು. ಆದರೆ ಮೌನವಾಚನವು ಬಹಳ ಉಪಯುಕ್ತವಾದುದು. ಇಡಿ ಆಯುಷ್ಯದಲ್ಲಿ ಮನುಷ್ಯನು ತನಗಾಗಿ ಓದುವುದು ಮೌನವಾಗಿಯೇ ನಡೆಯುವುದು; ನಡೆಯಬೇಕು. ಬಾಲಕರಿಗೆ ಇದರ ರೂಢಿಯನ್ನು ಶಿಕ್ಷಕರು ಮಾಡಿಸಲೇಬೇಕು. ರೂಢಿಯು ಕ್ರಮವಾಗಿ ಉಂಟಾಗುವುದು. ಬಾಲಕರು ೩ನೆಯ ಇಯತ್ತೆಯನ್ನು ದಾಟುವ ವೇಳೆಗೆ ಅವರು ಸರಿಯಾದ ಮೌನವಾಚನದ ರೂಢಿಯುಳ್ಳವರಾಗಬೇಕು. ಆದುದರಿಂದ ೩ನೆಯ ಇಯತ್ತೆಯಿಂದ ಮೌನವಾಚನವನ್ನು ಆರಂಭಿಸುವುದು ಲೇಸು. ೩ನೆಯ ಇಯತ್ತೆಯಲ್ಲಿ ಅಷ್ಟೊಂದು ಫಲಕಾರಿಯಾಗದಿದ್ದರೂ ಮೌನವಾಚನದ ಅಭ್ಯಾಸವು ಅವರಲ್ಲಿ ಉಂಟಾಗುವುದು. ೧ನೆಯ ಇಯತ್ತೆಯವರಿಗೆ ಮೌನವಾಚನದ ಫಲವು ಸಾಕಷ್ಟು ಕಾಣಲಾರದು. ಈ ವಿಚಾರಗಳಿಂದ ಟ್ರೇ. ಸ್ಕೂ. ನ ವಿದ್ಯಾರ್ಥಿಶಿಕ್ಷಕರು ಕೊಡುವ ಪಾಠಗಳಲ್ಲಿಯೂ ಶಿಕ್ಷಕರು ಕೊಡುವ ಪಾಠಗಳಲ್ಲಿಯೂ ೧ನೆಯ ಇಯತ್ತೆಯಲ್ಲಿ ಮೌನವಾಚನದ ಮೆಟ್ಟು ಇಲ್ಲ; ೩ನೆಯ ಇಯತ್ತೆಯಲ್ಲಿ ಮೌನವಾಚನದಿಂದ ಆಗಬೇಕಾದ ಪ್ರಯೋಜನವು ಆಗುವುದೆಂದು ನಿರೀಕ್ಷಿಸುವುದಿಲ್ಲ.

ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು ೪ನೆಯ ಮೆಟ್ಟು. ಈಗ ಸಾಧಾರಣವಾಗಿ ಪಾಠದಲ್ಲಿ ಬಂದ ವಿಷಯದ ಅನುಕ್ರಮದಿಂದ ಸಾರಾಂಶವನ್ನು ಕೇಳಿಕೊಳ್ಳುವುದುಂಟು; ಎಂದರೆ ೧ನೆಯ ವಾಕ್ಯವೃಂದ (ಪ್ಯಾರಾ) ದಲ್ಲಿ ಬಂದ

ವಿಷಯವನ್ನು ಕುರಿತು ಮೊದಲು, ತರುವಾಯ ತಿನೆಯ ವಾಕ್ಯವೃಂದದಲ್ಲಿ ಬಂದ ವಿಷಯವನ್ನು ಕುರಿತು ಈ ಕ್ರಮವನ್ನನುಸರಿಸುವರು. ಕೆಲವು ಪಾಠಗಳು ಈ ಕ್ರಮಕ್ಕೆ ಅನುಕೂಲವಾಗಿರುವುವು. ರಾಮನು ವನಕ್ಕೆ ತೆರಳಿದ್ದು, ೪. ೪; ಕಳ ಕೊಂಡ ಒಂಟಿಯ ಕಥೆ ೪. ೮; ಮಹಮ್ಮದಪೈಗಂಬರರ ಶಾಂತಗುಣ, ೪. ೧೦; ಕಳ್ಳರನ್ನು ಮೋಸಗೊಳಿಸಿದ್ದು ೪. ೧೭. ಮುಂ. ಇಂತಹ ಪಾಠಗಳಲ್ಲಿ ಸುಲಭ ದಿಂದ ಕಠಿಣ ವಿಷಯಗಳು, ಇಲ್ಲವೆ ಸಂಗತಿಗಳು ನಡೆದ ಅನುಕ್ರಮದಿಂದ ಬರೆದ ವಿಷಯಗಳು ಬಂದಿರುವುವು. ಎಡ್ವರ್ಡ್ ಬಾದಶಹರು ೪. ೨೭; ಭೀಷ್ಮನ ಪ್ರತಿಜ್ಞೆ ೪. ೪೩. ಈ ತರದ ಚರಿತ್ರಾತ್ಮಕ ಪಾಠಗಳಲ್ಲಿಯೂ ವಾಕ್ಯವೃಂದಗಳ ಅನುಕ್ರಮ ದಿಂದ ಸಾರಾಂಶವನ್ನು ಕೇಳಿಕೊಳ್ಳಬೇಕು. ಆದರೆ ಕೆಲವು ಪಾಠಗಳಲ್ಲಿ ಸುಲಭ ದಿಂದ ಕಠಿಣಕ್ಕೆ ಸಾಗುವದು, ಇಲ್ಲವೆ ಸಂಗತಿ ನಡೆದ ಅನುಕ್ರಮ ಮುಂ. ತತ್ತ್ವ ವನ್ನನುಸರಿಸಿರುವುದಿಲ್ಲ. ಬಿಕ್ಕಟ್ಟಿನ ಪ್ರಸಂಗದಲ್ಲಿ ಹೆದರದಿರುವುದು ೪. ೩೧. ಈ ಪಾಠದಲ್ಲಿ ಮೊದಲು ಧೈರ್ಯದ ಸ್ವರೂಪನಿರ್ವೇಚನೆಯಿದೆ. ಬಳಿಕ ಧೈರ್ಯಶಾಲಿ ಗಳಾದ ಶಿವಾಜಿ, ನಿಲ್ಬರ್ ಫೋರ್ಸ್, ಲೆಸೆಪ್ಸ್ ಇವರ ಕಾರ್ಯಗಳನ್ನು ಉದಾ ಹರಿಸಿದ್ದಾರೆ. ಪಾಠದ ಕೊನೆಯಲ್ಲಿ, ಧೈರ್ಯದ ಮಹತ್ತ್ವದ ವಿವೇಚನೆಯಿದೆ. ಕರ್ತವ್ಯದಕ್ಷತೆ ೪. ೧೫. ಈ ಪಾಠದಲ್ಲಿ ಮೊದಲು ಕರ್ತವ್ಯದಕ್ಷತೆ ಎಂದರೇನೆಂಬು ದರ ವಿವೇಚನೆಯಿದೆ; ಬಳಿಕ ಕರ್ತವ್ಯದಕ್ಷನಾದ ಬರ್ಕನ್‌ಹೆಡ್ ಹಡಗದ ಕಪ್ತಾನನ ಕರ್ತವ್ಯದಕ್ಷತೆಯ ಪ್ರಸಂಗದ ವರ್ಣನೆಯಿದೆ. ಇಂತಹ ಪಾಠಗಳಲ್ಲಿ ಉದಾಹರಣಗಳನ್ನು ಮೊದಲು ಕೇಳಿಕೊಂಡು ಅವುಗಳಲ್ಲಿ ತೋರಿಬರುವ ಗುಣಗಳ ಕಡೆಗೆ ಸಾಗಿದರೆ **"ವಿಶೇಷದಿಂದ ಸಾಮಾನ್ಯದ ಕಡೆಗೆ ಸಾಗು"** ಎಂಬ ಶಿಕ್ಷಣ ತತ್ತ್ವವನ್ನನುಸರಿಸಿದಂತಾಗುವುದು. "ನಿಯಮಿತತನವೂ, ಸಮಯನಿಷ್ಠತೆಯೂ" ಈ ಪಾಠದಲ್ಲಿ ನಿಯಮದಿಂದ ಕೆಲಸ ಮಾಡುವುದು, ವೇಳೆಗೆ ಸರಿಯಾಗಿ ಕೆಲಸ ಮಾಡುವುದು ಎಂಬ ಎರಡು ಗುಣಗಳ ವಿವೇಚನೆಯಿದೆ; ಉದಾಹರಣಗಳೂ, ಗುಣಗಳ ಸ್ವರೂಪನಿರ್ವೇಚನೆಗಳೂ ಬೆರೆತು ಹೋಗಿವೆ. ಈ ಸ್ಥಳದಲ್ಲಿ ಸಾರಾಂಶ ವನ್ನು ಕೇಳಿಕೊಳ್ಳುವಾಗ ಆ ಎರಡು ಗುಣಗಳ ಉದಾಹರಣಗಳು, ಅವುಗಳ ಸ್ವರೂಪ ಇವುಗಳನ್ನು ಏಂಗಡಿಸಿ ಕೇಳಿಕೊಳ್ಳುವುದು ಯೋಗ್ಯವಾಗುವುದು. ಆಗ ಪಾಠದ ಅನುಕ್ರಮವನ್ನು ಕೆಲಮಟ್ಟಿಗೆ ಬಿಡಬೇಕಾಗುವುದು.

ಅರ್ಥವಿವರಣೆಯು ತಿನೆಯ ಮೆಟ್ಟಿಲು. ಈ ಮೆಟ್ಟಿಲಲ್ಲಿ ಶಿಕ್ಷಕನು ಪಾಠವನ್ನು ಮೊದಲಿನಿಂದ ಓದುತ್ತ ಪಾಠದ ಭಾವ, ಕಠಿಣಶಬ್ದ ವಾಕ್ಯ, ಇವುಗಳ ವಿವರಣೆಯನ್ನು ಮಾಡುತ್ತ ಸಾಗುವುದು ವಾಡಿಕೆಯಾಗಿದೆ. ಆದರೆ ಈ ಮೆಟ್ಟಿ

ನಲ್ಲಿಯೂ ಸಾರಾಂಶವನ್ನು ಕೇಳಿಕೊಳ್ಳುವ ಮೆಟ್ಟಿನಲ್ಲಿ ಅನುಸರಿಸಿದ ತತ್ತ್ವಗಳನ್ನ
ಸರಿಸಿ ಸಾಗಬೇಕು. ಕೆಲವು ಪಾಠಗಳಲ್ಲಿ ೨ನೆಯ ೩ನೆಯ ವಾಕ್ಯವೃಂದಗಳ ವಿವ
ಯಾದ ತರುವಾಯ ಕೊನೆಗೆ ೧ನೆಯ ವಾಕ್ಯವೃಂದದ ವಿವರಣೆಗೆ ಬರಬಹುದ
ಕರ್ತವ್ಯದಕ್ಷತೆ ೪-೧೫ ಈ ಪಾಠದಲ್ಲಿ ಕಪ್ತಾನನ ಕರ್ತವ್ಯದಕ್ಷತೆಯ ಪ್ರಸಂಗ
ವರ್ಣನೆಯಿರುವ ೨ನೆಯ ೩ನೆಯ ವಾಕ್ಯವೃಂದಗಳನ್ನು ಮೊದಲು ವಿವ
ತರುವಾಯ ಕರ್ತವ್ಯದಕ್ಷತೆ ಎಂಬ ಗುಣದ ವಿವೇಚನೆಯಿರುವ ೧ನೆಯ ವಾ
ವೃಂದವನ್ನು ವಿವರಿಸುವುದು ಯೋಗ್ಯವಾಗುವುದು. ಆದುದರಿಂದ ಅರ್ಥವಿವ
ಯಲ್ಲಿ ಶಿಕ್ಷಕನು ವಾಕ್ಯವೃಂದಗಳನ್ನು ಯಾವ ಕ್ರಮದಿಂದ ಓದುತ್ತ ಇಲ್ಲ
ಓದಿಸುತ್ತ ವಿವರಣೆಯನ್ನು ಸಾಗಿಸಬೇಕೆಂಬುದನ್ನು ಮೊದಲು ಗೊತ್ತುಮಾ
ಕೊಂಡಿರಬೇಕು.

ಈ ಮೆಟ್ಟಿನಲ್ಲಿ ಶಿಕ್ಷಕನು ತಾನೇ ಪಾಠವನ್ನು ಓದುತ್ತ ವಿವರಣೆ ಮಾಡ
ವುದು ಈಗಿನ ವಾಡಿಕೆ. ಆದರೆ ಶಿಕ್ಷಕನು ತಾನು ಓದುವುದಕ್ಕಿಂತ ವಿದ್ಯಾರ್ಥಿಗಳಿಂ
ಓದಿಸುತ್ತ, ಅಲ್ಲಲ್ಲಿ ಬಂದ ಕಠಿಣ ಭಾಗಗಳನ್ನು ವಿವರಿಸುತ್ತ ಸಾಗುವುದೂ ಮೇಲಿ
ಇಯತ್ತೆಗಳಲ್ಲಿ ಅನುಕೂಲವಾಗುವುದು. ಕೆಳಗಿನ ಇಯತ್ತೆಗಳ ವಿದ್ಯಾರ್ಥಿಗಳಿ
ಓದುವ ಕಲೆ ಸಾಧಿಸಿರುವುದಿಲ್ಲವಾದುದರಿಂದ ಅವರಿಂದ ಓದಿಸುತ್ತ ವಿವರಣೆಯನ್ನ
ಸಾಗಿಸಿದಲ್ಲಿ ಅವರ ವಾಚನದಲ್ಲಿಯ ದೋಷಗಳನ್ನು ಆಗ ತಿದ್ದುತ್ತ ಕುಳಿತ
ವಿಷಯಾಂತರವಾಗುವುದಲ್ಲವೆ ವೇಳೆಯು ಹೆಚ್ಚಿಗೆ ಹಿಡಿಯುವುದು; ವಾಚನ ದೋಷ
ಗಳನ್ನು ತಿದ್ದದೆ ಬಿಟ್ಟರೆ ಅವರಿಗೆ ತಪ್ಪಿನ ರೂಢಿ ಮಾಡಿಸಿದಂತಾಗುವುದು. ಮೇಲಿ
ತರಗತಿಗಳ ವಿದ್ಯಾರ್ಥಿಗಳು ವಾಚನ ದೋಷಗಳನ್ನು ಬಹಳಮಟ್ಟಿಗೆ ಮಾಡಲಾರರು
ಆದುದರಿಂದ ೫ನೆಯ ಇಯತ್ತೆಯಿಂದ ಮುಂದೆ ಅರ್ಥವಿವರಣೆಯು ಮೆಟ್ಟಿನ
ವಿದ್ಯಾರ್ಥಿಗಳಿಂದ ಓದಿಸಬಹುದು; ೪ನೆಯದರಿಂದ ಕೆಳಗಿನ ಇಯತ್ತೆಗಳನ್ನ
ಶಿಕ್ಷಕನೇ ಓದುತ್ತ ಸಾಗಬೇಕು.

ಮೇಲೆ ಹೇಳಿದ ಮಾತುಗಳನ್ನನುಲಕ್ಷಿಸಿ ಪ್ರಕೃತ ಲೇಖಕನು ತಾ॥ ೭-೧೨-
೧೯೩೬ನೆಯ ದಿವಸ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಕೊಟ್ಟ ಒಂದ
ಮಾದರಿಪಾಠದ ಸಂಕ್ಷಿಪ್ತ ಟಿಪ್ಪಣಿ ಕೆಳಗೆ ಕೊಟ್ಟಿದೆ.

ಟಿಪ್ಪಣಿ

೪ನೆಯ ಇಯತ್ತೆ

ವಿಷಯ— ವಾಚನ ಪಾಠ; ಒಬ್ಬರು..... ೪. ೨೭. (ವಿಷಯವನ್ನು
ಕಲಿಸುವ ಪಾಠ); ವೇಳೆ. ೪೫ ನಿ.

೧. **ಉಪೋದ್ಘಾತ** ೧ ಒಳ್ಳೆಯ ಹುಡುಗರು ಹೇಗೆ ಹೇಗೆ ನಡೆಯುವೀಕು? ೨. ಹೇಗೆ ಹೇಗೆ ನಡೆಯಬಾರದು? (ಶಿಕ್ಷಕ–ಒಳ್ಳೆಯ ಹುಡುಗರು ಕೆಲವು ಕೆಲಸಗಳನ್ನು ಮಾಡಬೇಕು, ಕೆಲವುಗಳನ್ನು ಮಾಡಬಾರದು, ಮಾಡಬಾರದ ಕೆಲಸಗಳಲ್ಲಿ ನೀವು ಹೇಳಿದುವಲ್ಲದೆ ಇನ್ನೊಂದು ಮಾತು ಇದೆ.) ೩ನೆಯ ಪಾಠವನ್ನು ತೆರೆಯಿರಿ (ಒಬ್ಬನು ಶಿರೋಲೇಖವನ್ನು ಓದಲಿ.) ಇಲ್ಲಿ ಮಾಡಬಾರದ ಯಾವ ಮಾತು ಹೇಳಿದೆ?

[ಇಯತ್ತೆ ನಾಲ್ಕನೆಯದು; ಎರಡನೆಯ ಷಾಣ್ಮಾಸ; ಈ ಇಯತ್ತೆಯಲ್ಲಿ ಕಲಿಯಬೇಕಾದ ಹುಮ್ಮಾರುಳಂ ಪಾಠಗಳಲ್ಲಿ ೨೬ ಪಾಠಗಳನ್ನು ಕಲಿತಿರುವರು; ವಿದ್ಯಾರ್ಥಿಗಳು ತಕ್ಕಷ್ಟು ಪ್ರಬುದ್ಧರು ಎಂದು, "ಶಿಕ್ಷಕನ ಭಾವಬೋಧಕ ವಾಚನ" ಎಂಬ ೨ನೆಯ ಮೆಟ್ಟು ಬಿಟ್ಟಿದೆ.]

೨ನೆಯ ಮೆಟ್ಟು— ವಿದ್ಯಾರ್ಥಿಗಳ ಮೌನವಾಚನ.

ಕ. ಹ. ಯ ಮೇಲೆ ಬರೆಯುವ ಪ್ರಶ್ನೆಗಳು.

೧. ದೇವರು ನನಗೆ ಯಾವ ಯಾವ ಜ್ಞಾನವನ್ನು ದಯಪಾಲಿಸಿರುವನು?
೨. ಈ ಜಗತ್ತಿನಲ್ಲಿ ಎಲ್ಲರೂ ಕೊರತೆಯುಳ್ಳವರು, ಅದು ಹೇಗೆ?
೩. ಒಬ್ಬರು ಮತ್ತೊಬ್ಬರಿಗೆ ನಗಬಾರದು; ಯಾಕೆ?
೪. ಹುಟ್ಟುಗುರುಡರು ಮೊದಲಾದವರನ್ನು ಕಂಡು ನಗಬಾರದು; ಯಾಕೆ?
೫. ಮನುಷ್ಯರು ತಾವು ಮಾಡುವ ಕೆಲಸಗಳಲ್ಲಿ ತಪ್ಪುಗಳನ್ನು ಮಾಡುವರು, ಅವು ಯಾವವು? ಆಗ ನಾವು ಹೇಗೆ ನಡೆಯಬೇಕು?

ಕ. ಹ. ಯ ಮೇಲೆ ಬರೆದಿಡುವ ಶಬ್ದಾರ್ಥ.

ಕೊರತೆ–ಕಡಿಮೆ ಇರುವಿಕೆ; ಇಲ್ಲದಿರುವಿಕೆ; ದೋಷ. ಹಳಿ–ಹೀಯಾಳಿಸು, ಅಂದೆಮಾಡು. ಅಧಿಕಾರ–ಹಕ್ಕು. ವಿಕೃತ–ಕೆಟ್ಟುಹೋದ, ಊನವಾದ. ಕೃತಿ–ಕೆಲಸ. ಕ್ಷುಲ್ಲಕತನ–ಕೀಳುತನ, ನಾಣ್ಣುಡಿ–ರೂಢಿಯ ಮಾತು, (ನಾಡು + ನುಡಿ)

ಕ. ಹ. ಯ ಮೇಲೆ ಬರೆದ ಪ್ರಶ್ನೆಗಳನ್ನು ಒಬ್ಬೊಬ್ಬರು ಒಂದೊಂದನ್ನು ಓದಲಿ. ಪಾಠವನ್ನು ಓದಿಕೊಂಡ ಬಳಿಕ ಈ ಪ್ರಶ್ನೆಗಳ ಉತ್ತರಗಳನ್ನು ನೀವು ಹೇಳಬೇಕು ಎಂದು ಶಿಕ್ಷಕನು ಬಾಲಕರನ್ನು ಎಚ್ಚರಿಸುವುದು. ಇಲ್ಲಿ ಬರೆದ ಕಠಿಣ ಶಬ್ದಗಳ ಅರ್ಥವನ್ನು ನೋಡಿಕೊಂಡು ಪಾಠದ ಭಾವವನ್ನು ನೀವು ತಿಳಿದುಕೊಳ್ಳಬೇಕೆಂದು ಬಾಲಕರಿಗೆ ಹೇಳಿ ಮೌನವಾಚನವನ್ನು ಆರಂಭಿಸಲು ಹೇಳುವುದು.

೪ನೆಯ ಮೆಟ್ಟು, ಪಾಠದ ಸಾರಾಂಶವನ್ನು ಕೇಳಿಕೊಳ್ಳುವುದು.

ಪ್ರಶ್ನೆಗಳು.

೧. ಈ ಪಾಠದಲ್ಲಿ ಯಾವ ಮಾತಿನ ವಿಷಯವಾಗಿ ಹೇಳಿದೆ ?

೨. ಎಂಥ ಎಂಥವರನ್ನು ನೋಡಿ ನಗೆ ಬರುವದು ? ಬರಿಯ ನೋಡಿಯ ನಗೆ ಬರುವದೋ ?

೩. ಯಾಕೆ ನಗಬಾರದು ? ಮತ್ತೊಂದು ಕಾರಣವನ್ನು ಹೇಳು; ಇನ್ನೊಂ ಕಾರಣವನ್ನು ಹೇಳು.

೪. ಮನುಷ್ಯರು (ಜನರು ನಗುವಂಥ) ತಪ್ಪುಗಳನ್ನು ಮಾಡಿದಾಗ ನಾ ಯಾಕೆ ನಗಬಾರದು ? ಆಗ ನಾವು ಹೇಗೆ ನಡೆಯಬೇಕು ?

೫. ಎಲ್ಲರೂ ಕೊರತೆಯುಳ್ಳವರು, ಅದು ಹೇಗೆ ?

೬. ನಗುವದರಿಂದ ದ್ವೇಷವು ಬೆಳೆಯುವುದು; ಅದು ಹೇಗೆ ? ಮುಂ.

(ಕ. ಹ. ಯ ಮೇಲೆ ಬರೆದ ಉಳಿದ ಪ್ರಶ್ನೆಗಳನ್ನೂ ಕೇಳಿಕೊಳ್ಳಬಹುದು.

೫ನೆಯ ಮೆಟ್ಟು-ವಿವರಣೆ. ವಿವರಣೆಯ ಅನುಕೂಲತೆಗಾಗಿ ೨ನೆಯ ವಾ ವೃಂದದಲ್ಲಿ ೩, ೩ನೆಯ ವಾಕ್ಯವೃಂದದಲ್ಲಿ ೨, ೧ನೆಯ ವಾಕ್ಯವೃಂದದಲ್ಲಿ ೪ ಹೀಗೆ ಪಾಠದಲ್ಲಿ ೯ ಒಟ್ಟು ೯ ಖಂಡಗಳು ಮಾಡಿವೆ. ಶಿಕ್ಷಕರು ಅವನ್ನು ಸಹಜವಾಗಿ ಗುರು ಬಹುದು. ೨ನೆಯ ವಾಕ್ಯವೃಂದವನ್ನಾರಂಭಿಸಿ ೨, ೩, ೧ ಈ ವಾಕ್ಯವೃಂದಗಳ ಕ್ರಮದಿ ಅವುಗಳೊಳಗಿನ ಖಂಡಗಳನ್ನು ಓದಿಸುವುದು. ೩ನೆಯ ವಾಕ್ಯವೃಂದದೊಳಗಿನ " ಪೆಟ್ಟಿಗಿಂತ.....ನೋಯಿಸುವದು ಸರಿಯಲ್ಲ" ಈ ಖಂಡವನ್ನು ಕೊನೆಯಲ್ಲಿ ಓದಿಸುವು [ಇಯತ್ತೆಯ ಅರ್ಧ ಕಾಲಾವಧಿಯನ್ನು ದಾಟಿರುವುದರಿಂದ ವಿದ್ಯಾರ್ಥಿಗಳಿಂದಲೇ ಓದಿಸ ಈ ಮೆಟ್ಟನ್ನು ಸಾಗಿಸಿದೆ.]

ವಿಷಯದ ಅನುಕ್ರಮದಿಂದ ಈ ಪಾಠದಲ್ಲಿ ಬರುವ, ವಿವರಣೆ ಮಾಡಬೇಕ ಕೆಲವು ಕಠಿಣ ವಾಕ್ಯಗಳು–

೧. ದೇವರು ಮನುಷ್ಯನಿಗೆ ಕೊಟ್ಟಿರುವ ವಿಕೃತವಾದ ಅವಯವಗಳಿಗೆ ಹೆ ಡುವ ಅಧಿಕಾರವು ಮನುಷ್ಯನಿಗಿಲ್ಲ.

೨. ಶರೀರರಚನೆ, ಸಂಪತ್ತು ಸಂತತಿ ಮುಂತಾದವು ದೇವರ ಕೃತಿಗಳ ರುವವು.

೩. ಬರಿಯ ನಗೆಯಿಂದ ನಗುವವನ ಕ್ಷುಲ್ಲಕತನವು ಮಾತ್ರ ಹೊರಬೀಳುತ್ತ

೪. ಇದೆಲ್ಲ ಆ ಪರಮಾತ್ಮನ ಕೃಪೆಯ ಫಲವಾಗಿರುವದು.

೫. ಎಲ್ಲರೂ ಕೊರತೆಯುಳ್ಳವರಿರುತ್ತಾರೆ.

೬. ಇದರಿಂದ ದ್ವೇಷ ಮಾತ್ರ ಬೆಳೆಯಬಹುದು.

೭. ಬಿದ್ದಪೆಟ್ಟಿಗಿಂತ ನಕ್ಕಪೆಟ್ಟು ಹೆಚ್ಚೆಂದು ನಾಣ್ಣುಡಿ ಇರುವದು.

IX

ಮಾದರಿಗಾಗಿ ಒಂದೆರಡು ವಾಕ್ಯಗಳ ವಿವರಣೆ

ವಾಕ್ಯ ೧. ನಿನ್ನ ಒಂದು ಅವಯವದ ಹೆಸರು ಹೇಳು. ೨. ಕುರುಡನೆಂದರೆ ಆತನ ಯಾವ ಅವಯವವು ಕೆಟ್ಟಿರುವುದು? ೩. ಮೆಳ್ಳನಿಗೆ ಕಾಗೆಕಣ್ಣಿನವ ಎಂದರೆ ಅವನ ಕಣ್ಣಿಗೆ ಹೆಸರಿಟ್ಟಂತಾಯಿತು, ಜೋಲುಗಿವಿಗೆ ಆನೆಯ ಕಿವಿ ಎಂದರೆ ಹೆಸರಿಟ್ಟಂತಾಯಿತು; ಚಪ್ಪಟೆ ಮೂಗಿಗೆ ನೀನು ಹೆಸರಿಟ್ಟು ಹೇಳು. ೪ ಕುರುಡುಗಣ್ಣು, ಮೆಳ್ಳಗಣ್ಣು, ಜೋಲುಗಿವಿ ಇವನ್ನು ಯಾರು ಮಾಡಿರುವರು? ಮನುಷ್ಯನು ಇವಕ್ಕೆ ಹೆಸರಿಡಬಾರದು; ಯಾಕೆ? ಅಧಿಕಾರವೆಂದರೆ ಇಲ್ಲಿ ಹಕ್ಕು. ಕೆಲವರಿಗೆ ಗೌಡಿಕೆಯ ಹಕ್ಕು ಇರುವದು; ಆ ಹಕ್ಕು ಯಾರಿಂದ ಬಂದಿರುವದು? ಅವರು ಗೌಡಿಕೆಯನ್ನು ಮಾಡಬೇಕಾಗುವದು; ಹಾಗೆ ಅವಯವಗಳಿಗೆ ಹೆಸರಿಡುವ ಹಕ್ಕು ಯಾರಿಗೂ ಬಂದಿರಲಾರದು.

ವಾಕ್ಯ ೭. ಬಿದ್ದ ಮನುಷ್ಯನು ಮೊದಲು ಅತ್ತಿತ್ತ ನೋಡುವನು, ಯಾಕೆ? ಬಿದ್ದವನು ಮೊದಲು ಎತ್ತ ಲಕ್ಷ್ಯಗೊಡಬೇಕಾಗಿತ್ತು? ಆತನು ಯಾವದನ್ನು ದೊಡ್ಡದಾಗಿ ತಿಳಿದನು? ಯಾವುದರಿಂದ ಆತನು ತನಗೆ ಹೆಚ್ಚು ನೋವಾಗುವ ದೆಂದು ತಿಳಿದಂತಾಯಿತು? ಬಿದ್ದ....ಹೆಚ್ಚು ಇದೊಂದು, ಜನರು ಮೇಲೆ ಮೇಲೆ ಹೇಳುವ ಮಾತು. ನಾಡು+ನುಡಿ=ನಾಣ್ಣುಡಿ; ದೇಶದ ಮಾತು, ಎಂದರೆ ಎಲ್ಲ ಜನರು ಆಡುವ ಮಾತು. ಬೇರೆ ಒಂದು ನಾಣ್ಣುಡಿಯನ್ನು ಹೇಳಿರಿ.

(ಇದು ವಿಷಯವನ್ನು ಕಲಿಸುವ ಪಾಠವು; ಆದದರಿಂದ ಇದರಲ್ಲಿ ೬ನೆಯ ೭ನೆಯ ಮೆಟ್ಟುಗಳಿಲ್ಲ.)

೬ನೆಯ ಮೆಟ್ಟು, ಮುಗಿಸುವುದು (ಉಪಸಂಹಾರ)

ಪ್ರ. ೧. ಈ ಪಾಠದಲ್ಲಿ ಯಾವ ಮಾತನ್ನು ಹೇಳಿದೆ? ೨. ಯಾವಾಗಲೂ ನಗಬಾರದೇ? ೩. ವಿದೂಷಕನನ್ನು ಇಲ್ಲವೆ ಸರ್ಕಸಿನ ಹಾಸ್ಯಗಾರ (ಬಫೂನ್) ನನ್ನು ನೋಡಿ ನಕ್ಕುರೆ ಆತನಿಗೆ ಹೇಗೆ ಅನಿಸುವದು? ೪. ಕುರುಡ, ಮೂಕ ಮೊದಲಾದವರನ್ನು ನೋಡಿ ನಕ್ಕುರೆ ಅವರಿಗೆ ಹೇಗೆ ಅನಿಸುವದು? ೫. ಹಾಗಾದರೆ ಎಂಥಲ್ಲಿ ನಗಬೇಕು? ಎಂಥಲ್ಲಿ ನಗಬಾರದು? ಹೌದು; ನಕ್ಕಲ್ಲಿ ಯಾರಿಗೂ ಮನಸ್ಸಿಗೆ ಹತ್ತದಿದ್ದರೆ ಬೇಕಾದಷ್ಟು ನಗಿರಿ; *

---

* ನಕ್ಕು ಆನಂದಬಡುವ ಬಾಲಕರ ಸ್ವಭಾವಕ್ಕೆ ಈ ಪಾಠದಿಂದ ತಡೆ ಬರಬಾರದು; ನಗುವ ಪ್ರಸಂಗದಲ್ಲಿ ಬೇಕಾದಷ್ಟು ನಗಬಹುದು ಎಂಬುದನ್ನು ಸೂಚಿಸುವುದಕ್ಕೆ ಉಪಸಂಹಾರದಲ್ಲಿ ಈ ಮಾತನ್ನು ಉಲ್ಲೇಖಿಸಿದೆ.

(ಪಾಠದಲ್ಲಿ ಬಂದ ಮುಖ್ಯವಾದ ಮಾತುಗಳಲ್ಲಿ ಒಂದೊಂದನ್ನೂ ಒಬ್ಬೊಬ್ಬರಿಂದ ಕೇಳಿಕೊಳ್ಳುವದು.)

ಕೊರತೆ, ಪೂರ್ಣತ್ವ, ಅಧಿಕಾರ, ಈ ಶಬ್ದಗಳನ್ನು ಪ್ರಯೋಗಿಸಿ ಒಂದೊಂದು ವಾಕ್ಯವನ್ನು ರಚಿಸಿರಿ.

೨ನೆಯ ಪಾಠದಲ್ಲಿ ಎಂದರೆ ಓದುವುದನ್ನು ಕಲಿಸುವ ಪಾಠದ ಮೊದಲು ಪಾಠದ ಕಠಿಣ ಭಾಗಗಳ ಭಾವವು ತಿಳಿದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವದು.

ಬಳಿಕ ಆರಂಭದ ಇಯತ್ತ್ರೆಗಳಲ್ಲಿ ಕಠಿಣ ಶಬ್ದಗಳ ಉಚ್ಚಾರಣೆಯನ್ನು ಮಾಡಿಸಬೇಕು, ಆ ಬಳಿಕ ಶಿಕ್ಷಕನ ಮಾದರಿ ವಾಚನವು. ಇಡಿ ಪಾಠವನ್ನು ಓದುವುದಕ್ಕಿಂತ ಒಂದೊಂದು ಖಂಡವನ್ನು ಓದಿ ತೋರಿಸುವ್ರದು ವಿಹಿತವು. ಆರಂಭದ ಇಯತ್ತ್ರೆಗಳಲ್ಲಿ ಬಹಳ ಸ್ವಲ್ಪ ಭಾಗವನ್ನು, ಕೆಲವೆಡೆಯಲ್ಲಿ ಒಂದೊಂದೇ ವಾಕ್ಯವನ್ನು ಓದಿ ತೋರಿಸಬೇಕು. ಕಠಿಣ ಭಾವದ ವಾಕ್ಯಗಳನ್ನು ಭಾವಬೋಧಕವಾಗಿ ಓದುವ ಶಕ್ತಿಯು ಬಾಲಕರಲ್ಲಿ ಶಿಕ್ಷಕನ ವಾಚನದ ಮಾದರಿಯಿಂದ ಉಂಟಾಗಬೇಕು. ಕಠಿಣಭಾವದ ವಾಕ್ಯಗಳನ್ನು ಹಲವು ಜನ ವಿದ್ಯಾರ್ಥಿಗಳಿಂದ ಓದಿಸಬೇಕು. ಈ ಪಾಠದಲ್ಲಿ ಬಾಲಕರಿಂದ ಹೆಚ್ಚಿಗೆ ಓದಿಸುವುದೇ ಮುಖ್ಯವಾದ ಕೆಲಸವು. ೫ನೆಯ ಇಯತ್ತ್ರೆಯಿಂದ ಮೇಲಿನ ಇಯತ್ತ್ರೆಗಳಲ್ಲಿ ಶಿಕ್ಷಕನ ಮಾದರಿಯ ವಾಚನವು ಅಷ್ಟೊಂದು ಆವಶ್ಯಕವಾಗಿಲ್ಲ. ಕಠಿಣವಾದ ಕೆಲವೇ ಗಳಲ್ಲಿ ಮಾತ್ರ ಓದಿತೋರಿಸಬಹುದು.

ಟ್ರೇನಿಂಗ್ ಸ್ಕೂಲ್ ಧಾರವಾಡ,
ತಾ॥ ೧೦-೧೨-೧೯೩೬ } ಎಂ. ಪಿ. ಪೂಜಾರ.

ಶಿಶು ಶಾಲೆಗಳು

(ಮುಂದೆ ಸಾಗಿದ್ದು)

ಶಿಶುಶಾಲೆಗಳಲ್ಲಿ ಬಾಲಕರಿಗೆ ಈ ರೀತಿಯಾಗಿ ಸಂಪೂರ್ಣ ಸ್ವಾತಂತ್ರ್ಯವಿರುವದು ಅವಶ್ಯವಾಗಿದ್ದರೂ ಶಿಕ್ಷಕರು ತಮ್ಮ ಅಧಿಕಾರವನ್ನು ನಡೆಯಿಸುವ ಸಂದರ್ಭಗಳೂ ಆಗಾಗ ಒದಗುತ್ತಿರುವವು. ತೀರ ಚಿಗಳಗಂಟರಾದ ಹುಡುಗರು ಮಾಡುತ್ತಿರುವ ತಪ್ಪುಗಳನ್ನೂ ಆ ತಪ್ಪುಗಳ ದುಷ್ಪರಿಣಾಮಗಳನ್ನೂ ಅವರ ಲಕ್ಷ್ಯಕ್ಕೆ ತಂದುಕೊಡಬೇಕಾಗುವದು. ಶಿಕ್ಷಕರ ಉಪದೇಶ ವಾಕ್ಯಗಳು ಪರಿಣಾಮಕಾರಿಯಾಗದೆ ಇರುವ ಸಂದರ್ಭದಲ್ಲಿ ಮಾತ್ರ ಶಿಕ್ಷೆಯನ್ನು ವಿಧಿಸಬೇಕಾಗುವದು. ಶಿಕ್ಷೆಯನ್ನು ವಿಧಿಸುವಾಗ ಶಿಕ್ಷಕರು ಪಕ್ಷಪಾತವನ್ನಾಗಲಿ ವ್ಯಕ್ತಿವಿಷಯಕ ಮಮತೆ ಅಚ್ಚಿಗಳನ್ನಾಗಲಿ ತೋರಿಸಿದರೆಂಬ ಭಾವನೆ ಹುಟ್ಟದಂತೆ ನೋಡಿಕೊಳ್ಳಬೇಕು. ಶಿಕ್ಷೆಗೂ ಪ್ರೀತಿಯನಡತೆಗೂ ಸಂಬಂಧಿಸಲಾಗದು. ಅಪರಾಧಕ್ಕೆ ಶಿಕ್ಷೆ, ಸದಾಚಾರಕ್ಕೆ ಪ್ರೀತಿ ಎಂಬ ಭಾವನೆಯು ಬಾಲಕರಲ್ಲಿ ನಿಸ್ಸಂದೇಹವಾಗಿರುವಂತೆ ನೋಡಿಕೊಳ್ಳಬೇಕು.

ಬಾಲಕರು ಅವಿಶ್ರಾಂತವಾಗಿ ಕೆಲಸಮಾಡುತ್ತಿರುವಾಗಲೂ ಒಮ್ಮೊಮ್ಮೆ ಶಿಕ್ಷಕರು ಅವರನ್ನು ತಡೆಯಬೇಕಾಗುವದು. ಯಾವದೇ ಕೆಲಸದಲ್ಲಿ ಮಿತಿಯಿರಲೇಬೇಕು. ನಿಯಮವನ್ನು ಮೀರಿ ಯಾವದೂ ನಡೆಯಲಾಗದು. ಹಾಗೆ ಮನಬಂದಂತೆ ಸ್ವಾತಂತ್ರ್ಯದಿಂದ ಸತತ ಕೆಲಸ ಮಾಡುತ್ತಿದ್ದರೆ ಬಾಲಕರು ದಣಿಯುವರು. ಅವರ ಮನಸ್ಸಿಗೂ ಶರೀರಕ್ಕೂ ಅಪಾಯಕರವಾಗುವಷ್ಟು ಶ್ರಮವೂ ಆಯಾಸವೂ ಆಗಬಹುದು.

ಶಿಶುಶಾಲೆಗಳಲ್ಲಿ ಶಿಕ್ಷಕರು ಕೆಲವು ಹುಡುಗರ ಗುಂಪುಗಳನ್ನು ಕಲ್ಪಿಸಿಕೊಟ್ಟು ಆಯಾ ಗುಂಪುಗಳಿಗೆ ತಕ್ಕ ಕೆಲಸಗಳನ್ನು ನಿಯಮಿಸಿ ಕೊಡಬೇಕಾಗುವದು. ಮತ್ತು ಬೇರೆ ಬೇರೆ ಪ್ರಕಾರದ ಕೆಲಸಗಳು ಇಷ್ಟಿಷ್ಟೇ ಹೊತ್ತಿನವರೆಗೆ ನಡೆಯಬೇಕೆಂಬದನ್ನು ಶಿಕ್ಷಕರು ಗೊತ್ತುಮಾಡಿಕೊಡಬೇಕಾಗುವದು. ಮಣ್ಣು ಇಟ್ಟಂಗಿಗಳಿಂದ ಇಮಾರತು ರಚಿಸಿ ಆಡುವದು, ಬಣ್ಣದ ಖಡುಗಳಿಂದ ಚಿತ್ರ ತೆಗೆಯುವದು, ಕಾಗದ ಕತ್ತರಿಸುವದು ಮುಂತಾದ ಕೆಲಸಗಳನ್ನು ಮಾಡುವ ಬೇರೆ

ಬೇರೆ ಗುಂಪುಗಳನ್ನು ರಚಿಸಿಕೊಂಡಬಹುದು. ಮತ್ತು ಅದೇ ಕಾಲಕ್ಕೆ ಇನ್ನೊಂದ ಗುಂಪಿನವರು ಶಿಕ್ಷಕರ ಸುತ್ತಲೂ ಕುಳಿತು ಅವರು ಹೇಳುವ ಕಥೆಯನ್ನು ಇಲ್ಲ ಹಾಡನ್ನು ಕೇಳಬಹುದು. ಮತ್ತೊಂದು ಗುಂಪಿನವರು (ಶಿಶುಗೀತ) ಬಾಲಕ ಹಾಡುಗಳನ್ನು ತಾಳಬದ್ಧವಾಗಿ ಸ್ವರಮೇಲನದಿಂದ ಹಾಡುತ್ತಿರಬಹುದು.

ಇಂಗ್ಲಂಡದೊಳಗಿನ ಸುವ್ಯವಸ್ಥಿತವಾಗಿ ನಡೆದಿರುವ ಒಂದು ಶಿಶುಶಾಲೆಯ ಈ ಕೆಳಗೆ ಹೇಳುವಂತೆ ಗುಂಪುಗಳನ್ನು ಕಲ್ಪಿಸಿಕೊಂಡಿರುವರು.

ಎರಡು ವರುಷ ವಯಸ್ಸಿನ ಬಾಲಕರ ಗುಂಪು :— ಈ ಗುಂಪಿಗೆ ಹೆಚ್ಚ ಉಪಕರಣಗಳು ಬೇಕು. ವರ್ತಮಾನಪತ್ರಗಳು ಮಾಸಿಕಗಳು ಮುಂತಾದ ಗಳಿಂದ ಆರಿಸಿ ಅಂಟಿಸಿದ ಚಿತ್ರಗಳ ಪುಸ್ತಕ, ಆಟದ ಬೊಂಬೆಗಳು, ಉಣ್ಣೆಯಿಂ ಹೆಣೆದು ಮಾಡಿದ ಪ್ರಾಣಿಗಳು, ದೊಡ್ಡ ದೊಡ್ಡ ಇಟ್ಟಂಗಿಗಳು ಮುಂತಾದವ ಈ ವಯಸ್ಸಿನ ಬಾಲಕರು ಅನೇಕ ಬಗೆಯ ಕಾಲ್ಪನಿಕ ಆಟಗಳನ್ನು ಆಡಲು ಪ್ರೀತಿಸ ವರು. ಇವರಿಗೆ ಮೈಕೈಗಳನ್ನು ತೊಳೆದುಕೊಳ್ಳುವದು ತಮ್ಮ ಅರಿವೆಅಂಚ ಗಳನ್ನು ಧರಿಸಿಕೊಳ್ಳುವದು ಇವನ್ನೂ ಕ್ ಎವರು. ಇವರು ಆಟದಲ್ಲಿಯೇ ಬಹ ವೇಳೆಯನ್ನು ಕಳೆಯುವರು. ಇವರ ಎಲ್ಲ ಕೆಲಸಗಳು ಇವರಿಗೆ ತಮ್ಮ ಶರೀರ ರಕ್ಷಣೆಗೂ ಅದನ್ನು ಅಂಕಿತದಲ್ಲಿಟ್ಟುಕೊಳ್ಳಲಿಕ್ಕೂ ಸಹಾಯಕಾರಿಯಾಗಿರುವವ

ಮೂರು ವರುಷ ವಯಸ್ಸಿನ ಬಾಲಕರ ಗುಂಪು:— ಈ ಗುಂಪಿಗೆ ಕೊಡು ಉಪಕರಣಗಳು ಎರಡು ವರುಷದ ಬಾಲಕರ ಗುಂಪಿಗೆ ಕೊಡುವ ಉಪಕರಣಗ ಗಿಂತಲೂ ಹೆಚ್ಚು ತೊಡಕಿನ ರಚನೆಯುಳ್ಳವಿರುವವು. ಇವುಗಳಲ್ಲಿ ಬಣ್ಣ, ಆಕ ಇವುಗಳ ಸಮಾವೇಶವಾಗಿದ್ದು ಅವುಗಳ ಮೂಲಕ ಬಾಲಕರ ಇಂದ್ರಿಯಗಳ ಶಿಕ್ಷಣವು ದೊರೆಯುವದು. ಇವುಗಳಿಂದ ಕೈಬೆರಳುಗಳಿಗೂ ಶಿಕ್ಷಣ ದೊರೆಯ ವದು. ಹಿಂದೆ ಹೇಳಿದ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸಿಟ್ಟ ಪುಸ್ತಕಗಳ ಬದಲು ಒಳ್ಳೆಯ ಚಿತ್ರಗಳ ಪುಸ್ತಕಗಳನ್ನು ಕೊಡುವರು. ಮತ್ತು ಈ ವಯಸ್ಸಿ ಬಾಲಕರು ತಮ್ಮ ಉಪಕರಣಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವರು.

ಈ ಗುಂಪಿನವರ ಕೆಲಸಗಳಲ್ಲಿ ಹೆಚ್ಚು ಕೆಲಸಗಳು ಶಿಕ್ಷಕರ ಅಪ್ಪಣೆಯಂ ನಡೆಯಬೇಕಾಗುವದು. ಆದರೂ ಅವು ಬಹುಶಃ ಹೆಚ್ಚು ಕಠಿಣವಾದ ನಿಯಮ ಬದ್ಧವಾಗಿರುವದಿಲ್ಲ. ತೋಟದ ಕೆಲಸ, ಹೂವುಗಳ ಜೋಡಣೆ, ಬಟ್ಟೆಬಿಗೆಯುವದ ಮೊದಲಾದ ಬಾಲಕರ ನಿತ್ಯದ ವ್ಯವಹಾರದೊಳಗಿನ ಕೆಲಸಗಳು ಮುಂತಾದ ಗಳನ್ನು ಈ ತರಗತಿಯ ಬಾಲಕರು ಶಿಕ್ಷಕರ ಸೂಚನೆಯ ಮೇರೆಗೆ ಮಾಡುವರ

ನಾಲ್ಕು ಮತ್ತು ಐದು ವರುಷ ವಯಸ್ಸಿನ ಬಾಲಕರ ಗುಂಪು:—(ಇದು ಮುಂದಿನ ವರ್ಗಗಳಿಗೆ ಮಧ್ಯವರ್ತೀ ವರ್ಗದಂತಿರುವದು) ಈ ವರ್ಗವು ಪ್ರಾಥಮಿಕ ಶಿಕ್ಷಣದಲ್ಲಿಯ ಬಾಲಕರ ವರ್ಗಕ್ಕೂ ಶಿಶುಶಾಲೆಗಳ ವರ್ಗಗಳಿಗೂ ಮಧ್ಯವರ್ತಿಯಾಗಿದ್ದು ಇವೆರಡೂ ತರಗತಿಗಳಲ್ಲಿ ಒಂದು ಎಲ್ಲಿಗೆ ಮುಗಿದು ಇನ್ನೊಂದು ಎಲ್ಲಿಗೆ ಪ್ರಾರಂಭವಾಗುವದೆಂಬ ನಿಶ್ಚಿತವಾದ ಮೇರೆ ಇರುವದಿಲ್ಲ; ಎಂದರೆ ಶಿಶುಶಾಲೆಗಳ ಅಭ್ಯಾಸ, ಪ್ರಾಥಮಿಕ ಶಿಕ್ಷಣದ ಬಾಲಕರ ವರ್ಗದ ಅಭ್ಯಾಸ ಇವೆರಡೂ ಇದರಲ್ಲಿ ಸರಿಸರಿಯಾಗಿ ಸಮಾವೇಶವಾಗಿರುವವು. ಹಾಗು ಬಾಲಕರು ನಾನಾ ಬಗೆಯ ಆಟಸೋಟಗಳನ್ನೂ ಕೆಲಸಗಳನ್ನೂ ಮಾಡುವರು. ಇವರು ಹಿಂದಿನ ಗುಂಪಿನವರು ಮಾಡುವ ಮನೆತನದ ಕೆಲಸಗಳನ್ನೂ ಮುಂದೆ ಸಾಗಿಸುವರು. ಮತ್ತು ತಮಗೆ ಪ್ರೀತಿಯವೆನಿಸುವ ಕೆಲಸಗಳನ್ನು ಆರಿಸಿಕೊಳ್ಳಲಿಕ್ಕೆ ಈ ಬಾಲಕರಿಗೆ ತುಂಬ ಸ್ವಾತಂತ್ರ್ಯವಿರುವದು. ಈ ಬಾಲಕರು ಸ್ನಾನದ ಮನೆಯನ್ನು ಸ್ವಚ್ಛ ಮಾಡುವರು; ತಮ್ಮ ಉಪಕರಣಗಳನ್ನೆಲ್ಲ ತಾವೇ ಒರಸಿ ತೊಳೆದು ಗೊತ್ತಾದ ಸ್ಥಳದಲ್ಲಿ ವ್ಯವಸ್ಥಿತವಾಗಿ ಇಟ್ಟುಕೊಳ್ಳುವರು. ಹಿಂದಿನ ತರಗತಿಯ ಬಾಲಕರಿಗೆ ಕೊಟ್ಟಂಥ ಆಟಿಗೆಯ ಉಪಕರಣಗಳನ್ನೇ ಈ ತರಗತಿಯವರಿಗೂ ಕೊಡುವರು; ಆದರೆ ಇವರ ಆಟಸೋಟಗಳಲ್ಲಿ ಸುಲಭ ಸಂಖ್ಯಾಜ್ಞಾನವು ಸಮಾವೇಶವಾಗುವದು. ಈ ವರ್ಗದ ಕಾಗದ ಕತ್ತರಿಸುವದು, ಮಣ್ಣಿನಿಂದ ಆಟಿಗೆಗಳನ್ನೂ ವ್ಯವಹಾರದ ನಸ್ತುಗಳನ್ನೂ ಮಾಡುವದು (ಕ್ಲೆಮಾಡೆಲಿಂಗ್) ಮುಂತಾದ ಕೆಲಸಗಳಲ್ಲಿ ವಸ್ತುಗಳ ಎಣಿಕೆಯು ಸಮಾವೇಶವಾಗುವದರಿಂದ ಮುಂದಿನ ಸಂಖ್ಯಾಜ್ಞಾನಕ್ಕೆ ತಕ್ಕ ತಳಹದಿಯನ್ನು ಹಾಕಿದಂತಾಗುವದು.

ಶಿಶುಶಾಲೆಗಳ ತರಗತಿಗಳನ್ನು ದಾಟಿ ಬಾಲಕರ ವರ್ಗಕ್ಕೆ ಬಂದಿರುವ ಬಾಲಕರ ಎಂದರೆ ಆರು ವರ್ಷ ವಯಸ್ಸಿನ ಬಾಲಕರ ಗುಂಪಿನ ಆಟಗಳು ಹೆಚ್ಚು ವ್ಯವಸ್ಥಿತವಾಗಹತ್ತುವವು. ಅವುಗಳಲ್ಲಿ ಬಾಲಕರು ತಮತಮಗೆ ತೋರಿದಂತೆ ಕೆಲಸಮಾಡಲು ಇರುವ ಅನುಕೂಲತೆಯು ಕಡಿಮೆಯಾಗಿ ಅವರ ಕೆಲಸಗಳು ನಿಯಮಬದ್ಧವಾಗುವವು. ಕೆಲಕೆಲವು ನಿಯಮಿತ ಸಮಯದಲ್ಲಿ ಅವರು ತಾವು ಇಂಥದೊಂದು ಉದ್ದೇಶ ಸಾಧನೆಗಾಗಿಯೇ ಕೆಲಸ ಮಾಡುತ್ತೇವಲ್ಲದೆ ಕೇವಲ ಆಟವೇ ತಮ್ಮ ಧ್ಯೇಯವಲ್ಲವೆಂಬದನ್ನು ತಿಳಿದುಕೊಂಡು ಕೆಲಸ ಮಾಡಬೇಕಾಗುವದು. ಆ ಆಟಗಳಲ್ಲಿ ಓದು ಬರೆಹ ಗಣಿತ ಇವೂ ಸಮಾವೇಶವಾಗುವವು. ಈ ಎಲ್ಲ ಕೆಲಸಗಳು ಸಾರ್ಥಕವಾದವೂ ವಸ್ತುಸ್ಥಿತಿಗೆ ಸಂಬಂಧಿಸಿದವೂ ಇರಬೇಕಲ್ಲದೆ ಯಾವದೂ ಕೇವಲ ಕಾಲ್ಪನಿಕವಾಗಿರಬಾರದು. ಉದಾ:— ಬಾಲಕರಿಗೆ ಅರ್ಥ

ವಾಗದಂಥ ಪರಸ್ಪರ ಸಂಬಂಧವಿಲ್ಲದಂಥ ಶಬ್ದಗಳನ್ನೂ ಅಕ್ಷರಗಳ ಗುಂಪುಗಳನ್ನ ಬರೆಯಲಿಕ್ಕೆ ಎಂದೂ ಹೇಳಲಾಗದು.

ಈ ವಯಸ್ಸಿನ ಬಾಲಕರಲ್ಲಿ ಅವಧಾನ ಶಕ್ತಿಯು ಉಂಟಾಗಿರುವದು, ಎಂದ ಅವರು ಯಾವದಾದರೊಂದು ವಿಷಯದಲ್ಲಿ ಮನಸ್ಸನ್ನು ಹೆಚ್ಚು ವೇಳೆಯ ಪ ತೊಡಗಿಸಿ ಕೆಲಸ ಮಾಡುವದಕ್ಕೆ ಸಮರ್ಥರಾಗಿರುವರು. ಯಾವದಾದರೊಂ ವಿಷಯದ ಪೂರ್ಣವಾದ ಹಾಗು ಯೋಗ್ಯವಾದ ಜ್ಞಾನವನ್ನು ದೊರಕಿಸ ಉದ್ದೇಶದಿಂದ ಅವರು ಯಾವದೇ ಕೆಲಸವನ್ನು ತರತರವಾಗಿ ಮಾಡಲಿಕ ಅದನ್ನೇ ರೂಢಿಮಾಡಲಿಕ್ಕೂ ಸಮರ್ಥರಾಗುವರು. ಈ ತರಗತಿಯ ಬಾಲಕ ಮೊದಲನೆಯಸಾರಿ ಮಾಡಿದ ಕೈಕೆಲಸ ಹೆಣಿಕೆಯ ಕೆಲಸ ಹೊಲಿಗೆಯ ಕೆ ಮುಂತಾದವು ಸರಿಯಾಗಿ ಆಗದೆ ಇದ್ದರೆ ಅವನ್ನೇ ಶಿಕ್ಷಕರ ಸೂಚನೆಯನ್ನ ಅನುಸರಿಸಿ ಪುನಃ ಪುನಃ ಮಾಡಿ ಸರಿಪಡಿಸಿಕೊಳ್ಳಬೇಕೆಂಬ ಇಚ್ಛೆಯೂ ಆತರ ಪ್ರಯತ್ನಮಾಡುವ ಲವಲವಿಕೆಯೂ ಅವರಲ್ಲಿ ಕಂಡುಬರುವದು.

ಶಿಶುಶಾಲೆಗಳಲ್ಲಿಯ ಬಾಲಕರ ಆಟಗಳು ನಿಯಮಬದ್ಧವಾಗಿರುವದಿ ಮತ್ತು ಅವು ಬಾಲಕರು ಒಂಟಿಯಾಗಿದ್ದು ತಮ್ಮಷ್ಟಕ್ಕೆ ತಾವೇ ಆಡುವಂಥವಿ ವು; ಆದರೆ ಈ ಆರುವರ್ಷಗಳ ವಯಸ್ಸಿನ ಬಾಲಕರ ವರ್ಗದವರ ಆಟಗ ನಿಯಮಬದ್ಧವಿರುವವಲ್ಲದೆ ನಾಲ್ಕು ಜನರು ಕೂಡಿ ಆಡುವಂಥವೂ ಆಗಿರುವ

ಶಿಶುಶಾಲೆಗಳಲ್ಲಿಯ ಬಾಲಕರಿಗೆ ಇರುವಂಥ ಸ್ವಾತಂತ್ರ್ಯವು ಈ ತರಗ ಯಲ್ಲಿಯೂ ಇರುತ್ತಿದ್ದರೂ ಇಲ್ಲಿ ಆ ಸ್ವಾತಂತ್ರ್ಯಕ್ಕೆ ವಿಶಿಷ್ಟಸ್ವರೂಪವು ಬಂದಿ ವದು. ನಾಲ್ಕು ಜನರು ಕೂಡಿ ಆಡುವ, ನಾಲ್ಕು ಜನರೊಡನೆ ಕೂಡಿ ನಡೆಯು ಸಂದರ್ಭದಲ್ಲಿ ಅವಶ್ಯವಿರುವ ಸಾಮೂಹಿಕ ನಡೆವಳಿಕೆಯ ವಿಚಾರವು ಅವರ ಮನಸ್ಸ ನಲ್ಲಿ ಉದಯವಾಗುವಂತೆ ಒಬ್ಬನಿಗೆ ಹಿತಕಾರಿಯಾದ ವಿಚಾರಗಳೇ ನಾಲ್ ಜನರು ಕೂಡಿದಾಗಲೂ ಹಿತಕಾರಿಯಾಗಲಾರವು, ಇಷ್ಟೇ ಅಲ್ಲ; ಒಬ್ಬನಿಗೆ ಅನ ಕೂಲವಾದವು ಹಲವರ ಸಂಬಂಧವುಂಟಾದಾಗ ಪ್ರತಿಕೂಲವೆನಿಸುವವು, ಇಂ ಮುಂತಾದ ಹೆಚ್ಚಿನ ವಿಚಾರಗಳು ಈ ಬಾಲಕರಲ್ಲಿ ಉಂಟಾಗಬೇಕಾಗುವದು.

ಬಾಲಕರು ಈ ತರಗತಿಯಲ್ಲಿ ನಾನಾತರದ ಕೆಲಸಗಳನ್ನು ಮಾಡಬೇಕ ಗುವದು. ಆದರೆ ಆ ಎಲ್ಲ ಬಗೆಯ ಕೆಲಸಗಳು ನಿಯಮಿತಕಾಲದವರೆಗ ನಿಯಮಿತವೇಳೆಯಲ್ಲಿಯೂ ತಪ್ಪದೆ ನಡೆಯುವಂತೆ ಮಾಡಿ ಅವರಲ್ಲಿ ಸಮಯ

ಷ್ಮತೆಯ ರೂಢಿಯುಂಟಾಗುವಂತೆ ಮಾಡಬೇಕಾಗುವದು. ಮಧ್ಯಾಹ್ನದ ಊಟ, ಮೇಲೆ ತುಸು ಹೊತ್ತು ಆಟನೋಟಗಳು, ಬಳಿಕ ನಿದ್ದೆಮಾಡುವದು, ಮುಂತಾ ವು ನಿಯಮಿತವಾಗಿಯೂ ನಿಯಮಿತ ವೇಳೆಗೆ ಸರಿಯಾಗಿಯೂ ನಡೆಯಬೇಕು. ಉದಾ:— ನಿದ್ರೆಯ ವೇಳೆಯು ಬಂದೊಡನೆಯೇ ಎಲ್ಲರೂ ಮಲಗಲೇಬೇಕು. ಎತ್ತು ಆ ಕಾಲದಲ್ಲಿ ಎಲ್ಲಿಯೂ ಎಷ್ಟು ಧಾತ್ರವೂ ಸದ್ದಾಗದಂತೆ ನೋಡಿಕೊಳ್ಳ ಬೇಕು. ಮಲಗಿದ ಹುಡುಗರಲ್ಲಿ ಕೆಲವರು ಬೇಗನೆ ಏಳಬಹುದು. ಕೆಲವರು ತಡವಾಗಿ ಏಳಬಹುದು. ಹೆಚ್ಚು ನಿದ್ರೆಯು ಬೇಕಾದ ಹುಡುಗರಿಗೆ ಅಷ್ಟು ಮುಯುವನ್ನು ಕೊಡಲೇಬೇಕು; ಅರೆ ನಿದ್ದೆಯಲ್ಲಿ ಬಾಲಕರನ್ನು ಎಂದೂ ಎಬ್ಬಿಸ ಬಾಗದು. ಎಂದರೆ ಅವರವರ ಪ್ರಕೃತಿಗೆ ಅವಶ್ಯವಿದ್ದಷ್ಟುಕಾಲ ಮಲಗಲಿಕ್ಕೆ ಅನುಕೂಲವಿರಲೇಬೇಕು.

ಮುಂಬಯಿಯ ಸ್ಥಾಪನೆಯು

ಲೇಖಕ:— ಜಿ. ಎಮ್. ಸಾತೇನಹಳ್ಳಿ ಅ. ಮೂ. ಪ್ರಾ. ಸ್ಕೂ. ಧಾರವಾಡ

ಈಗ ಸುಮಾರು ಮುನ್ನೂರು ವರ್ಷಗಳ ಹಿಂದೆ ಮುಂಬಯಿಯು ಕಡಿಮೆ ಜನವಸತಿಯುಳ್ಳದ್ದೂ ವಿಲಕ್ಷಣ ಪರಿಸ್ಥಿತಿಯದೂ ಆಗಿದ್ದಿತು. ಆಗ ಅಲ್ಲಿ ೨೨ ಸಣ್ಣ ಸಣ್ಣ ಸಮುಗಡ್ಡಿಗಳಲ್ಲಿ ಕೂಡಿ ಒಟ್ಟಿಗೆ ೧೦ ಸಾವಿರ ಜನಸಂಖ್ಯೆಯು ದ್ದಿತು. ಆಗ ಮುಂಬಯಿ ನಡುಗಡ್ಡೆಯಲ್ಲಿ ಅಲ್ಲಲ್ಲಿ ಅಖಾತಗಳು ಒಳಸೇರಿದ್ದವು. ಅಲಾಬಾದಿಂದ ಮಾಹಿಮದವರೆಗೆ ಸಣ್ಣ ಸಣ್ಣ ಏಳು ನಡುಗಡ್ಡೆಗಳಿದ್ದವು. ಪ್ರತಿಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಒತ್ತುಗಳೂ ಅಡ್ಡ ಅಡ್ಡವಾಗಿ ಹಬ್ಬಿದ್ದವು. ಈಗಿನ ಪಾಯಧುಣಿಯ ಹತ್ತರ ಸಣ್ಣ ಅಖಾತವೊಂದಿತ್ತು. ಅಲ್ಲಿ ಕಾಲುಗಳನ್ನು ತೊಳೆದು ಂಡು ಮುಂಬಾದೇವಿಯ ದರ್ಶನಕ್ಕೆ ಹೋಗಬೇಕಾಗುತ್ತಿತ್ತು. ಆದುದರಿಂದ ಕ್ಕೆ ಪಾಯಧುಣಿಯೆಂಬ ಹೆಸರು ವಾಡಿಕೆಯಾಗಿದ್ದಿತು. ಅದೇ ಹೆಸರೇ ಈಗಲೂ ಕೆಯಲ್ಲಿದೆ. ಈಗಿನ ಉಮರಖಡಿ, ಭೆಂಡಿಬಝಾರಗಳು ನೆಲಸಿರುವ ಸ್ಥಳವು ಲಮಯವಾಗಿತ್ತು. ಎಲ್ಲೆಲ್ಲಿ ನೋಡಿದರೂ ಕೊಳಚೆ, ತೇವು ಪಸರಿಸಿದ್ದರಿಂದ ಳಿಜ್ವರ, ಮೈಲಿ, ಮಾರಿಕಾ ಮೊದಲಾದ ರೋಗಗಳಿಗೆ ಮುಂಬಯಿಯು ಬೀಡಾ ದ್ದಿತು. ಏನೇನುಗಾರರೇ ವಿಶೇಷವಾಗಿ ವಾಸಿಸುತ್ತಿದ್ದರು. ಎಂದಿನಿಂದಲೂ ಅದು

ವ್ಯಾಪಾರಕ್ಕೆ ಪಶ್ಚಿಮದಿಕ್ಕಿನ ಮಧ್ಯಸ್ಥಾನವಾಗಿದೆ. ಹಾಗು ಪಾಶ್ಚಿಮಾತ್ಯರು ಅಂ
ಪೋರ್ತುಗೀಜ, ಡಚ್ಚ, ಇಂಗ್ಲಿಷ ಮುಂತಾದ ಜನಾಂಗದವರು ಬಂದಿಳಿಯುವ
ಅನುಕೂಲ ಸ್ಥಳವಾದುದರಿಂದ ರೋಗತಾಪತ್ರಯಗಳನ್ನು ಲೆಕ್ಕಿಸದೆ ವ್ಯಾಪಾರಿ
ಅಲ್ಲಿಗೆ ಬರಲೇಬೇಕಾಗುತ್ತಿತ್ತು. ಪೂರ್ವದಕಡೆಯ ಚೀನ, ಹಿಂದುಸ್ತಾನ, ಆ
ಯದ ಮಸಾಲೆ ದ್ವೀಪಗಳು ಮುಂತಾದ ಸಮೃದ್ಧ ದೇಶಗಳ ಕೂಡ ಪಾಶ್ಚಿಮಾತ್ಯ
ವ್ಯಾಪಾರ ಮಾಡಲೇಬೇಕಾಗಿತ್ತು. ಆದ್ದರಿಂದ ಎಲ್ಲ ಸ್ಥಾನಿಕ ತೊಂದರೆಗಳನ್ನು ಸ
ಸಾಹಸಿಗಳಾದ ವ್ಯಾಪಾರಿಗಳು ಅಲ್ಲಿ ನೆಲೆಸತೊಡಗಿದರು. ಅಂದಿನಿಂದ ಅಲ್ಲಿಯ
ಸಂಖ್ಯೆಯು ಕೆಲವರ್ಷಗಳಲ್ಲಿ ೧೦ ಸಾವಿರದಿಂದ ೧೬ ಸಾವಿರದವರೆಗೆ ಏರತೊಡಗಿ
ಒಳ್ಳೇ ಭರದ ವ್ಯಾಪಾರದ (ಸುಗ್ಗಿಯ) ಕಾಲದಲ್ಲಿ ಜನಸಂಖ್ಯೆಯು ಹೆಚ್ಚಾಗ
ರೋಗ ಹಬ್ಬಿದಕೂಡಲೆ ಮತ್ತೆ ಕಡಿಮೆಯಾಗುತ್ತಿತ್ತು. ಆಗ ದೇಶವಿದೇಶಗಳ
ತರದ ಜನರೆಲ್ಲ ಅಲ್ಲಿ ಕೂಡಿದ್ದರಿಂದ ಜನಸಂಖ್ಯೆಯ ಜೊತೆಗೆ ಮದ್ಯಪ್ರಾಶನವೂ ವ
ಚಾರಗಳೂ ಕೂಡಿ ಕೆಟ್ಟ ಹವೆಯು ಪರಿಣಾಮಕ್ಕೆ ಮತ್ತಿಷ್ಟು ಉಕ್ಕು ಬಂದು ಮ
ಸಂಖ್ಯೆಯು ಬೆಳೆಯುತ್ತಿತ್ತು. ಈ ಪ್ರಕಾರದ ಪರಿಸ್ಥಿತಿಯಲ್ಲಿ ನಮ್ಮಲ್ಲಿಯ ಒಳದೇ
ನಾಗರಿಕರು ಈಗಿನಂತೆ ಅಲ್ಲಿಗೆ ಹೋಗಿ ನೆಲೆಸಲಿಕ್ಕೆ ಕಾರಣವೇ ಇರಲಿಲ್ಲ.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಿದ್ದರೂ ಸುರತದಲ್ಲಿದ್ದ ಇಂಗ್ಲಿಷ ಕಂ
ಯವರು ಮರಾಟರ ಸುಲಿಗೆಗೂ ಉತ್ತರದ ರಾಜಕರಣಕ್ಕೂ ತೊಂದರೆಪ
ಮುಂಬಯಿಯೇ ಸುರತಕ್ಕಿಂತಲೂ ಸುರಕ್ಷಿತಸ್ಥಾನವೆಂದರಿತು ಅಲ್ಲಿ ನೆ
ವ್ಯಾಪಾರಮಾಡಲಿಕ್ಕೆ ಆಶಿಸುತ್ತಿದ್ದರು. ಸುರತದಲ್ಲಿದ್ದ ಆಗಿನ ಬ್ರಿಟಿಶ ಕಂಪನಿ
ಪ್ರೆಸಿಡೆಂಟನಾದ ವಿ. ಜರಲ್ಡ ಆಜಿಯರ (೧೬೬೯ ರಿಂದ ೧೬೭೭ ರ ವ
ಪ್ರೆಸಿಡೆಂಟನಾಗಿದ್ದನು) ಎಂಬವನು ಮುಂಬಯಿಯಲ್ಲಿ ಬ್ರಿಟಿಶ ಹಡಗುಗಳ
ಇಟ್ಟು ಅದನ್ನು ಬ್ರಿಟಿಶ ಬಂದರದ ಮುಖ್ಯ ಸ್ಥಾನವನ್ನಾಗಿ ಮಾಡಿಕೊಂಡ
ಇವನೇ ಮುಂಬಯಿಯ ಆದ್ಯ ಸಂಸ್ಥಾಪಕನು. ಇಲ್ಲಿಯೂ ಮರಾಟರ ಹಾ
ಸಿದ್ದಿಗಳ ತೊಂದರೆಯಿದ್ದರೂ ಸುರತದಷ್ಟು ಕಠಿಣ ಪರಿಸ್ಥಿತಿಯು ಇರ
ವ್ಯಾಪಾರದ ವಖಾರಗಳ ಸಂರಕ್ಷಣೆಗಾಗಿ ಸುತ್ತಲೂ ಚನ್ನಾಗಿ ಗೋಡೆಗಳ
ಕಟ್ಟಿಸಿದನು. ಹಾಗು ಅನುಕೂಲವಾಗುವಂತೆ ಬಂದರದ ಕಟ್ಟಿಗಳನ್ನು ಕ
ದನು. ಹಾಗು ೬೦೦ ಜನ ಏತದ್ದೇಶೀಯರ ಕಂಪನಿ ಯುರೋಪಿಯನ್ನರ ದಂಡ
ಸಿದ್ಧಪಡಿಸಿ ಆ ಸೈನ್ಯದ ಮೇಲೆ ಒಬ್ಬ ಇಂಗ್ಲಿಷ ಮುಖ್ಯಸ್ಥನನ್ನು ನೇಮಿಸಿದ
ಅಲ್ಲಿದ್ದ ವಖಾರಗಳ ವ್ಯವಸ್ಥೆಗಾಗಿ ಒಂದು ಕೌನ್ಸಿಲವನ್ನು ಸಿದ್ಧಪಡಿಸಿದ
ಹೀಗಾಗಿ ಸುರತದ ಪ್ರೆಸಿಡೆಂಟನು ಮುಂಬಯಿಯಲ್ಲಿ ಇಂಗ್ಲಿಷರ ಸಾರ್ವಭೌಮ
ಅಸ್ತಿವಾರದ ಬೀಜವನ್ನು ಸುಮುಹೂರ್ತದಲ್ಲಿ ಊರಿದನೆಂದು ಹೇಳಬಹು

ಇಷ್ಟಲ್ಲ ವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಎಂದೂ ಆಗಲಾರದು. ಆಗಿನ ಬ್ರಿಟಿಶ ಕಂಪನಿಯವರ ಮುತ್ಸದ್ದಿತನ, ಪ್ರಾಮಾಣಿಕತನ, ಧೈರ್ಯ ಇವೆಲ್ಲವುಗಳ ಕೀಕರಣದಿಂದ ಬ್ರಿಟಿಶರು ಪ್ರಗತಿಹೊಂದಿದರು. ಪೋರ್ತುಗೀಜ ಡಚ್ಚ ುಂತಾದ ವಿದೇಶೀಯರೂ ಮರಾಠಾ ಸಿದ್ದೀ ಮುಂತಾದ ಏತದ್ದೇಶೀಯರೂ ಹ್ಯಾಗೆ ್ಯಾಗೆ ಹಿಂದೆ ಸರಿದರೆಂಬುದನ್ನು ತಿಳಿದುಕೊಳ್ಳುವದು ಈ ಸಂದರ್ಭದಲ್ಲಿ ಅವಶ್ಯವು. ದರಿಂದ ಯಾವದೊಂದು ಜನತೆಯ ಸರ್ವ ಸಾಮಾನ್ಯವಾದ ಗುಣಗಳು ವರ ಹೆಚ್ಚಳಕ್ಕೆ ಹ್ಯಾಗೆ ಕಾರಣವಾಗುವವೆಂಬ ಸಂಗತಿಯು ಮನದಟ್ಟಾ ುವದು.

ಮುಂಬಯಿಯು ಮೊದಲು ಮೊಗಲರ ಕೈಕೆಳಗೆ ಬರುವ ಪೂರ್ವದಲ್ಲಿ ಗುಜ ರಾಥದ ಸುಲ್ತಾನನ ಕೈಯಲ್ಲಿತ್ತು. ಪಾಶ್ಚಿಮಾತ್ಯರಿಗೆ ಹಿಂದುಸ್ತಾನಕ್ಕೆ ಬರುವ ಬ್ಬಾಗಿಲು ಈಗಿನಂತೆ ಆಗಲೂ ಮುಂಬಯಿಯೇ ಆಗಿತ್ತು. ಆದುದರಿಂದ ಪೋರ್ತು ೀಜರು ಬಂದು ಇಲ್ಲಿ ಇಳಿಯುತ್ತಿದ್ದರು. ಹಾಗೆ ಬರಲಿಕ್ಕೆ ಅಲ್ಲದ್ದ ಸಣ್ಣ ಸಣ್ಣ ್ವೀಪಗಳಲ್ಲಿ ಹಡಗುಗಳಿಗೆ ನಿಲ್ಲಲಿಕ್ಕೆ ಅನುಕೂಲ ಸ್ಥಳಗಳು ಇದ್ದವು. ಆಗ ುಂಬಯಿ ದ್ವೀಪವು ವಸಯಿಯ ಕೆಳಗೆ ಇದ್ದಿತು. ಪೋರ್ತುಗೀಜರ ಗವರ್ನರ ಾದ ನ್ಯನೋ-ಡಾ-ಕುನ್ಹಾ ಎಂಬವನು ಜಾಣತನದಿಂದ ಗುಜರಾಥದ ಹಾದ್ದೂರಶಹನ ಕಡೆಯಿಂದ ಮುಂಬಯಿ ಸಹಿತವಾಗಿ ವಸಯಿಯನ್ನು ಸಂಪಾ ಸಿದನು. ಗುಜರಾಥದ ಬಹಾದ್ದೂರ ಶಹನಿಗೂ ಹುಮಾಯೂನನಿಗೂ ಕಾಳಗವು ಡೆದಾಗ ಪೋರ್ತುಗೀಜ ಗವರ್ನರನು ಚೆನ್ನಾಗಿ ಸಹಾಯಮಾಡಿದ್ದರಿಂದ ಹಾದ್ದೂರಶಹನು ಪೋರ್ತುಗೀಜರಿಗೆ ಋಣಿಯಾಗಿದ್ದನು.

ಈ ಪ್ರಕಾರ ಮುಂಬಯಿ, ವಸಯಿ ನಡುಗಡ್ಡೆಗಳು ತಮಗೆ ಅಂಕಿತವಾದ ೂಡಲೆ ವಸಯಿಗೆ ಪೋರ್ತುಗೀಜರು ಭದ್ರವಾದ ಕೋಟೆಯನ್ನು ಕಟ್ಟಿ ೂಂಡರು. ಇದರಿಂದ ಆಗಿನಕಾಲದಲ್ಲಿ ಅಶಾಂತತೆಯು ಪಸರಿಸಿತ್ತೆಂದು ತಾನೇ ್ಯಕ್ತವಾಗುತ್ತದೆ. ಆಗ ಮುಂಬಯಿಯಲ್ಲಿ ಏತದ್ದೇಶೀಯ ಕ್ರೈಸ್ತರು, ಪರಭು, ೂಳಿ, ಭಂಡಾರಿ, ಕುಣಬಿ, ಮಹಮ್ಮದೀಯರು ಇತ್ಯಾದಿ ಜನಾಂಗದವರು ಾಸವಾಗಿದ್ದರು. ಪಾರ್ಸೀಯರು ಮಾತ್ರ ಆಗ ಅಲ್ಲಿ ಇರಲಿಲ್ಲ. ಅವರು ಮುಂದೆ ಂದರು. ಈ ಸಂದರ್ಭದಲ್ಲಿ ಪೋರ್ತುಗೀಜರು ತಮ್ಮ ಧರ್ಮ ಪ್ರಸಾರವನ್ನು ್ಳೀ ಭರದಿಂದ ನಡೆಯಿಸಿದರು. ಪೊರ್ತುಗೀಜ ಪಾದ್ರಿಗಳು ವಿಶೇಷವಾಗಿ ಿಸ್ಸುಯಿಟ ಪಂಥದ ಪಾದ್ರಿಗಳು ಅಲ್ಲಿ ಬಹಳ ಬಲಾತ್ಕಾರವನ್ನು ನಡೆಯಿಸಿದರು. ೋರ್ತುಗೀಜರ ವರ್ಚಸ್ಸವು ಇಳಿಯಲಿಕ್ಕೆ ಬಲುಮೆಯು ಧರ್ಮ ಪ್ರಸಾರವೇ

ಬಹುಮಟ್ಟಿಗೆ ಕಾರಣವಾಯಿತು. ಇತ್ತ ಮುಂಬಯಿ ಬಂದರವು ತಮಗೆ ದೊರೆ
ಅನುಕೂಲವಾಗುವಪೆಂದು ಇಂಗ್ಲಿಷ ಕಂಪನಿಯವರೂ ಉತ್ಕಂಠಿತರಾಗಿದ್ದ

ಆಗ (೧೬೬೦) ಇಂಗ್ಲಂಡದ ಪಟ್ಟದಮೇಲೆ ಅಧಿಕಾರಾರೂಢನಾಗಿದ್ದ ಎ
ನೆಯ ಚಾರ್ಲಸರಾಜನು ಇಂಗ್ಲಂಡದ ಪ್ರಜೆಗಳಿಗೆ ಬಹಳ ಪ್ರಿಯಕರನಾಗಿದ್ದನ
ಕಂಪನಿಯವರ ಮೇಲೆಯಂತೂ ಅತಿಶಯ ನಂಬಿಗೆಯನ್ನು ಇಟ್ಟಿದ್ದನು. ಕಂಪ
ಯವರು ಬೇಡಿದ ಸಹಾಯವನ್ನು ಈಯಲಿಕ್ಕೆ ಅವನು ಯಾವಾಗಲೂ ಸಿದ್ಧನಾ
ದ್ದನು. ಇದಕ್ಕೆ ವಿಪರೀತವಾಗಿ ಪೊರ್ತುಗಾಲದ ಪರಿಸ್ಥಿತಿಯಿತ್ತು; ಇಲ್ಲಿ ವಸ
ಮುಂಬಯಿಗಳನ್ನು ದೊರಕಿಸಿದ ಪೋರ್ತುಗೀಜ ಗವರ್ನರನಾದ ಸ್ಯನೋ-ಡಾ
ಕುನ್ಹಾ ಎಂಬವನಿಗೆ ಮುಂದೆ ಪೋರ್ತುಗಾಲ ದೇಶದಲ್ಲಿ ಕಾರಾಗೃಹವು ಪ್ರಾಪ್ತ
ವಾಯಿತು. ಚಾರ್ಲಸ ರಾಜನು ಕಂಪನಿಯವರಿಗೆ ಇಲ್ಲಿ ವ್ಯಾಪಾರದ ಹಕ್ಕನ
ಕೊಟ್ಟದ್ದಲ್ಲದೆ ಕಾಲಕಾಲಕ್ಕೆ ಅವಶ್ಯಬಿದ್ದಂತೆ ಒಟ್ಟಿಗೆ ಐದು ಸನದುಗಳನ
ಕೊಟ್ಟನು. ಸ್ವತಂತ್ರವಾಗಿ ನಾಣ್ಯಗಳನ್ನು ಮುದ್ರಿಸುವದು, ಕೋಟಿಕೊತ್ತ
ಗಳನ್ನು ಕಟ್ಟುವದು, ಸೈನ್ಯವನ್ನು ನಿರ್ಮಿಸಿಕೊಳ್ಳುವದು, ಯುದ್ಧೋಪಕರ
ಗಳನ್ನು ಇಂಗ್ಲಂಡದಿಂದ ತರುವದು, ಏತದ್ದೇಶೀಯ ರಾಜರೊಡನೆ ಸಂಧಿವಿಗ್ರ
ಗಳನ್ನು ಮಾಡಿಕೊಳ್ಳುವದು ಇತ್ಯಾದಿ, ರಾಜರಿಗೆ ಉಚಿತವಾದ ಅಧಿಕಾರಿಗಳನ
ಚಾರ್ಲಸರಾಜನು ಕಂಪನಿಯವರಿಗೆ ದಯಪಾಲಿಸಿದ್ದನು. ಆವರಾದರೂ ಅವು
ಉಪಯೋಗವನ್ನು ಸರಿಯಾಗಿ ಮಾಡಿಕೊಂಡರು. ಇದಲ್ಲದೆ ಪೋರ್ತುಗೀ
ಡಚ್ಚ ಮೊದಲಾದ ಪರಶತ್ರುಗಳ ಹಾಗು ಕಂಪನಿಯ ವಿರುದ್ಧವಾಗಿ ಯತ್ನಸಡಿ
ಇಂಗ್ಲಿಷ ಗೃಹಸ್ಥನ ಪಾರುಪತ್ಯಮಾಡಲಿಕ್ಕೆ ಚಾರ್ಲಸರಾಜನಿಂದ ಕಂಪನಿಯವ
ಒಳ್ಳೇ ಬೆಂಬಲವು ದೊರೆಯುತ್ತಿತ್ತು. ಇದಕ್ಕನುಸರಿಸಿ ಸ್ವದೇಶದಲ್ಲಿ ಚಾರ್ಲ
ರಾಜನಮೇಲೆ ಕಠಿಣ ಪ್ರಸಂಗವು ಬಂದಾಗ ಕಂಪನಿಯವರು ಚೆನ್ನಾಗಿ ಸಹಾ
ಮಾಡಿದರು. ಅರಸನು ತನಗೆ ಅನುಕೂಲರಾದವರನ್ನೇ ಕಂಪನಿಯ ಮುಖ್ಯ
ಕಾರಿಗಳನ್ನಾಗಿ ನೇಮಿಸಿಕೊಳ್ಳುತ್ತಿದ್ದನು. ಪ್ರತಿಯೊಂದು ಪರ್ಯಟನಕ್ಕೆ ೫ ಲ
ರೂಪಾಯಿಗಳವರೆಗೆ ಹಣವನ್ನು ಹೊರಗೆ ಒಯ್ಯಬಹುದೆಂದು ಅರಸನು ಕಂಪ
ಯವರಿಗೆ ಅಧಿಕಾರಕೊಟ್ಟಿದ್ದನು.

ಡಚ್ಚ ಕಂಪನಿಯವರ ವ್ಯಾಪಾರವು ನಡೆದೇ ಇತ್ತು. ಮತ್ತು ಅವರ ಹಾಗೆ
ಇಂಗ್ಲಿಷ ಕಂಪನಿಯವರ ನ್ಯಾಯವು ಬೆಳೆಯುತ್ತ ಸಾಗಿತ್ತು. ಚಾರ್ಲಸನ ಸಹೋದರ
ನಾದ ಜೇಮ್ಸನು ಆಫ್ರಿಕದ ಪೂರ್ವದಂಡೆಯಮೇಲೆ ವ್ಯಾಪಾರಮಾಡಲಿಕ್ಕಾಗಿ
ಒಂದು ಹೊಸ ಕಂಪನಿಯನ್ನು ಸ್ಥಾಪಿಸಿದನು. ಈ ಕೆಲಸದಲ್ಲಿ ಡಚ್ಚರಿಂದ

ಇಂಗ್ಲಿಷರಿಗೆ ತೊಂದರೆ ಬರಲಾರಂಭಿಸಿತು. ಇತ್ತ ಪೋರ್ತುಗೀಜರಿಗೂ ಡಚ್ಚರಿಂದ ಬಹಳ ಉಪದ್ರವವಾಗಲಾರಂಭಿಸಿತ್ತು. ಆ ಉಪದ್ರವದ ಪ್ರತೀಕಾರಕ್ಕಾಗಿ ಪೋರ್ತುಗೀಜರು ಇಂಗ್ಲಿಷರ ಆಶ್ರಯವನ್ನು ಬೇಡಲಾರಂಭಿಸಿದರು. ಹಿಂದುಸ್ತಾನದ ಪಶ್ಚಿಮದಂಡೆಯಮೇಲೆ ಇಂಗ್ಲಿಷರು ಕಾಲೂರಿ ನಿಂತರೆ ತಮಗೆ ಅಡ್ಡ ಬರುತ್ತಿದ್ದ ಡಚ್ಚರಿಗೆ ಪ್ರತೀಕಾರಮಾಡಲಿಕ್ಕೆ ಅನುಕೂಲವಾಗುವದೆಂದು ಪೋರ್ತುಗೀಜರು ನಿರ್ಧರಿಸಿದರು. ಈ ಉದ್ದೇಶಕ್ಕನುಗುಣವಾಗಿ ೧೬೬೧ನೆ ಇಸವಿಯ ಜೂನ ತಿಂಗಳ ೨೩ನೆಯ ತಾರೀಖಿನ ದಿವಸ ಪೋರ್ತುಗಾಲದ ಅರಸನು ಇಂಗ್ಲಂಡದ ಅರಸನಾದ ೨ನೆಯ ಚಾರ್ಲ್ಸನಿಗೆ ತನ್ನ ಮಗಳಾದ ಕ್ಯಾಥರೀನಳನ್ನು ಲಗ್ನಮಾಡಿ ಕೊಟ್ಟು ಸಂಬಂಧ ಬೆಳೆಯಿಸಿದನು. ವರದಕ್ಷಿಣೆಯೆಂದು ಮುಂಬಯಿಯನ್ನೂ ಅದರ ಸುತ್ತಿನ ದ್ವೀಪಗಳನ್ನೂ ಕೊಡಬೇಕೆಂದು ಗೊತ್ತಾಯಿತು. ಈ ಪ್ರಕಾರವಾಗಿ ಒಪ್ಪಂದವಾಯಿತು.

ಪೂರ್ವದ ಕಡೆಯ ವ್ಯಾಪಾರದ ನಿಮಿತ್ತವಾಗಿ ಡಚ್ಚರಿಗೂ ಇಂಗ್ಲಿಷರಿಗೂ ಕಾಳಗವು ನಡೆಯಿತು. ಈ ಯುದ್ಧಕ್ಕಾಗಿ ಇಂಗ್ಲಿಷ ಪಾರ್ಲಮೆಂಟಿನವರು ಧನವನ್ನು ನೀರಿನಂತೆ ವೆಚ್ಚಮಾಡಿದರು. ಈ ಪ್ರಸಂಗದಲ್ಲಿ ದಿಲ್ಲಿಯ ಔರಂಗಜೇಬ ಬಾದಶಹನು ನಿಮ್ಮಿಬ್ಬರ ನ್ಯಾಯದ ನಿಮಿತ್ತವಾಗಿ ನಮ್ಮ ರಾಜ್ಯದಲ್ಲಿ ಅಶಾಂತಿಯು ಪಸರಿಸುವದೆಂದು ಅಡ್ಡಬಂದದ್ದರಿಂದ ಆ ಯುದ್ಧವು ಅಷ್ಟಕ್ಕೇ ನಿಂತಿತು. ಆ ಯುದ್ಧದಲ್ಲಿ ಡಚ್ಚರ ಕೈ ಪ್ರಬಲವಾದರೆ ತಮಗೆ ತೊಂದರೆಯಾಗುವದೆಂದು ಭರತದ ಪ್ರೆಸಿಡೆಂಟನು ಬಗೆದಿದ್ದನು. ಇದೇ ಸಮಯಕ್ಕೆ ೧೬೬೨ರಲ್ಲಿ ಇಂಗ್ಲಿಷರಿಗೂ ಡಚ್ಚರಿಗೂ ಯುರೋಪದಲ್ಲಿ ಬ್ರೇಡಾ ಎಂಬಲ್ಲಿ ಒಪ್ಪಂದವಾಯಿತು. ಇಂಗ್ಲಿಷ ಹಡಗುಪಡೆಗಳ ಮುಂದೆ ಏತದ್ದೇಶೀಯರ ಆಟವು ನಡೆಯುವಂತೆ ಕಾಣಲಿಲ್ಲ. ಡಚ್ಚರ ಹಾಗು ಪೋರ್ತುಗೀಜರ ಉಪದ್ರವವು ಮೇಲೆ ವಿವರಿಸಿದಂತೆ ಮುಂಬಯಿಯ ಮೇಲೆ ತಪ್ಪಿ ಹೋಯಿತು. ಆದುದರಿಂದ ಮುಂಬಯಿಯು ಅದರೆ ಹಿಂದುಸ್ತಾನದಪಶ್ಚಿಮದ ಹೆಬ್ಬಾಗಿಲು ಇಂಗ್ಲಿಷರಿಗೆ ತೆರೆದಂತಾಯಿತು.

ಸುದೈವದಿಂದ ಮುಂಬಯಿ ಬಂದರವು ಬೆಳೆದು ಬೆಳೆದು ಜನಸಂಖ್ಯೆಯು ಸಾವಿರದಿಂದ ೧೦ ಲಕ್ಷದವರೆಗೆ ಬೆಳೆದಿದೆ. ಅದು ಈಗ ಪರದೇಶದವರಿಗೆ ಕುತೂಹಲದಿಂದ ನೋಡತಕ್ಕ ಸ್ಥಳವಾಗಿದೆ. ಅದು ಈಗ ಹಿಂದುಸ್ಥಾನದ ಪಶ್ಚಿಮೈಕೆ, ಏಶಿಯಾಖಂಡದಲ್ಲಿ ಸಹ ಒಂದನೆಯ ಪ್ರತಿಯ ಬಂದರವೂ ವ್ಯಾಪಾರಗಳ ಆಗರವೂ ಆಗಿ ಲಕ್ಷ್ಮಿಯು ಭುವನವಾಗಿದೆ.

ಬಿಲ್ವ ಹಾಗು ತುಳಸೀಗಿಡಗಳು

ಲೇಖಕಃ— ಗಂ. ಚೆ. ಮಠದ ೩ನೆಯ ವರ್ಷದ ವಿದ್ಯಾರ್ಥಿ, ಟ್ರೇ. ಸ್ಕೂ. ಧಾರವಾಡ

ಗುಣಾಃ ಪೂಜಾಸ್ಥಾನಂ' ಎಂಬಂತೆ ಪೂಜ್ಯವಾದ ವಸ್ತುಗಳಲ್ಲಿ ಶ್ರೇಷ್ಠವಾದ ಗುಣಗಳು ಇದ್ದೇ ಇರುತ್ತವೆ. ನಮ್ಮ ಪೂರ್ವದ ಋಷಿವರ್ಯರು ಬಿಲ್ವ ಹಾಗೂ ತುಳಸೀಗಿಡಗಳ ಅಲೌಕಿಕ ಗುಣಗಳನ್ನು ಕಂಡುಹಿಡಿದು ಇವುಗಳಿಗೆ ಪೂಜ್ಯ ಸ್ಥಾನವನ್ನು ಕೊಟ್ಟಿರುವರು. ಹಿಂದೂ ಧರ್ಮದಲ್ಲಿ ಇವುಗಳಿಗೆ ಯೋಗ್ಯ ಸ್ಥಾನವನ್ನು ಕೊಟ್ಟಿರುವುದರಿಂದ ಪ್ರತಿಯೊಬ್ಬ ಆಸ್ತಿಕನಾದ ಹಿಂದುವು ಇವುಗಳ ದರ್ಶನ, ಸ್ಪರ್ಶಲಾಭಗಳನ್ನು ನೈಮಿತ್ತಿಕವಾಗಿಯಾದರೂ ಪಡೆದುಕೊಳ್ಳಬೇಕಾಯಿತು. ಈ ಯೋಜನೆಯಲ್ಲಿ ಆ ಋಷಿವುಂಗವರ ಪೂರ್ಣ ಜಾಣ್ಮೆಯು ವ್ಯಕ್ತವಾಗುತ್ತದೆ. ಧಾರ್ಮಿಕ ಭಾವನೆಯು ಈ ಉಪಯುಕ್ತವಾದ ವೃಕ್ಷಗಳ ರಕ್ಷಣೆಗೆ ಕಾರಣವಾಯಿತು. ಈ ಗಿಡಗಳ ಉಪಯೋಗವು ಅಪರಿಮಿತವಾಗಿದ್ದರೂ ಅದನ್ನು ಆಯುರ್ವೇದ ದೃಷ್ಟಿಯಿಂದ ಕೆಲವುಟ್ಟಿಗೆ ವಿವರಿಸುತ್ತೇನೆ.

ತುಳಸೀಗಿಡ

ಈ ಗಿಡದಿಂದ ಓಝೋನ ಎಂಬ ತೀಕ್ಷ್ಣವಾಯುವು ಉತ್ಪನ್ನವಾಗಿ ರೋಗಕಾರಕ ಹವೆಯನ್ನು ಶುದ್ಧಿಗೊಳಿಸುತ್ತದೆ. ಕ್ಷಯರೋಗಿಗಳಿಗಂತೂ ವಾಯುವು ಅತಿ ಹಿತಕರವಾದದ್ದು. ಇದಕ್ಕಾಗಿ ಬಾಗಿಲಮುಂದೆ ಕಟ್ಟೆಗಳನ್ನು ಕಟ್ಟಿ ಅದರಲ್ಲಿ ಈ ಗಿಡಗಳನ್ನು ಬೆಳಿಸುವರು. ಪಾಶ್ಚಿಮಾತ್ಯ ವೈದ್ಯರು ಸಹ ಬಾಗಿಲು, ಕಿಡಕಿಗಳಿಗೆ ಹೊಂದಿ ತುಲಸೀ ಸಸಿಗಳನ್ನು ಬೆಳಿಸುವದು ಉತ್ತಮವಾದುದೆಂದು ಅಭಿಪ್ರಾಯಪಡುತ್ತಾರೆ.

ಇದರಲ್ಲಿ ಅನೇಕ ಜಾತಿಗಳುಂಟು. ಕೃಷ್ಣತುಲಸಿ, ಶ್ವೇತತುಲಸಿ ಎಂಬ ಎರಡು ಪ್ರಕಾರಗಳು ಮುಖ್ಯವಾಗಿ ವಾಡಿಕೆಯಲ್ಲಿವೆ. ನಾಯಿತುಳಸಿ, ಕಾಡು ಕಸ್ತೂರಿ, ನೊಣದಕಸ ಇವಾದರೂ ಇದೇ ವರ್ಗಕ್ಕೆ ಸೇರಿದವು.

ಸಾಮಾನ್ಯಗುಣಃ— ಅಗ್ನಿದೀಪಕ, ಉಷ್ಣ, ರುಚಿಕರ, ಕಫವಾತ, ಕ್ರಿಮಿ ಶ್ವಾಸಕಾಸ, ರಕ್ತದೋಷ, ಜ್ವರ ಇವುಗಳ ನಾಶಕಾರಕ.

ಅಡವೀತುಳಸಿಯ ಸೊಪ್ಪನ್ನು ಜಜ್ಜಿ ರಸಿಕೆಯಾಗಡ ಒಣ ಹುಣ್ಣುಗಳ ಮೇಲೆ ಹಾಕಿ ಕಟ್ಟಿದರೆ ಒಳಗಿನ ಹೊಲಸು ಹೊರಬಿದ್ದು ಹುಣ್ಣು ತೀವ್ರ ಮಾಯುವವು.

ಅಡವೀತುಳಸಿಯ ಗಿಡದಿಂದ ಮನೆಯನ್ನು ಜಾಡಿಸಿದರೆ ಚಿಕ್ಕಾಡು ಗುಂಗಾಡು ನಾಶವಾಗುವವು.

ಅಡವೀ ತುಳಸೀಸೊಪ್ಪು, ಬೇವಿನಸೊಪ್ಪು, ಹುಲಗಲಬೀಜ, ರಾಳ ಇವುಗಳ ಚೂರ್ಣದ ಹೊಗೆಯನ್ನೆ ಪ್ಲೇಗಿನ ಕಾಲದಲ್ಲಿ ಮನೆಯಲ್ಲಿ ಹಾಕುವುದು ಪ್ಲೇಗಪ್ರತಿಬಂಧಕ ಉಪಾಯಗಳಲ್ಲೊಂದು.

ಅಡವೀತುಳಸಿಯಸೊಪ್ಪನ್ನು ಜಜ್ಜಿ ಅದನ್ನೂ ಜಲಮುರಲಿಸೊಪ್ಪಿನರಸವನ್ನೂ ಕುಸುಬೀಎಣ್ಣೆಯಲ್ಲಿ ಕಲಿಸಿ ದಸದ ಕಾಲಲ್ಲಿ ಹುಳಬಿದ್ದಲ್ಲಿ ಹಾಕಿ ಕಟ್ಟಿದರೆ ಹುಳಗಳು ಸತ್ತು ಹುಣ್ಣು ಬೇಗ ಮಾಯುವವು.

ಅನೇಕ ರೋಗಗಳ ಮೇಲೆ ಉಪಯೋಗವಾಗುವ ಹಿಂಗ್ವಾದಿ ಚೂರ್ಣದಲ್ಲಿ ಇದರ ಬೇರನ್ನು ಉಪಯೋಗಿಸುವರು.

ವಿಷಮಜ್ವರಕ್ಕೆ:— ಕರೇತುಳಸಿಯ ಸೊಪ್ಪು, ಬಿಲ್ವದಳ, ಜೀರಿಗೆ, ಲವಂಗ, ಅಮೃತಬಳ್ಳಿ, ಬೇವಿನ ಒಳದೋಟಿ, ಜೇಕಿಸಗಡ್ಡೆ ಇವುಗಳ ಕಷಾಯವು ಉತ್ತಮ.

ಮುಕ್ಕಳ ವಾಂತಿ ಅತಿಸಾರಕ್ಕೆ:— ತುಳಸೀಬೀಜವನ್ನು ಆಕಳ ಹಾಲಿನಲ್ಲಿ ಅರೆದು ಕುಡಿಸುವದು.

ಇರುಳುಗಣ್ಣಿಗೆ:— ಕರೇತುಳಸೀ ರಸದಲ್ಲಿ ಬಿಳೇಗಣಜಲಿ ಬೇರನ್ನು ತೆಯ್ದು ಕಣ್ಣಲ್ಲಿ ಮುಲಗಿಕೊಳ್ಳುವಾಗ್ಗೆ ನಾಲ್ಕು ಹನಿ ಹಾಕುವದು ಕಣ್ಣಿನ ಎಲ್ಲ ರೋಗಗಳಿಗೂ ಹಿತಕರವಾದದ್ದು.

ಪಿತ್ತಗಾದರಿ ಎದ್ದರೆ:— ತುಳಸೀರಸವನ್ನು ಮೈಗೆಲ್ಲ ಲೇಪಿಸುವರು.

ರಕ್ತಾತಿಸಾರಕ್ಕೆ:— ತುಳಸೀಬೀಜವನ್ನು ಡಾಳಿಂಬಕಾಯಿಯ ರಸದಲ್ಲಿ ಅರೆದು ಕುಡಿಸುವುದು.

ವಾತವಿಕಾರಕ್ಕೆ:— ಕರೇತುಳಸಿ, ಬಿಳೆಯಸಂಕೇಶ್ವರ, ಕಾಡಿಗ್ಗರಗು, ಕರಿಲಕ್ಕಿ ಇವುಗಳ ಚೂರ್ಣವನ್ನು ಅರ್ಧ ತೊಲೆಯಷ್ಟು ಜೇನುತುಪ್ಪದಲ್ಲಿ ದಿನಾಲು ಸೇವಿಸುವುದು.

ಚೇಳಿನಕಡಿತಕ್ಕೆ:— ತುಳಸೀರಸದಲ್ಲಿ ಎಕ್ಕೆಯ ಅಥವಾ ಬಿಳೇಗಣಜಲಿಯ ಬೇರನ್ನು ತೆಯ್ದು ಲೇಪಿಸಿ ಕಾಸುವದು.

ಚರ್ಮರೋಗಗಳಿಗೆ:— ತುಳಸಿಯ ರಸದಲ್ಲಿ ಗಂಧಕ, ಸೀಸು ತೆಯ ಲೇಪಿಸುವುದು.

ವಾಂತಿಗೆ:— ತುಳಸೀರಸದಲ್ಲಿ ನವಿಲಗರಿಯ ತುಂಬು ಸುಟ್ಟಬೂದಿ, ಬೆಳ ಪರಟೆಯ ಬೂದಿ, ಜೇನುತುಪ್ಪ ಕಲಿಸಿ ನೆಕ್ಕಿಸುವುದು.

ಇಲಿ ಕಡಿದದ್ದಕ್ಕೆ— ತುಳಸೀರಸದಲ್ಲಿ ಬೆಕ್ಕಿನ ಹಲ್ಲು ತೆಯ್ದು ಹಚ್ಚುವ

ಕಿವಿ ಒಡೆದದ್ದಕ್ಕೆ— ಕರೇತುಳಸಿ, ಕಾಡಿಗ್ಗರಗು, ಕರೇಮದ್ದುಗುಣಿ ಇವುಗಳ ರಸಗಳ ಚತುರ್ಥಾಂಶ ಹುಲಗಲ ಎಣ್ಣೆಯನ್ನು ಹಾಕಿ ಕುದಿಸಿ ಉಂಟಾ ಎಣ್ಣೆಯನ್ನು ಕಿವಿಯಲ್ಲಿ ನಾಲ್ಕು ಹನಿಯಂತೆ ಹಾಕುವದು.

ಮಕ್ಕಳ ಕೆಮ್ಮಿಗೆ— ತುಳಸೀ ಗುಟ್ಟಿಯನ್ನು ಹಾಕುವ ರೂಢಿಯ ಒಳ್ಳೆಯದು.

ಧನುರ್ವಾತಕ್ಕೆ— ಕೃಷ್ಣತುಲಸಿ, ಅಲ್ಲ, ಬಳ್ಳೊಳ್ಳಿ, ಜಲಮುರಲಸೂಪ್ಪ ಮೆಣಸು ಇವುಗಳನ್ನು ಅರೆದು ೩-೪ ಮಾಸಿಯಷ್ಟು ಜೇನುತುಪ್ಪದಲ್ಲಿ ಹಾ ವದು. ಇದು ಬಾಲಗ್ರಹಕ್ಕೂ ಉತ್ತಮವಾದದ್ದು.

ಬಿಲ್ವವೃಕ್ಷ

ಬಿಲ್ವವೃಕ್ಷದ ನೆರಳು ತಂಪಾಗಿ ಆರೋಗ್ಯಕರವಾಗಿದೆ. ಹಗಲು ಇಡೀ ನೆರಳಲ್ಲಿ ಕೂಡುತ್ತಿತ್ತಹೋದರೆ ಕ್ಷಯ ಮುಂತಾದ ಅನೇಕ ರೋಗಗಳ ಗುಣವಾಗುತ್ತವೆ. ಈ ವೃಕ್ಷದ ಸನ್ನಿಧಿಯಲ್ಲಿ ಮಂತ್ರ ಪುನಶ್ಚರಣಾದಿಗಳು ತೀಕ್ಷ್ಣ ಸಿದ್ಧಿಸುವವು.

ಸಾಮಾನ್ಯ ಗುಣಧರ್ಮ—ಪೌಷ್ಟಿಕ, ಪಾಚಕ, ರಕ್ತಶುದ್ಧಿಕಾರಕ, ಅತಿಸಾ ವಾತ, ತ್ರಿದೋಷ ಜ್ವರ ಇವುಗಳ ನಾಶಕ.

ಅಮಾಂಶಕ್ಕೆ— ಬಿಲ್ವಫಲದ ತಿಳಲಿನಲ್ಲಿ ಬೆಲ್ಲ, ತುಪ್ಪ, ಶುಂಠಿ ಕಲಿಸಿ ವದರಿಂದ ಗುಲ್ಮವಾಯು, ಉದರಶೂಲೆ, ಅಮಶೂಲೆ, ಮಲಬದ್ಧತೆ, ರಕ್ತಾ ಸಾರ ಇವು ನಾಶವಾಗುವವು.

ಹೊಟ್ಟೆಯಲ್ಲಿ ಕ್ರಿಮಿಯಾದರೆ— ಬಿಲ್ವಪತ್ರದರಸ, ಜೇರಿಗೆ ಅರೆದು ಕು ಸುವದು.

ಸರ್ವ ಅತಿಸಾರಕ್ಕೆ— ಬಿಲ್ವಫಲದ ತಿಳಲು, ಮಾವಿನಗೊಟ್ಟದ ತಿಳಲ ಪೊಸರು ಕಲಿಸಿ ಕೊಡುವದು.

ಅಶುದ್ಧ ರಸಾಯನ ಭಕ್ಷಣದಿಂದ ಬಾಯಿಬಂದರೆ— ಬಿಲ್ವಫಲದ ತಿಳಲು, ಕಾಲಿಯು ಒಳದೋಟಿ, ಪಟಕ ಇವುಗಳನ್ನು ಕುದಿಸಿದ ನೀರು ಮುಕ್ಕಳಿಸುವದು.

ಗರ್ಭಿಣಿ ವಾಂತಿಗೆ— ಬಿಲ್ವಫಲದ ತಿರುಳಿನ ನೀರು ಜೇನುತುಪ್ಪ ಕೂಡಿಸಿ ಕೊಡುವದು.

ವಿಷಮಜ್ವರಕ್ಕೆ— ಬಿಲ್ವಪತ್ರ, ಬೆಲ್ಲ, ಶುಂಠಿ, ಅಮೃತಬಳ್ಳಿಸತ್ವ ಇವನ್ನು ಅರೆದು ಗುಳಿಗೆಮಾಡಿ ತಿನ್ನಿಸುವದು.

ಪ್ರಮೇಹಕ್ಕೆ:— ಬಿಲ್ವರಸದಲ್ಲಿ ಒಟವಟಿಗನ ಬೇರನ್ನು ತೆಯ್ದು ಜೀರಿಗೆ ವಿರಸಿ ಕೊಡಲು ಅಸಾಧ್ಯ ಪ್ರಮೇಹಕ್ಕೂ ಗುಣ ಬರುವದು.

ಮೂಲವ್ಯಾಧಿಗೆ— ಜೀರಿಗೆ, ದಾಲಚಿನ್ನಿ, ಸೂರಣ, ಸಕ್ಕರೆ ಇವುಗಳನ್ನು ಬಿಲ್ವರಸದಲ್ಲಿ ತಕ್ಕೊಂಡರೆ ಮುಲಬದ್ಧತೆ, ಮೂಲವ್ಯಾಧಿ, ಮಾರೀಬೇನೆ, ಕಾಮಣಿ ಇವು ನಾಶವಾಗುವವು.

ಬಿಲ್ವಮೂಲವನ್ನು ಬಾಳಂತಿರೋಗಕ್ಕೆ ಅತಿ ಗುಣಕಾರಿಯಾದ ದಶಮೂಲ ದಲ್ಲಿ ಸೇರಿಸಿರುವರು.

ಬಿಲ್ವಮೂಲವನ್ನು ಹಾಲಲ್ಲಿ ತೆಯ್ದು ಕುಡಿಯಲು ಸತ್ವವೃದ್ಧಿ, ಬುದ್ಧಿವೃದ್ಧಿ ಯಾಗುವದು. ಬಿಲ್ವಮೂಲವನ್ನು ಲಿಂಬೇಹುಳಿಯಲ್ಲಿ ತೆಯ್ದು ನಾಲಿಗೆಗೆ ತಿಕ್ಕಲು ನಾಲಿಗೆ ರೋಗಗಳು ಹೋಗುವವು.

ಬಿಲ್ವಮೂಲವನ್ನು ನೀರಲ್ಲಿ ತೆಯ್ದು ಕುಡಿಸಿದರೆ ಸರ್ಪ ವಿಷವು ಇಳಿಯು ವದು. ಬಿಲ್ವಪತ್ರ, ಗಜಗದ ಬೇರು ಇವುಗಳ ಕಷಾಯದ ಸ್ನಾನ ಮಾಡಿಸಿದರೆ ಮುಕ್ಕಳ ಗ್ರಹಬಾಧೆಯು ನಿವೃತ್ತಿಯಾಗುವದು.

ಬಿಲ್ವಪತ್ರ, ಲವಂಗ, ಜೀರಿಗೆ, ಉಳ್ಳೇಗಡ್ಡಿ ಇವುಗಳನ್ನು ಅರೆದು ಗುಳಿಗೆಮಾಡಿ ತೂಲಿಯಷ್ಟು ತಿನ್ನುತ್ತ ಹೋದರೆ ಅಸ್ಥಿಗತ ಜ್ವರವು ನಿವೃತ್ತಿಯಾಗುವುದು.

ಬಿಲ್ವದ ತೋಟೆಯ ಕಷಾಯವನ್ನು ಜೇನುತುಪ್ಪದಲ್ಲಿ ಕೊಟ್ಟರೆ ತ್ರಿದೋಷ ಜನ್ಯ ವಾಂತಿಯು ನಾಶವಾಗುವದು.

ಬಿಲ್ವಫಲ, ಚಿತ್ರಮೂಲ, ಚವಕ, ಶುಂಠಿ ಇವುಗಳ ಕಲ್ಕವನ್ನು ಆಡಿನ ಹಾಲಲ್ಲಿ ಕೊಟ್ಟರೆ ಸಂಗ್ರಹಣಿ, ಶೂಲೆ, ಅಗ್ನಿಮಾಂದ್ಯ, ಅರುಚಿ ಇವುಗಳ ನಾಶ ವಾಗುವದು.

ಕ್ವಚಿದ್ಧರ್ಮಃ ಕ್ವಚಿನ್ಮೈತ್ರೀ ಕ್ವಚಿದರ್ಥಃ ಕ್ವಚಿದ್ಯಶಃ ।
ಕರ್ಮಾಭ್ಯಾಸಃ ಕ್ವಚಿಚ್ಚೇತಿ ಚಿಕಿತ್ಸಾನಾಸ್ತಿ ನಿಷ್ಫಲಾ ॥
ಭವ್ಯಂ ಶುಭಂ ಮಂಗಲಂ

ಬಾಕಿಗಳ ತಾಳೆಯ ವಿಷಯವಾಗಿ ಕೆಲವು ವಿಚಾರಗಳು

ಲೇಖಕ:— ಮಿ. ಕಮಡೊಳ್ಳಿ ಖನೆಯ ವ. ವಿ. ಟ್ರೇ. ಸ್ಕೂ. ಧಾರವಾಡ.

ಕೆಲವೊಂದು ನಿಯಮಿತ ಅವಧಿಯಲ್ಲಿ ಬರೆದ ಜಮಾಖರ್ಚು ಸರಿಯಾ
ದೆಯೋ ಇಲ್ಲವೋ ಎಂಬದರ ಪರೀಕ್ಷೆಗಾಗಿ ಮೇಳುನೋಡಬೇಕಾಗುತ್ತದೆ.
ಗಳಿಂದ, ಬರೆದ ಜಮಾಖರ್ಚಿನ ತಪ್ಪು ಒಪ್ಪುಗಳು ತಿಳಿಯುವವಲ್ಲದೆ ಜಮಾಖ
ಬರೆದವರ ಪ್ರಾಮಾಣಿಕತನವು ಸಹ ವ್ಯಕ್ತವಾಗುತ್ತದೆ. ಆಂದಮೇಲೆ ಕೆಲವೊ
ಅವಧಿಯವರೆಗೆ ಬರೆದ ಜಮಾಖರ್ಚಿನ ಸತ್ಯತೆಗಾಗಿ ತಾಳೆಗಳ ಮಹತ್ವವು ಎ
ಮಟ್ಟಿಗೆ ಆವಶ್ಯಕವಿರುತ್ತದೆಯೆಂಬದನ್ನು ಪ್ರತ್ಯೇಕವಾಗಿ ಹೇಳುವ ಕಾರಣ
ಮೇಲೆ ಬರೆದಂತೆ ತಾಳೆ ನೋಡುವ ಪ್ರಕಾರಗಳಲ್ಲಿ ಬಾಕಿಗಳ ತಾಳೆ
ಒಂದಾದದ್ದು.

ಕೆಲವೊಂದು ನಿಯಮಿತ ಅವಧಿಯ ವರೆಗೆ ಜಮಾಖರ್ಚು ನಡೆನಡೆದ ರ
ಆದ ವ್ಯವಹಾರಗಳ ಕೀರ್ದಿ ಬರೆದು ಖಾತೆಗೆ ಕೀರ್ದಿಯ ರಕಮುಗಳನ್ನು ಏ
ತ್ತೇವೆ. ಕೀರ್ದಿಯೊಳಗಿನ ಜಮಾಖರ್ಚಿನ ರಕಮುಗಳೆಲ್ಲ ಖಾತೆಗೆ ಸರಿಯ
ಏರಿಸಿದ್ದರೇ ಮಾತ್ರ ಬಾಕಿಗಳ ತಾಳೆಯು ಸರಿಯಾಗಿ ಕೂಡುವದು; ಇಲ್ಲದಿ
ಕೂಡುವದಿಲ್ಲ.

ಈ ತಾಳೆಯನ್ನು ಖಾತೆಯನ್ನು ಬರೆದಂತೆ ಬರೆದು ಅದರ ಜಮೆಯ ಕ
ಎಲ್ಲ ಜಮೆಯ ಬಾಕಿಗಳನ್ನೂ, ಖರ್ಚಿನ ಕಡೆಗೆ ಎಲ್ಲ ಖರ್ಚಿನ ಬಾಕಿಗಳನ್ನೂ ಬರೆ
ಬೇಕು. ಜಮೆಯ ಬಾಕಿಗಳ ಬೇರೀಜಿಗೆ ಖರ್ಚಿನ ಬಾಕಿಗಳ ಬೇರೀಜು + ರೊ
ಶಿಲ್ಕು ಸರಿಯಾಗಬೇಕು.

ಬಾಕಿಗಳು ಎರಡು ಪ್ರಕಾರದವು. ೧ ಕಚ್ಚಾಬಾಕಿ ೨ ಪಕ್ಕಾಬಾಕಿ.

ಯಾವದೊಂದು ಖಾತೆಯ ಬಾಕಿಯು ಎಂದೂ ತೀರುಗಿ ಬಾರದಂಥ
ಅಥವಾ ಕೊಡದಂಥದು ಇದ್ದರೆ ಅದಕ್ಕೆ ಕಚ್ಚಾಬಾಕಿ ಎನ್ನುವರು.

ಉದಾಹರಣಾರ್ಥವಾಗಿ ಎಲ್ಲ ಬಾಬಿನ ಖಾತೆಗಳ ಬಾಕಿಗಳು, ಜೀನಸವಾ
ಖಾತೆಯ ಬಾಕಿಗಳು. ಜೀನಸುವಾರ ಖಾತೆಗಳಲ್ಲಿ ಶಿಲ್ಕು ಮಾಲಿನ ಬೆಲೆಯ
ಎಂದಾದರೂ ಬರುವಂತೆ ಇರುತ್ತದೆ; ಆದರೆ ಅದರ ಮೇಲಿಂದ ತೆಗೆದ ಲಾಭವಾ
ಅಥವಾ ಹಾನಿಯಾಗಲಿ ತಿರುಗಿ ಬಾರದು. ಆದುದರಿಂದ ಅದು ಕಚ್ಚಾಬಾ

ದು. ಇಸವಿವಾರ ಖಾತೆಗಳ ಬಾಕಿಗಳು ಬರದಂತೆ ಇದ್ದರೆ, ಇಲ್ಲವೆ
ದ್ದರೆ ಅವು ಸಹ ಕಚ್ಚಾ ಬಾಕಿಗಳಾಗುವವು.
ಯಾವದೊಂದು ಖಾತೆಯ ಬಾಕಿಯು, ಕೈಯಲ್ಲಿದ್ದರೆ ಅಥವಾ ಎಂದಾದರೂ
ತೆ ಇದ್ದರೆ ಇಲ್ಲವೆ ಕೊಡುವಂತೆ ಇದ್ದರೆ ಅದು ಪಕ್ಕಾಬಾಕಿ ಎನಿಸುವದು.
ಉದಾಹರಣಾರ್ಥವಾಗಿ ಇಸವಿಸನ ಖಾತೆಗಳ ಬಾಕಿಗಳು, ರೋಖು,
ಬರೆದಂತೆ ಜೀನಸುವಾರ ಖಾತೆಗಳ ಶಿಲ್ಕು ಮೂಲು ಇವೆಲ್ಲ ಪಕ್ಕಾ ಬಾಕಿ
ವವು.
ಕಿಲವೊಂದು ಖಾತೆಯಮೇಲಿಂದ ಬಾಕಿಗಳನ್ನು ಹೇಗೆ ತೆಗೆಯಬೇಕೆಂಬದನ್ನು
ು ವಿಚಾರಿಸಿ ಬಳಿಕ ಅವುಗಳ ತೋಂಡ ವಿುಳವಣಿ ಹ್ಯಾಗೆ ಮಾಡಬೇಕೆಂಬ
ವಿಚಾರಮಾತೋಣ. ಇಸವಿವಾರ, ಬಾಬುವಾರ, ಜೀನಸುವಾರ
ಳ ಒಂದೊಂದು ಉದಾಹರಣೆಯನ್ನು ತೆಗೆದುಕೊಂಡು ಬಾಕಿಗಳನ್ನು
ತೋರಿಸೋಣ– (ಮುಂದೆ ಮಾಡುವ ಎರಡೂ ಕಡೆಯ ಬೇರೀಜುಗಳನ್ನು
ಸರಿಮಾಡಿದೆ).

(೧) **ಬಸಪ್ಪ ಜಂಬಿಗಿ ಇವರ ಖಾತೆ**

	ರೂ.	ಖರ್ಚು	ರೂ.
ಕೆ। ಪಾ. ಲೆ ತಾ॥ ೩–೯–೨೦	೫೦೦	ಕೆ। ಪಾ. ೩ ತಾ॥ ೧–೭–೨೦	
ಪಾ. ೧೫ ,, ೪–೧೦–೨೦			
ಕೆ। ಪಾ. ೨೦ ,, ೩–೧೨–೨೦			
	೫೦೦		
ಅಧಾವೆ. ೩೧–೧೨–೨೦		(೧೫೦ ರೂ. ಬಸಪ್ಪ ಜಂಬಿಗಿ ಇವರ ಖಾತೆಯ ಬಾಕಿಯು)	

ವರ್ಷದಲ್ಲೆಲ್ಲ ಒಯ್ದ ರಕಮು ಒಂದೇ ಇರುತ್ತದೆ. ಅದರ ಬೇರೀಜು
ಂದರೆ ಖರ್ಚಿನ ಕಡೆಯ ರಕವಿುನ ಬೇರೀಜು ೫೦೦ ಮಾತ್ರ ಆಗುತ್ತದೆ. ಇದರಂತೆ
ಜಮೆಯ ರಕಮುಗಳ ಬೇರೀಜು ೫೫೦ ಆಗುತ್ತದೆ. ಖರ್ಚಿನ ಬೇರೀಜು ಜಮೆಯ
ರೀಜಿಗಿಂತ ೧೫೦ ರೂ. ಹೆಚ್ಚಾಯಿತು. ಅಂದರೆ ಅವನಿಂದ ಬರತಕ್ಕ ರಕಮು
೫೦ ಉಳಿಯಿತು. ಬಸಪ್ಪ ಜಂಬಗಿ ಇವನಿಂದ ಬರತಕ್ಕ ಬಾಕಿಯು ೧೫೦ ರೂ.
ಯಿತು. ಇದರಂತೆ ಜಮೆಯ ಕಡೆಯ ಬೇರೀಜಿಗಿಂತ ಖರ್ಚಿನ ಕಡೆಯ ಬೇರೀಜೇ
ಚ್ಚಾಗಿದ್ದರೆ ಬಸಪ್ಪ ಜಂಬಗಿ ಇವನಿಗೆ ನಾವು ಕೊಡತಕ್ಕ ಬಾಕಿಯು ಹೊರಡು
ತ್ತು. ಮೇಲಿನ ಬಸಪ್ಪ ಜಂಬಿಗಿ ಇವರ ಖಾತೆಯ ಜಮೆಯ ಕಡೆಯ ಹಾಗು
ರ್ಚಿನ ಬೇರೀಜುಗಳು ಸರಿಮಾಡುವದಕ್ಕಾಗಿ ಅಂದರೆ ಖಾತೆ ಬಾಯಿಗೂಡಿಸುವ
ಕ್ಕಾಗಿ ಏನು ಮಾಡಬೇಕೆಂಬದರ ವಿವರಣೆಯು ಮುಂದೆ ತೋರಿಸಿದ ತೋಂಡ
ವಣಿಯಲ್ಲಿ ಗೊತ್ತಾಗುವದು.

೨. ಪಗಾರ ಖಾತೆ

ಜಮಾ _____ ರೂ. ಖರ್ಚು _____

		೧೨	ರೂ. ೩೧೬೭೦	ಕೆ. ಪಾ.
೬೪	ರೂ. ತೊ. ಮಿ.	೨೦	,, ೩೧೪೭೦	ಕೆ. ಪಾ. ೧೫
—	೩೧-೧೨-೨೦	೩೨	,, ೩೦೯೭೦	ಕೆ. ಪಾ. ೫೫
೬೪		———	
		೬೪	

ಈಗ ಪಗಾರ ಖಾತೆ (ಬಾಬುವಾರ ಖಾತೆ) ಯು ಖರ್ಚಿನ ಕ
ಬೇರೀಜು ೬೪ ರೂ. ಆಯಿತು. ಇದೇ ಪಗಾರಖಾತೆಯ ಬಾಕಿಯು.

ತಾ॥ ೩೧-೧೨-೨೦ ದಿವಸ ಬಂಗಾರದ ದಾರಣಿಯು ತೊಲೆಗೆ ೧೯
ಹಿಡಿದು ಆ ಖಾತೆಯ ಬಾಕಿಯನ್ನು ತೆಗೆ.

(೩) ಬಂಗಾರ ಖಾತೆ

ಜಮಾ _____ ರೂ. ಖರ್ಚು _____

೧೬೦೦	ತೊಲಿ ೫೦ ದರ ೩೨		೧೫೦೦೦	ತೊಲಿ ೫೦೦ ದರ ೩೦
	೨-೧-೨೦		———	೧-೧-
೪೧೨೫	ತೊಲಿ ೧೨೫ ದರ ೩೩		೧೫೦೦೦	
	೨೦-೧-೨೦			
೫೬೦೦	ತೊಲಿ ೨೦೦ ದರ ೨೮			
	———	೧೦-೨-೨೦		
	೩೨೫			
೨೩೨೫	ಶಿಲ್ಕು ಮಾಲಿನ ಬೆಲೆ (ಪಕ್ಕಾಬಾಕಿ)			
———	ಬಂಗಾರ ಶಿಲ್ಕು ತೊಲಿ ೧೨೫			
೧೩೨೦೦				
೧೩೦೦	ಹಾನಿ ತೋ. ಮಿ. (ಕಚ್ಚಾಬಾಕಿ)			
———	೩೧-೧೨-೨೦			
೧೫೦೦೦				

(ಮುಂದೆಸಾಗುವದು)

ಪುಸ್ತಕಪರಿಚಯ

ಮಿಲನ (ಪದ್ಯಕಾವ್ಯ)

ಹಲಸಂಗಿಯ ಅರವಿಂದ ಗ್ರಂಥಮಾಲೆಯ ೩ನೆಯ ಕುಸುಮ.

ಕವಿ :—ಸಿಂಪಿ ಲಿಂಗಣ್ಣ ಪದ್ಯಸಂಖ್ಯೆ ಸು. ೩೮೦

ರಾಷ್ಟ್ರಭಾಷೆಯಾಗಲೆಳಸುತ್ತಿರುವ ಹಿಂದಿ ಭಾಷೆಯಲ್ಲಿ ಸುಪ್ರಸಿದ್ಧ ಕವಿಗಳೆನಿಸಿದ ಶ್ರೀ. 'ತ್ರಿಪಾಠೀಜೀ'ಯವರು ಬರೆದ ಜನಪ್ರಿಯವಾದ 'ಮಿಲನ' ಎಂಬ ಪ್ರೇಮಕಾವ್ಯದ ಪದ್ಯಾನುವಾದವಿದು. ಕನ್ನಡದಲ್ಲಿ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ. ಸಿಂಪಿ ಲಿಂಗಣ್ಣವರು ಅನುವಾದಕರು. ಪುಸ್ತಕದ ಅಂತರಂಗದಂತೆ ಬಹಿರಂಗವೂ ಸುಂದರವಾಗಿದೆ. ರಕ್ಷಾಪತ್ರದ ಮೇಲ್ಗಡೆಯಲ್ಲಿ ಕಾವ್ಯದ ನಾಯಿಕಾ-ನಾಯಕರ ಮಿಲನದ ಸುಂದರ ಚಿತ್ರವಿದೆ. ಒಳ್ಳೆಯ ಕಾಗದ ಮುದ್ರಣಗಳು. ಬೆಲೆ ೧೨ ಆಣೆ ಮಾತ್ರ.

ಮೊದಲಲ್ಲಿ ಸಂಪಾದಕ–ಪ್ರಕಾಶಕರ 'ನಮ್ಮ ಮಾತು' ಎಂಬ ಮುನ್ನುಡಿಯಿದೆ. ಬಳಿಕ ಕಾವ್ಯದ ಗದ್ಯರೂಪಕಥೆ, ತರುವಾಯ ಕಾವ್ಯಾರಂಭ.

ಈ ಕಾವ್ಯದ ಕಥಾವಸ್ತುವಿನ ವಿಷಯವಾಗಿ ಮುನ್ನುಡಿಯಲ್ಲಿರುವ ಪರಿಚಯವನ್ನು ಇಲ್ಲಿ ಕೊಡುವೆವು —"ಪ್ರೇಮಕಾವ್ಯ ಪ್ರೇಮಕಾವ್ಯ ಎಂದ ಕೂಡಲೆ ಕಾಮುಕರ ಕಳವಳಕಾತರಗಳಿಗೂ ಕಾದಲರ ತವಕತಾಮಸಗಳಿಗೂ ಇದರಲ್ಲಿ ಅಗ್ರಪಟ್ಟವಿರಬಹುದೆಂದು ಭಾವನೆಯಾಗುವದು ಸಹಜ; ಆದರೆ ಇದು ನಲ್ಲನಲ್ಲೆಯರ ಶೃಂಗಾರಸಾಧನೆಯ ರಂಗಸ್ಥಳವಾಗಿರದೆ ಧ್ಯೇಯಕ್ಕಾಗಿ ನಿಗ್ರಹ ವ್ರತವನ್ನು ಕೈಕೊಳ್ಳುವ ವೀರದಂಪತಿಗಳ ತಪೋಭೂಮಿಯಾಗಿದೆ. ಹೀಗಿದು ಧ್ಯೇಯಾತ್ಮಕ ಪ್ರೇಮಕಾವ್ಯ."

ಈ ಕಾವ್ಯದ ಕಥೆ ಕಲ್ಪಿತವಾದುದು. ಮುನ್ನುಡಿಯಲ್ಲಿ ಹೇಳಿದಂತೆ ಇದು ಶೃಂಗಾರದ ಕಥೆಯಲ್ಲವೆಂಬುದು ಮುಂದಿನ ಕಥಾಸಾರದಿಂದ ಓದುಗರು ಮನಗಾಣಬಹುದು.

ಕಾವ್ಯ ಕಥಾಸಾರ — ಕಥಾನಾಯಕನಾದ ಆನಂದಕುಮಾರನು ಬನವಸೆ ನಾಡಿನ ಅರಸನ ಮಗನು. ಈತನು ಸಣ್ಣವನಿದ್ದಾಗ ಬನವಸೆ ನಾಡಿಗೆ ಕೇರಳದವರ ಉಪದ್ರವವು ಹೆಚ್ಚಿತು. ಆಗ ಅರಸನು ರಾಜಧಾನಿಯ ಸಮೀಪದ ಒಂದು ಆಶ್ರಮದಲ್ಲಿ ವಾಸವಾಗಿದ್ದ ಒಬ್ಬ ವಿರಕ್ತನಾದ ಶರಣನಿಗೆ ತನ್ನ ಕುಮಾರ

೨. ಪಗಾರ ಖಾತೆ

ಜಮಾ _____ ರೂ. ಖರ್ಚು _____

		೧೨ ರೂ.	೩೧೬೨೦ ಕೆ. ಪಾ.
೬೪ ರೂ.	ತೊ. ಮಿ.	೨೦ ,,	೩೧೪೨೦ ಕೆ. ಪಾ. ೧೫
—	೩೧-೧೨-೨೦	೩೨ ,,	೩೦೯೨೦ ಕೆ. ಪಾ. ೩೩
೬೪		———	
		೬೪	

ಈಗ ಪಗಾರ ಖಾತೆ (ಬಾಬುವಾರ ಖಾತೆ) ಯು ಖರ್ಚಿನ ಕಡೆ ಬೇರೀಜು ೬೪ ರೂ. ಆಯಿತು. ಇದೇ ಪಗಾರಖಾತೆಯ ಬಾಕಿಯು.

ತಾ॥ ೩೧-೧೨-೨೦ ದಿವಸ ಬಂಗಾರದ ದಾರಣಿಯು ತೊಲೆಗೆ ೧೯ ಹಿಡಿದು ಆ ಖಾತೆಯ ಬಾಕಿಯನ್ನು ತೆಗೆ.

(೩) ಬಂಗಾರ ಖಾತೆ

ಜಮಾ _____ ರೂ. ಖರ್ಚು _____

೧೬೦೦	ತೊಲೆ ೫೦ ದರ ೩೨	೧೫೦೦೦	ತೊಲೆ ೫೦೦ ದರ ೩೦
	೨-೧-೨೦	———	೧-೧-೨೦
೪೧೨೫	ತೊಲೆ ೧೨೫ ದರ ೩೩	೧೫೦೦೦	
	೨೦-೧-೨೦		
೫೬೦೦	ತೊಲೆ ೨೦೦ ದರ ೨೮		
	——— ೧೦-೨-೨೦		
	೩೭೫		
೨೩೭೫	ಶಿಲ್ಕು ಮಾಲಿನ ಬೆಲೆ (ಪಕ್ಕಾಬಾಕಿ)		
———	ಬಂಗಾರ ಶಿಲ್ಕು ತೊಲೆ ೧೨೫		
೧೫೭೦೦			
೧೫೮೦	ಹಾನಿ ತೋ. ಮಿ. (ಕಚ್ಚಾಬಾಕಿ)		
———	೩೧-೧೨-೨೦		
೧೫೦೦೦			

(ಮುಂದೆ ಸಾಗುವದು)

ಪುಸ್ತಕಪರಿಚಯ

ವಿಲನ (ಪದ್ಯಕಾವ್ಯ)

ಹಲಸಂಗಿಯ ಅರವಿಂದ ಗ್ರಂಥಮಾಲೆಯ ೩ನೆಯ ಕುಸುಮ.

ಕವಿ :—ಸಿಂಪಿ ಲಿಂಗಣ್ಣ ಪದ್ಯಸಂಖ್ಯೆ ಸು. ೩೬೦

ರಾಷ್ಟ್ರಭಾಷೆಯಾಗಲೆಳಸುತ್ತಿರುವ ಹಿಂದಿ ಭಾಷೆಯಲ್ಲಿ ಸುಪ್ರಸಿದ್ಧ ಕವಿಗಳೆನಿಸಿದ ಶ್ರೀ. 'ತ್ರಿಪಾಠೀಜೀ'ಯವರು ಬರೆದ ಜನಪ್ರಿಯವಾದ 'ವಿಲನ' ಎಂಬ ಪ್ರೇಮಕಾವ್ಯದ ಪದ್ಯಾನುವಾದವಿದು. ಕನ್ನಡದಲ್ಲಿ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ. ಸಿಂಪಿ ಲಿಂಗಣ್ಣವರು ಅನುವಾದಕರು. ಪುಸ್ತಕದ ಅಂತರಂಗಕ್ಕಿಂತೆ ಬಹಿರಂಗವೂ ಸುಂದರವಾಗಿದೆ. ರಕ್ಕಾಪತ್ರದ ಮೇಲ್ಗಡೆಯಲ್ಲಿ ಕಾವ್ಯದ ನಾಯಿಕಾ-ನಾಯಕರ ವಿಲನದ ಸುಂದರ ಚಿತ್ರವಿದೆ. ಒಳ್ಳೆಯ ಕಾಗದ ಮುದ್ರಣಗಳು. ಬೆಲೆ ೧೨ ಆಣೆ ಮಾತ್ರ

ಮೊದಲಲ್ಲಿ ಸಂಪಾದಕ–ಪ್ರಕಾಶಕರ 'ನಮ್ಮ ಮಾತು' ಎಂಬ ಮುನ್ನುಡಿಯಿದೆ. ಬಳಿಕ ಕಾವ್ಯದ ಗದ್ಯರೂಪಕಥೆ, ತರುವಾಯ ಕಾವ್ಯಾರಂಭ.

ಈ ಕಾವ್ಯದ ಕಥಾವಸ್ತುವಿನ ವಿಷಯವಾಗಿ ಮುನ್ನುಡಿಯಲ್ಲಿರುವ ಸರಿಜಯವನ್ನು ಇಲ್ಲಿ ಕೊಡುವೆವು —"ಪ್ರೇಮಕಾವ್ಯ ಪ್ರೇಮಕಾವ್ಯ ಎಂದ ಕೂಡಲೆ ಕಾಮುಕರ ಕಳವಳಕಾತರಗಳಿಗೂ ಕಾದಲರ ತವಕತಾಮಸಗಳಿಗೂ ಇದರಲ್ಲಿ ಅಗ್ರಪಟ್ಟವಿರಬಹುದೆಂದು ಭಾವನೆಯಾಗುವದು ಸಹಜ; ಆದರೆ ಇದು ನಲ್ಲನೆಲ್ಲೆಯರ ಶೃಂಗಾರಸಾಧನೆಯ ರಂಗಸ್ಥಳವಾಗಿರದೆ ಧ್ಯೇಯಕ್ಕಾಗಿ ನಿಗ್ರಹ ವ್ರತವನ್ನು ಕೈಕೊಳ್ಳುವ ವೀರದಂಪತಿಗಳ ತಪೋಭೂಮಿಯಾಗಿದೆ. ಹೀಗಿದು ಧ್ಯೇಯಾತ್ಮಕ ಪ್ರೇಮಕಾವ್ಯ."

ಈ ಕಾವ್ಯದ ಕಥೆ ಕಲ್ಪಿತವಾದುದು. ಮುನ್ನುಡಿಯಲ್ಲಿ ಹೇಳಿದಂತೆ ಇದು ಶೃಂಗಾರದ ಕಥೆಯಲ್ಲವೆಂಬುದು ಮುಂದಿನ ಕಥಾಸಾರದಿಂದ ಓದುಗರು ಮನಗಾಣಬಹುದು.

ಕಾವ್ಯ ಕಥಾಸಾರ — ಕಥಾನಾಯಕನಾದ ಆನಂದಕುಮಾರನು ಬನವಸೆ ನಾಡಿನ ಅರಸನ ಮಗನು. ಈತನು ಸಣ್ಣವನಿದ್ದಾಗ ಬನವಸೆ ನಾಡಿಗೆ ಕೇರಳದವರ ಉಪದ್ರವವು ಹೆಚ್ಚಿತು. ಆಗ ಅರಸನು ರಾಜಧಾನಿಯ ಸಮೀಪದ ಒಂದು ಆಶ್ರಮದಲ್ಲಿ ವಾಸವಾಗಿದ್ದ ಒಬ್ಬ ವಿರಕ್ತನಾದ ಶರಣನಿಗೆ ತನ್ನ ಕುಮಾರ

೨. ಪಗಾರ ಖಾತೆ

ಜಮಾ _____ ರೂ. ಖರ್ಚು _____

		೧೨ ರೂ. ೩೧೬೭೦ ಕೆ. ಪಾ. ೧
೬೪ ರೂ. ತೊ. ವಿ.		೨೦ ,, ೩೧೪೭೦ ಕೆ. ಪಾ. ೧೫
—	೩೧-೧೨-೨೦	೩೪ ,, ೩೦೯೭೦ ಕೆ. ಪಾ. ೩೩
೬೪		———
		೬೪

ಈಗ ಪಗಾರ ಖಾತೆ (ಬಾಬುವಾರ ಖಾತೆ)ಯು ಖರ್ಚಿನ ಕಡೆ ಬೇರೀಜು ೬೪ ರೂ. ಆಯಿತು. ಇದೇ ಪಗಾರಖಾತೆಯ ಬಾಕಿಯು.

ತಾ॥ ೩೧-೧೨-೨೦ ದಿವಸ ಬಂಗಾರದ ದಾರಣಿಯು ತೊಲೆಗೆ ೧೯ ರ ಹಿಡಿದು ಆ ಖಾತೆಯ ಬಾಕಿಯನ್ನು ತೆಗೆ.

(೩) ಬಂಗಾರ ಖಾತೆ

ಜಮಾ _____ ರೂ. ಖರ್ಚು _____

೧೩೦೦	ತೊಲಿ ೫೦ ದರ ೩೨	೧೫೦೦೦	ತೊಲಿ ೫೦೦ ದರ ೩೦
	೨-೧-೨೦	———	೧-೧-೨
೪೧೨೫	ತೊಲಿ ೧೨೫ ದರ ೩೩	೧೫೦೦೦	
	೨೦-೧-೨೦		
೫೩೦೦	ತೊಲಿ ೨೦೦ ದರ ೨೮		
	——— ೧೦-೨-೨೦		
	೩೭೫		
೨೩೭೫	ಶಿಲ್ಕು ಮಾಲಿನ ಬೆಲೆ (ಪಕ್ಕಾಬಾಕಿ)		
———	ಬಂಗಾರ ಶಿಲ್ಕು ತೊಲಿ ೧೨೫		
೧೩೭೦೦			
೧೩೦೦	ಹಾನಿ ತೋ. ವಿ. (ಕಚ್ಚಾಬಾಕಿ)		
———	೩೧-೧೨-೨೦		
೧೫೦೦೦			

(ಮುಂದೆಸಾಗುವದು)

ಪುಸ್ತಕಪರಿಚಯ

ಮಿಲನ (ಪದ್ಯಕಾವ್ಯ)

ಹಲಸಂಗಿಯ ಅರವಿಂದ ಗ್ರಂಥಮಾಲೆಯ ೩ನೆಯ ಕುಸುಮ.

ಕವಿ :—ಸಿಂಪಿ ಲಿಂಗಣ್ಣ ಪದ್ಯಸಂಖ್ಯೆ ಸು. ೩೬೦

ರಾಷ್ಟ್ರಭಾಷೆಯಾಗಲೆಳಸುತ್ತಿರುವ ಹಿಂದಿ ಭಾಷೆಯಲ್ಲಿ ಸುಪ್ರಸಿದ್ಧ ಕವಿಗಳೆನಿಸಿದ ಶ್ರೀ. 'ತ್ರಿಪಾಠೀಜೀ'ಯವರು ಬರೆದ ಜನಪ್ರಿಯವಾದ 'ಮಿಲನ' ಎಂಬ ಪ್ರೇಮಕಾವ್ಯದ ಪದ್ಯಾನುವಾದವಿದು. ಕನ್ನಡದಲ್ಲಿ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ. ಸಿಂಪಿ ಲಿಂಗಣ್ಣನವರು ಅನುವಾದಕರು. ಪುಸ್ತಕದ ಅಂತರಂಗದಂತೆ ಬಹಿರಂಗವೂ ಸುಂದರವಾಗಿದೆ. ರಕ್ಷಾಪತ್ರದ ಮೇಲ್ಗಡೆಯಲ್ಲಿ ಕಾವ್ಯದ ನಾಯಿಕಾ-ನಾಯಕರ ಮಿಲನದ ಸುಂದರ ಚಿತ್ರವಿದೆ. ಒಳ್ಳೆಯ ಕಾಗದ ಮುದ್ರಣಗಳು. ಬೆಲೆ ೧೨ ಆಣೆ ಮಾತ್ರ.

ಮೊದಲಲ್ಲಿ ಸಂಪಾದಕ-ಪ್ರಕಾಶಕರ 'ನಮ್ಮ ಮಾತು' ಎಂಬ ಮುನ್ನುಡಿಯಿದೆ. ಬಳಿಕ ಕಾವ್ಯದ ಗದ್ಯರೂಪಕಥೆ, ತರುವಾಯ ಕಾವ್ಯಾರಂಭ.

ಈ ಕಾವ್ಯದ ಕಥಾವಸ್ತುವಿನ ವಿಷಯವಾಗಿ ಮುನ್ನುಡಿಯಲ್ಲಿರುವ ಪರಿಚಯವನ್ನು ಇಲ್ಲಿ ಕೊಡುವೆವು —"ಪ್ರೇಮಕಾವ್ಯ ಪ್ರೇಮಕಾವ್ಯ ಎಂದ ಕೂಡಲೆ ಕಾಮುಕರ ಕಳವಳಕಾತರಗಳಿಗೂ ಕಾದಲರ ತವಕತಾಮುಸಗಳಿಗೂ ಇದರಲ್ಲಿ ಅಗ್ರಪಟ್ಟವಿರಬಹುದೆಂದು ಭಾವನೆಯಾಗುವದು ಸಹಜ; ಆದರೆ ಇದು ನಲ್ಲನಲ್ಲೆಯರ ಶೃಂಗಾರಸಾಧನೆಯ ರಂಗಸ್ಥಳವಾಗಿರದೆ ಧ್ಯೇಯಕ್ಕಾಗಿ ನಿಗ್ರಹ ವ್ರತವನ್ನು ಕೈಕೊಳ್ಳುವ ವೀರದಂಪತಿಗಳ ತಪೋಭೂಮಿಯಾಗಿದೆ. ಹೀಗಿದು ಧ್ಯೇಯಾತ್ಮಕ ಪ್ರೇಮಕಾವ್ಯ."

ಈ ಕಾವ್ಯದ ಕಥೆ ಕಲ್ಪಿತವಾದುದು. ಮುನ್ನುಡಿಯಲ್ಲಿ ಹೇಳಿದಂತೆ ಇದು ಶೃಂಗಾರದ ಕಥೆಯಲ್ಲವೆಂಬುದು ಮುಂದಿನ ಕಥಾಸಾರದಿಂದ ಓದುಗರು ಮನಗಾಣಬಹುದು.

ಕಾವ್ಯ ಕಥಾಸಾರ — ಕಥಾನಾಯಕನಾದ ಆನಂದಕುಮಾರನು ಬನವಸೆ ನಾಡಿನ ಅರಸನ ಮಗನು. ಈತನು ಸಣ್ಣವನಿದ್ದಾಗ ಬನವಸೆ ನಾಡಿಗೆ ಕೇರಳ ದವರ ಉಪದ್ರವವು ಹೆಚ್ಚಿತು. ಆಗ ಅರಸನು ರಾಜಧಾನಿಯ ಸಮೀಪದ ಒರೆದು ಆಶ್ರಮದಲ್ಲಿ ವಾಸವಾಗಿದ್ದ ಒಬ್ಬ ವಿರಕ್ತನಾದ ಶರಣನಿಗೆ ತನ್ನ ಕುಮಾರ

ನನ್ನು ಒಪ್ಪಿಸಿ ತಾನು ನಾಡಿನ ಜನರಲ್ಲಿ ಜಾಗೃತಿಯನ್ನು ಮಾಡಲೋಸ
ವೇಷಾಂತರವನ್ನು ಕೈಕೊಂಡು ರಾಜಧಾನಿಯನ್ನು ತೊರೆದು ರಾಜ್ಯ
ಅಲೆದಾಡುತ್ತ ಇದ್ದನು. ಆ ಶರಣನಿಗೆ ವಿಜಯೆ ಎಂಬ ಒಬ್ಬ ಮಗಳಿದ್ದ
ಅವಳೊಡನೆ ಆನಂದಕುಮಾರನು ಆಶ್ರಮದಲ್ಲಿ ಬಳೆಯುತ್ತ ಇದ್ದನು. ಒ
ದಿನ ಶರಣನು ಪ್ರಾಪ್ತವಯಸ್ಕನಾದ ಆನಂದಕುಮಾರನ ಕೈಯಲ್ಲಿ ತನ್ನ ಮ
ಕೈಯನ್ನು ಕೊಟ್ಟು, ನಾಡಿನ ಕಿಡುದಶೆಯನ್ನು ಕಳೆಯುವುದೇ ನಿನ್ನ ಜೀವ
ಕರ್ತವ್ಯವಾಗಿರಬೇಕು ಎಂಬೀ ಆತನ ಪಿತೃಸಂದೇಶವನ್ನು ಹೇಳಿ, ಆಶೀರ್ವ
ಮಾನವಲೀಲೆಯನ್ನು ಮುಗಿಸಿದನು. ಕುಮಾರನು ತಂದೆಯ ಸಂದೇಶವ
ನಡೆಸುವುದಕ್ಕಾಗಿ ಮಡದಿಯೊಡನೆ ಆಶ್ರಮದಿಂದ ಹೊರಟನು. ದಾರಿಯ
ಮಹಾಪೂರವು ಬಂದ ಒಂದುಹೊಳೆಯನ್ನು ದಾಟುವಾಗ ತೆಪ್ಪವು ಹೊ
ಇಬ್ಬರೂ ಮುಳುಗಿದರು. ಮೃತಾವಸ್ಥೆಯಲ್ಲಿ ಸಿಕ್ಕಿದ ಅವರಿಬ್ಬರನ್ನು ಒ
ಮುನಿ ತಂದು ಆರಯಿಸಿದನು. ಮೊದಲು ಆರಯ್ಕೆ ಹೊಂದಿದ ವಿಜಯೆ, ಪತಿ ಎ
ಹೋದನೋ ಎಂದು ಆತನನ್ನು ಹುಡುಕುತ್ತ ಎತ್ತಲೋ ನಡೆದಳು. ತರುವಾ
ಆರಯ್ಕೆಹೊಂದಿದ ಆನಂದಕುಮಾರನು ಮಡದಿಯ ಅಗಲಿಕೆಯಿಂದ ನೊಂ
ನಾಡಿನ ಸೇವೆಗೆ ನಿಂತನು. ಅತ್ತ ವಿಜಯೆಯು ಪತಿಯನ್ನು ಕೂಡದೆ ನಿರಾಶಳಾ
ದೇಶಸೇವೆಗೆ ತೊಡಗಿದಳು. ಇವರಿಗೆ ಆರಯ್ಕೆ ಮಾಡಿದ ಮುನಿಯು ವೇಷಾಂ
ಮಾಡಿದ ಬನವಸೆಯ ಅರಸು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ಈ ಮೂಪ
ಪ್ರಯತ್ನದಿಂದ ಜಾಗೃತಿಯುಂಟಾಗಲು, ಮತ್ಸರದಿಂದ ಕೇರಳದವರು ನಾಡಿ
ಮೇಲೆ ನುಗ್ಗಿ ಉಧ್ವಂಸಗೊಳಿಸತೊಡಗಿದರು. ಬನವಸೆಯವರಿಗೂ ಕೇರಳದ
ರಿಗೂ ಕಾಳೆಗವು ನಡೆಯಿತು. ಅದರಲ್ಲಿ ಮುನಿವೇಷದ ಬನವಸೆಯರಸು ಮಾ
ದನು. ವೇಷಾಂತರದಲ್ಲಿದ್ದ ವಿಜಯೆಯು ನೆರವಿನಿಂದ ಆನಂದಕುಮಾರನು ಗೆಲುವನ್ನ
ಪಡೆದನು. ತರುವಾಯ ವಿಜಯೆಯೂ ಆನಂದಕುಮಾರನೂ ಕೂಡಿದರ
ಇದೀಗ ವಿಲನ. ಇದರಿಂದ ಕಾವ್ಯವೂ 'ವಿಲನ'ವೆನಿಸಿತು.

ಮನೋಹರವಾದ ಕಥೆ, ಉದಾತ್ತವಾದ ಪಾತ್ರಗಳು, ಉದ್ದೀಪಕವಾ
ಭಾವಗಳು, ಸಮಯೋಚಿತ ವರ್ಣನೆಗಳು, ಪ್ರಸನ್ನವಾದ ಭಾಷೆ ಇವೆಲ್ಲವುಗಳಿಂ
ಕಾವ್ಯವು ಚೆಂದದಿಂದ ಸಾಗುತ್ತಿದೆ. ಓದುಗರ ಆನಂದಸಾಮಗ್ರಿಗೆ ಕೊರತೆಯಿಲ್ಲ

ಈ ಕಾವ್ಯದ ಒಂದೆರಡು ಸಂದರ್ಭಗಳನ್ನು ಇಲ್ಲಿ ತೋರಿಸುವೆವ
ಮೊದಲನೆಯದು 'ಸನ್ನಾಹ' ಸಂಧಿ; ಆನಂದಕುಮಾರನೂ ವಿಜಯೆಯೂ ಶರಣ
ುಲೆವನೆಯಿಂದ ಹೊರಟಿದ್ದಾರೆ –

ವಿಜಯ ಹೇಳಿದಳಿಂತು–'ಪ್ರಾಣಾಧಿಕ ಪ್ರಿಯನೆ,
ಈ ಚಿಲುವ ತರುಲತೆಯ ನಿಲಯವನ್ನು ।
ತ್ಯಜಿಸಿ ಹೋಗುವುದೆಂಬ ಎಣಿಕೆ ಬಗೆಯನು ಕೊರೆದು
ಕಳವಳದಲೊಗೆಯುವುದು ಪ್ರಾಣವನ್ನು ॥ ೧. ೪೯. ॥

ಶಾಂತಿಸುಖಗಳನೀವ ಮಾತಿರಲಿಯೊಂದೆಡೆಗೆ
ಬನಕು ಮಿಗಿಲೇನುಂಟು ಭುವನದಲ್ಲಿ ।
ಕಾಂತ ಹೇಳಿನಗಿನ್ನು ವನ್ಯಮಿತ್ರರಿಗಿಂತ ।
ಅನ್ಯ ಪ್ರಿಯರೆಲ್ಲಿಹರು ಜನತೆಯಲ್ಲಿ ॥ ೧. ೫೦. ॥

ವಿಷಮಸಂಸಾರವಿದು ದ್ವೇಷಮೋಸದ ಬೀಡು
ಕೇಳುತಿರುವೆನು ಇಂತು ಲೋಕವಾರ್ತೆ ।
ಲೇಸನರಿಯದ ಇಂಥ ಜನತೆಯಲಿ ಮತ್ತೇಕೆ
ಪ್ರಾಣನಾಥನೆ ಹೇಳು ಇದರ ವಾರ್ತೆ ॥ ೧. ೫೨. ॥

ವಿಜಯೆ ಇಂತು ನುಡಿಯಲು ಅನಂದಳುಮಾರನು—

ನಲ್ಲನಾಡಿದನಾಗ ಜೀವದರಸಿಯೆ ಕೇಳು
ನುಡಿಯದಿರು ನೀನಿಂಥ ನುಡಿಗಳನ್ನು ।
ಅಲ್ಲಿ ಸಂಸಾರದಲಿ ಮಾನವತ್ವದ ಬೆಲೆಯ
ಅಳೆಯ ಬಲ್ಲವರುಂಟು ತಿಳಿಯೆ ನೀನು ॥ ೧ ೫೪. ॥

ಲೋಕಸೇವೆಯು ಮತ್ತೆ ಪರಮೇಶಭಕ್ತಿಯದು
ಹೆಸರೆರಡು ಮಾತೊಂದೆ ಅರ್ಥದಲ್ಲಿ ।
ಏಕಾಂತವನದೊಳಗೆ ಕುಳಿತರಾಗುವದೇನು?
ಉಚಿತಪೌರುಷ ವೀರಕರ್ಮವೆಲ್ಲಿ? ॥ ೧. ೫೫. ॥

ತನುಶಕ್ತಿ ಶ್ರಮಗಳನು ನೀಡಿ ಜಗಪದತಲಕೆ
ಬೆಳೆಸುವದು ಲೋಕ ಸುಖಶಾಂತಿಗಳನು ।
ಮನುಜಜನ್ಮದ ಮರ್ಮ ಇದುವೆ ಕೇಳ್ ಮಡದಿಯೇ
ಪರಮೇಶಭಕ್ತಿ ಇದೆ ತಿಳಿಯೆ ನೀನು ॥ ೧. ೫೬. ॥

ಜನದ ಕೇಳ್ಕೆಗೆ ಹೇಸಿ ಲೋಕಸೇವೆಯನ್ನು ಬಿಡಬೇಕೇ, ಉದಾರಾಂತಃಕರಣ ಅದನ್ನು ಮನಮುಟ್ಟಿ ಮಾಡಬೇಕೇ ಎಂಬ ಸಂಶಯಕ್ಕೆ ಇದೀಗ ಕಾವ್ಯ ರವ್ರ.

ತಿನೆಯ ಸಂಧಿಯಲ್ಲಿ ಪ್ರೇಮವಿಷಯವಾಗಿ ಹೇಳಿದ ವಿಚಾರಗಳು ವಾಗಿವೆ:—

ಪ್ರೇಮವೆಂಬುದದೊಂದು ಅಚ್ಚರಿಯ ವಸ್ತುವದು
ಅದ್ಭುತದ ಶಕ್ತಿಸಂಚಯದ ಬೀಡು |
ಪ್ರೇಮದಾನಾಡಿನಲಿ ನಿದ್ದೆಯೊಳಗೆಚ್ಚರವು
ಎಚ್ಚರದೊಳಿದೆ ನಿದ್ದೆಯಂತೆ ನೋಡು || ೨. ೨೧. ||

ಪ್ರೇಮನುದ ಹೊನಲಾಗಿ ಕಣ್ಣ ಕೊಳವನು ಕೊಚ್ಚಿ
ಕೋಡಿವರಿಯಲು ಕಡಲಿನುಕ್ಕಿನಂತೆ |
ಸೀಮೆ ಬಿಟ್ಟೋಡುವವು ಏಳುಮಲಗುಗಳಿರಡು
ಬೆಳಗಿನಲಿ ಕತ್ತಲೆಯು ಅಡಗುವಂತೆ || ೨. ೨೨. ||

ಒಲುಮೆಯೆಂಬುವುದೊಂದೆ ಮುಖಗಳದಕಿರಡುಂಟು
ಹೊಚ್ಚಹೊನ್ನಿನ ನಾಣ್ಯದಚ್ಚಿನಂತ |
ಒಲುಮೆ ಕೂಡಿಕೆಯಲ್ಲಿ ಸೊಗದ ಪರಿಮಳದಂತೆ
ಅಗಲಿಕೆಯ ತಾವಿನಲಿ ಕಿಚ್ಚಿನಂತೆ || ೨. ೨೩. ||

ಪ್ರೇಮವೆಂಬುದು ಸ್ವರ್ಗ, ಆ ಸ್ವರ್ಗವೇ ಪ್ರೇಮ
ದೇವನಿರುವನು ಪ್ರೇಮ ರೂಪದಲ್ಲಿ |
ಪ್ರೇಮದಿಂದಲೆ ವಿಶ್ವಜನ್ಮ ತಾಳಿತು ಮತ್ತೆ
ಪ್ರಾಣವಾಗಿದೆ ಇದುವೆ ವಿಶ್ವದಲ್ಲಿ || ೨. ೨೫. ||

ಕಾವ್ಯವು ಹೇಗೆ ಸಾಗುತ್ತಿದೆಯೆಂಬುದನ್ನು ಈ ಅವತರಣಗಳಿಂದ ಪಾಠಕ ತಿಳಿಯಬಹುದು. ಮುಂದಿನ ಸಂಧಿಗಳಲ್ಲಿಯೂ ಹಲವು ಸಂದರ್ಭಗಳು ಓದು ಮನವನ್ನು ಹಿಡಿದೆಳೆದುಕೊಳ್ಳುವಂತಿವೆ.

ಪ್ರಕಾಶಕ–ಸಂಪಾದಕರು ಮುನ್ನುಡಿಯಲ್ಲಿ— ತಮ್ಮ ಈ ಅನುವಾದ ಮೂಲಕಾವ್ಯದ ಸೌಂದರ್ಯವೂ ಸ್ವಾರಸ್ಯವೂ ಬಿಂದಿಲ್ಲವೆಂದು ಹೇಳಿರುವ ಇದೀಗ ವಿನಯ. ಈ ಮಾತು ಕೆಲಮಟ್ಟಿಗೆ ನಿಜವಿರಬಹುದು; ಅನುವಾ ಭಾಷೆ ಪ್ರವಾಹರೂಪವಾಗಿರುವುದೂ ವಿರಲ. ಆದರೂ ಅನುವಾದವು ಮೂ ವನ್ನು ನೋಡಿದ ಹೊರತು ಅರ್ಥವಾಗದಂತಿದ್ದರೆ ಅದು ದೊಡ್ಡ ದೋಷವೆಂ ಬಲ್ಲವರ ಮತ. ಅನುವಾದವು ತಕ್ಕುದೇ ಅಲ್ಲವೇ ಎಂಬುದಕ್ಕೆ ಅದೇ ಒರೆಗಲ್ಲ ಈ ಅನುವಾದವು ಈ ದೋಷವನ್ನೊಳಗೊಂಡಂತೆ ಕಾಣಬರುವುದಿಲ್ಲ. ಕನ್ನ ನಾಡುಗರು 'ವಿಲನ'ವನ್ನು ಮುದ್ದಿಡುವರೆಂದು ಹಾರಯಿಸುತ್ತೇನೆ.

ಹೊಸ ಯುಗದ ಕನ್ನಡ ಪದ್ಯವಾಙ್ಮಯವು ಇನ್ನೂ "ಚುಟಿಕೆ-ಕವನ"ದ ಅವಸ್ಥೆಯನ್ನು ದಾಟಿದಂತಿಲ್ಲ. ಈಚೆಗೆ ಜನತೆಯ ಜೀವನವೂ ಒಂದೆರಡು ನಿಮಿಷಗಳಲ್ಲಿ ಓದಿ ಮುಗಿಸಬಹುದಾದ "ಚುಟಿಕೆ-ಕವನ"ಕ್ಕೇ ತೃಪ್ತಿಬಡುವಷ್ಟು ಹಗುರವಾಗುತ್ತಿದೆ. ಈ ಪರಿಸ್ಥಿತಿಯಲ್ಲಿಯೂ ಶ್ರೀ. ಸಿಂಪಿ ಲಿಂಗಣ್ಣನವರು, ಅನುವಾದವಾದರೂ ಆಗಲೊಲ್ಲದೇಕೆ, ಗಟ್ಟಿಮನದಿಂದ, ಸಾಹಿತ್ಯದಲ್ಲಿ ನಿಲುಗಡೆ ಹೊಂದಬಹುದಾದ ಒಂದು ಕಾವ್ಯಗ್ರಂಥವನ್ನು ಕನ್ನಡಕ್ಕೆ ಒದಗಿಸಿದುದು ಒಳ್ಳೆಯ ಕೆಲಸವೇ ಸರಿ.

ಸಾಹಿತ್ಯದ ಒಲವುಳ್ಳ ಕನ್ನಡಿಗರು ಇದನ್ನು ಓದಿದ ಬಳಿಕ ಓದಿದ್ದು ಸಫಲವಾಯಿತೆಂದು ಅನ್ನದಿರಲಾರರೆಂದು ನಮ್ಮ ಭಾವನೆ.

ಎಂ. ಪಿ. ಪೂಜಾರ

ಪ್ರ ಕ ಟ ನೆ

೧೯೩೮ ನೆಯ ಇಸ್ವಿಯಲ್ಲಾಗುವ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಗೆ ಗೊತ್ತುಪಡಿಸಿದ ವಿಷಯಗಳು

ದಕ್ಷಿಣಭಾಗ

ಕನ್ನಡ

ಮೊದಲನೆಯ ಸದರು—

ಗದ್ಯ— ಕ್ರಮಿಕ ಓದಿನ ಪುಸ್ತಕ (೧೯೩೫ರಲ್ಲಿ ಅಚ್ಚಾದ ಓದಿನ ಆವೃತ್ತಿ.) ಇದರೊಳಗಿನ ಮೊದಲನೆಯ ಭಾಗ ಎಲ್ಲ ಗದ್ಯ ಪಾಠಗಳು.

ಪದ್ಯ— ಕ್ರಮಿಕ ಓದಿನ ಪುಸ್ತಕ (೧೯೩೫ರಲ್ಲಿ ಅಚ್ಚಾದ ಓದಿನ. ಆ.) ಇದರೊಳಗಿನ ೩, ೭, ೧೧, ೧೫, ೧೯, ೨೩, ೨೬, ಹಾಗು ೩೦. (೮ ಪಾಠಗಳು)

ಮರಾಠಿ

ಮೊದಲನೆಯ ಸದರು—

ಗದ್ಯ— ಕ್ರಮಿಕ ಓದಿನ ಪುಸ್ತಕ (೧೯೩೬ ರಲ್ಲಿ ಅಚ್ಚಾದ ಓದಿನ ಆ.) ಇದರೊಳಗಿನ ಮೊದಲನೆಯ ಭಾಗದ ಎಲ್ಲ ಗದ್ಯ ಪಾಠಗಳು.

ಪದ್ಯ— ಕ್ರಮಿಕ ಓದಿನ ಪುಸ್ತಕ (೧೯೩೬ ರಲ್ಲಿ ಅಚ್ಚಾದ ಓದಿನ ಆ.) ಇದರೊಳಗಿನ ೭, ೧೧, ೧೫, ೨೮, ೪೦, ೪೩, ೪೯ ಹಾಗು ೫೧ (೮ ಪಾಠಗಳು)

ಉರ್ದು ವ್ಹರ್ನಾಕ್ಯುಲರ

ಮೊದಲನೆಯ ಸದರು– ಉರ್ದು—

ಗದ್ಯ— ಕ್ರಮಿಕ ಉರ್ದು ಒನೆಯ ಪುಸ್ತಕ (೧೯೩೫ ರ ೬ನೆ ಆ.) ರೊಳಗಿನ ಮೊದಲನೆಯ ಭಾಗದ ಎಲ್ಲ ಗದ್ಯ ಪಾಠಗಳು.

ಪದ್ಯ— ಕ್ರಮಿಕ ಉರ್ದು ೭ನೆಯ ಪುಸ್ತಕ (ಮೇಲಿನದು) ಇದರೊ ೩, ೬, ೯, ೧೦, ೧೭, ೨೩, ೨೬, ೨೯, ಹಾಗು ೩೨ (೯ಪಾಠ

ಕನ್ನಡ ಐಚ್ಛಿಕ

೬ನೆಯ ಸದರು—

ಗದ್ಯ— ಕ್ರಮಿಕ ೫ನೆಯ ಪುಸ್ತಕ (೧೯೩೬ರ ೩ನೆ ಆ.) ಪಾಠಗ ೧, ೨, ೪, ೬, ೮, ೧೧, ೧೩, ೧೪, ೧೬, ೧೭, ೨೧, . ೨೮, ೩೦, ೩೬, ೪೨, ೪೩ ಹಾಗು ೭೦ (೨೦ ಪಾಠಗಳ

ಮರಾಠಿ ಐಚ್ಛಿಕ

೬ನೆಯ ಸದರ—

ಗದ್ಯ— ಕ್ರಮಿಕ ೫ನೆಯ ಪುಸ್ತಕ (೧೯೩೫ ರ ೪ನೆಯ ಆ.) ಪಾಠಗ ೧, ೨, ೩, ೪, ೯, ೧೩, ೧೪, ೧೫, ೧೭, ೨೧, ೨೫, ೨೭, ೨೮, ೩೦, ೪೪, ೪೫ ಹಾಗು ೪೮ (೨೦ ಪಾಠಗಳ

ವ್ಹರ್ನಾಕ್ಯುಲರ ಉರ್ದು

ಕನ್ನಡ

ಮೊದಲನೆಯ ಸದರು—

ಡ್ರಾಯಿಂಗ ಶಿಕ್ಷಣವೂ ಪ್ರಕೃತಿವಿಮರ್ಶೆಯೂ ಹೊಸ ಅಭ್ಯಾಸಪತ್ರಿಕೆಗೆ ರಿಸಿ ನಡೆಯಬೇಕೆಂದು ಮೇಲ್ವಿಚಾರಣೆ ನಡೆಯಿಸಿರುವರು.

ಇವೆಲ್ಲವು ನೇಳೆಗೆ ಸರಿಯಾಗಿ ತಕ್ಕ ರೀತಿಯಿಂದ ನಡೆಯುಲಿಕ್ಕೆ ಆಡ್‌ವಿ॥ ಆಫೀಸರರು ಜಾಗರೂಕತೆಯಿಂದ ನೋಡುತ್ತಿರುವರು.

ನಮ್ಮಲ್ಲಿಯ ಪ್ರಾಥಮಿಕ ಶಿಕ್ಷಣವು ಸರ್ವಾಂಗಸುಂದರವಾಗಿಯೂ ಪ್ರಾಮಕಾರಿಯಾಗಿಯೂ ಸಾಗುವಂತೆ ಅಧಿಕಾರಿಗಳು ಪ್ರತಿನಿತ್ಯ ನೋಡುವರು. ಶ್ರೀ. ಕಬ್ಬೂರ ನಾರಾಯಣರಾಯರು ತಮ್ಮ ಮಹತ್ವದ ಡಾಕ್ಟ ಉದ್ಯೋಗದಲ್ಲಿ ವೇಳೆಯನ್ನು ಮಿತವಾಗಿ ಉಳಿಸಿಕೊಂಡು ಇಷ್ಟೆಲ್ಲ ಸಂಗಳನ್ನು ಮೂರ್ತಸ್ವರೂಪಕ್ಕೆ ತಂದದ್ದು ನಮ್ಮ ಶಿಕ್ಷಕವರ್ಗಕ್ಕೂ ವಿದ್ಯಾರ್ಥಿವೃಂದಕ್ಕೂ ಪಾಲಕರಿಗೂ ತುಂಬ ಅಭಿನಂದನೀಯವಾದ ಸಂಗತಿಯೇ ವಿಷಯದಲ್ಲಿ ಸಂಶಯವಿಲ್ಲ.

ಪಾಠ ಕಲಿಸಿ ತೋರಿಸಿದವರು	ವಿಷಯಗಳು
ವಿ. ಜಿ. ಗೋ. ಕುಲಕರ್ಣಿ	ಬಾಲಕವರ್ಗ ಅಂಕಿಯ ಪಾಠ:
,,	ಚಿತ್ರಗಳ ಸಾಹಾಯ್ಯದಿಂದ ಪಾ: ವರ್ಗಕ್ಕೆ ವಾಚನಪಾಠ
ವಿ. ಕೊಪ್ಪರ	ಇಳುಕಲು (ಶಾಸ್ತ್ರೀಯ ಪಾಠ
ವಿ. ಸಾತೇನಹಳ್ಳಿ	ಕವಿತಾಪಾಠ; ಳನೆಯ ಇಯತ್ತೆ
ವಿ. ಎಸ್. ಜಿ. ಶಿನೋಳಕರ	ತಂತೀ ಟಪಾಲು
ವಿ. ಕೆ. ಎಸ್. ಪಾಟೀಲ	ವ್ಯವಹಾರೀ ಅವೂರ್ಣಾಂಕಗಳ ಭಾಗಾಕಾರ ೫ನೆಯ ಇ.
ವಿ. ಕುರಡಿ ಹೆ. ಮಾ. ಪ್ರಾ. ಸ್ಕೂ.	ವ್ಯಾಕರಣ ೩ನೆಯ ಇಯತ್ತೆ

ಮುಂದೆ ೧೯೩೫-೧೯೩೬ನೆಯ ಸಾಲಿನ ಇನಸ್ಪೆಕ್ಶನ್ ಕಾಲಕ್ಕೆ ವಿ. ಪಾಂಡೆ ಹಣಮಂತರಾಯರ ಅಧ್ಯಕ್ಷತೆಯಲ್ಲಿ ನಮ್ಮಲ್ಲಿಯ ಶಿಕ್ಷಕರು ಸ ಪದ್ಧತಿಯಿಂದ ಪಾಠಗಳನ್ನು ಕಲಿಸಿತೋರಿಸಿದರು. ಆಗ ನಮ್ಮ ಶಿಕ್ಷಕರು ವಿ ಪ್ರಯತ್ನಗಳಿಂದ ಪ್ರಗತಿಹೊಂದಿರುವರೆಂಬದು ಒಡೆದುತೋರಿತು.

ಹೀಗಾಗಿ ಟ್ರೇಂಡರಿಗೂ ಅಂಟ್ರೇಂಡರಿಗೂ ಲಾಭದಾಯಕವಾಗಿ ಶಿಕ್ಷಣವು ಸರ್ವತೋಮುಖಿಯಾಗಿ ಉನ್ನತಿಯಾಗುವಂತೆಯೂ ಚೆಅರಮನ ಆಡ್‌ವಿ॥ ಆಫೀಸರರೂ ಶಿಕ್ಷಕರೂ ನಮ್ಮಲ್ಲಿ ಯತ್ನ ನಡೆಯಿಸುತ್ತಿರುವ ಇದು ನಿಜವಾಗಿ ನಮ್ಮ ಸುದೈವವೆಂದು ಹೇಳಬೇಕಾಗಿದೆ.

೪. **ಶಾಳಾ ಮುಡಗೇರಿ ಜಿ. ಕಾರವಾರ:**—ಇಲ್ಲಿಯ ಕನ್ನಡ ಶಾಲೆಯ ಮಾಸ್ತರ ಎಂ. ದೇಸಾಯಿ ಇವರು ಬರೆದದ್ದು:—

"ಈ ಊರ ಸೊಸಾಯಿಟಿಯ 'ಡೆ' ಉತ್ಸವವು ತಾ॥ ೭–೧೧–೩೬ನೆಯ ದಿವಸ ತು. ಆ ಕಾಲಕ್ಕೆ ಸೊಸ್ಯೆಟಿಯ ಚೇಅರಮನ್ ಶ್ರೀ. ನಾರಾಯಣ ಬಾಳಕೃಷ್ಣ ಎಮಿಯವರೂ, ಸೆಕ್ರೆಟರಿಯವರೂ ಮೆಂಬರರೂ ನಮ್ಮ ಶಾಲೆಗೆ ಬಂದು ಬಡವಿದ್ಯಾರ್ಥಿಗಳಿಗೆ ಎಕ್ಸರಸಾಯಿಜ, ಪಾಟಿಪುಸ್ತಕಗಳನ್ನು ಕೊಟ್ಟರು. ಯು ಉಪಯೋಗಕ್ಕಾಗಿ ಒಂದು ತಾಮ್ರದ ಬಿಂದಿಗೆಯನ್ನು ದಯಪಾಲಿ ." ಸ್ತುತ್ಯವು.

೫. **ಶಾಳಾ ಕುರ್ತಕೋಟಿ ತಾಲೂಕ ಗದಗ:**— ಇಲ್ಲಿಯ ಗರ್ಲಶಾ ಿ. ಮಾ. ರರು ಬರೆದದ್ದು — ಶಾಲಾ ಇಲ್ಲಿಯ ಸ್ಕೂಲ ಕಮಿಟಿ ಚೆಅರಮನ್ನ ಶ್ರೀ. ಫ. ಫ. ಮುಳಗುಂದ ಇವರು ತಾ॥ ೨೨–೧೨–೧೯೩೬ನೇ ದಿವಸ ಶಾಲೆಯ ಉಪಯೋಗಕ್ಕಾಗಿ ೧೦ ರೂ. ೮ ಆ. ಬೆಲೆ ಬಾಳುವ ಗಡಿಯಾ ಕೊಟ್ಟರು. ಇದು ಸ್ತುತ್ಯವು.

ಶಾಳಾ ನಂದಗಡ ಜಿಲ್ಲಾ ಬೆಳಗಾಂವ:—ಇಲ್ಲಿಯ ಹೆ. ಮಾ. ಎಂ. ಎಸ್. ಕುಲಕರ್ಣಿ ಇವರು ಬರೆದದ್ದು "ನಮ್ಮಲ್ಲಿ ತಾ॥ ೧೧–೧–೧೯೩೭ನೆಯ ಲನೆಯ ಬಾಲ ದಿನೋತ್ಸವವು ಜರುಗಿತ್ತು. ಆ ಸಭೆಗೆ ವೆ॥ ಮಾಮಲೇದಾರ ತಾಲೂಕ ಖಾನಾಪುರ ಇವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ನಮ್ಮ ಯ ವಿದ್ಯಾರ್ಥಿಗಳು ಬೆಳವಡಿ ಮಲ್ಲಮ್ಮನ ನಾಟಕಮಾಡಿ ತೋರಿಸಿದರು. ಪರಿಣಾಮಕಾರಕವಾಗಿ ಜರುಗಿತು. ಆಗ ಶಾಲೆಯ ಸಹಾಯಕ್ಕಾಗಿ ಬಾಬುರಾವ ಪಾಟೀಲ ಇವರು ೫ ರೂ. ಶ್ರೀ. ಅಪ್ಪಾಸಾಹೇಬ ಿ ಇವರು ೧ ರೂ. ಇನ್ನು ಶ್ರೀ. ಬಾಬಾ ಸಾ॥ ಕಲಾಲ ಇವರು ೧೫ ಪಾಟಿ. ಿನ್ಸಿಲ್ ಪೆಟ್ಟಿಗೆಗಳನ್ನು ಉದಾರಹಸ್ತದಿಂದ ದಯಪಾಲಿಸಿದರು. ಇದು ಸ್ತ್ಯ. ಶ್ರೀ. ಆರ್. ಜಿ. ಕುಲಕರ್ಣಿ, ಶ್ರೀ. ಬಿ. ಎನ್ ಪಾಥರ್ಡೆ ಇವರು ಈ ಕಾರ್ಯವು ಚೆನ್ನಾಗಿ ಸಾಂಗವಾಗುವದಕ್ಕೆ ಸಹಾಯಮಾಡಿದರು. ಇದು ಭೂಷಣವು.

—. **ಶಾಳಾ ಅಣ್ಣಿಗೇರಿ ತಾಲೂಕ ನವಲಗುಂದ:**— ಈ ಶಾಲೆಯ ುಂದ ವ್ಹಿ. ಎಸ್. ಹುಬ್ಬಳ್ಳಿ, ಟಿ. ಎಲ್. ಬಿ ಮೆಂಬರ ಇವರು ಬರೆದದ್ದು.—

" ಅಣ್ಣೀಗೇರಿ ಕನ್ನಡ ಬಾಯ್ಸ ಶಾಲೆಗೆ ಮೆಹರ್ಬಾನ ಸರದಾರ ಮು
ಅಲ್ಲೀಖಾನ ಬಿರಾದರ ನವಾಬ ಸಾ॥ ಎಮ್. ಎಲ್. ಸಿ. ಬಾಂಬೆ ಹಾಗು ಜೇ
ಸಾ॥ ಡಿ. ಎಲ್. ಬಿ. ಎಸ್‌ಬಿ. ಧಾರವಾಡ ಮತ್ತು ಹುಬ್ಬಳ್ಳಿ ಮ್ಯು. ಪಾ
ಡೆಂಟರು ತಾರೀಖು ೧೧-೧-೩೭ನೆ ದಿವಸ ಆಗಮಿಸಿದ್ದರು. ಶಿಷ್ಟ ಸಾಂಪ್ರ
ಕ್ಕನುಸರಿಸಿ ಮೆ॥ ರವರ ಸ್ವಾಗತವು ಶಾಲೆಯಲ್ಲಿ ಮಾಡಲ್ಪಟ್ಟಿತು. ಪದ್ಧ
ಕೆಲಸ ನಡೆದ ಬಳಿಕ ಶಾಲೆಗೆ ಕಂಪೌಂಡವನ್ನು ಕಟ್ಟಿಸಿ ಕೊಡುವ ಬ
ಬೋರಿಂಗ ಬಾವಿಯನ್ನು ತೋಡಿಸಿ ಕೊಡುವ ಬಗ್ಗೆಯೂ ಒಕ್ಕಲತನ, ಇ
ಮೊದಲಾದ ಔದ್ಯೋಗಿಕ ಶಾಖೆಗಳಿಗೆ ತಕ್ಕ ಸಹಾಯವನ್ನು ಶಾಲೆಗೆ ಕ
ಕೊಡುವ ಬಗ್ಗೆಯೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.
ವಿದ್ಯಾರ್ಥಿಗಳಿಗಾಗಿ ೫ ರೂ. ಪಾರಿತೋಷಕವನ್ನು ಕೊಟ್ಟರು ಸ್ತುತ್ಯವು.

೮. ಟ್ರೇ. ಸ್ಕೂಲಿನ ಸ್ಕೌಟಲೀಡರ ಶಿ. ಸ. ಪಾಟೀಲ ಹಾಗು
ಇವರಿಂದ:- ನಮ್ಮ ಟ್ರೇನಿಂಗ ಕಾಲೇಜಿನಿಂದ ಮೈಸೂರ ಪ್ರವಾಸಕ್ಕೆ
೧೯೩೬ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ ಳಗಿ ಜನ ವಿದ್ಯಾರ್ಥಿಗಳು ಹೆ
ವಷ್ಟೇ, ನಾವೆಲ್ಲರೂ ಸ್ಕೌಟಿ ಡ್ರೆಸ್ಸಿನಿಂದ ಪ್ರವಾಸಮಾಡಿ ವಿಜಯಾದಶ
ಶ್ರೀ. ಮಹಾರಾಜರವರ ಸೀಮೋಲ್ಲಂಘನ (ದಸರೆಯ ಉತ್ಸವ)ದ
ಸ್ಕೌಟ ಶಿಸ್ತಿನಿಂದ ಹೋಗಿ ನಮ್ಮ ಟ್ರೇನಿಂಗ ಕಾಲೇಜ ಸ್ಕೌಟ ಕ್ಯಾಂಪವ
ಹಾರ ತುರಾಯಿಗಳನ್ನು ಅರ್ಪಿಸಿದೆವು. ಆ ಬಗ್ಗೆ ಮಹಾರಾಜರು ಬಹಳ ಸಂ
ವ್ಯಕ್ತಪಡಿಸಿದರು. ಅನಂತರ ಅಲ್ಲಿಯ ಸ್ಕೌಟ ಅಧಿಕಾರಿಗಳು ನಮ್ಮೆಲ್ಲರಿಗೆ
ಆದರವನ್ನು ತೋರಿಸಿ ಟೌನ ಹಾಲದಲ್ಲಿ ನಮಗಾಗಿ ಉಪಹಾರವನ್ನು ಕೆ
ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗುತ್ತದೆ.

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಪ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್), ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಂಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಸಿ, ಉ. ಕಾನಡಾ

ಗಾಡಿರಿ ! ಬೆಲೆ ಕಡಿವೆ !! (ಐದೇ ಆಣೆಗಳು)

ಹೊಸವಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಯ. ಫಾ. ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೨ನೆಯ ೩ನೆಯ ಇಯತ್ತೆ ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಸಿದ್ದ ಬುಕ್ ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

" ಅಣ್ಣೀಗೇರಿ ಕನ್ನಡ ಬಾಯ್ಸ್ ಶಾಲೆಗೆ ಮೆಹಬ್ಬಾನ ಸರದಾರ ಮಹಬೂ
ಅಲ್ಲೀಖಾನ ಬಿರಾದರ ನವಾಬ ಸಾ॥ ಎಮ್. ಎಲ್. ಸಿ. ಬಾಂಬೆ ಹಾಗು ಜೆಅರಮ
ಸಾ॥ ಡಿ. ಎಲ್. ಬಿ. ಎಸ್‌ಬಿ. ಧಾರವಾಡ ಮತ್ತು ಹುಬ್ಬಳ್ಳಿ ಮ್ಯೂ. ಮಾ. ಸ
ಡೆಂಟರು ತಾರೀಖು ೧೧-೧-೩೭ನೆ ದಿವಸ ಆಗಮಿಸಿದ್ದರು. ಶಿಷ್ಟ ಸಾಂಪ್ರದಾ
ಕ್ಕನುಸರಿಸಿ ಪೂ॥ ರವರ ಸ್ವಾಗತವು ಶಾಲೆಯಲ್ಲಿ ಮಾಡಲ್ಪಟ್ಟಿತು. ಪದ್ಧತಿಯ
ಕೆಲಸ ನಡೆದ ಬಳಿಕ ಶಾಲೆಗೆ ಕಂಪೌಂಡವನ್ನು ಕಟ್ಟಿಸಿ ಕೊಡುವ ಬಗ್ಗೆಯ
ಬೋರಿಂಗ ಬಾವಿಯನ್ನು ತೋಡಿಸಿ ಕೊಡುವ ಬಗ್ಗೆಯೂ ಒಕ್ಕಲತನ, ಬಡಿಗ
ಮೊದಲಾದ ಔದ್ಯೋಗಿಕ ಶಾಖೆಗಳಿಗೆ ತಕ್ಕ ಸಹಾಯವನ್ನು ಶಾಲೆಗೆ ಪೂರೈ
ಕೊಡುವ ಬಗ್ಗೆಯೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಸ್ಕೌ
ವಿದ್ಯಾರ್ಥಿಗಳಿಗಾಗಿ ೫ ರೂ. ಪಾರಿತೋಷಕವನ್ನು ಕೊಟ್ಟರು ಸ್ತುತ್ಯವು.

೮. ಟ್ರೇ. ಸ್ಕೂಲಿನ ಸ್ಕೌಟಲೀಡರ ಶಿ. ಸ. ಪಾಟೀಲ ಹಾಗು ಬೆಂಗ
ಇವರಿಂದ:- ನಮ್ಮ ಟ್ರೇನಿಂಗ ಕಾಲೇಜಿನಿಂದ ಮೈಸೂರ ಪ್ರವಾಸಕ್ಕೆ ಸ
೧೯೩೬ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ ಳಗ ಜನ ವಿದ್ಯಾರ್ಥಿಗಳು ಹೊರಟು
ವಷ್ಟೇ, ನಾವೆಲ್ಲರೂ ಸ್ಕೌಟ ಡ್ರೆಸ್ಸಿನಿಂದ ಪ್ರವಾಸವಾಡಿ ವಿಜಯವಾದಶಮಿಯಂದ
ಶ್ರೀ. ಮಹಾರಾಜರವರ ಸೀಮೋಲ್ಲಂಘನ (ದಸರೆಯ ಉತ್ಸವ)ದ ಕಾಲ
ಸ್ಕೌಟ ಶಿಸ್ತಿನಿಂದ ಹೋಗಿ ನಮ್ಮ ಟ್ರೇನಿಂಗ ಕಾಲೇಜ ಸ್ಕೌಟ ಕ್ಯಾಂಪವತಿಯಿ
ಹಾರ ತುರಾಯಿಗಳನ್ನು ಅರ್ಪಿಸಿದೆವು. ಆ ಬಗ್ಗೆ ಮಹಾರಾಜರು ಬಹಳ ಸಂತೋ
ವ್ಯಕ್ತಪಡಿಸಿದರು. ಅನಂತರ ಅಲ್ಲಿಯ ಸ್ಕೌಟ ಅಧಿಕಾರಿಗಳು ನಮ್ಮೆಲ್ಲರಿಗೆ ಬಹ
ಆದರವನ್ನು ತೋರಿಸಿ ಟೌನ ಹಾಲದಲ್ಲಿ ನಮಗಾಗಿ ಉಪಹಾರವನ್ನು ಕೊಟ್ಟರ
ಈ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗುತ್ತದೆ.

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್), ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾಹೇಬ ನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಸಿ, ಉ. ಕಾನಡಾ

ಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಹ. ಫಾ. ಕ್ಲೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೩ನೆಯ ೫ನೆಯ ಇಯತ್ತೆ ಹಾಗು ಸ್ಕಾಲರಸಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಪ್ರಸಿದ್ಧ ಬುಕ್ ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

Reg. No. B. 369

ಧಾರ್ವಾಡ-೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ಸಂ.	ವಿಷಯ.	ಪುಟ.
೧.	ನಾನುದಾರ ದಿವಾಣ ಬಹಾದ್ದೂರ ಸರ ಸಿದ್ದಪ್ಪ ತೋಟಪ್ಪ ಕಂಬಳಿಯವರು ಜೆ. ಪಿ.	೧
೨.	ಕಾಲಮೋಹನ	೩
೩.	ಇಂಗ್ಲಂಡದಲ್ಲಿ ಶಾರೀರಿಕ ಶಿಕ್ಷಣ	೯
೪.	ಉಪವಾಸ	೧೦
೫.	ಸ್ಕೌಟಿನ ಮೇಲ್ಮೈ	೧೪
೬.	ಶಿಕ್ಷಕಾಲೆಗಳು	೧೭
೭.	ಪ್ರಕಟನೆ	೨೪

Printed by K. R, Bhise at the Karnatak Printing Works, Dharwar
. and Published by D. V. Kale, B. A., Head Master.
Training School, Dharwar, at his Office.

Reg. No. B. 3691

೧೯೪೮–೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	ನಾವುದಾರ ದಿವಾಣ ಬಹಾದ್ದೂರ ಸರ ಸಿದ್ದಪ್ಪ ತೋಟಪ್ಪ ಕಂಬಳಿಯವರು ಜೆ. ಪಿ.	೧
೨.	ಕಾಲಮಾಪನ	೩
೩.	ಇಂಗ್ಲಂಡದಲ್ಲಿ ಶಾರೀರಿಕ ಶಿಕ್ಷಣ	೯
೪.	ಉಪಮಾನ	೧೦
೫.	ಸ್ಕೌಟಿನ ಮೇಲ್ಮೈ	೧೪
೬.	ಶಿಶುಶಾಲೆಗಳು	೧೬
೭.	ಪ್ರಕಟನೆ	೨೪

Printed by K. B, Bhise at the Karnatak Printing Works, Dharwar
. and Published by D. V. Kale, B. A., Head Master.
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ
ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗು
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳ

	ರೂ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಕೃತ)	೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧
ಲಘುವ್ಯಾಕರಣ (ವೈ. ಕಟ್ಟೀಕೃತ)	೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦
,, ೩ನೇ ,,	೦
,, ,, ೪ನೇ ,,	೦
ಅಂಕಗಣಿತ (ಗಾಂವಕರಕೃತ) ೩ನೇ ,,	೦
ಧಾರವಾಡ ಜಿಲ್ಲಾ ವರ್ಣನೆ (ಅಣ್ಣಿಗೇರಿ ಕೃತ) ೩ನೇ ಇ. ಗೆ	೦
ವಿಜಾಪುರ ,, ,, (,,) ೩ನೇ ,,	೦
ಧಾರವಾಡ ಜಿಲ್ಲಾ ,, (ಕುರಡೀಕೃತ)	೦
ಹಿಂದುಸ್ತಾನ ಭೂಗೋಲು (ಮಗದಾಲಕೃತ)	೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦
ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦
ಭೂಮಿತಿ (ಚಂದಾವರಕರ ಕೃತ)	೦
ಸರಸ್ವತೀ ವಿಜಯ (ಬೂದೀಹಾಳಕೃತ)	೦

ಪತ್ರೆ:—ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫	ಮಾರ್ಚ ೧೯೩೭	ವರ್ಷ ೮ ಸಂ. ೧೨

ನಾಮದಾರ ದಿವಾಣಬಹಾದ್ದೂರ
ಸರ ಸಿದ್ದಪ್ಪ ತೋಟಪ್ಪ ಕಂಬಳಿಯವರು ಜಿ. ಪಿ.

ನಮ್ಮ ಕರ್ನಾಟಕಕ್ಕೆ ಭೂಷಣಪ್ರಾಯರಾಗಿರುವ ಆನರೇಬಲ್ ದಿವಾಣ ಬಹಾದ್ದೂರ ಕಂಬಳಿಯವರ ಹೆಸರು ಕೇಳದ ಕನ್ನಡಿಗರಿಲ್ಲ; ಅವರ ಕೀರ್ತಿಯು ಬೆಳಕು ಬೀಳದ ಸ್ಥಳವಿಲ್ಲ; ಎಂದರೆ ಅತಿಶಯೋಕ್ತಿಯಾಗಲಾರದು. ಹುಬ್ಬಳ್ಳಿಯ ಮುನಸಿ ಪಾಲಟಿ, ಧಾರವಾಡ ಡಿ. ಎಲ್. ಬಿ. ಇವುಗಳ ಅಧ್ಯಕ್ಷ ಪದದಲ್ಲಿಯೂ ಮುಂಬಯಿ ಕೌನ್ಸಿಲಿನ ಸಭಾಸದರಾಗಿಯೂ ಬಹುಕಾಲ ಪರಿಶ್ರಮ ಮಾಡಿದ ಮಹನೀಯರು ಸನ್ ೧೯೩೭ ರಲ್ಲಿ ಮುಂಬಯಿ ಇಲಾಖೆಯ ಆಡಳಿತೆಯಲ್ಲಿ ಮಂತ್ರಿಪದಕ್ಕೆ ಏರಿದ್ದರು. ಮತ್ತು ಮರುವರ್ಷವೇ ಶಿಕ್ಷಣ ಖಾತೆಯ ಆಡಳಿತೆಯು ಅವರಿಗೆ ಒಪ್ಪಿಸಲ್ಪಟ್ಟಿತು. ಅಂದಿನಿಂದ ಇಂದಿನ ವರೆಗೂ ಇವರು ಮಾಡುತ್ತ ಬಂದಿರುವ ಜನತಾಸೇವೆಯನ್ನು ಎಲ್ಲರೂ ಬಲ್ಲರು. ೧೯೩೭ನೆಯ ಇಸ್ವಿಯು ಹೊಸ ವರ್ಷದ ಪದವೀದಾನದ ಸಮಯದಲ್ಲಿ ನಮ್ಮ ಕನ್ನಡಿಗರೆಲ್ಲರಿಗೂ ಅತ್ಯಂತ ಅಭಿಮಾನ ವೆನಿಸುವಂತೆ ಬ್ರಿಟಿಶ ಸಾಮ್ರಾಜ್ಯದ ಬಾದಶಹರವರು ಈ ಮಹಾನುಭಾವರಿಗೆ 'ಸರ' ಎಂಬ ಅತ್ಯಂತ ಬಹುಮಾನಸೂಚಕವಾದ ಪದವಿಯನ್ನು ದಯಪಾಲಿಸಿರುವರು. ಸರಕಾರದವರು ಈ ಪದವಿಯನ್ನು ಅತ್ಯಂತ ಪ್ರತಿಷ್ಠೆಯನ್ನು ಹೊಂದಿದವರ ಹೊರತು ಸಾಮಾನ್ಯ ಪ್ರತಿಷ್ಠಿತರಿಗೆ ಕೊಡುತ್ತಿರುವದಿಲ್ಲ. ಅದರ

ರಿಂದ ಈ ಪದವಿಯನ್ನು ಹೊಂದಿದವರು ತೀರ ವಿರಳ. ನಮ್ಮ ಕರ್ನಾಟಕಸ್ಥರಲ್ಲಿ ಬಹುಕಾಲದ ಹಿಂದೆ ಸರ ನಾರಾಯಣ ಚಂದಾವರಕರರ

ಈ ಗೌರವದ ಬಿರುದನ್ನು ಪಡದಿದ್ದರು. ವೀರಶೈವ ಸಮಾಜದಲ್ಲಿಯಂತೂ ಗೌರವದ ಪದವಿಯನ್ನು ಪಡೆದವರಲ್ಲಿ ಇವರೇ ಮೊದಲಿಗರು. ಲೆ ಬೋರ್ಡ, ಮುನಸಿಪಾಲಟಿ ಮುಂತಾದ ಸ್ಥಾನಿಕ ಸಂಸ್ಥೆಗಳಲ್ಲಿ ಮುರಬಹುಮಿಯ ಕಾಯದೆ ಮುರಾಳದಲ್ಲಿಯೂ ಬಹುಕಾಲ ಬಹು ಪರ

ಪೂರ್ವಕವಾಗಿ ಲೋಕಸೇವೆಯನ್ನು ಮಾಡಿದ್ದಲ್ಲದೆ ಐದಾರು ವರ್ಷಗಳಿಗಿಂತ ಕಿಚ್ಚು ಕಾಲ ಮಂತ್ರಿಪದದಲ್ಲಿ ಏರಾಬವಾನರಾಗಿ, ರಾಜಪ್ರಜಾಮಾನ್ಯರಾಗಿ, ಬಹುಜನ ಸಮ್ಮತವಾಗುವಂತೆ ಕೆಲಸಮಾಡಿದ್ದರ ಕುರುಹೆಂದು ಸರಕಾರದವರು ನಾಮದಾರ ಸಿದ್ಧಪ್ಪನವರಿಗೆ ಇಂಥ ಬಹುಮಾನದ ಪದವಿಯನ್ನು ಅರ್ಪಿಸಿ, ಕನ್ನಡಿಗರನ್ನೂ ಕರ್ನಾಟಕ ಮಾತೆಯನ್ನೂ ಗೌರವಿಸಿದರೆಂದು ಹೇಳಲು ಅಭ್ಯಂತರವಿಲ್ಲ. ಇದು ಕನ್ನಡಿಗರಿಗೆಲ್ಲ ಅತ್ಯಂತ ಸಂತೋಷದ ಸಂಗತಿಯು. ಈವರು ಕರ್ನಾಟಕ ಮಾತೆಯ ಪ್ರೀತಿಯ ವರಪುತ್ರರೆನಿಸಿಕೊಂಡಿರುವ ಈ ಮಹನೀಯರಿಗೆ ಇತೋಪ್ಯತಿಶಯವಾಗಿ ಗೌರವವನ್ನೂ ಆಯುರಾರೋಗ್ಯಭಾಗ್ಯ ಗಳನ್ನೂ ದಯಪಾಲಿಸಲೆಂದೂ, ಇವರಿಂದ ಕರ್ನಾಟಕ ಮಾತೆಯ ನಿಜವಾದ ಸೇವೆಯು ಅವಿರತವಾಗಿ ಸಾಗಲೆಂದೂ ಮನಃಪೂರ್ವಕವಾಗಿ ಕೋರುವೆವು.

ಕಾಲಮಾಪನ

ಕಳೆದ ವರ್ಷದಂತೆ ಈ ವರ್ಷವೂ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಒಂದು ವ್ಯಾಖ್ಯಾನ ಮಾಲೆಯು ಏರ್ಪಡಿಸಲ್ಪಟ್ಟಿತು. ಹಳ್ಳಿಯ ಜನಜೀವನಕ್ಕೆ ಸಂಬಂಧಿಸಿದ ಒಕ್ಕಲತನ, ಶಿಕ್ಷಣ, ಆರೋಗ್ಯ, ಮುಂತಾದ ಸರ್ವ ಸಾಮಾನ್ಯ ವಿಷಯಗಳೂ ಹಲಕೆಲವು ವಿಶಿಷ್ಟಜ್ಞಾನಕ್ಕೆ ಸಂಬಂಧಿಸಿದ ಮಾತುಗಳೂ ಉಪನ್ಯಾಸದ ವಿಷಯಗಳು. ಧಾರವಾಡದೊಳಗಿನ ಸುಶಿಕ್ಷಿತರಾದ ಸದ್ಗೃಹಸ್ಥ ರನೇಕರು. ಮುಂದೆ ಹಳ್ಳಿಗೆ ಹೋಗಿ ಶಿಕ್ಷಕರಾಗಲಿರುವ ನಮ್ಮ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗಲು ಬಯಸಿ ತಾವು ಅಭ್ಯಾಸಿಸಿದ ಇಂತಹ ಮಹತ್ವದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಲು ಒಪ್ಪಿಕೊಂಡಿರುವರು. ಆ ಮಹನೀಯರೆಲ್ಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುವದು ನಮ್ಮ ಕರ್ತವ್ಯವಾಗಿದೆ. ಈ ತಿಂಗಳಲ್ಲಿ ಈಗಾಗಲೇ ಆರೇಳು ವ್ಯಾಖ್ಯಾನಗಳು ನಡೆದವು. ಕರ್ನಾಟಕ ಕಾಲೇಜಿನ ಪ್ರೊಫೆಸರರಲ್ಲೊಬ್ಬರಾದ ಶ್ರೀ. ಪಾಟೀಲ ತಿರುಮಲ ರಾಯರು ಒನಪರಿ ತಿಂಗಳ ೩೧ನೆಯ ತಾರೀಪಿನ ದಿನ "ಕಾಲಮಾಪನ" ಎಂಬ ವಿಷಯದ ಮೇಲೆ ಬಹು ವಿಚಾರಸರಿಪ್ಪುತವಾಗಿಯೂ ಸರಸವಾಗಿಯೂ ಮಾತಾಡಿದರು. ಅವರ ಉಪನ್ಯಾಸದ ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿರುವೆವು. ಇದರಂತೆಯೇ ಉಳಿದ ಮಹನೀಯರ ಉಪನ್ಯಾಸಗಳ ಸಾರಾಂಶವನ್ನೂ ನಮ್ಮ ವಾಚಕರ ಮುಂದಿಡಬೇಕೆಂಬ ವಿಚಾರವಿರುವದು.

ಕಾಲವೆಂದರೇನು? ಈ ಪ್ರಶ್ನೆಗೆ ಉತ್ತರ ಹೇಳುವದು ಸುಲಭವಲ್ಲ. ಕಣ್ಣಿಗೆ ಕಾಣಿಸುವದಿಲ್ಲ, ಕಿವಿಗೆ ಕೇಳಿಸುವದಿಲ್ಲ, ಹಿಡಿಯಲಿಕ್ಕೆ ಸಾ ಇದರ ಅಸ್ತಿತ್ವವು ಕೂಡ ಸಂಶಯಾಸ್ಪದವೇ ಸರಿ. ಆದರೆ ಮನುಷ್ಯ ಪಾ ತನ್ನ ಕಲ್ಪನೆಯಿಂದ ಇದನ್ನು ಸೃಷ್ಟಿಸಿಕೊಂಡಿರುವನು. ಕೇವಲ ಕಲ್ಪನಾ ಒಳಗಾದ ಈ ವಿಷಯವನ್ನು ವಿವೇಚನೆಮಾಡಲು ಹೊರಟಿರುವ ನಾವ ಕಲ್ಪನೆಗಳನ್ನು ಅವಲಂಬಿಸಿಯೇ ಮುಂದೆ ಸಾಗಬೇಕಾಗುವದು. ಕಾಲ ಆರಂಭವಾಗಿ ಎಲ್ಲಿ ಮುಗಿಯುವದು ಎಂಬದನ್ನು ಹೇಳಲು ಯಾರಿಗೂ ಸಾಧ್ಯ ಇಂಥ ಅನಾದಿ ಅನಂತವಾದ ವಸ್ತುವಿನ ಅಳತೆ ಮಾಡುವದು ಹೇಗೆ? ಅಡಿಗಡಿಗೆ ಉಪಯೋಗಿಸುತ್ತಿರುವ ಕಾಲ, ವೇಳೆ, ಸಮಯ ಮುಂತಾ ಅರ್ಥವೇನೆಂದು ಯಾರನ್ನಾದರೂ ಕೇಳಿದರೆ ಯಾರೂ ಅದಕ್ಕೆ ಸಮರ್ಪ ಉತ್ತರ ಕೊಡಲಾರರು. ಶಾಸ್ತ್ರಜ್ಞರು ಇದನ್ನು ಅವಧಿ (duration) ಕರೆಯುವರು.

ನಾವು ಅಡಿಗಡಿಗೆ ಉಪಯೋಗಿಸುತ್ತಿರುವ ಹಲವು ಸಂಗತಿಗಳ ಮಾ ಎಂದರೆ ಶಾಸ್ತ್ರೀಯ ವಿವೇಚನೆಯು ನಮಗೆ ಎಷ್ಟು ಮಾತ್ರವೂ ತಿಳಿದಿರುವ ಹುಟ್ಟುಸಾವುಗಳನ್ನು ಕಾಣದಿರುವವರು ಯಾರು? ಹಾಗೆಯೇ ಅದರ ರಹಸ್ಯ ತಿಳಿದವರು ಎಷ್ಟು ಜನರಿರುವರು? ಗಣಿತ ಶಾಸ್ತ್ರದೊಳಗಿನ ಇನ್ನೊಂದು ಉ ಹರಣೆಯನ್ನು ತೆಗೆದುಕೊಳ್ಳೋಣ. ಸರಳರೇಖೆಯೆಂದರೇನು? ಗಣಿತ ಶಾಸ್ತ್ರ ಈ ಪ್ರಶ್ನೆಗೆ ಸಮರ್ಪಕವಾದ ಸುಲಭ ಉತ್ತರವೇ ಇಲ್ಲ. ಸರಳರೇಖೆಯೇ ವೆಂದೂ ಅದು ಎಲ್ಲಿ ಆರಂಭವಾಗಿ ಎಲ್ಲಿ ಮುಗಿಯುವದೆಂದು ಹೇಳಲು ಸಾಧ್ ವೆಂದೂ ಗಣಿತ ಶಾಸ್ತ್ರದ ವೇದಾಂತವು (Mathamatical Philoso ಹೇಳುವದು. ಭೂಮಿತಿ ಮೊದಲಾದವುಗಳಲ್ಲಿ ನಾವು ಒಂದು ನಿಯಮಿತ ರೇಖೆಯನ್ನು ಎಳೆದು ಅದರ ಸಂಬಂಧದಿಂದಷ್ಟೇ ವಿಚಾರ ಮಾಡುತ್ತೇವೆ. ಆ ಸರಳರೇಖೆಯನ್ನು ಎರಡೂ ಕಡೆಗೆ ಬೆಳಿಸಬಹುದಷ್ಟೇ? ಹಾಗೆ ಬೆಳ ಹೋದರೆ ಅದು ಎಲ್ಲಿಯವರೆಗೆ ಬೆಳೆಯಬಹುದೆಂಬದನ್ನು ಕಲ್ಪಿಸಿದರೆ ನಮಗೆ ಮಾತಿನ ಸತ್ಯವು ಗೊತ್ತಾಗಬಹುದು. ಹಾಗೆಯೇ ಕಾಲದ ವಿಚಾರದಲ್ಲಿ ನಾವು ನಿರುತ್ತರರಾಗಬೇಕಾಗುವದು. ಅದು ಎಲ್ಲಿ ಆರಂಭವಾಗಿ ಎಲ್ಲಿ ಮ ಯುವದೆಂಬದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ.

ಮೇಲಣ ಕಲ್ಪನೆಯಂತೆ ಸರಳರೇಖೆಯು ಅನಾದಿ ಅನಂತವಾಗಿದ್ದರ ದೊಂದು ನಿಯಮಿತ ಭಾಗವನ್ನು ನಾವು ಇಂಚು, ಫೂಟು ಯಾರ್ಡು

ುಂತಾದ ಪರಿಮಾಣಗಳ ಸಹಾಯದಿಂದ ಅಳೆದು ಹೇಳುತ್ತೇವೆ; ವ್ಯವಹಾರದಲ್ಲಿ ನನ್ನು ಉಪಯೋಗಿಸುತ್ತೇವೆ: ಲೆಕ್ಕ ಮಾಡುತ್ತೇವೆ. ಆ ಸಂದರ್ಭಗಳಲ್ಲಿ ವು ಆ ಸರಳರೇಖೆಯ ಕೆಲವೊಂದು ಭಾಗವನ್ನು ಮಾತ್ರ ನಮ್ಮ ಲಕ್ಷ್ಯದಲ್ಲಿಟ್ಟು ಂಡು ಈ ಎಲ್ಲ ವಿಚಾರ ಮಾಡುವೆವೆಂದಮಾತ್ರವಾಯಿತಷ್ಟೇ? ಇದೇ ರೀತಿ ಾಗಿ ಕಾಲದ ವಿಷಯದಲ್ಲಿಯೂ ಕೆಲವೊಂದು ವಿಶಿಷ್ಟಭಾಗವನ್ನು ತೆಗೆದುಕೊಂಡು ದರ ಸಂಬಂಧದಿಂದಲೇ ವಿಚಾರಮಾಡಬೇಕಾಗುವದು.

ಕಾಲದ ಸಂಬಂಧದಿಂದ ವಿಚಾರ ಮಾಡುವಾಗ, ಅದರದೊಂದು ವಿಶಿಷ್ಟ ರ್ನುವು ನಮ್ಮ ಲಕ್ಷ್ಯಕ್ಕೆ ಬೊದಲು ಬರುವದು. ಅದು ಯಾವಾಗಲೂ ಚಲಿ ುತ್ತಿರುವದು; ಮುಂದೆ ಸಾಗುತ್ತಿರುವದು ಅದರ ಪ್ರಧಾನ ಧರ್ಮ. ಅದು ುದೂ ಹಿಂದೆ ತಿರುಗುವದಿಲ್ಲ. ಕಳೆದ ಕಾಲವನ್ನ ಎಂದೆಂದಿಗೂ ತಿರುಗಿ ಬರಲಾರದು. ವ್ಯವಹಾರದಲ್ಲಿ ನಾವು ಭೂತಕಾಲ ವರ್ತಮಾನಕಾಲ ಭವಿಷ್ಯತ್ಕಾಲಗಳೆಂದು ುರು ಭಾಗಗಳನ್ನು ಕಲ್ಪಿಸುವೆವಾದರೂ ಅವುಗಳಲ್ಲಿ ಒಂದು ಎಲ್ಲಿಗೆ ಮುಗಿ ುವದೆಂಬದನ್ನಾಗಲಿ ಇನ್ನೊಂದು ಎಲ್ಲಿ ಆರಂಭವಾಗುವದೆಂಬದನ್ನಾಗಲಿ ಾರೂ ಹೇಳಲು ಸಾಧ್ಯವಿಲ್ಲ. ಭೂತಕಾಲವು ನಮ್ಮ ಕೈಮೀರಿ ಹೋಗಿರುವದ ಂದ ಅದು ನಮ್ಮ ಕೈಯಲ್ಲಿರುವದಿಲ್ಲ. ಭವಿಷ್ಯದ ಒಡಲಲ್ಲಿ ಏನಿರುವದೋ ೀಳುವದು ನಮ್ಮ ಬುದ್ಧಿಶಕ್ತಿಗೆ ಅಗಮ್ಯವಾದ ವಿಷಯವಾಗುವದು. ನ್ನುಳಿದುದು ವರ್ತಮಾನಕಾಲ. ಅದರ ಅಳತೆಯು ಎಷ್ಟು? ಭೂತಕಾಲವು ಲ್ಲಿ ಮುಗಿಯಿತು, ವರ್ತಮಾನವು ಯಾವದು. ಭವಿಷ್ಯವು ಯಾವಾಗ ಪ್ರಾರಂಭ ಾಗುವದು, ಎಂಬ ಮಾತೇ ಅತಿ ಸಂದಿಗ್ಧವಾಗಿರುವದರಿಂದ ನಾವು ಇಲ್ಲಿಯೂ ುತ್ತರರಾಗಬೇಕಾಗುವದು.

ಸಂತತವಾಗಿ ಸಮವೇಗದಿಂದ ನಡೆಯುತ್ತಿರುವ ಸೃಷ್ಟಿಕಾರ್ಯಗಳನ್ನು ನಲಂಬಿಸಿ ನಾವು ಕಾಲದ ಕಲ್ಪನೆಯನ್ನು ಮಾಡಬೇಕಾಗುವದು. ಆ ಕಾರ್ಯ ು ನಮ್ಮ ಕಣ್ಣಿಗೆ ಕಾಣಿಸುತ್ತಿರಬೇಕು, ಅಥವಾ ಕಿವಿಗೆ ಕೇಳಿಸುತ್ತಿರಬೇಕು. ಕಾರ್ಯವು ನಿಂಚಿನಂತೆ ಅತಿ ತೀವ್ರವಾಗಿಯೂ ನಡೆಯಬಾರದು: ಅಥವಾ ತಿ ಸಾವಕಾಶವಾಗಿಯೂ ನಡೆಯಬಾರದು. ಸೃಷ್ಟಿಯಲ್ಲಿ ಸಂತತವಾಗಿಯೂ ುವೇಗದಿಂದಲೂ ನಡೆಯುವ ಕಾರ್ಯಗಳಲ್ಲಿ ಸೂರ್ಯೋದಯ ಸೂರ್ಯಾಸ್ತ ು ನಮ್ಮ ದೃಷ್ಟಿಯನ್ನು ಬೊದಲು ತಮ್ಮ ಕಡೆಗೆ ಸೆಳೆಯುವವು. ಸೂರ್ಯೋ ುದಿಂದ ಪುನಃ ಸೂರ್ಯೋದಯದ ವರೆಗಿನ (ಉದಯಾದುದಯಂವಾರಂ) ವಧಿಯು ಒಂದು ದಿನವೆನಿಸುವದು. ಹಾಗೆಯೇ ಬೇರೆ ಬೇರೆ ಋತುಮಾನಗಳು

ತಿರುಗಿ ತಿರುಗಿ ಬರುವ ಅವಧಿಯು – ಪೃಥ್ವಿ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುವ ಅವಧಿಯು – ಒಂದು ವರ್ಷವು. ಮಿಕ್ಕ ಕಾ ಪರಿಮಾಣಗಳೆಲ್ಲಾ ಇವುಗಳು ಪಟ್ಟುಗಳು ಇಲ್ಲವೆ ಪಾಲುಗಳು.

ಕಾಲಮಾಪನದ ಉಪಕರಣಗಳಲ್ಲಿ ಉಸುಕಿನ ಗಡಿಯಾರ, ನೀರಿನ ಗ ನೆಳಲಿನ ಗಡಿಯಾರ (Sundial) ಆಂದೋಲಕ (ಸಾಂಪ್ರತ ಕಾಲದ ಗಡಿ ರಚನೆಯಲ್ಲಿ ಆಂದೋಲಕವೇ ಮುಖ್ಯವಾಗಿದೆ) ಮುಂತಾದವು ಮುಖ್ಯ ಈ ಎಲ್ಲ ಉಪಕರಣಗಳಲ್ಲಿ " ಒಂದು ಕಾರ್ಯವು ನಿಶ್ಚಿತ ವೇಗದಿಂದ ಸಂ ನಡೆಯುವದು. " ಎಂಬ ತತ್ವವೇ ಪ್ರಾಮುಖ್ಯವಾಗಿರುವದು. ಉಸುಕಿ ಯಾರವನ್ನು ಅನೇಕರು ನೋಡಿರಬಹುದು. ಗಳಿಗೆ ಬಟ್ಟಲವು ನೀರಿನ ಗಡಿ ಉದಾಹರಣೆಯಾಗಬಹುದು. " ಅಡಿಯನಿಮ್ಮಡಿ ಮಾಡಿ ಹನ್ನೊಂದನೊ ಇನ್ನೂರ ಹತ್ತಕ್ಕೆ ಭಾಗಿಸಲು " ಬರುವ ಸಂಖ್ಯೆಯು ಗಳಿಗೆಯಾಗ ಸರ್ವಜ್ಞನ ವಚನವು ಒಂದುಬಗೆಯ ನೆಳಲಿನ ಗಡಿಯಾಳವೆನಿಸಬಹು ಸದ್ಯದ ಶಾಸ್ತ್ರೀಯ ತತ್ವವನ್ನು ಅವಲಂಬಿಸಿ ತಯಾರಿಸಿದ ನೆಳಲಿನ ಗಡಿಯ ಬೇರೆಯಾಗಿರುವವು. ಸೂರ್ಯನಿರುವಾಗ ಅವು ನಿಶ್ಚಿತ ವೇಳೆಯನ್ನು ತೆ ವವು. ಆಂದೋಲಕದ ಚಾಲನೆಯನ್ನು ಆಧಾರವಾಗಿಟ್ಟುಕೊಂಡು ಸದ್ಯ ಗಡಿಯಾಳಗಳು ರಚಿತವಾಗಿರುವವು.

ನಾವು ವ್ಯವಹಾರದಲ್ಲಿ ಉಪಯೋಗಿಸುವ ದಿವಸ ತಿಂಗಳು ವಷ ಶಾಸ್ತ್ರಜ್ಞರ ದೃಷ್ಟಿಯಿಂದ ತುಂಬ ಅನಿಯಮಿತವಾಗಿವೆ. ಸಾಮಾನ್ಯರ ಯಂತೆ ಒಂದು ಹಗಲು ಒಂದು ರಾತ್ರಿ ಕೂಡಿ ಒಂದು ದಿವಸವಾಗುವದು. ಇದರಲ್ಲಿ ಹಗಲಿನಷ್ಟೇ ರಾತ್ರಿಯಿರುವದಿಲ್ಲ. ಒಂದು ಹಗಲು ಒಂದು ಕೂಡಿ ಆಗುವ ಅಳತೆಯು ಕೂಡ ಎಲ್ಲ ಋತುಗಳಲ್ಲಿಯೂ ಅಷ್ಟೇ ಇರ ಬೇರೆ ಬೇರೆ ತಿಂಗಳುಗಳಲ್ಲಿ ಈ ಅವಧಿಯು ಬೇರೆ ಬೇರೆ ಇರುವದು. ಇ ೧೨ ರಿಂದ ೧೫ ನಿನಿಟುಗಳ ವರೆಗೆ ಅಂತರವಿರುವದು. ಆದ್ದರಿಂದ ಮೇಲೆ (ಉದಯಾವುದಯಂವಾರಂ) ಸೂರ್ಯೋದಯದಿಂದ ಸೂರ್ಯೋ ವರೆಗಿನ ಅವಧಿಯು ಒಂದು ದಿವಸವೆಂಬ ಮಾತು ಶಾಸ್ತ್ರಜ್ಞರಿಗೆ ಸಮ್ಮತ ದಿಲ್ಲ. ಅವರು ಮಧ್ಯಾಹ್ನದಿಂದ ಮಧ್ಯಾಹ್ನದವರೆಗಿನ ಅವಧಿಯು ದಿನವೆಂದು ಹೇಳುವರು. ಮಧ್ಯಾಹ್ನವೆಂದರೆ ಸೂರ್ಯನು ನೆತ್ತಿಯಮೇಲೆ ವೇಳೆಯಲ್ಲ. ಭೂಮಿಯ ಬಹುಭಾಗದಲ್ಲಿ ಸೂರ್ಯನು ನೆತ್ತಿಯಮೇಲೆ ಬ ಇಲ್ಲ. ಸೂರ್ಯನು ಮಧ್ಯಾಹ್ನ ರೇಖೆಯ ಮೇಲೆ ಬಂದಾಗ ಮಧ್ಯಾಹ್

ು. ಮಧ್ಯರಾತ್ರಿಯಿಂದ ಮಧ್ಯರಾತ್ರಿಯವರೆಗಿನ ಕಾಲವು ಒಂದು ದಿನವೆಂದು
ಶ್ವಿ ಕಂಪನಿಯವರ ಗಡಿಯಾಳವು ಹೇಳುವದು. ಆ ಗಡಿಯಾಳಗಳಲ್ಲಿ ೧ ರಿಂದ
ರವರೆಗೆ ಅಂಕಿಗಳಿರುವದನ್ನು ನಾವು ನೋಡಬಹುದು. ಈ ದಿನಮಾನದಲ್ಲಿಯೂ
ಲ್ಪ ಅಂತರವಿರುವದು. ಉದಯದಿಂದ ಉದಯದವರೆಗೆ ದಿನವೆಂದು ಎಣಿಸಿದಾಗ
-೧೫ ನಿಮಿಷಗಳ ಅಂತರವು ಹೊರಡುತ್ತಿದ್ದರೆ ಮಧ್ಯಾಹ್ನದಿಂದ ಮಧ್ಯಾಹ್ನದ
ಗೆ ದಿನವೆಂದು ಎಣಿಸಿದಾಗ ಅದಕ್ಕಿಂತ ಸ್ವಲ್ಪ ಕಡಿಮೆ ಅಂತರವು ಹೊರಡುವದು.
ದ್ದರಿಂದ ದಿನಗಣನೆಗೆ ಸೂರ್ಯನ ಚಲನೆಯನ್ನೇ ಆಧಾರವಾಗಿಟ್ಟುಕೊಳ್ಳದೆ
ರ್ಯನ ಹತ್ತರವೇ ಇರುವ ನಿಯಮಿತ ಚಲನೆಯುಳ್ಳ ಒಂದು ಬಿಂದುವನ್ನು
ಧ್ಯಮಿಕ ಸೂರ್ಯನೆಂದು ಕಲ್ಪಿಸಿ ಆ ಮಾಧ್ಯಮಿಕ ಸೂರ್ಯನು ಮಧ್ಯಾಹ್ನ
ಷೆಗೆ ಬಂದಾಗ ನಿಜ ಮಧ್ಯಾಹ್ನವಾಗುವದೆಂದು ತಿಳಿಯುವರು. ನಕ್ಷತ್ರದ
ಲನೆಯಿಂದ ಗೊತ್ತುಮಾಡಿದ ನಾಕ್ಷತ್ರ ದಿವಸವು ಹೆಚ್ಚು ಶುದ್ಧವಾದದ್ದೆಂದು
ಜ್ಞರು ತಿಳಿಯುವರು. ಕೆಲವೊಂದು ನಕ್ಷತ್ರವು ಮಧ್ಯಾಹ್ನ ರೇಷೆಯಮೇಲೆ
ುವ ಅವಧಿಯು ನಾಕ್ಷತ್ರ ದಿವಸವೆಂದು ತಿಳಿಯಲಾಗಿದೆ. ವೇಧಶಾಲೆಗಳಲ್ಲಿ ಈ
ಕ್ಷತ್ರ ದಿವಸವನ್ನೇ ಉಪಯೋಗಿಸುವದು. ದಿವಸದ ಭಾಗಗಳಾದ ತಾಸು,
ಗೆ ನಿಮಿಷ ಸೇಕಂಡು ಇವೆಲ್ಲ ಮನುಷ್ಯನು ಕೇವಲ ತನ್ನ ಅನುಕೂಲಕ್ಕಾಗಿ
ಪ್ಪಿಸಿಕೊಂಡ ಕಾಲಯಾಪಕ ಪರಿಮಾಣಗಳು.

ದಿನಮಾನದಂತೆ ವರ್ಷವೂ ಕೂಡ ಸೃಷ್ಟಿಯಿಂದಲೇ ಹುಟ್ಟಿದ್ದಾಗಿರುವದು.
ಥ್ವಿಯು ಸೂರ್ಯನ ಸುತ್ತಲು ಒಂದು ಪ್ರದಕ್ಷಣೆ ಮಾಡಲಿಕ್ಕೆ ಬೇಕಾಗುವ
ವಧಿಯು ಒಂದು ವರ್ಷವೆನಿಸುವದು. ಈ ಅವಧಿಯು ಸುಮಾರು ೩೬೫ ದಿವಸ
ತಾಸು ೪೯ ನಿ. ಎಂದು ತಿಳಿಯಲ್ಪಡುವದು. ವರ್ಷದ ಹನ್ನೆರಡನೇ ಭಾಗವು
ದು ತಿಂಗಳವೆನಿಸುವದು. ಈ ಲೆಕ್ಕದಿಂದ ನೋಡಿದರೆ ಒಂದು ತಿಂಗಳಿಗೆ
ರ್ಣ ದಿವಸಗಳು ಬರದೆ ಅಪೂರ್ಣ ದಿವಸಗಳು ಬರಬೇಕಾಗುವದು. ಇದರಿಂದ
ವಹಾರದಲ್ಲಿ ಅನವಸ್ಥೆಯುಂಟಾಗಬಹುದು. ನಮ್ಮವರು ೩೦ ದಿವಸಗಳಿಗೆ
ದು ತಿಂಗಳೆಂದು ತಿಳಿಯುವರು. ಆದರೆ ಅದು ಸರಿಯಲ್ಲ. ಇಂಗ್ಲಿಷರು ೩೬೫
ಸಗಳನ್ನು ೧೨ ಭಾಗಗಳಾಗಿ ವಿಭಾಗಿಸಿ ಒಂದು ತಿಂಗಳವೆಂದು ಗೊತ್ತುಮಾಡಿರು
ರು. ಒಂದು ತಿಂಗಳಿಗೆ ೩೮-೩೯ ದಿವಸಗಳನ್ನೂ ವಿಕ್ಕವುಗಳಲ್ಲಿ ಕೆಲವಕ್ಕೆ ೩೦
ಲವಕ್ಕೆ ೩೧ ದಿವಸಗಳನ್ನೂ ಕಲ್ಪಿಸಿರುವರು. ಆದರೂ ಮೇಲೆ ೫ ತಾಸು, ೪೯
ನಿ. ಗಳು ಉಳಿದೇ ಉಳಿದವು. ನಮ್ಮವರು ಪೂರ್ಣ ಚಂದ್ರ (ಹುಣ್ಣಿವೆ) ನಿಂದ
ರ್ಣ ಚಂದ್ರನಿಗೆ ಒಂದು ತಿಂಗಳೆಂದು ತಿಳಿಯುವರು. ಇದರಿಂದ ೨೯½ ದಿವಸಕ್ಕೆ,

ತಿರುಗಿ ತಿರುಗಿ ಬರುವ ಅವಧಿಯು – ಪೃಥ್ವಿ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುವ ಅವಧಿಯು – ಒಂದು ವರ್ಷವು. ಮಿಕ್ಕ ಕಾಲ ಪರಿಮಾಣಗಳೆಲ್ಲಾ ಇವುಗಳು ಪಟ್ಟುಗಳು ಇಲ್ಲವೆ ಪಾಲುಗಳು.

ಕಾಲಮಾಪನದ ಉಪಕರಣಗಳಲ್ಲಿ ಉಸುಕಿನ ಗಡಿಯಾರ, ನೀರಿನ ಗ ನೆಳಲಿನ ಗಡಿಯಾರ (Sundial) ಆಂದೋಲಕ (ಸಾಂಪ್ರತ ಕಾಲದ ಗಡಿ ರಚನೆಯಲ್ಲಿ ಆಂದೋಲಕವೇ ಮುಖ್ಯವಾಗಿದೆ) ಮುಂತಾದವು ಮುಖ್ಯ ಈ ಎಲ್ಲ ಉಪಕರಣಗಳಲ್ಲಿ " ಒಂದು ಕಾರ್ಯವು ನಿಶ್ಚಿತ ವೇಗದಿಂದ ಸಂ ನಡೆಯುವದು. " ಎಂಬ ತತ್ವವೇ ಪ್ರಾಮುಖ್ಯವಾಗಿರುವದು. ಉಸುಕಿ ಯಾರವನ್ನು ಅನೇಕರು ನೋಡಿರಬಹುದು. ಗಳಿಗೆ ಬಟ್ಟಲವು ನೀರಿನ ಗಡಿ ಉದಾಹರಣೆಯಾಗಬಹುದು. " ಅಡಿಯನಿಮ್ಮಡಿ ಮಾಡಿ ಹನ್ನೊಂದನೊ ಇನ್ನೂರ ಹತ್ತಕ್ಕೆ ಭಾಗಿಸಲು " ಬರುವ ಸಂಖ್ಯೆಯು ಗಳಿಗೆಯಾಗ ಸರ್ವಜ್ಞನ ವಚನವು ಒಂದುಬಗೆಯ ನೆಳಲಿನ ಗಡಿಯಾಳವೆನಿಸಬಹು ಸದ್ಯದ ಶಾಸ್ತ್ರೀಯ ತತ್ವವನ್ನು ಅವಲಂಬಿಸಿ ತಯಾರಿಸಿದ ನೆಳಲಿನ ಗಡಿಯ ಬೇರೆಯಾಗಿರುವವು. ಸೂರ್ಯನಿರುವಾಗ ಅವು ನಿಶ್ಚಿತ ವೇಳೆಯನ್ನು ತೆ ವವು. ಆಂದೋಲಕದ ಚಾಲನೆಯನ್ನು ಆಧಾರವಾಗಿಟ್ಟುಕೊಂಡು ಸದ್ಯ ಗಡಿಯಾಳಗಳು ರಚಿತವಾಗಿರುವವು.

ನಾವು ವ್ಯವಹಾರದಲ್ಲಿ ಉಪಯೋಗಿಸುವ ದಿವಸ ತಿಂಗಳು ವರ್ಷ ಶಾಸ್ತ್ರಜ್ಞರ ದೃಷ್ಟಿಯಿಂದ ತುಂಬ ಅನಿಯಮಿತವಾಗಿವೆ. ಸಾಮಾನ್ಯ ಯಂತೆ ಒಂದು ಹಗಲು ಒಂದು ರಾತ್ರಿ ಕೂಡಿ ಒಂದು ದಿವಸವಾಗುವದ ಇದರಲ್ಲಿ ಹಗಲಿನಷ್ಟೇ ರಾತ್ರಿಯಿರುವದಿಲ್ಲ. ಒಂದು ಹಗಲು ಒಂದ ಕೂಡಿ ಆಗುವ ಅಳತೆಯು ಕೂಡ ಎಲ್ಲ ಋತುಗಳಲ್ಲಿಯೂ ಅಷ್ಟೇ ಇ ಬೇರೆ ಬೇರೆ ತಿಂಗಳುಗಳಲ್ಲಿ ಈ ಅವಧಿಯು ಬೇರೆ ಬೇರೆ ಇರುವದು. ೞ ೧೦ ರಿಂದ ೧೫ ನಿಮಿಷಗಳ ವರೆಗೆ ಅಂತರವಿರುವದು. ಆದ್ದರಿಂದ ಮೇಲೆ (ಉದಯಾಮುದಯಂವಾರಂ) ಸೂರ್ಯೋದಯದಿಂದ ಸೂರ್ಯೋ ವರೆಗಿನ ಅವಧಿಯು ಒಂದು ದಿವಸವೆಂಬ ಮಾತು ಶಾಸ್ತ್ರಜ್ಞರಿಗೆ ಸಮ್ಮತ ದಿಲ್ಲ. ಅವರು ಮಧ್ಯಾಹ್ನದಿಂದ ಮಧ್ಯಾಹ್ನದವರೆಗಿನ ಅವಧಿಯು ದಿನವೆಂದು ಹೇಳುವರು. ಮಧ್ಯಾಹ್ನವೆಂದರೆ ಸೂರ್ಯನು ನೆತ್ತಿಯಮೇಲ ವೇಳೆಯೆಲ್ಲ. ಭೂಮಿಯ ಬಹುಭಾಗದಲ್ಲಿ ಸೂರ್ಯನು ನೆತ್ತಿಯಮೇಲೆ ಬ ಇಲ್ಲ. ಸೂರ್ಯನು ಮಧ್ಯಾಹ್ನ ರೇಖೆಯ ಮೇಲೆ ಬಂದಾಗ ಮಧ್ಯಾಹ

ಒ. ಮಧ್ಯರಾತ್ರಿಯಿಂದ ಮಧ್ಯರಾತ್ರಿಯವರೆಗಿನ ಕಾಲವು ಒಂದು ದಿನವೆಂದು
ಸ್ತಿ ಕಂಪಸಿಯವರ ಗಡಿಯಾಳವು ಹೇಳುವದು. ಆ ಗಡಿಯಾಳಗಳಲ್ಲಿ ೧ ರಿಂದ
ರವರೆಗೆ ಅಂಕಿಗಳಿರುವದನ್ನು ನಾವು ನೋಡಬಹುದು. ಈ ದಿನಮಾನದಲ್ಲಿಯೂ
ಶ್ಚ ಅಂತರವಿರುವದು. ಉದಯದಿಂದ ಉದಯದವರೆಗೆ ದಿನವೆಂದು ಎಣಿಸಿದಾಗ
-೧೫ ನಿಮಿಷಗಳ ಅಂತರವು ಹೊರಡುತ್ತಿದ್ದರೆ ಮಧ್ಯಾಹ್ನದಿಂದ ಮಧ್ಯಾಹ್ನದ
ಗೆ ದಿನವೆಂದು ಎಣಿಸಿದಾಗ ಅದಕ್ಕಿಂತ ಸ್ವಲ್ಪ ಕಡಿಮೆ ಅಂತರವು ಹೊರಡುವದು.
ದ್ದರಿಂದ ದಿನಗಣನೆಗೆ ಸೂರ್ಯನ ಚಲನೆಯನ್ನೇ ಆಧಾರವಾಗಿಟ್ಟುಕೊಳ್ಳದೆ
ರ್ಯನ ಹತ್ತರವೇ ಇರುವ ನಿಯಮಿತ ಚಲನೆಯುಳ್ಳ ಒಂದು ಬಿಂದುವನ್ನು
ಾಧ್ಯಮಿಕ ಸೂರ್ಯನೆಂದು ಕಲ್ಪಿಸಿ ಆ ಮಾಧ್ಯಮಿಕ ಸೂರ್ಯನು ಮಧ್ಯಾಹ್ನ
ಷೆಗೆ ಬಂದಾಗ ನಿಜ ಮಧ್ಯಾಹ್ನವಾಗುವದೆಂದು ತಿಳಿಯುವರು. ನಕ್ಷತ್ರದ
ಲನೆಯಿಂದ ಗೊತ್ತುಮಾಡಿದ ನಾಕ್ಷತ್ರ ದಿವಸವು ಹೆಚ್ಚು ಶುದ್ಧವಾದದ್ದೆಂದು
ಜ್ಞರು ತಿಳಿಯುವರು. ಕೆಲವೊಂದು ನಕ್ಷತ್ರವು ಮಧ್ಯಾಹ್ನ ರೇಷೆಯಮೇಲೆ
ರುವ ಅವಧಿಯು ನಾಕ್ಷತ್ರ ದಿವಸವೆಂದು ತಿಳಿಯಲಾಗಿದೆ. ವೇಧಶಾಲೆಗಳಲ್ಲಿ ಈ
ಕ್ಷತ್ರ ದಿವಸವನ್ನೇ ಉಪಯೋಗಿಸುವದು. ದಿವಸದ ಭಾಗಗಳಾದ ತಾಸು,
ಳಿಗೆ ನಿಮಿಷ ಸೇಕಂಡು ಇವೆಲ್ಲ ಮನುಷ್ಯನು ಕೇವಲ ತನ್ನ ಅನುಕೂಲಕ್ಕಾಗಿ
ಲ್ಪಿಸಿಕೊಂಡ ಕಾಲಯಾಪಕ ಪರಿಮಾಣಗಳು.

ದಿನಮಾನದಂತೆ ವರ್ಷವೂ ಕೂಡ ಸೃಷ್ಟಿಯಿಂದಲೇ ಹುಟ್ಟಿದ್ದಾಗಿರುವದು.
ಥ್ವಿಯು ಸೂರ್ಯನ ಸುತ್ತಲು ಒಂದು ಪ್ರದಕ್ಷಣೆ ಮಾಡಲಿಕ್ಕೆ ಬೇಕಾಗುವ
ಧಿಯು ಒಂದು ವರ್ಷವೆನಿಸುವದು. ಈ ಅವಧಿಯು ಸುಮಾರು ೩೬೫ ದಿವಸ
ತಾಸು ೪೯ ನಿ. ಎಂದು ತಿಳಿಯಲ್ಪಡುವದು. ವರ್ಷದ ಹನ್ನೆರಡನೇ ಭಾಗವು
ದು ತಿಂಗಳವೆನಿಸುವದು. ಈ ಲೆಕ್ಕದಿಂದ ನೋಡಿದರೆ ಒಂದು ತಿಂಗಳಿಗೆ
ರ್ಣ ದಿವಸಗಳು ಬರದೆ ಅಪೂರ್ಣ ದಿವಸಗಳು ಬರಬೇಕಾಗುವದು. ಇದರಿಂದ
ವಹಾರದಲ್ಲಿ ಅನವಸ್ಥೆಯುಂಟಾಗಬಹುದು. ನಮ್ಮವರು ೩೦ ದಿವಸಗಳಿಗೆ
ದು ತಿಂಗಳೆಂದು ತಿಳಿಯುವರು. ಆದರೆ ಅದು ಸರಿಯಲ್ಲ. ಇಂಗ್ಲಿಷರು ೩೬೫
ಸಗಳನ್ನು ೧೨ ಭಾಗಗಳಾಗಿ ವಿಭಾಗಿಸಿ ಒಂದು ತಿಂಗಳವೆಂದು ಗೊತ್ತುಮಾಡಿರು
ು. ಒಂದು ತಿಂಗಳಿಗೆ ೩೮-೩೯ ದಿವಸಗಳನ್ನೂ ಏಕ್ಕುವುಗಳಲ್ಲಿ ಕೆಲವಕ್ಕೆ ೩೦
ವಕ್ಕೆ ೩೧ ದಿವಸಗಳನ್ನೂ ಕಲ್ಪಿಸಿರುವರು. ಆದರೂ ಮೇಲೆ ೫ ತಾಸು, ೪೯
ಗಳು ಉಳಿದೇ ಉಳಿದವು. ನಮ್ಮವರು ಪೂರ್ಣ ಚಂದ್ರ (ಹುಣ್ಣಿವೆ) ನಿಂದ
ರ್ಣ ಚಂದ್ರನಿಗೆ ಒಂದು ತಿಂಗಳೆಂದು ತಿಳಿಯುವರು. ಇದರಿಂದ ೨೯½ ದಿವಸಕ್ಕೆ

ಒಂದು ತಿಂಗಳಾಯಿತು. ಹೀಗಾದ್ದರಿಂದ ತಿಥಿಗೂ ತಾರೀಖಿಗೂ ಸಂಬಂಧ ಹೋಯಿತು. ಚಾಂದ್ರಮಾನದ ವರ್ಷಕ್ಕೆ ೩೫೪ ದಿವಸಗಳಾಗುವವು. ವರ್ಷಕ್ಕೂ ಸೌರ ವರ್ಷಕ್ಕೂ ಸ್ಥೂಲಮಾನದಿಂದ ೧೧ ದಿನಗಳ ಅಂತರ ಈ ಅಂತರವನ್ನು ಹೊಂದಿಸಿಕೊಳ್ಳಲಿಕ್ಕೆ ೩೨ ತಿಂಗಳಿಗೆ ಒಂದರಂತೆ ಅಧಿಕ ವನ್ನು ಮಾಡತೊಡಗಿದರು. ಈ ಗಣನೆಯಲ್ಲಿ ಸುಮಾರು ೬೦ ವರ್ಷಕ್ಕೆ ಕ್ಷಯಮಾಸವು ಬರಬೇಕಾಗುವದು.

ರೋಮನ್ನರ ಕಾಲಕ್ಕೆ ೩೦ ದಿನಗಳ ೧೦ ತಿಂಗಳಿಂದರೆ ಒಂದು ವರ್ಷ ತಿಳಿಯಲ್ಪಡುತ್ತಿದ್ದವಂತೆ. ಜುಲೈ ಆಗಷ್ಟ ಈ ಎರಡು ತಿಂಗಳುಗಳೇ ಸಪ್ಟಂಬರವು ವರ್ಷದ ಏಳನೆಯ ತಿಂಗಳೆಂದು ತಿಳಿಯಲ್ಪಡುತ್ತಿತ್ತು. ಜೂಲಿ ನೀಯುರನಿಂದ ಜುಲೈ ತಿಂಗಳವೂ ಆಗಷ್ಟಸನಿಂದ ಆಗಷ್ಟ ತಿಂಗಳವೂ ಪ್ರಚಾ ಬಂದವು. ಆಗ ೩೬೫ ದಿವಸಗಳ ಒಂದು ವರ್ಷವಾಯಿತು. ಆದರೆ ಮೇಲೆ ೫ ತಾಸು ೪೯ ನಿಮಿನೀಟುಗಳಿಗಿಂತಲೂ ಹೆಚ್ಚಿನ ಅಂತರದ ಮೂಲಕ ವರ್ಷಗಳಲ್ಲಿ ೧೧ ದಿನಗಳ ಅಂತರವು ಹೊರಟಿತು. ಪೋಪಗ್ರೆಗ ಕಾಲಕ್ಕೆ ಒಮ್ಮೆ ಸಪ್ಟಂಬರ ತಿಂಗಳಲ್ಲಿ ೩೫ನೆಯ ತಾರೀಖು ಆದ ಮರುದಿ ಸಪ್ಟಂಬರ ತಿಂಗಳ ೧೪ ತಾರೀಖು ಎಂದು ಎಣಿಸಲ್ಪಟ್ಟು ಈ ಹನ್ನೊ ದಿನಗಳ ಅಂತರವನ್ನು ಕಡಿದುಹಾಕಿದರು. ಈ ರೀತಿಯಾಗಿ ಶಾಸ್ತ್ರ ಸೂರ್ಯ ಚಂದ್ರರ ಗತಿಯೊಂದನ್ನೇ ಅಲ್ಲದೆ ಮಿಕ್ಕ ಅನೇಕ ಸಂಗತಿಗ ಅವಲೋಕಿಸಿ ಕಾಲಮಾಪನ ಕಾರ್ಯವನ್ನು ಸಶಾಸ್ತ್ರೀಯವಾಗಿ ಮಾ ತ್ರಿದ್ದಾರೆ. ಅಧಿಕಮಾಸದಂತೆಯೇ ಇಂಗ್ಲಿಷು ಕಾಲಗಣನೆಯಲ್ಲಿ ೪ ವರ್ಷಕ್ಕೊ ಒಂದು ಅಧಿಕ ದಿವಸವು ಬರುವದು. ಆ ವರ್ಷ ಫೆಬ್ರುವರಿ ತಿಂಗಳಿಗೆ ೨೯ ಗಳಾಗುವವು. ಇಸ್ವಿಯನ್ನು ಹೇಳುವ ಸಂಖ್ಯೆಗೆ ೪ ರಿಂದ ಭಾಗಹೋಗುವ (ಉದಾ– ೧೯೩೬ ÷೪=೪೮೪) ದಲ್ಲಿ ಒಂದು ದಿವಸ ಹೆಚ್ಚಾಗುವದು. ಆ ಸಂಖ್ಯೆಗೆ ೪೦೦ ರಿಂದ ಭಾಗ ಹೋಗುವ ವರ್ಷದಲ್ಲಿ ಇನ್ನೂ ಒಂದು ದಿವಸವಾಗುವದು.

ವಾರವು ಕಾಲಗಣನೆಯ ಸಾಧನಗಳಲ್ಲಿ ಒಂದೆಂದು ಎಣಿಸಲ್ಪಡುತ್ತಿ ತಿಂಗಳಿಗಾಗಲಿ ವರ್ಷಕ್ಕಾಗಲಿ ಇದರ ಪೂರ್ಣ ಸಂಬಂಧವು ಹತ್ತುತ್ತಿರು ಎಂದರೆ ಇಷ್ಟು ಪೂರ್ಣ ವಾರವೆಂದರೆ ಒಂದು ತಿಂಗಳ ಅಥವಾ ಇಷ್ಟು ವಾರವೆಂದರೆ ಒಂದು ವರ್ಷ ಎಂದು ಹೇಳಲು ಸಾಧ್ಯವಿಲ್ಲ. ವಾರಗಳ ಹೆಸ ಉಪಪತ್ತಿಯ ವಿಚಾರವು ನಮ್ಮವರಿಗೆ ಹೊಸದಲ್ಲ.

ಇಂಗ್ಲಂಡದಲ್ಲಿ ಶಾರೀರಿಕ ಶಿಕ್ಷಣ

ಇಂಗ್ಲಂಡದಲ್ಲಿ ದೇಶದ ಶಾರೀರಿಕ ಬಲವನ್ನು ಹೆಚ್ಚಿಸುವದಕ್ಕಾಗಿ ಸರಕಾರ
ರು ಒಂದು ಯೋಜನೆಯನ್ನು ಸಿದ್ಧಪಡಿಸಿ ಫೆಬ್ರುವರಿ ತಿಂಗಳ ೪ನೆಯ ತಾರೀಖಿನ
ನ ಒಂದು ಪ್ರಕಟನೆಯನ್ನು ಹೊರಡಿಸಿರುವರು. ಅದರಲ್ಲಿ ದೇಶದ ಪ್ರಜೆಗಳೆಲ್ಲರಿಗೂ
ಸ್ಕ ಇಚ್ಛಾಸ್ವಾತಂತ್ರ್ಯಕೂಲತೆಯ ಮೇರೆಗೆ ಶಾರೀರಿಕ ಶಿಕ್ಷಣವನ್ನು ಹೊಂದಲು
ನುಕೂಲತೆಯನ್ನು, ಸರಕಾರದಿಂದ ೨೦ ಲಕ್ಷ ಪೌಂಡುಗಳನ್ನು ವೆಚ್ಚಮಾಡಿ,
ಲ್ಪಿಸಲಾಗಿದೆಯೆಂದು ಸಾರಿದ್ದಾರೆ.

ಶಾಲೆ ಕಾಲೇಜಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣಕ್ಕಾಗಿ
ಗಾಗಲೇ ಸಾಕಾದಷ್ಟು ಅನುಕೂಲವು ಕಲ್ಪಿಸಲ್ಪಟ್ಟಿದ್ದು ಸರಕಾವದವರು
ನನ್ನು ಸಾಧ್ಯವಿದ್ದ ಮಟ್ಟಿಗೂ ಉಪಯೋಗಮಾಡಿಕೊಳ್ಳುವರು. ಆದರೂ ದೇಶದ
ೀರ ಸಂಪತ್ತು ಸರಿಯಾಗಿ ಅಭಿವೃದ್ಧಿಹೊಂದಬೇಕಾದರೆ ಕಾರಖಾನೆಗಳಲ್ಲಿಯೂ
ಚೇರಿಗಳಲ್ಲಿಯೂ ಕೆಲಸಮಾಡಿ ದಿನಗಳೆಯುತ್ತಿರುವ ತರುಣರಿಗೂ ಪ್ರಬುದ್ಧರಿಗೂ
ಶರೀರಕ ಶಿಕ್ಷಣವನ್ನು ಕೊಡಲು ಸಾಕಾದಷ್ಟು ಅನುಕೂಲತೆಯನ್ನು ಕಲ್ಪಿಸಿ
ಡುವದು ಅವಶ್ಯವೆಂದೂ ಹಾಗೆ ಮಾಡದೆ ಇದ್ದರೆ ದೇಶದ ಶಾರೀರಬಲವ್ರ
ಳೆಯಲು ಸಾಕಷ್ಟು ಅನುಕೂಲತೆ ಮಾಡಿಕೊಟ್ಟಂತಾಗುವದಿಲ್ಲವೆಂದೂ ಸರಕಾರದ
ಕ್ಷ್ಯಕ್ಕೆ ಬಂದಿರುವದು.

ಲೋಕಲ್ ಎಜುಕೇಶನ್ ಅಥಾರಿಟಿಗಳಂಥ ಸ್ಥಾನಿಕ ಸಂಘಗಳೂ ಬೇರೆ
ಊರುಗಳಲ್ಲಿರುವ ಖಾಸಗೀ ಸಂಸ್ಥೆಗಳೂ ಹೀಗೆ ಪ್ರಬುದ್ಧರಾದವರ ಶಾರೀ
ಕ್ಷಣಕ್ಕಾಗಿ ಪ್ರಯತ್ನಮಾಡುತ್ತಿರುವವು. ಆದರೆ ಆ ಸಂಸ್ಥೆಗಳಿಗೆ—ವಿಶೇಷ
ಬಡಜನರು ವಾಸವಾಗಿರುವ ಸ್ಥಳಗಳಲ್ಲಿರುವಂಥವುಗಳಿಗೆ—ಆಗಾಗ ಹಣದ
ತೆಯುಂಟಾಗಿ ಅವುಗಳ ಕಾರ್ಯಕ್ರಮವನ್ನು ಸರಿಯಾಗಿ ನಡೆಯುತ್ತಿರುವದಿಲ್ಲ.
ಆಂಥ ಎಲ್ಲ ಸಂಸ್ಥೆಗಳು ಪರಸ್ಪರ ಸಹಕಾರ ಸಹಾನುಭೂತಿಗಳಿಂದ ಕೆಲಸ
ಮಾಡುತ್ತಿರುವದಿಲ್ಲ. ಆದ್ದರಿಂದ ಇದಕ್ಕಾಗಿ ಸರಕಾರದವರು ಸದ್ಯಕ್ಕೆ ಎರಡು
ಸೆಂಟ್ರಲ್ ಎಜ್ಯುಕೇಶನಲ್ ಕೌನ್ಸಿಲ್ಲು (ಮಾರ್ಗದರ್ಶಕ ಸಭೆ)ಗಳನ್ನು ಸ್ಥಾಪಿಸುವರು.
ಇವುಗಳಲ್ಲಿ ಒಂದು ಇಂಗ್ಲಂಡ ಮತ್ತು ವೇಲ್ಸಗಳಿಗೆ ಕೂಡಿ; ಇನ್ನೊಂದು
ಸ್ಕಾಟ್ಲಂಡಕ್ಕೆ. ಇವಲ್ಲದೆ ಸಹಾಯಕ ದ್ರವ್ಯವನ್ನು ದೊರಕಿಸುವದಕ್ಕಾಗಿ ಎರಡು

ಕಮೀಟಿಗಳು ಸ್ಥಾಪಿಸಲ್ಪಡುವ ಸಂಭವವವೆ. ಇವು ಬೇರೆ ಬೇರೆ ಸಂಸ್ಥೆ
ಹಣವನ್ನು ಹಂಚಿಕೊಡುವ ಕೆಲಸವನ್ನು ಮಾಡುವವು. ಅಲ್ಲದೆ ಅಲ್ಲಲ್ಲಿ ಸ
ಸಲ್ಪಡುವ ಸ್ಥಾನಿಕ ಕಮೀಟಿಗಳು ಜನತೆಯ ಲಕ್ಷ್ಯವನ್ನು ಈ ವಿಷಯದ
ಎಳೆದು ಚಳವಳಿ ಮಾಡುವವು.

ಸರಕಾರದವರು ಈ ವಿಷಯದ ಶಿಕ್ಷಕರನ್ನು ತಯಾರಿಸುವದಕ್ಕಾಗಿ
ನ್ಯಾಶನಲ್ ಕಾಲೇಜನನ್ನು ಪ್ರಾರಂಭಿಸುವರು. ಗರಡಿಯ ಮನೆಗಳನ್ನೂ
ಬೈಲುಗಳನ್ನೂ ಈಸುವ ಚಿಕ್ಕಕೆರೆಗಳನ್ನೂ ಬಯಲುಗಳನ್ನೂ ಒದಗಿಸಿಕೊ
ಸರಕಾರದ ಮುಖ್ಯ ಉದ್ದೇಶವಾಗಿರುವದು. ಈ ಯೋಜನೆಯನ್ನು ಸ
ಅಮಲಿನಲ್ಲಿ ತರುವದಕ್ಕಾಗಿ ಸರಕಾರದವರು ಬೇರೊಂದು ಕಾಯದೆಯನ್ನು
ತಕ್ಕವರಿದ್ದಾರೆ. ಈ ಎಲ್ಲ ಕಾರ್ಯಕ್ಕಾಗಿ ಮೂರು ವರ್ಷಗಳಲ್ಲಿ ಕೂಡಿ ೬
ಪೌಂಡು ವೆಚ್ಚಮಾಡುವದಲ್ಲದೆ ಪ್ರತಿವರ್ಷ ೧೫ಲಕ್ಷ ಖಂಸಾಖರ ಪೌಂಡ
ವಾರ್ಷಿಕ ವೆಚ್ಚವನ್ನೂ ಮಾಡಬೇಕೆಂದು ಸರಕಾರದವರು ನಿರ್ಣಯಿ
ವಿಕ್ಕ ದೇಶಗಳಿಗೂ ಈ ಮಾತು ಅನುಕರಣೀಯವೆಂಬದನ್ನು ನಾವು
ಹೇಳಬೇಕಾಗಿಲ್ಲ.

ಉಪವಾಸ

—ಂಂ◆ಂಂ—

ಲೇಖಕ:— ಗಂ. ಚಿ. ಮಠದ ೩ನೆಯ ವರ್ಷದ ವಿದ್ಯಾರ್ಥಿ ಟ್ರೇ. ಸ್ಕೂ. ಧಾರವಾ

ಪ್ರತಿಯೊಂದು ಧರ್ಮದಲ್ಲಿ ಆಚಾರಕ್ಕೇ ಪ್ರಾಧಾನ್ಯ. ಆಚಾರವೇ ಅ
ವೆಂಬುವದು ಬಲ್ಲವರ ನುಡಿ. ಹಿಂದುಗಳಲ್ಲಿ ಶಿವರಾತ್ರಿಯ ವ್ರತ, ಏಕಾ
ವ್ರತ ಮುಂತಾದವು ಸೇರಿಸಲ್ಪಟ್ಟು ಅವುಗಳ ಆಚರಣೆಯನ್ನು ಬಲಪಡಿ
"ಶಿವರಾತ್ರಿ ದಿನೀ ಉಪಾಸ ಕರೀಲ ॥ ತಯಾಜೆ ಜಾಯೀಲ ಸರ್ವಪಾಪ
ಅದರಂತೆ ವರಂ ಸ್ವಮಾತೃಗಮನಂ ವರಂ ಬ್ರಾಹ್ಮಣ ಮಾರಣಂ ಏಕ
ದಿನೇ ನೈವ ವರಮನ್ನಸ್ಯ ಭಕ್ಷಣಂ" ॥ ಮುಂತಾಗಿ ಮುನ್ನಿನ ಮಹಾತ್ಮರು
ದರು ಮತ್ತು ನಡೆದರು. ಇಜಿಪ್ಶಿಯನ್ನರ ಪೂರ್ವಾಚಾರ್ಯರೂ ಜೂ
ಶಾಸ್ತ್ರಕಾರರೂ ಉಪವಾಸವನ್ನು ಆಚರಿಸಿದರು; ಹಾಗು ಶಾಸ್ತ್ರಗಳಲ್ಲಿ ವಿಧಿ
ಮುಸಲ್ಮಾನರಲ್ಲಿಯೂ ಹೀಗೆಯೇ ಇದೆ. ಇದರಿಂದ ಆರೋಗ್ಯಕ್ಕೇನು
ಆಯುರ್ವೇದಾಚಾರ್ಯರು 'ಲಂಘನಂ ಪರಮೌಷಧಂ' ಎಂದು
ವನ್ನೀಯುವರು.

ಪಶುಪಕ್ಷ್ಯಾದಿಗಳು ಶರೀರವು ಅಸ್ವಸ್ಥವಿದ್ದಾಗ ಆಹಾರವನ್ನು ತೆಗೆದು ಾಳ್ಳುವದಿಲ್ಲ. ಮನುಷ್ಯನಿಗಾದರೂ ಆರೋಗ್ಯವು ಇಲ್ಲದಾಗ ಆಹಾರವು ುಚಿಸುವದಿಲ್ಲ, ಒತ್ತಾಯದಿಂದ ಒತ್ತಿ ತುಂಬಿದರೂ ವಾಂತಿಯಾಗುವಸುಂಟು. ಇದು ಆಗ ಆಹಾರದ ಆವಶ್ಯಕತೆ ಇಲ್ಲೆಂದು ನಿಸರ್ಗವು ಕೊಟ್ಟ ಸೂಚನೆಯಲ್ಲವೆ? ಇದಕ್ಕಾಗಿ ನಾವು ನಿಸರ್ಗಕ್ಕೆ ಧನ್ಯವಾದಗಳನ್ನರ್ಪಿಸಬೇಕಲ್ಲವೆ? ಉಪವಾಸವು ರೋಗನಿವಾರಣೆಯ ಸ್ವಾಭಾವಿಕ ಉಪಾಯವು. ಹೀಗಿದ್ದರೂ ರೋಗಿಗಳಿಗೆ ಆಹಾರವನ್ನು ಏಕೆ ಒತ್ತಾಯದಿಂದ ಕೊಡಬೇಕು? ಆಹಾರವು ಹೋಗದಿದ್ದರೆ ದುಕುವದಿಲ್ಲೆಂಬ ಹುಚ್ಚು ತಿಳುವಳಿಕೆಯು ನಿಸರ್ಗದನಿಜಸಂಬಂಧವನ್ನರಿಯದ ಮೂಢರಿಗೆ ಇರುವದು. ಉಪವಾಸದಿಂದ ಸಾಯುವವರು ತೀರ ವಿರಳ. ಆದರೆ ತ್ಯಾಹಾರದಿಂದ ಸಾಯುವವರು ವಿಪುಲ. ಈ ಕ್ರಮವನ್ನು ಅನುಸರಿಸಿ ಎಲ್ಲ ರೋಗಗಳನ್ನು ಕಳೆದುಕೊಂಡ ಉದಾಹರಣೆಗಳಿವೆ. ಇದು ಸರ್ವರಿಗೂ ಸಾಧ್ಯ ವಾದದ್ದು, ಸ್ವಾಭಾವಿಕವಾದದ್ದು ಹಾಗು ಸುಲಭವಾದದ್ದು.

ಬೇನೆಯುಂಟಾಗುವದು ದೇಹದಲ್ಲಿ ಸಂಗ್ರಹವಾಗುತ್ತಿದ್ದ ವಿಷಪದಾರ್ಥ ಿಂದಲೇ. ಅವು ಹೆಚ್ಚಾಗುತ್ತ ಹೋದಂತೆ ಅಸ್ವಸ್ಥತೆಯು ಉಂಟಾಗಹತ್ತುತ್ತದೆ. ೀರ ರಚನೆಯು ಅವನ್ನು ಹೊರದೂಡಲು ಪ್ರಯತ್ನಿಸುತ್ತದೆ. ಆದರೆ ರೋಗಿಯು ೀಲಿಂದ ಮೇಲೆ ತುಂಬುತ್ತಾನೆ. ಹೆಚ್ಚಾಗಿ ತುಂಬಿದ ಆಹಾರದಿಂದ ಶಕ್ತಿಯು ಿಯದೆ ವಿಷವೇ ಬೆಳೆಯುತ್ತದೆ. ನಾಲಿಗೆಯು ರುಚಿಗಾಗಿ ಶರೀರದಲ್ಲಿ ಶತ್ರುಗ ನ್ನು ತುಂಬಿದಂತಾಗುವದು. ಆಹಾರವು ಅಪಚನವಾಗಲು ವಿಷವು ಉತ್ಪನ್ನ ಾಗಿ ರಕ್ತವು ಕೆಡುತ್ತದೆ. ರಕ್ತದೋಷವೇ ಸಕಲ ರೋಗಗಳ ಮೂಲವು. ಿಯು ಉಂಟಾಗಲೆಂದು ಹೆಚ್ಚಿಗೆ ತೆಗೆದುಕೊಂಡ ಆಹಾರವು ಶಕ್ತಿಯನ್ನೇ ಾಶಗೊಳಿಸುತ್ತದೆ. ಅದಕ್ಕೆ ವಿಪರೀತವಾಗಿ ಉಪವಾಸವು ಶಕ್ತಿಯನ್ನು ಿಸುತ್ತದೆ. ಬರ್ನರ್ ಮ್ಯಾಕ್‌ಫ್ಯಾಡನ್ ಎಂಬವನು ಏಳುದಿವಸ ಉಪವಾಸವಿದ್ದು ಂದು ನೂರು ಪೌಂಡು ಭಾರವನ್ನು ಎತ್ತಿದನು.

ಉಪವಾಸವು ರಕ್ತಸಂಚಲನವನ್ನು ಸರಿಗೊಳಿಸಿ ರೋಗವನ್ನು ಹೋಗ ಾಡಿಸುವದು. ವಿಷಗಳನ್ನು ಹೊರಗೆ ಹಾಕುವದು. ಸವೆದ ಹಾಗು ರ್ಜೀರ್ಣಿತ ಅಣುಗಳನ್ನು ಸುಡುವದು. ದಣಿದ ಸ್ನಾಯುಗಳನ್ನು ಬಲಪಡಿಸು ದು. ಉಪವಾಸವು ಮುಗಿದ ಮೇಲೆ ಸರಿಯಾದ ಆಹಾರವನ್ನು ತೆಗೆದು ಂಡರೆ ಹೊಸ ಅಣುಗಳು ಹುಟ್ಟುವವು. ಶಕ್ತಿಯೂ ಚಟುವಟಿಕೆಯೂ ಂಟಾಗುವವು.

ಎಷ್ಟೋ ಜನರು ಉಪವಾಸದ ನಿಜವಾದ ಕಲ್ಪನೆ ಹಾಗು ಅನುಭವ
ಅದನ್ನು ತಿರಸ್ಕರಿಸುತ್ತಾರೆ. ರೋಗಕ್ಕಿಂತ ಅಪಾಯಕರವಾದ ಔಷಧ
ಸೇವಿಸುತ್ತಾರೆ. ಔಷಧಗಳು ಶರೀರದ ಅಕ್ರಮವನ್ನು ಕೃತ್ರಿಮವಾಗಿ ಸ
ತ್ತವೆ. ಅವುಗಳ ಸತ್ವವು ಕಡಿಮೆಯಾಗಲು ಮೊದಲಿನಂತೆಯೇ ಆಗ
ಇಂದ್ರಿಯಗಳ ಕಾರ್ಯಗಳನ್ನು ಹೆಚ್ಚಾಗಿ ನಡಿಸಿ ಶಕ್ತಿಯನ್ನು ಕುಂದಿಸ
ಆಲಿವ್ಹರ್‌ವಿಂಡಲ್‌ನೆಂಬ ಮೆಡಿಕಲ್ ಸ್ಕೂಲಿನ ಪ್ರೊಫೆಸರನು "ಔಷಧಗಳ್ಲಿ
ಲ್ಲೊಂದು ರೋಗವನ್ನು ಹುಟ್ಟಿಸುತ್ತವೆ. ಆದ್ದರಿಂದ ಅವುಗಳನ್ನೆಲ್ಲ ಸವ
ಬಿಸಾಟಿರಿ" ಎಂದು ನುಡಿದಿರುವನು. ಸರ್ ಉಲಿಯಂ ಓಸ್ಲರನು "ಔಷ
ನಿರುಪಯುಕ್ತವಾದವುಗಳೆಂದು ಕಲಿತವನೇ ಉತ್ತಮ ಡಾಕ್ಟರನು" ಎಂದಿ

ಜರ್ಮನ್ ಡಾಕ್ಟರ ಲುಯಿಸ್ ಕುನ್ಹೆಯವರು ಉಪವಾಸ ಚಿಕಿತ್ಸೆಗೆ
ಕೊಟ್ಟಿರುವರು. ಭಾಂದೋಗ್ಯೋಪನಿಷತ್ತಿನಲ್ಲಿ ಮನಸ್ಸಿನಲ್ಲಿ ಹದಿನಾರು
ಗಳಿದ್ದು ಹದಿನೈದು ದಿವಸ ಉಪವಾಸಮಾಡಿ ಹದಿನಾರನೆಯ ದಿವಸ
ತೆಗೆದುಕೊಂಡರೆ ಬುದ್ಧಿಶಕ್ತಿಯು ಬೆಳೆಯುವದೆಂದು ಹೇಳಿದೆ.

ಹೆಚ್ಚಾಗಿ ಉಣ್ಣುವದರಿಂದ ಸ್ನಾಯುಗಳ ಹಾಗು ನರಗಳ ಚಟುವ
ನಾಶವಾಗಿ ವೃದ್ಧಾಪ್ಯವು ತೀವ್ರ ಬರುತ್ತದೆ. ತಾರುಣ್ಯವು ಬಹುದಿವಸ
ಚಟುವಟಿಕೆಯುಂಟಾಗಿ ಸಶಕ್ತತೆಯೂ ಸಂತೋಷವೂ ನೆಲೆಗೊಳ್ಳಬೇ
ಇಂದ್ರಿಯಗಳಿಗೆ ನಿಯಮಿತ ಕಾಲವಲ್ಲಿ ವಿಶ್ರಾಂತಿಯು ದೊರೆಯಬೇಕು. ಆ
ವಾರಕ್ಕೊಮ್ಮೆ ಪಕ್ಷಕ್ಕೊಮ್ಮೆ ಇಲ್ಲವೆ ತಿಂಗಳಿಗೊಮ್ಮೆಯಾದರೂ ಉ
ಮಾಡಬೇಕೆಂದು ಧಾರ್ಮಿಕ ನಿಯಮಗಳಲ್ಲಿ ಹೇಳಿದ್ದಾರೆ.

ಕೆಲವರು ಹಣ್ಣುತಿಂದು ಕೆಲವರು ಹಾಲು ಕುಡಿದು ಇನ್ನೂ
ಅವಲಕ್ಕಿ ಮುಂತಾದವುಗಳನ್ನು ತಿಂದು ಉಪವಾಸಮಾಡುತ್ತೇವೆನ
ಇದರಿಂದ ಅನ್ನಾಶಯ ಹಾಗು ಕರುಳುಗಳಿಗೆ ವಿಶ್ರಾಂತಿಯು ದೊರೆಯ
ಸ್ವಾಭಾವಿಕ ಹಸಿವೆಯುಂಟಾಗುವಂತೆ, (ಚಟದ ಹಸಿವೆಯಲ್ಲ) ಯಾವ
ಅಥವಾ ಪ್ರವಾಹಿ ಆಹಾರವನ್ನು ತೆಗೆದುಕೊಳ್ಳದಿರುವದೇ ಉಪವಾಸವ

ಯಾವಾಗ ಹಸಿವೆ ಕಡಿಮೆಯಾಗುವದು, ಬಾಯಿಂದ ಕೆಟ್ಟ
ಬರುವದು, ತಲೆಯು ಜಡವಾಗುವದು, ಬೆವರಿನಿಂದ ಕೆಟ್ಟ ನಾತವುಂಟಾ
ನಾಲಿಗೆಯ ಮೇಲೆ ಬಿಳಿಯ ಹೊಲಸು ಕೂಡುವದು ಆಗಹತ್ತುತ್ತವೆ
ಉಪವಾಸವನ್ನು ಮಾಡತಕ್ಕದ್ದೆಂದು ತಿಳಿಯಬೇಕು.

ಉಪವಾಸ ಮಾಡಬೇಕೆಂದಿದ್ದಾಗ ಮನಸ್ಸಿನ ಸ್ಥಿತಿಯು ಸಮತೋಲನದಲ್ಲಿ
ರಬೇಕು. ಉಪವಾಸವಿದ್ದಾಗ ಶರೀರಕ್ಕೆ ದಣಿವಾಗದಂಥ ಉದ್ಯೋಗಗಳನ್ನು
ಾಡುತ್ತಿರಬೇಕು. ಅಂದರೆ ಲಕ್ಷ್ಯವು ಅತ್ತ ಹೋಗುವದು: ಇಲ್ಲದಿದ್ದರೆ
ುವೆಯ ಚಟವು ನಮ್ಮನ್ನು ಆಧೀನ ಮಾಡಿಕೊಳ್ಳುತ್ತದೆ. ಉಪವಾಸವಿದ್ದಾಗ
್ಯಸ್ನಾನವನ್ನು ಮಾಡಬೇಕು. ಉಪವಾಸದ ಜೊತೆಗೆ ಶುದ್ಧಹವೆ, ಸ್ವಚ್ಛ ನೀರು,
ರ್ಯುಲವಾದ ಹೊದಿಕೆಗಳು ಆವಶ್ಯಕವಾಗಿವೆ. ಉಪವಾಸವಿದ್ದಾಗ ಸಾಕಷ್ಟು
ರು ಕುಡಿಯಲಿ; ಅವಶ್ಯವಿದ್ದರೆ ಲಿಂಬೇ ರಸವನ್ನು ಸೇರಿಸಿಕೊಳ್ಳಬಹುದು.
ದರಿಂದ ಶರೀರದೊಳಗಿನ ವಿಷಪದಾರ್ಥಗಳು ಆದಷ್ಟು ತೀವ್ರ ಹೊರಬಿದ್ದು
ೋಗುತ್ತವೆ. ಮಲಬದ್ಧವಾಗುವಂತೆ ತೋರಿದರೆ ಎನೆಮಾ ಮಾಡಿಸಿಕೊಳ್ಳ
ಹುದು. ಆದರೆ ಮೇಲಿಂದ ಮೇಲೆ ತಕ್ಕದ್ದಲ್ಲ. ನಿದ್ರೆಯು ಸಾಕಷ್ಟಾಗಬೇಕು.

ಉಪವಾಸವನ್ನು ಆರಂಭ ಮಾಡಿದ ಮೂರು ದಿವಸಗಳ ವರೆಗೆ ಚಟದ
ುವೆಯ ತಳಮಳ, ಶಾರೀರಿಕ ಅಥವಾ ಮಾನಸಿಕ ಕೆಲಸ ಮಾಡಲಿಕ್ಕೆ ಆಗದಿರು
ಕೆ, ಮೈ ಜಡವಾಗುವದು, ತಲೆ ನೋಯುವದು. ಇವೆಲ್ಲ ಆಗುವವು. ಮುಂದೆ
ಸು ಅಭ್ಯಂತರವುಂಟಾಗುವದು. ಹಸಿವೆ ಕಡಿಮೆಯಾಗಿ ಬಾಯಿಂದ ಕೆಟ್ಟ
ಾಸನೆ ಬರಹತ್ತುವದು. ಮಾನಸಿಕ ಚಟುವಟಿಕೆ ಹೆಚ್ಚಾಗುವದು. ಏಳು
ವಸಕ್ಕೆ ಸಮಾಧಾನವುಂಟಾಗುವದು. ನಾಲಿಗೆಯು ಸ್ವಚ್ಛವಾಗುವದು.
ಾಯಿಂದ ಸುವಾಸನೆ ಬರುವದು. ಮಂದ ಹಸಿವೆಯು ಉಂಟಾಗುವದು.
ೀಗಾಗಲು ಉಪವಾಸವು ಸಾಕಷ್ಟಾಯಿತೆಂದು ಬಿಡಬೇಕು. ಈಗ ಉಂಟಾಗುವ
ರ, ತಲೆನೋವುಗಳಿದ್ದಾಗ ಶರೀರದಲ್ಲಿ ಹೊಸ ಸೆಲ್ಲುಗಳು ಹುಟ್ಟುತ್ತಿರುತ್ತವೆ.

ಕೆಲವರಿಗೆ ಉಪವಾಸದಿಂದ ವಿಪರೀತ ಪರಿಣಾಮವುಂಟಾಗುವದು. ಹಾಸಿಗೆ
ಿಯುವದು, ದಿನಕ್ಕೆ ಮೂರು ಪೌಂಡಿಗಿಂತ ಹೆಚ್ಚು ತೂಕ ಕಡಿಮೆಯಾಗು
ದು, ಅಶಕ್ತತೆಯುಂಟಾಗುವದು, ಇ. ಹೀಗಾಗುತ್ತಿದ್ದರೆ ಉಪವಾಸ ಮಾಡ
ಾರದು. ಉಪವಾಸವು ವ್ಯಕ್ತಿತ್ವವನ್ನವಲಂಬಿಸಿರುತ್ತದೆ. ವೃದ್ಧರೂ ಮಕ್ಕಳೂ
೩ ದಿವಸಗಳ ಮಟ್ಟಿಗೆ ಮಾಡಬಹುದು. ಇಳಿಕೆಯ ವಯಸ್ಸಿನಲ್ಲಿ ಕ್ರಿಸ್ತನು ೪೦
ಿವಸ ಉಪವಾಸ ಮಾಡಿದನು. ಮಹಾತ್ಮಾಜಿಯು ೨೧ ದಿವಸ ಮಾಡಿದನು.

ಉಪವಾಸವನ್ನು ಮುಗಿಸುವಾಗ ಬಹಳ ಎಚ್ಚರಪಡಬೇಕು. ಮೊದಲು
ಎರಡು ದಿವಸಗಳ ವರೆಗೆ ಕಿತ್ತಳೆ, ದ್ರಾಕ್ಷೆ, ಲಿಂಬೆ ಮುಂತಾದ ಹಣ್ಣುಗಳ
ರಸವನ್ನೇ ಸೇವಿಸಬೇಕು. ಆ ಮೇಲೆ ಎರಡು ದಿವಸ ಕೇವಲ ತಾಜಾ

ಹಣ್ಣುಗಳನ್ನೇ ಸೇವಿಸುತ್ತಿರಬೇಕು ಆಮೇಲೆ ಪ್ರವಾಹಿ ಆಹಾರವನ್ನು ಬರುತ್ತ ಘನ ಆಹಾರವನ್ನೂ ತೆಗೆದುಕೊಳ್ಳಬೇಕು.

ಉಪವಾಸವನ್ನು ಸರಿಯಾಗಿ ಮಾಡಿದರೆ ಎಲ್ಲ ರೋಗಗಳು ನಾಶವವು. ದಮ್ಮು, ಶ್ವಾಸಕಾಸ, ಅಜೀರ್ಣ, ಆಮಾಂಶ, ಅಗ್ನಿಮಾಂದ್ಯ, ಕತ್ತ, ಗುಲ್ಮ, ಆಮ್ಲಪಿತ್ತ, ಮೂಲವ್ಯಾಧಿ, ಕಣ್ಣಿನ ರೋಗ, ಕಿವಿಯ ಕರುಳಿನ ರೋಗ, ಮುಂತಾದ ಹಲವು ರೋಗಗಳು ಗುಣವಾಗುವವು.

ಡಾ. ರಿಚರ್ಡ ಫಾಸೆಲ್, ಡಾ. ಟಾನ್ನರ ಮೊದಲಾದವರು ಇದರ ಈ ಗುಣವನ್ನು ಕಂಡು ಅಚ್ಚರಿಬಟ್ಟಿದ್ದಾರೆ. ನಮ್ಮ ವೈದ್ಯರಿಗೂ ಇದರ ಮಹಿಮೆ ಗೊತ್ತಿದೆ.

ಅದಕ್ಕಾಗಿ ನೂರಾರು ರೂಪಾಯಿ ಖರ್ಚು ಮಾಡಿ ಔಷಧಗಳನ್ನು ಸುರಿ ಶ್ರಮಪಡುವುದಕ್ಕಿಂತ ಸುಲಭವಾದ ಈ ಉಪಾಯನ್ನು ಕೈಕೊಳ್ಳುವದು ವಲ್ಲವೆ?

ಸ್ಕೌಟನ ಮೇಲ್ಮೆ!

ಕವಿ— ಮಾ. ತ್ರಿ. ಕುಲಕರ್ಣಿ, ೩ನೆಯ ವರ್ಷ ಟ್ರೇ. ಕಾ. ಧಾರವಾಡ

[೧೭-೧-೩೭ನೇ ದಿವಸ ಧಾರವಾಡ ಗವ್ಹರ್ಮೆಂಟ ಹಾಯಸ್ಕೂಲಿನ ಸ್ಕೌಟ ಪಂಪ್ಯಾಟದಲ್ಲಿ ಹಾಡಿದುದು]

ಆಲಿಪುದು ಸುಹೃದಯರೆ |
ಲೀಲೆಯೆಲಿ ಸ್ಕೌಟನ ಮೇಲ್ಮೆಯ ಪರಿಕಿಸುತ ||
ಸಾರ ನೈತಿಕ ಜ್ಞಾನಸಂಯುತ ಪೂರ್ಣವಿಶ್ವಾಸಾರ್ಹನು |
ಧೀರ ವೀರ ವಿಚಾರ ನಿಷ್ಠೆಯ ವಿನಯವಶ ವರಸ್ಕೌಟನು

ಪರರ ಸಹಾಯವನು ಗೈಯುವದೇ ।
ಪರತರ ಧರ್ಮವೆಂದರಿತಿಹನು ॥
ನಿರುತದಲಿ ಸತ್ಕರ್ಮವನು ತಾನಿರದೆ ಗೈವುದೆ ತನ್ನ ಕಜ್ಜವು ।
ಧರಣಿಯೊಳು ಕೈವಲ್ಯನೆಂದರೆ, ಪರರಿಗುಪಕಾರವಿದೆ ! ತಿಳಿವನು ॥ ೨ ॥

ರಾಜರಾಷ್ಟ್ರದ ಭಕ್ತಿಯು ।
ತೇಜವದು ಹೊಳೆವುದು ಮೂಜದೆ ಮುಖದ ಛಾಯೆ ॥
ವಾಜಿತರದಿಂ ಚಪಲತೆಯನಾಚರಿಸಿ ಜಗದೊಳು ಮಾನ್ಯನಾಗುವ ।
ಸಾಜಪರಿಯಿದು ಧರೆಯೊಳುದಿಸಿದ ಮನುಜ ಜನ್ಮಕೆ ಪೊಚ್ಚವು ॥ ೩ ॥

ಪ್ರಾಣದಯದ ಮೂರ್ತಿಯು ।
ಸತ್ಯದ ಖಣಿಯು ಸಾನುರಾಗದ ಪುತ್ಥಳಿಯು ॥
ಧ್ಯಾನದಲಿ ಸಧ್ಭಾವ ! ಚರ್ಯದಲಿ ಮಾನವಂತರ ಮಾಳ್ಕೆಯು ।
ಹೀನಕರ್ಮಕೆ ಮನವನಿರಿಸನು ಠೌರವದ ಸಮವರಿವನೂ ॥ ೪ ॥

ವಿಶ್ವಬಂಧುವು ಸ್ಕೌಟನು ।
ದೇಶದ ಭಕ್ತಿಯ ಮೂರ್ತಿಮಂತನಿವನು ॥
ನಶ್ವರದ ಸುಖಲಾಲಸೆಯನು ಬದಿಗಿರಿಸಿ ತಾ ಮೆರೆವನು ।
ವಿಶ್ವರಕ್ಷಕನಂತರಂಗದ ಪ್ರೇಮ ಪೀಯೂಷ ಬಿಂದುವು. ॥ ೫ ॥

ಅಜ್ಞಾಧಾರಕನಿವನು ।
ಪ್ರಜ್ಞೆಯಲಿ ಶ್ರೇಷ್ಠನು ಪ್ರಾಜ್ಞಜನರಾಳಿನಾಳು ॥
ಸಂಜ್ಞೆ ಸಂಸ್ಕೃತಿ ಬಲ್ಲನಿವ ತಾನಾಜ್ಞೆ ಭಂಗವ ಗೈಯನು ।
ಸುಜ್ಞಾನಿ, ಸುಖಕರ ವಾಣಿ ಮುಖದೊಳು ನಲಿಯುವದು
ಅನುದಿನದೊಳು ॥ ೬ ॥

ಹಸನ ಮುಖಿಯು ಸ್ಕೌಟನು, ಕಷ್ಟದ ।
ಮಸಕವ ಕಳೆಯುತಲಿರುತಿಹನು ।
ಮಿಸುಪ ಭಾರತ ಭೂಮಿಯೊಳು ತಾ ಜಸವ ಪಡೆಯಲು ಪರಿವನು ।
ವಸುಧೆಯೊಳು ಮಿರುಗುವನು ಸ್ಕೌಟನು ಪೊಪತರದ ಪರಿಜುವನು
ಪೊಂದಿ ॥ ೭ ॥

ಬಡತನದ ದೇಶವೆಂದು |
ಕಡುಬಳಲುವ ಬಡವರ ಸೇವೆಗೆಂದು ||
ದುಡಿದುಡಿದು ವೆಚ್ಚವನು ತಾ ಹಿಡಿದು ಮಾಡುವ ತೆರವನು |
ಪಡೆದಿಹನು ಈ ಗುಣವ ಸ್ಕೌಟನು ಪೊಡವಿಯೊಳು ಬಾಳಿಕೆಯ
ತೆರವಿದ

ಅತ್ಮಗೌರವ ಪಡೆಯಲ್ಕೆ ಧರೆಯೊಳು ಪರ |
ಮಾತ್ಮನ ದಯೆಗೂಡಲ್ಕೆ |
ಸಾತ್ಮ್ಯ ಸ್ಕೌಟನು ತಕ್ಕಪಾತ್ರನು ! ಅಚ್ಚರಿಯೆ ? ಹೇಳಿನ್ನು ಭ
ತಾತ್ಮನಾಥನವೊಲುನೆ ಪಡೆಯಲ್ಕದುವೆ ಸುಲಭಮೆ ? ಸುಗಮವೆ

ಶುದ್ಧಕಾಯವು ಸ್ಕೌಟನದು ವಚನವು ಮನವು |
ಶುದ್ಧರೀತಿಯಲಿರುವವು ||
ಬದ್ಧನಿಹನೈ ದೇಶಕಾರ್ಯದೊಳದ್ದು ಮಾನಪಯೋಧಿಯೊಳಗೆ |
ವೃದ್ಧಿಗೈಯುವ ನಾಡಿನಾಳಿವ ಪಿರಿದು ಬಾಳಲಿ ಪೊಡವಿಯಲ್ಲಿ !!

ಶಿಶುಶಾಲೆಗಳು

(ಮುಂದೆ ಸಾಗಿದುದು.)

ಶಿಶುಶಾಲೆಗಳ ಉಪಕರಣಗಳು.

೧. ಸ್ವಚ್ಛ ಬೆಳಕೂ ಶುದ್ಧ ಹವೆಯೂ ವಿಪುಲವಾಗಿ ಇರುವ ವಿಶಾಲವಾದ ೋಣೆ:– ಚಿಕ್ಕ ಮಕ್ಕಳಿಗೆ ಶುದ್ಧ ಹವೆಯು ಸಾಕಾದಷ್ಟು ಬೇಕೇಬೇಕೆಂಬದು ರ್ಯವಾದವಾದ ಮಾತು, ಮತ್ತು ಅವರಿಗೆ ತಾವು ದಟ್ಟಣೆಯ ಮೂಲಕ ಅಡಚಣೆ ಲ್ಲಿರುವವೆಂದು ಭಾಸವಾಗದಷ್ಟು ವಿರಳವಾಗಿರುವಂತೆ ಸುತ್ತಲೂ ತಕ್ಕಷ್ಟು ಕಾಶವಿರಬೇಕಾಗುವದು; ವಿಪುಲವಾಗಿ ಬೆಳಕೂ ಬೇಕು.

೨. ಶಿಶುಶಾಲೆಗಳಲ್ಲಿ ಚಿಕ್ಕ ಬಾಲಕರ ಕೈಗೆ ನಿಲುಕುವಷ್ಟೇ ಎತ್ತರವಾದ ಾಟುಗಳಿರಬೇಕಾಗುವದು. ಮತ್ತು ಅವುಗಳ ಖಾನೆಗಳಲ್ಲಿ ಬಾಲಕರ ಉಪ ೋಗಕ್ಕೆ ಬೇಕಾಗುವ ಬೇಗನೆ ಹರಿದು ಮುರಿದು ಹಾಳಾಗದಂಥ ಆಟಿಗೆಯ ಾಂಬಿಗಳು, ಚಿತ್ರದ ಪುಸ್ತಕಗಳು ಮುಂತಾದ ಆಟದ ಉಪಕರಣಗಳನ್ನು ತುಂಬಿ ರಬೇಕಾಗುವದು. ಬಾಲಕರು ತಮಗೆ ಬೇಕಾದಾಗ ಅವನ್ನು ತಾವೇ ತೆಗೆದು ಾಂಡು ಉಪಯೋಗಿಸಲಿಕ್ಕೆ ಬರುವಂತೆ ಅವುಗಳ ವ್ಯವಸ್ಥೆಯಿರಬೇಕು. ಚಾಪೆ, ೀಜು, ಖುರ್ಚಿ ಮುಂತಾದವು ಬಾಲಕರು ತಾವೇ ಅತ್ತಿತ್ತ ಸರಿಸಾಡಲಿಕ್ಕೂ ೆದಿಡಲಿಕ್ಕೂ ಬರುವಷ್ಟು ಸಣ್ಣವೂ ಹಗುರಾದವೂ ಇರಬೇಕು. ಶಿಶುಶಾಲೆಗಳಲ್ಲಿ ಪಯೋಗಿಸುವ ಚಿತ್ರಗಳು ಆಕರ್ಷಕವಾಗಿರಬೇಕು; ಮತ್ತು ಅವನ್ನು ಬಾಲಕರಿಗೆ ಲಭವಾಗಿ ಕಾಣಿಸುವಷ್ಟೇ ಎತ್ತರದಲ್ಲಿ ಗೋಡೆಗೆ ತೂಗಹಾಕಿರಬೇಕು. ಕರಿಯ ಲಗೆಯು ಬಾಲಕರ ಕೈಗೆ ಸುಲಭವಾಗಿ ನಿಲುಕುವಷ್ಟು ಎತ್ತರದಲ್ಲಿ ಇರಬೇಕಲ್ಲದೆ ಸ್ಸ ಹುಡುಗರು ಕೆಲಸಮಾಡಲಿಕ್ಕೆ ಸಾಕಾದಷ್ಟು ಸ್ಥಳವುಳ್ಳದ್ದಾಗಿಯೂ ರಬೇಕು.

೩. ಆಟದ ಬೈಲಿನಲ್ಲಿ ಜೋಕಾಲಿ, ಜರಗುಂಡಿಯನ್ನು ಆಡುವ ಇಳಕಲು, ತೆ ಈಜೆ ಇಳುಕಲಾಗುವಂತೆ ಇಟ್ಟ ಹಲಗೆಯ ಕುದುರೆಗಳು ಇವು ಇರಬೇಕು.

೪. ಶಿಶುಶಾಲೆಗೆ ಸಂಬಂಧಿಸಿ ಒಂದು ತೋಟವಿರಬೇಕು ಮತ್ತು ತೋಟದ ಸಕ್ಕೆ ಬೇಕಾಗುವ ಚಿಕ್ಕ ಅಳತೆಯ ಗುದ್ದಲಿ ಸಲಿಕೆ ಮುಂತಾದ ಉಪಕರಣ

ಗಳು ಇರಬೇಕು. ಅಲ್ಲಿ ಬಾಲಕರು ಪ್ರಕೃತಿಯ ಕಾರ್ಯಗಳನ್ನು ನೋ
ಮಾಡುವದಲ್ಲದೆ ಅಲ್ಲಿರುವ ಪ್ರಾಣಿ ವನಸ್ಪತಿಗಳನ್ನು ಪ್ರೀತಿಸಲು ಕಲಿಯು
ಮತ್ತು ಸಸ್ಯಗಳು ಬೆಳೆಯುವದನ್ನೂ ಅವಕ್ಕೆ ಹೂ ಕಾಯಿಗಳಾಗುವದನ್ನೂ
ಗಳು ಕ್ರಿಮಿ ಕೀಟಕಗಳು ಪಕ್ಷಿಗಳು ಮುಂತಾದವು ತೋಟದಲ್ಲಿ ನಡೆಯು
ಕಾರ್ಯಗಳನ್ನೂ ಅವುಗಳ ಸ್ವಭಾವಶೀಲಗಳನ್ನೂ ನಿರೀಕ್ಷಣೆ ಮಾಡುವಂ

೫. ಶಿಶುಶಾಲೆಗಳಲ್ಲಿ ಕೆಲವು ಪ್ರಾಣಿಗಳನ್ನು ಸಾಕಿರಬೇಕು.
ಮೊಲ ಬೆಕ್ಕಿನಮರಿ ಅಡಿನಮರಿ ಮುಂತಾದವುಗಳನ್ನು ಸಾಕಿದ್ದರೆ ಬ
ಅವನ್ನು ಸಾಕುವ ರೀತಿಯನ್ನು ಕಲಿಯುವದಲ್ಲದೆ ಆ ಪ್ರಾಣಿಗಳ ವಿಷಯ
ಅವರಿಗೆ ಪ್ರೀತಿಯು ಹುಟ್ಟುವದು; ಮತ್ತು ಅವನ್ನು ಹೇಗೆ ನಡೆಯಿಸ
ಬೇಕೆಂಬದೂ ಅವರಿಗೆ ಗೊತ್ತಾಗುವದು.

೬. ಶಾಲೆಯ ಆಟದ ಬಯಲಿನಲ್ಲಿ ಒಂದುಕಡೆಗೆ ಹಸಿಯ ಮತ್ತು ಒ
ಉಸುಕಿನ ಗುಂಪಿಗಳಿರಬೇಕು. ಮತ್ತು ಚಿಕ್ಕ ದೋಣಿಗಳನ್ನು ತೇಲಿಬಿಡು
ಅನುಕೂಲವಾಗುವಂತೆ ಒಂದು ನೀರಿನ ಹೊಂಡವೂ ಇರಬೇಕು. ಆಲ್ಲಿ ಬಾ
ನೀರಲ್ಲಿ ಕೆಲವು ಪದಾರ್ಥಗಳು ತೇಲುವವು, ಕೆಲವು ಮುಳುಗುವವು, ಎಂ
ಸಹಜವಾಗಿ ಕಲಿತುಕೊಳ್ಳಲು ಅನುವಾಗುವದು.

೭. ಚಿಕ್ಕಮಕ್ಕಳ ಬಳಕೆಗಾಗಿ ತಕ್ಕ ಅಳತೆಯ ಮಲಮೂತ್ರ ವಿಸ
ಸ್ಥಳಗಳೂ ಒಗೆಯುವ, ಕೈಕಾಲು ಮೋರೆ ತೊಳೆದುಕೊಳ್ಳುವ, ಮತ್ತು
ಮನೆಗಳೂ ಇರಬೇಕು. ಇದರಿಂದ ಬಾಲಕರು ಸ್ವಚ್ಛತೆಯ ಚಟ
ಸ್ವಾವಲಂಬಿಗಳೂ ಆಗುವರು.

ಇಷ್ಟೆಲ್ಲ ಉಪಕರಣಗಳಲ್ಲದೆ ಇನ್ನೊಂದು ಮಹತ್ವದ ಆವಶ್ಯಕತೆಯ
ಶಾಲೆಗಳಿಗೆ ಇದ್ದೇ ಇರುವದು. ಅದೇನೆಂದರೆ ಯೋಗ್ಯ ಶಿಕ್ಷಕಿಯರು.
ಬಾಲಕರ ಶೀಲ ಸ್ವಭಾವ ಮನೋವೃತ್ತಿಗಳ ಅರಿವು ಇರಬೇಕು. ಅವರ
ರನ್ನು ಚೆನ್ನಾಗಿ ಪ್ರೀತಿಸಬೇಕು. ಅವರು ಮಕ್ಕಳ ಒಡನಾಟದಲ್ಲಿ ತುಂ
ಶೀಲರೂ ಸತ್ಯನಿಷ್ಠರೂ ಆಗಿರಬೇಕು. ಅಲ್ಲದೆ ಬಾಲಕರ ವ್ಯವಹಾರದಲ್ಲಿ
ಬೌದ್ಧಿಕ ಇಲ್ಲವೆ ಶಾರೀರಿಕ ಕಾರ್ಯಗಳಲ್ಲಿ ಕಂಡುಬರುವ ನ್ಯೂನಾತಿರಿಕ್ತ
(ಕುಂದುಕೊರತೆಗಳನ್ನು ಇಲ್ಲವೆ ಮಿತಿಮೀರಿದ ಆಧಿಕ್ಯವನ್ನು) ಕೂಡ
ಕೊಂಡು ಅದನ್ನು ಸರಿಪಡಿಸುವಷ್ಟು ತೀಕ್ಷ್ಣ ದೃಷ್ಟಿಯವರೂ ತೀಕ್ಷ್ಣ
ಯವರೂ ಆಗಿದ್ದು ಅವರ ಲಕ್ಷ್ಯವು ಯಾವಾಗಲೂ ಬಾಲಕರ ಕಡೆಗೇ
ಗುವದು. ಬಾಲಕರು ಆಟದಿಂದಲೇ ಅನುಭವವನ್ನು ಪಡೆಯಬೇಕಾಗಿ

ಕ್ಷಕರು ಬಾಲಕರ ಆಟದ ನಾಯಕರಾಗಿರಬೇಕಾಗುವದು. ಅವರು ಬಾಲಕ ೂಡನೆ ಸರಿಬೆರಕೆಯಿಂದ ಬೆರೆತು ಅವರ ಸಹಾಯಕರೂ ಮಾರ್ಗದರ್ಶಿಗಳೂ ಆಗಿರ ೇಕಲ್ಲದೆ ಅವರ ತಪ್ಪುತಪ್ಪಡೆಗಳನ್ನೂ ಕುಂದುಕೊರತೆಗಳನ್ನೂ ಸಹಾನುಭೂತಿ ೂರ್ವಕವಾಗಿ ಸರಿಪಡಿಸಲು ಆತುರರಾಗಿರಬೇಕು. ಅವರಿಗೆ ಬೇಕಾಗುವ ಎಲ್ಲ ಮಾಹಿತಿಯನ್ನು ಒದಗಿಸಿ ಕೊಡಬೇಕು. ಶಿಕ್ಷಕರು ತಾವೇ ಆಟದ ಚಾಲಕರಾಗ ೇಕಾಗದಿದ್ದರೂ ಇರಬಹುದು; ಆಟದಲ್ಲಿ ಪರಿಸ್ಥಿತಿಗನುಗುಣವಾಗಿ ಬಾಲಕರನ್ನು ನುಸರಿಸಿ ನಡೆಯಬೇಕಾಗಬಹುದು. ಆದರೂ ಆಟದ ಎಲ್ಲ ಜಬಾಬದಾರಿಯು ಾಲಕರಿಗೇ ಒಪ್ಪಿಸಲ್ಪಡಬೇಕು. ಯಾಕಂದರೆ ಆಟದಲ್ಲಿ ಅಭಿರುಚಿಯು ಬಾಲಕರ ಟುಟ್ಟ ಗುಣವು ಮತ್ತು ಹೆಚ್ಚು ಹುಡುಗರು ಆಟವನ್ನು ಹೇಗೆ ಆಡಬೇ ಂಬುದನ್ನು ಸುಲಭವಾಗಿ ತಿಳಿದುಕೊಂಡಿರುವರು. ಕೆಲವರಿಗೆ ಮಾತ್ರ ಆಟದಲ್ಲಿ ಅನು ವವೂ ಅಭಿರುಚಿ ಉತ್ಸಾಹಗಳೂ ಸಾಕಾದಷ್ಟು ಇಲ್ಲದಿರುವದರಿಂದ ನೀರಸವಾಗಿ ಡೆದು, ಆಟದ ಕಟ್ಟಳೆಗಳನ್ನಷ್ಟೇ ಅಕ್ಷರಶಃ ಅನುಸರಿಸಿ ನಡೆದು, ಅದರಲ್ಲಿರುವ ನಂದವೃತ್ತಿಗೆ ಭಂಗತರುವ ಸಂಭವವುಂಟು. ಶಿಕ್ಷಕರು ಅಂಥವರಿಗೆ ಯೋಗ್ಯ ೀತಿಯಿಂದ ನೆರವಾಗಬೇಕು.

ಅನುವಂಶಿಕ ಹಾಗು ಪರಿಸ್ಥಿತಿಯ ಪರಿಣಾಮಗಳು

ಬಾಲಕರು ಮೈಕಟ್ಟು ಮುಖಚರ್ಯೆಗಳಲ್ಲಿ ತಮ್ಮ ತಂದೆತಾಯಿಗಳನ್ನು ೋಲುತ್ತಿರುವರೆಂಬದನ್ನು ನಾವೆಲ್ಲರೂ ಬಲ್ಲೆವು. ಚಿಕ್ಕ ಮಗುವು ಮೈಕಟ್ಟಿನಲ್ಲಿ ಲ್ಲವೆ ಮುಖಚರ್ಯೆಯಲ್ಲಿ ತಂದೆತಾಯಿಗಳನ್ನು ಹೋಲುತ್ತಿರುವದಿಷ್ಟೇ ಲ್ಲದೆ ನಡೆವಳಿಯಲ್ಲಿಯೂ ಮಕ್ಕಳು ಹಿರಿಯರನ್ನು ಹೋಲುವದುಂಟು. ತಾಯಿಯಂತೆ ಕರು " ಎಂಬ ನಾಣ್ಣುಡಿಯು ಈ ಮಾತಿನ ಸತ್ಯತೆಗೆ ಆಧಾರ ಾಗಿದೆ. ತಾಯಿತಂದೆಗಳ ನಡೆವಳಿಯಲ್ಲಿಯ ಗುಣಾವಗುಣಗಳು ಮಕ್ಕಳಲ್ಲಿ ಂಡುಬರುವದು ಅನುಕರಣದ ಪರಿಣಾಮವೆಂದು ಹೇಳಬಹುದಾಗಿದ್ದರೂ ೀರ ಬಾಲ್ಯದಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡ ಮಕ್ಕಳಲ್ಲಿಯೂ ಕೂಡ ಮಾತು ಒಡೆದುಕಾಣಿಸುವಂಥ ಉದಾಹರಣೆಗಳೆಷ್ಟೋ ವ್ಯವಹಾರದಲ್ಲಿ ಕಂಡು ರುವವು. ಇದಕ್ಕೇ ನಾವು ಅನುವಂಶಿಕವೆನ್ನುವೆವು. ತಂದೆತಾಯಿಗಳಿಂದ ಲ್ಲವೆ ಅಜ್ಜ ಅಮ್ಮಂದಿರಿಂದ ಮಕ್ಕಳಲ್ಲಿಯೂ ಮೊಮ್ಮಕ್ಕಳಲ್ಲಿಯೂ ಬರುವಂಥ ಣಾವಗುಣಗಳು ಅನುವಂಶಿಕವೆನಿಸುವವು.

ಕೆಲಕೆಲವು ಕುಟುಂಬಗಳಲ್ಲಿ ಕೆಲವೊಂದು ಶಾರೀರಿಕ ಘಟನೆಯು ಅನೇಕ ಲೆತಲಾಂತರಗಳವರೆಗೂ ಒಂದೇಸವನೆ ನಡೆದು ಬಂದಿರುವದುಂಟು. ಮಾನಸಿಕ

ಗುಣಾವಗುಣಗಳು ಕೂಡ ವಂಶಪರಂಪರಾಗತವಾಗಿ ನಡೆದುಬರುವ
ನಿಜವಾಗಿದ್ದರೂ ಮಾನಸ ಶಾಸ್ತ್ರಜ್ಞರಿಗೆ ಈ ಮಾತು ಯಾವ ನಿಯ
ಅನುಸರಿಸಿ ಹೇಗೆ ನಡೆದುಬರುವದೆಂಬದನ್ನು ಹೇಳಲು ಇನ್ನೂ ಸಾಧ್ಯ
ತಂದೆತಾಯಿಗಳಿಬ್ಬರೂ ಮಂದಬುದ್ಧಿಯವರಾಗಲಿ ಚಂಚಲಚಿತ್ತದ
ಇದ್ದರೆ ಅವರ ಮಕ್ಕಳೂ ಹಾಗೆಯೇ ಮಂದಬುದ್ಧಿಯವರಾಗಲಿ ಚಂಚ
ದವರಾಗಲಿ ಆಗುವರೆಂಬ ಒಂದು ನಿಯಮವನ್ನು ತಕ್ಕಮಟ್ಟಿಗೆ ಸಾಮಾನ್ಯ
ವೆಂದು ಹೇಳಲು ಬರುವಂತಿದೆ. ಆದರೂ ಅತಿಶಯ ಚುರುಕುಬುದ್ಧಿ
ತಾಯಿಗಳ ಹೊಟ್ಟೆಯಲ್ಲಿ ಕೇವಲ ಮಂದಬುದ್ಧಿಯ ಮಕ್ಕಳು ಹುಟ್ಟಿದ
ಹರಣೆಗಳೇನೂ ಪ್ರಪಂಚದಲ್ಲಿ ಕಡಿಮೆಯಾಗಿಲ್ಲ. ಏನೇ ಇದ್ದರೂ
ನಾವು ಮಕ್ಕಳು ಹುಟ್ಟುವಾಗ ಕೆಲವೊಂದು ಆನುವಂಶಿಕ ಗುಣಾವ
ಬೀಜಗಳನ್ನೂ ಮಾನಸಿಕ ಶಕ್ತಿಗಳ ಅಂಕುರಗಳನ್ನೂ ಮನಸ್ಸಿನಲ್ಲಿಟ್ಟು
ಹುಟ್ಟುವರು; ಪರಿಸ್ಥಿತಿ, ಸಹವಾಸ, ಶಿಕ್ಷಣ ಇವುಗಳಿಂದ ಆ
ಅಂಕುರಗಳು ಬೆಳೆದುಬಂದು ಮನುಷ್ಯನ ಬುದ್ಧಿ, ವಿಚಾರ, ಶೀಲ
ಅಭ್ಯಾಸ ಮುಂತಾದ ಮಾನಸಿಕಶಕ್ತಿ ವ್ಯಾಪಾರಗಳ ಸ್ವರೂಪವನ್ನು
ತೊಡಗುವವು; ಎಂದು ಹೇಳಲು ಅಡ್ಡಿಯಿಲ್ಲ. ಆದುದರಿಂದ ಮಗುವಿನ
ನೊಳಗಿನ ಆನುವಂಶಿಕ ಮನಃಶಕ್ತಿಯ ಬೀಜಗಳು ನನಗೆ ಅನುಕೂಲವಾ
ಅವನ್ನೇ ಬೆಳಿಸಿ ವಿಕಾಸಗೊಳಿಸಿಕೊಳ್ಳಬಹುದು. ನನಗೆ ಬೇಡಾದ ಗುಣಗ
ರಗಳು ಬಾಲಕರಲ್ಲಿ ಕಂಡುಬರತೊಡಗಿದರೆ ಅವನ್ನು ಎಳೆಯತನದಲ್ಲಿಯೇ
ಕಮರಿಸಿಬಿಡಬಹುದು. ಶಿಶುಶಾಲೆಗಳಲ್ಲಿಯ ಶಿಕ್ಷಕರ ಕರ್ತವ್ಯವಾ
ವಿಷಯದಲ್ಲಿ ಇಷ್ಟೇ ಇರುವದು. ಮೊದಲು ಬಾಲಕರ ಮನಃಪ್ರವೃತ್ತಿ
ಕಂಡುಕೊಂಡು ಒಳ್ಳೆಯವುಗಳನ್ನು ಪ್ರೋತ್ಸಾಹಿಸಿ ಬೆಳಸಿ ಬೆಳಕಿಗೆ ತ
ಕೆಟ್ಟವುಗಳನ್ನು ಸಾಧ್ಯವಿದ್ದಮಟ್ಟಿಗೂ ಹತ್ತಿಕ್ಕಿ ಹಿಂದೆ ಇಡಬೇಕು. ಆ
ಅಂತಹ ಪರಿಸ್ಥಿತಿ ಸಹವಾಸ ಸನ್ನಿವೇಶಗಳನ್ನು ಒದಗಿಸಿಕೊಟ್ಟು ಈ ಕ
ತಾನಾಗಿಯೇ ನಡೆಯುವಂತೆ ಮಾಡಬೇಕಲ್ಲದೆ ಎಲ್ಲಿಯೂ ಬಲತ್ಕಾರವ
ಬರಲಾಗದು. ಹುಟ್ಟುಗುಣವಾಗಿ ತೋರಿಬಂದು ಅಸಮಾಧಾನ
ಮನೆತನದ ವಾತಾವರಣದಲ್ಲಿ ಬೆಳೆಯಬಹುದಾದ ಅವಗುಣಗಳು ಶಿಶು
ವಾತಾವರಣದಲ್ಲಿ ಪರಿಶುದ್ಧಿ ಹೊಂದುವ ಸಂಭವವಿರುವದು.

ಮನೆತನದ ಅಸಮಾಧಾನಕರವಾದ ವಾತಾವರಣವೆಂದರೇನು? ಅವಗುಣಗಳ ಬೆಳವಣಿಗೆಗೆ ಕುಟುಂಬದ ಬಡತನವೇ ಕಾರಣವೆಂದಾಗಲಿ

ಲ್ಲಿ ಇಂತಹ ಪರಿಸ್ಥಿತಿ ಸಹವಾಸ ಸನ್ನಿವೇಶಗಳ ಒಡನಾಟದ ಮೂಲಕವಾಗಿಯೇ ನಗುವವೆಂದಾಗಲಿ ಹೇಳಲಾಗುವದಿಲ್ಲ. ಸೆರೆ ಕುಡಿದು ದುಂದಾಗಿ ಕುಣಿದಾಡುವು, ಕುಟುಂಬದ ಜನರಲ್ಲಿ ಪರಸ್ಪರರು ಅವಾಚ್ಯಶಬ್ದಗಳಿಂದ ಬೈದಾಡುವದು, ಗಳಾಡುವದು, ಸದಾ ಅಶ್ಲೀಲ ಅಸಭ್ಯ ಆಚರಣೆಗಳು ನಡೆಯುವದು ಇವೇ ಾದಲಾದವುಗಳನ್ನು ನೋಡುವದರಿಂದ ಬಾಲಕರಲ್ಲಿ, ಕಟುಕನ ಮನೆಯಲ್ಲಿ ಸಾಕಿದ ಿಯ ಮರಿಯಂತೆ, ಈ ಗುಣಗಳು ತಾವಾಗಿ ಸೇರಿ ಬೆಳೆಯತೊಡಗುವವು, ಲ್ಲದೆ ಅನುಚಿತವಾದ ಅಚ್ಚೆಯಿಂದ ಸಾಕಿದ ಮಗುವಿಗೆ ಅದರ ತಾಯಿ ತಂದೆಗಳು ನು ಬೇಡಿದ್ದನ್ನೆಲ್ಲ ಕೊಟ್ಟು ಹೇಳಿದ್ದನ್ನೆಲ್ಲ ಕೇಳಿ ಮಾಡಿದ್ದನ್ನೆಲ್ಲ ಮಾಡಿಸಿ ಳುವದರಿಂದ, ಅದನ್ನೊಂದು ಹಟಮಾರಿತನದ ಮೂರ್ತಿಯನ್ನಾಗಿಯೂ ್ಪರ್ಥದ ಗೊಂಬೆಯನ್ನಾಗಿಯೂ ಮಾಪರ್ಡಿಸುವರೆಂದರೆ ಏನೂ ಅಡ್ಡಿಯಿಲ್ಲ. ದೀಗ ಅಸಮಾಧಾನವಾದ ಮನೆತನದ ವಾತಾವರಣವೆನಿಸುವದು. ಇದಕ್ಕೆ ವಿರುದ್ಧ ಾಗಿ ಮನೆತನದ ಜೀವರ್ಕ್ರಮವು ತುಂಬಾ ಸಮಾಧಾನಕರವಾಗಿದ್ದು ಮಗುವಿನ ಿವಣಿಗೆಗೆ ತುಂಬ ಅನುಕೂಲವಾದ ಪರಿಸ್ಥಿತಿಯುಳ್ಳದ್ದಾಗಿರುವದೂ ಉಂಟು. ಲ್ಲಿ ಮಗುವಿಗೆ ಸುರುಚಿರವಾದ ಸುಖಕರವಾದ ಅನ್ನವಸ್ತ್ರಗಳು ದೊರೆಯುವವು; ಳ್ಳೆಯ ಶೀಲ ಚಟ ಅಭ್ಯಾಸಗಳಿಗೆ ಬೇಕಾದಷ್ಟು ಮನೆತನದ ಜನರ ಒಳ್ಳೆಯ ಾದರಿಗಳು ಅವರ ಮುಂದಿರುವವು. ಅದಕ್ಕೆ ಒಳ್ಳೆಯ ಶೀಲ ಸ್ವಭಾವಗಳನ್ನು ಿಸುವರು; ಅದರ ಆಟಸೋಟಗಳಿಗೂ ಮನಃಪ್ರವೃತ್ತಿಗಳ ಬೆಳವಣಿಗೆಗೂ ೀಕಾದ ಎಲ್ಲಬಗೆಯ ಉಪಕರಣಗಳ ಅನುಕೂಲತೆಯಿರುವದು; ಅದರೆ ಅದಕ್ಕೂ ಲ್ಲಿ ಒಂದೇ ಒಂದು ಕೊರತೆಯಿರುವ ಸಂಭವವಿರುವದು. ಸಮಾನ ವಯಸ್ಸಿನ ಲಕರ ಸಹವಾಸ, ಅವರೊಡನೆ ಆಟಸೋಟಗಳಿಂದ ಆನಂದಪಡುವದು ಇವು ರದ್ದರಿಂದ ಮುಂದಿನ ಜೀವನದಲ್ಲಿ ಸಂಭವಿಸುವ ಅತಿ ಮಹತ್ವದ್ದಾದ ಾಮಾಜಿಕ ಜೀವನಕ್ಕೆ ತಕ್ಕ ತಳಹದಿಯನ್ನು ಹಾಕಬೇಕಾಗಿರುವ ಈ ವಯಸ್ಸಿನಲ್ಲಿ ಿಥ ಸಹವಾಸ ಸನ್ನಿವೇಶಗಳು ಇಲ್ಲದಿರುವದೊಂದೇ ಆ ಮಗುವಿಗಿರುವ ಕೊರತೆ ುನಿಸುವದು.

ಶಿಶುಶಾಲೆಗಳು ಮೇಲೆ ಹೇಳಿದಂಥ ಮನೆತನದ ಅಸಮಾಧಾನಕರವಾದ ಾತಾವರಣವನ್ನು ಬದಲಿಸಿ ಕೆಟ್ಟ ಪರಿಸ್ಥಿತಿಯಿಂದ ಆಗಬಹುದಾದ ದುಷ್ಪರಿಣಾಮ ಳನ್ನು ತಪ್ಪಿಸಿ ದುಸ್ಥಿತಿಯಿಲ್ಲದಿದ್ದರೂ ಸಮ ವಯಸ್ಸಿನ ಸಹವಾಸಿಗಳ ಒಡನಾಟದ ೊರತೆಯೆಂಬ ಮತ್ತೊಂದು ಪ್ರಕಾರದ ನ್ಯೂನತೆಯನ್ನು ಪೂರ್ತಿಗೊಳಿಸಿ ಬಾಲಕ ಲ್ಲಿ ಸದ್ಗುಣಗಳ ಪೋಷಣೆಗೂ ಒಳ್ಳೆಯ ಮನಃಪ್ರವೃತ್ತಿಗಳ ಉತ್ಪತ್ತಿ ಬೆಳವಣಿಗೆ ಿಗೂ ಸಹಾಯಮಾಡುವವು.

ಹುಟ್ಟು ಗುಣಗಳು

ಹುಟ್ಟುಗುಣವೆಂದರೇನು? ಸ್ವಭಾವ ಅಥವಾ ಹುಟ್ಟುಗುಣವ
ಪ್ರಾಣಿಗಳಿಗೆ ಸಹಜವಾಗಿ ಬಂದಿರುವದು. ಇದರ ಮೂಲಕವಾಗಿ ಪ್ರ
ಪ್ರಾಣಿಯ ಶರೀರಕ್ಕೂ ಮನಸ್ಸಿಗೂ ಸೃಷ್ಟಿಯೊಳಗಿನ ಪದಾರ್ಥಗಳಿಗೂ
ಬಗೆಯ ವಿಶಿಷ್ಟಸಂಬಂಧವುಂಟಾಗುವದು. ಒಬ್ಬನು ಒಂದು ಪದಾರ್ಥ
ಒಂದುಬಗೆಯಾಗಿ ನೋಡಿದರೆ ಮತ್ತೊಬ್ಬನು ಅದೇ ಪದಾರ್ಥವನ್ನು ಇನ್ನು
ಪ್ರಕಾರವಾಗಿ ನೋಡುವನು. ಒಬ್ಬನಿಗೆ ರುಚಿಯೆನಿಸುವ ಪದಾ
ಇನ್ನೊಬ್ಬನಿಗೆ ಸೇರಲಿಕ್ಕಿಲ್ಲ. ಒಬ್ಬನು ಪ್ರೀತಿಸುವ ಪದಾರ್ಥವನ್ನು ಇನ್ನೊ
ಅನಾದರ ಮಾಡಬಹುದು. ಇಲ್ಲವೆ ಅದರ ಮೇಲೆ ತಿರಸ್ಕಾರವನ್ನೂ ತ
ಬಹುದು. ಒಬ್ಬನು ಕೇಳಿ ಆನಂದಪಡುವ ದನಿಯಿಂದ ಇನ್ನೊಬ್ಬನಿಗೆ
ವುಂಟಾಗಬಹುದು. ಅರ್ಥಾತ್ ಮನುಷ್ಯನು ಕಂಡು ಕೇಳುವ ಅನುಭ
ಬೇರೆ ಬೇರೆ ಪದಾರ್ಥಗಳ ಸಂಬಂಧದಿಂದ ಅವನಿಗಿರುವ ಇಲ್ಲವೆ ಉಂಟ
ಮಾನಸಿಕ ಸಹಜವಾದ ಪ್ರವೃತ್ತಿಯು ಒಂದು ಬಗೆಯಿಂದ ಅವನ
ಗುಣದ ದ್ಯೋತಕವಾಗಿರುವದು.

ಪ್ರಾಣಿಗಳಿಗೆ ವಿಚಾರಶಕ್ತಿಯಿರುವದಿಲ್ಲ. ಎಂದರೆ ಒಳಿತು ಹೀನಗಳ
ಮುಂದೆ ಆಗಬಹುದಾದ ಪರಿಣಾಮವನ್ನಾಗಲಿ ಕುರಿತು ಅವು ಆಲೋಚಿಸ
ಆದ್ದರಿಂದ ಅವುಗಳಲ್ಲಿ ಹುಟ್ಟುಗುಣಗಳಿಗೇ ಪ್ರಾಧಾನ್ಯವಿರುವದು.
ಅವುಗಳ ಕಾರ್ಯಗಳೆಲ್ಲ ಆ ಹುಟ್ಟುಗುಣಗಳನ್ನು ಅವಲಂಬಿಸಿಯೇ ನಡೆಯ
ಉದಾ:— ಚಳಿಗಾಲಕ್ಕಾಗಿ ಆಹಾರವನ್ನು ಸಂಗ್ರಹಿಸಿಡುವದು ಇಣಚಿಯ
ಹುಟ್ಟುಗುಣವು. ಆದು ಅಡವಿಯಲ್ಲಿರುವಾಗಲೂ ಈ ಕಾರ್ಯವನ್ನು
ವದು. ನಾವು ಸಾಕಿದ ಇಣಚಿಯೂ ಈ ಕಾರ್ಯವನ್ನು ಮಾಡ
ಹುಟ್ಟನ್ನು ಕಟ್ಟುವಪರಲ್ಲಿಯೂ ಮರಿಗಳಿಗಾಗಿ ತುಪ್ಪವನ್ನು ಸಂಗ್ರಹಿ
ಲ್ಲಿಯೂ ಆಯುಷ್ಯವನ್ನೆಲ್ಲ ಕಳೆಯುವದು ಜೇನುನೊಣದ ಹುಟ್ಟುಗುಣ
ಕೆಲಕೆಲವು ಕ್ರಿಮಿಕೀಟಗಳು ಮೊಟ್ಟೆಯಿಂದ ಹೊರಗೆ ಬಂದ ಕೂಡಲೆ
ಮರಿಗಳಿಗೆ ಸಾಕಷ್ಟು ಆಹಾರವು ದೊರೆಯಬಹುದಾದ ಸ್ಥಳವನ್ನು ನೊ
ತತ್ತಿಯಿಡುವವು. ಈ ಎಲ್ಲ ಕಾರ್ಯಗಳು ಆ ಪ್ರಾಣಿಗಳ ವಿಚಾರದ ಪರಿಣಾಮ
ಹೇಳಲಾಗುವದಿಲ್ಲ. ಅವು ಆ ಪ್ರಾಣಿಗಳಲ್ಲಿರುವ ಹುಟ್ಟುಗುಣದ ದ್ಯೋತಕ
ವವು. ಈ ಹುಟ್ಟುಗುಣಗಳ ಮೂಲಕವಾಗಿ ಅವು ಈ ಬಗೆಯ ಕಾರ್ಯ
ಎಲ್ಲಿದ್ದರೂ ಮಾಡೇತೀರುವವು. ಇವು ಆ ಪ್ರಾಣಿಗಳ ಸ್ವಭಾವವೆನಿಸಿಕೊಂಡ
ಮನುಷ್ಯ ಪ್ರಾಣಿಯಲ್ಲಿಯೂ ಇಂಥ ಹಲವು ಹುಟ್ಟುಗುಣಗಳು ಅನೂಚಾ

ಸಿದು ಬಂದಿರುವವು. ಹುಟ್ಟಿದ ಮಗುವಿಗೆ ಮೊಲೆಯುಣ್ಣಲು ಯಾರೂ ಕಲಿಸ
ೀಕಾಗುವದಿಲ್ಲ. ಅಳುವದನ್ನೂ ಬೆಳಕಿಗೆ ಬಂದೊಡನೆ ಕಣ್ಣು ಪಿಳಕಿಸುವದನ್ನೂ
ದು ಪರರಿಂದ ಕಲಿಯುವದಿಲ್ಲ. ಈ ಮಾತುಗಳನ್ನು ಅದು ಹುಟ್ಟುವಾಗಲೇ
ಲಿತು ಬಂದಿರುವದು. ಬರಬರುತ್ತ ಬುದ್ಧಿಶಕ್ತಿಯು ಬೆಳೆವಣಿಗೆಯಾದಂತೆ
ಕಾರ್ಯಕಾರಣಭಾವವನ್ನು ಇಲ್ಲವೆ ತಾನು ಮಾಡುವ ಕಾರ್ಯದ ಪರಿಣಾಮವನ್ನು
ಲೋಚಿಸುವ ಶಕ್ತಿಯುಂಟಾದ ಬಳಿಕ ಅದರಲ್ಲಿ ಮತ್ತೆ ಕೆಲವು ಸ್ವಭಾವಗಳು
ಲೆದೋರಬಹುದು. ಆದರೆ ಪಶುಗಳ ಹುಟ್ಟುಗುಣಕ್ಕೂ ಮನುಷ್ಯಪ್ರಾಣಿಯ
ುಟ್ಟುಗುಣಕ್ಕೂ ತಾರತಮ್ಯವಿರುವದು. ಮನುಷ್ಯಪ್ರಾಣಿಯು ಯೋಗ್ಯಾ
ೋಗ್ಯ ವಿಚಾರ ಮಾಡುವ ಶಕ್ತಿಯಿರುವ ಪ್ರಾಣಿಯಾದ್ದರಿಂದ ಅವನ ಕಾರ್ಯ
ಳು ಪಶುಪಕ್ಷಿಗಳಂತೆ ಕೇವಲ ಹುಟ್ಟುಗುಣಗಳನ್ನೇ ಅವಲಂಬಿಸಿಕೊಂಡಿರುವದಿಲ್ಲ.
ವನು ವಿಚಾರಬಲದಿಂದ ತನ್ನ ಹುಟ್ಟುಗುಣಗಳ ಪ್ರಾಬಲ್ಯವನ್ನು ತಗ್ಗಿಸಿ ಅವನ್ನು
ನ್ನ ಅಧೀನಕ್ಕೆ ತಂದುಕೊಳ್ಳಲು ಸಮರ್ಥನಾಗುವನು. ಮನುಷ್ಯನು ತನ್ನ
ುಟ್ಟುಗುಣಗಳನ್ನು ಕೇವಲ ಅಂಧನಾಗಿ ಅನುಸರಿಸುವದಿಲ್ಲ, ಅವನು ಹುಟ್ಟುಗುಣ
ಳ ಮೂಲಕವಾಗಿ ತಾನು ಮಾಡುವ ಕಾರ್ಯಗಳ ಪರಿಣಾಮವು ಏನಾಗಬಹುದು?
ಇದು ತನಗೆ ಹಿತಕಾರಿಯೋ ತನ್ನ ಸಮಾಜಕ್ಕೆ ಹಿತಕಾರಿಯೋ ಎಂಬದನ್ನು ವಿಚಾರ
ಮಾಡಿ ನೋಡಿ ಕೆಲವೊಂದು ನಿರ್ಣಯಕ್ಕೆ ಮುಟ್ಟಿದ ತರುವಾಯ ಆ ತನ್ನ ಹುಟ್ಟು
ುಣಗಳಿಂದ ಆಗುವ ಪ್ರೇರಣೆಯನ್ನು ತನಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವನು.
ಇದಕ್ಕೇ ನಾವು ಆತ್ಮಸಂಯಮನವೆನ್ನುವೆವು. ಈ ಗುಣವನ್ನು ನಾವು ಬಾಲಕರಲ್ಲಿ
ಹುಟ್ಟಿಸಿ ಬೆಳಿಸಬೇಕಾಗುವದು.

ಬುದ್ಧಿಶಕ್ತಿಯ ಬಲದಿಂದಲೂ ಬುದ್ಧಿಪೂರ್ವಕವಾಗಿ ಮಾಡುತ್ತಿರುವ
ಕಾರ್ಯಗಳ ಮೂಲಕವಾಗಿಯೂ ಮನುಷ್ಯನ ಹುಟ್ಟುಗುಣಗಳು ಅವನ ಶೀಲ-
ಷಟ-ಅಭ್ಯಾಸಗಳ ರೂಪವನ್ನು ಹೊಂದುವವು; ಈ ಮಾತು ಒಬ್ಬೊಬ್ಬ ವ್ಯಕ್ತಿಗೂ
ೀಶಕ್ಕೂ ಸಮನ್ವಯಿಸುವದು; ಎಂದು ಮಾನಸಶಾಸ್ತ್ರಜ್ಞರು ವರ್ಣಿಸುವರು.
ಮನುಷ್ಯನು ಬಾಳುವ ಸಮಾಜದ ಪರಿಸ್ಥಿತಿಗೆ ಅನುಗುಣವಾಗಿ ಹುಟ್ಟುಗುಣಗಳು
ಬೆಳೆದು ಅವನ ಶೀಲ ಸ್ವಭಾವಗಳಾಗಿ ಮಾರ್ಪಡುವವು. ಸುಧಾರಿಸಿದ ಸಮಾಜ
ದಲ್ಲಿ ವಾಸಿಸುವ ಮನುಷ್ಯನು ತನ್ನ ಹುಟ್ಟುಗುಣಗಳನ್ನು ಅಂಕಿತದಲ್ಲಿಟ್ಟುಕೊಂಡು
ತನಗೂ ತನ್ನ ಸಮಾಜಕ್ಕೂ ಹಿತಕರವಾದ ರೀತಿಯಲ್ಲಿ ಮಾರ್ಪಡಿಸಿಕೊಳ್ಳುವಂತೆ
ಅಶಿಕ್ಷಿತ ಸಮಾಜದಲ್ಲಿ ಹುಟ್ಟಿ ಬೆಳೆದ ಮನುಷ್ಯನು ತನ್ನ ಹುಟ್ಟುಗುಣಗಳನ್ನು
ಅಂಕಿತದಲ್ಲಿಟ್ಟುಕೊಳ್ಳುವ ಆತ್ಮಸಂಯಮನಶಕ್ತಿಯನ್ನು ಪಡೆದಿರಲಾರನು.

(ಮುಂದೆ ಸಾಗುವದು.)

ಪ್ರಕಟನೆ

ಕೆಳಗೆ ಬರೆದ ಪುಸ್ತಕಗಳು ಧಾರವಾಡ ಕನ್ನಡ ಬುಕ್ ಕಮೀಟಿಯವರಿಂದ ಕೆಳಗೆ ಬರೆದಂತೆ ಮಂಜೂರಾಗಿವೆ

T=ಟೆಕ್ಸ್ಟ L=ಲಾಯಬ್ರರಿ ಬುಕ್ಸು ವಿ=ವಿದ್ಯಾರ್ಥಿಗಳು ಶಿ=ಶಿಕ್ಷಕರು ಟ್ರೇ. ಸಂ.=ಟ್ರೇನಿಂಗ ಸಂಸ್ಥೆಗಳು ಪ್ರಾ. ಶಾ=ಪ್ರಾಥಮಿಕ ಶಾಲೆ

ಸಂಖ್ಯೆ	ಪುಸ್ತಕಗಳ ಹೆಸರು.	ಗ್ರಂಥಕರ್ತರು.	ಪ್ರಕಾಶಕರು	ಬೆಲೆ.	ಯಾತಕ್ಕೋಸ್ಕರ ಮಂ.	ಇ. ಸಾ ರ ನಂ.	ಡಾ. ಸಾ. ರ ನಂ.
೧	ಕನ್ನಡ ಬಾಲ ಬೋಧೆ ೨ನೆ ಆ. ೧೯೩೬	ವಿ. ಎಸ್. ಎಫ್. ಕಟ್ಟೀಮನಿ	ಎಸ್. ಎಫ್. ಕಟ್ಟೀಮನಿ ಹೆ| ಮಾ. ಕನ್ನಡ ಬಾಯ್ಸ ಸ್ಕೂಲ ನಂ. ೧ ಹುಬ್ಬಳ್ಳಿ	ಬಾಯಿಡಿಂಗ ಸಾದಾ ೦–೧೨–೦ ಚಲೋ ಕಾಗದ ೦–೨–೦	ಪ್ರಾ. ಶಾ. ಗಳ T ಬುಕ್ಕಾಗಿ	47|P.7995 / 20-2-37	S·86·c 697·C. / 23-1-1937
೨	ಶ್ರೀನರಸಿಂಹ ರಾಜ ಕ. ಛಂದೋ ರಾಜಮ್ ೧೯೩೬	ಪಂಡಿತ ಜೆ. ರಘು ಪತ್ಯಾಚಾರ್ಯ ಮೈಸೂರು	..	..	ವ್ಯ. ಟ್ರೇ. ಸಂ. ಗಳ ವಿ. ಗಳ ಮತ್ತು ಮಾ.ಶಾ. ವಿ. ಗಳL	ಸದರ 7997 / ಸದರ	S-86-c 702-c / 26-1-1937
೩	ಪಾಕಶಾಸ್ತ್ರ ಭಾ. ೨ ೨ನೆ ಆ. ೧೯೩೬	ಸದರ	ವಿ. ಗುಂಡಾ ಚಾರ್ಯ ಮೈಸೂರ	೦–೧೨–೦	ಪ್ರಾ. ಶಾ. ವಿ. ಗಳ ವ್ಹ. ಟ್ರೇ ಸಂ. ಗಳ ವಿ. ಗಳ ಮಾ. ಶಾ. ಗಳ ವಿ. L	7993 / ಸದರ	S-86-c-700-c / ಸದರ
೪	ಬಾಲಕರ ಸಚಿತ್ರ ನೀತಿ ಕಥಾವಳಿ	ವಿ. ರಾಮರಾವ ಆನವಟ್ಟಿ	ಕೆ. ವ್ಹಿ. ರಾಮಶೆಟ್ಟಿ ಜಯ ಸೊ ೧ರ	೦ ೪–೦	ಪ್ರಾ. ಶಾ. ಗಳ ವಿ. ಗಳ ಮಾ. ಶಾ.	7991 / ಸದರ	ಸದರ 706 / 23-1 1937

೫	ಶ್ರೀ. ತ್ಯಾಗರಾಜ ಸ್ವಾಮಿಯವರ ಚರಿತ್ರೆ ೧ನೆ ಆ. ೧೯೩೬	ಸದರ	ಸದರ	೦-೪-೦	ಟ್ರೇ. ಸಂ. ಗಳ ಹಾಗು ಮಾ. ಶಾ. ವಿ. ಗಳ ಹಾಗು ಪ್ರಾ. ಶಾ. ಗಳ ಶಿ. ರ L	7989 20-2-37	ಸದಂ 707 23-1-37	
	ಭಾಗ್ಯಶ್ರೀ ಭಕ್ತಾ ಗ್ರಂಥ ಲಕ್ಷ್ಮಣ ಮೂರ್ತಿ ೧೯೩೫	ವಿ. ವಾಯ್. ಎಸ್. ಗುಂಡಪ್ಪ	ವಾಯ್. ಎಸ್. ಗುಂಡಪ್ಪ ಶ್ರೀ ಬ್ರಹ್ಮಚೈತನ್ಯ ಸ್ವೀಕಸರಿ ಮೂರ್ತಿ ಚಿಂತಾಮಣಿ	೦-೬-೦	ಪ್ರಾ. ಶಾ. ಗಳ ಹಾಗು ಟ್ರೇ ಸಂ. ಗಳ ಮತ್ತು ಮಾ. ಶಾ. ಗಳ ವಿ. ಗಳ L	7987 20-2-37	ಸದರ 703 26-1-37	
	ಬಾಲಕರ ಸಚಿತ್ರ ನೀತಿ ಕಥಾಮಳಿ ತಿದ್ದಿ ಬೆಳಿಸಿದ ೩ನೆ. ಆ. ೧೯೩೬	ವಿ. ರಾಮರಾವ ಆನವಟ್ಟಿ ವಿದ್ವಾನ್	ಆಸ್ಥಾನ ಮೈಸೂರ	ಕ. ವ್ಹಿ. ರಾಮಶೆಟ್ಟಿ ಜಯಸ್ಟೋರ್ಸ ಮೈಸೂರ	೦-೩-೦	ಪ್ರಾ. ಶಾ. ಗಳ ಹಾಗು ಮಾ. ಶಾ. ವಿ. ಗಳ L	7985 20-2-37	ಸದರ 704 23-1-37	
೮	ಗೃಹವೈದ್ಯ ಭಾಗ ೧ ೫ನೆ ೧೯೪೪	ವಿ. ಆರ್. ಟಿ. ಸಿದ್ದೇಶ್ವರ ನಂದಿನಿ	ಶ್ರೀ. ಶಿರ್ಶಿ ಕಾರ್ಯಾಲಯ	ಎಸ್. ವಿ. ಭಡತಿ ನಂದಿನಿ ಗೋಕರ್ಣ	೦-೧೦-೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಶಿ. ರ ಮತ್ತು ವ್ಹ. ಟ್ರೇ. ಸಂ. ಗಳ ಶಿ. ರ L	7983 20-2-87	ಸದರ 698 26-1-37	

ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರು	ಪ್ರಕಾಶಕರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಇ. ಸಾರ ನಂ	ಡಾಯರೆಕ್ಟರ ಸಾರನಂ
೯	ಕರ್ನಾಟಕ ಕೃತಿ ರತ್ನ ಮಾಲಾ ಭಾ. ೧. ೧೯೩೩	ಎಂ. ಆನವಟ್ಟಿ ರಾಮರಾವ ಆಸ್ಥಾನ ವಿದ್ವಾನ ಮೈಸೂರ	ಆನವಟ್ಟಿರಾಮರಾವ ಮೈಸೂರ	೧–೦–೦	ಪ್ರಾ. ಶಾ.ಗಳ ಶಿ. ರ ಹಾಗು ಟ್ರೀ. ಸಂ. ಗಳ ವಿ. ಗಳ ಹಾಗು ಶಿ.ರ. ಮಾ. ಶಾ.ಗಳ ಶಿ. ರ L	7981 20-2-37	,, 708 23-1-37
೧೦	'ವಾಲಿ' ೧೯೩೩	ಪಂ. ಶ್ರೀಕಂಠಶಾಸ್ತ್ರಿ ಕ. ಪಂ. ಮಹಾರಾಜಾ ಗ॥ ಹೈಸ್ಕೂಲ ಮೈಸೂರ	ಗ್ರಂಥಕರ್ತರು	೦–೮–೦	ವ್ಹ. ಟ್ರೀ. ಸಂ. ಗಳ ವಿ. ಗಳ ಮಾ. ಶಾ. ವಿ ಗಳ L	7979 20–2–37	,, 709 23–1–37
೧೧	ಮಾಸ ಮಾಹಾತ್ಮ್ಯ ಶಕೆ ೧೮೫೦	ಎಂ. ರಾಮ ತಿರುಮಲಭಟ್ಟ ಸಿದ್ದೇಶ್ವರ ಶರ್ಮ	ಜಿ. ಎಸ್. ಭಡತಿ ನಂದಿನಿ ಕಾರ್ಯಾಲಯ ಗೋಕರ್ಣ	೧–೦–೦	ಪ್ರಾ. ಶಾ. ಗಳ ಹಾಗು ಟ್ರೀ. ಸಂ. ಗಳ ಮಾ. ಶಾ. ಗಳ ಶಿ. ರ L	7977 20-2-37	ಸದರ 710 23-1-37
೧೨	ಬಾಲಕರ ಸಚಿತ್ರ ನೀತಿಕಥಾವಳಿ	ಆನವಟ್ಟಿರಾಮರಾವ ಆಸ್ಥಾನ ವಿದ್ವಾನ	ಕೆ. ವ್ಹಿ. ರಾಮಶೆಟ್ಟಿ ಜಯಸಚ್ಚಿದಾ	೦-೩-೦	ಪ್ರಾ. ಶಾ. ಗಳ ಮಾ. ಶಾ. ಗಳ	7975 20–2–37	ಸದರ 705 23–1–37

	ಗಣಿ	ರಂಗಭೂಮಿಯ ಬೆಟಗೇರಿ	ಎಸ್. ಬಿ. ಡಿ. ಶಿವ ಲಿಂಗಯ್ಯ ಕರ್ನಾಟಕ ಸಾಹಿತ್ಯ ಮಂ. ಧಾರವಾಡ	೧ ೮-೦ ಸಾ. ಬಾ. ೨-೮-೦ ಕ್ಯಾ. ಬಾ.	ವ್ಹ. ಟ್ರೀ. ಸಂ. ಗಳ ಹಾಗು ಪ್ರಾ. ಶಾ. ಗಳ ಮತ್ತು ಮೂ. ಶಾ. ಗಳ ವಿ. ಗಳ L	7865 20-2-37	ಸದರ ೬೪೨ 26-1-37
೧೪	ಕರ್ನಾಟಕ ವೇಣೀ ಸಂಹಾರ ನಾಟಕಂ	ಪಂ. ರಘು ಪತ್ಯಾಚಾರ್ಯ ಪೊಂಟಿಕೊಪ್ಪಳ ಕವಿ. ಮೈಸೂರು	ಆರ್. ಗುಂಡಾ ಚಾರ್ಯ ಮೈಸೂರು	೧-೪-೦	ಪ್ರಾ. ಶಾ. ಗಳ ಟ್ರೀ. ಸ. ಗಳ ಹಾಗು ಮೂ. ಶಾ. ಗಳ ಶಿ. ರ L	8180 4-3-37	ಸದರ 701 23-2-37

ಸೂಚನೆ

ಸೈಯದ ಹೂಡುಲ್ಲಾ
ಎ. ಇ. ದ. ಭಾ.

ದಿವಸ ಹಾಗು ತಾರೀಖು	ವೇಳೆ		ವಿಷಯಗಳು	ಗುಣಗಳು	ಟಿಪ್ಪಣಿ
	ಇಂದ	ವರೆಗೆ			
ಸೋಮವಾರ	೧೦	೧೧	ಉಮೇದವಾರರ ಹಾಜರಿ ತಕ್ಕೊಳ್ಳುವದು		
೫-೪-೩೭					
ಸದರ	೧೧	೧	೨ನೆಯ ಸದರು (ಅ) ಹಾಗು (ಬ) ನಿಬಂಧ ಅಥವಾ ರಿಪೋರ್ಟ ಮತ್ತು ಕೈಬರಹ	(ಅ) ೫೦ (ಬ) ೨೫	
ಸದರ	೨	೫	೫ನೆಯ ಸದರು ಆರೋಗ್ಯವಿಜ್ಞಾನ (ಶರೀರಶಾಸ್ತ್ರ) ಶಾಸ್ತ್ರೀಯ ವಿಷಯ (೭ನೆಯ ಪುಸ್ತಕದಲ್ಲಿದ್ದಷ್ಟು)	೧೦೦	
ಮಂಗಳವಾರ	೧೧	೨	೩ನೆಯ ಸದರು (ಅ) ಗಣಿತ	೧೨೦	
೬-೪-೩೭					
ಸದರ	೩	೬	೪ನೆಯ ಸದರು (ಅ) ಹಾಗು (ಬ) ಇತಿಹಾಸ (ಭೂಗೋಲ)	(ಅ) ೫೦ (ಬ) ೫೦	
ಬುಧವಾರ	೧೧	೨	೩ನೆಯ ಸದರು (ಬ) ಹಾಗು (ಕ) ಭೂವಿಮಿತಿ ಮತ್ತು ದೇಶೀಯ ಜಮಾ ಖರ್ಚು	ಬ (೫೦) (ಕ) ೫೦ (ಬ) ೪೫; (೨೫ ಗದ್ಯ ೨೦ ಪದ್ಯ) (ಕ) ೩೦	
೭-೪-೩೭					
ಸದರ	೩	೬	೧ನೆಯ ಸದರ (ಬ) ಹಾಗು (ಕ) ಭಾಷಾವಿಷಯ		
ಗುರುವಾರ	೭	೧೧	ಬಾಯಿ ಪರೀಕ್ಷೆ ೧ನೆ ಸದರು (ಅ) ಹಾಗು (ಡ) ಮೊದಲು	(ಅ) ೩೦ (ಡ) ೨೦	

ದಿವಸ ಹಾಗು ತಾರೀಖು	ವೇಳೆ ಇಂದ	ವರೆಗೆ	ವಿಷಯ	ಗುಣ	ಶಕಾ
ಸೋಮವಾರ ೫-೪-೩೭ ಸದರ	೧೦	೧೧	ಉಮೇದವಾರರ ಹಾಜರಿ ತಕ್ಕೊಳ್ಳುವದು		
ಸದರ	೧೧	೧	೨ನೆ ಸದರು (ಅ) ಹಾಗು (ಬ) ನಿಬಂಧ ಅಥವಾ ರಿಪೋರ್ಟ ಹಾಗು ಕೈ ಬರಹ	ಅ ೫೦ ಬ ೨೫	*
ಸದರ	೨	೪	೫ನೆ ಸದರು (ಅ) ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು ಹಾಗು (ಬ) ಆರೋಗ್ಯಶಾಸ್ತ್ರ	ಅ ೨೫ ಬ ೨೫	
ಮಂಗಳವಾರ ೬-೪-೩೭ ಸದರ	೧೧	೨	೩ನೆ ಸದರು (ಅ) ಗಣಿತ (ಬ) ಕ್ಷೇತ್ರಫಲ (ಕ) ದೇಶೀಯ ಜಮಾ ಖರ್ಚು	ಅ ೫೦ ಬ ೨೫ ಕ ೨೫	೧೯೫೦
	೩	೬	೪ನೆ ಸದರು (ಅ) ರಾಜ್ಯದಾಡಳಿತ (ಬ) ಸಹಕಾರ (ಕ) ಭೂಗೋಲ	ಅ ೨೫ ಬ ೨೫ ಕ ೫೦	೧೯೫೧
ಬುಧವಾರ ೭-೪-೩೭ ಸದರ	೧೧	೨	೬ನೆ ಸದರು (ಅ) ಒಕ್ಕಲತನ ಮತ್ತು (ಬ) ಪ್ರಕೃತಿಪಾಠ	ಅ ೩೫ ಬ ೫೦	೧೯೫೨
	೩	೬	೭ನೆ ಸದರು (ಬ) ಹಾಗು (ಕ) ಭಾಷಾವಿಷಯ	ಬ ೪೫ ಕ ೫೦	೧೯೫೩
ಗುರುವಾರ ೮-೪-೩೭ ಲ-೪-೩೭ ಸದರ	*	*	ಪ್ರಾಯೋಗಿಕ ಪರೀಕ್ಷೆ ೭ನೆ ಸದರು ಸದರ ೮ನೆ ಸದರು	೫೦ ೩೫	

ಸೂ— ೧೦ನೆ ಸದರ (ಅ) ಹಾಗು (ಡ) * ಬಾಯಿಪರೀಕ್ಷೆಯು ಪ್ರತಿ ದಿವಸ ಬರಹಪರೀಕ್ಷೆ ಮುಗಿದ ಮೇಲೆ ಸಾಯಂಕಾಲದಲ್ಲಿ ತೆಗೆದುಕೊಳ್ಳಲ್ಪಡುವದು.
ಪರಸ್ಥಳದವರ ಪರೀಕ್ಷೆ ಮೊದಲು ಪ್ರಾಯೋಗಿಕ ಪರೀಕ್ಷೆಯ ವೇಳೆಯನ್ನು ಪ್ರಿನ್ಸಿಪಾಲರೂ ಅಗ್ರಿಕಲ್ಚರಲ್ ಓವರ್ಸಿಯರರೂ ಕೂಡಿ ಗೊತ್ತುಪಡಿಸುವರು.
ಉಮೇದವಾರರು ಪರೀಕ್ಷೆಯು ಮೊದಲನೆ ದಿವಸ ಗೊತ್ತಾದ ವೇಳೆಗಿಂತ ೧ ತಾಸು ಮೊದಲೇ ಪರೀಕ್ಷೆಯ ಹಾಲಿನಲ್ಲಿ ಹಾಜರ ಇರಬೇಕು.

೧೯೬೭ನೆಯ ಇಸ್ವಿಯ ಏಪ್ರಿಲ ತಿಂಗಳಿನಲ್ಲಾಗುವ ಉರ್ದು ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ

ದಿವಸ ಹಾಗು ತಾರೀಖು	ವೇಳೆ		ವಿಷಯ	ಗುಣಗಳು	ಟಿಪ್ಪಣಿ
	ಇಂದ	ವರೆಗೆ			
ಸೋಮವಾರ ೫-೪-೬೭	೧೦	೧೧	ಉಮೇದವಾರರ ಹಾಜರಿ ತಕ್ಕೊಳ್ಳುವದು		
ಸದರ	೧೧	೧	೨ನೇಯ ಸದರು (ಅ) ಹಾಗು ಬ* ನಿಬಂಧ ಅಥವಾ ರಿಪೋರ್ಟು ಹಾಗು ಕೈಬರಹ ದೇ*ಶಭಾಷೆಯಲ್ಲಿ ವ್ಹರ್ನಾಕ್ಯುಲರ ಉರ್ದು ಉಮೇದವಾರರಿಗೆ ಉರ್ದು ಭಾಷೆಯಲ್ಲಿ ಉರ್ದು ವ್ಹರ್ನಾಕ್ಯುಲರ ಉಮೇದವಾರರಿಗೆ	ಅ ೫೦ ಬ ೨೫	
ಸದರ	೨	೫	೫ನೆ ಸದರು ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು	೧೦೦	
ಮಂಗಳವಾರ ೬-೪-೬೭	೧೧	೨	೩ನೆ ಸದರು (ಅ) ಗಣಿತ	೧೦೦	
ಸದರ	೩	೬	೪ನೆ ಸದರು (ಅ) ಹಾಗು (ಬ) ಇತಿಹಾಸ ಮತ್ತು ಭೂಗೋಲ	ಅ. ೫೦ ಬ ೫೦	
ಬುಧವಾರ	೧೧	೨	೩ನೆಯ ಸದರು (ಬ) ಹಾಗು (ಕ) ಭೂಮಿತಿ ಹಾಗು ದೇಶೀ	(ಬ) ೫೦ ಕ ೫೦	

ದಿವಸ ಹಾಗು ತಾರೀಖು	ಇಂದ	ವರೆಗೆ	ವಿಷಯ	ಗುಣಗಳು	ಟಿಪ್ಪಣಿ
ಗುರುವಾರ ೮-೪-೩೭	೭	೯	೬ನೆ ಸದರು (ಅ) ಉರ್ದು ಅಥವಾ ದೇಶಭಾಷೆ [೪೦ ಬರಹದ ಪರೀಕ್ಷೆಗೆ ೧೦ ಬಾಯಿ ಪರೀಕ್ಷೆಗೆ]	(ಅ) ೫೦	
ಸದರ	೯-೧೫	೧೦	ಬಾಯಿ ಪರೀಕ್ಷೆ ೬ನೆ ಸದರ (ಅ)		
	೧೦	೧೧	,, ,, ೬ನೆ ಸದರು (ಕ)	ಕ. ೧೫	
ಸದರ	೨	೩	೬ನೆಯ ಸದರು (ಬ) ಪತ್ರಬರಹ ಅಥವಾ ರಿಪೋರ್ಟು ಉರ್ದು ಭಾಷೆಯಲ್ಲಿ ವ್ಹರ್ನಾಕ್ಯುಲರ ಉರ್ದು ಉಮೇದವಾರರಿಗೆ ದೇಶಭಾಷೆಯಲ್ಲಿ ಉರ್ದುವ್ಹರ್ನಾಕ್ಯುಲರ ಉಮೇದವಾರರಿಗೆ	ಬ. ೩೫	
ಸದರ	೩-೧೫	೬	ಬಾಯಿ ಪರೀಕ್ಷೆ ೧ನೆ ಸದರಿನ (ಅ) ಹಾಗು (ಡ) ಸ್ಥಳಿಕ ಉಮೇದವಾರರಿಗೆ ಮಾತ್ರ	ಅ. ೩೦ ಡ. ೨೦	

ಸೂ— ಪ್ರತಿದಿವಸ ಬರಹ ಪರೀಕ್ಷೆ ಮುಗಿದ ಮೇಲೆ ಸಾಯಂಕಾಲದಲ್ಲಿ ಪರಸ್ಥಳದ ಉಮೇದವಾರರ ೧ನೇ ಸದರರಿನ (ಅ) ಹಾಗು (ಡ) ಬಾಯಿ ಪರೀಕ್ಷೆಯು ತೆಗೆದುಕೊಳ್ಳಲ್ಪಡುವದು. ಉಮೇದವಾರರು ಮೊದಲನೆ ದಿವಸ ಪರೀಕ್ಷೆ ನಡೆಯುವ ಹಾಲಿನಲ್ಲಿ ೧ತಾಸು ಮೊದಲು ಹಾಜರ ಇರಬೇಕು.

೧೯೩೬ನೆಯ ಇಸ್ವಿಯ ಎಪ್ರಿಲ ತಿಂಗಳಿನಲ್ಲಾದ ಧಾರವಾಡ ಟ್ರೇನಿಂಗ ಸ್ಕೂಲಿನ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ವಿದ್ಯಾರ್ಥಿಗಳು ಹೆಚ್ಚು ಗುಣಗಳನ್ನು ಪಡೆದು ಇನಾಮು ದೊರಕಿಸಿರುವರು.

೩ನೆಯ ವರುಷ

ಚಾಟಫೀಲ್ಡ ಮೆಮೋರಿಯಲ್ ಪ್ರಾಯಿಝು

೧ ಎಲ್. ಎ. ತಿರಹಟ್ಟಿ— ಒಟ್ಟಿನಲ್ಲಿ ಮೊದಲನೆಯ ನಂಬರು .. ಪಡೆದದ್ದಕ್ಕಾಗಿ ೧೬ ರೂ.

ಜಾಯಿಲ್ಸ ಪ್ರಾಯಿಝು

೨ ಎಲ್. ಎ. ತಿರಹಟ್ಟಿ— ಶಿಕ್ಷಣದಲ್ಲಿ ಮೊದಲನೆಯ ನಂಬರು .. .. ಪಡೆದದ್ದಕ್ಕಾಗಿ ೧೬ ರೂ.

ಜನರಲ್ ಪ್ರಾಯಿಝು

೩ ಎಮ್. ಎಫ್. ಒಂಗಾರಿ— ಕನ್ನಡ ವಿಷಯದಲ್ಲಿ ಮೊದಲನೆಯ ನಂಬರು ಪಡೆದದ್ದಕ್ಕಾಗಿ ೧೨ ರೂ.

೨ನೆಯ ವರ್ಷ

ಸರ ಜೇಮ್ಸ ಮೌಂಟಥ್ ಪ್ರಾಯಿಝು

೪ (ಅ) ಎಸ್. ವಾಯ್. ಕಮಡೊಳ್ಳಿ— ಒಟ್ಟಿನಲ್ಲಿ ಮೊದಲನೆಯ ನಂ. ಪಡೆದದ್ದಕ್ಕಾಗಿ ೧೫ ರೂ.

(ಬ) ಜಿ. ಸಿ. ಹಿರೇಮಠ— ಶಿಕ್ಷಣದಲ್ಲಿ ಮೊದಲನೆಯ .. ನಂಬರು ಪಡೆದದ್ದಕ್ಕಾಗಿ ೧೫ ರೂ.

೧ನೆಯ ವರ್ಷ

ಜನರಲ್ ಪ್ರಾಯಿಝು

೫ (ಅ) ಬಿ. ಎಸ್. ತಿವಲಿಂಪಿಗೇರ— ಒಟ್ಟಿನಲ್ಲಿ ಮೊದಲನೆಯ .. ನಂ. ಪಡೆದದ್ದಕ್ಕಾಗಿ ೧೨ ರೂ.

(ಬ) ಕೆ. ಎನ್. ಬಾಗೇವಾಡಿ— ಶಿಕ್ಷಣದಲ್ಲಿ ಮೊದಲನೆಯ .. ನಂ. ಪಡೆದದ್ದಕ್ಕಾಗಿ ೧೨ ರೂ.

ಟ್ರೇ. ಸ್ಕೂಲ ಧಾರವಾಡ. | ಡಿ. ವಿ. ಕಾಳಿ, ಹೆಡ್‌ಮಾಸ್ತರ ಟ್ರೇ. ಸ್ಕೂ. ಧಾರ

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನರ್ಸ್), ಬಿ. ಟಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಸು|| ಡಾಯರೆಕ್ಟರಸಾಹೇಬರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತಕವಾಗಿ ಬರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚುಕಟ್ಟು ಪಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ

ಶಿರ್ಸಿ, ಉ. ಕಾನಡಾ

ಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು: ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ವ್ಹ. ಫಾ. ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೫ನೆಯ ೫ನೆಯ ಇಯತ್ತೆ ಹಾಗು ಸ್ಕಾಲರಶಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಮಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಪರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಸಿದ್ದ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ.

Reg. No. B. 3691

ಇಂತಹ ಇನ್ನೊಂದು ಪುಸ್ತಕವೇ ಇಲ್ಲ!
ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ

ಕನ್ನಡ ನುಡಿಯ ಹುಟ್ಟು.

ಬರೆದವರು : ಶಂ. ಬಾ. ಜೋಶಿ

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಆಳವು ಗೊತ್ತಿಲ್ಲದ್ದ
ಅಥವಾ ಯೋಗ್ಯ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒದ್ದಾ
ಇನ್ನು ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ ನು
ನುಟ್ಟು ಗೊತ್ತಾಗಿ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.
ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾಗ

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೇರಿ, ಧಾರವಾಡ

೫-೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ಸಂ.	ವಿಷಯ	ಪುಟ.
೧.	ನೂತನ ವರ್ಷಾರಂಭ	೧
೨.	ಹಳ್ಳಿಯ ಜೀವನ	೨
೩.	ಶಿಶುಶಾಲೆಗಳು	೧೨
೪	ಭೂಗೋಲವ ಮಾದರಿಗಳು	೧೭
೫	ಭೂಗೋಲ ಶಿಕ್ಷಣದ ವಿಷಯವಾಗಿ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳಿಂದ ಮಾಡಿಸಿದ ಮಾದರಿಗಳು	೨೪
೬	ಜಪಾನ ದೇಶದಲ್ಲಿ ಬೌದ್ಧಮತ	೨೮
೭.	ಕನ್ನಡ ವರ್ಷಪ್ರಾಯಿಕ ಪರೀಕ್ಷೆ (೧೯೩೪)	೩೨
೮.	ಪತ್ರಗಳ ಸಾರಾಂಶ (ಕವರಪುಟ ೩)	

Printed by K. B. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರವ ಶಾಲೋಪಯೋಗಿ ಪುಸ್ತಕಗಳು ಸಿಗು
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬ

	ರೂ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦–
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಕೃತ)	೦–
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦–
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧–
ಲಘುವ್ಯಾಕರಣ (ವೈ. ಕಟ್ಟೀಕೃತ)	೦–
ದೇಶೀ ಜನೂಖಿರ್ದು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦–
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦–
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦–
,, ೩ನೇ ,,	೦–
,, ,, ೪ನೇ ,,	೦–
ಅಂಕಗಣಿತ (ಗಾಂವಕರಕೃತ) ೩ನೇ ,,	೦–
ಧಾರವಾಡ ಜಿಲ್ಲಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦–
ವಿಜಾಪೂರ ,, ,, (,,) ೩ನೇ ,,	೦–
ಧಾರವಾಡ ಜಿಲ್ಲಾ ,, (ಕುರಡೀಕೃತ)	೦–
ಹಿಂದುಸ್ಥಾನ ಭೂಗೋಲು (ಮಗದಾಲಕೃತ)	೦–
ನುದಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦–
ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರಿಕೃತ)	೦–
ಎಲ್‌ಎಲ್. ಬಿ. ಸ್ಟೂ ಶಿಷ್ಟಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–
ಭೂಮಿತಿ (ಚಂದಾವರಕರ ಕೃತ)	೦–
ಸರಸ್ವತೀ ವಿಜಯ (ಬೂದೀಹಾಳಕೃತ)	೦–

ಪತ್ರಿಕೆ:— ವಿ. ಆರ್. ಶಿವನಾಗಪ್ಪಾ,
ಬುಕ್‌ಸೇಲರ, ಹುಬ್ಬ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ,

ಪ ೭೬ | ಏಪ್ರಿಲ ೧೯೫೭ | ವರ್ಷ ೯ ಸಂ. ೧

ನೂತನ ವರ್ಷಾರಂಭ

ಪ್ರಾಥಮಿಕ ಶಿಕ್ಷಣದ ಚಾಲಕತ್ವವು ನಮ್ಮ ಕಡೆಗೆ ಒಂದು ೯ ತಿಂಗಳು ಸ. ಒಂದಿನ ಅನುಭವಿಕರೂ ಸಮರ್ಥರೂ ಆದ ಸಂಪಾದಕರ ಸ್ಥಾನೀಯ ನಾವೂ ನುಂಡಿಟು ಕೊಂಡಿರುವೆನೆಂದು ಹೇಳಬೇಕಾಗಿಲ್ಲ. ಈ ಏಪ್ರಿಲ್ ಸಂಚಿಕೆಯಿಂದ ಹೊಸ ವರ್ಷವು ಪ್ರಾರಂಭವಾಗುವದರಿಂದ ಕಳೆದ ಲ್ಲಿ ನಡೆದ ಕಾರ್ಯಗಳ ಸಿಂಹಾವಲೋಕನ ಮಾಡುವದು ಅಪ್ರಸ್ತುತವೆನಿಸ

ಅವಧಿಯಲ್ಲಿ ಶಿಕ್ಷಣ ವಿಷಯಕ ತಾತ್ವಿಕ ವಿವೇಚನೆಯಿರುವ ಮುಖ್ಯ. ಶಿಕ್ಷಕಾಲೇಗಳು. ನಮ್ಮದೇಶದ ಶಿಕ್ಷಣದ ಇತಿಹಾಸ, ಶಿಕ್ಷಣದಲ್ಲಿ ಪ ಮಹತ್ವ, ಪ್ರಶ್ನೆಗಳೂ ಉತ್ತರಗಳೂ ಮುಂತಾದ ಹಲವು ಮಹತ್ವದ ನ್ನು ಪ್ರಕಟಿಸಿರುವದಲ್ಲದೆ ಶಿಕ್ಷಕರ ನಿತ್ಯದ ವ್ಯವಸಾಯಕ್ಕೆ ಪ್ರತ್ಯಕ್ಷ ಸಿದ ಪಾಠದ ಟಿಪ್ಪಣಿಗಳು. ಪಾಠದ ಶಿಕ್ಷಣ ಮುಂತಾದ ಲೇಖನಗಳನ್ನೂ ರಾಗಿವೆ. ಪ್ರಾಥಮಿಕ ಶಾಲೆಗಳಲ್ಲಿ ಎಲ್ಲೆಲ್ಲಿ ಏನು ನಡೆಯುವೆ ಎಂಬುದು ಗಳಿಗೆ ತಿಳಿದಿರುವದು. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯ ಪ್ರಯತ್ನ ಪ್ರಕಾರ

ಗಳಿಗೆ ಪ್ರತಿ ಸಂಚಿಕೆಯಲ್ಲಿಯೂ ತಕ್ಕಷ್ಟು ಅವಕಾಶವನ್ನು ಕಲ್ಪಿಸಿ ಕೊಡಲಾಗಿ
ಶಿಕ್ಷಕ ವರ್ಗದ ತಿಳಿವಳಿಕೆಗೆ ಬರುವದು ಅವಶ್ಯವಾಗಿರುವಂಥ ಸರಕಾರದ ಪ್ರಕ
ಗಳನ್ನಂತೂ ನಾವು ದುರ್ಲಕ್ಷಿಸುವ ಸಂಭವವೇ ಇಲ್ಲ.

ಶಿಕ್ಷಕರ ನಿತ್ಯದ ವ್ಯವಸಾಯಕ್ಕೆ ನೆರವಾಗುವದೇ ನಮ್ಮ ಮುಖ್ಯ ಧ್ಯೇ
ವಾಗಿರುವದರಿಂದ ಪ್ರಾಥಮಿಕ ಶಾಲೆಗಳಲ್ಲಿ ನಡೆದಿರುವ ವಿಶಿಷ್ಟ ಕಾರ್ಯಕ್ರಮ
ಶಿಕ್ಷಕ ವರ್ಗಕ್ಕೆ ತಮ್ಮ ನಿತ್ಯ ಕ್ರಮದಲ್ಲಿ ಕಂಡುಬರುವ ಅನುಭವಗಳು, ತೊಂ
ಗಳು, ಮುಂತಾದವುಗಳನ್ನು ಕುರಿತು ಹೆಚ್ಚು ಲೇಖಗಳು ಪ್ರಕಟವಾಗಬೇಕೆಂ
ನಮ್ಮ ಹಂಬಲವಿರುವದಾದರೂ ಈ ಕಾರ್ಯವು ಶಿಕ್ಷಕವರ್ಗವನ್ನೇ ಅವ
ಸಿರುವದೆಂಬದನ್ನು ನಾವು ಹೇಳಬೇಕಾಗಿಲ್ಲ. ನಮ್ಮ ವಾಚಕರಲ್ಲಿ ಬಹುಸಂಖ್ಯಾ
ವಾದ ಪ್ರಾಥಮಿಕ ಶಿಕ್ಷಕ ವರ್ಗವು ಮುಂದಿನ ವರ್ಷದಲ್ಲಿ ಈ ಮಾತಿನ ಕ
ಲಕ್ಷ್ಯವೊರೈಸಿ ಹೆಚ್ಚು ಯೋಗ್ಯವಾದ ಲೇಖನಗಳನ್ನು ಕಳುಹಿಸುವದರಮೂ
ತಮ್ಮ ಮೇಲಿರುವ ಈ ಹೊಣೆಗಾರಿಕೆಗೆ ತಕ್ಕ ಸಮಾಧಾನವನ್ನು ವ್ಯಕ್ತಪಡಿ
ರೆಂದು ನಂಬಿರುವೆವು.

ಹಳ್ಳಿಯ ಜೀವನ

ಕಳೆದ ತಿಂಗಳಲ್ಲಿ ಒಕ್ಕಲತನದ ಖಾತೆಯಲ್ಲಿ ಅಫಿಜ್ಞರಾದ ಕಾರ್ಯಕರ್ತರೆ
ಕೊಂಡಿದ್ದ ಶ್ರೀ. ವಿ. ಸೀ. ಪಾವಟೆಯವರು ಟ್ರೇನಿಂಗಸ್ಕೂಲಿನ ವಿದ್ಯಾರ್ಥಿ
ಗಾಗಿ ಈ ವಿಷಯದಮೇಲೆ ಬಹು ಸರಸವಾಗಿ ಉಪನ್ಯಾಸಮಾಡಿದರು. ಹಳ್ಳಿ
ಸುಧಾರಣೆಯ ಮಹತ್ವವನ್ನು ತಿಳಿದು ಕೆಲಸ ಮಾಡಬೇಕಾಗಿರುವ ಈ ಕಾಲ
ಇಂತಹ ವಿಚಾರಪರಿಪ್ಲುತವಾದ ವಿಷಯವನ್ನು ನಮ್ಮ ವಾಚಕರು ತಿಳಿದಿರಲೆ
ವಿಚಾರದಿಂದ ಇಲ್ಲಿ ಪ್ರಕಟಿಸಿರುವೆವು.

ಶ್ರೀ. ಪಾವಟೆಯವರು ಒಕ್ಕಲತನದ ಶಾಲೆಯ ಹೆಡ್‌ಮಾಸ್ತರರಾಗಿಯ
ಒಕ್ಕಲತನದ ಶಾಲೆಗಳ ಇನ್‌ಸ್ಪೆಕ್ಟರರಾಗಿಯೂ ಕೆಲಸಮಾಡಿದ ಬಹುಕಾ
ಅನುಭವದಿಂದಲೂ ಸದ್ಯಕ್ಕೆ ನಮ್ಮ ಭಾಗದ ಕಾಟನ್ ಸುಪರಿಂಟೆಂಡೆಂಟರ
ಕೆಲಸ ಮಾಡುತ್ತಿದ್ದು ಹಳ್ಳಿಯ ಅನುಭವವನ್ನೂ ರೈತರ ಜೀವನವನ್ನೂ ಸ
ಸಮಿಕ್ಷ್ಮವಾಗಿ ನಿರೀಕ್ಷಿಸಿದ ಜ್ಞಾನದಿಂದಲೂ ಅವರ ಉನ್ನತಿಯ ದಾರಿಯ

ಶಿಸಿ ತುಂಬಾ ಕಳಕಳಿಯಿಂದ ಮಾತಾಡಿದರು. ಅವರ ಭಾಷಣವು ಶಾಸ್ತ್ರ ಅನುಭವಗಳ ಸಮಾವೇಶದಿಂದ ಜಹು ಸರಸವಾಗಿರುವಷ್ಟೇ ವಿಚಾರಣೀ ಆಗಿದ್ದಿತು. ಅವರ ಅವ್ಯಾಹತವಾದ ಅರ್ಥಪೂರ್ಣವಾದ ವಾಗ್ಸೃಝರಿ ಕೇಳಿ ನೆರೆದವರೆಲ್ಲರಿಗೂ ತುಂಬಾ ಸಂತೋಷವಾಯಿತು.

೧. **ನಮ್ಮ ದೇಶವು ಹಳ್ಳಿಗಳ ದೇಶವು:**— ಮುಂಬಯಿ ಇಲಾಖೆಯಲ್ಲಿ ಕ್ಕಿಂತ ಕಡಿಮೆ ಜನ ವಸತಿ ಇರುವ ಹಳ್ಳಿಗಳು ೧೭ ಸಾವಿರ ಇರುವವು. ಐದುನೂರರಿಂದ ಐದು ಸಾವಿರದ ವರೆಗಿನ ಜನಸಂಖ್ಯೆಯುಳ್ಳ ಊರುಗಳು ಸಾವಿರ, ಐದು ಸಾವರದಿಂದ ಐವತ್ತು ಸಾವಿರದವರೆಗೆ ಜನರಿರುವ ಶಹರ ುಮಾರು ೨೦೦ ಇದ್ದರೆ ಐವತ್ತು ಸಾವಿರಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆ ರ ಪಟ್ಟಣಗಳು ಹೆಚ್ಚು ಕಡಿಮೆ ೨೦ ಮಾತ್ರ ಇರುವವು. ಆದುದರಿಂದ ಾವಿರಕ್ಕಿಂತ ಕಡಿಮೆ ಜನ ವಸತಿಯಿರುವ ಎಲ್ಲ ಊರುಗಳ ಜನಸಂಖ್ಯೆಗಳು ಸಂಖ್ಯೆಯಲ್ಲಿ ೧೦೦ಕ್ಕೆ ೭೯ ರಷ್ಟು ಆಗುವದೆಂದು ಗೊತ್ತಾಗಿದೆ. ಉಳಿಕ್ಕು ು ಜನರು ಮಾತ್ರ ಶಹರವಾಸಿಗಳೆನಿಸಿಕೊಂಡಿರುವರು. ಉಳಿಕ್ಕ ಇಲಾಖೆಗಳ ತಿಯೂ ಇದೇರೀತಿಯಾಗಿರುವದು. ಪೋಸ್ಟಆಫೀಸು, ಉಗೆಬಂಡಿಯ ದಾರಿ, ರಾಜಮಾರ್ಗಗಳು ಇವುಗಳ ಸಂಪರ್ಕವನ್ನರಿಯದ ಹಳ್ಳಿಗಳು ಹಿಂದುಸ್ತಾನ ುದುಲಕ್ಷ್ಯದಷ್ಟಿರುವವೆಂದು ಒಕ್ಕಲತನದ ಸುಧಾರಣೆಯ ಮಾರ್ಗಗಳನ್ನು ಕೊಳ್ಳಲು ಬಂದ ರಾಯಲ್ ಕಮೀಶನ್ನಿನವರು ಪ್ರಕಟಿಸಿರುವರು. ಅವರ ್ಯದಂತೆ ನಿಜವಾಗಿ ಶಹರವಾಸಿಗಳೆನಿಸಿಕೊಂಡವರು ನಮ್ಮ ದೇಶದ ಜನಸಂಖ್ಯೆಯಲ್ಲಿ ಕೇವಲ ೧೦೦ಕ್ಕೆ ೧೧ ರಷ್ಟು ಮಾತ್ರ ಇರುತ್ತಾರೆಂದು ಗಿದೆ. ಆದುದರಿಂದಲೇ ಹಿಂದುಸ್ತಾನವು ಹಳ್ಳಿಗಳ ದೇಶವೆನಿಸಿಕೊಂಡಿ

ನಮ್ಮ ದೇಶದಲ್ಲಿ ಹಳ್ಳಿಗಳು ಹೆಚ್ಚಾಗಲು ನಮ್ಮವರ ಉದ್ಯೋಗವು ಮುಖ್ಯ ಕಾರಣವು:— ನಮ್ಮ ಮುಖ್ಯ ಉದ್ಯೋಗವು ಒಕ್ಕಲತನವು. ಲ್ಲಿ ವಾಸಿಸುವ ಜನರಲ್ಲಿ ೧೦೦ಕ್ಕೆ ೭೫ ರಷ್ಟು ಜನರು ಒಕ್ಕಲತನದಿಂದ ುವರು. ಈ ಸಂಖ್ಯೆಯಲ್ಲಿ ಶಹರ ವಾಸಿಗಳಾದ ರೈತರನ್ನು ಕೂಡಿಸಿಕೊಂಡರೆ ಜನಸಂಖ್ಯೆಯಲ್ಲಿ ೧೦೦ಕ್ಕೆ ಸುಮಾರು ೮೫ ರಷ್ಟು ಜನರು ಒಕ್ಕಲಿಗರೆನಿಸಿ ುವರು. ಒಕ್ಕಲತನದ ಸಂಪರ್ಕವೇ ಇಲ್ಲದ ಶಹರಗಳು ನಮ್ಮ ದೇಶದಲ್ಲಿಲ್ಲ. ನೇಶದ ಜನಸಂಖ್ಯೆಗೂ ಸಾಗಾದ ಭೂಮಿಗೂ ತುಲನೆಮಾಡಿ ನೋಡಿದರೆ

ಪ್ರತಿ ವ್ಯಕ್ತಿಗೆ ಒಂದು ಎಕರೆಯಂತೆ ಲೆಕ್ಕವು ಹೊರಡುವದು. ಈ ಮಾನ ಮುಂಬಯಿ ಇಲಾಖೆಯ ಪಟ್ಟಿಗೆ ಒಂದುವರೆ ಎಕರೆಯಾದರೆ ಕರ್ನಾಟಕ ಎರಡು ಎಕರೆಯಾಗುವದು. ಜಿಲ್ಲೆಯ ಮಾನದಿಂದ ನೋಡಿದರೆ ವಿಜಾಪುರದ ೪ ಎಕರೆ, ಧಾರವಾಡ ೨ ಎಕರೆ, ಬೆಳಗಾವ ೧೪ ಎಕರೆ ಮತ್ತು ಕಾರವಾರ ಜಿಲ್ಲೆ ಅರ್ಧ ಎಕರೆ ಎಂದು ಲೆಕ್ಕದಿಂದ ಗೊತ್ತಾಗುವದು. ಅಮೇರಿಕೆಯು ಹೊರತು ಜಗತ್ತಿನ ಯಾವ ದೇಶದಲ್ಲಿಯೂ ಇಷ್ಟು ಭೂಮಿಯು ಹೊರಡುವದಿಲ್ಲ. ಆ ನಮ್ಮಲ್ಲಿ ಫಲವತ್ತಾದ ಭೂಮಿ ಬಹಳ. ಹವೆಯೂ ತುಂಬ ಅನುಕೂಲವಾಗಿರುವ ಇಂಗ್ಲಂಡ ಮೊದಲಾದ ಶೀತ ದೇಶಗಳಲ್ಲಿ ಕೃತ್ರಿಮ ರೀತಿಯಿಂದ ಉಷ್ಣತೆಯ ಒದಗಿಸಿಕೊಟ್ಟರೂ ೭-೮ ತಿಂಗಳುಗಳಲ್ಲಿ ಬೆಳೆಬರುವ ಗೋದಿಯು ನಮ್ ಮೂರು ಮೂರೂವರೆ ತಿಂಗಳಲ್ಲಿಯೇ ಪಕ್ವವಾಗಿಬಿಡುವದು. ನಮ್ಮಲ್ಲಿ ದೊಡ್ಡ ಕಾರಖಾನೆ ಗಿರಣಿ ಮೊದಲಾದವುಗಳ ಸಂಖ್ಯೆಯು ಕಡಿಮೆಯಿ ನರಿಂದ ಶಹರಗಳ ಸಂಖ್ಯೆಯೂ ಕಡಿಮೆಯಾಗಿ ಒಕ್ಕಲತನವೇ ಹೆಚ್ಚಾಗಿರುವದ

೩. ಈ ಇಪ್ಪತ್ತನೆಯ ಶತಮಾನವು ಸುಧಾರಣೆಯ ಮುಗ್ಗಿ ಕಾಲವೆನಿಸಿಕೊಂಡಿದೆ. ಈ ಕಾಲದಲ್ಲಿ ಪ್ರಾಣಿಶಾಸ್ತ್ರ, ಪದಾರ್ಥವಿಜ್ಞಾನಶ ಮೊದಲಾದ ಶಾಸ್ತ್ರಗಳಲ್ಲಿ ಅಗಾಧ ಶೋಧಗಳು ನಡೆದಿವೆ. ವಿಮಾನ, ಆಕಾಶವ ಮೊದಲಾದವುಗಳ ಸಹಾಯದಿಂದ ಜಗತ್ತಿನ ಅಂತರವು ತೀರ ಕಡಿಮೆಯಾಗ ನಡೆದಿರುವದು. ಈ ರೀತಿಯಾದ ನಾನಾಬಗೆಯ ಸುಧಾರಣೆಗಳಿಂದ ಜಗ ಮುಂದೆ ಸಾಗಿದ್ದರೂ ನಮ್ಮ ದೇಶವು ಮಾತ್ರ ಇನ್ನೂ ಸಾಕಾದಷ್ಟು ಮು ಬಂದಿಲ್ಲ. ಪಳ್ಳಿಗಳ ದೇಶವಾದ ನಮ್ಮ ದೇಶದ ಒಳಭಾಗದಲ್ಲಿ ಈ ಸುಧಾರ ಗಾಳಿಯು ಇನ್ನೂ ಸೋಂಕಿಲ್ಲವೆಂದೇ ಹೇಳಬೇಕಾಗುವದು. ನಮ್ಮ ಜ ಭಾವಿಕರು ಹೆಜ್ಜು; ದೈವವ ಮೇಲೆ ಭಾರ ಹಾಕಿ ನಡೆಯುವವರೇ ಬ ದುಡಿತದ ಬೆಲೆಯನ್ನು ತಿಳಿದವರು ಕಮಿನೆ. ನಮ್ಮವರಲ್ಲಿ ಶುತ್ತನ್ನಕ್ಕಿಂತ ಹೆಚ್ಚಾಗಿರುವವರೂ ಸಾಲಗುತ್ತಿಗೆಗಳೂ ಒಹುಜನರು. ಪಳ್ಳಿಗಳಲ್ಲಿ ಜಣ ಈರ್ಷೆ, ಅಸೂಯೆ, ಮುರಾಲೋಚನೆ ಮುಂತಾದವು ತುಂಬಿವೆ. ಜಗತ್ತಿನ ದಿನದಿನಕ್ಕೆ ಹೆಚ್ಚು ಹೆಚ್ಚು ಸುಧಾರಣೆಯು ಹಬ್ಬುತ್ತ ನಡೆದಿದ್ದರೂ ನಾವು ಇ ನಿಂತಲ್ಲಿಯೇ ಇರುವೆವೆಂದು ಹೇಳಲು ಬಹು ದುಃಖವೆನಿಸುವದು. ಸಾ ರಾದವರು ಪಳ್ಳಿಗಳ ಈ ಬಗೆಯ ಕರುಣಾಜನಕ ಸ್ಥಿತಿಯನ್ನು ಹೋಗಲಾಡಿ ಯತ್ನಿಸಬೇಕಾಗಿರುವದು.

೪ ಗ್ರಾಮಸುಧಾರಣೆಯಿಂದರೇನು? ಗ್ರಾಮವಾಸಿಗಳ ಸುಧಾರ
ಯೇ ಗ್ರಾಮಸುಧಾರಣೆ, ಅಥವಾ ಗ್ರಾಮನಿವಾಸಿಗಳ ಉದ್ಯೋಗ ವ್ಯವಸಾಯ
ಸುಧಾರಣೆಯೇ ಗ್ರಾಮಸುಧಾರಣೆ ಎಂದು ಹೇಳಲು ಅಡ್ಡಿಯಿಲ್ಲ. ಇಲ್ಲಿ
ಗ್ರಾಮ ಗ್ರಾಮವಾಸಿಗಳು ಎಂದರೆ ಒಕ್ಕಲಿಗರೆಂದೂ ಅವರ ವ್ಯವಸಾಯವೆಂದರೆ
ಕ್ಕಲತನವೆಂದೂ ಹೇಳಬೇಕಾಗುವದು. ಅರ್ಥಾತ್ ಗ್ರಾಮಸುಧಾರಣೆಯೆಂದರೆ
ಕ್ಕಲಿಗರ ಹಾಗು ಒಕ್ಕಲತನದ ಸುಧಾರಣೆಯೆಂದು ಒಪ್ಪಿಕೊಳ್ಳಬೇಕಾಗುವದು.
ಕ್ಕಲಿಗರಿಗೆ ಸಾಂಪತ್ತಿಕ ಸ್ಥಿತಿ, ವಿದ್ಯೆ, ಆರೋಗ್ಯ ಇವುಗಳಲ್ಲಿ ಸುಧಾರಣೆ
ಕಾಗಿದೆ.

೫. ನಮ್ಮ ಹಳ್ಳಿಗಳು ಸಾಲದಲ್ಲಿ ಮುಳುಗಿಹೋಗಿವೆ. ಪ್ರತಿ
ಕ್ಷಿಗೆ ಸರಾಸರಿ ೧೪೦ ರೂ. ಸಾಲ ಬೀಳುವದೆಂದು ಬ್ಯಾಂಕಿಂಗ ಕಮೀಟಿಯವರ
ಯಿಂದ ಗೊತ್ತಾಗಿರುವದು. ಒಕ್ಕಲಿಗನಿಗೆ ಸರಕಾರದ ಹಪ್ತಿ, ಒಡೆಯನ
ವಣಿ, ಕುಟುಂಬಪೋಷಣೆ ಇವುಗಳನ್ನು ದಾಟುವದೇ ಬಹು ಗಂಡಾಂತರವಾಗಿ
ವಾಗ ತನ್ನ ಸಾಲವನ್ನು ತೀರಿಸುವದು ಎಂದೂ ನೀಗದ ಹೊರೆಯೆನಿಸುವದು.
ಗಾಗಿ ರೈತರ ಹೊಲಗಳು ಕ್ರಮವಾಗಿ ಅವರ ಕೈ ಬಿಡಹತ್ತಿವೆ. ಹೋದ
ರ್ಷದ ರೆಜಿಸ್ಟ್ರೇಶನ್ ಕಮೀಟಿಯ ವರದಿಯ ಮೇರೆಗೆ ಬಂದೊಂದು ಜಿಲ್ಲೆಗೆ
ಸರಿ ಒಂದು ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿಯು ಈ ಒಂದು
ರ್ಷದಲ್ಲಿ ರೈತರ ಕೈಬಿಟ್ಟು, ಕ್ರಯವಾಗಿ ಇಲ್ಲವೆ ತಾರಣವಾಗಿ, ಎರಡನೆಯವರನ್ನು
ರುವದೆಂದು ಗೊತ್ತಾಗಿರುವದು. ಇಷ್ಟಾದರೂ ರೈತರ ಸಾಲವು ತೀರಲಿಲ್ಲ.
ಸಾಲವು ತೀರುವ ಒಗೆ ಹೇಗೆ? ಇದನ್ನು ಸರಕಾರದವರು ತೀರಿಸುವ ಸಂಭವ
ವೂ ಇಲ್ಲವೇ ಇಲ್ಲ. ಸಾಲ ಕೊಟ್ಟ ಶ್ರೀಮಂತರೂ ತಮ್ಮ ಗಂಟು ಕಳೆದು
ಳಾರರು. ಅರ್ಥಾತ್ ರೈತರು ತಮ್ಮ ಕಾಲಮೇಲೆಯೇ ನಿಲ್ಲದೆ ಬೇರೆ
ಯಿಲ್ಲ. ಅದಕ್ಕಾಗಿ ರೈತರು ತಮ್ಮ ಉತ್ಪನ್ನವನ್ನು ಹೆಚ್ಚಿಸಬೇಕು. ಒಕ್ಕಲಿಗರ
ರ್ಥಿಕ ಸ್ಥಿತಿಯು ಸುಧಾರಿಸದೆ ಅವರ ಸುಧಾರಣೆಯಾಗಲಾರದು.

೬ ಒಕ್ಕಲತನವು ನಮ್ಮ ಜೀವನದ ಮುಖ್ಯ ಉದ್ಯೋಗ
ವಾಗಿದ್ದರೂ ಅದಕ್ಕೆ ತಕ್ಕ ಮನ್ನಣೆಯಿಲ್ಲ. ಯಾವ ಕೆಲಸಕ್ಕೂ ಬಾರದ
ನುಷ್ಯನು ಒಕ್ಕಲತನ ಮಾಡಬೇಕೆಂದು ನಮ್ಮವರ ಭಾವನೆಯಾಗಿದೆ. ಅದ್ದರಿಂದ
ವ್ಯವಸಾಯವು ಶಕ್ತಿಯುಕ್ತಿಗಳಿಲ್ಲದ ಹೀನ ಜನರ ಕೈಸೇರಿ ದಿನದಿನಕ್ಕೆ
ನಾವಸ್ಥೆಯನ್ನು ಹೊಂದುತ್ತಿರುವದು. ಇತ್ತ ದೇಶದ ಜನಸಂಖ್ಯೆಯು
ಳೆಯುತ್ತ. ನಡೆದಿರುವದು. ಸದ್ಯಕ್ಕೆ ಸಾಗಾದ ಭೂಮಿಯಲ್ಲಿ ಹೊರಡುವ

ಅನ್ನಸಾಮಗ್ರಿಯು ನಮ್ಮ ದೇಶದ ಜನರಿಗೆ ೮ ತಿಂಗಳ ಮಟ್ಟಿ
ಮಾತ್ರ ಸಾಲುವಷ್ಟಿರುವದು. ಮಿಕ್ಕ ನಾಲ್ಕು ತಿಂಗಳುಗಳ ಗತಿಯೇನು
ಅಥವಾ ಒಟ್ಟು ಜನಸಂಖ್ಯೆಯ ೪/೫ ಜನರಿಗೆ ಮಾತ್ರ ಆ ಸಾಮಗ್ರಿಯ
ಸಾಲುವದೆಂದು ತಿಳಿದರೆ ಮಿಕ್ಕ ೪/೫ ಜನರ (೧೨ ಕೋಟಿ ಜನರ) ಗ
ಯೇನಾಗಬೇಕು? ನಮ್ಮ ದೇಶದಲ್ಲಿ ೩೦೦ ವರ್ಷಗಳ ಹಿಂದೆ ನಡೆಯುತ್ತಿ
ಬಕ್ಕಲತನದ ಕ್ರಮಕ್ಕೂ ಈಗಿನ ಒಕ್ಕಲತನದ ರೀತಿಗೂ ಯಾವ ವಿಶೇ
ಅಂತರವೂ ಇಲ್ಲ. ಅಂದರೆ ನಾವು ಈ ವಿಷಯದಲ್ಲಿ ಪ್ರಗತಿಪರರಾಗಿಲ್ಲ. ಹೊಲ
ಸ್ಥಿತಿಯು ಸಮಾಧಾನಕರವಾಗಿಲ್ಲ. ಮಳೆಯು ಮಾನವು ಕಡಿಮೆಯಾಗು
ನಡೆದಿರುವದು. ಬತ್ತವು ನಮ್ಮ ದೇಶದಲ್ಲಿ ಮೊದಲನೆಯ ಪೈರೆನಿಸಿಕೊಂಡಿ
ಸುಮಾರು ೮ ಕೋಟಿ ಎಕರೆ ಭೂಮಿಯಲ್ಲಿ ಇದನ್ನು ಬೆಳೆಸುವರು. ಮುಂಬಯಿ
ಇಲಾಖೆಯಲ್ಲಿ ೨೦ ಲಕ್ಷ, ಕರ್ನಾಟಕದಲ್ಲಿ ೪ ಲಕ್ಷ ಎಕರೆ ಭೂಮಿಯಲ್ಲಿ ಒತ್ತ
ಬೆಳೆಯಾಗುವದು, ನಮ್ಮ ದೇಶದಲ್ಲಿ ೧ ಎಕರೆಗೆ ಸರಾಸರಿ ೯೯೦ ಪೌಂಡ
ಬತ್ತವು ಬೆಳೆಯುವದೆಂದು ಲೆಕ್ಕ ಹೊರಟರೆ ಅಮೇರಿಕೆಯಲ್ಲಿ ೧ ಎಕರೆಗೆ ೧೪೦
ಪೌಂಡು, ಜಪಾನದಲ್ಲಿ ೨ ಸಾವಿರ ಪೌಂಡು ಬತ್ತದ ಪೈರು ಬರುವದು. ಗೋಧಿಯ
ನಮ್ಮ ದೇಶದ ಎರಡನೆಯ ಪೈರು. ಕೇವಲ ಮಳೆಯ ಮೇಲೆಯೇ ಅವಲಂಬಿಸಿ
ಭೂಮಿಯಲ್ಲಿ ೧ ಎಕರೆಗೆ ಸರಾಸರಿ ೩೦೦ ಪೌಂಡು ಬೆಳೆಯಾದರೆ ನೀರು ಉಣ್ಣಿಸು
ಭೂಮಿಯಲ್ಲಿ ೧ ಎಕರೆಯ ಉತ್ಪನ್ನವು ೮೦೦ ಪೌಂಡು ಆಗುವದು. ಈ
ಫ್ರಾನ್ಸ ದೇಶದಲ್ಲಿ ೧ ಎಕರೆಗೆ ಸರಾಸರಿ ೧೫೦೦ ಪೌಂಡು, ಇಂಗ್ಲಂಡದಲ್ಲಿ ಎರ
ಸಾವಿರ ಪೌಂಡು ಉತ್ಪನ್ನ ಬರುವದು. ಇನ್ನು ರೊಕ್ಕದ ಪೈರಾದ ಹತ್ತಿಯ
ತೆಗೆದುಕೊಳ್ಳೋಣ: ನಮ್ಮ ದೇಶದಲ್ಲಿ ೧ ಎಕರೆಗೆ ಸರಾಸರಿ ೩೨೦ ಪೌಂ
ಹತ್ತಿಯು ಬೆಳೆಯಾದರೆ ಅಮೇರಿಕಾ ಇಜಿಪ್ತ ದೇಶಗಳಲ್ಲಿ ೫೦೦ ಪೌಂಡ
ಯುವದು. ನಾವು ೧ ಎಕರೆಗೆ ೫ ಟನ್ನ ಬಟಾಟೆಯು ಬೆಳೆದರೆ ಆ ವರ್ಷ ಉತ್ತ
ಬೆಳೆ ಬಂದಿತೆನ್ನುವೆವು. ಫ್ರಾನ್ಸ ಇಟಾಲಿಗಳಲ್ಲಿ ೧ ಎಕರೆಗೆ ೩೫ ರಿಂದ ೪೦ ಟ
ಗಳ ವರೆಗೆ ಈ ಬೆಳೆ ಬರುವದುಂಟು. ಈ ರೀತಿ ಉತ್ಪನ್ನವು ಕಡಿಮೆ ಬರಲಿಕ್ಕೆ ನ
ದೇಶದ ವೈತರಂತೆಯೇ ಭೂಮಿಯೂ ಬಸವಳಿದು ಬಡವಾಗುತ್ತ ನಡೆದಿರು
ಮುಖ್ಯ ಕಾರಣವು.

೬. **ನಮ್ಮ ರೈತರಿಗೆ ಪೈರಿಗೆ ಬೀಳುವ ರೋಗದ ಕಲ್ಪನೆಯೇ**
ನಮ್ಮ ದೇಶದಲ್ಲಿ ಜೋಳ ಬೆಳೆಯುವ ಕ್ಷೇತ್ರವು ಸುಮಾರು ೧೦ ಲಕ್ಷ ಎ
ಇರುವದು. ಜೋಳದ ಬೆಳೆಗೆ ಕಾಡಿಗೆ ರೋಗವು ಹಾಯುವದು. ಈ ರೋಗ

ಷ್ಟು ಬಂದು ಎಕರೆಗೆ ೨ ರೂ. ಹಾನಿಯಾಗುವದೆಂದು ತಿಳಿದರೂ ವರ್ಷಕ್ಕೆ ಎಷ್ಟು ಹಾನಿಯಾದಂತಾಯಿತು? ಇದರಂತೆ ಗೋದಿಗೆ ಭಂಡಾರಿ ರೋಗವು ಬರುವದು. ಭಂಡಾರಿ ರೋಗವು ಬಿದ್ದ ವರ್ಷ ಗೋದಿಯ ಬೆಳೆಯು ಬರುವದೇ ಇಲ್ಲ. ಬಂದು ಎಕರೆಗೆ ೫ ರೂ. ಲೆಕ್ಕ ಹಿಡಿದರೂ ೨೦-೨೫ ಲಕ್ಷ ಎಕರೆ ಭೂಮಿಯಲ್ಲಿ ಗೋದಿ ಸ್ಯ ಬಿತ್ತುವ ನಮ್ಮ ಮುಂಬಯಿ ಇಲಾಖೆಯೊಂದಕ್ಕೇ ಎಷ್ಟು ಹಾನಿಯಾಗುವುದು ನೋಡಿರಿ. ಇದೇ ಮೇರೆಗೆ ಜವಾರಿ ಹತ್ತಿಗೆ ಸಿಡಿರೋಗವೂ ವಿಲಾಯತಿ ಹತ್ತಿಗೆ ಕೆಂಪು ಎಲೆಯ ರೋಗವೂ ತಗಲುವವು. ಅಡಕೆಯ ಮರಕ್ಕೆ ತಗಲುವ ಹಳದಿರೋಗವೂ ದ್ರಾಕ್ಷೆಯ ಬಳ್ಳಿಯ ಬೂಳಸ ರೋಗವೂ ರೈತನನ್ನು ಹಣ್ಣು ಮಾಡುತ್ತಿವೆ. ನಮ್ಮ ರೈತರಿಗೆ ಈ ರೋಗನಿವಾರಣೆಗೆ ತಕ್ಕ ದಾರಿ ಗೊತ್ತಿಲ್ಲ. ಸರಕಾರದವರು ಪ್ರಯೋಗ ಮಾಡಿ ನೋಡಿ ಕಂಡು ಹಿಡಿದ ರೋಗನಿವಾರಣೋಪಾಯಗಳನ್ನು ಎಷ್ಟು ಹೇಳಿದರೂ ಮೂಢಭಕ್ತಿಯ ನಮ್ಮವರಿಗೆ ಅದು ತಿಳಿಯುವದೇ ಇಲ್ಲ. ಒಕ್ಕಲತನದ ಖಾತೆಯವರು ಕಂಡು ಹಿಡಿದ ಒಕ್ಕಲತನದ ಸುಧಾರಣೆಯ ಉಪಾಯಗಳು ಕೇವಲ ಪುಸ್ತಕದಲ್ಲಿಯೇ ಉಳಿದಿವೆ. ಒಕ್ಕಲತನಕ್ಕೆ ಸಂಬಂಧಿಸಿದ ದನಕರುಗಳ ಸ್ಥಿತಿಯೂ ಉಪ ಉದ್ಯೋಗಗಳೂ ಅಷ್ಟೇ ಕಂಗಾಲ ಸ್ಥಿತಿಯಲ್ಲಿರುವವು.

ನಮ್ಮ ದೇಶದ ಒಕ್ಕಲಿಗರ ಸಾಂಪತ್ತಿಕ ಸ್ಥಿತಿಯಂತೆಯೇ ವಿದ್ಯಾಬುದ್ಧಿಗಳ ಸ್ಥಿತಿಯೂ ಅವರ ಆರೋಗ್ಯವಿಷಯಕ ಜ್ಞಾನವೂ ತೀರ ಕರುಣಾಜನಕವಾಗಿವೆ.

೮. **ಸುಧಾರಿಸಿದ ದೇಶಗಳಲ್ಲಿ ಒಕ್ಕಲಿಗರು ಸುಶಿಕ್ಷಿತರಾಗಿರುವರು.** ಅಲ್ಲಿಯ ಒಕ್ಕಲಿಗರು ಒಕ್ಕಲತನಕ್ಕೆ ಸಂಬಂಧಿಸಿದ ಎಲ್ಲ ಶಾಸ್ತ್ರಗಳ ಜ್ಞಾನಸಂಪಾದಿಸಿಕೊಂಡು ಒಕ್ಕಲಿಗರಾಗಿರುವರು. ಒಕ್ಕಲತನದ ಹೋರೆಯ ಬಗ್ಗೆ ಆ ದೇಶಗಳಲ್ಲಿ ತುಂಬ ಆದರ ಇರುವದು. ಅವರು ಒಕ್ಕಲತನಕ್ಕೆ ಹೊಂದಿ ದನಕರುಗಳನ್ನು ಸಾಕುವ ಡೇರಿ ಫಾರ್ಮನ್ನು ಇಟ್ಟಿರುವರು. ಅವರ ಡೇರಿಗಳಲ್ಲಿ ದಿನವೊಂದಕ್ಕೆ ೧೦೦ ಪೌಂಡು ಹಾಲು ಕೊಡುವ ದನಗಳನ್ನು ನೋಡಬಹುದು. ಹಿಂಡುವ ಆಕಳುಗಳ ಆಹಾರ ಆರೋಗ್ಯ ಬೆಳಗಿನ ಬಗ್ಗೆ ತುಂಬ ಎಚ್ಚರಪಡುವರು; ಸಂತತಿಯ ಸುಧಾರಣೆಯ ಬಗ್ಗೆ ವಿಶೇಷ ಪ್ರಯತ್ನ ಪಡುವರು. ದನಗಳ ಬಣ್ಣ ಆಕಾರ ಗುಣ ಧರ್ಮಗಳಲ್ಲಿ ಅನೇಕ ಸುಧಾರಣೆ ಮಾಡಿರುವರು. ಹಿಂಡುವ ದನಗಳ ಹಿಂಡುವ ಗುಣವನ್ನೂ ಹೂಡುವ ದನಗಳ ಶಕ್ತಿಯನ್ನೂ ಬೆಳೆಸುವದಕ್ಕಾಗಿ ಹಲವು ಪ್ರಯೋಗಾನುಭವಗಳನ್ನು ಮಾಡಿ ಜಗತ್ತಿನ ಜನತೆಯ ಮುಂದಿಡುವರು. ಕೇವಲ ಆಹಾರಕ್ಕಾಗಿಯೇ ಬೆಳೆಸುವ

ಪ್ರಾಣಿಗಳ ಮೈಯ ಕೊಬ್ಬನ್ನು ಹೆಚ್ಚಿಸುವದೇ ಮೊದಲಾದ ಕಾರ್ಯಗಳ
ಇವರು ಬಹು ದಕ್ಷತೆಯಿಂದ ನಡೆಸುತ್ತಿರುವರು. ಒಕ್ಕಲತನದ ಉಪಕರಣಗ
ಯಂತೂ ಹೇಳಕೂಡದಷ್ಟು ಸುಧಾರಣೆ ಮಾಡಿಕೊಂಡಿರುವರು. ರೆಂಬೆ ಕ
ಯುವದು, ಪರಗುವದು, ಬಿತ್ತುವದು, ಎಡೆ ಹೊಡೆಯುವದು, ಕೊಯ್ಯು
ತುಂಬಿಸುವದು, ತೂರುವದು, ಚೀಲಗಳನ್ನು ತುಂಬುವದು ಮೊದಲಾದ ಯಾ
ಕಾರ್ಯಗಳನ್ನು ಯಂತ್ರಗಳಿಂದಲೇ ಮಾಡಿಸಿಕೊಳ್ಳುವರು. ದನಗಳನ್ನು ಹಿಂ
ನಕ್ಕೂ ಹತ್ತಿಯನ್ನು ಬಿಡಿಸುವದಕ್ಕೂ ಶೇಂಗಾ ಒಡೆಯುವದಕ್ಕೂ ತ
ಯಂತ್ರಗಳನ್ನು ರಚಿಸಿಕೊಂಡಿರುವರು. ಒಟ್ಟಿನಮೇಲೆ ಆ ದೇಶಗಳಲ್ಲಿ ಶಕ್ತಿ ಯ
ವಿದ್ಯೆಗಳನ್ನು ಉಪಯೋಗಿಸಿಕೊಂಡು ಒಕ್ಕಲತನದಲ್ಲಿ ಸಂಪೂರ್ಣ
ಯನ್ನು ತಾಳಿ ಹೆಂಗಸರೂ ಗಂಡಸರೂ ಸಮ ಸಮ ಸಾಹಸಿಗಳಾ
ಮಾಡುವದರಿಂದ ಆ ದೇಶಗಳು ದಿನದಿನಕ್ಕೆ ಮುಂದೆ ಸಾಗುತ್ತಲಿವೆ.
ಗಾಗಿ ಡೆನ್ಮಾರ್ಕದೇಶವನ್ನು ತೆಗೆದುಕೊಳ್ಳೋಣ.

ಡೆನ್ಮಾರ್ಕವು ನಮ್ಮ ಮೂರು ಜಿಲ್ಲೆಗಳ ಕ್ಷೇತ್ರಕ್ಕೆ ಮಿಕ್ಕಲಾರ
ದೊಡ್ಡದಾಗಿರುವ. ಯುರೋಪಖಂಡದಲ್ಲಿರುವ ಒಂದು ಸಣ್ಣ ದೇಶವು. ಆ
ಹ್ಯಾಗೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಂಡು ಜಗತ್ತಿಗೆ ಮಾದರಿಯಾಗಿದ
ನೋಡೋಣ– ಅವರ ಒಕ್ಕಲತನ, ಅವರ ಹೈನದ ಶ್ರೇಷ್ಠತ್ವ, ಅವರ ಸಾಂಘ
ಸ್ಥಿತಿ ಸುಧಾರಣೆ ಇವೆಲ್ಲ ನೋಡುವ ಹಾಗೆ, ಕೇಳುವಹಾಗೆ ಮತ್ತು ಅನು
ಮಾಡುವ ಹಾಗೆ ಅವೆ.

೧೮೫೦ನೇ ಇಸ್ವಿಯ ಸುಮಾರಕ್ಕೆ ಡೆನ್ಮಾರ್ಕದ ಒಕ್ಕಲತನವು ಪ್ರಗ
ವಾಗಿದ್ದಿಲ್ಲ. ಒಕ್ಕಲಿಗರು ಬಹಳ ಹಿಂದುಳಿದವರೂ, ಆಲಸ್ಯಗಾ
ಸಂಶಯಯುಕ್ತರೂ ಸಂಘಶಕ್ತಿಯಿಂದ ಕೆಲಸ ಮಾಡಲು ಮನಸ್ಸಿಲ್ಲದ
ಆಗಿದ್ದರು. ಆದೇ ಒಕ್ಕಲಿಗರು ೧೯೨೦ನೇ ಇಸ್ವಿಯ ಸುಮಾರಕ್ಕೆ ಆ
ಬದಲಾವಣೆ ಹೊಂದಿದವರಾಗಿದ್ದಾರೆ. ಅವರ ಒಕ್ಕಲತನವು ಬಹಳ ಪ್ರಗ
ವಾಗಿದೆ. ಎಲ್ಲ ತರದ ಸುಧಾರಣೆಗಳನ್ನು ಅಮಲುನಲ್ಲಿ ತಂದಿದ್ದಾರೆ. ತಮ್ಮ ಉ
ವನ್ನು ಹೆಚ್ಚಿಸಿಕೊಂಡು ಹೆಚ್ಚು ಸೌಖ್ಯದಿಂದ ಇರಹತ್ತಿದ್ದಾರೆ. ಯಾವಾ
ಶಾಸ್ತ್ರೀಯ ಶೋಧನೆಗಳಲ್ಲಿ ತೊಡಗಿ ಅದರ ಉಪಯೋಗವನ್ನು ಮಾಡಿಕೊ
ತ್ತಿರುವರು. ಉದ್ಯೋಗಶೀಲರಾಗಿರುವದಲ್ಲದೆ, ಉತ್ಪನ್ನ ಹೆಚ್ಚಿಸಲು ಬಹ
ಪಡುತ್ತಲಿರುವರು. ಸಂಘಶಕ್ತಿಯಿಂದ ಕೆಲಸ ಮಾಡುವದರಲ್ಲಿ ನಿಸ್ಸೀಮರಾಗಿ

ಹಾರದ ಉಪಯೋಗವನ್ನು ಪರಮಾವಧಿ ಮಾಡಿಕೊಂಡಿರುವರು. ಆ
ಶದಲ್ಲಿ ಗಲೀಂರಲ್ಲಿ ೨೧ ಕೋ-ಆಪರೇಟಿವ್ಸ್ ಸ್ಟೋರುಗಳಿದ್ದವು. ಆದರೆ
ಗಂಕ್ಕೆ ೧೭೦೦ ಕೊ. ಸ್ಟೋರಗಳಾಗಿವೆ. ೧೯೩೫ನೇ ಇಸ್ವಿಯಲ್ಲಿ ೧೦೦ಕ್ಕೆ
ಂತೆ ಒಕ್ಕಲಿಗರು ಕೋ-ಆಪರೇಟಿವ್ಸ್ ಡೇರಿಗಳ ಮೆಂಬರರಾಗಿದ್ದರು.
ಇರ್ಕ ದೇಶದಲ್ಲಿ ಹಿಂಡುವ ಒಟ್ಟು ಹಾಲಿನಲ್ಲಿ ೧೦೦ಕ್ಕೆ ೮೬ ರಷ್ಟು ಹಾಲು ಈ
ನ ಸಹಕಾರಿ ಡೇರಿಗಳ ಮುಖಾಂತರವೇ ಮಾರಲ್ಪಡುವದು. ಈಗ ಅಲ್ಲಿಯ ಪ್ರತಿ
ಒಕ್ಕಲಿಗನು ತನಗೆ ಬೇಕಾಗುವ ಎಲ್ಲ ಸಾಮಾನುಗಳನ್ನು ಕೋ-ಆಪರೇಟಿವ್ಸ್
ೋರುಗಳಲ್ಲಿಯೇ ಕೊಂಡುಕೊಳ್ಳುವನು; ಸಹಕಾರಿ ಪತ್ತಿನ ಸಂಘಗಳಲ್ಲಿ ಸಾಲ
ಪಡೆಕೊಳ್ಳುವನು; ತನಗೆ ಬೇಕಾದ ಬೀಜಗಳನ್ನು ಬೀಜದ ಸಂಘಗಳಲ್ಲಿಯೇ
ಕೊಳ್ಳುವನು; ಕೃತ್ರಿಮ ಗೊಬ್ಬರವನ್ನು ಗೊಬ್ಬರ ಪೂರೈಸುವ ಸಂಘಗಳಲ್ಲಿಯೇ
ಮಾಡಿಸಿ ಪಡೆಯುವನು; ಸಿಮೆಂಟ ಮೊದಲಾದ ಮನೆಕಟ್ಟುವ ಸಾಮಾನುಗಳನ್ನು
ಈ ಸಂಘಗಳಲ್ಲಿಯೇ ತೆಗೆದುಕೊಳ್ಳುವನು. ತನ್ನ ಹಾಲು, ತತ್ತಿ ಮತ್ತು
ಮಾಂಸ ಇವುಗಳನ್ನು ಹಾಲಿನ, ತತ್ತಿಯ ಮತ್ತು ಮಾಂಸದ
ಸಂಘಗಳ ಮೂಲಕವಾಗಿಯೇ ಮಾರುವನು. ಅವನು ದನಕರುಗಳನ್ನು ಕೊಳ್ಳುವ
ಗಲೀ ಮಾರುವದಾಗಲೀ ಸಂಘದ ಮುಖಾಂತರವಾಗಿಯೇ, ತನ್ನಲ್ಲಿ ಉಳಿದ
ಹಣವನ್ನು ಕೊ. ಸೆ. ಬ್ಯಾಂಕಿನಲ್ಲಿಯೇ ಇಡುವನು. ಸಹಕಾರದ ಹೊಸ ಹೊಸ
ಕ್ಷೇತ್ರಗಳನ್ನು ಸಹಕಾರಿ ಸಂಘಗಳ ಚಾಲಕರಿಂದ ಕಲಿತುಕೊಳ್ಳುವನು. ಒಕ್ಕಲತನದ
ಧಾರಣೆಯ ಬಗ್ಗೆ ಯಾವಾಗಲೂ ಒಕ್ಕಲತನದ ತಜ್ಞರ ಕೂಡ ವಿಚಾರವಿನಿ
ಯ ಮಾಡುತ್ತಲಿರುವನು. ಇವರಲ್ಲವೇ ನಮಗೆ ಅನುಕರಣೀಯರು.
ರಲ್ಲವೇ ಮಾದರಿಯ ಹಳ್ಳಿಗರು !

ಈ ತರದ ಪ್ರಗತಿಗೆ **ಅಲ್ಲಿಯ ಶಿಕ್ಷಣದ ಸುಧಾರಣೆಯೇ ಮೂಲ**
ರಣವು. ಗ್ರಂಟವ್ಹಿಗನೆಂಬ ಸುಧಾರಕನು ೧೭೮೫ರಿಂದ ೧೮೬೩ರ ವರೆಗೆ ಅವರಲ್ಲಿ
ೀ ತಳಕಳಿಯಿಂದ ಜಾಗ್ರತೆ ಮಾಡಿದನು. ಫ್ರೋಕ್ ಹಾಯಸ್ಕೂಲಗಳನ್ನು
lk High Schools) ಸ್ಥಾಪಿಸಿ ಹೆಂಗಸರಿಗೆ, ಗಂಡಸರಿಗೆ, ಸಣ್ಣವರಿಗೆ,
ಡ್ಡವರಿಗೆ, ಒಕ್ಕಲಗರಿಗೆ ಜಮೀನುದಾರರಿಗೆ ಒಟ್ಟಿನ ಮೇಲೆ ಎಲ್ಲರಿಗೂ ಪರಿಸ್ಥಿತಿ
ನುಸಾರ ಶಿಕ್ಷಣ ಕೊಡುವ ಯೋಜನೆ ಮಾಡಿದನು. ಆತನ ಶಿಷ್ಯರು ಆತನ ಈ
ಯೋಜನೆಯನ್ನು ಭರದಿಂದ ಎಲ್ಲಕಡೆಗೂ ಹಬ್ಬಿಸಿದರು. ಅಲ್ಪಕಾಲದಲ್ಲಿಯೇ ಎಲ್ಲಿ
ನೋಡಿದಲ್ಲಿ ಈ ತರದ ಸ್ಕೂಲುಗಳೇ ಆಗಿಹೋದವು. ಹೀಗಾಗಿ ಸುಮಾರು ೧೮೭೦ರ
ಸುಮಾರಕ್ಕೆ ಹಳ್ಳಿಗಳಲ್ಲಿ ಬಹಳ ಬದಲಾವಣೆಯಾಯಿತು. "ಲುಬಿವ್ಹಿಗ್ ಶ್ರಾಡರ"
ಗ್ರುಬ್ವಿಗ್ಟ್ವಿಗ್ನ ಶಿಷ್ಯರಲ್ಲಿ ಒಬ್ಬನು. ಇವನು ೧೮೩೬ರಿಂದ ೧೯೦೬ರ ವರೆಗೆ

ಪ್ರಾಣಿಗಳ ಮೈಯ ಕೊಬ್ಬನ್ನು ಹೆಚ್ಚಿಸುವದೇ ಮೊದಲಾದ ಕಾರ್ಯಗಳ ಇವರು ಬಹು ದಕ್ಷತೆಯಿಂದ ನಡೆಸುತ್ತಿರುವರು. ಒಕ್ಕಲತನದ ಉಪಕರಣಗ ಯಂತೂ ಹೇಳಕೂಡದಷ್ಟು ಸುಧಾರಣೆ ಮಾಡಿಕೊಂಡಿರುವರು. ರೆಂಪೆ ಹೊ ಯುವದು, ಹರಗುವದು, ಬಿತ್ತುವದು, ಎಡೆ ಹೊಡೆಯುವದು, ಕೊಯ್ಲಾದ ತುಳಿಸುವದು, ತೂರುವದು, ಚೀಲಗಳನ್ನು ತುಂಬುವದು ಮೊದಲಾದ ಯಾವ ಕಾರ್ಯಗಳನ್ನು ಯಂತ್ರಗಳಿಂದಲೇ ಮಾಡಿಸಿಕೊಳ್ಳುವರು. ದನಗಳನ್ನು ಹಿಂಡ ದಕ್ಕೂ ಹತ್ತಿಯನ್ನು ಬಿಡಿಸುವದಕ್ಕೂ ಶೇಂಗಾ ಒಡೆಯುವದಕ್ಕೂ ತರತ ಯಂತ್ರಗಳನ್ನು ರಚಿಸಿಕೊಂಡಿರುವರು. ಒಟ್ಟಿನಮೇಲೆ ಆ ದೇಶಗಳಲ್ಲಿ ಶಕ್ತಿ ಯು ವಿದ್ಯೆಗಳನ್ನು ಉಪಯೋಗಿಸಿಕೊಂಡು ಒಕ್ಕಲತನದಲ್ಲಿ ಸಂಪೂರ್ಣ ಶ್ರ ಯನ್ನು ತಾಳಿ ಹೆಂಗಸರೂ ಗಂಡಸರೂ ಸಮ ಸಮ ಸಾಹಸಿಗಳಾಗಿ ಕೆ ಮಾಡುವದರಿಂದ ಆ ದೇಶಗಳು ದಿನದಿನಕ್ಕೆ ಮುಂದೆ ಸಾಗುತ್ತಲಿವೆ. ಮಾ ಗಾಗಿ ಡೆನ್ಮಾರ್ಕದೇಶವನ್ನು ತೆಗೆದುಕೊಳ್ಳೋಣ.

ಡೆನ್ಮಾರ್ಕವು ನಮ್ಮ ಮೂರು ಜಿಲ್ಲೆಗಳ ಕ್ಷೇತ್ರಕ್ಕೆ ಮಿಕ್ಕಲಾರ ದೊಡ್ಡದಾಗಿರುವ, ಯುರೋಪಖಂಡದಲ್ಲಿರುವ ಒಂದು ಸಣ್ಣ ದೇಶವು. ಈ ಹ್ಯಾಗೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಂಡು ಜಗತ್ತಿಗೆ ಮಾದರಿಯಾಗಿ ನೋಡೋಣ– ಅವರ ಒಕ್ಕಲತನ, ಅವರ ಹೈನದ ಶ್ರೇಷ್ಠತ್ವ, ಅವರ ಸಾಂ ಸ್ಥಿತಿ ಸುಧಾರಣೆ ಇವೆಲ್ಲ ನೋಡುವ ಹಾಗೆ, ಕೇಳುವಹಾಗೆ ಮತ್ತು ಅನು ಮಾಡುವ ಹಾಗ ಅವೆ.

ಗಲಕಿಂನೇ ಇಸ್ವಿಯ ಸುಮಾರಕ್ಕೆ ಡೆನ್ಮಾರ್ಕದ ಒಕ್ಕಲತನವು ಪ್ರಗ ವಾಗಿದ್ದಿಲ್ಲ. ಒಕ್ಕಲಿಗರು ಬಹಳ ಹಿಂದುಳಿದವರೂ, ಆಲಸ್ಯಗಾ ಸಂಶಯಯುಕ್ತರೂ ಸಂಘಶಕ್ತಿಯಿಂದ ಕೆಲಸ ಮಾಡಲು ಮನಸ್ಸಿಲ್ಲದ ಆಗಿದ್ದರು. ಆದೇ ಒಕ್ಕಲಿಗರು ೧೯೦೦ನೇ ಇಸ್ವಿಯ ಸುಮಾರಕ್ಕೆ ಆ ಬದಲಾವಣೆ ಹೊಂದಿದವರಾಗಿದ್ದಾರೆ. ಅವರ ಒಕ್ಕಲತನವು ಬಹಳ ಪ್ರಗ ವಾಗಿದೆ. ಎಲ್ಲ ತರದ ಸುಧಾರಣೆಗಳನ್ನು ಅಮಲಿನಲ್ಲಿ ತಂದಿದ್ದಾರೆ. ತಮ್ಮ ಆ ವನ್ನು ಹೆಚ್ಚಿಸಿಕೊಂಡು ಹೆಚ್ಚು ಸೌಖ್ಯದಿಂದ ಇರಹತ್ತಿದ್ದಾರೆ. ಯಾವಾ ಶಾಸ್ತ್ರೀಯ ಶೋಧನೆಗಳಲ್ಲಿ ತೊಡಗಿ ಅದರ ಉಪಯೋಗವನ್ನು ಮಾಡಿಕೆ ತ್ತಿರುವರು. ಉದ್ಯೋಗಶೀಲರಾಗಿರುವದಲ್ಲದೆ, ಉತ್ಪನ್ನ ಹೆಚ್ಚಿಸಲು ಬಿಡ ಪಡುತ್ತಲಿರುವರು. ಸಂಘಶಕ್ತಿಯಿಂದ ಕೆಲಸ ಮಾಡುವದರಲ್ಲಿ ಮಿಗಿಲಾಗಿದ

ಪ್ರಚಾರದ ಉಪಯೋಗವನ್ನು ಪರಮಾವಧಿ ಮಾಡಿಕೊಂಡಿರುವರು. ಆ ಪ್ರಶ್ನೆಯಲ್ಲಿ ೧೮೯೦ರಲ್ಲಿ ೨೧ ಕೋ-ಆಪರೇಟಿವ್ಹ ಸ್ಟೋರುಗಳಿದ್ದವು. ಆದರೆ ೧೯೦೫ಕ್ಕೆ ೧೭೦೦ ಕೊ. ಸ್ಟೋರಗಳಾಗಿವೆ. ೧೯೨೩ನೇ ಇಸ್ವಿಯಲ್ಲಿ ೧೨೦೦ಕ್ಕೆ ಸರಿಸುಮಾರು ಒಕ್ಕಲಿಗರು ಕೋ-ಆಪರೇಟಿವ್ಹ ಡೇರಿಗಳ ಮೆಂಬರರಾಗಿದ್ದರು. ಇಷ್ಟು ಕಡಿ ದೇಶದಲ್ಲಿ ಹಿಂಡುವ ಒಟ್ಟು ಹಾಲಿನಲ್ಲಿ ೧೨೦ಕ್ಕೆ ೬೬ ರಷ್ಟು ಹಾಲು ಈ ಸಹಕಾರಿ ಡೇರಿಗಳ ಮುಖಾಂತರವೇ ಮಾರಲ್ಪಡುವದು. ಈಗ ಅಲ್ಲಿಯ ಪ್ರತಿ ಒಕ್ಕಲಿಗನು ತನಗೆ ಬೇಕಾಗುವ ಎಲ್ಲ ಸಾಮಾನಗಳನ್ನು ಕೋ-ಆಪರೇಟಿವ್ಹ ಸ್ಟೋರುಗಳಲ್ಲಿಯೇ ಕೊಂಡುಕೊಳ್ಳುವನು; ಸಹಕಾರಿ ಪತ್ತಿನ ಸಂಘಗಳಲ್ಲಿ ಸಾಲ ತೆಗೆದುಕೊಳ್ಳುವನು; ತನಗೆ ಬೇಕಾದ ಬೀಜಗಳನ್ನು ಬೀಜದ ಸಂಘಗಳಲ್ಲಿಯೇ ಕೊಳ್ಳುವನು; ಕೃತ್ರಿಮ ಗೊಬ್ಬರವನ್ನು ಗೊಬ್ಬರ ಪೂರೈಸುವ ಸಂಘಗಳಲ್ಲಿಯೇ ಕೊಳ್ಳತ್ತ ಪಡೆಯುವನು; ಸಿಮೆಂಟ ಮೊದಲಾದ ಮನೆಕಟ್ಟುವ ಸಾಮಾನಗಳನ್ನು ಆಯಾ ಸಂಘಗಳಲ್ಲಿಯೇ ತೆಗೆದುಕೊಳ್ಳುವನು. ತನ್ನ ಹಾಲು, ತತ್ತಿ ಮತ್ತು ಬೆಣ್ಣೆ ಮಾಂಸ ಇವುಗಳನ್ನು ಹಾಲಿನ, ತತ್ತಿಯ ಮತ್ತು ಮಾಂಸದ ಸಂಘಗಳ ಮೂಲಕವಾಗಿಯೇ ಮಾರುವನು. ಅವನು ದನಕರುಗಳನ್ನು ಕೊಳ್ಳುವ ಅಥವಾ ಮಾರುವದಾಗಲೀ ಸಂಘದ ಮುಖಾಂತರವಾಗಿಯೇ. ತನ್ನಲ್ಲಿ ಉಳಿದ ಹಣವನ್ನು ಕೊ. ಸೆ. ಬ್ಯಾಂಕಿನಲ್ಲಿಯೇ ಇಡುವನು. ಸಹಕಾರದ ಹೊಸ ಹೊಸ ವಿಷಯಗಳನ್ನು ಸಹಕಾರಿ ಸಂಘಗಳ ಚಾಲಕರಿಂದ ಕಲಿತುಕೊಳ್ಳುವನು. ಒಕ್ಕಲತನದ ಸುಧಾರಣೆಯ ಬಗ್ಗೆ ಯಾವಾಗಲೂ ಒಕ್ಕಲತನದ ತಜ್ಞರ ಕೂಡ ವಿಚಾರವಿನಿಮಯ ಮಾಡುತ್ತಲಿರುವನು. ಇವರಲ್ಲವೇ ನಮಗೆ ಅನುಕರಣೀಯರು. ಇವರಲ್ಲವೇ ಮಾದರಿಯ ಹಳ್ಳಿಗರು !

ಈ ತರದ ಪ್ರಗತಿಗೆ **ಅಲ್ಲಿಯ ಶಿಕ್ಷಣದ ಸುಧಾರಣೆಯೇ ಮೂಲ** ಕಾರಣವು. ಗ್ರಂಟವ್ಹಿಗನೆಂಬ ಸುಧಾರಕನು ೧೭೮೩ರಿಂದ ೧೮೩೩ರ ವರೆಗೆ ಅವರಲ್ಲಿ ಪ್ರಬಲಕಳಕಳಿಯಿಂದ ಜಾಗ್ರತೆ ಮಾಡಿದನು. ಫ್ರೀಕ್ ಹಾಯಸ್ಕೂಲಗಳನ್ನು (Free High Schools) ಸ್ಥಾಪಿಸಿ ಹೆಂಗಸರಿಗೆ, ಗಂಡಸರಿಗೆ, ಸಣ್ಣವರಿಗೆ, ದೊಡ್ಡವರಿಗೆ, ಒಕ್ಕಲಿಗರಿಗೆ ಜಮೀನುದಾರರಿಗೆ ಒಟ್ಟಿನ ಮೇಲೆ ಎಲ್ಲರಿಗೂ ಪರಿಸ್ಥಿತಿ ಅನುಸಾರ ಶಿಕ್ಷಣ ಕೊಡುವ ಯೋಜನೆ ಮಾಡಿದನು. ಆತನ ಶಿಷ್ಯರು ಆತನ ಈ ಯೋಜನೆಯನ್ನು ಭರದಿಂದ ಎಲ್ಲಕಡೆಗೂ ಹಬ್ಬಿಸಿದರು. ಅಲ್ಪಕಾಲದಲ್ಲಿಯೇ ಎಲ್ಲಿ ನೋಡಿದಲ್ಲಿ ಈ ತರದ ಸ್ಕೂಲುಗಳೇ ಆಗಿಹೋದವು. ಹೀಗಾಗಿ ಸುಮಾರು ೧೮೫೦ರ ಸುಮಾರಿಕ್ಕೆ ಹಳ್ಳಿಗಳಲ್ಲಿ ಬಹಳ ಬದಲಾವಣೆಯಾಯಿತು. "ಲುಜಿವ್ಹಿಗ್ ಶ್ಯಾಡರ" ಗ್ರಂಟವ್ಹಿಗ್ಗನ ಶಿಷ್ಯರಲ್ಲಿ ಒಬ್ಬನು. ಇವನು ೧೮೩೩ರಿಂದ ೧೮೮೦ ರ ವರೆಗೆ

ಇದ್ದನು. ಇವನು ಫೋಕ್ ಹಾಯಸ್ಕೂಲಗಳನ್ನಷ್ಟೇ ಅಲ್ಲದೆ ಒಕ್ಕಲತನದ ಮತ್ತು ಡೇರಿಗಳ ಸ್ಕೂಲುಗಳನ್ನು ಪ್ರಾರಂಭಿಸಿದನು. ಒಕ್ಕಲಿಗರೂ, ಸಣ್ಣ ಸಣ್ಣ ಜಮೀನುದಾರರೂ, ಪ್ರಾಥಮಿಕ ಶಾಲೆಗಳ ಮಾಸ್ತರರೂ ಈತನ ತತ್ವಗಳನ್ನು ಶಿರಸಾವಹಿಸಿ ಪ್ರಸಾರಮಾಡಹತ್ತಿದರು. ದೇಶದಲ್ಲಿ ದುಡಿತದ ಮೇಲೆ ಪ್ರೇಮವು ಬೆಳೆಯಿತು. ಒಕ್ಕಲತನದ ಮಹತ್ವವು ಜನತೆಗೆ ತಿಳಿಯಿತು. ಒಕ್ಕಲತನವು ಪ್ರಗತಿಯಾಗಹತ್ತಿತು. ಒಮ್ಮೆ ಅವರು ಬೆಳೆದ ಗೋದಿ ಗೋವಿನ ಜೋಳ ಮೊದಲಾದ ಮಾಲಿಗೆ ಯುರೋಪದಲ್ಲಿ ಯೋಗ್ಯ ಕಿಮ್ಮತ್ತು ಬಾರದಹಾಗಾಯಿತು. ಆ ಯುರೋಪಖಂಡದಲ್ಲಿ ಇವುಗಳ ಬಗ್ಗೆ ಬಹಳ ಏರಾಟ ನಡೆಯಿತು. ಇದನ್ನು ನೋಡಿ ಆ ದೇಶದ ಒಕ್ಕಲಿಗರು ತಾವು ಬೆಳೆಯುವ ಯಾವ ಮಾಲನ್ನೂ ಪರದೇಶಕ್ಕೆ ಕೊಡತಕ್ಕದ್ದಲ್ಲವೆಂದು ತಮ್ಮತಮ್ಮೊಳಗೆ ಗೊತ್ತುಮಾಡಿಕೊಂಡರು. ಮತ್ತು ದೇಶದ ಪ್ರಜಾಸತ್ತಾತ್ಮಕ ಸರಕಾರವು ಒಕ್ಕಲಿಗರ ಈ ಧ್ಯೇಯವನ್ನು ಎತ್ತಿ ಹಿ ಯಿತು. ಜಮೀನುದಾರರ ಬದಲಾಗಿ ಸಾಗಾದ ಭೂಮಿಯು ಒಕ್ಕಲಿಗರಲ್ಲಿ ಹಂ ಹಂಚಲ್ಪಟ್ಟಿತು. ಆಗ ಯಾವ ರೈತನಿಗೂ ೪೦ ಎಕರೆಗಿಂತ ಕಡಿಮೆ ತುಂಡುಗ ಕೂಡದೆಂದು ನಿಯಮ ಮಾಡಿದರು. ಪ್ರತಿಯೊಬ್ಬ ರೈತನು ಏಳೇಳು ಎಕ ಗಳನ್ನು ಸಾಕತಕ್ಕದ್ದೆಂದು ಕಟ್ಟುಮಾಡಿದರು. ತನುಗೂ ತಮ್ಮ ದನಕರುಗಳಿ ಸಾಕಾಗುವ ಬೆಳೆಯನ್ನೇ ಬೆಳೆಯತಕ್ಕದ್ದೆಂದೂ ಗೊತ್ತುಮಾಡಿದರು. ತಮ ಹೆಚ್ಚಾಗಿ ಉಳಿದ ಕಾಳುಕಡಿ ಮೊದಲಾದವುಗಳನ್ನು ತಮ್ಮತಮ್ಮ ದನಕರುಗಳ ಹಾಕಹತ್ತಿದರು. ಇದರಿಂದ ಗೊಬ್ಬರವು ಹೆಚ್ಚಾಯಿತು. ಎಲ್ಲ ಗೊಬ್ಬರವನ್ನೂ ಭೂಮಿಗೆ ಹಾಕಿದರು. ಬೆಳೆಗಳು ಸೊಗಸಾಗಿ ಬೆಳೆಯಹತ್ತಿದವು. ಆಮೇಲೆ ಏ ಎಕಳ ಬದಲಾಗಿ ಏಳು ಚಲೋ ಎಕಳುಗಳನ್ನು ಸಾಕತಕ್ಕದ್ದೆಂದು ನಿಯಮಮಾ ದರು. ಹಾಲು, ಬೆಣ್ಣೆ ಮಾರಹತ್ತಿದರು. ಬೆಣ್ಣೆತೆಗೆದ ಹಾಲಿನ ಉಪಯೋಗವ್ನಾ ಪ್ರತಿಯೊಬ್ಬ ರೈತನು ೧೫೦ ಹಂದಿಗಳನ್ನು ಸಾಕಹತ್ತಿದನು. ಈ ಪ್ರಕ "ಬಟರ" ಮತ್ತು "ಬೇಕನ್ನ" ಇವು ಯುರೋಪಖಂಡದ ಎಲ್ಲ ದೇಶಗ ಮುಖ್ಯವಾಗಿ ಇಂಗ್ಲಂಡಕ್ಕೆ ಕಳಿಸಲ್ಪಡಹತ್ತಿತು. ಶಹರಗಳಲ್ಲಿ ಮುಖ್ಯ ಸ್ಥಳಗ ಉಪನಳಗಳು, ಉಪೋಪನಳಗಳು ಇರುವಂತೆ ಡೆನ್ಮಾರ್ಕದ ಹಳ್ಳಿಗಳಲ್ಲಿ ಅನೇ ತರದ ಸಣ್ಣದೊಡ್ಡ ಸಹಕಾರಿ ಸಂಘಗಳಿರುತ್ತವೆ ಅವರು ಒಬ್ಬರಿಗೊಬ್ಬರು ನೆರವಾಗಿ ತಮಗೆ ಬೇಕಾಗಿ ಉಳಿದ ಹಾಲು, ಬೆಣ್ಣೆ, ಮಾಂಸ ಮೊದಲಾ ಮಾಲನ್ನು ಸಹಕಾರಿಸಂಘಗಳ ಮುಖಾಂತರ ಮಾರುತ್ತಿರುವರು. ಹೀಗಾಗಿ ಅವ ಬಗತ್ತಿನಲ್ಲಿಯೇ ಮಾದರಿಯ ಒಕ್ಕಲಿಗರಾಗಿದ್ದಾರೆ; ಒಕ್ಕಲತನದ ಲಾಭವನ್ನೂ ಕೊಂಡಿದ್ದಾರೆ; ಮತ್ತು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ.

೯. ಇದರಂತೆಯೇ ಈಗ ನಮ್ಮಲ್ಲಿಯೂ ಹಳ್ಳಿಗಳ ಸುಧಾರಣೆಯ ಕಾರ್ಯವು ಪ್ರಾರಂಭವಾಗಿರುವದು. ಹಿಂದಿನ ಗವ್ಹರ್ನರ ಸಾಹೇಬರಾದ ಫ್ರೆಡರಿಕ್ ಸಾಯಿಕ್ಸರು ಈ ಬೀಜವನ್ನು ಊರಿದವರು. ಈಗಿನ ಗವ್ಹರ್ನರ ಲಿನ್ಲಿ ಸಾಹೇಬರು ಗ್ರಾಮಸುಧಾರಣೆಯ ಕಾರ್ಯದಲ್ಲಿ ಮುತ್ತಿಷ್ಟು ಹೆಚ್ಚಿನ ಗತಿಯ ಕೆಲಸವನ್ನು ನಡೆಯಿಸಿರುವರು. ಬೀಜದ ಹೋರಿಯು ಅವರ ಮುಖ್ಯ ಉದ್ದೇಶವು. ಬೀಜದ ಹೋರಿಗಳಿಂದಲೇ ನಮ್ಮ ಹಿಂಡುವ ಹಾಗು ಹೂಡುವ ದನಗಳ ಸುಧಾರಣೆಯಾಗುವದು. ಹಿಂಡುವ ಮತ್ತು ಹೂಡುವ ದನಗಳ ಸುಧಾರಣೆ ಯಾಗುತ್ತ ಹೋದಂತೆ ನಮ್ಮ ಮತ್ತು ನಮ್ಮ ಒಕ್ಕಲತನದ ಸುಧಾರಣೆಯಾಗು ವದು. ಒಕ್ಕಲಿಗರೂ ಸಶಕ್ತರಾಗುವರು. ದನಗಳು ಸಶಕ್ತವಾದಂತೆ ಕಡಿಮೆ ಖರ್ಚಿನಿಂದ ಹೊಲದ ಕೆಲಸವಾಗುವದು. ಇನ್ನು ಶಿಕ್ಷಕರಾದ ನಿಮಗೆ ಸಂಬಂಧಿ ಸಿದ ಕೆಲವು ಮಾತುಗಳನ್ನು ಹೇಳಿ ವಿಷಯವನ್ನು ಮುಗಿಸುವೆನು

೧೦. ವಿದ್ಯಾಪ್ರಸಾರವು ಸುಧಾರಣೆಯ ಒಂದು ಬಲವಾದ ಸಾಧನವು. ಯಾವ ವಿದ್ಯೆಯಿಂದ ವಿದ್ಯಾರ್ಥಿಗಳು ಪ್ರಕೃತಿಯಿಂದ ಬಲಿಷ್ಠರಾಗು ವರೋ ಯಾವ ವಿದ್ಯೆಯಿಂದ ಅವರು ತಮ್ಮ ಉದರನಿರ್ವಾಹದ ಬಗ್ಗೆ ತಮ್ಮ ಕಾಲ ಮೇಲೆ ನಿಲ್ಲುವರೋ ಮತ್ತು ಯಾವ ವಿದ್ಯೆಯಿಂದ ತಮ್ಮ ಮತ್ತು ತಮ್ಮ ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಗೆ ಅನುಕೂಲವಾಗುವದೋ ಆ ವಿದ್ಯೆಯೇ ನಿಜವಾದ ವಿದ್ಯೆಯು. ಅಂಥ ವಿದ್ಯೆಯನ್ನು ಪೂರೈಸಿಕೊಡುವದು ನಿಮ್ಮ ಕರ್ತವ್ಯವು. ಇಂದು ಓದುಬರೆಹ ಗಣಿತ, ಪರೀಕ್ಷೆ ಇವು ನಮ್ಮ ಈ ಯುಗದ ಗುರಿಗಳಲ್ಲ. ಪರಿ ಸ್ಥಿತಿಗೆ ಅನುಗುಣವಾದ ಶಿಕ್ಷಣಕೊಡಿರಿ. ಶಿಕ್ಷಕನ ಮೇಲೆಯೇ ಶಿಕ್ಷಣದ ಭಾರವು ವಿಶೇಷವಾಗಿ ಅವಲಂಬಿಸಿದೆ. ಶಿಕ್ಷಣದ ಸದುಪಯೋಗವು ಸಹ ಶಿಕ್ಷಕರ ಮೇಲೆಯೇ ಬಹಳವಾಗಿ ಹೊರುವದು. ಶಿಕ್ಷಕರ ಕೆಲಸವು ಬಹಳ ಪವಿತ್ರವಾದ ಕಾರ್ಯ. ಒಳ್ಳೇ ಶಿಕ್ಷಣವು ನಿಮ್ಮ ಗುರಿಯಾಗಿರಲಿ. ಗಣಿತ ಭೂಗೋಲ ನಿಮ್ಮ ಪರಿಸ್ಥಿತಿಗನುಸರಿಸಿ ಕಲಿಸಲು ಪ್ರಯತ್ನವಹಿಸಿರಿ. ರಾಜ್ಯಶಾಸನ ಪದ್ಧತಿಯು ಮರ್ಮವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಿರಿ. ಕೈ ಮುಟ್ಟಿ ಕೆಲಸ ಮಾಡಲು ಉತ್ಸುಕತೆ ಬೆಳಿಸಿರಿ. ಒಕ್ಕಲತನ ಮಾಡಲು ಶಿಕ್ಷಣದ ಅವಶ್ಯಕತೆ ಇದೆಯೆಂಬದನ್ನು ಗೊತ್ತುವಾಗಿಸಿಕೊಡಿರಿ. ಒಕ್ಕಲತನದ ಪುಸ್ತಕಗಳನ್ನು ಓದಿ ಓದಿಸಲು ಹಚ್ಚಿರಿ. ಬೇರೆ ಬೇರೆ ಜಾತಿಗಳ ಸೂತ್ರವು ಹ್ಯಾಗೆ ಸಾಗಿದೆಯೆಂಬ ದನ್ನು ತಿಳಿಸಿಕೊಡಿರಿ. ವಿದ್ಯಾರ್ಥಿಗಳ ನಿರೀಕ್ಷಣಶಕ್ತಿ ಬೆಳಿಸಿರಿ. ಅಂತೂ ಶಿಕ್ಷಣ ಸುಲಭವಾಗಿ ಮಾಡಿ ಎಲ್ಲರೂ ಶಿಕ್ಷಣ ಹೊಂದುವಂತೆ ಮಾಡಿರಿ. ಇತ್ತಿತ್ತ

ಲಾಗಿ ಶಿಕ್ಷಕರ ಮತ್ತು ಶಿಕ್ಷಣಕ್ರಮದ ಮೇಲೆ ಅನೇಕ ಆರೋಪಗಳು ಬ
ತ್ತಿವೆ. ನೌಕರಿಯು ಶಿಕ್ಷಣದ ಗುರಿಯಲ್ಲ. ಒಟ್ಟು ಪ್ರಜಾಸಂಖ್ಯೆಯಲ್ಲಿ ನೌಕರ
ಯಾವಾಗಲೂ ೧೦೦ ಕ್ಕೆ ೨ ಷ್ಟು ಮಾತ್ರ ಇರುವರು. ಸುಶಿಕ್ಷಿತರ ಸಂಖ್ಯೆಯ
ಹೆಚ್ಚಾದಂತೆ, ನೌಕರಿಯು ದುರ್ಲಭವಾಗುವದು. ನೌಕರಿಯು ಸಿಗದಿದ್ದರೂ
ಶಿಕ್ಷಣವು ಬೇಕು. ಒಕ್ಕಲತನದ ಶಿಕ್ಷಣದ ಅವಶ್ಯಕತೆಯು ಸಮಗೆ ಬಹಳ
ಪ್ರತಿಯೊಂದು ಊರಿನಲ್ಲಿ ಒಕ್ಕಲತನದ ಬಲವಿನ ವರ್ಗವು ಇರಬೇಕು. ಅಂ
ನಿಮ್ಮ ಅಭ್ಯಾಸಪತ್ರಿಕೆಯಲ್ಲಿ ಕೆಲವುಬಟ್ಟಿಗೆ ಒಕ್ಕಲತನದ ವಿಷಯಗಳನ್ನು ಸೇ
ದ್ದಾರೆ. ಪ್ರತಿಯೊಂದು ತಾಲೂಕಿಗೆ ವೇಏೀಹೊಸೂರ ಸಮೂನೆಯ ಒಕ್ಕ
ತನದ ಶಾಲೆಯ ಅವಶ್ಯಕತೆಯಿದೆ ಹೀಗಾದ ಹೊರತು ಒಕ್ಕಲಿಗರ ಮಕ್ಕ
ಒಕ್ಕಲತನದ ಏಳ್ಗೆಯಾಗಲಾರದು. ಇದು ಬಂದೆರಡು ವರ್ಷಗಳಲ್ಲಿ ಆಗತ
ಸುಧಾರಣೆಯಲ್ಲ. ಈಗಲೇ ಎಲ್ಲರೂ ಒಮ್ಮನಸ್ಸಿನಿಂದ ಕಾರ್ಯವನ್ನು ಪ್ರಾರಂ
ಮಾಡಿದರ ಇದರ ಪ್ರತಿಫಲವು ಸಿಗಲು ೧೦೦ ವರ್ಷಗಳು ಬೇಕಾಗಬಹುದ
ಆದರೂ ಅದ್ಭುತವಿಲ್ಲ. ನಮ್ಮ ಒಕ್ಕಲಿಗರು ಮತ್ತು ಒಕ್ಕಲತನವು ಸುಧಾರಿಸಿದ
ಇನ್ನೂ ೧೦ ಪಟ್ಟು ಉತ್ಪನ್ನ ಹೆಚ್ಚಿಗೆ ಮಾಡಲು ಶಕ್ಯವದೆ. ಉತ್ಪನ್ನವು ಹೆಚ್ಚಿದ
ಉಳಿದ ಎಲ್ಲ ಸುಧಾರಣೆಗಳು ತಮ್ಮಿಂದ ತಾವೇ ಆಗುವವೆಂಬುದರ
ಸಂಶಯವಿಲ್ಲ.

ಶಿಶುಶಾಲೆಗಳು

(ಮುಂದೆ ಸಾಗಿದುದು.)

ಬಾಲಕರ ಹುಟ್ಟುಗುಣಗಳೂ ಮಾನಸಿಕ ಬಲವುಗಳೂ ಅವರ ಶಿಕ್ಷಣ
ತುಂಬ ಮಹತ್ವವುಳ್ಳವಾಗಿವೆ. ಇವು ಬಾಲಕರ ಮುಂದಿನ ಶೀಲ ಸ್ವಭಾವಗ
ಆಸ್ಪಿವಾರದಂತೆ ಉಪಯೋಗವಾಗುವವು. ಮತ್ತು ಮುಂದಿನ ಆಯುಷ್ಯದಲ್ಲಿ
ಅವರ ವಿಚಾರದ ಬೆಳವಣಿಗೆಗೂ ಚಟಗಳ ಉತ್ಪತ್ತಿಗೂ ಕಾರಣವಾಗುವ
ಬಾಲಕರ ಶೀಲ ಸ್ವಭಾವಗಳಿಗೆ ಈ ಹುಟ್ಟುಗುಣ ಹಾಗು ಮಾನಸಿಕ ಬಲವುಗ
ಬಲವಾದ ಆಧಾರಗಳೆನಿಸಿಕೊಳ್ಳುವವು.

ಅವುಗಳ ಮುಖ್ಯ ಲಕ್ಷಣಗಳು ಈ ರೀತಿಯಾಗಿರುವವು:—

೧. ಬಾಲಕರ ಮನಸ್ಸಿನ ಒಲವುಗಳು ಬಹು ಚಂಚಲವಾಗಿರುವವು. ಈ ಒಲವುಗಳು ಬೇರೆ ಬೇರೆ ಬಾಲಕರಲ್ಲಿ ಬೇರೆ ಬೇರೆ ಪ್ರಮಾಣದಿಂದ ಕಂಡುಬರುವದು. ಇವಕ್ಕೆ ಯೋಗ್ಯ ಉತ್ತೇಜನವು ದೊರೆಯದೆ ಇದ್ದರೆ ಮೊಳಕೆ ಒಡೆದೇ ಕಮರಿಹೋಗುವವು. ಉದಾಹರಣೆಗಾಗಿ ಒಂದು ಮಗುವು ಕೈಗೆ ಸಿಕ್ಕಿದ್ದನ್ನೆಲ್ಲ ಹರಿದುಮುರಿದು ಕೆಡಿಸಿಬಿಡುವ ಒಲವುಳ್ಳದ್ದಿರುವದೆಂದು ತಿಳಿಯೋಣ. ಮತ್ತು ಅದಕ್ಕಾಗಿ ಆ ಮಗುವಿನ ಪಾಲಕರು ಅದಕ್ಕೆ ಆಡುವ ಉಪಕರಣವನ್ನೂ ಗೊಂಬೆಮೊದಲಾದವುಗಳನ್ನೂ ಕೊಡುವದನ್ನು ಬಿಟ್ಟುಬಿಟ್ಟರೆಂದು ಕಲ್ಪಿಸೋಣ. ಇದರಿಂದ ಆ ಮಗುವಿನಲ್ಲಿದ್ದ ಹೊಸ ಹೊಸ ಮಾದರಿಗಳನ್ನು ಮಾಡಿ ತೆಗೆಯುವ ಮನಸ್ಸಿನ ಹವಣಿಕೆಯನ್ನೂ ರಚನಾಪರವಾದ ಅದರ ಮಾನಸಿಕ ಪ್ರವೃತ್ತಿಯನ್ನೂ ಹತ್ತಿಕ್ಕಿದಂತಾಗುವದು. ಇದ್ದದ್ದನ್ನು ಕೆಡಿಸಿ ತಾನು ಹೊಸದನ್ನು ಮಾಡಬೇಕೆಂಬ ಹವಣಿಕೆಯಿಂದ ಅಥವಾ ಅದರ ಒಳಗೆ ಏನಿರುವದೆಂಬುದನ್ನು ತಿಳಿದುಕೊಳ್ಳುವ ಆತುರತೆಯಿಂದ ಆ ಮಗುವು ತನಗೆ ಸಿಕ್ಕಿದ್ದನ್ನೆಲ್ಲ ಹರಿದು ಮುರಿದು ಕೆಡಿಸುತ್ತಿರುವದು. ಈ ಬಗೆಯ ಪ್ರವೃತ್ತಿಗೆ ಪಾಲಕರಿಂದ ಉತ್ತೇಜನ ದೊರೆಯುವದರ ಬದಲು ಅವರು ಅದಕ್ಕೆ ಒಡವೆಗಳೇ ದೊರೆಯದಂತೆ ಮಾಡಿಬಿಟ್ಟರೆ ಮಗುವಿನಲ್ಲಿದ್ದ ಈ ಪ್ರವೃತ್ತಿಯು ಕಂದಿಕುಂದಿ ಕೊನೆಗೆ ಸಂಪೂರ್ಣವಾಗಿ ಲಯವಾಗಿ ಬಿಡುವದು.

ಇದೇ ರೀತಿಯಾಗಿ ತಂದೆತಾಯಿಗಳು ತಮ್ಮ ಮಕ್ಕಳು ಮಣ್ಣಿನಲ್ಲಿ ಆಡಿದರೆ ಕೈಗಳನ್ನೂ ಬಟ್ಟೆಗಳನ್ನೂ ಹೊಲಸುಮಾಡಿಕೊಳ್ಳುವರೆಂಬ ವಿಚಾರದಿಂದಲೂ ಚಾಕತ್ತರಿ ಮೊದಲಾದ ಉಪಕರಣಗಳನ್ನು ಕೊಟ್ಟರೆ ಕೆತ್ತಿ, ಕತ್ತರಿಸಿ ವಸ್ತುಗಳನ್ನು ಕೆಡಿಸುವರು, ಹಾಗು ಮೈ ಕೈಗಳಿಗೆ ಗಾಯಮಾಡಿಕೊಳ್ಳುವರು ಎಂಬ ಕಾರಣದಿಂದಲೂ ಅವರನ್ನು ಪ್ರತಿಬಂಧಿಸಿದರೆ ಅವರಲ್ಲಿರುವ ರಚನಾತ್ಮಕ ಪ್ರವೃತ್ತಿಯನ್ನೂ ಕೈಗಾರಿಕೆಯ ಮೇಲಿನ ಪ್ರೀತಿಯನ್ನೂ ವ್ಯಕ್ತಪಡಿಸುವ ಮನಃಪ್ರವೃತ್ತಿಯನ್ನು ಹತ್ತಿಕ್ಕಿದಂತಾಗುವದು.

೨. ಬಾಲಕರ ಮನಃಪ್ರವೃತ್ತಿಗಳು ಕ್ಷಣಿಕವಾಗಿರುವವು. ನಾವು ಕೇವಲ ಮನಃಪ್ರವೃತ್ತಿಗಳನ್ನೇ ಅವಲಂಬಿಸಲು ಸಾಧ್ಯವಿಲ್ಲ. ನಾವು ಅವುಗಳ ಮೂಲದ ಬಾಲಕರಲ್ಲಿ ಒಳ್ಳೆಯ ಶೀಲ ಸ್ವಭಾವಗಳನ್ನು ಹುಟ್ಟಿಸಲಿಕ್ಕೆ ಪ್ರಯತ್ನ ಮಾಡಬೇಕಾಗುವದು. ಕೆಲವೊಂದು ಒಳ್ಳೆಯ ಕಾರ್ಯಗಳನ್ನು ಪುನಃಪುನಃ ಮಾಡಿಕ್ಕಾ ಅವುಗಳ ಮೂಲಕ ಬಾಲಕರು ಒಳ್ಳೆಯ ದಾರಿಯಲ್ಲಿ ಸಾಗಿ ಯೋಗ್ಯ

ಕಾರ್ಯಗಳಲ್ಲಿ ಪ್ರವೃತ್ತಿಯನ್ನು ತೋರಿಸಲಿಕ್ಕೂ ನಾವು ಮೇಲೆಮೇಲೆ ಸಂ
ಗಳನ್ನು ತಂದುಕೊಡಬೇಕಾಗುವದು.

೩. ಬಾಲಕರ ಮನಃಪ್ರವೃತ್ತಿಗಳಿಗೆ ನೀತಿ-ಅನೀತಿಗಳ ಒರೆಗಲ್ಲು
ಹೊಂದಲಾರದು. ಬಾಲಕರು ಕೇವಲ ಮನಸ್ಸಿನ ಉತ್ತೇಜನದ ಮೂಲಕವಾಗಿ
ಮಾಡುತ್ತಿರುವ ಕಾರ್ಯಗಳಲ್ಲಿ ನಿಯಮಗಳನ್ನು ಪಾಲಿಸುವ ನೀತಿಯ ಇ
ಅನೀತಿಯ ಪರಿಮಾಣವನ್ನು ಕಂತುಕೊಳ್ಳಲು ಸಾಧ್ಯವಾಗದು. ಬಾ
ಶಿಕ್ಷಣವನ್ನು ಕೈಕೊಂಡವರು ಈ ಮಾತನ್ನು ನೆನಪಿನಲ್ಲಿಟ್ಟಿರಬೇಕು. ಮ
ಅವರು ಕೇವಲ ಅಂತಃಪ್ರೇರಣೆಯಿಂದಲೇ ಮಾಡುತ್ತಿರುವ ಕಾರ್ಯಗಳಿ
ಅವರನ್ನು ದಂಡಿಸಲು ಹೋಗಬಾರದು. ಬಾಲಕರು ಇಂಥ ಕಾರ್ಯ
ಯಾಕೆ ಮಾಡುವರೆಂಬದರ ಕಾರಣವನ್ನು ಮೊದಲು ಕಂಡುಕೊಳ್ಳಬೇಕು; ಪ
ಅವರ ಮನಸ್ಸನ್ನು ಆ ಕಾರಣದಿಂದ ತಿರುಗಿಸಿ ಯೋಗ್ಯ ಕಾರ್ಯದ
ಅವರನ್ನು ಒಲಿಸಿ ಅವರು ಒಳ್ಳೆಯ ಕಾರ್ಯದಲ್ಲಿ ತೊಡಗುವಂತೆ ಮಾಡಬೆ

೪. ಬಾಲಕರ ಮನಃಪ್ರವೃತ್ತಿಗಳಿಗೆ ಯೋಗ್ಯ ಶಿಕ್ಷಣವನ್ನು ಕೊಡ
ಗುವದು. ಅವುಗಳನ್ನು ನಾವು ನಮಗೆ ಬೇಕಾದಂತೆ ತಿದ್ದಿಕೊಳ್ಳಬಹುದು. ಪ
ಅವುಗಳಿಗೆ ಯೋಗ್ಯ ಮಾರ್ಗವನ್ನು ತೋರಿಸುವದು ನಮ್ಮ ಕರ್ತವ್ಯವೇ

ಮನಃ ಪ್ರವೃತ್ತಿಗಳಿಗೂ ಹುಟ್ಟುಗುಣಗಳಿಗೂ ತುಸು ಅಂತರವಿರು
ಕೆಲವು ಮನಃಪ್ರವೃತ್ತಿಗಳಿಗೆ ಸುಖದುಃಖದ ಭಾವನೆಗಳು ಕಾರಣವಾಗಿರ
ಅನುಕರಣಶೀಲತೆ ಸಹಾನುಭೂತಿ ಮೊದಲಾದ ಹುಟ್ಟುಗುಣಗಳಿಗೆ ಮ
ಭಾವನೆಗಳು ಅಷ್ಟು ಪ್ರಬಲಕಾರಣಗಳಾಗಿರುವದಿಲ್ಲ. ಮತ್ತು ಈ ಗು
ಇಂಥದೇ ಒಂದು ನಿಶ್ಚಿತವಾದ ಕಾರ್ಯವನ್ನು ಮಾಡಲು ಪ್ರೇರಿಸುವ
ಹೇಳಲಾಗುವದಿಲ್ಲ. ಈ ಮಾನಸಿಕ ವಿಕಾರವನ್ನು ವಿಭಜನೆಮಾಡಿ ನೋ
ಅನಂತರ್ಲ್ಲಿ (೧) ಕೆಲವೊಂದು ಪದಾರ್ಥದ ಇಲ್ಲವೆ ಪದಾರ್ಥಗಳ ಇಲ್ಲವೆ ಪರಿ
ಕಲ್ಪನೆಯನ್ನು ಮನಸ್ಸಿನಲ್ಲಿ ತಂದುಕೊಳ್ಳುವದು. (೨) ಆ ಕಲ್ಪನೆಯು ಮ
ಹುಟ್ಟಿಸುವ ಸುಖದುಃಖಗಳ ಭಾವನೆಗಳನ್ನೂ ಮನೋವಿಕಾರವನ್ನೂ ಇ
ವದು. (೩) ಆ ಮನೋವಿಕಾರಗಳಿಗೆ ಅನುಗುಣವಾಗಿ ಆ ಪದಾರ್ಥದ ಇಲ್ಲವೆ
ಸ್ಥಿತಿಯ ವಿಷಯದಲ್ಲಿ ಕೆಲವೊಂದು ಕಾರ್ಯವನ್ನು ಮಾಡುವದು ಎಂಬ ಮೂ
ಮೆಟ್ಟುಗಳನ್ನು ಕಲ್ಪಿಸಬೇಕಾಗುವದು. ಈ ಮೂರು ಮೆಟ್ಟುಗಳಲ್ಲಿ ಮೊದಲನೆಯ
ಮೂರನೆಯದೂ ನಮಗೆ ಅಂಕಿತವಾಗಿರಬಹುದು. ಎರಡನೆಯದು (ಭ

ವ ಗುನೋವಿಕಾರ) ಮಾತ್ರ ನಮ್ಮ ಕೈಯಲ್ಲಿ ಉಳಿಯಲಾರದು. ಉದಾ:—
ಎಗ ಸ್ಥಳದಿಂದ ಓಡಿ ಹೋಗಬೇಕೆಂಬ ವಿಚಾರವು ಮಗುವಿನ ಮನಸ್ಸಿನಲ್ಲಿ
ನಾಂಟಾದ ಕೂಡಲೆ ತಾನಾಗಿಯೇ ಬಂದುಬಿಡುವದು. ಆದರೆ ಆ ಭಯವನ್ನು
ಟ್ಟಿಸುವ ಪದಾರ್ಥವು ಅಥವಾ ಪರಿಸ್ಥಿತಿಯು ಮಾತ್ರ ಬೇರೆ ಬೇರೆ ಇರಬಹುದು.
ಗುವು ಚಿಕ್ಕದಾಗಿರುವಾಗ ಅದು ಅನೇಕ ಸಂಗತಿಗಳನ್ನು, ಬಹುಶಃ ತನಗೆ
ಸದಾಗಿರುವ ಎಲ್ಲ ಪದಾರ್ಥಗಳನ್ನೂ ಸನ್ನಿವೇಶಗಳನ್ನೂ, ನೋಡಿ ಅಂಜುತ್ತಿರು
ಬರಬರುತ್ತ ಇಂಥ ಎಲ್ಲ ಸಂಗತಿಗಳಿಗೆ ಅಥವಾ ಸನ್ನಿವೇಶಗಳಿಗೆ ಅಂಜುವ
ಣವಿಲ್ಲವೆಂಬ ವಿಚಾರವನ್ನು ಅದು ಅನುಭವದಿಂದ ಕಂಡುಕೊಳ್ಳುವದು. ಮತ್ತು
ದಲು ಭಯವನ್ನು ಹುಟ್ಟಿಸದಿರುವ ಪದಾರ್ಥಗಳು ಕೂಡ ಅದಕ್ಕೆ ಹೆದರಿಕೆ
ಂಟುಮಾಡಬಹುದು ಎರಡು ವರುಷದ ಮಗುವನ್ನು ಒಂದು ನಾಯಿಯ
ರವಿಟ್ಟರೆ ಅದು ಹೋಗಿ ಆ ನಾಯಿಯ ಬಾಲವನ್ನು ಎಳೆಯಬಹುದು; ಅದರ
ಿ ಕೂತು ಸವಾರಿ ಮಾಡುತ್ತೇನೆನ್ನಬಹುದು. ಮುಂದೆ ಕೆಲವು ದಿನಗಳ
ನಾಯ, ಅದೇ ನಾಯಿಯು ಬೇರೊಂದು ಪ್ರಾಣಿಯನ್ನು ಇಲ್ಲವೆ ಮನುಷ್ಯ
ಕಚಿಸಿದ್ದನ್ನು ನೋಡಿದ ಒಳಿಕ, ಆ ಮಗುವಿಗೆ ಆ ನಾಯಿಯನ್ನು ನೋಡಿದರೆ
ಕ ಬರಬಹುದು. ಇದರಿಂದ ಮಗುವಿಗೆ ಭಯವನ್ನು ಹುಟ್ಟಿಸುವ ಕಾರಣವು
ಕುರುವದಿಲ್ಲವೆಂದಹಾಗಾಯಿತು. ಇದೇ ಮೇರೆಗೆ ಭಯವು ಹುಟ್ಟಿದ
ನಾಯು ಅದು ಮಾಡುವ ಕಾರ್ಯವೂ ನಿಶ್ಚಿತವಿರುವದಿಲ್ಲ. ನಾಯಿಯನ್ನು
ಡಿ ಅಂಜಿದ ಮಗುವು ಮೊದಮೊದಲು ಚೀರಿ ಅತ್ತು ಹಿರಿಯರ ಸಹಾಯವನ್ನು
ಕ್ಷಿಸಬಹುದು; ಅಡಗಿಕೊಳ್ಳಬಹುದು; ದೂರ ಓಡಿ ಹೋಗಬಹುದು;
ಂದರೆ ಧೈರ್ಯಮಾಡಿ ನಿಂತಿರಬಹುದು. ತನ್ನ ಸಂಗಡಿಗರಿಗೆ ತನ್ನ ಧೈರ್ಯವನ್ನು
ರಿಸಬೇಕೆಂಬ ಲವಲವಿಕೆಯಿಂದ ಅದು ತನ್ನ ಸ್ಥಳದಲ್ಲಿಯೇ ಕದಲದೆ
ಬಹುದು. ಆದರೆ ಈ ಕಾರ್ಯಗಳಲ್ಲಿ ಯಾವದನ್ನು ಅದು ಮಾಡಿದರೂ ಮೊದಲು
ಯಿಂದ ಹೆದರಿದಾಗ ಅದರ ಶರೀರದಲ್ಲಾಗುವ ವ್ಯಾಪಾರಗಳು ಅಂದರೆ
ರೆಯು ನಿಸ್ತೇಜವಾಗುವದು, ಎದೆಯು ದಡ ದಡ ಹಾರುವದು, ಕೈಕಾಲು
ಗುವದು ಮೊದಲಾದ ಭಯವ್ಯಂಜಕ ಲಕ್ಷಣಗಳು ಮಾತ್ರ ಆ ಮಗುವಿನಲ್ಲಿ
ಸು ಬಂದೇ ಬರುವವು.

ಬಾಲಕರ ಮನಸ್ಸಿನ ಮೂಲ ಭೂತ ಪ್ರವೃತ್ತಿಗಳಲ್ಲಿ ಪ್ರಾಮುಖ್ಯ
ವಿಷಯಗಳನ್ನು ಈರೀತಿಯಾಗಿ ವರ್ಗೀಕರಿಸುವದು:—

ಭಯದಿಂದ ಓಡಿಹೋಗುವ ಅಥವಾ ಅಡಗಿಕೊಳ್ಳುವ ಪ್ರವೃತ್ತಿ.

ಶಿಕ್ಷಣ ಶಾಸ್ತ್ರಜ್ಞರು ಬಾಲಕರ ಮನಸ್ಸಿನೊಳಗಿನ ಅಕಾರಣವಾದ ಭಯದ ಪ್ರಶ್ನೆಯನ್ನು ಸಾಧ್ಯವಿದ್ದಷ್ಟು ಬೇಗೆ ಪರಿಹರಿಸಲಿಕ್ಕೆ ಪ್ರಯತ್ನಮಾಡಬೇಕೆನ್ನುವರು. ಮಗುವು ಯಾವದಾದರೊಂದು ಪದಾರ್ಥವನ್ನು ನೋಡಿ ಇಲ್ಲವೆ ಯಾವದೊಂದು ಪರಿಸ್ಥಿತಿಯಲ್ಲಿ ಅಂಜಿಕೆಯನ್ನು ತೋರಿಸತೊಡಗಿದೊಡನೆ ತಾನು ಅದಕ್ಕೆ ಅಂಜುವ ಕಾರಣವಿಲ್ಲವೆಂಬ ಕಲ್ಪನೆಯು ಮನಸ್ಸಿನಲ್ಲಿ ಬರುವಂತೆ ಅದಕ್ಕೆ ಆ ವಸ್ತುವಿ ಅಥವಾ ಪರಿಸ್ಥಿತಿಯ ಪರಿಚಯಮಾಡಿಕೊಡಬೇಕಾಗುವದು. ಮತ್ತು ಮಗುವಿ ಮನಸ್ಸಿನಲ್ಲಿ ಭಯದ ಕಲ್ಪನೆಯೇ ಸೇವದಂತೆ ನೋಡಿಕೊಳ್ಳಬೇಕಾಗುವದು.

ತಪ್ಪುಗಳನ್ನು ಮಾಡಲಿಕ್ಕೆ ಮಗುವು ಹೆದರಬಾರದು: ಮಗುವು ಅತ್ಯ ವಾದ ಸ್ಥಳದಲ್ಲಿ, ಗೋಡೆ ಗಿಡ ಮುಂತಾದವುಗಳನ್ನು, ಏರಿರುವದನ್ನು ಆಕಸ್ಮಿ ಚಾಕು ಕತ್ತರಿಗಳನ್ನು ಹಿಡಿದುಕೊಂಡಿರುವದನ್ನು ನೋಡಿ ಪಾಲಕರಾಗಲಿ ಶಿಕ್ಷ ರಾಗಲಿ ಅಂಜಿದರೆ ಇಲ್ಲವೆ ಗಾಬರಿಯಾದರೆ ಅಥವಾ ಚಿಂತೆಮಾಡಹತ್ತಿದರೆ ಮಗುವಿ ಮನಸ್ಸಿನಲ್ಲಿಯೂ ಆ ಭಾವನೆಯು ಬಂದುಬಿಡುವದು. ಮಗುವಿನ ಕೈಗೆ ಕತ್ತ ಯನ್ನು ಕೊಡುವದಕ್ಕಿಂತ ಮುಂಚೆ ಅದನ್ನು ಹೇಗೆ ಉಪಯೋಗಿಸಬೇಕೆಂಬದ ಅದಕ್ಕೆ ಚೆನ್ನಾಗಿ ತಿಳಿಸಿ ಹೇಳಿಕೊಡಬೇಕು. ಆದರೆ ಕೈ ಕತ್ತರಿಸೀತು ಮುಂತಾ ಮಾತುಗಳನ್ನು ಹೇಳಿ ಅದನ್ನು ಅಂಜಿಸಬಾರದು. ಕೆಲ ಕೆಲವು ಬಾಲಕ ಅಕಾರಣವಾದ ಭಯದಿಂದ ಮನಸ್ಸಿನಲ್ಲಿ ಕಂಗಾಲರಾಗುವರು. ಯಾರಾದ ಏನಾದರೂ ಅಂದುಬಿಡುವರೆನೋ ಎಂಬ, ಇಲ್ಲವೆ ತಮಗೇನಾದರೂ ಅಪಾಯ ಸಂಭವಿಸಬಹುದೇನೋ ಎಂಬ, ವಿಚಾರದಿಂದ ಅವರು ಅಡಿಗಡಿಗೆ ಹೆದರುತ್ತಿ ವರು. ಇಂಥ ಹುಡುಗರ ಸಂಗಡ ನಡೆಯುವಾಗ ಶಿಕ್ಷಕರು ತುಂಬ ಎಚ್ಚರಿ ಯಿಂದಿರಬೇಕಾಗುವದು.

ಭಯವು ಶಕ್ತಿಯನ್ನು ಕುಂದಿಸುವದು. ಮತ್ತು ಇದರಿಂದ ಮನುಷ್ಯ ಕರ್ತೃತ್ವಶಕ್ತಿಯು ಕಡಿಮೆಯಾಗಿ ಅವನು ಕಾರ್ಯಶೂನ್ಯನಾಗುವ ಸಂಭವವುಂ ಮತ್ತು ಇಂದು ಅಂಜುಳಿಯಾದ ಮಗುವು ಮುಂದೆ ಅರೆಮರುಳ ಹೇಡಿಯೂ ಆದ ಮನುಷ್ಯನೆನಿಸಿಕೊಂಡು ನಿರುಪಯೋಗಿಯಾಗಿ ಬಾಳಬಹುದು. ನಿರ್ಭಯದ ಸ್ವಭಾವವುಳ್ಳ ಮಗುವಿನಲ್ಲಿ ಆತ್ಮವಿಶ್ವಾಸವುಂಟಾಗುವ ಅದರಲ್ಲಿ ಹೊಸ ಹೊಸ ಸಂಗತಿಗಳನ್ನು ನೆರನೇರಿಸುವ ಉತ್ಸುಕತೆಯುಂಟಾ ವದು. ಮತ್ತು ಅದರ ಮನಃಶಕ್ತಿಗಳು ಚೆನ್ನಾಗಿ ಬೆಳೆವಣಿಗೆಹೊಂದುವ ಬೆದರಿಕೆಯೂ ಶಿಕ್ಷೆಯೂ ಮಕ್ಕಳಲ್ಲಿ ಭಯವನ್ನು ಹುಟ್ಟಿಸುವವು. ತಾನು ಮಾಡಿ ತಪ್ಪಿನಿಂದ ತನಗೆ ಶಿಕ್ಷೆಯಾಗುವದೆಂಬ ಹೆದರಿಕೆಯಿಂದ ಮಗುವು ಪುನಃ

ದೇಶದ ತಪ್ಪು ಮಾಡಲಾರರೆಂಬುದೇನೋ ನಿಜ. ಅದಕ್ಕಾಗಿಯೇ ಶಿಕ್ಷಕರು ಕ್ಕಳುಕ್ಕುಳ ಶಿಕ್ಷಣ ಕಾರ್ಯದಲ್ಲಿ ತೊಡಗಿದಾಗ ತೀರ ಕೊನೆಯ ಉಪಾಯ ನ್ನು ಶಿಕ್ಷೆಯನ್ನು ಕೈಕೊಳ್ಳುತ್ತಿರುವರು. ಆದರೆ ಈ ಎಲ್ಲ ಪ್ರಸಂಗಗಳಲ್ಲಿ ಸ ಎಚ್ಚರಿಕೆಯಿಂದಲೂ ವಿಚಾರದಿಂದಲೂ ಕೆಲಸಮಾಡಬೇಕಾಗುವದು. ಸ್ಸಿಂದು ಕೆಟ್ಟ ನಡತೆಯ ಪರಿಣಾಮವೆಂದೇ ಶಿಕ್ಷೆಯು ಮುಂದೆ ಬರಬೇಕಾ ವದು. ಬೇರೆಬೇರೆ ತರದ ಬಾಲಕರೊಡನೆ ನಡೆದು ಅನುಭವಪಡೆಯುವದರಿಂದಲೇ ರು ಬಾಲಕರೊಡನೆ ಹೇಗೆ ನಡೆಯಬೇಕೆಂಬದನ್ನು ಕಲಿಯುವರು.

ಸಮಾಜದ ನಡೆವಳಿಕೆಯಲ್ಲಿಯು ಎಲ್ಲ ಸಾಮಾಜಿಕ ನಿಯಮಗಳು "ಪರಿ ಮದಲ್ಲಿ ಏನಾಗುವದೆ"ಂಬ ತಾತ್ವಿಕ ವಿಚಾರವನ್ನು ಪರಿಶೀಲಿಸಿ ಅದನ್ನೇ ಧಾರವಾಗಿಟ್ಟುಕೊಂಡು ರಚಿತವಾಡಿರುವವು. ಆದರೆ ಬಾಲಕರ ಮನಸ್ಸಿನಲ್ಲಿ ತ್ರ ಈ ತರದ ಪರಿಣಾಮವಿವೇಚನೆಗೆ ಸಂಬಂಧಿಸಿದ ತತ್ವವು ಎಂದರೆ ಭಯವು ನ್ನು ಬೇರೂರದಂತೆ ನೋಡಿಕೊಳ್ಳಬೇಕಾಗುವದು.

ಭೂಗೋಲ ಶಿಕ್ಷಣ

ಭೂಗೋಲವನ್ನು ಯಾಕೆ ಕಲಿಯಬೇಕು?:—ಶಾಲೆಗಳಲ್ಲಿ ಭೂಗೋಲ ನ್ನು ಕಲಿಸತೊಡಗಿ ಇನ್ನೂ ಬಹುಕಾಲವಾಗಿಲ್ಲ. ಓದು ಬರೆಹ ಗಣಿತ ಇವೇ ವಹಾರಕ್ಕೆ ಆವಶ್ಯಕ ವಿಷಯಗಳೆಂದು ಮೊದಲು ತಿಳಿಯಲ್ಪಡುತ್ತಿದ್ದವು. ಸಂಕುಚಿತ ದೃಷ್ಟಿಯಿಂದ ವಿಚಾರಮಾಡುವವರಿಗೆ ಇದೂ ನಿಜವೇ. ಆದರೆ ಹೆಚ್ಚು ಉದಾರದೃಷ್ಟಿಯನ್ನಿಟ್ಟುಕೊಂಡು ನಿಜವಾದ ನಾಗರಿಕನ ಕರ್ತವ್ಯವನ್ನೂ ಮನುಷ್ಯ ಜೀವನದ ಉನ್ನತಿಯನ್ನೂ ಆತನ ಉನ್ನತ ಜೀವನವನ್ನೂ ಲಕ್ಷ್ಯಕ್ಕೆ ತಂದು ನೋಡಿದರೆ ಭೂಗೋಲವನ್ನು ಯಾಕೆ ಕಲಿಯಬೇಕೆಂಬದು ಗೊತ್ತಾಗಬಹುದು. ಕ್ಷತ್ರವಿಜ್ಞಾನ ಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಖನಿಜಶಾಸ್ತ್ರ, ದಲಾದವುಗಳಂತೆ ಭೂಗೋಲವೂ ಒಂದು ಶಾಸ್ತ್ರವೆನಿಸಿಕೊಂಡಿರುವದು. ದರಿಂದ ಮಿಕ್ಕ ಶಾಸ್ತ್ರಗಳ ಅಭ್ಯಾಸದಿಂದ ಆಗಬಹುದಾದ ಪ್ರಯೋ ಗಳೇ ಈ ಶಾಸ್ತ್ರದ ಅಭ್ಯಾಸದಿಂದಲೂ ಆಗಬಹುದೆಂದು ಬಲ್ಲವರು ಅಭಿಪ್ರಾಯಪ

ಮೊದಮೊದಲು ಮನುಷ್ಯಪ್ರಾಣಿಯ ಭೂಗೋಲ ಜ್ಞಾನವು ತೀರ ಸ್ವ
ಇದ್ದಿತು. ನಮ್ಮ ಪುರಾಣಗಳನ್ನು ಓದಿದರೆ ನಮ್ಮವರ ಭೂಗೋಲ ಜ್ಞಾ
ಪರಿಮಿತಿಯು ಗೊತ್ತಾಗುವದು. ಹಾಗೆಯೇ ಇತಿಹಾಸ ಕಾಲದಲ್ಲಿಯೂ
ವಿಚಾರಮಾಡಬಹುದು. ಅಮೇರಿಕಾ ಆಸ್ಟ್ರೇಲಿಯಾ ಖಂಡಗಳ ಶೋ
ವಿಚಾರವನ್ನೂ ಅವು ಜನರಿಗೆ ಗೊತ್ತಾದ ಕಾಲವನ್ನೂ, ನಾವು ಓದಿ ತ
ಕೊಂಡಿದ್ದೇವೆ. ಧ್ರುವ ಸ್ಥಳಗಳ ಶೋಧ, ಆಫ್ರಿಕಾದ ಮಧ್ಯಪ್ರದೇಶದ ಪ್ರ
ಹಿಮಾಲಯದ ಮೇಲೆ ಏರುವದು ಮುಂತಾದ ಭೂಗೋಲ ವಿಷಯಕ ಶೋಧ
ಇಂದಿಗೂ ನಡೆದೇ ಇವೆ. ಬೇರೆ ಬೇರೆ ಜನಾಂಗಗಳ ವ್ಯಾಪಾರದ ಮೇ
ಪ್ರೀತಿಯೂ ಕಡಲಪಯಣದ ಪರಿಣಾಮವೂ ದಿಗ್ವಿಜಯಿಗಳೆನ್ನಿಸಿಕೊಳ್ಳಬೇ
ಜೂಲಿಯಸ್ ಸೀಸರ ನೆಪೋಲಿಯನ್ ಮೊದಲಾದ ವೀರರ ಸಂಗ್ರಾಮದ ಫ
ಭೂಗೋಲದ ಜ್ಞಾನವನ್ನು ಹೆಚ್ಚಿಸಲಿಕ್ಕೆ ಕಾರಣವಾದವು. ಮತ್ತು ಈಗಿನ ಸ
ರಿಸಿದ ಯುಗದಲ್ಲಿ ಪ್ರವಾಸದ ಸಾಮಗ್ರಿಗಳೂ ಮನುಷ್ಯನ ಕುತೂಹಲ ಬುದ್ಧಿ
ಹೆಚ್ಚುತ್ತ ಬಂದಂತೆ ಈ ವಿಷಯದಲ್ಲಿಯೂ ಸಾಹಸ ಲಾಲಸೆಗಳು ಹುಟ್ಟಿ
ಬಗೆಯ ಶೋಧನ ಕಾರ್ಯಗಳು ಹೆಚ್ಚು ಹೆಚ್ಚು ಪ್ರಮಾಣದಿಂದ ನಡೆಯತೊಡ
ಪರದೇಶದೊಡನೆ ವ್ಯಾಪಾರದಲ್ಲಿ ತೊಡಗಿದವರಿಗೆ ಭೂಗೋಲ ಜ್ಞಾ
ಆವಶ್ಯಕವೆನಿಸಿದ್ದರಿಂದ ಇಂಗ್ಲಂಡ ಮೊದಲಾದ ದೇಶಗಳ ಶಾಲೆಗಳಲ್ಲಿ ಮೆ
ಮೊದಲು ಭೂಗೋಲವನ್ನು ಕಲಿಸುವ ಪರಿಪಾಠವುಂಟಾಯಿತು. ನಾವಿಕರ
ವವರಿಗೂ ಈ ವಿಷಯದ ಅಭ್ಯಾಸವು ಆವಶ್ಯಕವೆನಿಸಿತು. ಬರಬರುತ್ತ ತ
ವಾಸಿಸುವ ಪ್ರಪಂಚದ ಜ್ಞಾನವನ್ನು ಪಡೆದಿರುವದು ಸುಶಿಕ್ಷಿತನ ಒ
ಮಹತ್ಪವಲಕ್ಷಣವೆಂಬ ವಿಚಾರವನ್ನೂ ಭೂವಿವರಣೆಯ ಅಭ್ಯಾಸದಿಂದ ಮನ
ಮನಸ್ಸಿನಲ್ಲಾಗುವ ಸಂಸ್ಕಾರಗಳನ್ನೂ, ಅನುಲಕ್ಷಿಸಿ ಈ ವಿಷಯವು ಸಾರ್ವ
ಶಾಲೆಗಳ ಅಭ್ಯಾಸಕ್ರಮದಲ್ಲಿ ಸೇರ್ಪಡೆಯಾಯಿತು.

ಶಾಲೆಗಳಲ್ಲಿ ಈ ವಿಷಯವನ್ನು ಕಲಿಸಬೇಕೆಂಬ ನಿರ್ಬಂಧವುಂಟಾ
ಅದರ ಶಿಕ್ಷಣಕ್ರಮದಲ್ಲಿ ಮೊನ್ನೆಮೊನ್ನಿನ ವರೆಗೂ ಯೋಗ್ಯ ಸುಧಾರಣೆಯಾಗಿರ
ನಮ್ಮಲ್ಲಿಯಂತೂ ಹತ್ತೆಂಟು ವರ್ಷಗಳ ಹಿಂದೆ ಉಪಯೋಗದಲ್ಲಿದ್ದ ಭೂಗೋ
ಪಾಠ ಪುಸ್ತಕಗಳನ್ನು ನೋಡಿದರೆ ಈ ಮಾತು ತಾನೇ ಸಿದ್ಧವಾಗುವ
ನಮ್ಮ ಪ್ರಾಥಮಿಕ ಶಾಲೆಗಳ ಪಾಠಪುಸ್ತಕವಾಗಿದ್ದ ಒನೆಯ ಭಾಗ ಭೂಗೋ
ದಲ್ಲಿ ದೇಶದ ಹೆಸರು, ಮೇರೆ, ಪರ್ವತಗಳು, ನದಿಗಳು, ಸರೋವರ
ದೊಡ್ಡ ಊರುಗಳು, ವ್ಯಾಪಾರದ ಜೀನಸುಗಳು ಎಂದು ಮೊದಲಾಗಿ ಹೆಚ್ಚಿ

ಸ್ಸು ಹಾಕಿ ನೂರಾರು ಹೆಸರುಗಳ ಯಾದಿಯನ್ನು ಕೊಟ್ಟಿದ್ದು ಅದನ್ನು
ಕರು ವಿದ್ಯಾರ್ಥಿಗಳಿಂದ ಪಾಠಮಾಡಿಸಿಕೊಳ್ಳುವದೇ, ನಾವು ತಿಳಿದಮಟ್ಟಿಗೆ,
ಪ ಕಾಲದ ಭೂಗೋಲ ಶಿಕ್ಷಣವಾಗಿದ್ದಿತು. ನಕಾಶಗಳಲ್ಲಿ ಅವನ್ನು ತೋರಿಸ
ಕಲಿಸಿದ ಶಿಕ್ಷಕರು ಉತ್ತಮ ತರಗತಿಯವರೆಂದು ತಿಳಿಯಲ್ಪಡುತ್ತಿದ್ದರು.
ರೆ ಈಗ ಆ ಯುಗವು ಉಳಿದಿಲ್ಲ.

ಬಾಲಕರ ಮನಸ್ಸಿನ ಮೇಲೆ ಈ ವಿಷಯದಲ್ಲಿಯೂ ನಿಜವಾದ ಸಂಸ್ಕಾರ
ಗೀಕೆಂಬದು ಆಧುನಿಕರ ವಿಚಾರಸರಣಿ. ಅದಕ್ಕನುಸರಿಸಿ ಬಾಲಕರ ಅನು
ಕ್ಕೆ ಬರುವಂತೆ ಈ ವಿಷಯವನ್ನು ಕಲಿಸಬೇಕಾಗುವದು. ಶಾಲೆಯ ಕೋಣೆಯ
ಗೋಲದಿಂದ ಪ್ರಾರಂಭವಾದ ವಿಷಯವು "ಭೂಗೋಲ" ಗ್ಲೋಬಿನ ವರೆಗೆ
ಬೇಕಾಗುವದು. ಪ್ರಪಂಚದೊಳಗಿನ ಬೇರೆ ಬೇರೆ ಜನಾಂಗಗಳ ಜೀವನದ
ಪ್ಪದಲ್ಲಿ ಇದು ಕೊನೆಮುಟ್ಟುವದು. ಅಮೇರಿಕೆಯಲ್ಲಿ ಹರಿಯುವ ಹೊಳೆಗಳ
ಸಿಂದ ನಮಗೆ ಪ್ರಯೋಜನವಿಲ್ಲ. ಆದರೆ ಹಿಂದಣ ಲೇಖನವೊಂದರಲ್ಲಿ
ದಂಥ ಡೆನ್ಮಾರ್ಕಿನ ಒಕ್ಕಲಿಗರ ಜೀವನಕ್ರಮವನ್ನು ಅಭ್ಯಾಸಿಸಿದ ನಮ್ಮ
ದ ಒಕ್ಕಲಿಗರು ತಮ್ಮ ಜೀವನದಲ್ಲಿ ಹೆಚ್ಚಿಲ್ಲದಿದ್ದರೆ ಸ್ವಲ್ಪಮಟ್ಟಿಗಾದರೂ
ಸಾವಣೆಹೊಂದಬಹುದೆಂದು ಆಶಿಸಿದರೆ ತಪ್ಪಾಗದು. ಅಮೇರಿಕೆ ಮೊದಲಾದ
ಗಳಲ್ಲಿ ಜನರ ಜೀವನವು ಹೇಗೆ ಸಾಗಿದೆಯೆಂಬದನ್ನೂ, ಆ ದೇಶದ ದೊಡ್ಡ
ಕ್ಷ ನಗರಗಳಲ್ಲಿ ವಾಸಿಸುವ ಜನರು ಎಷ್ಟು ಸುಸಂಸ್ಕೃತರಾಗಿ ಹೇಗೆ
ುಕೊಳ್ಳುವರೆಂಬದನ್ನೂ, ತಿಳಿದ ಸುಶಿಕ್ಷಿತನ ಮನಸ್ಸಿನ ಮೇಲಾದ ಪರಿಣಾ
ು ಅವನ ವ್ಯವಹಾರದಲ್ಲಿ ಗೋಚರವಾಗದಿರದು. ಉತ್ತಮ ತರಗತಿಯ
ಿಕನಾಗಿ ತನ್ನ ಊರಿನ, ತನ್ನ ಪ್ರಾಂತದ, ತನ್ನ ದೇಶದ, ಕೊನೆಗೆ ಪ್ರಪಂಚದ
ುದಲ್ಲಿ ತಕ್ಕ ಜ್ಞಾನವನ್ನು ಪಡೆದು ದೇಶಾಭಿಮಾನಿಯಾಗಿ ಕೊನೆಗೆ ಈ
ಂಚದ ಕೋಟ್ಯನುಕೋಟಿ ಪ್ರಜೆಗಳಲ್ಲಿ ತಾನೂ ಬಬ್ಬನೆಂಬ ಭಾವನೆಯನ್ನು
ು ಆ ಪ್ರಪಂಚದ ಜನರ ಹಿತದ ವಿಷಯದಲ್ಲಿ ಮನಸ್ಸನ್ನು ತೊಡಗಿಸಿದ
ೀದಾತ್ತಮಾನವನಾಗಲು ಭೂಗೋಲ ಜ್ಞಾನವು ಅವಶ್ಯಕವೆನಿಸುವದು.
ಗೆ ಭೂಗೋಲ ಶಿಕ್ಷಣದ ಗುರಿ.

೨. **ಭೂಗೋಲ ಶಿಕ್ಷಣದ ಸಾಧನಗಳು**:—ಇತರ ವಿಷಯಗಳಂತೆಯೇ
ಗೋಲದಲ್ಲಿಯೂ ಕಲಿಯತಕ್ಕ ವಿಷಯಗಳೆಲ್ಲವೂ ವಿದ್ಯಾರ್ಥಿಗಳಿಗೆ ಸಂಪೂರ್ಣ
ಗತವಾಗಿರಬೇಕೆಂಬದು ಒಂದು ಸಾಮಾನ್ಯ ತತ್ವ. ಪಾಠ ಶಕ್ತಿಯ ಬಲದಿಂದ
ದಲ್ಲಿ ಓದಿದ ಮಾತನ್ನೇ ಪರೀಕ್ಷಕರ ಮುಂದೆ ಗಿಳಿಪಾಠದಿಂದ ನುಡಿಯು

ವದು ಅಥವಾ ಕಾಗದದ ಮೇಲೆ ಬರೆದುಕೊಡುವದು ಇವೇ ಭೂಗೋಲಜ್ಞ ಕುರುಹಲ್ಲವೆಂಬದು ಈಗ ಸಿದ್ಧವಾಗಿ ಹೋಗಿದೆ. ಆದುದರಿಂದ ನಾವು ವಿದ್ಯಾರ್ಥಿಗಳಿಗೆ ಕಲಿಸಬೇಕಾದುದನ್ನೆಲ್ಲ ಪ್ರತ್ಯಕ್ಷವಾಗಿ ಕಲಿಸಬೇಕೆಂದಹಾ ವದು. ಈ ಮಾತು ಶತಶಃ ನಿಜವು. ಮುಂಬಯಿ ನಗರದ ವರ್ಣನೆಂ ಎಷ್ಟು ಕಾಲ ಎಷ್ಟು ಗ್ರಂಥಗಳಲ್ಲಿ ಓದಿ ಅದರ ನಿಜವಾದ ಕಲ್ಪನೆಯನ್ನು ಕೊಳ್ಳಬಹುದು? ತಾಜಮಹಾಲಿನ ಯಾವ ಬಗೆಯ ವರ್ಣನೆಯಿಂದ ನಿಜವಾದ ಕಲ್ಪನೆಯನ್ನು ನಾವು ಭಾವಿಸಬಹುದು? ಕೇವಲ ವರ್ಣನೆಯ ಓದುವದರಿಂದ ನಿಜವಾದ ಜ್ಞಾನವಾಗದಿದ್ದರೂ ಅದರ ಚಿತ್ರವನ್ನು ನೋಡಿ ಪ್ರತಿರೂಪವನ್ನು ನಿರೀಕ್ಷಿಸಿ ಅಭ್ಯಾಸದಿಂದ ಜಾಗ್ರತವಾಗಿರುವ ಕಲ್ಪನಾ ತುಲನಾಶಕ್ತಿಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಾವು ಪ್ರತ್ಯಕ್ಷ ನೆ ದವರಷ್ಟಲ್ಲದಿದ್ದರೂ ಓದಿಕೊಂಡವರಿಗಿಂತ ಹೆಚ್ಚು ನಿಶ್ಚಿತ ಹಾಗು ಸ್ಪಷ್ಟ ಜ್ಞಾನವನ್ನು ಪಡೆಯಬಹುದು. ಸಿನೆಮಾದ ಪಟದ ಮೇಲೆ ಮುಂಬಯಿ ನ ಒಂದು ಓಣಿಯ ಚಲನೆಯನ್ನು ಕೆಲಹೊತ್ತು ನಿರೀಕ್ಷಣೆ ಮಾಡುವದ ಸುಶಿಕ್ಷಿತರಾದ ವಿದ್ಯಾರ್ಥಿಗಳು, ತನ್ನ ಆಯುಷ್ಯದಲ್ಲಿ ಎಂದೋ ಒಂದೆರಡ ಮುಂಬಯಿ ನಗರವನ್ನು ನೋಡಿ ಬಂದ ಸಾಮಾನ್ಯ ಮನುಷ್ಯನಿಗಿಂತ, ಜ್ಞಾನವನ್ನು ಪಡೆಯಬಹುದೆಂದರೆ ತಪ್ಪಾಗದು. ಈ ವಿವರಣೆಯಿಂದ ನಮ್ಮ ವಿದ್ಯಾರ್ಥಿಗಳಿಗೆ ಭೂಗೋಲವನ್ನು ಯಾವ ಕ್ರಮದಿಂದ ಕಲಿಸಬೇ ವಿಚಾರವನ್ನು ಸಂಕ್ಷೇಪವಾಗಿ ಹೇಳಿದಂತಾಯಿತು. ಸಾರಾಂಶ— ಸಾಧ್ಯ ವಾಟ್ಟಿಗೂ ನಾವು ಕಲಿಸಬೇಕಾದ ವಿಷಯವನ್ನು ಪ್ರತ್ಯಕ್ಷ ತೋರಿಸಿ ಕಲಿಸಬ ಪ್ರತ್ಯಕ್ಷ ತೋರಿಸುವದಾಗದಿದ್ದರೆ ಅದರ ಪ್ರತಿರೂಪವನ್ನು, ಚಿತ್ರವನ್ನು, ಅ ನಕ್ಷೆಯನ್ನು, ಬಾಲಕರ ಮುಂದಿಟ್ಟು ವಿವರಿಸಿ, ಅವರ ಕಲ್ಪನಾಶಕ್ತಿ ತು ಶಕ್ತಿಗಳನ್ನು ಜಾಗ್ರತಗೊಳಿಸಿ, ಪ್ರತ್ಯಕ್ಷ ಜ್ಞಾನಕ್ಕೆ ಸರಿಯೆನಿಸುವ ಜ್ಞಾನ ಮೂಡಿಸಿಕೊಡಲು ಯತ್ನಿಸಬೇಕು. ಈ ಸೂತ್ರವನ್ನೇ ಇನ್ನು ಮುಂದೆ ಉದಾಹರಣೆ— ವಿವರಣೆಗಳಿಂದ ವಿವರಿಸೋಣ.

ಪ್ರತ್ಯಕ್ಷದಿಂದ ಅಪ್ರತ್ಯಕ್ಷಕ್ಕೆ ಸಾಗು; ತಿಳಿದದ್ದರ ಸಹಾಯದಿಂದ ತಿಳಿಯ ಇದ್ದದ್ದನ್ನು ತಿಳಿಸು, ಎಂಬವು ಶಿಕ್ಷಣದ ಸಾಮಾನ್ಯ ತತ್ವಗಳಲ್ಲಿ ತುಂಬ ಮಹತ್ವದ ಈ ತತ್ವಗಳನ್ನು ಅನುಸರಿಸಿದರೆ ಭೂಗೋಲ ಶಿಕ್ಷಣವನ್ನು ವಿದ್ಯಾರ್ಥಿಗಳು ಪ ಸುವ ಹಳ್ಳಿಯಿಂದ ಪ್ರಾರಂಭಿಸಿ ಜಗತ್ತಿನ ವರೆಗೆ ಸಾಗಬೇಕಾಗುವದು. ಸ್ಕೌ ಸ್ಕೌಲು ದಿಕ್ಕು ಮುಂತಾದವುಗಳ ಕಲ್ಪನೆಗಾಗಿ ಸಾಲೆಯ ಕೋಣೆ, ಸಾಲೆ

ಕೊಂಡು ಅಲ್ಲಿರುವ ಉಪಕರಣಗಳು ವಿದ್ಯಾರ್ಥಿಗಳು ಇವುಗಳನ್ನು ಉಪಯೋಗಿಸಿಕೊಳ್ಳಬೇಕಾಗುವದು.

ಭೂಗೋಲದ ಶಿಕ್ಷಕನು ಮೊದಲು ತನ್ನ ಬಾಲಕರಲ್ಲಿ ಚೆನ್ನಾಗಿ ನಿರೀಕ್ಷಣೆ ಮಾಡುವ ಚಟವನ್ನು ಹುಟ್ಟಿಸಬೇಕಾಗುವದು. ನೋಡಿದ ಸಂಗತಿಗಳಿಂದ ತದನುಗುಣವಾದ ಸಂಗತಿಗಳನ್ನು ಕಲ್ಪಿಸಿಕೊಳ್ಳುವದಕ್ಕೂ ಆ ಸಂಗತಿಗೆ ಹೋಲಿಕೆಯಾಗುವ ಸಂಗತಿಗಳನ್ನು ತುಲನೆ ಮಾಡಿ ನೋಡುವದಕ್ಕೂ ರೂಢಿ ಮಾಡಿಸಬೇಕಾಗುವದು. ಈ ಕ್ರಮದಲ್ಲಿ ಶಿಕ್ಷಕನು ಕೆಲವು ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳಬೇಕಾಗುವದು. ಅವನ್ನು ನಾವು ಕ್ರಮದಿಂದ ವಿವರಿಸುತ್ತ ಸಾಗೋಣ.

೧. **ಕರಿಯ ಹಲಗೆ:**— ತಾತ್ಕಾಲಿಕವಾದ ಪ್ಲ್ಯಾನು ನಕಾಶೆಗಳನ್ನು ಬರೆಯುವದಕ್ಕಾಗಿಯೂ ಪಾಠದ ಸಾರಾಂಶವನ್ನು ಬರೆಯುವದಕ್ಕೂ ಕರಿಯ ಹಲಗೆಯನ್ನು ಉಪಯೋಗಿಸಬೇಕಾಗುವದು. ಕರಿಯ ಹಲಗೆಯ ಮೇಲೆ ತೆಗೆದ ನಕಾಶೆಯನ್ನು ವಿದ್ಯಾರ್ಥಿಗಳು ಅನೇಕ ಸಾರೆ ನಕಲು ಮಾಡಿಕೊಳ್ಳಬೇಕಾಗಬಹುದು. ಮತ್ತು ಶಿಕ್ಷಕನು ತೆಗೆದ ಬಾಹ್ಯರೇಖಾನಕಾಶೆಯಲ್ಲಿ ತಾನು ಕಲಿಸುತ್ತ ಹೋಗುವ ವಿಷಯಗಳನ್ನು ಕ್ರಮವಾಗಿ ತುಂಬುತ್ತ ಸಾಗಬೇಕಾಗುವದು. ಇತರ ಪಾಠಗಳಿಗಿಂತಲೂ ಭೂಗೋಲದ ಪಾಠದಲ್ಲಿ ಕರಿಯ ಹಲಗೆಯ ಉಪಯೋಗವು ಹೆಚ್ಚಾಗಿ ಆಗಬೇಕಾಗುವದು. ಕೆಲಕೆಲವು ನಕಾಶೆ ಪ್ಲ್ಯಾನು ಮೊದಲಾದವುಗಳನ್ನು ಶಿಕ್ಷಕನು ಮೊದಲೇ ತಯಾರಿಸಿಟ್ಟುಕೊಳ್ಳಬೇಕಾಗುವದೂ ಉಂಟು. ಕರಿಯ ಹಲಗೆಯ ಮೇಲಿನ ಕೆಲಸವು ತೀರ ಸರಿಯಾಗದ್ದಿರುವ ಸಂಭವವು ಕಡಿಮೆಯೆಂಬುದೇ ನಿಜ. ಆದರೆ ಅದು ತಪ್ಪು ಕಲ್ಪನೆ ಹುಟ್ಟಿಸುವಷ್ಟು ಅಪೂರ್ಣವಾಗಲಿ ಅಪಕ್ವವಾಗಲಿ ಅಳತೆ ತಪ್ಪಿದ್ದಾಗಲಿ ಇರಕೂಡದು.

೨. **ಪಾಠ ಪುಸ್ತಕಗಳು:**— ನಮ್ಮ ಶಾಲೆಗಳಲ್ಲಿ ಭೂಗೋಲದ ಪಾಠವು ಹೆಚ್ಚುಮಟ್ಟಿಗೆ ಪಾಠಪುಸ್ತಕಗಳ ಆಧಾರದ ಮೇಲೆಯೇ ಸಾಗಿವೆಯೆಂದರೆ ತಪ್ಪಾಗದು. ಆದುದರಿಂದ ಶಿಕ್ಷಕರೂ ವಿದ್ಯಾರ್ಥಿಗಳೂ ಪಾಠಪುಸ್ತಕಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಮತ್ತು ಅವನ್ನು ಎಷ್ಟು ಮಟ್ಟಿಗೆ ಅವಲಂಬಿಸಬೇಕು ಎನ್ನುವದನ್ನು ತಿಳಿದಿರುವದು ಅವಶ್ಯಕವೆನಿಸುವದು. ವ್ಯವಸ್ಥಿತವಾಗಿ ರಚಿಸಲ್ಪಟ್ಟಿರುವ ಪಾಠಪುಸ್ತಕಗಳು ಶಿಕ್ಷಕರಿಗೆ ತಮ್ಮ ಪಾಠಗಳನ್ನು ಕ್ರಮಗೊಳಿಸಿಕೊಳ್ಳಲಿಕ್ಕೂ ಪ್ರತಿ ವಿಷಯವನ್ನು ಇಷ್ಟೇ ಎಂದು ನಿಯಮನ ಮಾಡಿಕೊಳ್ಳಲಿಕ್ಕೂ ಉಪಯೋಗವಾಗುವವು. ಮತ್ತು ಕಲಿಸಿದ ಎಲ್ಲ ವಿಷಯಗಳ ಕ್ರಮವಾದ ಸಂಗ್ರಹವು ಪ್ರತಿ ಪಾಠ ಪುಸ್ತಕಗಳಲ್ಲಿರುವದರಿಂದ ಉಜ್ಜಳಣಿಗೆ ಇವು ತುಂಬ ಉಪಯೋಗ

ವಾಗುವವು. ವಿದ್ಯಾರ್ಥಿಗಳಿಗೆ ಮನೆಯಲ್ಲಿ ಮಾಡಿಕೊಂಡು ಬರುವದಕ್ಕೂ ಕೆಲಸ ಕೊಡಲಿಕ್ಕೂ ಪಾಠಪುಸ್ತಕಗಳ ಉಪಯೋಗವಾಗುವದು. ವಿದ್ಯಾರ್ಥಿಗಳು ಸ್ಮರಣ ಶಕ್ತಿಯ ಬಲದಿಂದಲೇ ನೆನಪಿನಲ್ಲಿಡಬೇಕಾಗುವ ವಿಷಯಗಳಿಗೂ ಪಾಠಪುಸ್ತಕಗಳು ಬೇಕಾಗುವವು.

ಭೂಗೋಲದ ಪಾಠಪುಸ್ತಕಗಳಲ್ಲಿ ಚಿತ್ರಗಳೂ ನಕಾಶೆಗಳೂ ಸಾಕಾಗು ಇರಲೇಬೇಕು. ಶಿಕ್ಷಕರು ಕಲಿಸುವ ವಿಷಯಗಳನ್ನು ಬಾಲಕರು ಇಂಥ ಪುಸ್ತಕಗ ಪುನಃ ತಾವೇ ಓದಿಕೊಂಡು ಶಿಕ್ಷಕರು ತಮಗೆ ಕೊಟ್ಟಿರುವ ಅಭ್ಯಸನಗಳ ಬಿಡಿಸಲು ಯತ್ನ ಮಾಡಲು ಅನುಕೂಲವಾಗುವದು. ಇಂಥ ಪುಸ್ತಕಗಳಲ್ಲಿಯ ಚ ನಕಾಶಗಳು ಕ್ರಮಬದ್ಧವಾಗಿರಬೇಕಲ್ಲದೆ ಯೋಗ್ಯ ಸಂಗತಿಗಳನ್ನು ನಿರೂಪಿಸುತ್ತ ಬೇಕು. ಕೇವಲ ಓದುಗರ ಮನಸ್ಸನ್ನು ಆಕರ್ಷಿಸುವ ಉದ್ದೇಶದಿಂದಲೇ ಚಿತ್ರಗಳ ಸೇರಿಸಿರಕೂಡದು. ಭೂಗೋಲದ ಪುಸ್ತಕಗಳಲ್ಲಿ ಕೊಟ್ಟಿರುವ ಮಾಹಿತಿಯು ನ ವಾಗಿರಬೇಕೆಂದು ಹೇಳಲೇಬೇಡ. ಈ ವಿಷಯದಲ್ಲಿ ಇಂದು ನಿಜವಾಗಿರುವ ಸ ತಿಯು ನಾಳೆ ಸುಳ್ಳಾಗುವ ಸಂಭವವಿರುವದು. ಕಪ್ಪತ ಗುಡ್ಡದಲ್ಲಿ ಬಂಗಾರ ಯುವರೆಂಬ ಶತಮಾನದ ಹಿಂದಿನ ಮಾತು ಇಂದು ನಿಜವಾಗಲಾರದು. ಮು ಯುದ್ಧದ ತರುವಾಯ ಬದಲಾದ ಯುರೋಪದ ರಾಜಕೀಯ ನಕಾಶೆಯು ನಮ್ಮ ಇನ್ನು ಪ್ರಚಾರದಲ್ಲಿ ಬಂದಿಲ್ಲ. ಇಂದಿನ ವಿಮಾನ ಮಾರ್ಗಗಳು, ಚಿತ್ರಪಟ, ನಕ ಗಳು, ಕನ್ನಡ ಪುಸ್ತಕಗಳಲ್ಲಿ ಬರುವ ಹೊತ್ತಿಗೆ ಅವು ಎಷ್ಟು ರೂಪಾಂತರ ಹೊ ವವೋ ಹೇಳಲಾಗುವದಿಲ್ಲ. ಈ ರೀತಿಯಾಗಿ ಒಂದು ಕಾಲದಲ್ಲಿ ನಿಜವಾಗಿದ್ದ ದಿನದಿನಕ್ಕೆ ಬದಲಾಗುತ್ತಿರುವ ಭೂಗೋಲದ ವಿಷಯವನ್ನು ಅನುಲಕ್ಷಿಸಿ ಅವ ಬದಲಿಸುತ್ತ ಹೋಗದಿದ್ದರೆ ಭೂಗೋಲದ ಪುಸ್ತಕಗಳು ನಿರುಪಯೋ ಯಾಗುವವು.

೩. **ಅಟ್ಲಾಸುಗಳು:** ಬೇರೆ ಬೇರೆ ದೇಶಗಳ ಅಥವಾ ಒಂದೇ ದೇ ಬೇರೆ ಬೇರೆ ವಿಷಯಗಳನ್ನು ಪ್ರತಿಪಾದಿಸುವ ನಕಾಶೆಗಳ ಸಂಗ್ರಹವು ಅಟ್ಲಾಸು ಎ ಹೇಳಲ್ಪಡುವದು. ಭೂಗೋಲದ ಅಭ್ಯಾಸದಲ್ಲಿ ನಕಾಶೆಗಳಿಗಿರುವ ಮಹತ್ವವ ಒತ್ತಿ ಹೇಳಬೇಕಾದ ಕಾರಣವಿಲ್ಲ. ಪಾಠ ಪುಸ್ತಕಗಳಿಗಿಂತಲೂ ಇವ ಮಹತ್ವವು ಹೆಚ್ಚು. ನಕಾಶೆಯ ಪುಸ್ತಕಗಳು ಯೋಗ್ಯತರದವಿರಬೇಕೆಂದು ಬೇಕಾಗಿಲ್ಲ. ಅವುಗಳಲ್ಲಿ ವಿದ್ಯಾರ್ಥಿಗಳು ತಿಳಿಯಬೇಕಾದ ಎಲ್ಲ ವಿಷಯಗಳ ಪಿತವಾಗಿರಬೇಕು. ಮತ್ತು ಆಯಾ ಪಾಠಗಳು ಮುಗಿದ ಬಳಿಕ ವಿದ್ಯಾರ್ಥಿ ತನ್ನಲ್ಲಿರುವ ಬಾಹ್ಯ ರೇಖಾ ನಕಾಶೆಗಳಲ್ಲಿ ಆಯಾ ಮಾಹಿತಿಗಳನ್ನು ಕ್ರಮ

ಬುತ್ತ ಸಾಗಬೇಕು. ವರ್ಷಾಂತ್ಯದಲ್ಲಿ ಬಾಲಕರಲ್ಲಿರುವ ನಕಾಶೆಯ ಪುಸ್ತಕವು ದು ಅಟ್ಲಾಸ ಆಗಬೇಕೆಂದರೆ ಅತಿಶಯೋಕ್ತಿಯಾಗದು. ಭೂಗೋಲದ ಪಾಠವು ಡಿಸುವಾಗ ವಿದ್ಯಾರ್ಥಿಗಳು ತಮ್ಮ ಅಟ್ಲಾಸನ್ನು ತೆಗೆದು ಶಿಕ್ಷಕರು ಹೇಳುವ ಗತಿಗಳನ್ನು ಅವುಗಳಲ್ಲಿ ನಿರೀಕ್ಷಿಸುತ್ತಿರಬೇಕು. ಪ್ರಾಕೃತಿಕಸ್ವರೂಪ, ಹವೆ ಳಿಗಳು, ಪ್ರಾಣಿ ವನಸ್ಪತಿಗಳು, ರಾಜಕೀಯ ಔದ್ಯೋಗಿಕ ವಿಚಾರಗಳು ಂತಾದವುಗಳನ್ನು ವಿವರಿಸುವಾಗ ಆಯಾ ವಿಷಯಗಳನ್ನು ನಿರೂಪಿಸುವ ಾಶಗಳು ವಿದ್ಯಾರ್ಥಿಗಳ ಕಣ್ಣಮುಂದೆ ಇರಲೇಬೇಕು. ಆದುದರಿಂದ ಪಾಠ ಪ್ತಕಗಳಿಗೆ ಅನುರೂಪವಾದ ಅಟ್ಲಾಸುಗಳಿರಬೇಕಾಗುವದು. ಮತ್ತು ಅವು ಜಲಿತಕಾಲದ ಸ್ಥಿತಿಯನ್ನು ನಿರೂಪಿಸಬೇಕಲ್ಲದೆ ಹಳೆಯ ವಿಚಾರಗಳನ್ನು ೀರಿಸುವಂಥವಿರಬಾರದು.

೪. **ದೊಡ್ಡ ನಕಾಶೆಗಳು:**— ಅಟ್ಲಾಸುಗಳಷ್ಟೇ ಏಕೆ, ಅದಕ್ಕು ಹೆಚ್ಚು ಹತ್ತವು ಶಾಲೆಯ ಗೋಡೆಯಲ್ಲಿ ತೂಗಿಡುವ ದೊಡ್ಡ ನಕಾಶಗಳಿಗಿರುವದು. ಗೋಲದ ಪಾಠವು ನಡೆದಿರುವಾಗ ಅವನ್ನು ವರ್ಗದ ಮುಂದೆ ಇಡುವದರಿಂದ ವಿದ್ಯಾರ್ಥಿಗಳು ಏಕಕಾಲಕ್ಕೆ ಶಿಕ್ಷಕರು ಹೇಳಿ ತೋರಿಸುವ ಮಾತಿನ ಕಡೆಗೆ ಪೂರೈಸಲು ಅನುಕೂಲವಾಗುವದು. ಇಂಥ ದೊಡ್ಡ ನಕಾಶಗಳು ಕೇವಲ ೀಯ ಭೂಗೋಲವನ್ನು ವಿವರಿಸುವದೇ ಹೆಚ್ಚು. ಆದರೆ ಪ್ರಾಕೃತಿಕ ಗೋಲವನ್ನೂ ಯಿಕ್ಕ ವಿಚಾರಗಳನ್ನೂ ನಿರೂಪಿಸುವಂಥ ನಕಾಶಗಳಿದ್ದರೆ ಸ್ಪ ಉತ್ತಮರೀತಿಯಿಂದ ಸಾಗಲು ಅನುಕೂಲವಾಗುವದು. ಇಡೀ ಯ ಒಂದೇ ಸ್ಕೇಲಿನ ಪ್ರೊಜೆಕ್ಶನ್ ನಕಾಶೆಯಿದ್ದರೆ ಅದರಿಂದ ವಿದ್ಯಾರ್ಥಿ ಶಿಕ್ಷಕರಿಗೂ ತುಂಬಾ ಪ್ರಯೋಜನವಾಗುವದು. ಪ್ರತಿಯೊಂದು ದೇಶದ, ಂತದ, ಜಿಲ್ಲೆಯ ಇಂಥ ನಕಾಶಗಳು ದುರ್ಮಿಳವಾಗಿದ್ದರೂ ಶಿಕ್ಷಕರಾದರೂ ನ್ನು ತಯಾರಿಸಿ ಇಟ್ಟುಕೊಂಡಿರುವದು ಒಳ್ಳೆಯದು. ಇಂಥ ನಕಾಶಗಳನ್ನು ಯೋಗಿಸುವಾಗ ಅವು ವರ್ಗದ ಎಲ್ಲ ವಿದ್ಯಾರ್ಥಿಗಳಿಗೆ ಸರಿಯಾಗಿ ಕಾಣಿಸುವ ದಲ್ಲಿ ಇರುವವೋ ಹೇಗೆ, ಇದರಿಂದ ಕರಿಯ ಹಲಿಗೆಯ ಕೆಲಸಕ್ಕೆ ತೊಂದರೆ ಗುವದೋ ಹೇಗೆ ಎಂಬದನ್ನು ಶಿಕ್ಷಕರು ನೋಡಿಕೊಳ್ಳಬೇಕು.

೫. **ಗ್ಲೋಬುಗಳು:**—ಪೃಥ್ವಿಯ ಆಕಾರವು ಕಿತ್ತಳೆ ಹಣ್ಣಿನಂತಿರುವದೆಂದು ಗೋಲದ ಪಾಠವನ್ನು ಪ್ರಾರಂಭಿಸುವದುಂಟು. ಆದರೆ ಪೃಥ್ವಿಯ ಆಕಾರ, ಷ್ಟಿಂಶ ರೇಖಾಂಶಗಳು, ಕಟಿಬಂಧಗಳು, ಹಗಲು ರಾತ್ರಿಗಳು, ಋತುಗಳು

ಮುಂತಾದವುಗಳನ್ನೂ ಸಮಗ್ರ ಪೃಥ್ವಿಯ ಹಾಗೂ ಅದರ ಮೇಲಿನ ಖಂಡ
ಮಹಾಸಾಗರಗಳು ಇವುಗಳ ಕಲ್ಪನೆಯನ್ನೂ ಬೇರೆ ಬೇರೆ ದೇಶಗಳ ಚಲನವಲನ
ರುವ ಸಂಬಂಧವನ್ನೂ ನಿರೂಪಿಸಲಿಕ್ಕೆ ಗ್ಲೋಬಿನ ಸಹಾಯವು ಅತ್ಯವಶ್ಯವಾಗಿ
ವದು. ಸುಧಾರಿಸಿದ ದೇಶಗಳ ಶಾಲೆಗಳಲ್ಲಿ ಕರಿಯ ಬಣ್ಣದ ಸಾದಾ ಭೂಗೋ
ವಸ್ಸಿಟ್ಟುಕೊಂಡು ಅವರ ಮೇಲೆ ಖಡುಮಿನಿಂದ ನಕಾಶಗಳನ್ನು ತೆಗೆಯುವ
ಪರ್ವತ ಮುಂತಾದ ಪ್ರಾಕೃತಿಕ ಸ್ಥಿತಿಗಳನ್ನು ತೋರಿಸುವ ಗ್ಲೋಬುಗಳು
ಉಪಯೋಗಿಸುವದೂ ಉಂಟು. ಮೇಲೆ ಹೇಳಿದ ಹಗಲುರಾತ್ರಿಗಳು, ಋತುಗಳು
ಪೃಥ್ವಿಯ ವಾರ್ಷಿಕ ಪ್ರದಕ್ಷಿಣೆಯು ಮಾರ್ಗ ಮುಂತಾದವುಗಳನ್ನೂ ಪೃಥ್ವಿ
ಸೂರ್ಯ ಚಂದ್ರರಿಗೂ ಇರುವ ಸಂಬಂಧವನ್ನೂ ತೋರಿಸುವಂಥ ಗ್ಲೋಬು
ರಚನೆಯನ್ನೂ ಶಾಲೆಗಳಲ್ಲಿ ಉಪಯೋಗಿಸುವರು.

(ಮುಂದೆ ಸಾಗುವದು.)

ಭೂಗೋಲ ಶಿಕ್ಷಣದ ವಿಷಯವಾಗಿ ಟ್ರೇನಿಂಗ್ ಸ್ಕೂಲಿ ವಿದ್ಯಾರ್ಥಿಗಳಿಂದ ಮಾಡಿಸಿದ ಮಾದರಿಗಳು

ನೋಡಿ ಕಲಿಯುವದು, ಮಾಡಿ ಕಲಿಯುವದು, ಇವು ಓದಿ ಇಲ್ಲವೆ ಕೇ
ಕಲಿಯುವದಕ್ಕಿಂತ ಉತ್ತಮ, ಉತ್ತಮೋತ್ತಮ ಮಾರ್ಗಗಳೆಂದು ತಿಳಿಯಲ್ಪ
ವನ್ನು. ಭೂಗೋಲ ಶಿಕ್ಷಣದಲ್ಲಿಯಂತೂ ಈ ಮಾತು ಅತಿಶಯ ಮಹತ್ವದ್ದೆನಿ
ವದು. ವಿದ್ಯಾರ್ಥಿಗಳಿಗೆ ತಾವು ಕಲಿತ ವಿಷಯಗಳು ಮನವರಿಕೆಯಾಗುವದಕ್ಕೆ
ಅವುಗಳ ಸ್ಪಷ್ಟ ಜ್ಞಾನವಾಗುವದಕ್ಕೂ ದೃಢಪಡುವದಕ್ಕೂ ಈ ಕ್ರಮವು ತು
ಪ್ರಯೋಜನವುಳ್ಳದ್ದಾಗಿರುವದು. ಈ ಉದ್ದೇಶದಿಂದ ಈ ವರ್ಷದ ಟ್ರೇನಿ
ಸ್ಕೂಲಿನ ವಿದ್ಯಾರ್ಥಿಗಳು ತಾವು ವರ್ಗದಲ್ಲಿ ಕಲಿತ ಭೂಗೋಲದ ವಿಷಯಗಳ
ಕುರಿತು ಟ್ರೇನಿಂಗ ಸ್ಕೂಲಿನ ವಿಶಾಲವಾದ ತೋಟದಲ್ಲಿ ಅನೇಕ ಮಾದರಿಗಳ
ರಚಿಸಿದ್ದರು. ಇದರಲ್ಲಿ ಇನ್ನೂ ಒಂದು ಮಹತ್ವದ ಉದ್ದೇಶವಿದ್ದಿತು. ವಸ
ಹಳ್ಳಿಯ ಶಾಲೆಗಳಲ್ಲಿ ಭೂಗೋಲ ವಿಷಯವನ್ನು ಶಾಸ್ತ್ರೀಯವಾಗಿ ಕಲಿಸುವಷ್ಟ
ತಕ್ಕ ಉಪಕರಣಗಳ ಅಭಾವದ ಮೂಲಕ ಅತಿಶಯ ತೊಂದರೆಯಾಗುತ್ತಿರುವ
ಶಿಕ್ಷಕರ ಹಾಗು ಅಧಿಕಾರಿಗಳ ಅನುಭವಕ್ಕೆ ಬಂದ ಮಾತಾಗಿಹೋಗಿದೆ. ಸ
ಯಲ್ಲಿ ಒಂದೇ ಒಂದು ರಾಜಕೀಯ ಭೂಗೋಲಕ್ಕೆ ಸಂಬಂಧಿಸಿದ ನಕಾಶೆಯೂ
ಹೆಚ್ಚು. ಕನ್ನಡದಲ್ಲಂತೂ ಬೇರೆ ಬೇರೆ ತರದ ನಕಾಶೆಗಳು, ಪ್ರಾಕೃತಿಕ-ಸ್ವರೂ

ಳಿಗಳು ಜನಜೀವನ ಮುಂತಾದವುಗಳನ್ನು ವಿವೇಚಿಸುವಂಥ ಸಕಾಶಗಳು, ಹುಟ್ಟಿಯೇ ಇಲ್ಲ. ಇಂಥ ಸ್ಥಿತಿಯಲ್ಲಿ ಮೇಲಿನ ಲೇಖನದಲ್ಲಿ ಹೇಳಿದಂಥ ನ ಧ್ಯೇಯಗಳನ್ನಿಟ್ಟುಕೊಂಡು ಭೂಗೋಲದ ಪಾಠ ಸಾಗಿಸುವದು ಶಿಕ್ಷಕರಿಗೆ ಅಸಾಧ್ಯವೇ ಎನ್ನಿಸಿದರೆ ಆಶ್ಚರ್ಯವೇನು? ಆದುದರಿಂದ ವೆಚ್ಚವಲ್ಲದೆ ಹಳ್ಳಿಗಳಲ್ಲಿ ದೊರೆಯಬಹುದಾದ (ಮಟ್ಟಿ ಮಣ್ಣು ಾದ) ಸಾಮಾನ್ಯ ತರಗತಿಯ ಉಪಕರಣಗಳ ಸಹಾಯದಿಂದಲೇ ಶಿಕ್ಷಕರು ಮಾದರಿಗಳನ್ನು ರಚಿಸಿಕೊಳ್ಳಬಹುದು ಎಂಬದನ್ನು ತೋರಿಸಿಕೊಡುವದು ಮುಖ್ಯ ಉದ್ದೇಶವಾಗಿತ್ತು. ಶಾಲೆಯ ನೆರೆಯಲ್ಲಿ ಇಂಥ ಮಾದರಿಗಳನ್ನು ಕ್ಕೆ ಸಾಕಷ್ಟು ಬೈಲು ಸ್ಥಳವೊಂದು ಇದ್ದರೆ ಸಾಕು. ಶಾಲೆಯ ನೆರೆಯ ದೊರೆಯದಿರುವ ಸಂದರ್ಭದಲ್ಲಿ ಊರೊಳಗಿನ ಬೇರೆ ಯಾವದಾದರೊಂದು ಾದ ಸ್ಥಳವನ್ನು ಆರಿಸಿಕೊಂಡರೂ ಸಾಗಬಹುದು. ಶಿಕ್ಷಕರು ಉತ್ಸಾಹ ನರಾಗಿದ್ದು ಅವರಿಗೆ ತಾವು ಮಾಡಬೇಕಾದ ಕಾರ್ಯದ ಸ್ಪಷ್ಟವಾದ ಅರಿವು ೆ ತೀರಿತು. ಮಾದರಿಗಳನ್ನು ಮಾಡಲಿಕ್ಕೆ ಸ್ಥಳದ ಅನುಕೂಲತೆಯೊಂದಿ ಎಂಕ್ಕು ಯಾವ ಹೆಚ್ಚಿನ ವೆಚ್ಚವೂ ಇದಕ್ಕೆ ತಗಲಲಾರದು. ಬೇಸಗೆಯ ಾ ಚಳಿಗಾಲದಲ್ಲಿಯೂ ಇವುಗಳ ಸಹಾಯದಿಂದ ಭೂಗೋಲದ ಪಾಠಗಳು ಮವಾಗಿ ಸಾಗಬಹುದು. ಮಳೆಗಾಲವು ಕಳೆದೊಡನೆಯೇ ಶಿಕ್ಷಕರು ಸಲೇ ಗೊತ್ತುಮಾಡಿಟ್ಟುಕೊಂಡಿದ್ದ ಸ್ಥಳದಲ್ಲಿ ಮಾದರಿಗಳನ್ನು ಪ್ರಾರಂಭಿಸಿ ಿಯಲ್ಲಿ ಭೂಗೋಲದ ಪಾಠಗಳು ಸಾಗುತ್ತಹೋದಂತೆ ಈ ಮಾದರಿಗಳನ್ನು ಸುತ್ತ ಪೂರ್ಣಮಾಡುತ್ತ ಸಾಗಬೇಕಾಗುವದು. ಇದರಲ್ಲಿ ಎಲ್ಲ ಕಾರ್ಯ ನ್ನು ಶಿಕ್ಷಕನೇ ಮಾಡುವದು ಸರಿಯಲ್ಲ. ಇದರಿಂದ ವಿದ್ಯಾರ್ಥಿಗಳು ಮಾಡಿ ಬೇಕೆಂಬ ಉತ್ತಮೋತ್ತಮ ಮಾರ್ಗಕ್ಕೆ ಅಸ್ಪದವುಳಿಯದು. ವಿದ್ಯಾ ಗಳು ತಾವು ಕಲಿತ ವಿಷಯಗಳನ್ನು ಸಾಮೂಹಿಕವಾಗಿ ಕೃತಿಯಲ್ಲಿ ತರಬೇ ವಿಚಾರವನ್ನಿಟ್ಟುಕೊಂಡು ಶಿಕ್ಷಕನು ಅವರಿಗೆ ಮಾರ್ಗದರ್ಶಿಯಾಗಿ ಕೆಲಸ ಾಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನವಾಗುವದು. ದೆ ಹೆಚ್ಚಿನ ವೆಚ್ಚವಿಲ್ಲದೆ ಭೂಗೋಲ ಶಿಕ್ಷಣವು ಶಾಸ್ತ್ರೀಯವಾಗಿ ಸಾಗಿ ಾಗುವದು.

ಈ ಉದ್ದೇಶಗಳನ್ನಿಟ್ಟುಕೊಂಡು ಈ ವರ್ಷದ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳು ಮಾಡಿರುವ ಇಂಥ ಕೆಲವು ಮಾದರಿಗಳ ವಿಚಾರವನ್ನಿಷ್ಟು ವಾಗಿ ಹೇಳಿ ಈ ವಿಷಯವನ್ನು ಮುಗಿಸೋಣ.

೧. **ಮಣ್ಣಿನ ಮಾದರಿಗಳು**:— ಹಿಂದುಸ್ತಾನದ ಪ್ರಾಕೃತಿಕ ಸ್ವರೂ
ಮಳೆ ಬೆಳೆಗಳು, ಪ್ರಾಣಿಗಳು, ರಾಜಕೀಯ ವಿಭಾಗಗಳು, ಸಂಸ್ಥಾನಗಳು, ಪ್ರ
ಸದ ಮಾರ್ಗಗಳು ಮುಂತಾದವುಗಳನ್ನು ತೋರಿಸುವ ಬೇರೆ ಬೇರೆ ನಕಾಶೆಗ
ನೆಲದಮೇಲೆ ರಚಿಸಲ್ಪಟ್ಟಿದ್ದವು. ಪ್ರಾಕೃತಿಕ ಸ್ವರೂಪ, ಭೂಮಿ ಇವನ್ನು ತೋ
ಸುವದಕ್ಕಾಗಿ ಬೇರೆ ಬೇರೆ ಬಣ್ಣದ ಮಣ್ಣು ಮುಟ್ಟಿ ಇದ್ದಲಿಗಳನ್ನು ಪುಡಿಪ
ಉಪಯೋಗಿಸಿದ್ದರು. ಸಂಸ್ಥಾನಗಳನ್ನು ತೋರಿಸುವ ಸ್ಥಳಗಳಲ್ಲಿ ಆಯಾ ಸಂಸ್ಥಾ
ಗಳ ಸದ್ಯದ ರಾಜರ ಚಿತ್ರಗಳನ್ನು ವರ್ತಮಾನಪತ್ರಿಕೆಗಳಿಂದ ಕತ್ತರಿಸಿ ನಿಲ್ಲಿಸಿದ್ದ
ಪ್ರಾಣಿಗಳನ್ನು ತೋರಿಸುವದಕ್ಕಾಗಿ ಆಯಾ ಪ್ರಾಣಿಗಳ ಚಿತ್ರಗಳನ್ನು, ಆ
ಬೆಳೆಯುವ ಧಾನ್ಯಗಳನ್ನೂ ಖನಿಜಗಳನ್ನೂ ತೋರಿಸುವದಕ್ಕಾಗಿ ಆಯಾ ಪದಾ
ಗಳನ್ನೂ ನೆಲದಮೇಲಿನ ನಕಾಶೆಯಲ್ಲಿ ಇಟ್ಟಿದ್ದರು. ರೈಲುದಾರಿ ಹಡಗಿ
ಮಾರ್ಗಗಳನ್ನು ದಾರದಿಂದ ಗುರ್ತಿಸಿದ್ದರು. ಇದರಂತೆಯೇ ಏಶಿಯಾ ಆಫ್ರಿ
ಆಸ್ಟ್ರೇಲಿಯಾ ಖಂಡಗಳ ಮಾದರಿಗಳನ್ನೂ ರಚಿಸಿದ್ದರು. ಬೇರೆ ಬೇರೆ ಜನಾಂಗ
ಜೀವನವನ್ನು ನಿರೂಪಿಸುವದಕ್ಕಾಗಿ ಆಯಾ ಜನರ ಚಿತ್ರಗಳನ್ನು ಪುಸ್ತಕ ಪ
ಗಳಿಂದ ಕತ್ತರಿಸಿ ಇಲ್ಲವೆ ಚಿತ್ರ ತೆಗೆದು ಇಟ್ಟಿದ್ದರು. ಹಡಗುಗಳ ಮತ್ತು
ವಿಮಾನ ಮಾರ್ಗಗಳನ್ನು ತೋರಿಸಿದ್ದರು. ಆಫ್ರಿಕೆಯೊಳಗಿನ ಕುರಿಗಳ ಮ
ಆಸ್ಟ್ರೇಲಿಯಾದೊಳಗಿನ ಶಹಾಮೃಗಗಳ ಹಿಂಡಿನ ರಚನೆ ಇವನ್ನೂ ಎಸ್ಕಿ
ಜನರ ಗುಡಿಸಲುಗಳನ್ನೂ ಅರಬರ ಡೇರೆಗಳನ್ನೂ ಬಹು ಅಂದವಾಗಿ ರಚಿಸಿ ಇ
ಇಟ್ಟಿದ್ದರು. ಇಡಿಯ ಜಗತ್ತಿನ ಪ್ರೊಜೆಕ್ಶನ್ ನಕಾಶೆಯೊಂದನ್ನು ಮಾಡಿ ಅದ
ವಿಮಾನಗಳ ಮಾರ್ಗಗಳನ್ನೂ ಒಂದುಸ್ಪೇಶನ್ನಿನಿಂದ ಇನ್ನೊಂದು ಸ್ಪೇಶ
ಹೋಗಲು ಬೇಕಾಗುವ ಕಾಲವನ್ನೂ ಅವುಗಳ ಅಂತರವನ್ನೂ ಬರೆಯು
ರಿಂದ ಆಧುನಿಕ ಶಾಸ್ತ್ರೀಯ ಯುಗದಲ್ಲಿ ಜಗತ್ತಿನ ಅಂತರವು ಎಷ್ಟು ಕಡಿಮೆಯಾ
ಎಂಬದನ್ನು ಕಣ್ಣಾರೆ ಕಾಣಲು ಸಾಧ್ಯವಾಯಿತು. ಇಡಿಯ ಜಗತ್ತಿಗೂ ನಮ
ಇರುವ ಸಂಬಂಧವು ಇದರಲ್ಲಿ ಒಡೆದು ಕಾಣಿಸುತ್ತಿತ್ತು. ಇಡಿಯ ಜಗ
ವಿಸ್ತಾರ ಅದರ ಭೂಗೋಲಕ್ಕೆ ಸಂಬಂಧಿಸಿದ ಕಲ್ಪನೆಗಳು ಇವು ಏಕಕಾ
ಲಕ್ಷ್ಯಕ್ಕೆ ಬರುವದರಿಂದ ಈ ನಕಾಶೆಯು ಪ್ರೇಕ್ಷಕರ ಮನಸ್ಸನ್ನು ಆ
ಸುತ್ತಿತ್ತು. ಬಳಿಯಲ್ಲಿಯೇ ಹಿಂದುಸ್ತಾನದ ಜನಸಂಖ್ಯೆ ಕ್ಷೇತ್ರಗಳನ್ನು ಜಪ
ಇಂಗ್ಲಂಡ ಫ್ರಾನ್ಸ ಜಪಾನ ಮೊದಲಾವ ದೇಶಗಳ ಜನಸಂಖ್ಯೆ ಕ್ಷೇತ್ರಗಳ ಸ
ತುಲನೆಮಾಡಲಿಕ್ಕೆ ಅನುಕೂಲವಾಗುವಂತೆ ಸಮಾನ ಸ್ಕೇಲಿನ ವರ್ತುಳ ಚೌ
ಗಳನ್ನು ರಚಿಸಿ ಇಟ್ಟಿದ್ದರು. ಇದೇ ರೀತಿಯಾಗಿ ಸಮ್ಮ ಕರ್ನಾಟಕ ಪ್ರಾ

ಮಾಡ ನಗರ, ಟ್ರೇನಿಂಗ ಕಾಲೇಜದ ಕಂಪೌಂಡು ಇವುಗಳ ಮಾದರಿಗಳೂ ು ಆಕರ್ಷಕವಾಗಿದ್ದವು.

೨. **ಗ್ಲೋಬುಗಳು:**— ಅಕ್ಷಾಂಶ ರೇಖಾಂಶ, ಪೃಥ್ವಿಯ ಆಕಾರ, ತುಗಳು, ಹಗಲು ರಾತ್ರಿಗಳು ಇವುಗಳನ್ನು ಕಲ್ಪಿಸಿಕೊಳ್ಳಲು ಅನುಕೂಲ ಗುವಂತೆ ಗ್ಲೋಬುಗಳನ್ನು ಶಾಸ್ತ್ರೀಯವಾಗಿ ಹೊಂದಿಸಿಟ್ಟಿದ್ದರು.

೩. **ಇತರ ವಿಷಯಗಳು:**— ದಿಕ್ಕುಗಳನ್ನೂ ಸೂರ್ಯನ ಅಯನಗತಿ ನ್ನೂ ವೇಳೆಯನ್ನೂ ತೋರಿಸುವ ಛಾಯಾಯಂತ್ರಗಳನ್ನು ವಿದ್ಯಾರ್ಥಿಗಳು ಮಾಡಿಸಿ ಇಟ್ಟಿದ್ದರು. ಇವು ಶಾಸ್ತ್ರೀಯವಾಗಿರುವಂತೆಯೇ ಚಿತ್ತಾಕರ್ಷಕವೂ ದ್ದವು. ಗಾಳಿಯು ಬೀಸುವ ದಿಕ್ಕನ್ನು ಕಂಡುಹಿಡಿಯುವದಕ್ಕಾಗಿ ತಯಾರಿ ಯಂತ್ರವು ಸೂಕ್ಷ್ಮವಾಗಿ ಕೆಲಸಮಾಡುತ್ತಿದ್ದುದರಿಂದ ಎಲ್ಲರಿಗೂ ಆಶ್ಚರ್ಯ ವಾಗಿತ್ತು. ಮೇಲಿನಿಂದ ಬೀಳುವ ನೀರಿನ ಶಕ್ತಿಯನ್ನು ಉಪಯೋಗಿಸಿಕೊಂಡು ೀಕಾಕದ ಧಬಧಬೆ ಮೊದಲಾದ ಕಡೆಗಳಲ್ಲಿ ಹೇಗೆ ಯಂತ್ರಗಳನ್ನು ನಡಿಸುತ್ತಿ ವರೆಂಬ ಕಲ್ಪನೆ ಬರುವದಕ್ಕಾಗಿ ತಯಾರಿಸಿಟ್ಟ ಟರ್ಬಾಯಿನದ ರಚನೆಯು ಬಹು ಸೋರಂಜಕವಾಗಿರುವಂತೆಯೇ ಶಾಸ್ತ್ರೀಯ ಜ್ಞಾನಸಾಧನವೂ ಆಗಿದ್ದಿತು.

ಈ ಎಲ್ಲ ಮಾದರಿಗಳು ಪರಿಪೂರ್ಣವಾಗಿರುವವೆಂದಾಗಲಿ ಇದಕ್ಕೂ ಹೆಚ್ಚಿಗೆ ಆಗಲು ಸಾಧ್ಯವಿಲ್ಲವೆಂದಾಗಲಿ ಯಾರೂ ಹೇಳುವಂತಿಲ್ಲದಿದ್ದರೂ ಭೂಗೋಲ ದಲ್ಲಿ ಶಿಕ್ಷಕರು ಯಾವ ಕ್ರಮದಲ್ಲಿ ಪರಿಶ್ರಮಪೂರ್ವಕವಾಗಿ ಮಾಡಿದರೆ ಅದು ಪ್ರಯೋ ಜನಕರಿಯಾಗಿ ವಿದ್ಯಾರ್ಥಿಗಳಿಗೆ ವಿಷಯವು ಸುಗಮವಾಗಿ ಮನೋರಂಜಕವಾಗ ುವೆಂಬದನ್ನು ತೋರಿಸುವ ಉದ್ದೇಶದಿಂದ ರಚಿತವಾಗಿದ್ದುದರಿಂದ ಇವು ಎಲ್ಲರ ಕ್ಕೆ ಪಾತ್ರವಾದವು. ಧಾರವಾಡ ನಗರದೊಳಗಿನ ಎಲ್ಲ ಹೈಸ್ಕೂಲುಗಳ ು ಪ್ರಾಥಮಿಕ ಶಾಲೆಗಳ ಶಿಕ್ಷಕರೂ ವಿದ್ಯಾರ್ಥಿಗಳೂ ಬಂದು ಪ್ರೀತಿಯಿಂದ ನ್ನು ನೋಡಿ ಆನಂದಪಟ್ಟರು. ವಿದ್ಯಾರ್ಥಿಗಳ ಪಾಲಕರಲ್ಲಿಯೂ ತಮ್ಮ ಳ ವಿದ್ಯಾಭ್ಯಾಸದಲ್ಲಿ ಮನಸ್ಸನ್ನು ಹಾಕುವಂಥ ಮಹನೀಯರನೇಕರು ಬಂದು ಈ ಮಾದರಿಗಳನ್ನೆಲ್ಲ ನೋಡಿ ಸಂತುಷ್ಟರಾದರು. ಆದುದರಿಂದ ಯಮ ಭೂಗೋಲ ಶಿಕ್ಷಣಕ್ಕೆ ಸಂಬಂಧಿಸಿದ ಚಿಕ್ಕ ಪ್ರದರ್ಶನವೇ ಎಂದು ಹಂತಾಯಿತು. ಕಾಕತಾಲೀಯ ನ್ಯಾಯದಿಂದ ಇದೇ ಕಾಲಕ್ಕೆ ಟ್ರೇನಿಂಗ ಿನ ವಾರ್ಷಿಕ ಇನ್‌ಸ್ಪೆಕ್ಶನಕ್ಕೆ ಬಂದಿದ್ದ ಮೆ॥ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ೀಬರವರೂ ಅಕಸ್ಮಾತ್ ಈ ಊರಿಗೆ ದಯಮಾಡಿಸಿದ ನಮ್ಮ ದಕ್ಷಿಣಭಾಗದ

ಕಮೀಶನರ್ ಸಾಹೇಬರವರೂ ಈ ಎಲ್ಲ ಕೆಲಸಗಳನ್ನು ನೋಡಿ ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಮತ್ತು ಹೆಚ್ಚು ವೆಚ್ಚವಿಲ್ಲದೆ ಹಳ್ಳಿಗಳಲ್ಲಿ ದೊರಕುವಂತಾದ ಮಣ್ಣು, ಮಟ್ಟಿ, ಇದ್ದಲಿ, ಬೂದಿ ಮೊದಲಾದ ಸಾಮಾನ್ಯ ಉಪಕರಣಗಳು, ವರ್ತಮಾನಪತ್ರಿಕೆ-ಮಾಸಿಕ ಪುಸ್ತಕಗಳಲ್ಲಿ ದೊರೆಯಬಹುದಾದ ಚಿತ್ರಗಳು ಹಲಕೆಲವು ಅಲ್ಪ ಬೆಲೆಯ ಒಡನೆಗಳು ಮುಂತಾದವುಗಳ ಸಹಾಯದಿಂದಲೇ ಎಲ್ಲ ಪಾಠಗಳನ್ನು ರಚಿಸಿಟ್ಟಿದ್ದರಿಂದ ಹಳ್ಳಿಯ ಶಾಲೆಗಳ ಶಿಕ್ಷಕರಿಗೆ ಮೇಲ್ಪಂಕ್ತಿಯಾಗಿರುವವೆಂದು ಅಭಿಪ್ರಾಯಪಟ್ಟರು.

ಜಪಾನದೇಶದಲ್ಲಿ ಬೌದ್ಧಮತವು

ಜಪಾನದೇಶಕ್ಕೆ ಇಂಗ್ಲಂಡ ಸರಕಾರದಿಂದ ರಾಯಭಾರಿಗಳಾಗಿ ಹೋಗಿ ಸರ ಚಾರಲ್ಸ ಎಲಿಯಟ್ ಎಂಬವರು "ಹಿಂದೂಮತ, ಬೌದ್ಧಮತ" ಎ ಗ್ರಂಥವನ್ನು ಬರೆದಿದ್ದಾರೆ. ನಮ್ಮ ದೇಶದ ಸಂನ್ಯಾಸಿಗಳು ಸಾಹಸದಿಂ ಹಿಂದೂದೇಶದಿಂದ ಹೊರಬಿದ್ದು ಹಿಂದೂ ಸಂಸ್ಕೃತಿಯನ್ನು ದೇಶವಿದೇಶಗಳ ಹರಡಿದ ಸಂಗತಿಯು ಈ ಗ್ರಂಥದಿಂದ ಸರಸವಾಗಿ ತಿಳಿಯುವಂತೆ ಅದೆ. ಆ ತೀರ ಮುಖ್ಯ ಭಾಗವು ವಾಚಕರಿಗೆ ತಿಳಿಯಬೇಕೆಂದು ಒಂದು ಕನ್ನಡ ಲೇಖ ಆಧಾರದಿಂದ ಸಾರಾಂಶ ರೂಪದಲ್ಲಿ ಬರೆಯಲ್ಪಟ್ಟಿದೆ.

ಕ್ರಿ. ಶ. ೫೫೨ ರಲ್ಲಿ ಕೋರಿಯಾದೇಶದಿಂದ ಬೌದ್ಧ ಭಿಕ್ಷುಗಳು ತಪ ರಾಜನ ಅಪ್ಪಣೆಪಡೆದುಕೊಂಡು ಜಪಾನದೇಶದ ಅರಸನಿಗೆ ಅವನಿಂದ ಪ ತೆಗೆದುಕೊಂಡು, ಧರ್ಮಪ್ರಚಾರದ ಸಹಾಯಕ್ಕಾಗಿ ಜಪಾನದ ರಾಜಸಭೆ ಬಂದರು. ಕೋರಿಯಾ ದೇಶದ ಅರಸರು ಹೊಸ ಮತದ ವಿಷಯವಾಗಿ ಸಹ ಪ್ರಾಯವುಂಟಾಗುವಂತೆ ತಕ್ಕಂತೆ ವರ್ಣಿಸಿ ಬರೆದಿದ್ದರು. ಜಪಾನರಿಗೆ ಹೊ ಮತದ ವಿಷಯವಾಗಿ ಆದರಬುದ್ಧಿ ತೋರಿದರೂ ಹಳೆಯ ಮತವನ್ನು ನಮ್ಮೆ ತ್ಯಜಿಸಲಿಕ್ಕೆ ತೊಂದರೆ ಎನಿಸಿತು. ಇದೇಕಾಲಕ್ಕೆ ಹಳೆಯ ಮತವನ್ನು ಬಿಟ್ ಹೊಸ ಮತ ಕೈಕೊಳ್ಳುವ ಧೈರ್ಯಶಾಲಿ ಸ್ವದೇಶದ ಜನಗಳಿಗೆ ದೈವಪ್ರಕೋಪ ಆದಿದೈವಿಕತಾಪಗಳು ಸಂಭವಿಸಿದವು. ಇದನ್ನು ನೋಡಿದ ಬಳಿಕಂತೂ ಹಳೆ ದನ್ನು ಬಿಟ್ಟು ಹೊಸ ಮತವನ್ನು ಕೈಕೊಳ್ಳುವ ಸಾಹಸದ ಕೆಲಸಕ್ಕೆ ಯಾ ಮುಂದುವರಿಯಲಿಲ್ಲ.

ಇಷ್ಟಾದರೂ ಸಂನ್ಯಾಸಿಗಳ ಯತ್ನವು ಅವ್ಯಾಹತನಾಗಿ ನಡೆಯಿತು. ಫ್ಯತ್ತಾಗಿ ಒದಗಿದ ತಾಪಗಳಿಗೆ ಹೊಸಮತವು ಕಾರಣವಲ್ಲೆಂದು ಅವರು ಸಿಕೊಡಗಿದರು. ಕಡೆಗೆ ಷೊಟೋಕು ಎಂಬ ರಾಜನ ಕಾಲಕ್ಕೆ (೫೯೩-೬೨೨) ನ್ಧಮತವು ರಾಜಾಶ್ರಯವನ್ನು ಪಡೆಯಿತು. ಈ ರೀತಿಯಿಂದ ಹಿಂದೀ ಚೀನಾ ನ್ಧೃತಿಗಳು ಜಪಾನಿನಲ್ಲಿ ಸೇರತೊಡಗಿದವು. ಒಳ ಜಗಳಗಳಿಂದ ಛಿನ್ನಭಿಚ್ಛಿನ್ನ ನ ತಂಡವುಳ್ಳವರಾಗಿದ್ದ ಜಪಾನಿಗಳು ಒಂದುಗೂಡಲಿಕ್ಕೆ ಬೌದ್ಧಮತವು ಾಯುಮಾಡಲೆಂದು 'ಷೊಟೋಕು' ಅವರ ಅಭಿಪ್ರಾಯವಾಗಿದ್ದಿತು. ಟೋಕು ಅವರು ನೂರಾರು ವಿಹಾರಗಳನ್ನು ಕಟ್ಟಿಸಿ ಚೀನಾದಿಂದ ಬೌದ್ಧ ಪ್ಪಗಳನ್ನು ಕರೆಯಿಸಿ ಬೌದ್ಧಮತ ಸ್ಥಾಪನಾಕಾರ್ಯವನ್ನು ಕೈಕೊಂಡರು. ನ್ಧಮತವು ಸತ್ಯದ ಮಾರ್ಗದಿಂದ ಜನರನ್ನು ಉನ್ನತಸ್ಥಿತಿಗೆ ಒಯ್ದು ಮುಟ್ಟಿಸು ುದು ಸಾಮಾನ್ಯರ ಗ್ರಹಿಕೆಯಾಯಿತು. ವಿಹಾರಗಳ ಸುತ್ತಲು ವಿದ್ಯಾಲಯ ಾ ಚಿಕಿತ್ಸಾಗೃಹಗಳೂ ಜನಸೇವಾಕಾರ್ಯವನ್ನು ಕೈಕೊಂಡು ಜನರ ನಸ್ಸನ್ನು ಆಕರ್ಷಿಸಲಾರಂಭಿಸಿದವು. ಹೋಯ್ರ್ಯುಜಿ ಎಂಬಲ್ಲಿ ಕಟ್ಟಿಸಿದ ವಿಹಾರ ಲ್ಲಿ ಕಟಿದು ತೋರಿಸಿದ ಚಿತ್ರ ಕಲಾವಿಶೇಷಗಳು ಹಿಂದುಸ್ಥಾನದ ಅಜಂತಾ ಾಲಯದ ಕಲೆಗಳಿಗೆ ತೀರಾ ಹೋಲುವ ಹಾಗೆ ಅವೆ. ಪ್ರವಾಸಿಗಳು, ಧಾರ್ಮಿಕ ತ್ಸವ ಸಂಬಂಧದಿಂದ ಜಪಾನಿಗಳಿಗೂ ಹಿಂದುಗಳಿಗೂ ಉಂಟಾದ ನಂಟತನವು ಕಲೆ ರೀತಿಯಿಂದ ಪ್ರಕಟವಾಯಿತೆಂದು ವರ್ಣಿಸಿದ್ದಾರೆ. ಷೊಟೋಕು ಅವರು ದುಸ್ಥಾನದಲ್ಲಿ ಅಶೋಕನಂತೆ ಜಪಾನಿನಲ್ಲಿ ಮನ್ನಣೆಹೊಂದಿದರು. ಇವರಾದರೂ ರ್ಮ ಗ್ರಂಥಗಳನ್ನು ಭಾಷಾಂತರಿಸಿ ಪೀಠಿಕಾತ್ರಯಗಳಿಗೆ ಟೀಕೆ ಬರೆಯಿಸಿದರು. ಧರ್ಮವು ಬಡವನನ್ನೂ ಸಿರಿವಂತನನ್ನೂ, ಹೀನನನ್ನೂ ಉಚ್ಚನನ್ನೂ ಸಮ ೀ ಯ್ದು ಮುಟ್ಟಿಸುತ್ತದೆಂಬ ಜನರ ಭಾವನೆಯಾಯಿತು; ಆಚರಣೆಯಿಂದ ಹನು ಶುದ್ಧನಾಗಿ ಧನ್ಯನಾಗುತ್ತಾನೆಂದು ಬಗೆದರು; ಸೇವೆಯು ಹೊಸ ರ್ಗ ತತ್ವವೆಂದು ಜನಸೇವಾ ಕಾರ್ಯದಲ್ಲಿ ಜನರು ಸೇವಾತತ್ಪರರಾದರು; ರು ಸೇವೆಗೆ ದೊಡ್ಡವರು ಆತುರರಾದರು. ಹೀಗಾಗಿ ಹೊಸ ತತ್ವಗಳ ಸಿಂದ ಪ್ರೇರಿತರಾಗಿ ಮನುಷ್ಯರೆಲ್ಲರೂ ಒಬ್ಬರಿಗೊಬ್ಬರು ಬಾಂಧವರೂ ಾನೂ ಆಗಿರುವರೆಂದು ಪ್ರೀತಿಯಿಂದ ನಡೆಯತೊಡಗಿದರು. ಪರಸ್ಪರರ ಯಲ್ಲಿ ಜನತೆಯು ಮಗ್ನವಾಯಿತು.

ಈ ರೀತಿಯಾದ ಹೊಸಮತದ ಹಬ್ಬುಗೆಯು ಷಿಂಟೋಗಳಿಗೆ ಸರಿಗಾಣಲಿಲ್ಲ. ತಸಿಗಳು ಹೊಸ ಮತದ ನಿರ್ಬಂಧಕ್ಕಾಗಿ ಅಡಚಣಿಗಳನ್ನು ತಂದೊಡ್ಡ

ಹತ್ತಿದರು. ಬೌದ್ಧಧರ್ಮದ ಸಮಾನತ್ವದ ತತ್ವಗಳೂ ವಿಗ್ರಹಗಳೂ ಸಾಮಾನ್ಯರ ಮನಸ್ಸನ್ನು ಆಕರ್ಷಿಸಿದವು ಹಳೆಯಮತದ ವಿಷಯವಾಗಿ ಮನಸ್ಸಿನಲ್ಲಿ ನೆಟ್ಟಿದ್ದ ಅಭಿಮಾನದ ಬೇರುಗಳನ್ನು ತೀರಾ ಕಿತ್ತಿ ಬಿಸುಟಲು ಜಪಾನಿಗಳು ಬಹಳ ಪ್ರಯತ್ನ ಮಾಡಲಾರಂಭಿಸಿದರು. ಈ ಸಂಗತಿಯು ಬೌದ್ಧ ಭಿಕ್ಷುಗಳಿಗೆ ತಿಳಿಯಿತು. ಆದುದರಿಂದ ಭಾರತ ವರ್ಷದಿಂದ ಅಲ್ಲಿಗೆ ಬಂದಿದ್ದ ಬೋಧಿಸೇನನೆಂಬ ಸನ್ಯಾಸಿಯೂ ಕೋರಿಯ ದೇಶದ ರಾಜಮನೆತನಕ್ಕೆ ಸೇರಿದ ಗ್ಯೋಗಿ ಎಂಬ ಸನ್ಯಾಸಿಯೂ ತಮ್ಮ ತಮ್ಮ ಪ್ರವಾಸದ ಅನುಭವಗಳಿಂದ ಪ್ರೇರಿತರಾಗಿ ಹಳೆಯಮತದೊಂದಿಗೆ ಸ್ನೇಹ ಬೆಳೆಸಿ ಏನಾ ಗತ್ಯಂತರವಿಲ್ಲೆಂದು ಬಗೆದರು. ಷಿಂಟೋಮತದ ದೇವತೆಗಳಿಗೂ ಮಹಾಯಾನ ದೇವತೆಗಳಿಗೂ ಹತ್ತಿರದ ಸಂಬಂಧವನ್ನುಕಲ್ಪಿಸಿ ರಾಜಧಾನಿಯಾಗಿದ್ದ ನಾರಾ ಎಂಬಲ್ಲಿ ಉಭಯ ಪಂಗಡದವರೂ ಸೇರಿ ಕ್ರಿ. ಶ. ೭೫೦ರಲ್ಲಿ ವೈರೋಚನ ದೇವನ ವಿಗ್ರಹವನ್ನು ಸ್ಥಾಪಿಸಿದರು. ಈ ಉಭಯ ಪಂಗಡದವರು ಒಟ್ಟಾಗಿ ಸಾಮಾನ್ಯ ಸಹಕಾರದಿಂದ ಮುಂದಿನ ಪಾಠಗಳನ್ನೂ ತತ್ವಗಳನ್ನೂ ಸಹಕಾರದಿಂದ ಮುನ್ನಡೆಸಲಾರಂಭಿಸಿದರು. ಮುಂದೆ ಜಪಾನೀಯರ ಹೆಂಗ್ಯೋಡೆಯಿಷಿ, ಕೋಬೋದೇಷಿ ಎಂಬ ಸನ್ಯಾಸಿಗಳು ಚೀನಾದೇಶದ ಭಿಕ್ಷುಗಳ ಪರಿಚಯ ಮಾಡಿಕೊಂಡರು. ಹಾಗು ಚೀನದೇಶದ 'ಚೀಯಾನ್' ಎಂಬಲ್ಲಿ ಮಾಪರಿ ವಿಹಾರವನ್ನು ಸ್ಥಾಪಿಸಿದರು. ಕೋಬೋದೇಷಿಯು ಚೀನಾದೇಶಕ್ಕೆ ಹಿಂದುಸ್ತಾನದಿಂದ ಬಂದಿದ್ದ ಆಮೋಘವಜ್ರಬುದ್ಧಿಯ ಬಳಿಕ ಭಿಕ್ಷುವಿನ ಶಿಷ್ಯನಾಗಿ ಮಂತ್ರಯಾನದ ಶಾಸ್ತ್ರವನ್ನು ಅಭ್ಯಾಸಮಾಡಿದನು. ಮುಂದೆ ಇವನೇ ಜಪಾನಿಗೆ ಹೋಗಿ ಕಮಲ ಮತ್ತು ಮಂತ್ರಾದಿ ಬೌದ್ಧಮತದ ಪ್ರಯೋಗಗಳನ್ನು ಜಪಾನಿನಲ್ಲಿ ಪ್ರಚುರಪಡಿಸಿದನು. ಹಾಗು ಕೆಯಮಾಸಾನ್ ಎಂಬಲ್ಲಿ ವಿಹಾರವನ್ನು ಸ್ಥಾಪಿಸಿದನು.

ಕ್ರಿ. ಪ. ೮ನೇ ಶತಮಾನದಿಂದ ಮುಂದಕ್ಕೆ ಬೌದ್ಧರ ವಿಹಾರಗಳು ರಾಜಸಹಾಯದಿಂದಲೂ ಭಕ್ತಾದಿಗಳ ದಾನಧರ್ಮಗಳಿಂದಲೂ ಸಂಪತ್ತಿನಿಂದಲೂ ಸಮೃದ್ಧವಾದವು. ಬಹುಸಂಖ್ಯಾತರಲ್ಲಿ ಬೌದ್ಧ ಭಿಕ್ಷುಗಳು ನಡತೆ, ಆಚಾರವಿಚಾರಗಳಲ್ಲಿ ಕೆಳದರ್ಜೆಯವರೆಂಬ ಅಭಿಪ್ರಾಯ ಹುಟ್ಟಿತು. ಆಗ ಧರ್ಮದ ಅವನತಿಯಾಗತೊಡಗಿತು. ಈ ಕಠಿಣ ಪ್ರಸಂಗದಲ್ಲಿ ಅನೇಕರು ಮಹನೀಯರು ಬಂದೆದ್ದು ವಿಹಾರದ ಸಂಸಾರಕ್ಕೆ ಬೌದ್ಧ ಧರ್ಮದಲ್ಲಿ ಮತ್ತೆ ಶ್ರದ್ಧಾಭಕ್ತಿಗಳನ್ನುಂಟುಮಾಡಿದರು. ಜನಸಾಮಾನ್ಯದಲ್ಲಿ ಅಂತಃಕರಣಶುದ್ಧವಾಗಿ ಜ್ಯೋತಿರ್ದರ್ಶನವಾಗುವಂತೆ ಮಾಡಿದರು. ಇವರು ಮುಂದೆ ಪಾಂಡಿತ್ಯ ಜಾತಿಗಳಿಗೆ ಅತೀತವಾಗಿ ಬೆಳೆಯಿತು. ಸಾಮಾನ್ಯ ಜನರಲ್ಲಿ ಕ್ಷಮೆ, ಧೈರ್ಯ ಇವುಗಳ ಬೆಳವಣಿಗೆ

ಗಳಕ್ಕದ್ದೆಂದು ಧ್ಯಾನಮಾರ್ಗದವರು ಬೋಧಿಸಿದರು. ಇಷ್ಟರಲ್ಲಿ ಪಾಶ್ಚಾತ್ಯರು ಅಲ್ಲಿಗೆ ಬರತೊಡಗಿದರು. ಆವೊತ್ತಿಗೆ ಬೌದ್ಧಧರ್ಮವು ಸುಧಾರಿಸಿ ಉತ್ತಮ ಯಸ್ಸನ್ನು ಹೊಂದಿತ್ತು.

ಪಾಶ್ಚಾತ್ಯರು ತಮ್ಮ ದೇಶಕ್ಕೆ ಆಗಮಿಸಿದರೆ ತಮ್ಮ ನೈಜವಾದ ಸಂಸ್ಕೃತಿ ನಾಶವಾದೀತೆಂದು ಜಪಾನಿಗಳು ಹೆದರಿ ಇತರ ದೇಶಗಳೊಂದಿಗೆ ಸಂಪರ್ಕ ಬೆಳೆಸಿಕೊಳ್ಳಕೂಡದೆಂದು ಬಗೆದು ೩೦೦ ವರ್ಷಗಳ ವರೆಗೆ ಕೂಪಮಂಡೂಕ ನ್ಯಾಯವನ್ನು ಕೈಕೊಂಡರು.

ಇಷ್ಟರಲ್ಲಿ ಷಿಂಟೋ ಮತವು ತಲೆಯೆತ್ತಹತ್ತಿತು. ಆಗ ಬೌದ್ಧರಿಗೆ ಭಯವಾಗಿ ತಮ್ಮಲ್ಲಿ ಸೇರಿದ್ದ ಕಲ್ಮಷಗಳನ್ನೆಲ್ಲ ತೆಗೆದುಹಾಕಿದರು. ತ್ರಿಪಿಟಕವನ್ನು ಜಾಪಾಕಿ ಮೂಲಗ್ರಂಥಗಳಲ್ಲಿ ಪ್ರತಿಪಾದಿತವಾದ ತತ್ವಗಳನ್ನೇ ಅವಲಂಬಿಸಿ ಹೀಗೆ ಮಾಡಿದ್ದರಿಂದ ಗಲಭೆಗಳಲ್ಲಿ ಜಪಾನಿನ ಪ್ರಜೆಗಳಿಗೆ ಧರ್ಮ ಕರ್ತವ್ಯವು ದೊರೆಯಿತು. ಷಿಂಟೋಮತ ಬೌದ್ಧಮತ, ಇತರ ಮತಗಳು ಇವೆಗಳಿಗೂ ಪ್ರಚಾರಕಾರ್ಯದಲ್ಲಿ ಸಮಾನ ಹಕ್ಕುಗಳು ಬಂದವು.

ಇತ್ಮಲಾಗಿ ಬೌದ್ಧಮತವು ಅಲ್ಲಿ ಬಲಗೊಳ್ಳುತ್ತಿದೆ ಎಂದೂ ಬುದ್ಧನ ವಚನಗೇ ಹೆಚ್ಚು ಮಹತ್ವವು ಪ್ರಾಪ್ತವಾಗಹತ್ತಿದೆ ಎಂದೂ ಎಲಿಯೆಟ್ ಇವರು ಪ್ರಾಯಪಟ್ಟಿದ್ದಾರೆ.

ಎಲಿಯೆಟ್ ಅವರು ೧೯೩೪ರಲ್ಲಿ ಕಾಲವಾದರು. ಇತ್ತೀತ್ತಲಾಗಿ ಅವರು ಬರೆದ "ಜಪಾನ ದೇಶದಲ್ಲಿ ಬೌದ್ಧಮತದ ಚರಿತ್ರೆ" ಎಂಬ ಪುಸ್ತಕವು ಪ್ರಕಟಗೊಂಡಿದೆ.

ಸರ ಚಾರಲ್ಸ್ ಎಲಿಯೆಟ್ ಎಂಬವರು ಬೌದ್ಧಧರ್ಮದ ವಿಷಯವಾಗಿ ಪಾರ್ವದೇಶದಲ್ಲಿ ಶೋಧಮಾಡಿ ಗೊತ್ತಾದ ವಿಷಯವನ್ನು ಆಸ್ಥೆಪೂರ್ವಕವಾಗಿ ಪಾಂಡಿತ್ಯಪೂರ್ಣವಾಗಿ ಬರೆದಿರುವರು. ಈ ಸಂಗತಿಯಿಂದ ಯುರೋಪೀಯರಲ್ಲಿದ್ದ ಸೂಕ್ಷ್ಮಬುದ್ಧಿಯು ಪ್ರಕಟವಾಗುವಂತೆ ಅದೆ.

ಕನ್ನಡ "ವರ್ಷಪ್ರಾಯಿಜ" ಪರೀಕ್ಷೆ ೧೯೩೯

ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೮ನೆಯ ಇಸವಿಯ ಜುಲಾಯಿ ತಿಂಗಳ **೭ನೆಯ** (**ಗುರುವಾರ**) ಮತ್ತು ಮುಂದಿನ ಎರಡು ದಿವಸಗಳಲ್ಲಿ ೧೨ ಗಂ ಧಾರವಾಡ ಟ್ರೇನಿಂಗಸ್ಕೂಲಿನಲ್ಲಿ ಪರೀಕ್ಷೆಯು ನಡೆಯುವದು.

ಪರೀಕ್ಷೆಯ ವಿಷಯ ಮೊದಲಾದವು:—

೧) ಪಠ್ಯಗ್ರಂಥ ಮತ್ತು ಹೊಸಗನ್ನಡ ಗದ್ಯಪದ್ಯಭಾಗಗಳ ಅರ್ಥವಿ ಮಾಡಿಕೊಳ್ಳುವದರಲ್ಲಿ ವಿದ್ಯಾರ್ಥಿ ಬೀಳಿಬೇಕಾದ ಶ್ರಮಗಳನ್ನು ಬರೆಯಲಿಕ್ಕೂ ಹಳೆಯ ಕ ಹೊಸಗನ್ನಡದಲ್ಲಿ ಸಿಬಂದಿಯಲಿಕ್ಕೂ ಉಪಯೋಗವಾಗುವ ಸಮರ್ಥರಾಗಿರಬೇ

೨) ಪರೀಕ್ಷಾರ್ಥಿಯು ರಚಿಸುವ ವ್ಯಾಕರ್ತೃವ್ಯಮಾಲೆ ಎಂಬ ಗ್ರ ಪನ್ನು ಪೂರ್ಣವಾಗಿ ಬಿಡಿಸಿ ಸಮರ್ಪಕವಾಗಿ ತಿಳಿದುಕೊಂಡಿರಬೇಕು. ಪರೀ ಪತ್ರಿಕೆಯಲ್ಲಿ ಬರೆಯಬೇಕಾದ ವ್ಯಾಕರಣ ನಿಬಂಧ, ಪದ್ಯರಚನೆ ಈ ವಿಷ ಗಳ ಸಮಾಧಾನಕರವಾಗಿರಬೇಕು. ಉಪಯೋಗವಾರರು ಪರೀಕ್ಷೆಗಿರುವ ಒಟ್ಟು ಗ ಳಲ್ಲಿ ಇಂತಿಷ್ಟು ಪ್ರಮಾಣದಷ್ಟಾದರೂ ಕಡಿಮೆಯಿಲ್ಲದಷ್ಟು ಗುಣಗಳನ್ನು ಪಡೆದಿರಬೇ ಮತ್ತು ಮಾಡಬೇಕಾದ ವಿಷಯವನ್ನು ತೀರ ಅಸಮಾಧಾನಕರವಾಗಿ ಬ ರಿಸಿದಾದಲ್ಲಿ ಫೇಲಾಗುವದು.

ಪರೀಕ್ಷೆಯ ನಿಯಮ ಮೊದಲಾದವು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆಕೊಟ್ಟು ಆ ನಿಯಮಗಳಿಗನುಸ ವಾಗಿ ಪಾಸಾಗಿ ಪ್ರಮಾಣಪತ್ರ ಪಡೆದ ದಕ್ಷಿಣಭಾಗದೊಳಗಿನ ಉಪ ಉಪಾಧ್ಯಾಯರಿಗೆ ಬ ಪ್ರ ಪ್ರಮಾಣ ಪತ್ರ ಕೊಡಲಾಗುವದು.

ಅರ್ಜಿ ಸಲ್ಲಿಸಬೇಕಾದ ಅವಧಿ:—

ಪರೀಕ್ಷೆಗೆ ಕುಳಿತುಕೊಳ್ಳಬಯಸುವವರು ೧೯೩೮ನೆಯ ಇಸವಿಯ ಜೂನ ತಿಂ **ಆರನೆಯ** ತಾರೀಖಿನೊಳಗಾಗಿ ನಿ ಜಾಯಿಂಟ್ ಕಮಿಶನರ್ ಇವ ದಕ್ಷಿಣಭಾಗ ಶಾಲೆಗೆ ಮಾಡುವಂತೆ ಅರ್ಜಿಯನ್ನು ಮಾಡತಕ್ಕದ್ದು.

ಪತ್ರಗಳ ಸಾರಾಂಶ

೧. **ನರೇಂದ್ರ (ಜಿಲ್ಲಾ ಧಾರವಾಡ)** ಶಾಳಾ ಹೆಡ್‌ಮಾಸ್ತರರಾದ ಎಂ. ಸಾ. ಹಾವಳಿ ಅವರಿಂದ ಬರೆಯಲ್ಪಟ್ಟದ್ದು:—"ಈ ಶಾಲೆಯ ವಾರ್ಷಿಕ ಸ್ಪರ್ಧೆಯ ಇನಾಮಿನ ಸಮಾರಂಭವು ೨೭-೨-೧೯೩೭ನೆಯ ದಿವಸ ಜರುಗಿತು. ಸಮಾರಂಭದ ಸಭೆಗೆ ಅಲ್ಲಿಯ ಶ್ರೀ. ಪಟ್ಟದಸ್ವಾಮಿಗಳೂ ದೇಸಾಯಿ ದೇಶಪಾಂಡೆಯವರು ಆಗಮಿಸಿದ್ದರು. ಸಭೆಯ ಸುಪರ್ವಾಯಿಜರ ಸಾ. ರು ಅಧ್ಯಸ್ಥಾನವನ್ನು ವಹಿಸಿದ್ದರು. ಪದ್ಧತಿಗೆ ಸರಿಯಾಗಿ ಭಾಷಣಗಳಾದ ಬಳಿಕ ಪ್ರತಿ ಪಾಸಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪುಸ್ತಕ, ಪಾಟಿ, ಖಣ ಮೊದಾದವುಗಳು ಅಧ್ಯಕ್ಷರ ಹಸ್ತದಿಂದ ಇನಾಮಾಗಿ ಕೊಡಲ್ಪಟ್ಟವು. ಸಿಹಿತಿನ್ನಾಸಗಳು ಹಂಚಲ್ಪಟ್ಟವು.

ಈ ಕಾಲಕ್ಕೆ ಶ್ರೀ. ರಂಗರಾವ ದೇಶಪಾಂಡೆ ಅವರು ೧೦ ರೂ. ಗಳನ್ನು ಸಿಹಿ ಇನಾಮಿನ ಸಮಾರಂಭದ ಸಲುವಾಗಿ ಕೊಟ್ಟರು. ಈ ಸಂಗತಿಯು ಸ್ತುತ್ಯ.

೨. **ಗರ್ಲ ಶಾಳಾ ಕರ್ಜಗಿ (ಜಿ. ಧಾರವಾಡ)** ಇಲ್ಲಿಯ ಅಸಿ. ಶಿಕ್ಷಕಿ ಕೃ. ವೆ. ವಡವಿ ಅವರು ಬರೆದದ್ದು:—"ಇಲ್ಲಿಯ ಸ್ಕೂಲಕಮೀಟಿಯ ಬರಾದ ಶ್ರೀ ರಾಮಚಂದ್ರರಾವ ಹನುಮಂತರಾವ ಜೋಗಳೇಕರ ಅವರು ಶಾಲೆಗೆ ತಾ. ೨೦-೨-೧೯೩೭ನೆಯ ದಿವಸ ಆಗಮಿಸಿ ಇಯತ್ತಿಗಳ ಅಭ್ಯಾಸ ನೋಡಿ ಸಂತೋಷಪಟ್ಟು ಈ ಶಾಲೆಯಲ್ಲಿ ವೇಳಾಪತ್ರಿಕೆಯಂತೆ ಅಭ್ಯಾಸ ನಿಯಮಸಲಿಕ್ಕೆ ಗಡಿಯಾಳವು ಸಹಕಾರಿಯಾಗಲೆಂದು ಹೊಸ ಗಡಿಯಾರವನ್ನು ಕೊಟ್ಟರು. ಸ್ತುತ್ಯವು.

Reg. No. B. 369

ಇಂತಹ ಇನ್ನೊಂದು ಪುಸ್ತಕವೇ ಇಲ್ಲ !
ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ

ಕನ್ನಡ ನುಡಿಯ ಹುಟ್ಟು.

ಬರೆದವರು : ಶಂ. ಬಾ. ಜೋಶಿ

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಅಳವು ಗೊತ್ತಿಲ್ಲದ ಅಪಣಾ ಮೋಸ್ಕ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒದ್ದಾ ಟನ್ನು ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ ನುಟ್ಟು ಗೊತ್ತಿಲ್ಲದ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.

ಸುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾದ ಗ್ರ

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೇರಿ, ಧಾರವಾಡ

೧–ಜೂನ–೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು.

ಸಂ.	ವಿಷಯ.	ಪುಟ.
ಮೇ—		
೧	ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು	೧
೨.	ಭೂಗೋಲ ಶಿಕ್ಷಣ	೪
೩.	ಶಾಲೆಗಳಲ್ಲಿ ಡ್ರಿಲ್–ಶಿಕ್ಷಣದ ಮಹತ್ವ	೯
೪.	ಕನ್ನಡ ನಾಡಿನ ಇತಿಹಾಸ	೧೪
೫.	೧೯೩೭ನೆಯ ಇಸ್ವಿಯ ಏಪ್ರಿಲ್ ತಿಂಗಳಲ್ಲಾದ ಗಂಡು ಮಕ್ಕಳ ಟ್ರೇ. ಸ್ಕೂಲಿನ ವಾರ್ಷಿಕ ಪರೀಕ್ಷೆಯ ಪರಿಣಾಮವು	೨೧
೬.	೧೯೩೭ನೆಯ ಇಸ್ವಿಯ ಮಾರ್ಚ ತಿಂಗಳಲ್ಲಾದ ಹೆಣ್ಣುಮಕ್ಕಳ ಪ್ಲೆ. ಫಾ. ಪರೀಕ್ಷೆಯ ಪರಿಣಾಮವು	೨೫
ಜೂನ—		
೧.	ಸಮ್ರಾಚಕ್ರವರ್ತಿಗಳಾದ ೬ನೆ ಜಾರ್ಜ್‌ರವರ ರಾಜ್ಯಾರೋಹಣ ಸಮಾರಂಭವು	೧
೨.	ಆರನೆಯ ಜಾರ್ಜ ಸಾರ್ವಭೌಮರ ಚರಿತ್ರೆ	೧೦
೩.	ಹಳ್ಳಿಗಳೂ ಶಿಕ್ಷಕರ ಯತ್ನಗಳೂ	೧೧
೪.	ಇಂಗ್ಲಂಡ ದೇಶದ ಒಂದು ಹಳ್ಳಿಯ ಶಾಲೆಯು	೧೨
೫.	೧೯೩೭ನೆಯ ಇಸ್ವಿಯಲ್ಲಾದ ಕನ್ನಡ ಗಂಡುಮಕ್ಕಳ ಪ್ಲೆ ಫಾ. ಪರೀಕ್ಷೆಯ ಪರಿಣಾಮವು	೧೭

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹ

	ರೂ. ಆ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦–
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಿಕೃತ)	೦–
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦–
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	೧–
ಲಘುವ್ಯಾಕರಣ (ವೈ. ಕಟ್ಟೀಕೃತ)	೦–
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦–
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೬ನೇ ಇ. ಗೆ	೦–೧
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦–
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪
,, ೩ನೇ ,,	೦– ೫
,, ,, ೪ನೇ ,,	೦– ೬
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೪
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦– ೬
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	೦– ೬
ಧಾರವಾಡ ಜಿಲ್ಲಾ ,, (ಕುರಡೀಕೃತ)	೦– ೪
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦– ೬
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧– ೦
ಭೂಗೋಲವಿದ್ಯೆ ೭ನೇ ಭಾಗ (ವೈ. ಕಟ್ಟೀಕೃತ)	೦– ೬
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೪
ಎಲ್‌ಎಲ್. ಬಿ. ಸ್ಟೂ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦
ಭೂಮಿತಿ (ಚಂಡಾವರಕರ ಕೃತ)	೦– ೬
ನರಸ್ವತೀ ವಿಜಯ (ಬೂದೀಹಾಳಕೃತ)	೦– ೬

ಪತ್ರೆ:—ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಂಪುಟ ೭೬ | ಮೇ ೧೯೩೭ | ವರ್ಷ ೯ ಸಂ. ೨

ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು

೧೯೩೫-೧೯೩೬

೧೯೩೬ನೇ ಇಸ್ವಿಯು ಎಪ್ರಿಲ್ ತಿಂಗಳ ಮೊದಲನೆಯ ತಾರೀಖಿನಿಂದ ಸಿಂಧ ್ರಾಂತವು ಮುಂಬಯಿ ಇಲಾಖೆಯಿಂದ ಬೇರೆಯಾಗಿ ಸ್ವತಂತ್ರ ಪ್ರಾಂತವೆಂದು ಿನಲ್ಪಡುವದರಿಂದ ಸಿಂಧಪ್ರಾಂತವನ್ನೊಳಕೊಂಡ ಮುಂಬಯಿ ಇಲಾಖೆಯ ಯಲ್ಲಿ ಇದೇ ಕೊನೆಯದಾಗುವದು.

ಶಿಕ್ಷಣ ಸಂಸ್ಥೆಗಳು:— ಈ ವರ್ಷದ ಅಂತ್ಯಕ್ಕೆ ನಮ್ಮ ಇಲಾಖೆಯಲ್ಲಿ ಗೆ ೧೭೩೧ಳ ಶಿಕ್ಷಣ ಸಂಸ್ಥೆಗಳಿದ್ದು — ಕಳೆದ ವರ್ಷಕ್ಕಿಂತ ೩೮೭ ಸಂಸ್ಥೆಗಳು ್ಚಿಗಿರುವವು. ಇವುಗಳಲ್ಲಿ ೧೬೦೯ ಸಂಸ್ಥೆಗಳು ಸರಕಾರದಿಂದ ಮಾನ್ಯವಾದವು ್ದ ಅವುಗಳ ವರ್ಗೀಕರಣವು ಈ ರೀತಿಯಾಗಿರುವದು.

೧೭ ಆರ್ಟ್ಸ್ ಹಾಗು ಸಾಯಿನ್ಸ್ ಕಾಲೇಜಗಳು.
೧೩ ತೌದ್ಯೋಗಿಕ ಕಾಲೇಜಗಳು
೭೮೭ ಮಾಧ್ಯಮಿಕ ಶಾಲೆಗಳು.
೧೫೨ ಪ್ರಾಥಮಿಕ ಶಾಲೆಗಳು.

ನಮ್ಮ ಮುಂಬಯಿ ಇಲಾಖೆಯಲ್ಲಿ ಹಳ್ಳಿಗಳೂ ಪಟ್ಟಣಗಳೂ ಸೇರಿ ೨೬೮೫ ಇದ್ದು ಅವುಗಳಲ್ಲಿ ೧೦೬೫ ಊರುಗಳಲ್ಲಿ ಮಾತ್ರ ಶಾಲೆಗಳಿರುವವೆಂದು ಗೊತ್ತಾಗಿ ಮತ್ತು ೧೧.೫ ಚೌರಸ ಮೈಲುಗಳಿಗೆ ಒಂದು ಸಾಲೆಯಂತೆ ಲೆಕ್ಕ ಹೊರಟಿದೆ.

ವಿದ್ಯಾರ್ಥಿಗಳು— ಈ ವರ್ಷದ ಅಂತ್ಯಕ್ಕೆ ೧೪೭೬೪೦ ವಿದ್ಯಾರ್ಥಿಗ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿದ್ದರು. ಕಳೆದ ವರ್ಷಕ್ಕಿಂತ ಈ ವರ್ಷ ೫೪೨೬ ವಿದ್ಯಾರ್ಥಿಗಳು ಹೆಚ್ಚಾಗಿರುವರು. ಇವರಲ್ಲಿ ೧೪೩೦೪೬ ವಿದ್ಯಾರ್ಥಿಗ (೧೦೯೦೦೫ ಗಂಡು, ೩೪೦೪೧ ಹೆಣ್ಣು,) ಸರಕಾರದಿಂದ ಮಾನ್ಯ ಶಾಲೆಗಳಲ್ಲಿ ಓದುತ್ತಿದ್ದರು.

ಈ ವರ್ಷದಲ್ಲಿ ೪೦೧೬೫೦೨ ರೂ. ಗಳು ಶಿಕ್ಷಣಕಾರ್ಯಕ್ಕಾಗಿ ವೆಚ್ಚ ವವು. ಅವುಗಳಲ್ಲಿ ೧೭೬೪೧೯೩ ರೂ. ಗಳು ಸರಕಾರೀ ಟ್ರೆಝರಿಯಿಂದ ಕೊಟ್ಟವು. ಮಿಕ್ಕವು ಬೇರೆ ಬೇರೆ ಬೋರ್ಡುಗಳು, ಫೀ ಮತ್ತು ಇತರ ಉತ್ಪನ್ನಗ ದೊರೆದವು. ಈ ಒಟ್ಟು ರಕಮಿನಲ್ಲಿ ಕೇವಲ ಪ್ರಾಥಮಿಕ ಶಿಕ್ಷಣಕ್ಕಾಗಿ ೧೧೦೧೯೩೩ ರೂಪಾಯಿಗಳು ವೆಚ್ಚವಾಗಿವೆ.

ಈ ವರ್ಷಗಳಲ್ಲಿ ಅನೇಕ ಮಹತ್ವದ ಯೋಜನೆಗಳನ್ನು ಸರಕಾರ ಕೈಕೊಂಡಿದ್ದರು. ಅವುಗಳಲ್ಲಿ, ದೇಶಭಾಷೆಯ ಟ್ರೇನಿಂಗ ಕಾಲೇಜಗಳ ಅ ಪತ್ರಿಕೆಯನ್ನು ಸುಧಾರಿಸಿ ಬದಲಿಸಿದ್ದು ಮತ್ತು ಟ್ರೇನಿಂಗ ಕಾಲೇಜಗಳನ್ನು ಬೆಳಿ ಇವೇ ಪ್ರಾಮುಖ್ಯವಾದವು. ಇದರಿಂದ ಹೆಚ್ಚು ಜನ ಟ್ರೇಂಡ ಪ್ರಾಥಮಿಕ ಕರು ತಯಾರಾಗಲು ಅನುಕೂಲವಾಯಿತಲ್ಲದೆ ಈ ಹೊಸ ಶಿಕ್ಷಕರ ಯೋಗ್ಯತೆಯ ಕಾಲಮಾನಕ್ಕನುಗುಣವಾಗಿ ಬೆಳಿಸಲ್ಪಟ್ಟಂತಾಗಿದೆ. ಮತ್ತು ಈ ಹೊಸ ಅಭ್ಯಾ ಪತ್ರಿಕೆಯು ಸಮಾಧಾನಕರವಾಗಿದೆಯೆಂದು ಅನುಭವದಿಂದ ಸಿದ್ಧವಾದಂತಾಗಿ ಶಾರೀರಿಕ ಶಿಕ್ಷಣವನ್ನು ಕುರಿತು ಹೊಸದೊಂದು ಯೋಜನೆಯು ದೇಶ ಭ ಗಳಲ್ಲಿ ಸಿದ್ಧವಾಗುತ್ತಲಿದ್ದು ಅದು ಶಿಕ್ಷಕರಿಗೆ ತುಂಬಾ ಪ್ರಯೋಜನಕಾರಿಯ ಬಹುದೆಂದು ತಿಳಿಯಲಾಗಿದೆ.

ಪ್ರಾಥಮಿಕ ಶಿಕ್ಷಕರ ವರ್ಗಾರದ ಹೊಸ ಯೋಜನೆಯು ಅಮಲಿನಲ್ಲಿ ಬಂದಿ ಅದರಿಂದ ಶಿಕ್ಷಕರ ಕೆಲಸಕ್ಕೆ ಬೇಕಾಗುವ ಉಮೇದವಾರರನ್ನು ದೊರಕಿಸಲ ತೊಂದರೆಯೇನೂ ಕಂಡು ಬರಲಿಲ್ಲ. ಎಂದರೆ ಹೊಸ ಸ್ಕೀಮಿನಂತೆ ವರ್ಗಾರ ಮುಕೊಂಡು ಕೆಲಸ ಮಾಡಲಿಕ್ಕೆ ಬೇಕಾದಷ್ಟು ಉಮೇದವಾರರು ಸಿದ್ಧರಿರುವ ಕಂಡುಬಂತು.

ಒತ್ತಾಯದ ಪ್ರಾಥಮಿಕ ಶಿಕ್ಷಣವು ಇನ್ನೂ ಹೆಚ್ಚಾಗಿ ಪ್ರಸಾರವಾಗಿಲ್ಲವೆಂದೇ ಳಬೇಕಾಗಿದೆ. ಇದಕ್ಕೆ ಹಣದ ಕೊರತೆಯೇ ಪ್ರಬಲವಾದ ತೊಂದರೆಯಾಗಿದೆ. ಲ್ಲದೆ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿದ ಪ್ರದೇಶಗಳಲ್ಲಿಯೂ ಕೂಡ ವಿದ್ಯಾರ್ಥಿಗಳ ಸಂಖ್ಯೆಯು ಹೇಳಿಕೊಳ್ಳುವಷ್ಟು ಹೆಚ್ಚಾದಂತೆ ಕಂಡುಬರಲಿಲ್ಲ.

ಒಟ್ಟಿಗೆ ಶಿಕ್ಷಣ ಪ್ರಸಾರದ ದೃಷ್ಟಿಯಿಂದ ನೋಡಿದರೆ ಅದು ಸಮಾಧಾನಕರ ಾಗಿದ್ದಂತೆ ಕಂಡುಬಂದರೂ ಸಾಮಾನ್ಯ ಜನತೆಯ ಶಿಕ್ಷಣಕಾರ್ಯವನ್ನು ಒಪ್ಪಿ ೊಂಡಿರುವ ಸ್ಥಾನಿಕ ಸಂಸ್ಥೆಗಳು ವಿಚಾರಮಾಡತಕ್ಕ ಮಾತುಗಳು ಇನ್ನೂ ಲಕಲವು ಇದ್ದೇ ಇರುವವು.

ನಮ್ಮ ಇಲಾಖೆಯಲ್ಲಿ ಹತ್ತುಸಾವಿರಕ್ಕಿಂತ ಹೆಚ್ಚು ಜನವಸತಿಯಿರುವ ೨೫೯ ಳಿಗಳಲ್ಲಿ ಇನ್ನೂ ಪ್ರಾಥಮಿಕ ಶಾಲೆಗಳಾಗಿಲ್ಲ. ಆದರೆ ಎಷ್ಟೋ ಶಾಲೆಗಳಲ್ಲಿ ಕ್ಲೆಯು ನಡೆಯಲಿಕ್ಕೆ ಬೇಕಾಗುವಷ್ಟು ವಿದ್ಯಾರ್ಥಿಗಳೇ ಇಲ್ಲದ್ದರಿಂದ ಆ ಕ್ಲೆಯ ಸಲುವಾಗಿ ಮಾಡುವ ವೆಚ್ಚವು ವ್ಯರ್ಥವಾಗುತ್ತಿದೆ. ಮತ್ತು ಎಷ್ಟೋ ಾರುಗಳಿಗೆ ಸಾಲೆಯ ಆವಶ್ಯಕತೆಯೇ ಇಲ್ಲವೆಂದು ಕಂಡುಬಂದಿರುವದು. ನಿಕ ಸಂಸ್ಥೆಗಳು ಇಂಥ ಶಾಲೆಗಳನ್ನು ಮೇಲೆ ಹೇಳಿದಂಥ ದೊಡ್ಡ ಊರುಗಳಿಗೆ ರ್ಗಾಯಿಸಿದರೆ ಒಳ್ಳೇ ಅನುಕೂಲವಾಗುತ್ತಿತ್ತು.

ಪ್ರಾಥಮಿಕ ಶಾಲೆಗಳಿಗಾಗಿ ವೆಚ್ಚವಾಗುವ ಹಣದಲ್ಲಿ ಬಹುಭಾಗವು ವ್ಯರ್ಥ ಗುತ್ತಿದೆಯೆಂದು ಕಂಡುಬಂದಿದೆ. ಒಟ್ಟು ೧೦೦ರಲ್ಲಿ ೩೧ ರಷ್ಟು ವಿದ್ಯಾರ್ಥಿಗಳು ೯ ಇಯತ್ತೆಯಲ್ಲಿ ಇರುವರು, ಮತ್ತು ಬಿನ್ ಇಯತ್ತೆಗೆ ಬಂದ ಈ ವಿದ್ಯಾರ್ಥಿಗ ೧೦೦ರಲ್ಲಿ ೧೫ರಷ್ಟು ಮಾತ್ರ ಳನೆಯ ಇಯತ್ತೆಗೆ ಮುಟ್ಟುವರು; ಅರ್ಧದಷ್ಟು ಸಲನೆಯ ಇಯತ್ತೆಗೆ ಹೋಗುವರು. ೧೯೩೪–೩೫ ರಲ್ಲಿ ಬಿನ್ ಇಯತ್ತೆಯಲ್ಲಿದ್ದ ೨೦೦೦ ವಿದ್ಯಾರ್ಥಿಗಳಲ್ಲಿ ೨೨೧೦೦೦ ವಿದ್ಯಾರ್ಥಿಗಳು ಮಾತ್ರ ೧೯೩೫–೩೬ ನೆಯ ಇಯತ್ತೆಗೆ ಹೋಗಿದ್ದರು. ಇದಕ್ಕೆ ವಿದ್ಯಾರ್ಥಿಗಳು ವರ್ಷಾನುವರ್ಷ ವಾಗಿ ಸಾಲೆಗೆ ಬಾರದಿರುವದೂ ವರ್ಷದಲ್ಲಿ ಬೇಕಾದಾಗ ಸಾಲೆಗೆ ಬಂದರೂ ಇಯತ್ತೆಗೆ ಹೆಸರು ಹಚ್ಚಿಕೊಳ್ಳುವ ರೂಢಿಯಿರುವದೂ ಕಾರಣವೆನಿಸುತ್ತಿ ೂ ಶಿಕ್ಷಕರು ಇದಕ್ಕೆ ಬಹ್ವಂಶದಿಂದ ಕಾರಣರಾಗಿರುವರು. ಟ್ರೇಂಡರಾದ ೀಗ್ಯ ಅನುಭವಿಕ ಶಿಕ್ಷಕರೇ ಬಿನ್ ಇಯತ್ತೆಯನ್ನು ಕಲಿಸಬೇಕೆಂದು ಒತ್ತಾಯ ಮಾಡುತ್ತಿದ್ದರೂ ಇನ್ನೂ ಬಹುಕಡೆಗೆ ಅಯೋಗ್ಯ ಅಂಟ್ರೇಂಡ ಶಿಕ್ಷಕರೇ ಈ ವರ್ಗ

ವನ್ನು ಕಲಿಸುತ್ತಿರುವನು. ಅಲ್ಲದೆ ಬಿನ್ ಇಯತ್ತೆಯ ಅಭ್ಯಾಸಕ್ರಮದ ತಿಪ್ಪ ಪಡಿ ಪಡಿಸುವನು. ಪಾಠಪುಸ್ತಕವನ್ನು ಬದಲಾಯಿಸುವದು ಮುಂತಾದ ಉಪಾಯ ಗಳಿಂದ ಈ ತರದ ನಿರರ್ಥಕ ವೆಚ್ಚವನ್ನು (Wastage) ಕಡಿಮೆ ಮಾಡಲು ಯತ್ನ ಸಲಾಗುವದು.

ಶಾಲೆಗಳ ಕಟ್ಟಡಗಳ ವಿಷಯದಲ್ಲಿಯೂ ಸ್ಥಾನಿಕ ಸಂಸ್ಥೆಗಳು ಸಾಕಷ್ಟು ಲಕ್ಷ ಪೂರೈಸಿವೆವು ತೀರ ಅಯೋಗ್ಯವಾಗಿದೆಯೆನ್ನಬೇಕು. ಸಾಕಾದಷ್ಟು ಹ ಬೆಳಕುಗಳಿಲ್ಲವ, ಅಪಾಯಕರವಾವ ಗಾಳಿ ಬಿಸಿಲು ಮಳೆಯ ನೀರುಗಳಿಗೆ ಪ್ರತಿಬಂ ವಿಲ್ಲವ. ಆರೋಗ್ಯಕರವಾವ, ಪ್ರಾಥಮಿಕ ಶಾಲಾಗೃಹಗಳು ಇಲಾಖೆಯತುಂ ಹೇರಳವಾಗಿವೆ. ದಕ್ಷಿಣಭಾಗದಲ್ಲಿಯಂತೂ ಈ ತರದ ಕಟ್ಟಡಗಳೇ ಹೆಚ್ಚು. ಇ ರಿಂದ ಬಾಲಕರ ವಿದ್ಯಾಭ್ಯಾಸವು ಒತ್ತಟ್ಟಿಗಿರಲಿ ಅವರ ಆರೋಗ್ಯವೇ ಕೆಟ್ಟುಹೋಗು ಸಂಭವವು ಹೆಚ್ಚಾಗಿರುವದು. ಸ್ಥಾನಿಕ ಸಂಸ್ಥೆಗಳ ಚಾಲಕರು ಭವಿಷ್ಯದ ಜನತೆಯ ಆರೋಗ್ಯಕ್ಕೆ ಸಂಬಂಧಿಸಿದ ಈ ವಿಚಾರವನ್ನು ಆದಷ್ಟು ಬೇಗನೆ ಸಮಾಧಾನಕ ವಾಗುವಂತೆ ಮಾಡಿ ನಿರ್ಣಯಿಸುವರೆಂದು ಆಶಿಸಲಾಗಿದೆ.

ಭೂಗೋಲ ಶಿಕ್ಷಣ

ಹಿಂದಿನ ಸಂಚಿಕೆಯಲ್ಲಿ ಭೂಗೋಲ ಶಿಕ್ಷಣವನ್ನು ಕುರಿತು ಬರೆದ ಲೇಖನದಲ್ಲಿ ಸಾಮಾನ್ಯವಾಗಿ ನಾವು ಶಾಲೆಗಳಲ್ಲಿ ಉಪಯೋಗಿಸುವ ಉಪಕರಣಗಳನ್ನೂ ಅವುಗಳ ಸರ್ವಸಾಧಾರಣ ಉಪಯೋಗವನ್ನೂ ವಿವರಿಸಿ ಭೂಗೋಲ ಶಿಕ್ಷಣದ ಧ್ಯೇಯ ಏನಿರಬೇಕೆಂಬದನ್ನೂ ಹೇಳಿದೆವು. ಶಾಲೆಗಳಲ್ಲಿ ಕಲಿಸುವ ಭೂಗೋಲದ ಪಾಠಗಳ ಯಾವ ವಿಷಯಗಳ ಸಮಾವೇಶವಾಗುವದು ಅವನ್ನು ಕಲಿಸುವದರಿಂದ ಬಾಲಕ ಯಾವ ಮನಃಶಕ್ತಿಗಳು ಹೇಗೆ ವಿಕಾಸಗೊಳ್ಳುವವು ಮುಂತಾವುವನ್ನು ಈ ಲೇಖ ದಲ್ಲಿ ಪರ್ಯಾಲೋಚಿಸಿದೆ.

ಹಳೆಯ ಪದ್ಧತಿಯಿಂದ ಭೂಗೋಲವನ್ನು ಕಲಿಸುವಾಗ ಬಾಲಕರ ಪ ಶಕ್ತಿಗೇ ಹೆಚ್ಚು ಚಾಲನೆ ದೊರೆಯುತ್ತಿರುವದೊಂದು ಗುರುತರವಾದ ದೋಷವೆಂ ಹೇಳುವರು. ಭೂಗೋಲದ ವಿಷಯದಲ್ಲಿ ಕೆಲಕೆಲವು ಸಂಗತಿಗಳನ್ನು ಬಾಲಕ ಪಾಠಮಾಡಿದ ಹೊರತು ಗತ್ಯಂತರವೇ ಇಲ್ಲ. ಕಾಲನಿರೂಪಣೆಯ ಇಸ್ಪಿಗ

ಚರಿತ್ರೆಯಮುಂದಿರದ ರಚನೆಗೆ ಬೇಕಾಗುವ ಇಟ್ಟಿಗೆಗಳೆಂದು ತಿಳಿಯಲ್ಪಡುವವು. ಇವನ್ನು ಬಾಲಕರು ಪಾಠಮಾಡದೆ ನೆನಪಿನಲ್ಲಿ ಹೇಗೆ ಇಟ್ಟುಕೊಳ್ಳುವರು? ಹಾಗೆಯೇ ಭಾಷಾಪಾಠ ಗಣಿತಪಾಠಗಳಲ್ಲಿಯೂ ಕೆಲಕೆಲವು ಮಾತುಗಳನ್ನು ಬಾಲಕರಿಂದ ಪಾಠಮಾಡಿಸಲೇಬೇಕಾಗುವದು. ಮಿಕ್ಕ ಪಾಠಗಳಲ್ಲಿಯಂತೆಯೇ ಭೂಗೋಲ ವಿಷಯದಲ್ಲಿಯೂ ಬಾಲಕರು ಪಾಠಮಾಡಬೇಕಾಗಿರುವ ಸಂಗತಿಗಳನ್ನು ಮೊದಲು ಚೆನ್ನಾಗಿ ತಿಳಿದುಕೊಂಡ ತರುವಾಯವೇ ಪಾಠಮಾಡಿದರೆ ಒಳಿತೆಂಬದನ್ನು ಶಿಕ್ಷಕರು ಮರೆಯಲಾಗದು.

ಆದರೂ ಕೇವಲ ಪಾಠಕ್ಕೇ ಪ್ರಾಧಾನ್ಯವಿರಕೂಡದೆಂಬ ವಿಚಾರವು ಆಧುನಿಕ ಶಿಕ್ಷಣಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಸಾರಿಯ ವ್ಹ. ಫಾ. ಪರೀಕ್ಷೆಯ ಚರಿತ್ರಾಸ ಭೂಗೋಲಗಳ ಪ್ರಶ್ನಿಕಾಗದಗಳನ್ನು ನೋಡಿದರೆ ಈ ಮಾತು ತಿಳಿಯ ಬರಹುದು. ಅವುಗಳಲ್ಲಿ ಒಂದೆರಡು ಪ್ರಶ್ನೆಗಳಿಗೆ ಉತ್ತರಗಳನ್ನೂ ಅಲ್ಲಿಯೇ ಕೊಟ್ಟಿದ್ದು ಅವನ್ನು ಸಮನ್ವಯ ಮಾಡುವ ಕೆಲಸವನ್ನು ವಿದ್ಯಾರ್ಥಿಗಳಿಗೆ ಒಪ್ಪಿಸಿದ್ದರು. ವಿಚಾರಶೀಲನಾದವಿದ್ಯಾರ್ಥಿಯು ತಾನು ಹಿಂದೆ ಓದಿದ್ದನ್ನು ಸ್ಮರಣೆಯಲ್ಲಿ ತಂದುಕೊಂಡರೆ ಆ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಹೇಳಬಹುದಾಗಿದ್ದಿತು. ವಿದ್ಯಾರ್ಥಿಗಳ ಸ್ಮರಣೆಗೆ ತಂದುಕೊಳ್ಳಲಿಕ್ಕೆ ಅನುಕೂಲತೆಗಳೂ ಅದರಲ್ಲಿದ್ದುವು.

ಭೂಗೋಲದ ಪಾಠದಲ್ಲಿ ಕೆಲಕೆಲವು ಸಂಗತಿಗಳ ಬಗ್ಗೆ ಶಿಕ್ಷಕರೂ ವಿದ್ಯಾರ್ಥಿಗಳೂ ವಿಶೇಷ ಲಕ್ಷಪೂರ್ವಕ ಪಾಠ ಮಾಡಿಕೊಳ್ಳಬೇಕಾಗುವದು. ಉದಾ :—

ಕರ್ಕವೃತ್ತವು, ಹವಾನಾ ಅಸ್ವಾನ ಕಲಕತ್ತಾ ಕಂತಾನಗಳ ಮೇಲೆಯೂ, ಮಕರವೃತ್ತವು—ರಿಯೊ ವಾಪ್ಪಿಸ್ ಆಖಾತ ರೋಖಾಮ್ಟನ್‌ಗಳ ಮೇಲೆಯೂ, ವಿಷುವವೃತ್ತವು—ಕಿಯೋಟೊ, ವಿಕ್ಟೋರಿಯಾ ಸರೋವರ, ಸಿಂಗಾಪೂರಗಳ ಮೇಲೆಯೂ, ರೇಖಾಂಶವು ಗ್ರೀನಿಚ್ ಗೋಲ್ಡಕೋಸ್ಟಗಳಲ್ಲಿಯೂ, ೯೦°ನೆಯ ಪೂರ್ವ ರೇಖಾಂಶವು ಕಲಕತ್ತೆಯ ಮೇಲೆಯೂ, ೯೦ನೆಯ ಪಶ್ಚಿಮ ರೇಖಾಂಶವು ಸೆಂಟ ಲೂಯಿಸ ನ್ಯೂಆರ್ಲಿಯನ್ಸಗಳಲ್ಲಿಯೂ ಹಾಯ್ದಿರುವವೆಂಬ ಒಂದು ಸಾಮಾನ್ಯ ವಿಚಾರವನ್ನು ವಿದ್ಯಾರ್ಥಿಗಳು ಪಾಠಮಾಡಿ ನೆನಪಿನಲ್ಲಿಟ್ಟುಕೊಂಡರೆ ಅವರಿಗೆ ಪೃಥ್ವಿಯ ಕಾಶೆಯ (ಗ್ಲೋಬಿನ) ಸಾಮಾನ್ಯ ಸ್ಥಾನ ನಿರ್ದೇಶಕ್ಕೆ ಸಹಾಯವಾಗುವದರಲ್ಲಿ ಸಂಶಯವಿಲ್ಲ.

ಭೂಗೋಲದಲ್ಲಿಯ ಸಂಗತಿಗಳನ್ನು ನೆನಪಿನಲ್ಲಿಡಲಿಕ್ಕೆ ನಕಾಶೆಗಳು ತುಂಬ ಸಹಾಯಕಾರಿಯಾಗಿರುವವು. ನಕಾಶೆಗಳನ್ನು ನೋಡುವದಕ್ಕಿಂತಲೂ ಸ್ವತಃ

ನಕಾಶೆಗಳನ್ನು ತೆಗೆಯುವದರಿಂದಲೂ ಅವರಲ್ಲಿ ಮಹತ್ವ ಸಂಗತಿಗಳನ್ನು ತುಂಬು
ರಿಂದಲೂ ಹೆಚ್ಚು ಪ್ರಯೋಜನವಾಗುವದು. ಇವು ವಿಷಯವು ನೆನಪಿನಲ್ಲಿ ಉಳಿಯಲೆ
ಹೆಚ್ಚು ಸಹಾಯ ಮಾಡುವವು. ಭೂಗೋಲದ ಪಾಠಗಳಲ್ಲಿ ಬಾಲಕರು ತೆಗೆಯು
ನಕಾಶೆಗಳು ಎಷ್ಟನುಟ್ಟಿಗೆ ಪರಿಪೂರ್ಣವಾದವೂ ಆಕಾರ ಸ್ಥಾನನಿರ್ದೇಶಗಳ
ತಪ್ಪಲ್ಲದವೂ ಆಗಿರಬೇಕೆಂಬದು ನಿಃಕಾರಣೀಯವಾದ ಮಾತಾಗಿದೆ. ನಕಾಶೆಗಳ
ನಿಜವಾದ ಭೂವಿವರಣೆಗೂ ಇರುವ ಸಂಬಂಧವು ಅತ್ಯಂತ ದೂರದ್ದಾಗಿರುವ
ನೂರಾರು ಮೈಲಿಗೆ ೧ ಇಂಚಿನಷ್ಟು ಅವಕಾಶವನ್ನು ಕಲ್ಪಿಸಿಕೊಂಡರೂ ಸಾಲದ
ಚಿಕ್ಕ ಪ್ರಮಾಣವು ನಕಾಶೆಯದು. ಅದರಲ್ಲಿ ಎಷ್ಟು ಮಟ್ಟಿಗೆ ಭೂಮಿಯ ಸರಿಯ
ಆಕಾರವನ್ನೂ, ಸ್ಥಾನನಿರ್ದೇಶವನ್ನೂ ಮಾಡಬಹುದೆಂಬದು ಕೇವಲ ಕಲ್ಪನೆ
ಸಾಧ್ಯವಾದ ಮಾತು. ದಿಕ್ಕು, ಸರಾಸರಿ ಅಂತರ, ಸಾಮಾನ್ಯ ಆಕಾರ, ಇವು
ಲಾಗದಿದ್ದರೆ ಸಾಕೆಂದೂ ನಕಾಶೆಗಳು ಫೋಟೋದ ಸಹಾಯದಿಂದ ಮನುಷ್ಯನ
ನುರ್ತಿಸುವಷ್ಟು ಪರಿಪೂರ್ಣವಾಗಿರುವದು ಸಾಧ್ಯವಲ್ಲವೆಂದೂ ತಜ್ಞರ ಅಭಿಪ್ರಾ
ವಿರುವದು. ಬಾಲಕರಿಂದ ಮಾಡಿಸುವ ನಕಾಶೆಗಳು ಅವರಲ್ಲಿ ಬಂದಿರುವ ಸಂ
ಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಲಿಕ್ಕೆ ನೆರವಾದರೆ ಸಾಕೆಂಬದೇ ಈ ಮಾತಿನ ರಾ
ವಾಗಿದೆ.

ನಕಾಶೆಗಳಂತೆಯೇ ಗ್ರಾಫ ಮೊದಲಾದವುಗಳ ಸಹಾಯದಿಂದ ತೆಗೆದ ಆ
ಯನ್ನೂ ಚಿತ್ರನಾಟ್ಯಾದ್ಯದ ನಕಾಶೆಗಳನ್ನೂ ಉಪಯೋಗಿಸಿಕೊಂಡು ಭೂಗೋಲದೆ
ಗಿನ ಸಂಗತಿಗಳನ್ನು ಬಾಲಕರಿಗೆ ಮನನರಿಕೆಮಾಡಿಕೊಡಲಿಕ್ಕೂ ಅವನ್ನು ನೆ
ನಲ್ಲಿಟ್ಟುಕೊಳ್ಳಲಿಕ್ಕೆ ತಕ್ಕ ಸಹಾಯವನ್ನು ಕಲ್ಪಿಸಿಕೊಡಲಿಕ್ಕೂ ಬರುವದು.

ಭೂಗೋಲವನ್ನು ಶಾಸ್ತ್ರೀಯವಾಗಿ ಕಲಿಸುವಾಗ ಹಿಂದೆ ಹೇಳಿದಂತೆ ಕೇ
ಸ್ಮರಣಶಕ್ತಿಗೇ ಪ್ರಾಧಾನ್ಯ ಕೊಟ್ಟರೆ ನಡೆಯುವದು. ಬಾಲಕರ ಕಾರ್ಯಕಾ
ವಿವೇಚನಾಶಕ್ತಿಗೂ ಸಾಕಷ್ಟು ಚಾಲನೆ ಕೊಡಬೇಕಾಗುವದು. ಇದು ಹೆ
ಮಹತ್ವದ ಮಾತು. ಶೈಕ್ಷಣಿಕ ದೃಷ್ಟಿಯಿಂದಂತೂ ಇದರ ಮಹತ್ವವು ಇನ್ನಿ
ಹ್ಯಾಗುವದು. ಕೇವಲ ಹಲಕೆಲವು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂ
ನಿಜವಾದ ಜ್ಞಾನವಾದಂತಾಗುವದಿಲ್ಲ. ಕಾರ್ಯಕಾರಣವಿವೇಚನೆಯೊಂದಿಗೆ ನೆನ
ತಂದುಕೊಂಡ ವಿಷಯಜ್ಞಾನವು ಬಾಲಕರ ಸ್ವಂತದ್ದಾಗುವದು ಇಷ್ಟೇ ಅಲ್ಲ, ಅ
ಅವರಲ್ಲಿ ಸ್ಥಿರವಾಗಿ ಉಳಿಯುವದು. ಬುದ್ಧಿವಿಕಾಸದ ದೃಷ್ಟಿಯಿಂದಲೂ
ಮಾತಿಗೆ ತುಂಬ ಮಹತ್ವವಿದೆ. ಆದರೆ ಸಾಕಷ್ಟು ಆಧಾರಗಳನ್ನು ಕಣ್ಣಮುಂದಿ

ಕೊಳ್ಳದೆ ತರ್ಕದಿಂದ ಮುಂದೆ ಸಾಗುವ ರೂಢಿಯು ಮಾತ್ರ ಎಷ್ಟು ಮಾತ್ರವೂ ಒಳ್ಳೆಯದಲ್ಲ. ಈ ಮಾತಿನ ಬಗ್ಗೆ ಶಿಕ್ಷಕರು ತುಂಬ ಎಚ್ಚರವಹಿಸಬೇಕಾಗುವದು.

ಭೂಗೋಲವನ್ನು ಕಲಿಸುವಾಗ ರಾಜಕೀಯ ಭೂಗೋಲಕ್ಕೆ ಪ್ರಾಧಾನ್ಯತೆ ನುವದು ಸುಳ್ಳಲ್ಲ. ಇದು ಬಹುಕಾಲದಿಂದ ರೂಢಿಯಲ್ಲಿ ಬಂದು ಹೋಗಿದೆ. ಫ್ರಾನ್ಸ ಇಂಗ್ಲಂಡ ಹಿಂದುಸ್ತಾನ ಈ ಹೆಸರುಗಳಿಂದ ನಮಗೆ ಸೂಚಿತವಾಗುವದೇನು? ಂತೆಯೇ ಬ್ರಿಟಿಷ ಸಾಮ್ರಾಜ್ಯವೆಂದರೆ ನಮಗೆ ಏತರ ಕಲ್ಪನೆಯಾಗುವದು, ಒಂದು ಜ್ಯದಾಡಳಿತಕ್ಕೆ ಸೇರಿದ ಭೂಭಾಗವು ಒಂದು ದೇಶವೆಂದು ಹೇಳಲ್ಪಡುವ ರೂಢಿಯು ಸಾಮಾನ್ಯವಾಗಿದೆ. "ರಶಿಯಾದ ಸಾಮ್ರಾಜ್ಯ" ವೆಂದರೂ ಇಂಥದೇ ಏನೋ ಂದು ಕಲ್ಪನೆಯು ನಮ್ಮ ದೃಷ್ಟಿಯ ಮುಂದೆ ಬರುವದು. ಸದ್ಯಕ್ಕೆ ಪ್ರಚಾರದ ರುವ ಭೂಗೋಲದ ಪುಸ್ತಕಗಳಲ್ಲಿ ಈ ವಿಚಾರವನ್ನು ತೆಗೆದು ಹಾಕಲು ಸಾಧ್ಯ ಾಗಲಿಲ್ಲ. ನಿಜವಾಗಿ ನೋಡಿದರೆ ಭೂಗೋಲವನ್ನು ಅಭ್ಯಾಸಿಸಲಿಕ್ಕೆ ಈ ಬಗೆಯ ಜಕೀಯ ವಿಭಾಗದ ಆವಶ್ಯಕತೆಯೇನೂ ಇಲ್ಲ. ಆದರೂ (ಅದೇನೋ ಒಂದು ವಿಧ ಾದ ಪೂರ್ವಪರಂಪರೆಯೋ ಏನೋ) ನಮ್ಮ ಮನಃಪ್ರವೃತ್ತಿಯು ಭೂಗೋಲವೆಂದ ೂಡಲೇ ಈ ಬಗೆಯ ರಾಜಕೀಯ ವಿಭಾಗದ ಕಲ್ಪನೆಯನ್ನು ನಮ್ಮ ಕಣ್ಣಮುಂದೆ ಂದು ಒಡ್ಡುತ್ತಿರುವದು. ಆದ್ದರಿಂದ ನಾವು ಮೊದಲು ಈ ಕಲ್ಪನೆಯನ್ನು ಧಾರವಾಗಿಟ್ಟುಕೊಂಡು ಸ್ಥಾನನಿರ್ದೇಶ ಮಾಡಿಕೊಂಡು ಮುಂದೆ ನಿಜವಾದ ಭೂಗೋಲದ ಅಭ್ಯಾಸವನ್ನು ಪ್ರಾರಂಭಿಸುವೆವು.

ಭೂಗೋಲದ ಅಭ್ಯಾಸದಲ್ಲಿ ಸ್ಥಾನನಿರ್ದೇಶ ಮಾಡಿಕೊಳ್ಳಲಿಕ್ಕೆ ಹವಾಮಾನ, ಕಟಿಬಂಧಗಳು ಇವುಗಳನ್ನು ಆಧಾರವಾಗಿಟ್ಟುಕೊಳ್ಳುವದು ಆಧುನಿಕ ಪದ್ಧತಿ ಾಗಿದೆ. ಇದೇ ನಿಜವಾದ ವಿಭಾಗವೆಂದು ಹೇಳುವದೂ ಉಂಟು ಭೂಮಿಯ ೂರವನ್ನು ತೋರಿಸುವ ಪ್ರಾಕೃತಿಕ ನಕಾಶೆಯನ್ನು (Relief Map) ಅನು ಸಿ ಈ ವಿಭಾಗ ಮಾಡಿಕೊಂಡರೆ ಅದರಲ್ಲಿ ಆಯಾ ಸ್ಥಾನಗಳ ಹವೆಯ ಒತ್ತ್ಯ ಿ, ಹವೆಯಲ್ಲಿಯ ನೀರಿನ ಜಿಗಿಯ ಪ್ರಮಾಣ, ಕಟಿಬಂಧಗಳಿಗೆ ಅನುಗುಣ ದ ಉಷ್ಣತಾಮಾನ ಮೊದಲಾದವುಗಳನ್ನು ವಿವೇಚಿಸಲು ಪ್ರಾರಂಭಿಸಬಹುದು. ೇಲೇ ಆ ಪ್ರದೇಶದಲ್ಲಿ ಬೀಳುವ ಮಳೆಯ ಮಾನವೂ ಗೊತ್ತಾಗಬಹುದು. ಭೂಗೋಲದಲ್ಲಿ ಹವೆ ಮಳೆಗಳ ತರುವಾಯ ವಿವೇಚಿಸತಕ್ಕ ಮಾತೆಂದರೆ ಪ್ರಾಣಿ ಸಸ್ಯಜಾತಿಗಳು. ಈ ವಿಭಾಗದಲ್ಲಿ ಹುಲ್ಲಿನ ಅಡವಿಗಳಲ್ಲಿಯೂ ಅರಣ್ಯಗಳಲ್ಲಿಯೂ ಮಿಕ್ಕ ೆಡೆಗಳಲ್ಲಿಯೂ ಸ್ವಾಭಾವಿಕವಾಗಿ ಬೆಳೆಯುವ ವನಸ್ಪತಿಗಳೂ ಮನುಷ್ಯನು ತನ್ನ ಾಗು ತನ್ನ ಪರಿವಾರವಾದ ದನ ಕುದುರೆ ಕುರಿ ಮುಂತಾದ ಪ್ರಾಣಿಗಳ ಜೀವನಕ್ಕಾಗಿ

ಬೆಳೆಯಿಸುವ ಪೈರು ಹುಲ್ಲು ಮುಂತಾದವುಗಳೂ ಸಮಾವೇಶವಾಗುವವು. ಮತ್ತೆ ವನ್ಯ ಹಾಗು ಗ್ರಾಮ್ಯ ಪಶುಪಕ್ಷಿಗಳು ಈ ವಿಭಾಗದಲ್ಲಿಯೇ ಬರುವವು. ಈ ವನಸ್ಪತಿಗಳ ಬೆಳೆವಣಿಗೆಗೂ ಹಿಂದಿನ ಪ್ಯಾರಾದಲ್ಲಿ ಹೇಳಿದ ಹವಾಮಾನಕ್ಕೂ ಸಂಬಂಧವಿರುವುದೆಂಬದನ್ನು ಮರೆಯಲಾಗದು. ಭೂಗುಣವೂ ಇದಕ್ಕೆ ಅಂಶತಃ ಕಾರಣವಾಗಬಹುದು. ಕರುವಾಯು ಖನಿಜಗಳು ಮನುಷ್ಯನ ವಸತಿ ಸ್ಥಾನಗಳು ಆ ಸ್ಥಳದ ಮಾನವ ಜೀವನದ ಭೂಗೋಲ ಇವುಗಳ ಅಭ್ಯಾಸವು ಕ್ರಮು ಪ್ರಾಪ್ತವಾಗಿ ಬರುವವು.

ಹವೆ ಮಳೆ ಪ್ರಾಣಿ ವನಸ್ಪತಿಗಳು ಇವುಗಳನ್ನೂ ಖನಿಜಗಳು ದೊರೆಯ ಮಾನವನನ್ನೂ ಅನುಸರಿಸಿ ಕೆಲವೊಂದು ಭೂಭಾಗದಲ್ಲಿ ಜನವಸತಿಯುಂಟಾಗಿ ದೆಂಬದನ್ನು ಭೂಗೋಲದ ಅಭ್ಯಾಸದಿಂದ ನಿರ್ಣಯಿಸಿಕೊಳ್ಳಲು ಬರುವ ಚೆನ್ನಾಗಿ ಬೆಳೆಬರುವ, ಸುಖದಿಂದ ಜೀವಿಸಲಿಕ್ಕೆ ಅನುಕೂಲವಾದ ಹವಾಮಾನವಿರು ಪ್ರದೇಶದಲ್ಲಿಯೇ ಹೆಚ್ಚು ದಟ್ಟಾದ ಜನವಸತಿಯಿರುವದೆಂಬದನ್ನು ಒಡೆದು ಹೇ ಬೇಕಾಗಿಲ್ಲ. ಕೈಗಾರಿಕೆಗಳಿಗೆ ಬೇಕಾಗುವ ಖನಿಜಗಳು ದೊರೆಯುವಲ್ಲಿ ಒ ವೇಳೆ ಈ ಅನುಕೂಲತೆಯಿಲ್ಲದಿದ್ದರೂ ಕಾರಖಾನೆಗಳು ಪ್ರಾರಂಭವಾಗಿ ಅಲ್ಲೇ ಜನವಸತಿಯು ಹೆಚ್ಚುವದು. ಹೀಗೆ ಕಾರ್ಯಕಾರಣ ಭಾವವನ್ನು ಪರಾಲೋಚಿಸಿ ಭೂಗೋಲದ ಪಾಠವನ್ನು ಸಾಗಿಸುವದರಿಂದ ಬಾಲಕರ ಬುದ್ಧಿವಿಕಾಸ ತುಂಬ ಅನುಕೂಲವಾಗುವದು.

ಭೂಗೋಲದ ಅಭ್ಯಾಸದಲ್ಲಿ ಬಾಲಕರಲ್ಲಿ ಹುಟ್ಟಿಸಿ ಬೆಳಿಸಬೇಕಾದ ಇನ್ನೊಂ ಮನಃಶಕ್ತಿಯೆಂದರೆ ಕಲ್ಪನಾಶಕ್ತಿ. ಕೆಲವೊಂದು ಸಂಗತಿಗಳನ್ನು ಪಾಠಶಕ್ತಿ ಬಲದಿಂದ ನೆನಪಿನಲ್ಲಿಟ್ಟುಕೊಂಡರೆ ಅಥವಾ ಕಾರ್ಯಕಾರಣ ವಿವೇಚನೆಯೊಂ ಕೆಲಕೆಲವು ವಿಷಯಗಳನ್ನು ಪರ್ಯಾಲೋಚಿಸಿ ತಿಳಿದುಕೊಂಡರೆ ಭೂಗೋ ಅಭ್ಯಾಸವು ಪೂರ್ಣವಾಗಲಾರದು. ಭೂಗೋಲದ ಬಹ್ವಂಶವನ್ನು ಕಲ್ಪನಾಶಕ್ತಿ ಸಹಾಯದಿಂದ ಅವಗತಮಾಡಿಕೊಳ್ಳಬೇಕಾಗುವದು. ಕಲ್ಪನಾಶಕ್ತಿಯ ಬೆಳವಣಿ ಶಾಲೆಗಳಲ್ಲಿ ಕಲಿಸುವ ಮಿಕ್ಕ ಎಲ್ಲ ವಿಷಯಗಳಿಗಿಂತಲೂ ಈ ವಿಷಯವು ಹೆ ಸಹಾಯಕಾರಿಯಾಗಿದೆ. ಭೂಗೋಲದಲ್ಲಿ ಕಲಿಸಲ್ಪಡುವ ವಿಷಯಗಳೆ ನಿಜವಾಗಿಯೇ ಭೂಮಿಯ ಆಯಾ ಭಾಗಗಳಲ್ಲಿ ಇಂದಿಗೆ ಅಸ್ತಿತ್ವದಲ್ಲಿರುವವೇ ಅವು ಕಲ್ಪಿತವಾದವುಗಳಲ್ಲವೆಂದೂ ಬಾಲಕರು ಮನಗಾಣಬೇಕು. ಹಾಗು ನೋಡಿ ತಿಳಿದ ಸಂಗತಿಗಳೊಡನೆ ಅವನ್ನು ಹೋಲಿಸಿ ನೋಡಿ ಅವುಗಳ ಸ್ಥಿ ಗಳನ್ನು ಕಲ್ಪಿಸಿಕೊಳ್ಳಬೇಕಾಗುವದು. ಹೀಗೆ ಕಲ್ಪನಾಶಕ್ತಿಯ ವಿಕಾಸಕ್ಕೂ

ಲ್ಪನೆಯನ್ನು ಸತ್ಯವೆಂದೆಣಿಸಿಕೊಂಡು ಅವುಗಳ ನಿಜಸ್ವರೂಪದ ಜ್ಞಾನ ಮಾಡಿ ಳ್ಳಲಿಕ್ಕೂ ಕೆಲವು ಸಾಧನಗಳು ಬೇಕಾಗುವವು. ಅವುಗಳಲ್ಲಿ ಸಚಿತ್ರ ಸ್ಥಳ ರ್ಣನೆಗಳು, ಮಾಯಾದೀಪದ ಸಹಾಯದಿಂದ ತೋರಿಸುವ ಚಿತ್ರಗಳು, ಸ್ಟೀರಿ ಸ್ಕೋಗ್ರಾಫ ಚಿತ್ರಗಳು, ಸಿನೇಮಾಗಳು ಮೊದಲಾದವುಗಳ ಸಮಾವೇಶವಾಗುವದು. ಚಿತ್ರ ಸ್ಥಳವರ್ಣನೆಯ ಗ್ರಂಥಗಳಲ್ಲಿರುವ ಚಿತ್ರಗಳಿಂದ ಬಾಲಕರ ಕಲ್ಪನೆಗೆ ಸ್ಪಷ್ಟಸ್ವರೂಪವುಂಟಾಗಲು ತುಂಬಾ ಪ್ರಯೋಜನವಾಗುವದು. ಮತ್ತು ಮಾಯಾ ದೀಪದ ಸಹಾಯದಿಂದ ತೋರಿಸುವ ಚಿತ್ರಗಳನ್ನು ಕುರಿತು ಇನ್ನೊಂದೆಡೆಗೆ ಪ್ರತಂತ್ರ ಲೇಖನವೊಂದು ಪ್ರಕಟಿಸಲ್ಪಟ್ಟಿರುವದು. ಇಂಥ ಚಿತ್ರಗಳಿಗಿಂತಲೂ ಸಿನೇಮಾಗಳಿಂದಲೂ ಆಯಾ ಸಂಗತಿಗಳು ಬಾಲಕರ ಕಣ್ಣಮುಂದೆ ಕಟ್ಟಿದಂತಾಗಿ ವುಗಳಲ್ಲಿ ಜೀವಿತ ಸ್ವರೂಪವು ವ್ಯಕ್ತವಾಗುವದರಿಂದ ಆಯಾ ಸಂಗತಿಗಳನ್ನು ಪ್ರತ್ಯಕ್ಷ ನೋಡಿದಾಗ ಆಗುವ ಕಲ್ಪನೆಯೇ ಈಗಲೂ ಆಗುವ ಸಂಭವವಿರುವದು. ದ್ದರಿಂದ ಭೂಗೋಲದ ಪಾಠಗಳಲ್ಲಿ ಸಿನೇಮಾಗಳಿಂದಾಗುವ ಪ್ರಯೋಜನವು ಷ್ಟಿಷ್ಟೆಂದು ಹೇಳಲು ಸಾಧ್ಯವೇ ಇಲ್ಲ. ಸುಧಾರಿಸಿದ ದೇಶಗಳಲ್ಲಿ ಇವುಗಳನ್ನು ಪಯೋಗಿಸಿಕೊಂಡು ಬಾಲಕರಿಗೆ ಈ ವಿಷಯವನ್ನು ಅತಿಶಯ ಆನಂದದಾಯಕ ಗಿ ಕಲಿಸುವರು. ಭೂಗೋಲದ ಪಾಠಗಳಿಗಾಗಿಯೇ ತಯಾರಿಸಿದ ವಿಶೇಷ ದ ಫಿಲ್ಮುಗಳು ವಿದ್ಯಾಖಾತೆಯವರಿಂದ ಸಾಲೆಗಳಿಗೆ ಪೂರೈಸಲ್ಪಡುವವು. ಮುಂ ಅಂಥ ಸುದಿನವು ಬೇಗನೆ ಬರಲೆಂದು ನಾವು ಹಾರೈಸಬೇಕಾಗಿದೆ.

ಶಾಲೆಗಳಲ್ಲಿ ದೃಕ್-ಶಿಕ್ಷಣದ ಮಹತ್ವ

ಲೇಖಕ:— ಶ್ರೀ. ಎನ್. ಎಸ್. ಉಲ್ಲಾಳ ಬಿ. ಎ.

ಇತ್ತಲಾಗಿ ಶಾಲೆಗಳಲ್ಲಿ ದೃಕ್ ಶಿಕ್ಷಣದ ಉಪಯೋಗವೂ ಅದರಬಗ್ಗೆ ಸೂಚನೆಯೂ ಬಹಳವಾಗತೊಡಗಿವೆ. ಪ್ರಾಥಮಿಕ ಶಿಕ್ಷಕರು ಇಡೀ ಶಿಕ್ಷಕ ವರ್ಗದ ಹಿಂದಿನಿದ್ದಂತೆ ಇದ್ದಾರೆ ಆದ್ದರಿಂದ ಅವರು ಈ ಶಿಕ್ಷಣವು ಎಂಥದಿದೆ, ಮತ್ತು ಚಿಕ್ಕಮಕ್ಕಳ ಶಿಕ್ಷಣದಲ್ಲಿ ಇದರ ಉಪಯೋಗವು ಎಷ್ಟರಮಟ್ಟಿಗೆ ಆಗಬಹುದು ಬದನ್ನು ತಿಳಿದುಕೊಳ್ಳುವದು ಅವಶ್ಯವು.

ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ತ್ವಚೆ ಎಂಬೀ ಐದು ೀಂದ್ರಿಯಗಳು ಜ್ಞಾನಸಂಪಾದನೆಯ ಕೆಲಸದಲ್ಲಿ ನಮ್ಮ ಆಳುಗಳಿದ್ದಂತೆ

ಅವೆ. ಇವುಗಳಲ್ಲಿ ಕಣ್ಣು ಉಳಿದ ನಾಲ್ಕು ಇಂದ್ರಿಯಗಳಿಗಿಂತಲೂ ಹೆಚ್ಚು ನಿ
ವಾಗಿಯೂ ತ್ವರೆಯಾಗಿಯೂ ಮಡಿಯುವ ಆಳು. ಯಾವದಾದರೊಂದು ನಾ
ಸಭೆಯಲ್ಲಿ ಕಣ್ಣಾರೆ ಕಂಡ ಸಾಕ್ಷಿದಾರನ ಜಬಾಬಿನ ಮೇಲೆ ನ್ಯಾಯಾಧೀಶರು ಎಲ್ಲ
ಹೆಚ್ಚು ನಂಬಿಕೆಯನ್ನಿಡುತ್ತಾರೆ. ಯಾವನಾದರೊಬ್ಬ ಮನುಷ್ಯನು ಒಂದು ವ
ವಿನಬಗ್ಗೆ ಒಂದು ವಿಲಕ್ಷಣ ಸಂಗತಿಯನ್ನು ಹೇಳಿದರೆ, ನಾವು ಕೂಡಲೆ ಅ
" ನೀನು ಅದನ್ನು ಕಣ್ಣಾರೆ ಕಂಡಿದ್ದೀಯೋ " ಎಂದು ಪ್ರಶ್ನೆ ಮಾಡುತ್ತೆ
ಒಮ್ಮೊಮ್ಮೆ ನಾವು ಮಾತಾಡುವಾಗ ಯಾವದಾದರೊಂದು ವಸ್ತುವನ್ನು ಅ
ವ್ಯಕ್ತಿಯನ್ನು ನಾವು ಕಂಡಕೂಡಲೆ ತಿಳಿದುಬಿಟ್ಟೆವೆಂದು ಅನ್ನುತ್ತೇವೆ. ಈ ವ
ಅರ್ಥವೇನೆಂದರೆ, ಕಣ್ಣಿಗೆ ಯಾವದಾದರೊಂದು ವಸ್ತುವಿನ ಅಥವಾ ವ್ಯಕ್ತಿಯ
ಬಹಳ ತೀವ್ರವಾಗಿಯೂ ನಿಶ್ಚಿತವಾಗಿಯೂ ತಿಳಿವಳಿಕೆಯನ್ನು ಹೊಂದುವ ಶಕ್ತಿ
ಎಂಬುದೇ.

ದೃಕ್‌ಶಿಕ್ಷಣವೆಂದರೆ ಕಣ್ಣಿನ ಮುಖಾಂತರ ಹೊಂದುವ ಶಿಕ್ಷಣವು.
ಒಂದು ವಿಷಯವನ್ನು ಸುಧಾರಿಸಿದ ಶಿಕ್ಷಣಪದ್ಧತಿಯು. ಅನೇಕರು ಈ
ಮಂದಿ ಬಯಸು ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡ್, ಇಲ್ಲವೆ ಸಿನೆಮಾ
ಇವುಗಳ ಮುಖಾಂತರ ಕೊಡುವ ಶಿಕ್ಷಣವೆಂದು ತಿಳಿಯುತ್ತಾರೆ; ಇದು ನಿಜ
ಸೃಷ್ಟಿ ಬೊಳಿನ ವಸ್ತುಗಳು, ಚಿತ್ರಗಳು, ಸ್ಟೀರಿಯೋಗ್ರಾಫಗಳು, ಕರೀ ಹಲ
ಹೆ.ಲಿನ ಬೆಳ್ಳಿನ ಪರದೆ ಚಿತ್ರಗಳು, ನಾಟಕಗಳು ಹಾಗೂ ಮ್ಯಾಜಿಕ್‌ಲ್ಯಾಂಟ
ರ್ನ್ ಸ್ಲೈಡ್ ಮುಕ್ತು ಸಿನೆಮಾ ಫಿಲ್ಮ್ ಇವೆಲ್ಲವೂ ದೃಕ್ ಶಿಕ್ಷಣದೊಳಗಿನ ಸ
ರಾಗಿವೆ. ಇವರೆ ಹಲವು ಹುಡುಗಮಳ್ಳ ಒಂದು ದೊಡ್ಡ ವರ್ಗಕ್ಕೆ ಸಾಮೂ
ಶಿಕ್ಷಣ ಕೊಡುವ ಕೆಲವನ್ನೆ ಮ್ಯಾಜಿಕ ಲ್ಯಾಂಟರ್ನ ಸ್ಲೈಡ್ ಹಾಗೂ ಸಿ
ಫಿಲ್ಮ್ ಇವು ಪಟ್ಟಿಕಿಂತ ಹೆಚ್ಚು ಉಪಯುಕ್ತವಾಗಿವೆ. ಇಷ್ಟೇ ಅಲ್ಲ, ವಿಷಯ
ಮನಸ್ಸಿನ ಮೇಲೆ ಸ್ಪಷ್ಟವಾಗಿ ಬಿಂಬಿಸುತ್ತವೆ.

ಯಾವದಾವದೊಂದು ವಸ್ತುವಿನ ಕಲ್ಪನೆಯು ನಮಗೆ ಚೆನ್ನಾಗಿ ಆಗಬೇಕಾ
ಆ ವಸ್ತುವನ್ನು ನಾವು ನೋಡಬೇಕು ಇಲ್ಲವೆ ಅದರ ಚಿತ್ರವನ್ನಾದರೂ ನೋಡಬೇ
ಬರಿಯ ಬಾಯಿಮಾತಿನಿಂದ ನಾವು ಒಂದು ವಸ್ತುವನ್ನು ವರ್ಣಿಸಿದರೆ, ನಾವು ಉ
ಯೋಗಿಸಿದ ಶಬ್ದಗಳ ಗರ್ಭಿತಾರ್ಥವನ್ನು ತಿಳಿದುಕೊಳ್ಳುವಷ್ಟು ಶಕ್ತಿ ಇದ್ದವ
ಮಾತ್ರ ಆ ವಸ್ತುವಿನಬಗ್ಗೆ ಸ್ವಲ್ಪ ಕಲ್ಪನೆಯಾಗಬಹುದು. ಚಿಕ್ಕಮಕ್ಕಳಿಗಂ
ಬರಿಯ ಬಾಯಿಮಾತಿನಿಂದ ವಸ್ತುಗಳ ಕಲ್ಪನೆಯಾಗುವದು ಬಹಳ ದುರ್ಲ
ಉದಾಹರಣೆಗಾಗಿ ಫೇಡೆಗಳು ನೋಡಲಿಕ್ಕೆ ಸಹ ಸಿಗದಂಥ ಕೊಂಕಣದ ಕೇ

ಳ್ಳಿಯ ಶಾಲೆಗಳಲ್ಲಿ ಫೇಡೆಯೆಂದರೆ ಹಾಲನ್ನು ಕಾಯಿಸಿ ಗಟ್ಟಿಮಾಡಿ ಅದರೊಳಗೆ ಕ್ಕರೆ ಕೂಡಿಸಿ ದುಂಡು ದುಂಡಾಗಿ ಚಪ್ಪಟೆಯಾಗುವಂತೆ ಕಟ್ಟಿದ ಉಂಡೆಗಳು ಂದು ವರ್ಣಿಸಿದರೆ ಪೇಢೆಯ ಕಲ್ಪನೆಯು ಆ ಚಿಕ್ಕ ಮಕ್ಕಳ ಮನಸ್ಸಿನಲ್ಲಿ ಎಂದೆಂ ಗೂ ಹೊಳೆಯಲಾರದು. ಮತ್ತು ಈ ವರ್ಣನೆಯನ್ನು ಬಾಯಿಪಾಠ ಮಾಡಿಸಿದ ತೂ ಮಕ್ಕಳ ವೇಳೆಯೂ ಶ್ರಮವೂ ವ್ಯರ್ಥವಾಗಿ ಕಳೆಯಲ್ಪಡುವವು. ಅದೇ ಂದು ಫೇಡೆಯನ್ನು ತಂದು ಹುಡುಗರಿಗೆ ತೋರಿಸಿ ಅದನ್ನು ಅವರಿಗೆ ತಿನ್ನಲಿಕ್ಕೆ ಟ್ಟರೆ, ಅದರ ಕಲ್ಪನೆಯು ಅವರಿಗೆ ಬಹುಸ್ವಲ್ಪ ವೇಳೆಯಲ್ಲಿ ಸ್ವಲ್ಪ ಶ್ರಮದಿಂದ ಗುವದು ಇಷ್ಟೇ ಅಲ್ಲ, ಈ ತರದ ಡ್ರಿಕ್ ಶಿಕ್ಷಣದಿಂದ ಹುಡುಗರು ಉತ್ಸಾಹಿಗಳೂ ಗುವರು. ನಾನು ಇಂಗ್ಲಿಷ ಶಾಲೆಯನ್ನು ಆರಂಭಕ್ಕೆ ಸೇರಿದಾಗ ನಮ್ಮ ಕ್ರಮಿಕ ಸ್ತಕದೊಳಗೆ ಕುದುರೆಯ ವಿಷಯಕ್ಕೆ ಒಂದು ಪಾಠವಿತ್ತು. ನಮ್ಮ ಗುರುಗಳು ಆ ಠವನ್ನು ನಮಗೆ ಭಾಷಾಂತರರೂಪದಿಂದ ಕಲಿಸಿದರು. ಮತ್ತು ಕುದುರೆಯ ೈಮೇಲಿನ ತೊಗಲಿನ ಹಾಗೂ ಕಬ್ಬಿಣವ ಸಾನುಗ್ರಿಗಳ ಇಂಗ್ಲಿಷ ಹೆಸರುಗಳನ್ನು ನ್ನಡ ಭಾಷಾಂತರ ಮಾಡಿ ಬರೆದುಕೊಟ್ಟರು. ಉದಾ:- Saddle = ಜೀನು; ins = ಲಗಾಮು; bit = ಕಡಿವಾಣ ಇತ್ಯಾದಿ. ಆದರೆ ನಮ್ಮ ಗುರುಗಳು ನಗೆ ಕುದುರೆಯನ್ನು ಮತ್ತು ಜೀನು ಮೊದಲಾದವನ್ನು ಇಲ್ಲವೆ ಅವುಗಳ ತ್ರನನ್ನು ತೋರಿಸಲಿಲ್ಲ. ನಮ್ಮ ಊರೊಳಗೆ ಕುದುರೆಗಳಿದ್ದಿಲ್ಲ. ಎಲ್ಲಿಯಾದರೂ ದುತಿಂಗಳಿಗೊಮ್ಮೆ ಲಗ್ನಮಾಸದಲ್ಲಿ ಯಾವನಾದರೊಬ್ಬ ಮದು ಮಗನನ್ನು ಕೂಡ್ರಿ ಲಿಕ್ಕೆ ಒಂದು ಕುದುರೆಯನ್ನು ನೆರೆಯೂರಿನಿಂದ ಒಂದು ದಿವಸದ ಮಾತ್ರಕ್ಕೆ ತರುತ್ತಿ ರು. ಹೀಗಿದ್ದದರಿಂದ ಒಂದು ವೇಳೆ ಒಂದು ಕುದುರೆಯನ್ನು ತಂದು ನಮ್ಮ ಂದೆ ನಿಲ್ಲಿಸಿದ್ದರೂ ಅದರ ಮೈಮೇಲಿನ ಜೀನು ಯಾವದು, ಲಗಾಮು ವದು, ಕಡಿವಾಣ ಯಾವದು ಎಂಬದನ್ನು ತೋರಿಸುವದು ನಮಗೆ ಅಸಾಧ್ಯ ಗುತ್ತಿತ್ತು. ಭಾಷಾಂತರ ಮಾಡಿದ ಶಬ್ದಗಳನ್ನು ನಾವು ಉತ್ತಮರೀತಿಯಿಂದ ಯಿಪಾಠ ಮಾಡಿದ್ದೆವು. ಆದರೆ ಆ ಕೆಲಸದಲ್ಲಿ ಹಾಕಿದ ಶ್ರಮವೂ ವೇಳೆಯೂ ರ್ಥಕವಾದವು.

ಮೇಲೆ ಹೇಳಿದ ಕಾರಣದಿಂದಲೇ ಇತ್ತೀಚೆಗೆ ಶಾಲೆಗಳಲ್ಲಿ ಹುಡುಗರು ಓದುವ ಸ್ತಕಗಳಲ್ಲಿ ಚಿತ್ರಗಳು, ನಕಾಶೆಗಳು, ವಿವರಣ ಪತ್ರಕಗಳು ಮುಂತಾದ ಡ್ರಿಕ್-ಣದ ಸಾಧನಗಳು ತುಂಬಾ ಕಾಣಬರುತ್ತವೆ. ಇಷ್ಟೇ ಅಲ್ಲ, ವೈಗಾರಿಕೆಯ ನೂನುಗಳ, ನಾಟಕಗಳ ಅಥವಾ ಸರ್ಕಸ್ ಆಟಗಳ ಜಾಹೀರಾತುಗಳಲ್ಲಿ ಸಹ ಿ ನಕಾಶೆಗಳು ತುಂಬಿರುತ್ತವೆ. ಇದರ ಉದ್ದೇಶವು ಜನರು ಜಾಹಿರಾತುಗಳನ್ನು

ನೋಡಿದೊಡನೆಯೇ ಅವರಿಗೆ ಅವುಗಳಲ್ಲಿ ಆಗುವ ಸಾಮಾನುಗಳ, ದೃಶ್ಯಗಳ ಅಥ
ಆಟನೋಟಗಳ ಕಲ್ಪನೆಯು ಬರಬೇಕೆಂಬುದೇ ಆಗಿದೆ.

ಇನ್ನು ಮ್ಯಾಜಿಕ್ ಲ್ಯಾಂಟರ್ನ್ ಸ್ಲಾಯಿಡ್ ಮತ್ತು ಸಿನೆಮಾ ಫಿಲ್ಮ್ ಇ
ಗಳೊಳಗೆ ಅಂತರವೇನಿದೆ ಎಂಬುದನ್ನು ನೋಡುವಾ. ಮ್ಯಾಜಿಕ್ ಲ್ಯಾಂಟರ್ನ
ಸ್ಲಾಯಿಡುಗಳ ಮುಖಾಂತರ ಪಡೆಯಬೇಲೆ ಯಾವದಾದರೊಂದು ವಸ್ತುವಿ
ನುಮಾರು ಏಳು ಫೂಟು ಚೌಕ್ಟಾಕವಾದ ದೊಡ್ಡದಾದ ಹಾಗೂ ಪ್ರಜ್ವಲವಾದ ಬೆಳ
ನಲ್ಲಿ ಸ್ಪಷ್ಟವಾಗಿ ಕಾಣಿಸುವ ಒಂದು ನಿಶ್ಚಲ ಚಿತ್ರವು ನಮಗೆ ನೋಡಲು ದೊರೆಯ
ತ್ತದೆ. ಇದರ ಮುಖಾಂತರ ಒಂದು ದೊಡ್ಡ ವರ್ಗಕ್ಕೆ ಸಾಮೂಹಿಕ ಶಿಕ್ಷಣವಿ
ಆ ವಸ್ತುವಿನ ಬೇರೆ ಬೇರೆ ಭಾಗಗಳ ಹಾಗೂ ಅವುಗಳೊಳಗಿನ ಸಂಬಂಧದ ಕಲ್ಪ
ಮಾಡಿ ಕೊಡಲಿಕ್ಕೆ ಶಿಕ್ಷಕನಿಗೆ ಬಹಳ ಸುಲಭವಾಗುತ್ತದೆ ಇಷ್ಟೇ ಅಲ್ಲ, ಇ
ದೊಡ್ಡ ಚಿತ್ರವನ್ನು ನೋಡುವವರಲ್ಲಿಯೂ ಮಕ್ಕಳಿಗೆ ಸ್ವಾಭಾವಿಕವಾಗಿ ಆಸ
ವಾಗುವದು ಮತ್ತು ಇದನ್ನು ತೋರಿಸುವದು ಕತ್ತಲೆಯ ಕೋಣೆಯಲ್ಲಿರುವದರಿ
ಹುಡುಗರ ಮನಸ್ಸು ಚಿತ್ರವನ್ನೇಲೆ ಏಕಾಗ್ರತೆಯಿಂದ ಒಲಿಯುವಂತೆ ಮಾಡಲೆ
ಶಿಕ್ಷಕನಿಗೆ ಅನುಕೂಲವಾಗುತ್ತದೆ. ಈಗಿನ ಶಾಲೆಯ ಪುಸ್ತಕಗಳಲ್ಲಿ ಚಿತ್ರಗಳ
ಎಂಬದು ನಿಜ. ಇವರೆ ಅವು ಬಹಳ ಸಣ್ಣವಿರುವದರಿಂದ ಅವುಗಳಿಂದ ಹುಡುಗ
ವಸ್ತುಗಳ ಕಲ್ಪನೆಯು ಮ್ಯಾಜಿಕಲ್ಯಾಂಟರ್ನ್‌ದಿಂದ ಕಾಣುವ ಚಿತ್ರಗಳಿಂದ ಮ
ಯುವಷ್ಟು ಸ್ಪಷ್ಟರೀತಿಯಿಂದ ಉಂಟಾಗುವದಿಲ್ಲ.

ಇನ್ನು ವಸ್ತುಗಳ ಬೆಳವಣಿಗೆ ಅಥವಾ ಪ್ರಾಣಿಗಳ ಚಲನೆ, ರೂಪ ಬದಲಾ
ವಿಕೆ ಮುಂತಾದ ಚಲನಾತ್ಮಕ ಸ್ಥಿತಿಗಳನ್ನು ತೋರಿಸುವದಿರುವಾಗ ಸಿನೆಮ
ಫಿಲ್ಮಿನ ಉಪಯೋಗವು ಅನಿವಾರ್ಯವಾದೆ. ಮನುಷ್ಯನ ಹೃದಯದೊಳಗಿನ ಬೇರೆ ಬೆ
ಭಾಗಗಳನ್ನೂ ಅವುಗಳೊಳಗಿನ ಅಂತರ, ಸಂಬಂಧ ಮುಂತಾದವುಗಳನ್ನೂ ಹು
ಗರಿಗೆ ಸ್ಪಷ್ಟವಾಗಿ ತಿಳಿಸಿ ಕೊಡಬೇಕಾದರೆ ಮ್ಯಾಜಿಕಲ್ಯಾಂಟರ್ನ ಸ್ಲಾಯಿಡು ಬೇಕ
ಆದರೆ ಅದೇ ಹೃದಯವು ರಕ್ತಾಭಿಸರಣದ ಕೆಲಸದಲ್ಲಿ ಆಕುಂಚಿತವಾಗುವ
ವಿಕಾಸವಾಗುವದೂ ಇವುಗಳನ್ನೂ ದೇಹದೊಳಗೆ ಇರುವ ಶುದ್ಧ ರಕ್ತವಾಹಿನಿಗಳ
ಗಿಂದ ಹೃದಯದ ಹೊರಗೆ ಮತ್ತು ಅಶುದ್ಧ ರಕ್ತವಾಹಿನಿಗಳೊಳಗಿಂದ ಹೃ
ಹೃದಯದೊಳಗೆ ರಕ್ತವು ಹರಿಯುವದನ್ನೂ ತೋರಿಸಲಿಕ್ಕೆ ಸಿನೆಮಾ ಫಿಲ್ಮು ಬೇ
ಅದರಂತೆ ಒಂದು ಕ್ರಿಮಿಯು ಅಥವಾ ಕೀಟಕದ ಅಂಗರಚನೆಯ ಕಲ್ಪನೆ ಮ
ಕೊಡಲಿಕ್ಕೆ ಮ್ಯಾಜಿಕ ಲ್ಯಾಂಟರ್ನ್ ಸ್ಲಾಯಿಡು ಬೇಕು. ಆದರೆ ತತ್ತಿಯಿಂದ ಹ
ಕೋಶ ಮುಂತಾದ ರೂಪಾಂತರಗಳನ್ನು ಹೊಂದಿ ಗಿಡದಿಂದ ಗಿಡಕ್ಕೆ ಹಾ

ಂಗವು ಹೇಗೆ ಉಂಟಾಗುತ್ತದೆಂಬದನ್ನು ತೋರಿಸಲಿಕ್ಕೆ ಸಿನೆಮಾ ಫಿಲ್ಮ್ ಬೇಕು. ೀ ಮೇರೆಗೆ ಗಿಡಗಳ ಬೊಡ್ಡೆಗಳಲ್ಲಿ ಭೂಮಿಯೊಳಗಿಂದ ರಸವು ಹೇಗೆ ಏರುತ್ತದೆ ವಾ ಒಬ್ಬ ಮನುಷ್ಯನ ಶರೀರದಮೇಲೆ ಸರ್ಜನ ಸಾಹೇಬರು ಯಾವದಾದ ಂದು ಶಸ್ತ್ರಪ್ರಯೋಗವನ್ನು (ಒಪರೇಶನ್ನವನ್ನು) ಹೇಗೆ ಮಾಡುತ್ತಾರೆ ಮುಂತಾ ನ್ನು ಸ್ಪಷ್ಟವಾಗಿ ತೋರಿಸಲಿಕ್ಕೆ ಸಿನೆಮಾ ಫಿಲ್ಮ್ ಬೇಕು.

ಈಗ ಮ್ಯಾಜಿಕ್ ಲ್ಯಾಂಟರ್ನ ಸ್ಲ್ಯಾಯಿಡ್ ಮತ್ತು ಸಿನೆಮಾ ಫಿಲ್ಮ್ ಇವುಗಳ ಪಯೋಗವನ್ನು ಯಾವ ಯಾವಾಗ ಮಾಡಬೇಕು. ಹಾಗೂ ಎಷ್ಟರಮಟ್ಟಿಗೆ ಕ್ಕು ಹೇಗೆ ಮಾಡಬೇಕು ಎಂಬದನ್ನು ವಿಚಾರಿಸುವಾ. ಇವುಗಳನ್ನು ಪಯೋಗಿಸುವದರ ಉದ್ದೇಶವು ಹುಡುಗರಿಗೆ ವಸ್ತುಗಳ ಅಥವಾ ವ್ಯಕ್ತಿಗಳ ಬಗ್ಗೆ ಟಾದ ತಪ್ಪುತಿಳುವಳಿಕೆಯನ್ನು ತಿದ್ದುವದೂ ಅಸ್ಪಷ್ಟವಾದ ತಿಳುವಳಿಕೆಯನ್ನು ಟ್ಟಮಾಡುವದೂ ಇರುವದರಿಂದ ಹುಡುಗರಿಗೆ ಯಾವದಾದರೊಂದು ವಿಷಯದ ಂ ತಪ್ಪಾದ ಇಲ್ಲವೆ ಅಸ್ಪಷ್ಟವಾದ ತಿಳುವಳಿಕೆ ಆಗಿದೆ ಎಂದು ಕಂಡಾಗಮಾತ್ರ ಕರು ಈ ಸಾಧನಗಳ ಉಪಯೋಗ ಮಾಡಬೇಕು. ದಿನದ ಪಾಠಗಳಲ್ಲಿ ಮ್ಯಾಜಿಕ್ ್ಯಂಟರ್ನ ಹಾಗೂ ಸಿನೆಮಾ ಇವುಗಳ ಉಪಯೋಗದ ಅವಶ್ಯವಿಲ್ಲ; ಹಾಗೂ ವುಗಳ ಉಪಯೋಗವನ್ನು ದಿನಾಲು ಮಾಡಲು ಯತ್ನಿಸಿದರೆ ಖರ್ಚು ಬಹಳ ುವದು. ಈ ಸಾಧನಗಳ ಉಪಯೋಗದ ವಿಷಯವಾಗಿ ಮತ್ತೊಂದು ಮಹತ್ವದ ಂಚನೆ ಕೊಡುವದಿದೆ. ಅದೇನುವರೆ, ಇವು ಬರಿಯ ಮನೋರಂಜನೆಯು ಹಾಗೂ ೋದದ ಸಲುವಾಗಿಯೇ ಅವೆ ಎಂದು ಯಾರೂ ತಿಳಿಯಬಾರದು ಎಂಬದು. ಪಿ ನಮ್ಮ ದುರ್ದೈವದಿಂದ ಈ ಸಾಧನಗಳ ಬಗ್ಗೆ ಅನೇಕರ ತಿಳಿವಳಿಕೆಯು ಗೆಯೇ ಅದೆ. ಚಿತ್ರಗಳನ್ನು, ವಿಶೇಷವಾಗಿ ಚಲಚ್ಚಿತ್ರಗಳನ್ನು ನೋಡುವದರಲ್ಲಿ ನುಷ್ಟಿಗೆ ಮನೋರಂಜನೆಯಾಗುತ್ತದೆಂಬದಕ್ಕೆ ಸಂದೇಹವಿಲ್ಲ ಹಾಗೂ ಬರಿಯ ನೋರಂಜನೆಗಾಗಿ ತಯಾರಿಸಿದ ಚಿತ್ರಗಳೂ ಕೆಲವು ಇರುವವು; ಆದರೆ ಶಿಕ್ಷಣದ ುವಾಗಿಯೇ ವಿಶಾಲವಾದ ಸ್ಲ್ಯಾಯಿಡುಗಳನ್ನು ಇಲ್ಲವೆ ಫಿಲ್ಮುಗಳನ್ನು ಶಿಕ್ಷಣ ುಗಿಯೇ ಉಪಯೋಗಿಸಬೇಕು. ಮತ್ತು ಅವು ಯಾವ ವರ್ಗಗಳ ಸಲುವಾಗಿ ಯಾರಿಸಲ್ಪಟ್ಟವೆಂಬೋ ಅವನ್ನು ಆ ವರ್ಗಗಳಿಗಾಗಿಯೇ ತೋರಿಸಿ ವರ್ಣಿಸಬೇಕೇ ರತು, ಯಾವದಾದರೊಂದು ಸ್ಲ್ಯಾಯಿಡ ಅಥವಾ ಫಿಲ್ಮ್ ತೋರಿಸುವದಿರುವಾಗ ಮ್ಯಾಜಿಕ್ ಲ್ಯಾಂಟರ್ನ ಬಂದಿದೆ, ಸಿನೆಮಾ ಬಂದದೆ, ಬನ್ನಿ ಎಲ್ಲರೂ ಬನ್ನಿ'' ದು ಎಲ್ಲ ವರ್ಗಗಳ ಹುಡುಗರನ್ನು ಕರೆದು ಅವನ್ನು ತೋರಿಸಲು ಯತ್ನಿಸಿದರೆ ನ್ನು ತೋರಿಸುವದರೊಳಗಿರುವ ಶಿಕ್ಷಣದ ಹೇತುವು ಸಫಲವಾಗುವದಿಲ್ಲ. ಮತ್ತು

"ಬರೇ ಗುಲ್ಲು ನಿದ್ದೆಗೇಡು" ಎಂಬ ಮಾತಿನಂತೆ ಆ ಸ್ಲಾಯಿಡಿನ ಇಲ್ಲವೆ ಫಿ
ದರ್ಶನವು ಬರಿಯ ಆಟದ ಗತಿಯಾಗಿ ನಿಷ್ಫಲವಾಗುವದು.

ಸಾರಾಂಶವೇನೆಂದರೆ: ಈಗಿನ ಸುಧಾರಣೆಯ ಕಾಲದಲ್ಲಿ ಜಗತ್ತಿನ ಬಹು
ಎಲ್ಲ ದೇಶಗಳಲ್ಲಿ ಮನುಷ್ಯನ ಜೀವನಯಾತ್ರೆಯ ಎಲ್ಲ ಉಪಾಂಗಗಳಲ್ಲಿ ಸುಧಾ
ಣೆಯು ಒತ್ತರದಿಂದ ನಡೆದಂತೆ ಶಿಕ್ಷಣ ವಿಧ್ಯತಿಯಲ್ಲಿಯೂ ನಡೆದದೆ. ಇ
ಉದ್ದೇಶವು ಆದಷ್ಟು ಸ್ವಲ್ಪ ವೇಳೆಯಲ್ಲಿ, ಆದಷ್ಟು ಸ್ವಲ್ಪ ಶ್ರಮದಿಂದ ಉತ್ತ
ವರಿಣಾಮವು ದೊರೆಯಬೇಕೆಂಬುದೇ ಅದೆ. ಸುಧಾರಿಸಿದ ಶಿಕ್ಷಣ ಪದ್ಧತಿಗ
ದೃಕ್-ಶಿಕ್ಷಣದ ಪದ್ಧತಿಯು ಎಲ್ಲಕ್ಕೂ ಹೆಚ್ಚಿನ ಮಹತ್ವದ್ದದೆ. ಶಿಕ್ಷಕರು ಮೇ
ಹೇಳಿದ ದೃಕ್-ಶಿಕ್ಷಣದ ಉಳಿದ ಸಾಧನಗಳನ್ನು ಪ್ರತಿನಿತ್ಯದ ಪಾಠಗ
ಉಪಯೋಗಿಸಿ, ಅವಶ್ಯಕಂಡಾಗ ಮ್ಯಾಜಿಕಲ್ಯಾಂಟರ್ನ ಸ್ಲಾಯಿಡ್ ಅಥವಾ ಸಿನೆ
ಫಿಲ್ಮ್ ಇವುಗಳ ಲಾಭವು ಹುಡುಗರಿಗೆ ಎಲ್ಲಿಂದಾದರೂ ದೊರಯುವಂತೆ ಮಾಡಿ
ಈಗ ನಾಲ್ಕು ಕಡೆಗಳಲ್ಲಿ ನಡೆದ ಶಿಕ್ಷಣ ಸುಧಾರಣೆಯ ಧ್ಯೇಯವು ಈಡೇರುವ
ನಿಶ್ಚಯವು.

N. S. ULLAL
Offg. D. E. I. V. I.
Bombay Presidency

ಕನ್ನಡ ನಾಡಿನ ಇತಿಹಾಸ

ಶ್ರೀಮಾನ್ ದೇವುಡು ನರಸಿಂಹಶಾಸ್ತ್ರಿ. ಎಮ್. ಎ. ಅವರು ಕನ್ನಡ
ಚಿಕ್ಕ ಮಕ್ಕಳಿಗಾಗಿ "**ನಮ್ಮ ಪುಸ್ತಕ**" ಎಂಬ ಸಚಿತ್ರ ಮಾಸಪತ್ರಿಕೆಯೊಂದ
ಹೊರಡಿಸುತ್ತಿರುವರು. ಹಿಂದೆ ಅವರೇ ಮಕ್ಕಳ ಪುಸ್ತಕದ ಸಂಪಾದಕರ
ದ್ದರು. ವಾರ್ಷಿಕ ಚಂದಾ ಒಂದು ವರ್ಷಕ್ಕೆ ಅಂಚೆಯ ವೆಚ್ಚ ಸೇರಿ ಒಂ
ರೂಪಾಯಿ.

ಮೂದರಿಗಾಗಿ ಅದರೊಳಗಿನ "**ಕನ್ನಡ ನಾಡಿನ ಇತಿಹಾಸ**" ಎಂಬ ಲೇಖನ ಂದನ್ನು ಇಲ್ಲಿ ಅವತರಿಸಿರುವೆವು. ಕನ್ನಡದಲ್ಲಿ ಚಿಕ್ಕಮಕ್ಕಳಿಗಾಗಿಯೇ ಹೊರಟ ಾಸಪತ್ರಿಕೆಗಳಲ್ಲಿ ಇದು ಎರಡನೆಯದು. ಕನ್ನಡ ಶಿಕ್ಷಕ ಶಿಕ್ಷಕಿಯರಿಂದ ತಕ್ಕ ್ರೋತ್ಸಾಹನೆ ಪಡೆಯಲು ಅರ್ಹವಾಗಿರುವ ಈ ಪತ್ರಿಕೆಯು ಚಿರಕಾಲ ಬಾಳಿ ಭಾಷಾ ಪ ದೇಶಸೇವೆಗಳನ್ನು ನೆರವೇರಿಸಲೆಂದು ಹಾರೈಸುವೆವು.

"ಕರ್ನಾಟಕದೇಶದ ಚರಿತ್ರೆಯನ್ನು ಬರೆದಿಡುವದು ಆವಶ್ಯಕವೆಂದು ಹಲವು ಂದಿಹಿರಿಯರು, ಅರಿತವರು ಪದೇಪದೇ ಹೇಳುತ್ತಿದ್ದಾರೆ. ಅದಕ್ಕಾಗಿ ಹಲವರು ಲಪುಕಡೆಯಲ್ಲಿ ಶ್ರಮಿಸುತ್ತಿದ್ದಾರೆ. ಹದಿನೇಳು ಪಾಲಾಗಿ ಒಡೆದು ಹೋಗಿರುವ ನ್ನಡನಾಡಿನ ಪೂರ್ವ ಇತಿಹಾಸವನ್ನು ಮತ್ತು ಸದ್ಯದ ಸ್ಥಿತಿಯನ್ನು ಒಂದೆಡೆ ಿಸಲು ಯಾವ ಪುಸ್ತಕವೂ ನಮ್ಮಲ್ಲಿಲ್ಲ. ಆಯಾ ಭಾಗಗಳಲ್ಲಿ ಖಂಡಖಂಡವಾಗಿ ಲ್ಲಿಷ್ಟು ಅಲ್ಲಷ್ಟು ಇದರ ಚರಿತ್ರೆಯು ಈಗ ದೊರೆಯುತ್ತಿದೆ. ಖಂಡವಾದ ಆ ಾಗಗಳಲ್ಲಿಯೂ ಸಹ ದೊರೆಯದಿರುವ ವಸ್ತುವು ಇನ್ನೂ ಬಹಳವಿದೆ. ಇವನ್ನೆಲ್ಲ ಾಧನೆ ಮಾಡಿ ಸಂಗ್ರಹಿಸಿ ನಮ್ಮ ಮುಂದಿನ ಪೀಳಿಗೆಯವರಿಗೆ ಒದಗಿಸಿಕೊಡ ೇಕೆಂಬುದು ಕೆಲವು ಮಂದಿ ಕನ್ನಡಿಗರ ಹಾರೈಕೆಯಾಗಿದೆ.

ಇದು ದೊಡ್ಡ ಕೆಲಸ, ಕಷ್ಟತರವಾದ ಕೆಲಸ. ಒಂದೆರಡು ವರ್ಷಗಳಲ್ಲಾ ಲಿ ಒಬ್ಬಿಬ್ಬರಿಂದಾಗಲಿ ಆಗತಕ್ಕುದಲ್ಲ; ಹತ್ತಾರು ಜನರು ಸೇರಿ ನಡೆಸಬೇಕಾದುದು. ತ್ತು ಇಡೀ ಜನಾಂಗವೇ ಇದಕ್ಕೆ ಬೆಂಬಲವಾಗಿರಬೇಕು. ಇವರ ಉದ್ದೇಶವೇನು, ವರು ಕೈಗೊಂಡಿರುವ ಮಾರ್ಗವಾವುದು, ಇದಕ್ಕೆ ಇವರಿಗೆ ದೊರೆತಿರುವ ಸಾಧನ ೇನು, ಸಹಾಯಗಳೇನು, ಇದರಲ್ಲಿ ನಮ್ಮ ಕೆಲಸವೇನು, ನಾವು ವಹಿಸಬೇಕಾದ ಾಗವೇನು ಎಂಬೀ ವಿಷಯಗಳನ್ನು ಪ್ರತಿಯೊಬ್ಬ ಕನ್ನಡಿಗನೂ ತಾನಾಗಿ ಚರ್ಚಿ ವಷ್ಟುಮಟ್ಟಿಗೆ ನಾಡಿನಲ್ಲಿ ಚೈತನ್ಯವುಂಟಾಗಬೇಕಾದರೆ ಕರ್ನಾಟಕದ ಇತಿ ಾಸವು ಸಿದ್ಧವಾದಹಾಗೆಯೇ ಸರಿ. ಇತಿಹಾಸವಷ್ಟೇ ಏಕೆ, ಯಾವ ಕೆಲಸ ೇಕಾದರೂ ಅಂಥ ನಾಡಿನ ಜನರಿಂದ ಆದೀತು. ಜನರಲ್ಲಿ ಈ ತೆರದ ಚೈತನ್ಯ ಂಟಾಗಬೇಕಾದರೆ ವಿಷಯವು ಪದೇಪದೇ ಅವರ ಕಿವಿಯಲ್ಲಿ ಬೀಳುತ್ತಿರಬೇಕು. ಬ್ಬಿಣದ ತುಂಡನ್ನು ಸೂಜಿಗಲ್ಲಾಗಿ ಮಾಡುವ ಹಾಗೆ ಅದು ಪದೇಪದೇ ಒಂದೇ ಸ್ಥಿನಲ್ಲಿ ಸೂಜಿಕಲ್ಲನ್ನು ಕಬ್ಬಿಣದ ತುಂಡಿನ ಮೇಲೆ ತೀಡುವದರಿಂದ ಆ ಕಬ್ಬಿಣವೂ ಾಜಿಕಲ್ಲಾಗುತ್ತದೆ. ಒಂದು ಜನಾಂಗವೂ ಹಾಗೆಯೇ.

ಕನ್ನಡ ನಾಡಿನ ಇತಿಹಾಸವು ನಮಗೆ ಬೇಕೆಂದು ಹೇಳಹೊರಟಾಗ ಮೊದಲು ಾರಾದರೊಬ್ಬರು ಅದು ಏಕೆ ಬೇಕೆಂದು ಕೇಳಬಹುದು. ಈ ನಾಡಿನಲ್ಲಿ ಏನಿದೆ?

ಇಲ್ಲದಬಂದು ಇತಿಹಾಸವನ್ನು ನಾವು ಕಟ್ಟಲು ಹೋಗುತ್ತಿರಬಹುದೆ ಅಥ
ಇರುವ ವಸ್ತುವು ಇತಿಹಾಸವು ಬರೆದಿಡಬಲ್ಲಷ್ಟು ದೊಡ್ಡದೆ! ಯಾವುದೋ ಬಿಸಿ
ಗುದುರೆಯನ್ನೇರಿಸಿಕೊಂಡು ನಾವು ಹೋಗುತ್ತಿಲ್ಲ ತಾನೇ? ಹೀಗೆಲ್ಲ ಕೇಳಬಹು
ಅದರಿಂದ ನಮ್ಮ ಕನ್ನಡ ನಾಡಿನಲ್ಲಿ ಹಿಂದೆ ಏನಿತ್ತು, ಈಗ ಏನಿದೆ ಎಂಬುದ
ಬಹಳ ಸಂಕ್ಷೇಪವಾಗಿ ತಿಳಿಸುವ ಉದ್ದೇಶದಿಂದ ಈ ಲೇಖನವನ್ನು ಬರೆದಿದ್ದೇವೆ.

ಕನ್ನಡ ನಾಡು ವೀರನಾಡು; ವೀರರಾದ ಮಕ್ಕಳನ್ನು ಪಡೆದನಾ
ಪುರಾಣಗಳ ಕಾಲದಿಂದ ಇದುವರೆಗೆ ನೋಡಿದರು ಸಹ ವೀರ್ಯದಲ್ಲಾ
ಸಾಹಸಗಳಲ್ಲಾಗಲಿ ಇವರು ಇತರ ಯಾವ ಜನರಿಗೂ ಕಡಮೆ ಇಲ್ಲ. ರಾಮಾ
ಣದ ವೀರಹನುಮಂತ ವಾಲಿ ಸುಗ್ರೀವರು ಕನ್ನಡಿಗರು. ಆರ್ಯರ ಪಣ
ಕೆಚ್ಚಿನಲ್ಲಿ ಇವರು ಕಪಿಗಳಾಗಿ ಕಂಡರೂ ಇವರಲ್ಲಿದ್ದ ಈ ಗುಣಗಳನ್ನು ಆ
ಕವಿಗಳು ಮುಚ್ಚಿಡಲಾಗಿಲ್ಲ. ಭಾರತದ ಬಭ್ರುವಾಹನನು ಕನ್ನಡಿಗ. ಅ
ಮುಂದೆ ಇತಿಹಾಸಕ್ಕೆ ಬಂದರೆ—ಈಗ ದೊರೆತಿರುವಷ್ಟು ಮಟ್ಟಿಗೆ—ಕನ್ನಡ ನಾ
ಅರಸರು, ಚಾಲುಕ್ಯರು, ಹೊಯ್ಸಳರು, ಬಲ್ಲಾಳರು, ವಿಜಯನಗರದ ಅರಸ
ಒಬ್ಬೊಬ್ಬರು ಒಂದೊಂದು ಕಾಲದಲ್ಲಿ ನಮ್ಮ ಕೈಯನ್ನು ಹಿಡಿದು ನಮ್ಮ ಸ
ಸಂತೋಷಗಳನ್ನು ಹೆಚ್ಚಿಸಿ, ನಮ್ಮ ನಾಡಿನ ಪತಾಕೆಯನ್ನು ಗಗನದಲ್ಲಿ ಹಾ
ಮೆರೆದಿರುವ ಅಂಶವು ಎಲ್ಲರಿಗೂ ತಿಳಿದುದೇ ಆಗಿದೆ. ಕನ್ನಡಿಗರ ನಾಡು ನವ
ದೆಯ ವರೆಗೆ ಹಬ್ಬಿದ್ದಿತೆಂದು ಕೆಲವು ಆಧಾರಗಳ ಮೇಲೆ ಹೇಳುತ್ತಾರೆ. ಇ
೧೨ ಶತಮಾನಗಳ ಕೆಳಗೆ ಬಾಳಿದ ಮತ್ತು ಆಳಿದ—ನೃಪತುಂಗನು "ಕಾವ
ಯಿಂದಲೂ ಗೋದಾವರಿಯವರೆಗೆ" ಹಬ್ಬಿದ್ದ ನಾಡು ಕನ್ನಡ ನಾಡೆಂದು ಬರೆ
ತ್ತಾನೆ. ಪರಜನರ, ಪರಭಾಷೆಯವರ, ಒತ್ತಡಿಯಿಂದ-ಕನ್ನಡ ನಾಡು ಕರಗ
ಬಂದರೂ ಈಗಲೂ ಇವರ ವಿಸ್ತೀರ್ಣವೇನೂ ಕಡಮೆಯಿಲ್ಲ. ದೊಡ್ಡ ಸಾಮ್ರಾ
ಗಳನ್ನು ಕಟ್ಟಿದ ಜನರಿವರು.

ಹೀಗೆ ಕಟ್ಟಿದ ರಾಜ್ಯಗಳನ್ನು ಎಷ್ಟು ಮಟ್ಟಿಗೆ ವಿತರಣೆಯಿಂದ ಇ
ಪಾಲಿಸುತ್ತಿದ್ದರೆನ್ನುವುದಕ್ಕೆ ನಮಗೆ ಅಲ್ಲಲ್ಲಿ ನಿದರ್ಶನಗಳು ದೊರೆಯುತ್ತವೆ. ದೆ
ಗಳು ಎಷ್ಟು ದೊಡ್ಡವರೆಂಬುದನ್ನು ಅವರ ರಾಜ್ಯದ ಒಳ ಆಡಳಿತವು ಎಷ್ಟು ಉತ್ತ
ವಾಗಿದೆಯೆಂಬುದರಿಂದ ತಿಳಿಯುವುದು ಒಂದು ವಿಧ; ಮತ್ತೊಂದು, ಅವರ ವಿಶ
ದಲ್ಲಿ ಪರ ನಾಡುಗಳ ದೊರೆಗಳು ಯಾವ ಅಭಿಪ್ರಾಯವನ್ನಿಟ್ಟುಕೊಂಡಿದ್ದ
ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಪರಿಶೀಲಿಸುವುದು. ಎಲ್ಲಿಯ
ದೂರದಲ್ಲಿರುವ ನಮ್ಮ ಕನ್ನಡ ನಾಡಿಗೆ ಇರಾಣ ದೇಶದ ಸುಲ್ತಾನರು ರಾಯಭ

ಳನ್ನು ಕಳಿಸಿದ್ದರೆಂಬುದು ನಮಗೆ ಒಂದು ಹೆಮ್ಮೆಯ ಮಾತಲ್ಲವೇ ? ಹಾಗೆಯೇ ವಿಜಯನಗರದ ರಾಜರು ಸಹ ಪ್ರಖ್ಯಾತರಾಗಿದ್ದರು. ಅವರ ಗುಣಗಾನಮಾಡಿ ಣಿಯುವಿರುವ ನಿಕೊಲೋಸ್ ಕೊಂಟಿ, ಅಬ್ದುಲ್‌ರಜ್ಜಾಕ ಇವರುಗಳ ಲೇಖನಗಳೇ ನ್ನಡ ನಾಡಿನ ಕೀರ್ತಿಯನ್ನು ಬೆಳಗತಕ್ಕುವಾಗಿವೆ. ಇತ್ತೀಚೆಗೆ ಮೈಸೂರಿನ ಕಿಕ್ಕದೇವರಾಜ ಒಡೆಯರಾದರೂ ಸಹ ಔರಂಗಜೇಬ ಚಕ್ರವರ್ತಿಯೊಂದಿಗೆ ಪಾನತೆಯನ್ನು ತೋರಿಸುವುದಕ್ಕಾಗಿ ತಮ್ಮ ರಾಯಭಾರಿಯನ್ನು ದೆಹಲಿಯಲ್ಲಿಟ್ಟು ದ್ದರು. ರಾಜ್ಯವನ್ನು ಕಟ್ಟುವದರಲ್ಲಿ ಮತ್ತು ಅದನ್ನು ಪಾಲಿಸುವದರಲ್ಲಿ ಚೆನ್ನಾಗಿ ರಿತವರಾದ ಇವರು ಬರಿಯ ಅಷ್ಟರಲ್ಲಿ ಸಮಾಧಾನಗೊಂಡಿರಲಿಲ್ಲ. ಒಂದು ಡಿನ ನಾಗರಿಕತೆಯು ಕಾಣುವದು ಆ ನಾಡಿನ ವಿಸ್ತಾರದಿಂದಲೂ ಅಲ್ಲ ಅಲ್ಲಿಯ ಜನರಲ್ಲಿ ಕಾಣಬರುವ ವಿದ್ಯೆ, ಬುದ್ಧಿ, ಆಚಾರ ಮುಂತಾದ ಗುಣಗಳಿಂದ. ಕನ್ನಡ ನಾಡು ಕಲೆಯಬೀಡು, ಸಿಂಗರದ ಆಗರ. ಇಲ್ಲಿನ ಶಿಲ್ಪಕಲೆಯು ಜಗತ್ತನ್ನೇ ಬೆರುಗುಮಾಡುವಂತಿದೆ. ಬೇಲೂರು– ಹಳೇಬೀಡು– ಸೋಮನಾಥಪುರಗಳನ್ನು ನೋಡಿದವನು ಎಂದಿಗೂ ಈ ನಾಡನ್ನು ಮರೆಯಲಾರ. ಶಿಲ್ಪಿಯು ಜಡವಾದ ಕಲ್ಲಿನಲ್ಲಿ ಜೀವಕಳೆತುಂಬಿ ಕುಣಿಸಿಬಿಟ್ಟಿದ್ದಾನೆ. ಸೌಂದರ್ಯದ ರಾಶಿಯನ್ನು ಅಲ್ಲೆಲ್ಲಿಯೂ ಸುರಿಸಿಬಿಟ್ಟಿದ್ದಾನೆ. ಇನ್ನು ಸಂಗೀತ ಚಿತ್ರಕಲೆ ಇವುಗಳಲ್ಲಿಯಾದರೂ ಹಾಗೆಯೇ. ಇಲ್ಲಿನ ಸಂಗೀತಕ್ಕೆ ಕರ್ನಾಟಕ ಸಂಗೀತವೆಂದು ಬೇರೆ ಒಂದು ಹೆಸರೇ ಇಟ್ಟುಬಿಟ್ಟಿದೆ. ಇದರದೇ ಒಂದು ವೈಶಿಷ್ಟ್ಯವನ್ನು ಇದು ಕಲ್ಪಿಸಿಕೊಂಡಿದೆ.

ಇನ್ನು ಸಾಹಿತ್ಯದ ವಿಷಯದಲ್ಲಂತೂ ಕನ್ನಡಿಗರು ಯಾವ ಜನರಿಗೂ ತಲೆ ಬಗ್ಗಿ ನಡೆಯಬೇಕಾದುದಿಲ್ಲ. ಇಲ್ಲಿನ ಸಾಹಿತ್ಯ ಬಹಳ ಪುರಾತನವಾದುದು, ಸಾವಿರ ವರ್ಷಗಳಿಂದ ನಡೆದುಬಂದಿರುವುದು. ತಮಿಳು ಭಾಷೆಯೊಂದನ್ನು ಬಿಟ್ಟರೆ (ಅದನ್ನು ಈಗ ರೂಢಿಯಲ್ಲಿಲ್ಲದಿರುವ ಸಂಸ್ಕೃತವನ್ನು ಬಿಟ್ಟರೆ) ಈಗ ಹಿಂದುಸ್ಥಾನದಲ್ಲಿರುವ ಯಾವ ಭಾಷೆಯೂ ಇಷ್ಟು ಪುರಾತನವಾದುದಲ್ಲ, ಮತ್ತು ಯಾವ ಭಾಷೆಯಲ್ಲಿಯೂ ಇಷ್ಟು ವಿಷಯಸಂಪತ್ತಿಯಿಲ್ಲ. ಜೈನರು, ವೀರಶೈವರು, ಬ್ರಾಹ್ಮಣರು ಇವರು ಸಂತತವಾಗಿ ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಈ ಸಾಹಿತ್ಯವನ್ನುಹಿಡಿದು ಅದನ್ನೇ ಆಪ ಒಂದೊಂದು ಮಾರ್ಗದಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ಕನ್ನಡ ತಾಯಿಯ ತೋಟದಲ್ಲಿ ಎಲ್ಲರೂ ಕೆಲಸಮಾಡಿ ತಮತಮಗೆ ಸೊಗಸಾಗಿ ಕಂಡ ಸಸಿಗಳನ್ನು ಬೆಳೆಸಿ ನಮ್ಮ ಕೈಗೆ ಕೊಟ್ಟಿದ್ದಾರೆ. ಇಂದಿಗೂ ಸಹ ಹೊಸಹೊಸ ಸಸಿಗಳು ಹುಟ್ಟುತ್ತಲೇ ಇವೆ. ಒಟ್ಟು ತೋಟವು ನಮ್ಮ ನಾಡಿನ ಅಂದವನ್ನು, ನಾಡಿನ ಜನರಿಗೆ ಸುಖವನ್ನು, ನಿಂತು ನೋಡುವ ಜನರಿಗೆ ಆನಂದವನ್ನು ಕೊಡುತ್ತದೆ.

ಪಂಪ, ರನ್ನ ಮೊದಲಾದ ಜೈನಕವಿಗಳ ಕಾವ್ಯಗಳನ್ನಾಗಲಿ ಬಸವಣ್ಣ, ಅಲ್ಲಮಪ್ರ
ಮುಂತಾದ ವೀರಶೈವರ ವಚನಸಾಹಿತ್ಯವನ್ನಾಗಲಿ, ಗದುಗಿನ ನಾರಣಪ್ಪ ಜೈಮ
ಮುಂತಾದವರ ಷಟ್ಪದೀಕಾವ್ಯಗಳನ್ನಾಗಲಿ ಪುರಂದರದಾಸರು ಕನಕದಾ
ಮೊದಲಾದವರ ಪದಗಳನ್ನಾಗಲಿ ಕಂಡು ಕೇಳಿದ ಯಾವನೂ ಕನ್ನಡ ಭಾಷ
ವಿಷಯದಲ್ಲಿ ಉದಾಸೀನನಾಗಲಾರ. ಸಾಹಿತ್ಯದಲ್ಲಿ ಕೃಷಿಮಾಡುವದು ಬಲ್ಲ
ಒಂದು ಬದುಕಿನ ಗುರಿಯಾದರೆ ಅಂಥವರಿಗೆ ಸನ್ಮಾನ ಮಾಡುವದು ಅವ
ತಮ್ಮ ಬಳಿ ಇಟ್ಟುಕೊಳ್ಳುವದು ದೊರೆಗಳಿಗೆ ಒಂದು ಹೆಮ್ಮೆ; ಅಷ್ಟೇ
ಸಾಹಿತ್ಯದ ಸವಿಜೇನಿಗೆ ಮನಸೋತು ರಾಜಮಹಾರಾಜರುಗಳು ತಾವೂ
ಮಾಡಲೆಳಿಸಿ ಅನೇಕ ಕಾವ್ಯಗಳನ್ನು ಬರೆದಿದ್ದಾರೆ. ಯಾವ ನಾಡಿಗೆ ಈ
ಯುಂಟು ? ಕನ್ನಡದಲ್ಲಿ ಈಗ ದೊರೆತಿರುವ ಗ್ರಂಥಗಳಲ್ಲಿ ಮೊದಲನೆಯದೇ
ರಾಜನು ಬರೆದುದು—ನೃಪತುಂಗರಾಜನ 'ಕವಿರಾಜಮಾರ್ಗ'

ಇನ್ನು ಧಾರ್ಮಿಕ ವಿಷಯಗಳಲ್ಲಿ ನಮ್ಮವರು ಪಡೆದಿರುವ ಸ್ಥಾನವೇ
ದನ್ನು ಸ್ವಲ್ಪು ನೋಡೋಣ. ಉತ್ತರದಲ್ಲಿ ವಾಸಿಸುತ್ತಿದ್ದ ದ್ರಾವಿಡರನ್ನು-
ಪೂರ್ವಜರು ತಾನೆ — ಆರ್ಯರು ಅಲ್ಲಿಂದ ದಕ್ಷಿಣಕ್ಕೆ ಓಡಿಸಿ ಅಷ್ಟಕ್ಕೆ ತೃಪ್ತ
ಇಲ್ಲಿಯೂ ಬಂದು ಇವರನ್ನು ಒತ್ತತೊಡಗಿದರು. ಆದರೆ ಅದು ಸಾಗದೆ ಹೋ
ಇವರೊಡನೆ ಅವರು ಕೂಡಿ ವಾಸಮಾಡತೊಡಗಿದರು. ವಾಸಸ್ಥಳದಲ್ಲಿ ಆಕ್ರ
ವೇನೋ ತಪ್ಪಿತು; ಉಳಿದ ಯಾವದೂ ತಪ್ಪಲಿಲ್ಲ. ಇವರ ಜೀವನದ ಪ್ರತಿಯೆ
ಭಾಗಗಳಲ್ಲಿಯೂ ಆರ್ಯರ ಪ್ರಭಾವವು ಸ್ವಲ್ಪಸ್ವಲ್ಪವಾಗಿ ತೋರತೊಡಗಿತು.
ಧರ್ಮ ಇವುಗಳ ವಿಷಯದಲ್ಲಂತೂ ದ್ರಾವಿಡರು ಸಂಪೂರ್ಣವಾಗಿ ಆ
ಬಲೆಗೆ ಬಿದ್ದರು. ಅವರು ಹೇಳುತ್ತಿದ್ದ ಸಂಸ್ಕೃತ ಮಂತ್ರಗಳ ಮಾಧುರ್ಯ
ಮನಗೊಟ್ಟು ನಾಗಸ್ವರವನ್ನು ಕೇಳಿ ಹಾವು ಬುಟ್ಟಿಗೆ ಬೀಳುವಂತೆ ಅವರ
ಧರ್ಮಗಳ ಬುಟ್ಟಿಗೆ ಇವರು ಬಿದ್ದರು; ಅವರ ದೇವತಾವಿಗ್ರಹಗಳ ಸ
ರೂಪಕ್ಕೆ, ಅವುಗಳಿಗೆ ಮಾಡಿರುವ ವಿವಿಧ ಅಲಂಕಾರಗಳಿಗೆ, ಹಚ್ಚಿರುವ
ದೀಪಾದಿಗಳಿಗೆ ಇವರು ಮರುಳಾದರು. ಕ್ರಮೇಣ ಇದೇ ನಮ್ಮ ಧರ್ಮ ಎನುವ
ಮಟ್ಟಿಗೆ ಅದು ಇವರಲ್ಲಿ ಬೆರೆತುಹೋಯಿತು. ಆರ್ಯ ಧರ್ಮವು ಹಿಂದೂ ಧರ್
ವಾಯಿತು. ಕೆಲವು ಕಾಲದಮೇಲೆ ಆ ಹಿಂದೂ ಧರ್ಮವು ಹಾಳಾಗುತ್ತ ಬಂದಿ
ನಮಗೆ ದೀಪವನ್ನು ಕೊಟ್ಟೆವೆಂದವರು ತಮ್ಮ ಮನೆಯ ದೀಪವನ್ನು ಉಳಿಸಿಕೊ
ಲಾಗಲಿಲ್ಲ. ಆಗ ಹಿಂದೂ ಧರ್ಮವನ್ನು ಪುನಃ ಕೈಯೆತ್ತಿ ಹಿಡಿದವರು ಅಥವಾ ಕ

ನರಿಗೆಆಶ್ರಯ ಕೊಟ್ಟವರು ಕನ್ನಡಿಗರು. ಇಲ್ಲಿ ಹುಟ್ಟಿ ಅಥವಾ ಬೆಳೆದು ರುವಷ್ಟು ಮತಸ್ಥಾಪಕರು, ಮತಪ್ರಚಾರಕರು ಇನ್ನಾವ ನಾಡಿನಲ್ಲಿಯೂ ಇಲ್ಲ.

ಇಂಥ ನಾಡು ಈಗ ಏನಾಗಿದೆ! ಪರನಾಡುಗಳನ್ನು ಗೆದ್ದು ಚಕ್ರಾಧಿಪತ್ಯ ನಾಡುತ್ತಿದ್ದ ಕನ್ನಡಿಗರು ಈಗ ೧೭ಪಾಲಾಗಿ ಒಡೆದು ೧೭ ಸರ್ಕಾರಗಳ ಆಶ್ರಯದಲ್ಲಿ ರಿಕೊಂಡಿದ್ದಾರೆ. ನವರತ್ನಗಳನ್ನು ರಾಸಿ ಹಾಕಿಕೊಂಡು ಬೀದಿಗಳಲ್ಲಿ ಕಡಲೆಪುರಿ ಂತೆಮಾರುತ್ತಿದ್ದನಾಡು ಭಿಕ್ಷುಕರ ಬೀಡಾಗಿದೆ. ಹೊನ್ನಿನ ಹೊಳೆ ಹರಿಯುತ್ತಿದ್ದ ಡೆ, ಮಣ್ಣು ದೊರೆಯುವದು ಕೂಡ ದುಸ್ತರವಾಗಿದೆ. ಕಲೆಯಲ್ಲಿ ನೂತನ ಷ್ಟಿ ಬೇಡ, ಇರುವ ಕಲಾಸಂಪತ್ತನ್ನು ಉಳಿಸಿಕೊಂಡರೆ ಸಾಕಾಗಿದೆ ಕರ್ನಾ ಕ ಸಂಗೀತವು ತೆಲುಗಿನ ಅಥವಾ ತಮಿಳು ಜನರ ಸ್ವತ್ತಾಗಿದೆ. ಪರನಾಡಿನವರು ಳೀಚಿದುದು ಹೋಗಿ ಉಳಿದಿದ್ದ ಅಲ್ಪಸ್ವಲ್ಪ ಹಣವು ಮುಲ್ಕಾನಿಯವರ ಕೈ ರಿತು. ಒಂದು ಸಾವಿರ ರೂಪಾಯಿ ಬೇಕೆಂದರೆ ಅವರ ಬಳಿಗೆ ಹೋಗಬೇಕು. ಸ್ತ ದೊಡ್ಡ ವ್ಯಾಪಾರವೆಲ್ಲ ಲಬ್ಬಿಯವರಿಗಾಯಿತು. ನೌಕರಿಗಳಲ್ಲಿ ಮದರಾಸು ಯವರು. ಗಿರಣಿಗಳು ಕಾರ್ಖಾನೆಗಳು ಮುಂತಾದವುಗಳಲ್ಲಿ ಮರಾಠಿಯವರು ಪೆ ಸಾರಸ್ವತರು. ಹೋಟಲುಗಳು ಕೂಡ ಗುಜರಾತಿಯವರು ಅಥವಾ ತುಳವ ಕೊನೆಗೆ ಕೂಲಿಯ ಕೆಲಸವಾದರೂ ಕನ್ನಡಿಗರಿಗೆ ಉಂಟೋ ಎಂದರೆ ಅದೂ . ಅದಕ್ಕೆ ತಮಿಳರು ಮತ್ತು ಬೇರೆ ಜನರು. ಇನ್ನು ಕನ್ನಡಿಗರಿಗೆ ಉಳಿದಿರುವ ು? ಸೋವೂರಿತನವಷ್ಟೇ ಎಂದು ಕಾಣುತ್ತದೆ. ಕನ್ನಡ ಜನರಲ್ಲಿ ಅಭಿಮಾನ ನಮ್ಮ ನಾಡು, ನಮ್ಮ ಭಾಷೆ, ನಮ್ಮ ಜನ ಎಂಬ ಮಮತೆಯಿಲ್ಲ. ಊರ ಯೆಂಬ ಹೆಸರಿನಲ್ಲಿ ನಮ್ಮ ಮನೆಯನ್ನು ಮುರಿದು ಹಾಕುತ್ತಿದ್ದೇನೆ, ಹೃದಯ ಲ್ಯವಿರಬೇಕೆಂಬ ಮಾತನ್ನು ಹಿಡಿದು ನಮ್ಮ ಮಕ್ಕಳಿಗೆ ಹಾಲು ಹಾಕದೆ ಗಿಸುತ್ತಿದ್ದೇವೆ. ಊರ ಜನರ ಮಾತೆಲ್ಲ ತಿಳಿದಿರಬೇಕೆಂದು ನಮ್ಮ ಮನೆಯ ಮಾತೇ ನಮ್ಮ ಹುಡುಗರಿಗೆ ತಿಳಿಯದ ಹಾಗೆ ಮಾಡುತ್ತಿದ್ದೇವೆ.

ನಮ್ಮ ಸ್ಥಿತಿಯು ತೀರ ಕೀಳಾಗಿದೆ. ಆದರೂ ಅಷ್ಟು ನಿರಾಶೆಯನ್ನುಂಟು ತಕ್ಕುದಲ್ಲ. ಮೇಧಾವಿಗಳು ಉತ್ತಮ ಸಾಹಿತಿಗಳು ನಮ್ಮಲ್ಲಿ ಈಗಲೂ ು. ಹೆಸರೆನ್ನೆತ್ತಿ ನಾನಿಲ್ಲಿ ಹೇಳಬೇಕಾಗಿಲ್ಲ. ಹಿಂದಿನ ಜನರು ಕಂಡುದನ್ನು ು ಅವರು ಕಾಣದೆ ಹೋದ ನೋಟವನ್ನು ಸಹ ನಾವಿಂದು ಕಾಣಬಹುದು. ಪ್ರಖ್ಯಾತವಾಗಿರುವ ಮೇಧಾವಿಗಳಲ್ಲಿ ಕೆಲವರು ನಮ್ಮಲ್ಲಿ ಹುಟ್ಟಿದವರಾಗಿದ್ದಾರೆ, ು ಬೆಳೆದವರಾಗಿದ್ದಾರೆ. ನಮ್ಮ ಜನರ ವಿದ್ಯೆಯೇನೂ ಕುಗ್ಗಿಲ್ಲ. ಕಳೆದ ಮಹಾ

ಯುದ್ಧದಲ್ಲಿ ಕನ್ನಡಿಗರು ಎಷ್ಟು ಉತ್ತಮ ರೀತಿಯಲ್ಲಿ ಕಾದಾಡಿ ನಮ್ಮ ನಾಡಿ
ಹೆಸರನ್ನು ತಂದಿರುವರೆಂಬದೇ ಅದಕ್ಕೆ ಸಾಕ್ಷಿ. ಈಚೆಗೆ ರಾಜಕೀಯ ವಿಷಯ
ಗಳಲ್ಲಿ ಇವರು ಎಷ್ಟರಮಟ್ಟಿಗೆ ಉತ್ಸಾಹವನ್ನೂ ಶಕ್ತಿಯನ್ನೂ ತೋರಿಸುತ್ತಿದ್ದ
ರೆಂಬುದೇ ಸಾಕ್ಷಿ. ಇವಲ್ಲದೆ ಪ್ರಕೃತಿದೇವಿಗಾದರೂ ನಮ್ಮ ನಾಡಿನ ವಿಷಯ
ದಲ್ಲಿ ಬಹಳ ನಲವುಂಟು. ಭೂಗರ್ಭಶೋಧನಶಾಸ್ತ್ರಜ್ಞರು ತೀರ್ಮಾನಿಸಿರು
ವಂದಂಶವನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು. ಒಂದೊಂದು ಭೂಪ್ರದೇ
ಹುಟ್ಟಿ ಇಷ್ಟಿಷ್ಟು ವರ್ಷಗಳಾಗಿವೆ ಎಂದು ಅವರು ನಿಷ್ಕರ್ಷ ಮಾಡಿ
ತ್ತಾರೆ. ಇದ್ದ ಭೂಪ್ರದೇಶವು ಹೋಗಿ ಸಮುದ್ರವಾಗುವದೂ ಉಂಟು
ಹೀಗೆ ಅವರು ನಿಷ್ಕರ್ಷಮಾಡಿರುವದರಲ್ಲಿ ನಮ್ಮ ಕನ್ನಡನಾಡು ಅದರಲ್ಲಿಯೂ
ಮೈಸೂರುದೇಶವಿರುವ ಭಾಗವು ಅತ್ಯಂತ ಪುರಾತನವಾದುದೆಂದು ಅವರು ಅ
ಪ್ರಾಯಪಟ್ಟಿದ್ದಾರೆ. ಇಲ್ಲಿ ಭೂಕಂಪವಾಗುವ ಸಂಭವವೇ ಇಲ್ಲವಂತೆ. ಇದಲ್ಲದೆ
ಇಲ್ಲಿ ಪ್ರವಹಿಸುತ್ತಿರುವ ನದಿಗಳು, ಇಲ್ಲಿರುವ ಜಲರಾಶಿಗಳು, ಇಲ್ಲಿ ದೊರೆಯು
ಚಿನ್ನ ಕಬ್ಬಿಣ ಕ್ರೋಮಿಯಂ ಮುಂತಾದ ಲೋಹಗಳು, ಮಣ್ಣು ಬಿತ್ತಿ ಚಿನ್ನ ಬೆ
ಯುವಂಥ ಭೂಮಿ, ಇಲ್ಲಿರುವ ದಟ್ಟವಾದ ಕಾಡುಗಳು ಇವುಗಳನ್ನು ನೋ
ಯಾವ ಕನ್ನಡಿಗನು ತಾನೇ ಹೆಮ್ಮೆ ಪಡಲಾರ?

ನಮ್ಮ ಜನರು ಸುಖವಾಗಿರಬೇಕಾದರೆ ಪ್ರಪಂಚದ ಇತರ ಜನರಮುಂದೆ ತ
ಯೆತ್ತಿ ಬಾಳಬೇಕಾದರೆ, ನಮ್ಮ ನಾಡು ಹಿಂದಿನ ವೈಭವವನ್ನು ಮತ್ತೆ ತೋರಬೇಕಾ
ದರೆ ಇನ್ನೂ ಅವಕಾಶವಿದೆ. ನೆರೆಮನೆಯವರೆದುರಿಗೆ ಯಾವ ವಿಷಯದಲ್ಲಿಯೂ ನಾವು
ತಲೆತಗ್ಗಿಸಿರಬೇಕಾದುದಿಲ್ಲ. ಆದರೆ ಹಾಗೆ ತಲೆಯೆತ್ತಿ ನಡೆಯುವಂತಾಗಬೇಕಾದ
ಮೊದಲು ನಮ್ಮಲ್ಲಿ ಸ್ವಾಭಿಮಾನವುಂಟಾಗಬೇಕು. ನಮ್ಮ ಜನರಲ್ಲಿ ನಮ್ಮ ಹುಡು
ರಲ್ಲಿ ಇದು ನನ್ನ ಊರು, ನನ್ನ ದೇಶ, ನನ್ನ ಭಾಷೆ, ನನ್ನ ಜನ ಎಂಬ ಅಭಿಮಾನವು
ಮೊದಲು ಬರಬೇಕು. 'ನಾನು, ನನ್ನದು' ಎಂಬಿವು ಕೆಟ್ಟುದು ಎಂಬ ಬೇಧಾ
ತವು ನಮಗಾಗಲೇ ಸಾಕಾದಷ್ಟು ಕೆಡುಕನ್ನುಂಟು ಮಾಡಿದೆ; ನಮ್ಮ ಮನೆಯನ್ನು
ಸಾಕಾದಷ್ಟು ದೋಚಿಸಿದೆ. ಈಗ ನಮಗೆ ಬೇಕಾಗಿರುವದು ವಸ್ತು ಪರಿಸ್ಥಿತಿಯ
ತಿಳುವಳಿಕೆ. ಅದು ಉಂಟಾಗಬೇಕಾದರೆ ಇತಿಹಾಸವೊಂದರಿಂದಲೇ. ಈ ಕಾ
ದಿಂದಲೆ ನಮ್ಮ ಹಿರಿಯರು, ಅರಿತವರುಕೆಲವರು ಕರ್ನಾಟಕದ ಇತಿಹಾಸವ
ಬರೆಯಬೇಕೆಂದು ಪ್ರಣತಿಸುತ್ತಿರುವರು.

೧೯೩೭ನೆಯ ಇಸ್ವಿಯ ಎಪ್ರಿಲ ತಿಂಗಳಿನಲ್ಲಿ ಆದ ಕನ್ನಡ ಗಂಡುಮಕ್ಕಳ ಟ್ರೇನಿಂಗ ಸ್ಕೂಲ ಧಾರವಾಡ ಇಲ್ಲಿಯ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮವು

ನಂ.	ಹೆಸರು.	ಒಟ್ಟು ಗುಣಗಳು ೧೪೦೦ ರಲ್ಲಿ
	ಮೂರನೆಯ ವರ್ಗ	
	ಗಂಗಯ್ಯ ಚನಬಸಯ್ಯ ಮಠದ	೯೧೪
	ಹನಮಂತ ಗೋವಿಂದ ಕಟ್ಟಿ	೯೧೬
	ಕಲ್ಲಪ್ಪ ದೇಮಪ್ಪ ಬೆಂಗೇರಿ	೯೪೬
	ಸೋಮಪ್ಪ ಎಲ್ಲಪ್ಪ ಕಮಡೊಳ್ಳಿ	೪೭೫
	ಮಾರ್ತಂಡ ತ್ರಿಯಂಬಕ ಕುಲಕರ್ಣಿ	೪೫೦
	ರಾಚಯ್ಯ ಮುದಕಯ್ಯ ವಸ್ತ್ರದ	೪೪೦
	ಶಿವನಗೌಡ ಸಕ್ರಗೌಡ ಪಾಟೀಲ	೨೪೬
	ಯಾವುದಖಾನ ಅಹ್ಮದಖಾನ ಪಠಾಣ	೨೪೬
	ಬಿದ್ದಪ್ಪ ಮಲ್ಲಪ್ಪ ಕಟ್ಟಿಮನಿ	೬೬೩
	ಕಮಣಾಚಾರ್ಯ ಪಾದಿರಾಜಾಚಾರ್ಯ ಕಟ್ಟಿ	೬೩೦

	ಹೆಸರು.	ಒಟ್ಟು ಗುಣಗಳು ೧೩೦೦ ರಲ್ಲಿ
	೨ನೆಯ ವರ್ಗ	
	ಭೀಮಸಿಂಗ ಮೋಹನಸಿಂಗ ರಜಪೂತ	೪೩೬
	ಸೇವಜಿ ಗೋವಿಂದ ಜೋಶಿ	೪೩೦
	ಬಸವಣ್ಣೆಪ್ಪ ಶಿವಪ್ಪ ಶಿವಸಿಂಪಿಗೇರ	೨೮೫
	ಹನಮಂತ ರಾಮಚಂದ್ರ ಕುಲಕರ್ಣಿ	೨೮೨

ಅ. ನಂ.	ಹೆಸರು.
೫	ವೀರಪ್ಪ ಬಸವಣ್ಣೆಪ್ಪ ಭದ್ರಣ್ಣನವರ
೬	ಬಲರಾಮ ಸುಬಣಾಚಾರ್ಯ ಹುನ್ನೂರ
೭	ಲಿಂಗನಗೌಡ ಹಿರೇಗೌಡ ಹಿರೇಗೌಡರ
೮	ಬಸಪ್ಪ ಸಂಗಪ್ಪ ಸರೂರ
೯	ಗೋವಿಂದ ಹನಮಂತ ತಳವಾರ
೧೦	ಆದಪ್ಪ ರುದ್ರಪ್ಪ ಎರಗುಂಟಿ
೧೧	ತಿಮ್ಮಪ್ಪ ಹನಮಪ್ಪ ಚನಲಿ
೧೨	ನರಸಿಂಹ ಭೀಮರಾವ ಹುದ್ದಾರ
೧೩	ಸಂಗಯ್ಯಾ ಶಿವರುದ್ರಯ್ಯಾ ಬನ್ನಿಗೋಳಮಠ
೧೪	ಗೌಸುಸಾಬ ಖಾದರಸಾಬ ಮುಲ್ಲಾನವರ
೧೫	ರೇವಣಶಿದ್ಧಯ್ಯ ಮಡಿವಾಳಯ್ಯ ಮಠದ
೧೬	ಶಿವಬಸಪ್ಪ ವೀರಪ್ಪ ಪಟ್ಟಿಣಶೆಟ್ಟಿ
೧೭	ಲಕ್ಷ್ಮಣ ಬಿಂದಾಚಾರ್ಯ ವರಾಹಮೂರ್ತಿ.
೧೮	ರಾಮಚಂದ್ರ ಕರಬಸಪ್ಪ ಘೋಡಕೆ
೧೯	ಅನಂತ ವೆಂಕಟೇಶ ಕಾಂತನವರ
೨೦	ಚಾಂದಸಾಬ ಮಗ್ತುಂಹುಶೇನಸಾಬ ಪಕಾಲಿ

೧ನೆಯ ವರ್ಷ

ಅ. ನಂ.	ಹೆಸರು.
೧	ಮಲ್ಲಾರ ಜಿದಂಬರ ಪುರಂಧ್ರೆ
೨	ಶಂಕ್ರೆಪ್ಪ ಬಸಪ್ಪ ಹಿರೇದೇಸಾಯಿ
೩	ಮಲ್ಲಪ್ಪ ಗೋವಿಂದಪ್ಪ ಸಿಡಗನಾಳ
೪	ಗಣೇಶ ಮಹಾಬಳೇಶ್ವರ ಭಟ
೫	ಚನ್ನಪ್ಪ ಬಸಲಿಂಗಪ್ಪ ಪಾವಟಿ
೬	ನಿಂಗಪ್ಪ ಮುದಕಪ್ಪ ಬಡಿಗೇರ
೭	ಸಿದ್ರಾಮಪ್ಪ ಬಸಪ್ಪ ಅಂಗಡಿ

ಹೆಸರು.	ಒಟ್ಟು ಗುಣಗಳು ೧೫೦೦ ರಲ್ಲಿ
ಗುತ್ತಿಬಸಪ್ಪ ತಮ್ಮಣ್ಣಪ್ಪ ಸಜ್ಜನ	೨೫೬
ಭರಣಪ್ಪ ವದ್ಯಪ್ಪ ಜವಳಿ	೨೫೪
ಹುಲಗಪ್ಪ ಬಸವಂತಪ್ಪ ಮಲ್ಲಿಗವಾಡ	೨೫೦
ಹಣಮಂತ ಎಲ್ಲಪ್ಪ ತಳವಾರ	೨೪೮
ನಾಂಭಟ್ಟ ಗಣೇಶಭಟ್ಟ ಸೂಗೂರ	೨೪೭
ಕೃಷ್ಣಾಜಿ ಶ್ರೀನಿವಾಸ ಕಾಟೋಟಿ	೨೪೬
ಮಹಾರುದ್ರಪ್ಪ ಕರಬಸಪ್ಪ ಹರದಗಟ್ಟಿ	೨೪೫
ರಾಮಚಂದ್ರ ವಿಷ್ಣು ಜೋಸಿ	೨೪೯
ವೆಂಕಟೇಶ ಬಲಭೀಮ ನಾಡಗೌಡ	೨೪೯
ನಾಗಯ್ಯ ಉಳವಯ್ಯ ಮಠದ	೨೪೮
ರಾಯಪ್ಪ ದೇವೇಂದ್ರಪ್ಪ ಅಂಗಡಿ	೨೪೫
ನರಸಿಂಹ ಜೀವಾಜಿ ಹಲಗತ್ತಿ	೨೪೪
ಗವಿಸಿದ್ದಯ್ಯ ಶರಭಯ್ಯ ವಸ್ತ್ರದ	೨೪೦
ಲಕ್ಷ್ಮಣ ರಾಮಪ್ಪ ಜಿಗಳೂರ	೨೩೩
ಕಾಸಿಮಬೇಗ ಬುಡನಬೇಗ ಜಮಾದಾರ	೨೩೧
ಸಿದ್ದಪ್ಪ ಹಂಪಣ್ಣ ಪಾಗಿ	೨೧೪
ಶರಭಯ್ಯ ಅಂದಾನೆಯ್ಯ ಕೋಡಿಕೊಪ್ಪಮಠ	೨೦೯
ಫಕರುಸಾಬ ಕಾಶಿಮಸಾಬ ಬಡಖಾನನವರ	೧೯೯
ಬಳವಂತ ಬಾಬಾಜಿ ಧಾವರೆ	೧೯೯
ನಂಗಪ್ಪ ಸಿವಪ್ಪ ನಾಗನೂರ	೧೯೪
ಎಲ್ಲಪ್ಪ ಭೀಮಪ್ಪ ಕುಸೂಗಲ್	೧೯೬
ಕಳಕಯ್ಯ ಅಂದಾನೆಯ್ಯ ಉಮಚಿಗಿಮಠ	೧೯೪
ರಾಮಪ್ಪ ಬಸಪ್ಪ ಹಲವಾಲ	೧೯೪
ವೆಂಕಟೇಶ ಶ್ರೀಪಾದ ಕುಲಕರ್ಣಿ	೧೯೨
ವಾಮನ ದಾಸಾಚಾರ್ಯ ಕರ್ಜಗಿ	೧೯೦
ಕೃಷ್ಣಪ್ಪ ವೆಂಕಪ್ಪ ಭಡಕಲ್	೧೮೬
ಮುದಕಪ್ಪ ಫಕೀರಪ್ಪ ಹಂಚಿನಾಳ	೧೭೮
ಫಕೀರಸಾ ನವಾಸಾ ಕಾಜಿ	೧೭೫

.....

ಅ. ನಂ. ಹೆಸರು.

೩೫ ಶಿವರುದ್ರಯ್ಯ ಬಸಲಿಂಗಯ್ಯ ಹಿರೇಮಠ
೩೭ ಗಂಗಯ್ಯ ಶಿವಲಿಂಗಯ್ಯ ತುರಮುರಿಮಠ
೩೮ ಎಲಗುರ್ದ ಬಳವಂತ ಕುಲಕರ್ಣಿ
೩೯ ಶಿವಲಾಲ ನರಸಿಂಗ ರಜಪೂತ
೪೦ ಕೃಷ್ಣ ಮಹಾಬಳೇಶ್ವರ ಭಟ
೪೧ ರಂಗಪ್ಪ ಶಿವನಪ್ಪ ಪೂಜಾರ
೪೧ ಬಾಬು ರಾಮಚಂದ್ರ ಗೋಕ
೪೩ ಸಾಮುವೇಲ ಸಿದ್ಧಲಿಂಗಪ್ಪ ಕೊಂಪಿ
೪೪ ಅಣ್ಣಾಜಿ ರಾಮಚಂದ್ರ ಕುಲಕರ್ಣಿ
೪೫ ಭೀಮಪ್ಪ ಬಸಪ್ಪ ಯೆಂಕಟಿ
೪೫ ಚಂದ್ರಶೇಖರ ವೀರಪ್ಪ ಕುಂಬಾರ
೪೭ ಶಿವಪ್ಪ ಸೋಮಪ್ಪ ಸವದತ್ತಿ
೪೭ ಯಲ್ಲಪ್ಪ ಬಸಪ್ಪ ಮಾಡಲಗೇರಿ
೪೯ ಹುಸೇನಸಾಬ ಇಮಾಮಸಾಬ ಪಿಂಜಾರ
೫೦ ಶಿವಯೋಗಯ್ಯ ವೀರಯ್ಯ ಹಿರೇಮಠ
೫೧ ಯಲ್ಲಪ್ಪ ಸಣ್ಣಪ್ಪ ಗೊಂದಲಗೇರ
೫೩ ಮಲ್ಲಪ್ಪ ಭೀಮಪ್ಪ ಆನೂರಿ
೫೩ ನಾರಾಯಣ ಬಾಬಾಭಟ್ಟ ಜೋಶಿ
೫೪ ಹನಮಂತ ದುರಗವ್ವ ಚಲವಾದಿ
೫೫ ಭೀಮಾಜಿ ಶಂಕರ ಕುಲಕರ್ಣಿ
೫೬ ಯಲ್ಲಪ್ಪ ವೆಂಕಪ್ಪ ಹಟ್ಟಿ
೫೭ ಚಾಯಪ್ಪ ಯೆಲ್ಲಪ್ಪ ಶಿರಸಾಡ

ಹೊರಗಿನಿಂದ ಕುಳಿತವರು

೧ ಪೂರ್ಣಪ್ಪ ಫಕೀರಪ್ಪ ಎಲೆಸೂರ
೨ ನಾರಾಯಣ ವೆಂಕಟೇಶ ಚಿಂತಾಮಣಿ

೧೯೩೬ನೇ ಇಸ್ವಿಯ ಎಪ್ರಿಲ ತಿಂಗಳಿನಲ್ಲಾದ ಧಾರವಾಡ ಗಂ. ಮುಕ್ಕಳ ಟ್ರೇನಿಂಗ ಸ್ಕೂಲಿನ ವಾರ್ಷಿಕ ಪರೀಕ್ಷೆಯಲ್ಲಿ ಇನಾಮು ಹೊಂದಿದ ವಿದ್ಯಾರ್ಥಿಗಳ ಹೆಸರುಗಳು

ನಂ.	ಹೆಸರು.	ವಿವರ.
	೩ನೆಯ ವರ್ಷ	
	ಗಂಗಯ್ಯ ಚೆನಬಸಯ್ಯ ಮಠದ	ಜ್ಯಾಟ ಫೀಲ್ಡ ಮೆಮೋರಿಯಲ್ ಪ್ರಾಯಿಝು (ಜನರಲ್ ಪ್ರೊಫಿಸಿಯನ್ಸಿ) ೧೬-೦-೦
	ಕಲ್ಲಪ್ಪ ದೇವಪ್ಪ ಬೆಂಗೇರಿ	ಜಾಯಿಲ್ಸ ಪ್ರಾಯಿಝು (ಶಿಕ್ಷಣ) ೧೬-೮-೦
	ಹನಮಂತ ಗೋವಿಂದ ಕಟ್ಟಿ	ಜನರಲ್ ಪ್ರಾಯಿಝು (ಕನ್ನಡ) ೧೨-೦-೦
	೨ನೆಯ ವರ್ಷ	
	ಭೀಮಸಿಂಗ ಮೋಹನಸಿಂಗ ರಜಪೂತ	ಸರ ಜೇಮ್ಸ ಮಾಂಟಿಥ್ ಪ್ರಾಯಿಜ (ಜನರಲ್ ಪ್ರೊಫೀಸಿಯೆನ್ಸಿ) ೧೫-೦-೦
	ದೇವಜಿ ಗೋವಿಂದ ಜೋಶಿ	ಸರ ಜೇಮ್ಸ ಮಾಂಟಿಥ್ ಪ್ರಾಯಿಝು (ಶಿಕ್ಷಣ) ೧೩-೦-೦
	೧ನೆಯ ವರ್ಷ	
	ಮಲ್ಲಾರ ಚಿದಂಬರ ಪುರಂದರೆ	ಜನರಲ್ ಪ್ರಾಯಿಜ (ಜನರಲ್ ಪ್ರೊಫೀಸಿಯೆನ್ಸಿ) ೧೨-೦-೦
	ವೆಂಕಟೇಶ ಬಲಭೀಮ ನಾಡಗೌಡ	(ಶಿಕ್ಷಣ) ೧೨-೦-೦

೧೯೩೬ನೇ ಇಸ್ವಿಯ ಮಾರ್ಚ ತಿಂಗಳ ೧ನೆಯ ತಾರೀಖಿನಲ್ಲಾದ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿನಿಯರ ಹೆಸರುಗಳು

ನಂ.	ವಿದ್ಯಾರ್ಥಿನಿಯರ ಹೆಸರು	ಪಡೆದ ಗುಣಗಳು
	ಧಾರವಾಡ ಸೆಂಟರ	
	ಕನ್ನಡ	
	ಗೌರವ್ವ ಸಿದ್ರಾಮಯ್ಯ ಪಾಟೀಲ	೪೭೩
	ಸಾಬಕ್ಕ ಲಿಂಗಪ್ಪ ಕುಲಕರ್ಣಿ	೪೧೪

೩ ಮೃತ್ಯುದೇವಿ ನಾಗಪ್ಪ ಕುರುಬರ
೪ ಹನುಮವ್ವ ಮರಿಯಪ್ಪ ಯಾವನವಾಡ
೫ ಸಣ್ಣಕ್ಕ ಶೇಷಗಿರಿರಾವ ಭುಜಂಗ
೬ ಹನಮವ್ವ ಫಕೀರಪ್ಪ ಶಿವವ್ವನವರ
೭ ನೀಲು ಶಿವರುದ್ರಪ್ಪ ಮಣ್ಣಿಗಟ್ಟಿ
೮ ಭಾಗೀರಥಿ ಬುದ್ಧಯ್ಯಸ್ವಾಮಿ ಪುರಾಣಿಕ
೯ ಗಂಗಾ ಯಲ್ಲಪ್ಪಗೌಡ ಪಾಟೀಲ
೧೦ ಸರಸ್ವತಿ ರಾಮಚಂದ್ರ ಕುಲಕರ್ಣಿ
೧೧ ಗಿರಿಜವ್ವ ಚನಬಸಪ್ಪ ನಾರಜ್ಜಿ
೧೨ ಮಥುರಾಬಾಯಿ ರಾಮಚಂದ್ರ ಪಾಟೀಲ
೧೩ ದಮಯಂತಿ ಭೀಮರಾವ ದೇಶಪಾಂಡೆ
೧೪ ಹುಚ್ಚವ್ವ ನಿಂಗಪ್ಪ ಕರ್ಜಣ್ಣವರ
೧೫ ಸೀತಾಬಾಯಿ ರಾಮಾ ಲಿಂಗದಕೋನ
೧೬ ಸರಸ್ವತಿ ರಾಮಚಂದ್ರ ಪೂಜಾರ

ಮರಾಠಿ

೧ ಸೀತಾಬಾಯಿ ರಾಮಚಂದ್ರರಾವ ಪೌಸ್ಕರ

ಹುಬ್ಬಳ್ಳಿ ಸೆಂಟರ

ಕನ್ನಡ

೧ ಅಣ್ಣವ್ವ ಜೀವಪ್ಪ ಉಜ್ಜೋಜಿ
೨ ಗ್ರೇಸಾ ದೇವಪುತ್ರಪ್ಪ ನಿರಂಜನ
೩ ಸರ್ವಮಂಗಳಾ ಚನವೀರಪ್ಪ ಮುಂಡಾಸದ
೪ ಯಲ್ಲವ್ವ ಪೀರಾಜಪ್ಪ ಗಜೇಂದ್ರಗಡ
೫ ದೈನಾಬಾಯಿ ಸದಾನಂದಪ್ಪ ರೋಣದ
೬ ಇಂದಿರಾ ರಾಜೀವಪ್ಪ ಲದ್ವಾ
೭ ಚಿನ್ನಮ್ಮಾ ರತ್ನಪ್ಪ ಮಣಿಕಟ್ಟಿ
೮ ಸಾವಿತ್ರಿಬಾಯಿ ಬಸಪ್ಪ ಮಣಕವಾಡ
೯ ಸುಂದರಾ ಕೃಷ್ಣರಾವ ಹುಲಸೋಗಿ
೧೦ ರೂಥಮ್ಮಾ ಗುರುಪಾದಪ್ಪ ಪ್ರಭಾಕರ
೧೧ ಗ್ರೇಸಾ ಗುರುಪುತ್ರಪ್ಪ ಸದರಿ

೧೨	ಯೆಸ್ಕೊರಾ ಸಾಮುವೇಲಪ್ಪ ನಡುಕಟ್ಟಿನ	೩೨೭
೧೩	ಹೆಗ್ಗನ್ನ ಹನುಮಂತಪ್ಪ ದೀವಟಿಗಿ	೩೨೦
೧೪	ಸುಂದ್ರಾಬಾಯಿ ವಾಸುದೇವ ಪ್ರಥಮಶಿಷ್ಟ	೩೧೨
೧೫	ಲಕ್ಷ್ಮವ್ವ ಯಲ್ಲಪ್ಪ ಗಿರ್ಣಿವಡ್ಡರು	೩೧೧
೧೬	ಗುರುಸಿದ್ದವ್ವ ಬಸಲಿಂಗಪ್ಪ ಹೊಸಕೋಟಿ	೩೦೪
೧೭	ಮುಲ್ಲವ್ವ ಸತ್ಯಪ್ಪ ಗೌಡರ	೩೦೩
೧೮	ಕಮಲಾಬಾಯಿ ನಾರಾಯಣ ದೀಕ್ಷಿತ	೩೦೨
೧೯	ಶಕುಂತಲಾ ನಿಜಗುಣಪ್ಪ ಬನ್ನಾ	೨೯೦
೨೦	ಗ್ರೇಸಮ್ಮಾ ದಾಸಪ್ಪ ತಾಯತುಸ್	೨೮೬
೨೧	ಪುಷ್ಪಾವತಿ ಸಾಮುವೇಲಪ್ಪ ಪಟ್ಟಿ	೨೮೩
೨೨	ಉಮಾಬಾಯಿ ಬಳವಂತರಾವ ನಾಡಗೀರ	೨೮೦
೨೩	ವಿಶ್ರಾಂತಿ ಜಾನಪ್ಪ ಮುರನಾಳ	೨೭೭

ಮರಾಠಿ

೧	ಗಂಗೂಬಾಯಿ ಕೃಷ್ಣ ಬಾಪಟ	೩೪೪

ಉರ್ದು

೧	ಹಜರಾಬಿ ಜಮಾಲುದ್ದೀನಸಾಹೇಬ ನಾಸೀಪುಡಿ	೩೬೩
೨	ಅಹ್ಮದಬಿ ಮುಹೈಯುದ್ದೀನಸಾಹೇಬ ಮುಲ್ಲಾ	೩೦೬

ಗದಗ ಸೆಂಟರ

ಕನ್ನಡ

೧	ಚಂದ್ರಾಬಾಯಿ ಹನಮಂತಪ್ಪ ಕಟ್ಟೀಮನಿ	೩೯೬
೨	ಯಶೋಧಾ ಆನಂದಪ್ಪ ಕುಂದರಿಗಿ	೩೯೦
೩	ಗಂಗವ್ವಾ ವಿರೂಪಾಕ್ಷಪ್ಪ ಹಿರೇಮಠ	೩೭೪
೪	ವೀರವ್ವ ವೀರಬಸಯ್ಯ ಸಾಲೀಮಠ	೩೬೯
೫	ಸರೋಜಿನಿ ಶಂಕರರಾವ ಕುರ್ತಕೋಟಿ	೩೬೭
೬	ಚಂದವ್ವ ಶಿವಪ್ಪ ಅರಳಿ	೩೫೨
೭	ವೀರವ್ವ ಕೊಟ್ರಪ್ಪ ಹುಬ್ಬಳ್ಳಿ	೩೪೫
೮	ಗುರುಬಸವ್ವ ಸಂಕಪ್ಪ ಹಾನೇರಿ	೩೪೨
೯	ಬಸವಣ್ಣೆವ್ವ ಹನುಮಂತಪ್ಪ ಪೂಜಾರ	೩೪೧
೧೦	ಜೀವರತ್ನಾ ತಿಮ್ಮೋಟಿಪ್ಪ ಸವ್ವಾಸೇರ	೩೪೧

೯ ಕೃಪಾ ದಾವಿದಪ್ಪ ಬಸೂತ್ಕರ
೧೨ ಕಮಲಾಬಾಯಿ ದೇವನಸಾ ಬಸ್ಪ
೧೩ ಚಂಪಾ ಭೀಮರಾವ ಕುಲಕರ್ಣಿ
೧೪ ಕಮಲಾಬಾಯಿ ಅಣ್ಣಪ್ಪ ಅರವಟಗಿ
೧೫ ತಾಯವ್ವಾ ರಾಯಪ್ಪ ಹಿರೇಕುಮ್ಮಿ
೧೬ ಕುಸುಮಾವತಿ ಭೀಮರಾವ ಪಾಟೀಲ
೧೭ ಚನಬಸವ್ವ ಶಾಂತಲಿಂಗಸ್ವಾಮಿ ಅರಳೀಮಠ
೧೮ ಎಸ್ ಆಂತೋನಪ್ಪ ಲಾದ್ರಿಕ್
೧೯ ಶಕುಂತಲಾ ಸುಪುತ್ರಪ್ಪ ಉಳ್ಳಾಗಡ್ಡಿ
೨೦ ಪಾರ್ವತಿಬಾಯಿ ಹನುಮಂತಪ್ಪ ವೈಕುಂಠ
೨೧ ಫಕ್ಕೀರವ್ವ ಚನ್ನಪ್ಪ ಬೆಳವಿಗಿ
೨೨ ಪುಣವಂತಿ ಶಾಂತಪ್ಪ ಗೌಡ್ರ
೨೩ ಲೂಯಿಸ್ ಸಾಮುವೇಲಪ್ಪ ಖಾನಾಪೂರ
೨೪ ಪಾರ್ವತೆವ್ವ ಲಿಂಗಪ್ಪ ಗಡ್ಡಿ
೨೫ ದೇವಕೀಬಾಯಿ ವೀರಪ್ಪ ಮುಳಗಿ
೨೬ ತಾರಾ ಓಂಕಾರಪ್ಪ ಬೋಗಾರ್ಯಾಯಿ

ಬೆಳಗಾವ ಸೆಂಟರ

ಕನ್ನಡ

೧ ಶಾಂತಾಬಾಯಿ ಶ್ರೀನಿವಾಸ ಕೊಕಟನೂರ
೨ ಕೆಂಪವ್ವ ತಿಪ್ಪಣ್ಣ ಸುಣಗಾರ
೩ ಪದ್ಮಾವತಿ ನಾರಾಯಣರಾವ ಭಸ್ಮೆ
೪ ಅನ್ನಪೂರ್ಣಾಬಾಯಿ ಪರಪ್ಪ ಹಂಡಿಗುಂದ
೫ ಗೌರವ್ವ ನಿಂಗಪ್ಪ ಗೋಟಡಕಿ
೬ ಸುಶೀಲಾ ವೀರನಗೌಡಾ ಪಾಟೀಲ
೭ ಕಮಲಾ ಧರಿಪ್ಪ ಪದ್ಮಣ್ಣನವರ
೮ ಯಮುನಾಬಾಯಿ ರಾಮರಾವ ದೇಶಪಾಂಡೆ
೯ ಚಂದ್ರಕಾಂತ ಬಾಳಪ್ಪ ಖೇಮಲಾಪೂರ
೧೦ ಗಂಗವ್ವಾ ಮಹದೇವಪ್ಪ ಅರಳೀಕಟ್ಟಿ
೧೧ ಕೃಷ್ಣಾಬಾಯಿ ವಿಶ್ವಂಭರಭಟ್ಟ ತೇರದಾಳ

೧೨	ವಿಠಾಬಾಯಿ ದತ್ತಾತ್ರಯ ಭಾವೆ	೩೩೧
೧೩	ಪಾಲಿನಾ ಬಾವಾಜ ಮೋಂಜೆಸ್	೩೧೭
೧೪	ಸುಶೀಲಾಬಾಯಿ ತಾತಪ್ಪ ಪತ್ರಾವಳಿ	೩೦೯
೧೫	ಶ್ರೀಮಂತೀಬಾಯಿ ಸತ್ಯು ಭವಾನಿ	೩೦೬
೧೬	ಬಸವ್ವಾ ಬಸಪ್ಪ ಕಡಬಿ	೩೦೬
೧೭	ಶಾಂತಾಬಾಯಿ ಶಂಕರಪ್ಪ ಬಾಗಲಕೋಟಿ	೩೦೪
೧೮	ಸರಸ್ವತಿ ನಾರಾಯಣ ಹೆಗಡೆ	೨೯೮
೧೯	ಕಾಶೀಬಾಯಿ ಸಿದ್ದರಾಯಪ್ಪ ಕಬಾಡ್ಗಿ	೨೮೨

ಮರಾಠಿ

೧	ಸುಶೀಲಾ ಬಿಹಾರಿಲಾಲ ಕ್ಷತ್ರಿಯ	೩೮೪
೨	ಇಂದು ದಾಮೋದರ ಕುಲಕರ್ಣಿ	೩೬೯
೩	ಸೋನುತಾಯಿ ದತ್ತಾತ್ರ್ಯ ಗೋಖಲೆ	೩೫೫
೪	ಪತ್ಸಲಾ ನಾರಾಯಣ ಆಪ್ಟೆ	೩೫೩
೫	ಸಖುತಾಯಿ ಲಕ್ಷ್ಮಣರಾವ ಅರಾವಕರ	೩೪೪
೬	ಇಂದುತಾಯಿ ವಿನಾಯಕ ಘಾರಪುರೆ	೩೪೧
೭	ಸಂಗವ್ವಾ ಗುರುಸಿದ್ದಪ್ಪ ಗಡಕರಿ	೩೩೩
೮	ಲಲಿತಾ ಬಾಳಕೃಷ್ಣ ಜೋಸಿ	೩೨೬
೯	ಪತ್ಸಲಾ ಹನಮಂತರಾವ ಮಾಲ್‌ವಡೆ	೩೧೬
೧೦	ಮನೋರಮಾ ವಿಠ್ಠಲರಾವ ತಿರೋಳಕರ	೨೯೭
೧೧	ಲೀಲಾವತಿ ನಿವೃತ್ತಿ ಪುರಾಣಿಕ	೨೮೮

ಉರ್ದು

೧	ಶೋಹರಾಬಿ ನಾಯ್ಕುರಬೇಗ ಸೌದಾಗರ	೩೩೮
೨	ಜೈಬುನ್ನೀಸಾ ಪಸ್ಮಗೀರಸಾಹೇಬ ಮುಲ್ಲಾ	೩೨೦

ವಿಜಾಪೂರ ಸೆಂಟರ

ಕನ್ನಡ

೧	ಪುರಿಯವ್ವ ಚಿನ್ನಪ್ಪ ಬೆಟ್ಟಿಗೇರಿ	೪೦೩
೨	ಗಂಗವ್ವ ಮುರಿಗೆಪ್ಪ ಬನ್ನಿ	೩೮೯
೩	ದುಂಡವ್ವ ರಾಚಯ್ಯ ಕಂಬೂರ	೩೮೫
೪	ಅಕ್ಕುಬಾಯಿ ರಂಗೋ ಕುಲಕರ್ಣಿ	೩೬೭

೫ ಕಮಲಾಕ್ಷಿ ಸಾಮುವೇಲಪ್ಪ ಕೊನಿಸಾಗರ
೬ ಶರಣವ್ವಾ ಶಿವಬಸಪ್ಪ ಶೆಟ್ಟಾರ
೭ ಅಗ್ನೆಸ್ ಫ್ರಾನ್ಸಿಸ್ ಡಿಸಿಲ್ವಾ
೮ ಲಿಂಗವ್ವ ಸಿದ್ರಾಮಪ್ಪ ಬೀವನೂರ
೯ ಬಾಲಬಿ ಹಟೀಲಸಾ ಬೀಳಗಿ
೧೦ ನಾಗವ್ವ ಸಿದ್ದಪ್ಪ ಚಿತ್ತವಾಡಿಗಿ
೧೧ ಕಾಸವ್ವಾ ರುಕ್ಕಪ್ಪ ಬಡಿಗೇರ
೧೨ ಪಾರ್ವತೆವ್ವಾ ಕಳಗೊಂಡಪ್ಪಾ೦ತರಗೊಂಡ
೧೩ ಚಂದ್ರಕಾಂತ ಶಾಂತಪ್ಪಾ ಪ್ರಭಾಕರ
೧೪ ರುಕ್ಮವ್ವ ನಾಗಪ್ಪ ಶಿಂಗದ
೧೫ ನೀಲವ್ವ ಚಂದ್ರಾಮಪ್ಪ ಸಿರಮಗೊಂಡ
೧೬ ಸರಸ್ವತಿಬಾಯಿ ಏಕನಾಥ ಶೆಟ್ಟಿ
೧೭ ಶಾಂತಾ ಭರಮಪ್ಪ ಪೂಜೇರಿ
೧೮ ಮೋರಿ ಅತೋಣಪ್ಪ ಜಂತಲಿ
೧೯ ಹುಶೇನಬಿ ರಾಜೇಸಾ ಫನಳಿಗಿ
೨೦ ಪದ್ಮಾವತಿ ರಾಘವೇಂದ್ರರಾವ ದೇಶಪಾಂಡೆ
೨೧ ಲಕ್ಷ್ಮೀಬಾಯಿ ಶಿವಪ್ಪ ಸಕಲಗಾಂವ

ಮರಾಠಿ

೧ ಮುಮಿತ್ರಾ ಅನ್ಮುತರಾವ ಧಾತೇಶ್ವರ
೨ ವಿಮಲಾತಾಯಿ ಶಂಕರರಾವ ಆಪಟೆ
೩ ಸೋನು ನಾರಾಯಣರಾವ ದಾಣೆ
೪ ಉಮಾಬಾಯಿ ಅನಂತ ದಿಗ್‌ರಾಜಕರ
೫ ಕಮಲಿಬಾಯಿ ಗೋವಿಂದ ಮುಳಗುಂದ
೬ ಸುಂದರಾಬಾಯಿ ವಿಠ್ಠಲರಾವ ನಟವರ್ಧನ
೭ ಶಾಂತಾ ಪರಶುರಾಮ ಅತಲೆ

ಉರ್ದು

೧ ಮುಲಾಹನಬಿ ಅಮೀನಸಾ ಹತ್ತರಕಿಹಾಳ
೨ ರಹಮತಬಿ ಸೈಯದ ಮುಹಮ್ಮದಸಾ ಇನಾಮದಾರ

ಕಾರವಾರ ಸೆಂಟರ

ಕನ್ನಡ

೧	ಮೂಕಾಂಬೆ ರಾಮಕೃಷ್ಣ ಭಟ್ಟ	೩೯೭
೨	ರಮಾಬಾಯಿ ದಾಮೋದರ ಶೇಣವಿ	೩೪೯
೩	ಸರಸ್ವತಿಬಾಯಿ ರಾಮಾ ತಳೇಕರ	೩೪೨
೪	ಇಂದು ಅನಂತ ಭಟ್ಟ	೩೦೬
೫	ಶಾಂತಿ ದೇವಿ	೨೭೩

ಮರಾಠಿ

೧	ಗಂಗಾ ಪುರುಷೋತ್ತಮ ವಜಂತ್ರಿ	೩೬೨
೨	ಅಂಜನೀ ಪುಂಡಲೀಕ ಶಾನಭಾಗ	೩೪೩
೩	ಶಾಂತಿ ಸದಾಶಿವ ನಾಡಕರ್ಣಿ	೩೩೫
೪	ಸುಮಿತ್ರಾ ದತ್ತಾತ್ರಯ ಸುಖ್ತನಕರ	೩೩೦
೫	ಮೀರಾ ಶಾಂತಾರಾಮ ನಾಗರಕಟ್ಟೆ	೩೨೭
೬	ವಾಸಂತೀ ಕೃಷ್ಣ ದೇವನಳ್ಳಿ	೩೨೪
೭	ಕಾಶೀ ಕೃಷ್ಣ ಕಾಮತ	೩೧೪
೮	ಕಲ್ಯಾಣೀ ಸುಬ್ರಾಯ ಪ್ರಭು	೩೧೩
೯	ಮಿತ್ರಾ ರುದ್ರ ವಾಳೆ	೩೧೨
೧೦	ಶ್ರೀಮಂತೀ ವೆಂಕಟೇಶ ಪ್ರಭು	೩೦೮
೧೧	ಲಲಿತಾ ಶಾಂತಾರಾಮ ಬೋರಕರ	೨೦೭
೧೨	ಮುಕ್ತಾ ನಾರಾಯಣ ಗೋವೆಕರ	೨೯೭
೧೩	ಕೇಶರಾ ಪಾಂಡುರಂಗ ಶೇಟ	೨೯೧
೧೪	ಉಬಾ ಶಾಂತಾರಾಮ ತೆಲಂಗ	೨೭೦

ಉರ್ದು

ಹಾಲಿಮಬಿ ಬುಡನಖಾನ	೩೧೧
ಸಾಫಿಯಾಬಿ ಶೇಖ ಹಾರೂನ್	೨೭೩

ಕೊಲ್ಲಾಪೂರ ಸೆಂಟರ

ಮರಾಠಿ

ಪ್ರಮೀಲಾ ಗಣೇಶ ಖಾಂಡೇಕರ	೩೪೬
ಕುಸುಮಾ ಗೋವಿಂದ ಕುಲಕರ್ಣಿ	೩೪೨

೩ ಕೃಷ್ಣಾಬಾಯಿ ವಿಷ್ಣುಪಂತ ಮುರಾತೆ
೪ ವತ್ಸಲಾ ದಿಗಂಬರ ರಾಮತೀರ್ಥಕರ
೫ ಬಾಳು ತಾಯಿ ಭಾಸ್ಕರರಾವ ಮರೂಳಕರ
೬ ಕುಸುಮ ದತ್ತಾತ್ರಯ ಪ್ರಧಾನ
೭ ಸಾವಿತ್ರಿ ಚಂದೋಬಾ ಹೆರಲೇಕರ
೮ ಶಾಂತಾ ಅನಂತ ಮೂಳಸೆ
೯ ಮಾಣಿಕ ಯಶವಂತ ಜಾಂಬವಾಲಿಕರ
೧೦ ಕೃಷ್ಣಾಬಾಯಿ ಕಾಶೀನಾಥ ಕಾಲೇಕರ
೧೧ ಕಾತ್ಯಾಯಿನಿ ನರಹರ ರಾನಡೆ
೧೨ ಅಂಬು ರಘುನಾಥ ಪಾಟಣಕರ
೧೩ ದಾಕ್ಷಾಯಿಣಿ ನರಹರ ರಾನಡೆ
೧೪ ಚಂಪಾತಾಯಿ ಮಾಧವ ಜೋಸಿ
೧೫ ವತ್ಸಲಾ ಗೋಪಾಳ ಪಂಡಿತರಾವ
೧೬ ಚಂಪಾಬಾಯಿ ರಾಮಾ ಮುರಜೆ
೧೭ ಗಂಗೂ ಬಾಳಕೃಷ್ಣ ಜೋಸಿ
೧೮ ಗಂಗೂ ಶಂಕರ ಸಾತೆ
೧೯ ಶಾಂತಾ ಲಿಂಬಾಜಿ ಗಾಯಕವಾಡ
೨೦ ಅಕ್ಕಾ ತಾಯಿ ಸಖಾರಾಮ ಜವ್ಹಾಣ
೨೧ ಗಂಗೂ ತಾಯಿ ದುಂಡಪ್ಪಾ ಖಟಾವಕರ
೨೨ ರಾಧಾ ಹರಿ ಇಂಗಳೀಕರ
೨೩ ಸಾವಿತ್ರಿ ಲಖೂಜಿ ಆವಳೆ
೨೪ ಅಂಬೂ ಜ್ಞಾನೋಬಾ ನಿಕಾಮ
೨೫ ಅಕ್ಕಾ ತಾಯಿ ಲಕ್ಷ್ಮಣ ಸಂಕಪಾಳ
೨೬ ಕುಸುಮ ದತ್ತಾತ್ರಯ ದೇಶಪಾಂಡೆ
೨೭ ಅನ್ನಪೂರ್ಣಾಬಾಯಿ ಬಂಡೋಪಂತ ಪೋತದಾರ
೨೮ ವಿದ್ಯಾದೇವಿ ಚಂದೂಲಾಲ ಗುಜರ
೨೯ ಸುಭದ್ರಾ ರಾಮಚಂದ್ರ ಮುಥಾನೆ
೩೦ ಲೀಲಾವತಿ ಚಿಂತಾಮಣ ಮುರಾತೆ
೩೧ ಶಾಂತಾ ವಾಮನ ದಾಂಡೇಕರ
೩೨ ಅಂಬೂ ತಾಯಿ ಕೃಷ್ಣರಾವ ಪಂಡಿತ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬ | ಜೂನ ೧೯೩೭ | ವರ್ಷ ೯ ಸಂ. ೩

ನಮ್ಮ ಪ್ರಿಯ ಚಕ್ರವರ್ತಿಗಳಾದ
ಆರನೆಯ ಜಾರ್ಜ ಬಾದಶಹರವರ
ರಾಜ್ಯಾರೋಹಣ ಸಮಾರಂಭವು

೧. ಬ್ರಿಟಿಶ ಸಾಮ್ರಾಜ್ಯವು ವಿಸ್ತಾರದಿಂದಲೂ ವೈಭವದಿಂದಲೂ ಜಗತ್ತಿನಲ್ಲಿ ಗಿಲಾದುದೆಂದು ನಿರ್ವಿವಾದವಾಗಿ ಹೇಳಬಹುದು. ಇದು ಏಶಿಯಾಖಂಡದ ರ್ವದಂಡೆಯಿಂದ ಯುರೋಪಖಂಡದ ಪಶ್ಚಿಮ ದಂಡೆಯವರೆಗೆ ಅವಿಚ್ಛಿನ್ನ ಗಿ ಪಸರಿಸಿದ ರಶಿಯದ ಸಾಮ್ರಾಜ್ಯದ ೧೫ ಮಡಿಯಷ್ಟಿದೆಯೆಂದು ಹೇಳ ಹುದು. ಹೀಗೆ ಜಗತ್ತಿನ ಎಲ್ಲ ಭಾಗಗಳಲ್ಲಿ ಪಸರಿಸಿದ ಬ್ರಿಟಿಶ ಸಾಮ್ರಾಜ್ಯದ ಪ್ರಜೆಗಳನ್ನೇರಿದ ನಮ್ಮ ಆರನೆಯ ಜಾರ್ಜ ಚಕ್ರವರ್ತಿಗಳ ಕಿರೀಟಧಾರಣ ಮಹೋ ತ್ಸವವು ಇದೇ ಮೇ ತಿಂಗಳ ೧೨ನೆಯ ತಾರೀಖಿನ ದಿವಸ ಲಂಡನ್ ನಗರದಲ್ಲಿ ಮಹಾ ವಿಜೃಂಭಣೆಯಿಂದ ಜರುಗಿತು. ಅದೇ ದಿವಸ ಬ್ರಿಟಿಶ ಸಾಮ್ರಾಜ್ಯದ ತುಂಬ ಲೂನಗರಗಳಲ್ಲಿ ಈ ಉತ್ಸವವು ನೆರವೇರಿಸಲ್ಪಟ್ಟು ಸಾಮ್ರಾಜ್ಯದ ರಾಜನಿಷ್ಠ ಪ್ರಜೆ ಳನ್ನು ಆನಂದಸಾಗರದಲ್ಲಿ ಓಲಾಡಿಸಿತು. ನಮ್ಮ ಹಿಂದುಸ್ತಾನದಲ್ಲಿಯೂ ಪಟ್ಟಣ ನ್ನಡ ಗ್ರಾಮಗಳೆನ್ನದೆ ಎಲ್ಲೆಡೆಗಳಲ್ಲಿ ಈ ಮಹೋತ್ಸವವು ಉತ್ಸಾಹದಿಂದ ಜರುಗಿ ಯದೀ ಜನರ ರಾಜಭಕ್ತಿಯನ್ನು ಪ್ರಕಾಶಗೊಳಿಸಿತು. ಇಂಗ್ಲಂಡದ ಅರಸರ

ರಾಜ್ಯಾರೋಹಣ ಸಮಾರಂಭವು ಪರಂಪರೆಯಿಂದ ಬಂದ ಕೆಲವು ಕಾರ್ಯಕ್ರಮಗಳನ್ನನುಸರಿಸಿ ನಡೆಯುವದು. ಅದರ ಸಾಮಾನ್ಯ ಸ್ವರೂಪವನ್ನು ಮೊದಲು ಹೇಳಿವೆ. ಇಂಗ್ಲಂಡದ ರಾಜಕುಟುಂಬವು ಜಗತ್ತಿನ ಎಲ್ಲ ದೇಶಗಳ ರಾಜಕುಟುಂಬಗಳಲ್ಲಿ ತೀರ ಪುರಾತನವಾದದ್ದಿರುವಂತೆ ಇಂಗ್ಲಂಡದ ರಾಜ್ಯಾಭಿಷೇಕಸಮಾರಂಭ ಪದ್ಧತಿಯೂ ಕೂಡ ಪ್ರಾಚೀನ ಪರಂಪರಾ ಪ್ರಾಪ್ತವಾದ ಒಂದು ವಿಶಿಷ್ಟ ಸ್ವರೂಪದ್ದಾಗಿದೆ ಈ ಪದ್ಧತಿಯಲ್ಲಿ ೫ ಕಾರ್ಯವಿಭಾಗಗಳಿವೆ.

೧. ಇಂಥವರೇ ರಾಜರೆಂದು ನಿರ್ಣಯಿಸಿ ಮೊದಲು ಪ್ರಸಿದ್ಧಪಡಿಸುವದು.

೨. ಸಿಂಹಾಸನಾರೋಹಣಸಮಯದಲ್ಲಿ ಪವಿತ್ರ ತೈಲವನ್ನು ರಾಜನಿಗೆ ಚಿಮುಕಿಸುವದು.

೩. ರಾಜರ ಶಪಥವಿಧಿ.

೪. ರಾಜಮುಕುಟ ಧಾರಣ.

೫. ಸರದಾರರು ಮೊದಲಾದ ಪ್ರಮುಖರು ರಾಜನಿಷ್ಠೆಯ ಬಗ್ಗೆ ಮಾಡುವದು.

ಮೊನ್ನಿನ ರಾಜ್ಯಾಭಿಷೇಕಸಮಾರಂಭವು ಈಕ್ರಮದಿಂದಲೇ ಜರುಗಿತು.

(೧) ನಮ್ಮ ಆರನೆಯ ಜಾರ್ಜ ಪ್ರಭುಗಳು ರಾಜರಾಗಬೇಕೆಂದು ನಿರ್ಣಯಿಸಿ ಕಳೆದ ಡಿಸೆಂಬರ ತಿಂಗಳಿನಲ್ಲಿಯೇ ರೇಡಿಯೋದ ಸಹಾಯದಿಂದ ಜಗತ್ತಿನಲ್ಲೆಲ್ಲ ಪ್ರಕಟಿಸಲ್ಪಟ್ಟಿತು.

(೨) ಪೌರ್ವಾತ್ಯರು ರಾಜನು ವಿಷ್ಣುವಿನ ಅಂಶವೆಂದು ತಿಳಿದು ಸಮುದ್ರ ಪವಿತ್ರಜಲದಿಂದಲೂ ಮಹೌಷಧಿರಸಗಳಿಂದಲೂ ಅಭಿಷೇಕ ಮಾಡಿಸುವಂತೆ ಹಾಗೆಯೇ ಪಾಶ್ಚಾತ್ಯರು ರಾಜನು ಪ್ರಜೆಗಳ ಆತ್ಮವೆಂದೂ ರಾಷ್ಟ್ರದ ಬಲವೆಂದೂ ಎಂದಿನಿಂದಲೂ ತಿಳಿದಿದ್ದಾರೆ. ಈ ರೀತಿಯಾಗಿ ರಾಜನ ಪವಿತ್ರತ್ವದ ನಿದರ್ಶನಕ್ಕಾಗಿ ಪವಿತ್ರತೈಲಸೇಚನವಿಧಿಯು ರಾಜ್ಯಾಭಿಷೇಕಸಮಾರಂಭದ ಮಹತ್ವದ ಕಾರ್ಯವಿಭಾಗಗಳಲ್ಲಿ ಒಂದಾಗಿದೆ.

(೩) ಪ್ರಜೆಗಳೆಲ್ಲ ವಿಶ್ವಾಸದಿಂದ ತಮ್ಮ ರಾಜನೆಂದು ನಿರ್ಧರಿಸಿದ ಕೂಡಲೆ ಅದಕ್ಕೆ ಪ್ರತಿಯಾಗಿ ಬಾದಶಹನಾದರೂ ತನ್ನ ಜವಾಬದಾರಿಯ ಕಾರ್ಯದಲ್ಲಿ ಶಪಥಗೈಯುವುದು ನ್ಯಾಯಪ್ರಾಪ್ತವಾದುದೇ ಸರಿ. ರಾಜರ ಶಪಥವಿಧಿಯು ಕೆಳ

ದಂತೆ ಮೂರು ಮಾತುಗಳಾಗಿ ವಿಂಗಡಿಸಲ್ಪಟ್ಟಿದೆ: –

ಅ. "ನನ್ನ ಧರ್ಮದ ಪ್ರಜೆಗಳೂ ದೇವಾಲಯಗಳೂ ಶಾಂತರೀತಿಯಿಂದ ನನ್ನಿಂದ ಪುರಸ್ಕರಿಸಲ್ಪಡುವವು.

ಬ. ನನ್ನ ರಾಜ್ಯದಲ್ಲಿ ಧರ್ಮಾಧಿಕಾರಿಗಳು ಅನೀತಿಯಿಂದ ನಡೆಯುಲಾರರು, ಸಮ್ಮತವಲ್ಲದ ರೀತಿಯಿಂದ ಅಯೋಗ್ಯವಾಗಿ ಪ್ರಜೆಗಳಿಂದ ಹಣವನ್ನು ಎತ್ತಲಾರರು.

ಕ. ಎಲ್ಲ ಪ್ರಜೆಗಳಿಗೂ ನ್ಯಾಯವಾದ ಪಾಗು ದಯಾಯುಕ್ತವಾದ ಹಕ್ಕುಗಳು ಸಾಮಾನ್ಯವಾಗಿರುವವು."

ಷಷ್ಠ ಜಾರ್ಜಬಾದಶಹರವರು

(೪) ಶಪಥವಿಧಿಯ ತರುವಾಯ ಕ್ಯಾಂಟರ್ಬರಿಯ ಆರ್ಚ್‌ಬಿಶಪ್ಪರು ಬಾದಶಹರ ಶಿರಸ್ಸಿನ ಮೇಲೆ ರಾಜಕಿರೀಟವನ್ನು ಮುಂಡಿಸುವರು. ತತ್ಪೂರ್ವದಲ್ಲಿ ಮಖಮಲಿಯ ಗಾದಿಯ ಮೇಲೆ ಅದನ್ನು ತಂದಿಡುವ ಹಕ್ಕು ವೆಸ್ಟ್‌ಮಿನಿಸ್ಟರಿನ ಡೀನರಿಗೆ ಇರುವದು. ಆರ್ಚ್‌ಬಿಶಪ್ಪರು ಕಿರೀಟವನ್ನು ಮುಂಡಿಸುವ ಸುಮುಹೂರ್ತದಲ್ಲಿ

ಸಮಾರಂಭಕ್ಕೆ ಆಗಮಿಸಿದ ಜನರೆಲ್ಲ "ಗಾಡ್ ಸೇವ್ಸ್ ದಿ ಕಿಂಗ್" ಎಂಬ ಗೀತೆಯನ್ನು ಹಾಡುವರು. ಆ ವೇಳೆಯಲ್ಲಿ ಮಿಕ್ಕ ಸರದಾರರೂ ಮುಖ್ಯ ಮುಖ್ಯ ಅಧಿಕಾರಿಗಳೂ ತಮ್ಮ ತಮ್ಮ ಮುಕುಟಗಳನ್ನು ಹಾಕಿಕೊಳ್ಳುವರು.

(೫) ತರುವಾಯ ದೊಡ್ಡ ಗೃಹಸ್ಥರೆಲ್ಲ ಮೊಳಕಾಲೂರಿ ಕುಳಿತು ತಮ್ಮ ರಾಜನಿಷ್ಠೆಯ ಬಗ್ಗೆ ಶಪಥಗೈಯುವರು.

ಸಮಾರಂಭದ ಸಮಯದಲ್ಲಿ ಧರಿಸುವ ರಾಜವನ್ನೆಗಳು ಉಡುತೊಡಿಗೆಗಳು—

೧. **ಪ್ರತ್ಯೇಕವಾಗಿ ರಾಜರಿಗೆಂದೇ ಉತ್ತಮವಾಗಿ ಸಿದ್ಧಪಡಿಸಿದ ರುಗವು**— ಈ ರುಗವು ಬಹಳ ಬೆಲೆಯುಳ್ಳದ್ದಿರುವದು. ಇದು ಕಿರೀಟಧಾರಣ ಸಮಾರಂಭಕ್ಕಾಗಿಯೇ ವಿಶಿಷ್ಟ ತರದ ಹೊಲಿಗೆಯಿಂದ ಸಿದ್ಧಪಡಿಸಲ್ಪಡುವದು.

೨. **ರಾಜಮುಕುಟವು** — ಬಾದಶಹರು ಧರಿಸುವ ಕಿರೀಟವು ಬಂಗಾರದಿಂದ ರಚಿಸಲ್ಪಟ್ಟಿರುತ್ತದೆ. ಅದನ್ನು ತಮ್ಮ ದೇಶದ ಹೊರಗೆ ಒಯ್ಯುವಾರದೆ ಕಾಯಿದೆ ಇದ್ದದರಿಂದ ೫ನೆಯ ಜಾರ್ಜ ಬಾದಶಹರವರ ದಿಲ್ಲಿಯ ದರ್ಬಾರ ಕಾಲಕ್ಕೆ ಅಂಥದೇ ಮತ್ತೊಂದು ಕಿರೀಟವನ್ನು ಇಲ್ಲಿಯೇ ಸಿದ್ಧವಾಗಿಸಿದ್ದರು. ಅದನ್ನೇ ಹಿಂದುಸ್ತಾನದಲ್ಲಿ ನಡೆಯುವ ಉತ್ಸವಕಾಲದಲ್ಲಿ ಬಾದಶಹರು ಧರಿಸುವರು. ಹಿಂದುಸ್ತಾನದ ಈ ಕಿರೀಟಕ್ಕೆ ದಕ್ಷಿಣೋತ್ತರವಾಗಿ ೮ ಕಮಾನುಗಳು. ಇಂಗ್ಲಂಡದ ಕಿರೀಟಕ್ಕೆ ಇಂಥ ೪ ಕಮಾನುಗಳಿವೆ.

೩. **ರಾಜದಂಡ**:— ಇದು ಬಂಗಾರದ್ದಿದ್ದು ರತ್ನಖಚಿತವಾಗಿದೆ. ಇ ಮಧ್ಯದಲ್ಲಿ ಕ್ಯುಲೇನನ ಜಾತಿಯ ದೊಡ್ಡ ರತ್ನವು ಝಗಿಝಗಿಸುತ್ತದೆ. ಅದು ಆಫ್ರಿಕಾ ಖಂಡದ ಕಣಿಯಲ್ಲಿ ದೊರೆತಿದ್ದು, ೧೯೮೭ರಲ್ಲಿ ಕ್ರಾನ್ಸವಾಲದ ಪ್ರಜೆಗಳು ಆಗಿನ ಸಾರ್ವಭೌಮರಾದ ಶಾಂತಕಾಪ್ರಿಯ ೭ನೆಯ ಎಡ್ವರ್ಡ ಪ್ರಭುಗಳಿ ಅದನ್ನು ಕಾಣಿಕೆಯಾಗಿ ಅರ್ಪಿಸಿದ್ದರು. ಈ ರಾಜದಂಡದ ಮೇಲ್ಭಾಗಕ್ಕೆ ಹಿತವೃತ್ತಗಳಿರುವವು. ಅವುಗಳ ಮೇಲೆ ಇಂಗ್ಲಂಡ, ಸ್ಕಾಟ್ಲಂಡ ಮತ್ತು ಅಯರ್ಲಂಡಗಳ ಸ್ವಾಮಿತ್ವವನ್ನು ವ್ಯಕ್ತಪಡಿಸುವ ಹೂವುಗಳು — (ಗುಲಾಬೀ, ಥಿಸ್ಟಲ್ ಶಾಮರಾಕ್ ಎಂಬಿವು) ಕೆಚ್ಚಲ್ಪಟ್ಟಿವೆ. ಈ ರಾಜದಂಡವು ಬಹು ಪುರಾತನವಾದದ್ದು. ಕ್ರಿ. ಶ. ೮ ಪೂರ್ವದಲ್ಲಿಯೇ ಸಿದ್ಧಪಡಿಸಲ್ಪಟ್ಟಿದೆ.

೪. **ರತ್ನ**:— ರಾಜ್ಯಾರೋಹಣ ಸಮಯದಲ್ಲಿ ಅರಸನು ಇದರ ಮೇಲೆ ಕುಳಿತು ಮೆರವಣಿಗೆಯೊಂದಿಗೆ ವೆಸ್ಟಮಿನಿಸ್ಟರ ಅಬ್ಬೇಗೆ ವಿಜಯ ಮಾಡಿಸುವನು.

ವು ೧೬೬೧ರಲ್ಲಿ ಮೂರನೆಯ ಜಾರ್ಜ ಹಾಗು ಶಾರಲೋಟ ಮಹಾರಾಜ್ಞಿ ಇವರ
ಕ್ಕೆ ರಚಿಸಲ್ಪಟ್ಟಿದೆ. ಇದು ೪ ಟನ್ ಭಾರವಿದೆ. ಇದರ ಬೆಲೆ ೬೪೯೧ ಪೌಂಡು
ಮೂರು ಲಕ್ಷಿಲಕ್ಷ ರೂ.) ಇರುವದು. ಇದರ ಮೇಲೆ ಸಮುದ್ರ, ತಾಡಪತ್ರದ
ಗಳು ಮುಂತಾದವುಗಳು ಕೊರೆಯಲ್ಪಟ್ಟಿವೆ. ೮ ತಾಡವೃಕ್ಷಗಳೇ ಇದಕ್ಕೆ
ರಸ್ತಂಭಗಳಾಗಿವೆ. ತಾಡಪತ್ರದ ಕವಾನುಗಳೇ ಮೇಲಿನ ಆಚ್ಛಾದನೆಗೆ
ರಗಳಾಗಿವೆ. ರಥದ ಛತ್ತಿನ ಮೇಲೆ ಮೂನರು ಮಕ್ಕಳ ಪ್ರತಿಕೃತಿಗಳು
ಟದಿಂದ ಅಲಂಕೃತವಾಗಿ (ಈ ಮಕ್ಕಳೇ ಇಂಗ್ಲಂಡ್, ಸ್ಕಾಟ್ಲಂಡ್, ಅಯ
ಡ ದೇಶದ ಗುರುತುಗಳು) ಕುಳಿತಿವೆ. ಈ ಬಗೆಯ ಕೆತ್ತಿಗೆಯ ಕೆಲಸ
ಬಂಗಾರ ಬಣ್ಣದಿಂದ ಮಿರುಗುತ್ತಲಿವೆ. ಇದಕ್ಕೆ ೮ ಕುದುರೆಗಳನ್ನು
ಡುತ್ತಾರೆ. ಪಾರ್ಲಿಮೆಂಟು ತೆರೆಯುವ ವೇಳೆಯಲ್ಲಿಯೂ ರಾಜ್ಯರೋಹಣ
ಯದಲ್ಲಿಯೂ ಇದನ್ನು ಉಪಯೋಗಿಸುತ್ತಾರೆ.

೫. **ಅಮೂಲ್ಯವಾದ ಕೊಹಿನೂರ ರತ್ನದ ಕಿರೀಟವು:—** ಈ
ಲ್ಯ ಕಿರೀಟವು ಎಲಿಜಾಬೆಥ್ ಸಾಮ್ರಾಜ್ಞಿಯವರದು. ಇದು ನೂತನ
ತಿಯಂತೆ ಪ್ಲಾಟಿನಂ ಧಾತುವಿನ ಪಟ್ಟಿಗಳಿಂದ ರಚಿತವಾಗಿದೆ. ಆದ್ದರಿಂದ
ಗೆ ಫಳಫಳಿಸುತ್ತದೆ ಈ ನವೀನ ಕಿರೀಟರಚನಾಪದ್ಧತಿಯು ಯುರೋಪ
ದಲ್ಲೆಲ್ಲ ಪ್ರಸಾರವಾಗುತ್ತ ನಡೆದಿದೆ. ಇದರ ಮಧ್ಯಭಾಗದಲ್ಲಿ ಕೋಹಿನೂರ
ವು * ಕೂಡ್ರಿಸಲ್ಪಟ್ಟಿದೆ. (ರಾಜಗೋಲ ಮುಂ, ಇನ್ನೂ ಕೆಲವು ವಸ್ತುಗಳಿವೆ.)

ರಾಜ್ಯಾರೋಹಣವಿಧಾನ:— ಈ ವಿಧಾನವು ಪರಂಪರಾಗತವಾದದ್ದು
ಮಿನಿಸ್ಟರ್ ಅಬೇಯಲ್ಲಿಯೇ ಈ ಸಮಾರಂಭವು ಜರುಗತಕ್ಕದ್ದು. ಅರಸರು
ಮೆರವಣಿಗೆಯಿಂದ ಇಲ್ಲಿಗೆ ಆಗಮಿಸುವದು. ಆ ಕಾಲಕ್ಕೆ ಇಂಥಿಂಥವರು
ಇಂಥ ಸ್ಥಳದಲ್ಲಿ ನಿಲ್ಲುವದು, ಜಯಜಯಕಾರ ಮಾಡುವದು ಮುಂತಾದ ಉತ್ಸ
ಗಳೆಲ್ಲ ನಿರ್ಣೀತವಾದ ಪರಂಪರಾಕ್ರಮದಿಂದ ನಡೆಯುವವು.

ಇದೇ ಮೇತಿಂಗಳ ೧೩ನೆಯ ತಾ. ನವಿನಸ ಲಂಡನ ನಗರದಲ್ಲಿ ನಮ್ಮ ೪ನೆಯ
ರ್ಜ ಚಾಪಶಹರವರ ರಾಜ್ಯಾರೋಹಣಸಮಾರಂಭವು ಅಸದೃಶವಾದ ವೈಭವದಿಂದ
ಗಿತೆಂದು ಹಿಂದೆ ಹೇಳಿದೆಯಷ್ಟೇ. ಈ ಸಮಾರಂಭವು ಎಂದಿನಂತೆ ಶಾಸ್ತ್ರೋಕ್ತ

* ಕೊಹಿನೂರ ರತ್ನವು ಮೊದಲಿಗೆ ಗೋವಳಕೊಂಡದ ಕಣಿಯಲ್ಲಿ ತೆಗೆದದ್ದು. ಅದು
ಪಸಿಂಗನಿಂದ ಗ. ಜ. ದಾಲಹೌಸಿಯವರಿಗೆ ದೊರೆತು ಅವರು ವಿಕ್ಟೋರಿಯಾ
ರಾಣಿಯವರಿಗೆ ೧೮೫೯ರಲ್ಲಿ ಅರ್ಪಿಸಿದರು

ವಾಗಿಯೂ ಸಕಲ ವೈಭವಯುಕ್ತವಾಗಿಯೂ ಪರಂಪರಾನುಸಾರವಾ
ನಡೆಯಿತು. ಬ್ರಿಟಿಶ ದ್ವೀಪದ ಅರಸು ಮನೆತನದ ಗೌರವವು ಗ್ರೇಟ್‌ಬ್ರಿಟ
ಬ್ರಿಟಿಶ ಸಾಮ್ರಾಜ್ಯಾಂತರ್ಗತ ದೇಶಗಳಿಗೂ ಪ್ರಸಿದ್ಧ ಮಿತ್ರರಾಷ್ಟ್ರಗಳಿಗೂ ಸ
ಸಿದ್ದರಿಂದ ಅಲ್ಲೆಲ್ಲ ಈ ಸಮಾರಂಭದ ಉತ್ಸಾಹಪರವಾದಗಾಳಿಯು ಬೀಸಿತು. ಲ
ನಗರದಲ್ಲಿಯಂತೂ ಈ ಉತ್ಸವದ ದೃಶ್ಯವು ಅಪೂರ್ವವಾಗಿತ್ತು. ಅದರ ಸ
ವನ್ನು ಕಣ್ಣಾರೆ ನೋಡಿದ ಹೊರತು ಬೇರೆ ಯಾವ ಬಗೆಯಿಂದಲೂ ಕಲ್ಪನೆಗೆ
ಂತಿಲ್ಲ. ಯುರೋಪಿನ ಯಾವ ಬೇರೆ ದೇಶಗಳಲ್ಲಿಯೂ ನಡೆಯಲಶಕ್ಯ
ಉತ್ಸವ ಪರಂಪರೆಗಳಿಂದ ಯುಕ್ತವಾದ ಈ ಸಮಾರಂಭವನ್ನು ಕಣ್ತುಂಬ ನೆ
ಆನಂದಪಡುವದಕ್ಕಾಗಿ ಎಷ್ಟೋ ಹಣ ವೆಚ್ಚ ಮಾಡಿ ದೇಶವಿದೇಶಗಳ ಲಕ್ಷ
ಪ್ರೇಕ್ಷಕರು ಲಂಡನ್ ನಗರದಲ್ಲಿ ಮಿಲಿತರಾಗಿದ್ದರು. ಇದೂ ಅಲ್ಲದೆ ಸಾಮ್ರ
ಪ್ರತಿನಿಧಿಗಳೂ ಮುಖ್ಯ ಮುಖ್ಯ ಅಧಿಕಾರಿ ವರ್ಗದವರೂ ಸೈನಿಕ ವಿಭಾಗದ
ಶ್ರೀಮಂತರೂ (ಲಾರ್ಡ್ಸ್) ಲಂಡನ್ ನಗರದಲ್ಲಿ ಸೇರಿದ್ದರು. ಹೊರಗಿನಿಂದ
ಎಲ್ಲ ಪ್ರೇಕ್ಷಕ ವರ್ಗವು ೨೦ ಲಕ್ಷದನರಿಗೆ ನೆರೆದಿದ್ದಿತೆಂದು ಗಣಿಸಲ್ಪಟ್ಟಿದೆ.

ಸಿಂಹಾಸನಾರೋಹಣ ಸಮಾರಂಭದ ಮುಖ್ಯಾಂಗವಾದ ಕಿರೀಟಧ
ಮಹೋತ್ಸವವು ವೆಸ್ಟ್‌ಮಿನಿಸ್ಟರ ಅಬೇಯಲ್ಲಿ ಯಾರ್ಕ್‌ದ ಆರ್ಚ್‌ಬಿಶಪ್ಪರಿಂದ ಪ
ರಾಗತ ಪದ್ಧತಿಯನ್ನನುಸರಿಸಿ ಜರುಗತಕ್ಕದ್ದಾದ್ದರಿಂದ ಸಮ್ರಾಜರೂ ಸಮ್ರಾ
ಯವರೂ ಗೌರವಪೂರ್ವಕವಾದ ರಾಜಮರ್ಯಾದೆಗಳಿಂದೊಡಗೂಡಿ ಮು
ರಾಜವೀಥಿಯಲ್ಲಿ ಮೊದಲೇ ನಿರ್ಧರಿಸಿದ ಮಾರ್ಗದಿಂದ ಅಂದರೆ ಬಕಿಂಗ್‌ಹ್ಯಾ
ಅರಮನೆ, ಸೆಂಟ್ ಜೇಮ್ಸ್ ಪಾರ್ಕ ಮಾಲ್, ಆಡ್ಮಿರಲ್ಟಿ ಆರ್ಚ್, ತ್ರಾಫಲ್
ಸ್ಕ್ವೇಯರ, ವ್ಹೈಟ್ ಹಾಲ್, ಪಾರ್ಲಮೆಂಟ್‌ಸ್ಟ್ರೀಟ್, ಸೆಂಟ್‌ಮಾರ್ಗರೆಟ್‌ಸ್ಟ್ರೀ
ಬ್ರಾಡ್‌ಸಾಂಕಚ್ಯುಅರಿ ಇವುಗಳ ಮೇಲಿಂದ ವೆಸ್ಟ್‌ಮಿನಿಸ್ಟರ ಅಬೇಯ ಪ್ರ
ದ್ವಾರಕ್ಕೆ ಬಿಜಯಮಾಡುವಾಗ ಆ ಚಕ್ರವರ್ತಿವೈಭವದ ಮೆರವಣಿಗೆಯನ್ನೂ
ಸಂದಣಿಯ ಕೌತುಕನಿರೀಕ್ಷಣೆಯನ್ನೂ ಎಷ್ಟು ವರ್ಣಿಸಿದರೂ ತೀರದು.
ಜನಜಾತ್ರೆಯಲ್ಲಿ ನುಗ್ಗಾಟದಿಂದ ಪ್ರೇಕ್ಷಕರಿಗೆ ಅಪಾಯ ಸಂಭವಿಸೀತೆಂದು ಆ
ಲಿನ್ಸಿನವರು ತಕ್ಕ ಸಾಧನಗಳಿಂದ ಸಜ್ಜಾಗಿ ನಿಂತಿದ್ದರು. ಇವರಲ್ಲದೆ ೨೦ ಸಾ
ಜನ ಪೋಲೀಸರು ದಕ್ಷತೆಯಿಂದ ವ್ಯವಸ್ಥೆ ಗೊಳಿಸುತ್ತಿದ್ದರು. ಸಾರ್ವಭೌ
ದಂಪತಿಗಳ ದರ್ಶನದಿಂದ ಧನ್ಯರಾಗಬೇಕೆಂದು ನೆರೆದ ಇಷ್ಟು ಜನಸಮ್ಮರ್ದ
೪-೬ ತಾಸು ಶ್ರಮವಹಿಸಿ ನಿಂತಿದ್ದಿತು. ಇದು ಅವರ ರಾಜಭಕ್ತಿಯನ್ನೂ ಉ
ನಿರೀಕ್ಷಣ ಕುತೂಹಲವನ್ನೂ ವ್ಯಕ್ತಗೊಳಿಸುತ್ತಿತ್ತು.

ಸಾರ್ವಭೌಮರು ಅಬೇಗೆ ತಲ್ಪಿದ ಕೂಡಲೆ ಅಲ್ಲಿ ನೆರೆದ ಪ್ರೇಕ್ಷಕ ಜನಸಮು
ಯದ ಜಯಜಯಕಾರದ ಘೋಷವು ನಭೋಮಂಡಲವನ್ನು ವ್ಯಾಪಿಸಿತು.
ಳ ಘಂಟೆಯ ಸುಮಾರಕ್ಕೆ ಆರ್ಚ್‌ಬಿಶಪ್ಪರು ಸಮ್ರಾಜ್ಞಿ-ಸಮ್ರಾಜ್ಞಿಯವರಿಗೆ
ದ್ಧತಿಪೂರ್ವಕವಾಗಿ ಮುಕುಟಧಾರಣ ವಿಧಿಯನ್ನು ಪೂರ್ತಿಗೈದರು. ಈ
ಮಹೋತ್ಸವದ ಕಾಲದಲ್ಲಿ ಸಾರ್ವಭೌಮರಿಗೆ ಡೊಮಿನಿಯನ್ ಸರಕಾರದ ಪ್ರತಿನಿಧಿ
ಯೂ ಹಿಂದುಸ್ತಾನದಿಂದ ಹೋದ ಡೆಲಿಗೇಷನ್ನಿನ ಮುಖ್ಯರಾದ ಸರ ಮಹಮ್ಮದ
ಖಫರುಲ್ಲಾ ಖಾನರೂ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳೂ ಪದ್ಧತಿಗೆ ಸರಿಯಾಗಿ
ಸ್ವಮತ್ತಳಿಕೆಗಳನ್ನರ್ಪಿಸಿದರು. ಅವನ್ನೆಲ್ಲ ಬಾದಶಹರು ಆದರಪೂರ್ವಕವಾಗಿ
ಸ್ವೀಕರಿಸಿ ಕಾಲೋಚಿತ ಭಾಷಣ ಮಾಡಿದರು. ಇದೇ ದಿನ ಸಾಯಂಕಾಲ ಸಮ್ರಾ
ಜ್ಞಿಯವರು 'ರೆಡಿಯೊ' ಯಂತ್ರದ ಮೂಲಕ ತಮ್ಮ ಸಂದೇಶವನ್ನು ಪರಂಪರೆಯಂತೆ ಎಲ್ಲೆಡೆಗೆ
ಕಳುಹಿಸಿಕೊಟ್ಟರು. ಯಂತ್ರವಿದ್ದ ಸ್ಥಳಗಳಲ್ಲೆಲ್ಲ ಜನರು ಕುತೂಹಲಪೂರ್ವಕವಾಗಿ
ಆ ಸಂದೇಶದ ಮಾರ್ಗನಿರೀಕ್ಷಣೆಮಾಡುತ್ತಿದ್ದರು. ಆ ಸಂದೇಶವೇನೆಂದರೆ—

" ನಾನು ಇಂದು ರಾತ್ರಿ ಆನಂದಪರವಶನಾಗಿ ನಿಮ್ಮೊಡನೆ ಮಾತಾಡುತ್ತೇನೆ.
ಬೆ ಎಂದಾದರೂ ಹೊಸದಾಗಿ ರಾಜ್ಯಾಭಿಷಿಕ್ತನಾಗಿದ್ದ ರಾಜನು ತನ್ನ ರಾಜ್ಯಾ
ಭಿಷೇಕದ ದಿವಸ ತನ್ನ ಯಾವತ್ತು ಪ್ರಜೆಗಳೊಡನೆ, ಅವರು ತಮ್ಮ ತಮ್ಮ
ಮನೆಗಳಲ್ಲಿದ್ದಾಗಲೇ, ಮಾತಾಡಲು ಸಮರ್ಥನಾಗಿದ್ದಿಲ್ಲ. ಹಿಂದೆ ಎಂದಾದರೂ
ಈ ಸಮಾರಂಭಕ್ಕೆ ಇಷ್ಟು ಬಹಳ ಮಹತ್ವವು ಪ್ರಾಪ್ತವಾಗಿದ್ದಿಲ್ಲ, ಏಕೆಂದರೆ
ಸಾಹತುಗಳಿಗೆ ಈಗ ಈ ಪ್ರಾಚೀನ ರಾಜ್ಯದಷ್ಟೇ ಸ್ವತಂತ್ರವಾದ ಹಾಗೂ ಇದಕ್ಕೆ
ಸಮಾನವಾದ ಸ್ಥಾನವು ದೊರೆತಿದೆ. ಮತ್ತು ಸಮಗ್ರ ಸಾಮ್ರಾಜ್ಯವೇ ವೆಸ್ಟ್
ಮಿನ್‌ಸ್ಟರ್ ಅಬೇಯ ಆವಾರದಲ್ಲಿ ಮಿಲಿತವಾಗಿದ್ದಂತೆ ನಾನು ಇಂದು ಮುಂಜಾನೆ
ನಿಮ್ಮಣ್ಣರೆ ಕಂಡೆನು."

" ದೂರ ದೂರದ ದೇಶಗಳಲ್ಲಿರುವ ನನ್ನ ಹಳೆಯ ಮಿತ್ರರೂ, ನಾನು ಈ
ಗೆ ಹೋಗಿ ನೋಡದಿದ್ದ ದೇಶಗಳಲ್ಲಿ ನಾನು ಸಖ್ಯವನ್ನು ಬೆಳಿಸಲಿಚ್ಛಿಸುವ
ಹೊಸ ಮಿತ್ರರೂ ಆಗಿರುವ ನಿಮ್ಮೆಲ್ಲರೊಡನೆ—ನೀವು ಎಲ್ಲಿದ್ದರೂ—ಈ
ಳೆತ್ತು ಮಾತಾಡಲಿಕ್ಕೆ ನನಗೆ ಮಹದಾನಂದವೆನಿಸುತ್ತಿದೆ. ಮಹಾರಾಣಿಯವರೂ
ನಾನೂ ನಿಮ್ಮೆಲ್ಲರಿಗೆ ಆರೋಗ್ಯವನ್ನೂ ಸುಖವನ್ನೂ ಪ್ಯಕ್ತಿಶಃ ಬಯಸು
ವೆವು, ಮತ್ತು ಈ ಮಹೋತ್ಸವದ ಕಾಲದಲ್ಲಿ ಬೇನೆಯಿಂದ ಬಳಲುತ್ತಿರುವವ
ರನ್ನು ನಾವು ಎಂದಿಗೂ ಮರೆಯಲಾರೆವು; ಯಾಕೆಂದರೆ ಈ ದಿವಸ ಅವರ
ಸ್ಥೈರ್ಯ ಮತ್ತು ಒಳ್ಳೇ ನಾಗರಿಕತೆಯ ಉದಾಹರಣೆಯು ನಮ್ಮೆದುರಿಗೆ ಸದಾ

ಇರುತ್ತದೆ, ಮತ್ತು ಅವರಿಗೆ ಸಹಾನುಭೂತಿಯ ಹಾಗೂ ಉತ್ಸಾಹದ ವಿಶಿಷ್ಟ ಸಂದೇಶವನ್ನು ನಾನು ಕಳುಹಿಸಲಿಚ್ಛಿಸುತ್ತೇನೆ.

" ಮಹಾರಾಣಿಯವರ ಹಾಗೂ ನನ್ನ ಬಗ್ಗೆ ನಿಮಗಿರುವ ಪ್ರೇಮದ ರಾಜನಿಷ್ಠೆಯ ಸಲುವಾಗಿ ನಿಮ್ಮ ಉಪಕಾರ ನೆನಸುವದಕ್ಕೆ ಬೇಕಾಗುವಷ್ಟು ಗಳು ನನಗೆ ಹೊಳೆಯಲೊಲ್ಲವು. ಮಾರ್ಗಗಳ ಮೇಲೆ ನೀವು ಇಂದು ವ್ಯಕ್ತಪ ಅನುರಾಗದಿಂದಲೂ, ಸಮುದ್ರದಾಚೆಯಿಂದ ಮತ್ತು ಈ ದ್ವೀಪದ ಪ್ರತಿಯೊ ಭಾಗದಿಂದ ಬಂದಿರುವ ನಿಮ್ಮ ಸಂದೇಶಗಳಿಂದಲೂ ನಮಗುಂಟಾಗಿರುವ ಆನಂ ಪಾರಾವಾರವಿರುವದಿಲ್ಲ. ಮುಂದೆ ಬರುವ ವರ್ಷಗಳಲ್ಲಿ ನಾನು ನಿಮಗೆ ಕೃತಜ್ಞತೆಯನ್ನು ನಿಮ್ಮ ಸೇವೆಯ ರೂಪದಿಂದ ವ್ಯಕ್ತಪಡಿಸುವದೇ ಎಲ್ಲ ಉತ್ಕೃಷ್ಟವಾದ ಮಾರ್ಗವೆಂದು ನಾನು ಮನಗಂಡಿದ್ದೇನೆ. "

" ಕೋಟ್ಯವಧಿ ಜನರಿಗೆ ರಾಜಮುಕುಟವು ಐಕ್ಯದ ಒಂದು ಚಿಹ್ನ ತೋರುತ್ತದೆ, ಮತ್ತು ಪರಮೇಶ್ವರನ ದಯೆಯಿಂದಲೂ ಬ್ರಿಟಿಶ್ ಕಾಮನ್ಸ್ ಜನರ ಇಚ್ಛೆಯಿಂದಲೂ ನಾನು ಆ ರಾಜಮುಕುಟವನ್ನು ಧರಿಸಿದ್ದೇನೆ. ಮಾನವನ್ನೂ ಸತ್ವವನ್ನೂ ಕಾಯ್ದುಕೊಳ್ಳುವ ಕರ್ತವ್ಯವು ನಿಮ್ಮ ರಾಜನಾಗಿ ನನ್ನಲ್ಲಿ ನಿವಿಷ್ಟವಾಗಿದೆ. ಅದು ನಿಜವಾಗಿಯೂ ಗಂಭೀರವಾದ ಮತ್ತು ಪ ವಾದ ಜವಾಬದಾರಿಯಾಗಿದೆ. ಆದರೆ ನಾನು ಅಬೇಯಲ್ಲಿ ನನ್ನ ಸುತ್ತಲೂ ನಿ ಪ್ರತಿನಿಧಿಗಳನ್ನು ನೋಡಿ ಮತ್ತು ಆ ಅತ್ಯಂತ ಮನೋಹರವಾದ ಉತ್ಸವ ಕಾ ದಲ್ಲಿ ಭಾಗ ವಹಿಸಲಿಕ್ಕೆ ನೀವೂ ಸಮರ್ಥರಾದಿರೆಂಬದನ್ನು ನೋಡಿ ನನ್ನೊಳಗೆ ವಿಶ್ವಾಸವು ಮೂಡಿತು. ಈ ಉತ್ಸವದ ಬಾಹ್ಯಸ್ವರೂಪವು ಪ್ರಾಕ್ಕಾಲದಿಂದ ನ ಬಂದಂತೆಯೇ ಇದ್ದರೂ, ಅದರ ಅಂತರ್ಗತ ಅರ್ಥವು ಹಾಗೂ ಸಂದೇಶವು ನೂತನವಾಗಿಯೇ ಇರುತ್ತದೆ; ಯಾಕೆಂದರೆ ಲೋಕಸೇವೆಯೇ ಎಲ್ಲಕ್ಕೂ ಶ್ರೇ ವಾದ ಸನ್ಮಾನವು; ಮತ್ತು ನಾನು, ನಿಮಗೆ ಕೇಳಿಸುವಂತೆ ಅತ್ಯಂತ ಗಂಭೀರ ಮ ಗಳಲ್ಲಿ, ಅರಸೊತ್ತಿಗೆಯಿಂದ ಪ್ರಾಪ್ತವಾಗುವ ಸೇವಾಧರ್ಮಕ್ಕೆ, ನನ್ನನ್ನು ಮಹಾರಾಣಿಯೊಂದಿಗೆ ವಹಿಸಿಕೊಂಡಿದ್ದೇನೆ. "

" ಪರಮೇಶ್ವರನ ಸಹಾಯದಿಂದ ನಾವು ನಮ್ಮ ಮೇಲಿನ ಜವಾಬದಾರಿಯ ಪ್ರಾಮಾಣಿಕತನದಿಂದ ಕೊನೆಗಾಣಿಸುವೆವು. ನನಗೆ ನನ್ನ ಅಜ್ಜನ ರಾಜ್ಯಾಭಿಷೇ ಸ್ಮರಣೆಯು ಈಗಲೂ ಇದ್ದಂತೆಯೇ ಈ ಹೊತ್ತು ನಿಮ್ಮಲ್ಲಿ ಬಾಲಕರಾಗಿರು ವರಿಗೆ ನಿಶ್ಚಿಂತ ಸುಖದ ದಿನವೆಂದು ಈ ದಿನದ ನೆನಪು ಉಳಿಯಲೆಂದು ನ

ಇಯತ್ತೆಗೆ ಹಾಕುವ ಪರಂಪರೆಗೆ ಲಕ್ಷ್ಯಗೊಡದೆ, ಇವನು ಯಾವ ಇಯತ್ತೆ ಯೋಗ್ಯನಿರುವನೆಂಬದನ್ನು ಪರೀಕ್ಷಿಸಿ ಆ ಪ್ರಕಾರ ಮಾಡುವರು. ಹೀಗೆ ಶಾ ಗಳನ್ನು ಬದಲಿಸುವ ಪ್ರಸಂಗವಾದರೂ ವಿಶೇಷವಾಗಿ ಬರುತ್ತಿರುವದಿಲ್ಲ. ಶಿಕ್ಷ ರಿಗೆ ಇಲ್ಲಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಅಲ್ಲಿ ಕೊಟ್ಟಿದ್ದರೂ ಶಿಕ್ಷಕರಾವ ಜವಾಬುದಾರಿಯಿಂದಲೂ ಕಾರ್ಯಕ್ಷಮತೆಯಿಂದಲೂ ಕೆಲಸಮಾಡುವರೆಂ ಅಧಿಕಾರಿಗಳ ಅಭಿಪ್ರಾಯವಿದೆ. ಪ್ರಾ. ಶಾ. ಗಳಲ್ಲಿ ವಿದ್ಯಾರ್ಥಿಗಳ ವಯಸ್ಸ ೧೪ನೆಯ ವರ್ಷವು ಪೂರ್ಣ ಮುಗಿದಬಳಿಕ ಪ್ರತ್ಯೇಕ ಪರೀಕ್ಷೆಯೇನೂ ಇರ ದಿಲ್ಲ. ಆ ಶಾಲೆಯ ಹೆಡ್‌ಮಾಸ್ತರನು ಈ ವಿದ್ಯಾರ್ಥಿಯು ಇಂಥ ಇಂಥ ವಿಷ ಗಳನ್ನು ಇಷ್ಟು ಇಷ್ಟು ಕಲಿತಿರುವನೆಂದು ಸರ್ಟಿಫಿಕೇಟ ಕೊಟ್ಟರೆ ತೀರಿತು. ಸ್ವಾಭಾವಿಕ ದಾಖಲೆಯ ಮೇಲೆಯೇ ಎಲ್ಲಿ ಹೋದರೂ ಅವನಿಗೆ ತಕ್ಕ ಬೆಲೆ ದೊರೆಯುವದು.

ಬಾಲಕರ ವರ್ಗಕ್ಕೆ ಗೊತ್ತುಮಾಡಿದ (ಪೀರಿಯಡ್ಡುಗಳ) ಪ್ರತಿಯೊಂ ವಿಷಯದ ಕಲಿಸುವ ಅವಧಿಯು ೨೦ ಮಿನಿಟುಗಳವರೆಗೂ ಮೇಲಿನ ವರ್ಗ ವಿದ್ಯಾರ್ಥಿಗಳ ಅವಧಿಯು ೪೦ ಮಿನಿಟುಗಳ ವರೆಗೂ ಇರುವದು. ಪ್ರತಿಯೊ ಶಿಕ್ಷಕನು ತಾನು ಕಲಿಸುವ ೪, ೫ ಇಯತ್ತೆಗಳಿಗೂ ಬೇರೆ ಬೇರೆಯಾಗಿ ಕೆ ಗಳನ್ನು ಕೊಟ್ಟು ತಾನು ಕಲಿಸುವ ಇಯತ್ತೆಗಳನ್ನು ವೇಳೆಗೆ ಸರಿಯಾಗಿ ಕಲಿಸು ಇರುವನು. ಎಲ್ಲ ಇಯತ್ತೆಗಳ ಅಭ್ಯಾಸವು ಶಾಂತರೀತಿಯಿಂದ ಸಾಗುವದ ನೋಡಿಕೊಳ್ಳುತ್ತ ಇರುವನು. ೪, ೫ ಇಯತ್ತೆಗಳು ಒತ್ತಟ್ಟಿಗೆ ಬೆರೆತ ಇಲ್ಲದ ಗದ್ದಲವು ಆಗುವದಿಲ್ಲ. ಸ್ವಲ್ಪ ಆದರೂ ಅದು ಮಿತಿಯಲ್ಲಿ ಇರುವ ಬೈಲೊಳಗೆ ಆಡಲಿಕ್ಕೆ ಹೋದಾಗ ಮಾತ್ರ ಸ್ವಲ್ಪ ಹೆಚ್ಚು ಗದ್ದಲವಾದರೂ ಅ ಸಹ ಮಿತಿಮೀರುವದಿಲ್ಲ.

ವರ್ಗದಲ್ಲಿ ಸ್ವಲ್ಪ ಗದ್ದಲವಿದ್ದರೆ ಶಿಕ್ಷಕನು ಒಳಗೆ ಬಂದಕೂಡಲೆ ತ ಶಾಂತವಾಗುತ್ತದೆ. ಒಬ್ಬರೊಬ್ಬರ ಕೂಡ ಮಾತನಾಡುವ, ನಡೆಯುವ ಪ ಪಾಠವು ಇಂಗ್ಲಿಷ ವಿದ್ಯಾರ್ಥಿಗಳಿಗೆ ತೀರ ಚಿಕ್ಕತನದಿಂದಲೇ ದೊರೆತಿರುತ್ತ ಆದದರಿಂದ ಶಾಲೆಯಲ್ಲಿ ಇಲ್ಲದಿದ್ದ ಗದ್ದಲವು ಕೇಳಬರುವದಿಲ್ಲ. ಶಿಕ್ಷಕ ವರ್ಗದಲ್ಲಿ ಶಾಂತರೀತಿಯಿಂದ ತಕ್ಕಸ್ವರದಿಂದ ಮಾತನಾಡುತ್ತಿರುತ್ತಾನೆ. ಏರಿಸಿ ಸ್ವರವು ಎಂದೂ ಕೇಳಬರುವದಿಲ್ಲ. ಯಾವದೊಂದು ವರ್ಗದಲ್ಲಿ ನಾಲ್ಕೈ ವಿದ್ಯಾ ಗಳಿದ್ದರೆ ಅವರ ಹತ್ತಿರವೇ ಹೋಗಿ ಅವರಿಗೆ ಕೇಳಿಸುವ ಸ್ವರದಿಂದ ಕಲಿಸಿ ತಿ ಘಂಟೆಯೊಂದು ವರ್ಗಕ್ಕೆ ಸಾಗುತ್ತಾನೆ.

ಶಿಕ್ಷಣ

ಇಂಗ್ಲಂಡದೇಶದ ಹಳ್ಳಿಯ ಶಾಲೆಯಲ್ಲಿ ವ್ಯಕ್ತಿಶಿಕ್ಷಣಕ್ಕೆ ವರ್ಗಶಿಕ್ಷಣಕ್ಕಿಂತ ಜಾಸ್ತಿ ಪ್ರಾಧಾನ್ಯವಿದೆ. ಶಿಕ್ಷಕನು ಪ್ರತಿ ವಿದ್ಯಾರ್ಥಿಯ ಹತ್ತಿರ ನಿಂತು, ಇಲ್ಲವೆ ಕುಳಿತು ಅವನಿಗೆ ಬಂದ ತೊಂದರೆಗಳನ್ನು ಅರಿತು ಅದನ್ನು ಸುಧಾರಿಸಿ ಬಿಸಿಕೊಡುತ್ತಿರುತ್ತಾನೆ. ಪ್ರತಿಯೊಂದು ವರ್ಗಕ್ಕೆ ವಾರದಲ್ಲಿ ಮಾಡಿಸುವ ಭ್ಯಾಸದ ಅಂದಾಜಪತ್ರಿಕೆಯನ್ನು ಮೊದಲೇ ಶಿಕ್ಷಕನು ಗೊತ್ತುಮಾಡಿ ಇಟ್ಟಿರು ತ್ತಾನೆ. ಅದನ್ನು ನೋಡಿ ವಿದ್ಯಾರ್ಥಿಗಳಾದರೂ ತಾವು ಮುಂದಿನವಾರದಲ್ಲಿ ಾಡಿ ಮುಗಿಸುವ ಅಭ್ಯಾಸದ ಮೇರೆಯನ್ನು ಅರಿಯುತ್ತಾರೆ. ಆ ಅಂದಾಜ ತ್ರಿಕೆಯೊಳಗಿನ ಎಷ್ಟೋ ವಿಷಯಗಳನ್ನು ವಿದ್ಯಾರ್ಥಿಗಳು ಸ್ವತಃ ಪ್ರಯತ್ನದಿಂದ ಾಡುತ್ತಾರೆ. ತೀರ ಹೊಸದಾಗಿ ಕಲಿಸುವ ಭಾಗವನ್ನು ಮಾತ್ರ ಶಿಕ್ಷಕನು ತಿಳಿಸಿ ಟ್ಟರೆ ತೀರಿತು, ಮಿಕ್ಕದ್ದನ್ನೆಲ್ಲ ಸ್ವಪ್ರಯತ್ನದಿಂದ ವಿದ್ಯಾರ್ಥಿಗಳು ಮಾಡಲು ಪಣಿಸುತ್ತಾರೆ. ಶಿಕ್ಷಕನು ವರ್ಗದಲ್ಲಿ ಅಡ್ಡಾಡಿ ಅವರವರಿಗೆ ಅವಶ್ಯವಾಗಿ ಹಾಯಮಾಡತಕ್ಕಷ್ಟು ಮಾಡಿ ಮುಂದೆ ಸಾಗಲಿಕ್ಕೆ ಉತ್ತೇಜನಕೊಡುತ್ತಾನೆ. ಾವು ಮಾಡತಕ್ಕ ಕೆಲಸವನ್ನು ಅಂದಾಜಪತ್ರಿಕೆಯನ್ನು ನೋಡಿ ವಿದ್ಯಾರ್ಥಿಗಳು ೊದಲೇ ಅರಿತಿರುವದರಿಂದ ತಮ್ಮ ಕಾರ್ಯಕ್ಕೆ ಕೂಡಲೆ ಅವರು ಅಭಿಮುಖ ಾಗುತ್ತಾರೆ.

ಅಲ್ಲಿಯ ಶಾಲೆಗಳಲ್ಲಿ ವಾಚನ ವಿಷಯಕ್ಕೆ ಹೆಚ್ಚು ಮುಖ್ಯತ್ವವಿದೆ. ಯಸ್ಕರು ಒಹಳವಾಗಿ ಓದುತ್ತಿರುತ್ತಾರೆ. ಬಾಲಕವರ್ಗದವರು ಸಹ ಚೆನ್ನಾಗಿ ದುತ್ತಿರುತ್ತಾರೆ. ಹಾಗೆಯೇ ಬರಹಕ್ಕೂ ಮಹತ್ವವಿದೆ. ಕೆಳಗಿನ ವರ್ಗದಲ್ಲಿಯೂ ಿತ ವಿದ್ಯಾರ್ಥಿಗಳು ತಮ್ಮ ಮನಸ್ಸಿನಲ್ಲಿಯ ವಿಚಾರಗಳನ್ನು ಬರೆಯುವ ಛಲವು ಹೆಚ್ಚಾಗಿ ಇರುತ್ತದೆ. ಬೀಗೆ ಬರೆದ ಅವರ ಅಕ್ಷರಗಳಾದರೂ ತಿಳಿಯು ಂತೆ ಚೆನ್ನಾಗಿ ಇರುತ್ತವೆ. ಆರಂಭದಲ್ಲಿ ವಿದ್ಯಾರ್ಥಿಗಳು, ಶಿಕ್ಷಕನು ಕರಿಹಲ ಮಮೇಲೆ ಬರೆದದ್ದನ್ನು ನೋಡಿ ಅದರಂತೆಯೇ ಬರೆಯಲು ರೂಢಿಮಾಡು ರುತ್ತಾರೆ. ಮಕ್ಕಳು ಬರೆಯುತ್ತಿರುವಾಗ ಅವು ಚೆನ್ನಾಗಿ ಆಗುವಂತೆ ಕ್ಷಕನು ಸಹಾಯಮಾಡುತ್ತಿರುತ್ತಾನೆ. ವಿದ್ಯಾರ್ಥಿಗಳು ಬರೆದ ಟಿಪ್ಪಣಿ ಸ್ತಕಗಳನ್ನು ಶಿಕ್ಷಕನು ನೋಡಿ ಸುಧಾರಿಸುತ್ತಾನೆ. ಅವರವರ ಪುಸ್ತಕಗಳನ್ನು ದ್ದುವಾಗ ಆಯಾ ವಿದ್ಯಾರ್ಥಿಗಳನ್ನು ಶಿಕ್ಷಕನು ಹತ್ತಿರ ಕರೆದು ಸಮಕ್ಷವೇ ದ್ದುತ್ತಾನೆ. ಹೀಗೆ ವ್ಯಕ್ತಿಶಃ ಲಕ್ಷ್ಯಗೊಡುವದರಿಂದ ಅವರವರ ಸುಧಾರಣೆಗೆ ಳ್ಳೆಯ ಅನುಕೂಲವಾಗುತ್ತದೆ. ಹಳ್ಳಿಯ ಶಾಲೆಗಳಲ್ಲಿ ಒಬ್ಬ ಶಿಕ್ಷಕನು

ಒಂದೆರಡು ಇಯತ್ತೆಗಳನ್ನು ಕಲಿಸುವ ಪ್ರಸಂಗವಿರುವದರಿಂದ ವಿದ್ಯಾರ್ಥಿಗ
ಸ್ವಪ್ರಯತ್ನದಿಂದಲೇ ಹೆಚ್ಚು ಕೆಲಸಗಳನ್ನುಮಾಡಿ ಮುಗಿಸುವ ರೂಢಿ
ತಾನಾಗಿ ಒದಗುತ್ತದೆ. ಒಂದು ವರ್ಗದವರು ನಿಬಂಧ ಬರೆಯುತ್ತಿ
ಮತ್ತೊಂದು ವರ್ಗದವರು ಓದುತ್ತಿರುತ್ತಾರೆ, ಇನ್ನೊಂದು ವರ್ಗದವರು ಲೆಕ್ಕ
ಉದಾಹರಣೆಗಳನ್ನು ಬಿಡಿಸುತ್ತಿರುತ್ತಾರೆ. ಮೊದಲೇ ಸಿದ್ಧಪಡಿಸಿದ ಅಭ್ಯಾ
ಪತ್ರಿಕೆಯಂತೆಯೂ ವೇಳಾಪತ್ರಿಕೆಯಂತೆಯೂ ಕೆಲಸವು ನಡೆಯುತ್ತಿರುತ್ತ
ವರ್ಗದಲ್ಲಿ ಆಗಾಗ ಮಾಡಿ ಮುಗಿಸಿದ ವಿಷಯಗಳ ಭಾಗಗಳನ್ನು ಶಿಕ್ಷಕನು ಪ
ಪುಸ್ತಕದಲ್ಲಿ ಕೂಡಲೆ ಬರೆದಿಡುತ್ತಾನೆ. ಈ ಪ್ರಕಾರ ಪದ್ಧತಿಗನುಸರಿಸಿ ಕೆಲಸಗ
ನಡೆಯುವದರಿಂದ ಎಲ್ಲ ವರ್ಗಗಳ ಅಭ್ಯಾಸವೂ ಸರಿಯಾಗಿ ತಪ್ಪದಲೆ ಮುಗಿಯ
ತ್ತವೆ. ಕೆಲವೊಂದು ಅವಧಿಯಲ್ಲಿ ಮೇಲುನೋಡಲಕ್ಕೆ ಬಂದ ಅಧಿಕಾರಿಗಳ
ಕ್ರಮವಾಗಿ ಬರೆದ ಪುಸ್ತಕಗಳೂ ಅಭ್ಯಾಸಪತ್ರಿಕೆಗಳೂ ಜೆನ್ನಾಗಿ ಉಪಯೋ
ಜೀಳುತ್ತವೆ. ಇಂಗ್ಲಂಡದೇಶದ ಹಳ್ಳಿಯ ಶಾಲೆಯಲ್ಲಿ ವಾಚನವಿಷಯದಲ್ಲಿ
ಬಹಳ ಲಕ್ಷ್ಯವನ್ನು ತೆಗೆದುಕೊಳ್ಳುತ್ತಾರೆ. ಮಕ್ಕಳಿಗೋಸ್ಕರ ಬರೆದ ನಾ
ಸುಲಭವಾದ ಅನೇಕ ಪುಸ್ತಕಗಳಿರುತ್ತವೆ. ಅವನ್ನು ಓದಲಿಕ್ಕಾಗಿ ಅವರಕೈಯ
ಕೊಡುತ್ತಾರೆ. ಪ್ರತ್ಯೇಕವರ್ಗಕ್ಕೆ ಇಂಥದೇ ಕ್ರಮಿಕ ಪುಸ್ತಕವೆಂದು ನಮ್ಮ
ಯಂತೆ ನಿರ್ಧರಿಸಿರುವದಿಲ್ಲ. ಎಲ್ಲ ವರ್ಗಗಳ ವಿದ್ಯಾರ್ಥಿಗಳ ವಾಚನದ ಯೋ
ತೆಯು ಮಾತ್ರ ಇಂತಿಷ್ಟೆಂದು ನಿರ್ಧರಿಸಲ್ಪಟ್ಟಿರುತ್ತದೆ. ಆಪ್ರಕಾರ ಗೊತ್ತುಮಾಡಿ
ಯೋಗ್ಯತೆಯ ಒರೆಗೆ ಹತ್ತುವಂಥ ಪುಸ್ತಕವನ್ನು ಓದಿದರೆ ತೀರಿತು. ಈ ಬಗೆ
ಪುಸ್ತಕಗಳನ್ನು ಬರೆಯುವಾಗಲೇ ಆ ಮಕ್ಕಳ ಯೋಗ್ಯತೆಗೆ ತಕ್ಕ ಶಬ್ದಗಳನ್ನೆ
ಉಪಯೋಗಿಸಿರುವದರಿಂದ ಪ್ರತಿಯೊಂದು ವರ್ಗದಲ್ಲಿ ಮುಖ್ಯವಾಗಿ ಬಾಲಕ
ವರ್ಗದಲ್ಲಿ ವಾಚನ ಕಲಿಸುವಾಗ ಶಬ್ದಾರ್ಥಜ್ಞಾನಕ್ಕಾಗಿ ಮೈಚ್ಛಾಗಿ ತೊಡಗು
ಪ್ರಸಂಗವಿರುವದಿಲ್ಲ. ಆದರಿಂದ ವಾಚನ ನಡೆವಾಗ ಬಾಲಕರು ಶಬ್ದಾರ್ಥವನ್ನು
ತಾವೇ ಸಹಜವಾಗಿ ತಿಳಿದುಕೊಳ್ಳುತ್ತಾರೆ. ಬಾಲಕ ವರ್ಗದಲ್ಲಿ ವಾಚನ ವಿಷಯವು
ನಡೆದಾಗ ವಾಕ್ಯದಲ್ಲಿ ಒರುವ ಪ್ರತಿಶಬ್ದದ ಅರ್ಥಕ್ಕಾಗಿಯೂ ಪ್ರತ್ಯೇಕವಾಕ್ಯ
ವಿಷಯವಾಗಿಯೂ ಶಿಕ್ಷಕನು ಅರ್ಥ ಹೇಳುತ್ತ ಕೂಡ್ರುವ ಸಮಯವು ಬರು
ವದಿಲ್ಲ. ಮಕ್ಕಳಿಗೆ ಆ ಪಾಠವು ತಿಳಿದರೆ ತೀರಿತು.

[ಮುಂದೆ ಸಾಗುವದು.]

ಧಾರವಾಡದಲ್ಲಿಯ ಕನ್ನಡ ಬುಕ್ ಕಮೀಟಿಯವರು ೩—೬—೧೯೩೭ ನೆಯ ದಿನ ನೆರೆದ ಕಮೀಟಿಯಲ್ಲಿ ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ವಿವರಿಸಿದಂತೆ ಅದೆ.

ಪ್ರಾಥಮಿಕ ಶಾಲೆ = ಪ್ರಾ. ಶಾ; ಶಿಕ್ಷಕರು = ಶಿ; ವಿದ್ಯಾರ್ಥಿಗಳು = ವಿ; ಲಾಯಬ್ರರಿ ಬುಕ್ಕು = L.

ನಂ	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ.	ಇ. ಸಾ. ಪ. ನಂ.	
೧	೫ನೆಯ ದರ್ಜೆಯ ಗಣಿತ ಕೈಪಿಡಿ ೩ನೆ ಆ ೧೯೩೪	ಮೆ॥ಯು. ಆರ್. ಪೇಜೈ ಆ್ಯಂಡ್ ಸನ್ಸ ಕೊಡಿಯಲ್ ಬೈಲ್ ಕಾರ್ ಸ್ಟ್ರೀಟ್ ಮಂಗಳೂರ	ಗ್ರಂಥಕರ್ತರು	೦—೧೨-೦	ಪ್ರಾ ಶಾ. ಗಳ ಶಿ. ರ L ಬುಕ್ಕು	47P	1733
೨	೪ನೆಯ ದರ್ಜೆಯ ಗಣಿತ ಪುಸ್ತಕ ೧೯೩೫ರ ಆವೃತ್ತಿ	ಸದರ	ಸದರ	೦— ೬—೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು	ಸದರ	1735
೩	೩ನೆಯ ದರ್ಜೆಯ ಗಣಿತ ಪುಸ್ತಕ ಸುಧಾರಿಸಿದ ಆವೃತ್ತಿ ೧೯೩೭	ಸದರ	ಸದರ	೦— ೪—೦	ಪ್ರಾ. ಶಾ. ಗಳ ಶಿ. ರ L	ಸದರ	1737

೩—೧೯೩

೨ನೆಯ ದರ್ಜೆಯ ಗಣಿತ ಪುಸ್ತಕ ಸುಧಾರಿಸಿದ ಆವೃತ್ತಿ ೧೯೩೧	ಸದರ	ಸದರ	೦– ೪–೦	ಸದರ	ಸದರ	1739
ಹೂಗನ್ನಡ ಪಾಠ ಮಾಲೆ ೧ನೆಯ ಪು. ೨ನೆ ಆ. ೧೯೩೬	ಸದರ	ಗ್ರಂ. ಕರ್ತರು	೦– ೨–೦	ಪ್ರಾ. ಶಾ. ಗಳ ವಿ. ಗಳ L	47P	1741
ನಾಲ್ಕನೆಯದರ್ಜೆಯ ಗಣಿತ ಕೈಪಿಡಿ ೪ನೆ ಆ. ೧೯೩೬	ಸದರ	ಸದರ	೦– ೬–೦	ಪ್ರಾ. ಶಾ. ಗಳ ಶಿ. ರ L	ಸದರ	1743
ಹೂಗನ್ನಡ ಪಾಠ ಮಾಲೆ ೩ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೩–೦	ಪ್ರಾ. ಶಾ. ಗಳ ವಿ. ಗಳ L	ಸದರ	1745
ಹೂಗನ್ನಡ ಪಾಠ ಮಾಲೆ ೪ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೪–೦	ಪ್ರಾ. ಶಾ. ಗಳ ವಿ. ಗಳ L	ಸದರ	1747

ಶ್ರೀ	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರ	ಬೆಲೆ	ಯಾತಕ್ಕಾಗಿ ಮಂಜೂರ ಆಗಿದೆ	ಇ. ಸಾ. ರ ನಂಬರ
೯	ಹೂಗನ್ನಡ ಪಾಠ ಮೂಲೆ ೫ನೆ ಬುಕ್ಕು ೫ನೆ ಆ. ೧೯೩೬	ಮೆಸರ್ಸ ಯು. ಆರ್. ಕೇಣ್ಯೆ ಅ್ಯಂಡ ಸನ್ಸು ಮಂಗಳೂರ	ಸದರ	೦– ೬–೦	ಪ್ರಾ. ಶಾ. ಗಳ ವಿ. ಗಳ L	47/P. 1749
೧೦	ಐದನೆಯ ದರ್ಜೆಯ ಗಣಿತ ಪುಸ್ತಕ	ಸದರ	ಗ್ರಂ. ಕರ್ತರು	೦–೧೦-೦	ಸದರ	ಸದರ 1751
೧೧	ಹೂಗನ್ನಡ ಪಾಠ ಮೂಲೆ ೨ನೆ ಬುಕ್ಕು ೨ನೆ ಆ. ೧೯೩೬	ಸದರ	ಸದರ	೦– ೨–೦	ಸದರ	ಸದರ 1753 ಸದರ
೧೨	ರೇಖಾ ಗಣಿತದ ಮೂಲ ಪಾಠಗಳು ಅಥವಾ ಭೂಮಿತಿ ಭಾಗ ೧	ಚಿದಂಬರರಾವ ಕುಲಕರ್ಣಿ ಧಾರವಾಡ	ವಿ. ಆರ್. ಶಿವನಾಗಪ್ಪ ಹುಬ್ಬಳ್ಳಿ	೦– ೬–೦	ಪ್ರಾ. ಶಾ. ಗಳ ಶಿ. ರ L	ಸದರ 1755
೧೩	ಹೊಸ ಪದ್ಧತಿಯ ಪ್ರಶ್ನೋತ್ತರ ಜವಾಬ್ದಾರ್ಜು	ಮು. ಆರ್. ಎಮ್. ಬೆಟಗೇರಿ ಮಾ. ಕ. ಶಾಲಾ	,,	೧– ೦–೦	ಪ್ರಾ. ಶಾ. ಗಳ ವಿ. ಗಳ ಹಾಗು ಶಿ.ರ. L	ಸದರ 1757

	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ	ಮಂ. ಪು. ಸಾ. ನಂ.	ಪಾ. ಸಾ. ಪು. ನಂ.
೧೮	ಲನೆ. ಎಡ್ವರ್ಡ ಬಾಪ ಶಹರು ೧೯೬೬. ಆ. ೧೯೩೬	ಮು. ಕೆ. ಜಿ. ವಿಜಾಪೂರ ೧೯೫೮ಲ ಮಹದೇವಗಲ್ಲಿ ಬೆಳಗಾವ	ಗ್ರಂಥಕರ್ತರು	೦–೪–೦	ಪ್ರಾ. ಶಾ. ಗಳ ವಿ ಗಳ L	47/P	1761
೧೯	ಕುಂತಿದೇವಿಯ ಚರಿತ್ರೆ ೧೯೩೬	ಮು. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦–೧–೬	ಸದರ	ಸದರ	1769
೨೦	ಗಾಂಧಾರಿ ಚರಿತ್ರೆ ೧೯೩೬	ಮು. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦–೧–೬	ಪ್ರಾ. ಶಾ. ಗಳ ವಿ. ಗಳ L	ಸದರ	1771
೨೧	ಅರ್ಜುನ ಚರಿತ್ರೆ ೧೯೩೬	ಸದರ	ಸದರ	೦–೧–೬	ಸದರ	ಸದರ	1773 ಸದರ
೨೨	ಕರ್ಣನ ಚರಿತ್ರೆ ೧೯೩೬	ಸದರ	ಸದರ	೦–೧–೬	ಸದರ	ಸದರ	1775

೨೩	ನವಲಗುಂದ ತಾಲೂಕಿನ ವರ್ಣನೆಯು	ಮೆ॥ ವಾಯ್. ಪ್ಹಿ. ಜಹಾಗಿರದಾರ ಹೆ. ಮೂ. ಉರ್ದುಶಾಳಾ ಹಾಗು ಎನ್. ಪಿ. ಮೋಡಕ ಹೆ. ಮೂ. ಹಳ್ಳಿಕೇರಿಶಾಳಾ	ವಿದ್ಯಾವಿಲಾಸ ಬುಕ್ ಡಿಪೋ ಗದಗ	೦– ೨–೬	ಪ್ರೌ. ಶಾ. ಗಳ ಶಿ. ರ L	ಸದರ	1777
೨೪	ರೋಣ ತಾಲೂಕಿನ ವರ್ಣನೆಯು	ಸದರ	ಸದರ	೦– ೨–೬	ಸದರ	ಸದರ	1779
೨೫	ಗದಗ ತಾಲೂಕಿನ ವರ್ಣನೆಯು	ಸದರ	ಗ್ರಂಥಕರ್ತರು	೦– ೨–೬	ಸದರ		1781
೨೬	ಹುಬ್ಬಳ್ಳಿ ತಾಲೂಕಿನ ವರ್ಣನೆ	ಸದರ	ಸದರ	೦– ೨–೬	ಸದರ		1783
೨೭	ಸನೆಯ ದರ್ಜೆಯ	ಮೆ. ಯು. ಆರ್	ಗ್ರಂಥಕರ್ತರು	೦– ೪–೦	ಪ್ರಾ. ಶಾ. ಗಳ ವಿ. ಗಳ L		1785

ಕನ್ನಡ ಬುಕ್ ಕಮಿಟಿ ಫಿಲಿಪೀಡಿ ಇವರಿಂದಾ ದಿನ-೩-೩೭ ನೆಯ ದಿವಸ ಮಂಜೂರಾದ ಪುಸ್ತಕಗಳು

ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ.	ಇ. ಸಾ. ನಂ.	ಪಾ. ಸ್ಕಾ. ರ ನಂ,
೧	ಬಸವೇಶ್ವರ ಷಟ್ ಸ್ಥಲ ವಚನದ ಕಥಾಸಾರ ೧೯೩೪	ರಾವಸಾಹೇಬ ಪಿ.ಜಿ. ಹಳಕಟ್ಟಿ, ಬಿ. ಎ., ಎಲ್ ಎಲ್. ಬಿ. ಪ್ಲೀಡರ, ವಿಜಾಪೂರ	ಗ್ರಂಥಕರ್ತರು	೦-೧೨-೦	ಪ್ರಾ ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ತಿ. ರ L ಬುಕ್ಕಾಗಿ ಹಾಗು ಮಾಧ್ಯಮಿಕ ಶಾ. ಗಳ ತಿ. ರ L ಬು.	47 P / 2172	S 86 C / 732 C / 24 5-37
೨	ಕೋಲಿಕೆ ೧೯೩೪	ಸದರ	ಸದರ	೦- ೯-೦	ಮಾ. ಶಾಲೆಗಳ ವಿ. ಗಳ L ಬುಕ್ಕಾಗಿ	,,	ಸದರ ನಂ. 734 / ಸದರ
೩	ಭಾರತೀಯ ಮಹಾ ಪುರುಷರು ೧೯೩೩	ಸದರ	ಸದರ	೦ - ೯-೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ತಿ. ರ L ಬುಕ್ಕಾಗಿ ಹಾಗು ಮಾ. ಶಾ. ಗಳ ತಿ. ರ L ಬುಕ್ಕಾಗಿ.	ಸದರ	ಸದರ ನಂ. 733 / 24-5-37
೪	ಬೇಳಗಿ ಅರಸುಗಳ ವಂಶಾವಳಿ ೧೯೩೩	ಸದರ	ಸದರ	೦- ೯-೦	ಸದರ	ಸದರ	ಸದರ ನಂ 730 / 24-5-37

೫	ವರದಾನಿ ಗುಡ್ಡಮ್ಮಯ್ಯ ಚರಿತ್ರೆ ೧೯೩೬	ಸದರ	ಸದರ	೦–೩–೦	ಪ್ರಾ. ಶಾ. ಗಳ ತೆ. ರ ಹಾಗುಟ್ರೀ. ಸಂ. ಗಳ ವಿ. ಗಳ L ಬುಕ್ಕಾಗಿ ಹಾಗೂ ಮಾ. ಶಾ. ಗಳ ತೆ. ರ L. ಬು.	47 P 2172	ಸದರ ನಂ 729 24-5-37
೬	ಉರಿಲಿಂಗ ಪೆದ್ದಿಯ ವಚನಗಳು	ಸದರ	ಸದರ	೧– ೦–೦	ಹೈ. ಟ್ರೀ. ಸಂ. ಗಳ ವಿ. ಗಳ ಹಾಗು ಪ್ರಾ. ಶಾ. ಗಳ ವಿ. ಗಳ ಮತ್ತು ತೆ. ರ L ಬುಕ್ಕಾಗಿ	ಸದರ	ಸದರ ನಂ. 727 ಸದರ
೭	ಸಾಮಾನ್ಯವಿಜ್ಞಾನ ಭಾಗ ೧ ೧೯೩೬	ಮೆಸರ್ಸ ಯು. ಆರ್ ಲೇಖೈ ಸನ್ಸ್, ಬುಕ್ ಸೇಲರ್ಸ ಕಾರಸ್ಟ್ರೀಟ್ ಮಂಗಳೂರ	ಗ್ರಂಥಕರ್ತರು	೦–೧೦-೦	ಪ್ರಾ. ಶಾ. ಗಳ ಹಾಗೂ ಹೈ. ಟ್ರೀ. ಸಂ. ಗಳ ವಿ. ಗಳ L ಮತ್ತು ಮಾ. ಶಾ. ಗಳ ವಿ. ಗಳ L ಬು.	47 P 2170	S 86 C 724 C ಸದರ
೮	ಸಾಮಾನ್ಯವಿಜ್ಞಾನ ಭಾಗ ೨ ೧೯೩೬	ಸದರ	ಸದರ	೦–೧೦-೦	ಸದರ	ಸದರ 2168	ಸದರ 24-5-37

೬೯ ಪುಸ್ತಕ ಕಾಯ್ದೆ

	ಸಾಮಾನ್ಯ ವಿಜ್ಞಾನ ಭಾಗ ೩	ಮೆ॥ ಯು. ಆರ್. ಲೇಜ್ಲೆ ಹಾಗು ಸನ್ಸ ಕೂಡಿಯಲ್ ಬಾಯಿಲ್ ಕಾರ ಸ್ಟ್ರೀಟ ಮಂಗಳೂರ	ಗ್ರಂ. ಕ.	೮– ೧–೦	ಪ್ರಾ. ಶಾ. ಗಳ ಪ್ರೌ. ಶಾ. ಗಳ ಟ್ರೇ. ಸಂ. ಗಳ ವಿ. ಗಳ L ಬು. ಹಾಗು ಮಾ. ಶಾ. ಗಳ ವಿ. ಗಳ L ಬು.	47 P 2164	s-86-c 724-c 24-5-37
೧೦	ಹೂಗನ್ನಡ ಪಾಠ ಮೂಲೆ ಬುಕ್ಕು VI	ಸದರ	ಸದರ	೦– ೬–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ ಹಾಗು ಮಾ. ಶಾ.ಗಳ ವಿ. ಗಳ L ಬು.	ಸದರ ಸ. 2166	ಸದರ 723 22–5–37
೧೧	ಹೂಗನ್ನಡ ಪಾಠ ಮೂಲೆ ಬುಕ್ಕು VIII ೧೯೩೬	ಸದರ	ಸದರ	೦– ೬–೦	ಪ್ರಾ. ಶಾ ಗಳ ವಿ. ಗಳ L ಬುಕ್ಕಾಗಿ ಹಾಗು ಮಾ. ಶಾ. ಗಳ ವಿ. ಗಳ Lಬು.	ಸದರ 2162	ಸದರ ನಂ. 723 22–5–37
೧೨	ಹೂಗನ್ನಡ ಪಾ.ಮಾ ಬುಕ್ಕು VII	ಸದರ	ಸದರ	೦– ೬–೦	ಸದರ	ಸದರ/2160	ಸದರ
೧೩	ಶಾಸನಶಾಸ್ತ್ರ ಪರಿಚಯ	ಮ. ಡಿ. ಪಿ. ಕರಮರ್ಕರ ಲೈನ ಬಝಾರ ಧಾರವಾಡ	ಮ. ಆರ್. ಡಿ. ಕಾಳೆ. ಲೈನಬಝಾರ ಧಾರವಾಡ	೦– ೯–೦	ಪ್ರಾ. ಶಾ. ಗಳ ,, ಟ್ರೇ. ಸಂ.ಗಳ ಶಿ.ರ L ಬು. ಹಾಗು ಮಾ. ಶಾ.ಗಳ ಶಿ. ರ Lಬು.	ಸದರ 2158	739 12–5–37

೧೪	ಅಪ್ಪೈತ ಮಕರಂದ	ಮು. ಕೆ. ನರಸಿಂಹ ಭಟ್ಟ ಅಪ್ಪೈತಾಶ್ರಮ ರತ್ನವಿಲಾಸ ಪ್ರೀಟ ಬಸವನ ಗುಡಿ ಬೆಂಗಳೂರ	ಗ್ರಂ. ಕ.	೦–೮–೦	ಪ್ಲಂ. ಟ್ರೇ. ಸಂ. ಗಳ ಶಿ. ರ L ಬುಕ್ಕು ಹಾಗು ಮೂ. ಶಾ. ಗಳ ಶಿ. ರ L ಬು.	47 P / 2156	ಸದರ 720 / 22-5-37
೧೫	ನಿಷ್ಕಾಮ ಪ್ರೇಮ ಗಿನೆ ಆವೃತ್ತಿ	ಮ್ಯಾನೇಜಿಂಗ ಡಾಯರೆಕ್ಟರ ಬಾಲ ಸಾಹಿತ್ಯ ಮಂಡಳ ಮಂಗಳೂರ	ಬಾಲಸಾಹಿತ್ಯ ಮಂಡಳ ಮಂಗಳೂರ	೦–೧೨–೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಮೂ. ಶಾ. ಗಳ ವಿ. ಗಳ L	47 P / 2154	ಸದರ 725 / 24-5-37
೧೬	ವಿಜಯನಗರ ಸಾಮ್ರಾಜ್ಯ	ಚೇಅರಮನ್ ವಿಜಯನಗರ ಸಾಮ್ರಾಜ್ಯ ಇನ ಸ್ಟೂಶನ್ ಧಾರವಾಡ	ವಿಜಯನಗರ ಸಾಮ್ರಾಜ್ಯ ಮಂಡಲ	೧–೧೪–೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಹಾಗು ಮೂ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ	47 P / 2152	ಸದರ 738 / 24-5-37
೧೭	ಗಣಿತ ಶಿಕ್ಷಕ ಳನೆ ಆ. ೧೯೩೬	ಮು. ಜಿ. ಡಿ. ಹಿರೇಮಠ	ಮು. ಜಿ. ಡಿ. ಹಿರೇ ಮಠ ಮಾಸ್ತೂರ ಮತ	೦–೧೪–೦	ಪ್ರಾ. ಶಾ. ಗಳ, ಮೂ. ಶಾ. ಗಳ		ಸದರ 737

೨೬

	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮುಂ. ಇ. ಸಾ. ರ. ನಂ. ಪಾ. ಸಾ. ರ ನಂ.		
೧	ಶಿವಂಭಾವ ಸೂತ್ರ ಎನೆ ಆ. ೧೯೩೪	ರಾ. ಸಾ. ಪಿ. ಜಿ. ಹಳಕಟ್ಟಿ ಬಿ. ಎ, ಎಲ್ ಎಲ್. ಬಿ. ಪ್ಲೀಡರ, ವಿಜಾಪೂರ	ಗ್ರಂ. ಕ.	೦–೧೨ ೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ಶಿ.ರ L ಮತ್ತು ಮೂ. ಶಾ. ಗಳ ಶಿ. ರ L ಬುಕ್ಕಾಗಿ	47 P / 2420	S86C731-C / 24-5-37
೨	ಅಂಬಿಗರ ಚೌಡಯ್ಯನ ವಚನಗಳು ೧೯೩೪	ಸದರ	ಸದರ	೦–೧೪-೦	ವ್ಹ. ಟ್ರೇ. ಸಂ. ಗಳ ವಿ. ಗಳ L ಹಾಗು ಪ್ರಾ. ಶಾ. ಮೂ.ಶಾ.ಗಳ ಶಿ.ರL	2418	ಸದರ ನಂ. 726 / ಸದರ
೩	ಪ್ರಾಣಾರ್ಪಣೆಯ ಪ್ರಥಮ ಪುಸ್ತಕ ಭಾಗ ೧. ಎನೇ ಆ. ೧೯೩೬	ಮೆ. ಲಾಂಗಮನ್ ಗ್ರೀನ ಆಂಡ ಕಂ. ಮುಂಬಯಿ	ಸದರ	೦– ೨–೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ವಿ. ಗಳ L ಹಾಗು ಮೂ. ಶಾ. ಗಳ ವಿ. ಗಳ L ಬು.	2422	ಸದರ ನಂ 722 / ಸದರ
೪	ಪ್ರಬುದ್ಧ ಒಕ್ಕಲಿಗ ಭಾ. ೧. ಎನೇ ಆ. ೧೯೩೬	ಮೆ. ವ್ಹಿ. ಸಿ. ಪಾವಟೆ ಸಾ. ಕಾಟನ್ ಸುಪ. ಧಾರವಾಡ	ಮು. ಎಚ್. ಎಸ್. ಶಿವಲಿಂಗಶಾಸ್ತ್ರಿಗಳು ಧಾರವಾಡ	೧– ೦–೦	ಸದರ ಸದರ ಹಾಗು ಅಗ್ರಿಕಲ್ಚರ ಬಾಯು ಸ್ ಕ್ಲಾ. T ಬು.	2414	ಸದರ ನಂ. 741 / ಸದರ

೫	ಹಿಂದುಸ್ಥಾನದ ಕನ್ನಡ ಇತಿಹಾಸವು ಇ. ಮೂರ್ಸಡನ್ನರ ವರ ಸುಧಾರಿಸಿದ ಆ.	ವ್ಯಾಕ್ಮಿಲನ್ ಅಂಡ ಕಂಪನಿ, ಬಾಂಬೆ.	ಗ್ರಂಥಕರ್ತರು	೦– ೪–೦	ಪ್ರಾ. ಶಾ. ಗಳ ಮೂ. ಶಾ. ಗಳ ಪ್ಲೈ. ಸಂ. ಗಳ T	47 P 2416	S 86 C 735 24-5-37	೬೯
೬	ಹೊಸಮಾದರಿಯ ಅಂಕಗಣಿತ ಸಂಗ್ರಹ ಭಾ. ೧. ಸುಧಾರಿಸಿದ ಆವೃತ್ತಿ.	ಸಿ.ಎಸ್.ಕುಲಕರ್ಣಿ ಗುಂಜೀಕರ ಬಂಗ್ಲೆ ಮಾಳಮಡ್ಡಿ, ಧಾರವಾಡ	ಸದರ	೦– ೫–೦	ಪ್ರಾ. ಶಾ. ಗಳ ಶಿ. ರ L ಹಾಗು ಮೂ. ಶಾ. ಗಳ ಶಿ. ರ L	2412	ಸದರ ನಂ 721 225–37	
೭	ಸುಲಭ ಭೂಮಿತಿ ಭಾಗ ೧	ಮ. ಡಿ. ಎಮ್. ಜೋಗುಳ, ಅಸಿ. ಮೂ. ಪ್ರಾ. ಸ್ಕೂ. ಪ್ರೆ. ಕಾ. ಪೂನಾ	ಸದರ	೦–೧೧–೦	ಪ್ರಾ. ಶಾ. ಗಳ ಹಾಗು ಮೂ. ಶಾ. ಗಳ ಪ್ಲೈ. ಸಂ. ಗಳ T ಬುಕ್ಕು	2408	ಸದರ ನಂ. 736 24–5–37	ಬಿಡುಗಡೆಯಾದ ಪುಸ್ತಕಗಳು
೮	ಕನ್ನಡ ಬಾಲಬೋಧೆ ೧೯೩೬	ಮೆ. ಟಿ. ಹಿ. ಕಟ್ಟಿ ಹೆ. ಮೂ. ನರಸ್ಕಾ ಪೂರ, ಕ. ಶಾ.	ಸದರ	೦– ೧–೬	ಪ್ರಾ. ಶಾ. ಗಳ T ಬುಕ್ಕು	2410	ಸದರ 719 22–5–37	
೯	ಕನ್ನಡ ಬಾಲಬೋಧೆ ೨ನೆಯ ಆ. ೧೯೩೬	ಮಿ. ಎಸ್. ಎಫ್. ಕಟ್ಟೀಮನಿ, ಹೆ. ಮೂ. ಕ. ಬಾ. ಸ್ಕೂ.	ಸದರ	೦ – ೧–೯	ಸದರ	2406	ಸದರ 740 24–5–37	

ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.
T=ಟೆಕ್ಸ್ಟ L=ಲಾಯಬ್ರರಿ ಶಿ=ಶಿಕ್ಷಕರು ವಿ=ವಿದ್ಯಾರ್ಥಿಗಳು ಆ=ಆವೃತ್ತಿ

	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧	ಉರ್ದುಕಾ ಆಸಾನ್ ಕಾಯದಾ ೧ ನೆಯ ಆ. ೧೯೩೬	ಸೈಯ್ಯದ ಮಹಮ್ಮದ ಝೂಕಿ ಸುಪರ್ವಾಯಿ ಝುರ ಉರ್ದು ಬಾಯ್ಜ ಸ್ಕೂಲ್ಸ ಕರಾಚಿ	ಕಾಪೂರ ಬ್ರದರ್ಸ ಖಂಡರ ರೋಡ ಕರಾಚಿ	೦– ೧–೬	ಪ್ರಾ. ಶಾ. ಗಳ T ಬು.
೨	ತಾರೀಖ–ಎ–ಇಸ್ಲಾಮ ೨ನೆ. ಆವೃತ್ತಿ ೧೯೩೬	ಮುನ್ಸಿ ಅಬ್ದುರ್ರಹಿಮಾನ ನಾತಿಕ್	ಅಖ್ತಾರ ಬುಕ್ ಡಿಪೋ ಬಾಂಬೇ ೩	೮– ೨–೦	ಮಾದ್ರೇಸಾಸ್ ಶಾಲೆಗಳ (ಸಿಂಧ ಪ್ರಾಂತದ ಉರ್ದು ಶಾಲೆಗಳ) T ಬುಕ್ಕಾಗಿ
೩	ಗುಲ್ ದಸ್ತ–ಎ–ಅದಬ್ ಭಾ. ೧ (೩ ನೆ. ಆ. ೧೯೩೬)	ಅಬ್ದುಲ್ ಹಕೀಮು	ಅಂಜುಮನ್–ಎ–ಹಿಮಾಯತ್–ಎ ಇಸ್ಲಾಮು ಲಾಹೋರ	೦– ೬–೦	ಪ್ರಾ. ಶಾ. ಗಳ ಶಿ. ರ ಹಾಗು ವಿ. ಗಳ L ಬುಕ್ಕಾಗಿ
೪	ಇಲ್ಮ–ಎ ಬದನ್ ೧ನೆ. ಆ. ೧೯೩೬	ಡಾ. ಮುಹಮ್ಮದ ಯಾಸಿನ್ ಸಿದ್ದೀಕಿ	ಗ್ರಂಥಕರ್ತರು	೧– ೦–೦	ಶಿ. ರ L ಬುಕ್ಕಾಗಿ

೧೬

೫ ಹಾಗು ೬	ಉರ್ದುಕಾ ಕಾಯದಾ ಬಾತಚೀತ ನಂ. ೫ ಮತ್ತು		ಆಲ್ ಇಂಡಿಯಾ ಎಜ್ಯು ಕೇಶನಲ್ ಲಿಟ್ರೇಚರಿ ಬುಕ್ ಸೊಸೈಟಿ ಲಾಹೋರ	೦- ೦-೬ ೦- ೧-೦	ಪ್ರಾ. ಶಾ. ಗಳ ೫. ರ L ಬುಕ್ಕಾಗಿ
೭,೮ ಹಾಗು ೯	ಹಿಂದುಸ್ತಾನಿ ಸ್ಟ್ಯಾಂಡರ್ಡ ಹಿಸಾಬ ಭಾ. ೧, ೨, ೩. (ಫಾರ ಬಾಂಬೆ ಪ್ರೆ. ಗರ್ಲ್ಸ ಸ್ಕೂಲ್ಸ)		ನ್ಯೂ ಇಂಡಿಯಾ ಪಬ್ಲಿ ಸಿಂಗ ಕಂ. ಲಾಹೋರ	೦- ೩-೬ I ೦- ೬-೬ II ೦- ೭-೬ III	೫. ರ L ಬುಕ್ಕಾಗಿ
೧೦	ಉರ್ದುಕಿ ಆಸಾನ ಸರಫ ವ ನಹು	ಶೇಖ ಮುಸ್ತಾಖ ಅಹ್ಮದ ಹೆ. ಮಾ. ಗ. ಸೀ. ಯು. ರತ್ನಾಗಿರಿ	ಮದೀನಾ ಬಾರ್ಮಿ ಪ್ರೆಸ್ ಬ್ರಿಜ್ಞೋರ	೦- ೫-೦	ಪ್ರಾ. ಶಾ. ಗಳ ೬ನೆಯ ಇಯತ್ತೆಯ ಗ್ರಾಮರ T ಬುಕ್ಕಾಗಿ
೧೧	ಪೊಯಿನುಲ್ ಕನಾಯಿದ್ ಭಾ. ೧	ಸಿದ್ದಿಕ್ ಅಹ್ಮದ ಸಿದ್ದಿಕಿ	ದಿ. ನ್ಯಾಶನಲ್ ಪ್ರೆಸ್ ಅಲಹಾಬಾದ	೦- ೪-೬	೫. ರ L ಬುಕ್ಕಾಗಿ
೧೨	ಆಫ್ತಾಬ್ ಜ್ಯಾಮಿಟರಿ ಭಾ. ೧	ಪಾಜಿ ಖುರ್ ಸಿದ್ದ ಅಹ್ಮದ	ಸದರ	೦- ೮-೦	ಸದರ
೧೩	ಆಫ್ತಾಬ್ ಜಾಮಿಟರಿ				

೧೪	ಉರುಸುಲ್–ಬಿಲಾದ (ಬಾಂಬೆ ದಿ. ಬ್ಯೂಟಿಫುಲ್)	ಅಸಗರಲಿ ಸಿದ್ದಿಕ್	ತಾಜಮಹಾಲ ಪಾಯಿನ ಆರ್ಟ್ ಪ್ರೆಸ್ ಮುಂಬಯಿ–೮	೦– ೫–೬	ಮುಂಬಯಿ ಸಿಟಿಯೊಳಗಿನ ಪ್ರಾ. ಶಾ. ಗಳಿಗೆ ಮಾತ್ರ T ಬುಕ್ಕಾಗಿ
೧೫	ಜದೀದ ಕಾಯದಾ ೧ನೆ ಆ. ೧೯೩೬	ಮುನಸಿ ಅಬ್ದುರ್ ರಹಿಮಾನ ಅಹ್ಮದ ಹೆ. ಮಾ. ಪೂನಾ ಮು. ಉರ್ದು ಸ್ಕೂ. ನಂ. ೧	ಗ್ರಂಥಕರ್ತ	೦– ೧–೬	ಪ್ರಾ. ಶಾ. ಗಳ T ಬು.
೧೬	ಕವಾಯಿದ್–ಎ–ಮೊಅಲ್ಲಾ ಉರ್ದು (ಪ್ರಾ. ಶಾ. ಗಳ ೪ನೆಯ ಇ. ಗೆ)	—	ನ್ಯೂ ಇಂಡಿಯಾ ಪಬ್ಲಿಸಿಂಗ ಕಂ., ಲಾಹೋರ	೦– ೩–೬	ಶಿ. ರ ಲಾಯಬ್ರರಿ
೧೭ರಿಂದ ೧೯ ಹಾಗು ೨೦	ಮುಶಾಹರಾ ಹಿಸಾಬ ಭಾ. ೧, ೨, ೩ ಹಾಗು ೪ ೧ನೆ ಆ. ೧೯೩೬	ಸೈಯ್ಯದ ಮಹಮ್ಮದ ರಫೂಕಿ ಸುಪರ್ವಾಯಿಜರ ಉರ್ದು ಸ್ಕೂಲ್ಸ ಕರಾಚಿ	ಕಾಪೂರ ಬ್ರದರ್ಸ	೦– ೭–೬ I ೦– ೮–೦ II ೦–೧೧–೬ III ೦–೧೫–೦ IV	ಪ್ರಾ. ಶಾ. ಗಳ T ಬು.
೨೧	ಲಾಂಗಮನ್ಸ ಉರ್ದು ಅಟ್ಲಾಸ್	ಲಾಂಗಮನ್ ಗ್ರೀನ್ ಆ್ಯಂಡ ಕ. ಲಿ. ಮುಂಬಯಿ		೦–೧೩–೦	ನಕಾಶೆಗಳಂತೆ ಉಪಯೋಗಿಸುವುದಕ್ಕಾಗಿ

೨೭	ಬಚ್ಚಿಟ್ಟಿಂಕ ನಮಸ್ಕಾರ	ಸಮಾನ, ಉಪಯುಕ್ತವಾದ ಉಪಕ್ರಿಯ	ಬಾಲ್ ಪೆನ್ಸಿಲ್	ಬಾ. ಗಳ ಪ ಗಳ
ಮಾಡಿಗು	ಬಚ್ಚಿಟ್ಟಿಂಕ ಹೋಗಿಬರುವ	ನಾವಿಕ್ ನಮಸ್ಕಾರ	ಬಾಲಂಬೆ	L ಬಾ.
೨೫				ನಮಸ್ಕಾರ
೨೬	ಸಗಾರಿಸಾಹ್ಮಿಸ್ – ನಿ –			ನಮ. ಬಾ. ಗಳ T ಬಾಲ್
೨೭	ಉಪಯೋ	ಹೊಸಬರು ಉಪ್ಪಿರಿ	ನಮಿಲಿ ಕಿಟಕಿಲಿ	ಹೋಗಿಬರುವ ಬ್ರೈ. ನಂ. ಗಳ
	ಭಾ ೧ ಹೋಗಿ ೨		ಉಪಯೋ	T ಹೋಗಿ ಪ. ಪ L
೨೮	ಕಾಹಿಟಿಬ್ – ಬಿಬ್ಲಿ –		ನಮಸ್	ಪ. ಪ L ಬಾಲ್ಲಿ
	ಉಪಾಧ್ಯಾ ಕ್			

ಸ್ವಯಂಪ್ರ ನಮಸ್ಕಾರ

ನ. ಪ. ಬಾ.

ಪ್ರ ಕ ಟ ನೆ

—ಂಂಂಂಂ—

ಎಲ್ಲ ಕಡೆಗೆ ಬಳಕೆಯಲ್ಲಿರುವ ಪಂ. ಪೂಜಾರಕೃತ ಕನ್ನಡ ವ್ಯಾಕರಣ ಪುಸ್ತಕಗಳು.

ಭಾಗ ನುಡಿಗನ್ನಡಿ. ಪ್ರಾಥಮಿಕ ೩–ಳನೆಯ ಇಯತ್ತೆಗಳಿಗೆ ಬೆಲೆ ೦–೩–೬
ಭಾಗ ನುಡಿಗನ್ನಡಿ. ಪ್ರಾಥಮಿಕ ೫ನೆಯ ಇಯತ್ತೆಗೆ ಬೆಲೆ ೦–೪–೦
ಭಾಗ ನುಡಿಗನ್ನಡಿ. ಪ್ರಾಥಮಿಕ ೬–೭ನೆಯ ಇ. ಗಳಿಗೆ ಬೆಲೆ ೦–೧೦–೦

ಕವಿಶನು— ೧ನೆಯ ೩ನೆಯ ಭಾಗಗಳಿಗೆ ಚಿಲ್ಲರೆ ೩೦/ರಂತೆ, ತೋಕು ೩೫/
೩ನೆಯ ಭಾಗಕ್ಕೆ ಚಿಲ್ಲರೆ ೧೪/ರಂತೆ ತೋಕು೩೦/ರಂತೆ.

ಕಗಳು ಎಲ್ಲ ಬುಕ್ ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು.

ಇಂತಹ ಇನ್ನೊಂದು ಪುಸ್ತಕವೇ ಇಲ್ಲ!
ಶಿಕ್ಷಕರಿಗೆ ಭಾಷಾವಿಷಯ ಕಲಿಸುವ ಅಪೂರ್ವ ಸಾಧನ!

ಕನ್ನಡ ನುಡಿಯ ಹುಟ್ಟು.

ಬರೆದವರು: ಪಂ. ಬಾ. ಜೋಶಿ

ಕನ್ನಡ ಶಬ್ದಗಳಲ್ಲಿ ಹುದುಗಿಕೊಂಡಿರುವ ಅರ್ಥದ ಅಳವು ಗೊತ್ತಿಲ್ಲದ್ದರಿಂದ ಯೋಗ್ಯ ಶಬ್ದಗಳು ಹೊತ್ತಿಗೆ ದೊರೆಯದ್ದರಿಂದ ಆಗುತ್ತಿದ್ದ ಒದ್ದಾಟಕ್ಕೆ ಮೇಲೆ ಅವಕಾಶವೇ ಇಲ್ಲ. ಈ ಪುಸ್ತಕದ ಅಭ್ಯಾಸದಿಂದ ಕನ್ನಡ ನುಡಿಯು ಗೊತ್ತಾಗಿ ಭಾಷೆಯ ಮೇಲೆ ಪ್ರಭುತ್ವವು ಬಾರದೆ ಇರಲಾರದು.

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಇದೊಂದು ಮಹೋಪಕಾರಿಯಾದ ಗ್ರಂಥ.

ಬೆಲೆ— ೧೨ ಆಣೆ ಮಾತ್ರ

ಮಾಧವ ಬಲ್ಲಾಳ ಬಂಧುಗಳು,
ಸಾಧನಕೆರೆ, ಧಾರವಾಡ

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನ
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸ
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚು
ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ
ಶಿರ್ಸಿ, ಉ. ಕಾನಡಾ

Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ	ವಿಷಯ	ಪುಟ.
೧.	ಮುಂಬಯಿ ಸರಕಾರದ ಮಂತ್ರಿಮಂಡಲ	೧
೨.	ಶಿಶುಶಾಲೆಗಳು	೨
೩.	ಇಂಗ್ಲಂಡ್ ದೇಶದ ಒಂದು ಹೆಳ್ಳಿಯ ಶಾಲೆಯು ..	೧೧
೪.	ದುಃಖವಾರ್ತೆ	೧೯
೫.	ಬ್ರಹ್ಮದೇಶದ ಸ್ತ್ರೀಯರು	೨೨
೬.	ಕಲಿಸುವ ಪಾಠವೂ ಟಿಪ್ಪಣಿಯೂ	೨೪
೭.	ನಮ್ಮ ಶಾಲೆಗಳಲ್ಲಿಯ ವ್ಯಾಯಾಮ ಶಿಕ್ಷಣ	೨೯

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರವ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಲ್ಲಿ

	ರೂ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	0
ಮುಸಲ್ಮಾನರ ಅರಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	0
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	0
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	0
ಲಘುವ್ಯಾಕರಣ (ವೈ. ಕಟ್ಟೀಕೃತ)	0
ಪೇಶೀ ಜವಾಬಿಚ್ರ್ಯ ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	0
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	0
ಚಿಕ್ರಮವು ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	0
ಗಣಿತಾವರ್ತ (ಜೋಸಿ ಕೃತ) ೨ನೇ ಇ. ಗೆ	0
,, ೩ನೇ ,,	0
,, ೪ನೇ ,,	0
ಅಂಕಗಣಿತ (ಗಾಂಜಿಕರಕೃತ) ೩ನೇ ,,	0
ಕರ್ನಾಟಕ ಇತಿಹಾಸ (ಅಷಬಡ್ಡಿ ಕೃತ)	0
ಭೂಮಿತಿ-ವ್ಯವಹಾರಗಣಿತ (ಕುಲಕರ್ಣಿ ಕೃತ)	0
ಧಾರವಾಡ ಜಿಲ್ಲಾ ,, (ಕುರಡೀಕೃತ)	0
ಹಿಂದುಸ್ತಾನ ಭೂಗೋಲು (ಮಗದಾಲಕೃತ)	0
ಪ್ರಥಮೋತ್ತೀರ್ಣ ಜವಾಬಿಚ್ರ್ಯ (ಬೆಟಗೇರಿ ಕೃತ)	0
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	0
ವಿಜ್ಞಾನ ಸಚಿತ್ರ (ನಾಡಗೇರಕೃತ) ಭೂಗೋಲ	0
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	0
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	0
ಭೂಮಿತಿ (ಜಂದಾಪರಕರ ಕೃತ)	0
ಸರಸ್ವತೀ ವಿಜಯ (ಬೂದೀಹಾಳಕೃತ)	0

ಪತ್ರೆ:— ಏ. ಆರ್. ಶಿವನಾಗಪ್ಪ
ಬುಕ್‌ಸೇಲರ, ಹುಬ್ಬ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಪುಟ ೭೬ | ಆಗಷ್ಟ ೧೯೫೭ | ವರ್ಷ ೯ ಸಂ. ೫.

ಮುಂಬಯಿ ಸರಕಾರದ ಮಂತ್ರಿಮಂಡಲ

ಮುಂಬಯಿ ಅಸೆಂಬ್ಲಿಯ ಮಂತ್ರಿಮಂಡಲವು ಕಳೆದ ತಿಂಗಳಲ್ಲಿ ಪ್ರಕಟ ಗಿದ್ದು ಅದರ ಕಾರ್ಯವಿಭಾಗವು ಈ ಕೆಳಗಿನಂತಿರುವದು:—

ನರೇಬಲ್ ಮಿ. ಜಿ. ವಿ. ಮಾವಲಸಕರರು— ಅಧ್ಯಕ್ಷರು.

ನರೇಬಲ್ ಮಿ. ಬಿ. ಜಿ. ಖೇರರು—

ಮುಂಬಯಿ ಅಸೆಂಬ್ಲಿಯ ಮುಖ್ಯ ಮಂತ್ರಿಗಳು. ಅವರೇ ಶಿಕ್ಷಣಖಾತೆಯ ಮಂತ್ರಿಗಳೂ ಆಗಿರುವರು.

ನರೇಬಲ್ ಮಿ. ಎ. ಬಿ. ಲಠ್ಠೆಯವರು – ಆಯವ್ಯಯದ ಮಂತ್ರಿಗಳು.

ನರೇಬಲ್ ಮಿ. ಕೆ. ಎಮ್. ಮುನಶಿಯವರು—

ಕಾಯದೆಯ ಮತ್ತು ಹೋಮ ಡಿಪಾರ್ಟಮೆಂಟಿನ ಮಂತ್ರಿಗಳು.

ನರೇಬಲ್ ಡಾ॥ ಎಮ್. ಡಿ. ಗಿಲ್ಡರರು—

ಆರೋಗ್ಯ (ಔಷಧಾಲಯಗಳ ಮೇಲ್ವಿಚಾರಣೆ, ಸಾರ್ವಜನಿಕ ಆರೋಗ್ಯ ಮತ್ತು ಅಬಕಾರಿ) ಖಾತೆಯ ಮಂತ್ರಿಗಳು.

ನರೇಬಲ್ ಮಿ. ಮುರಾರಜಿ ಆರ್. ದೇಸಾಯಿಯವರು—

ರೆವೆನ್ಯೂ, ಗ್ರಾಮಸುಧಾರಣೆ ಮತ್ತು ಒಕ್ಕಲತನ ಖಾತೆಗಳ ಮಂತ್ರಿಗಳು.

ಆನರೇಬಲ್ ಮಿ. ಎಮ್. ವಾಯ್. ಸೂರಿಯುವರು—

ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳು.

ಆನರೇಬಲ್ ಮಿ. ಎಚ್. ಎಮ್. ಪಾಟೀಲ—

ಲೋಕಲ್ ಸೆಲ್ಫ್ ಗವರ್ನಮೆಂಟ್ (ಸ್ಥಾನಿಕ ಸ್ವರಾಜ್ಯ) ಖಾತೆಯ ಹಾಗೂ ಇತರ ಖಾತೆಗಳ ಮಂತ್ರಿಗಳು.

ಶಿಶುಶಾಲೆಗಳು

(ಎಪ್ರಿಲ್ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

೨. **ಅಸಹ್ಯತೆ ಮತ್ತು ತಿರಸ್ಕಾರಭಾವನೆ—** ಈ ಮನೋವೃತ್ತಿಯನ್ನು ಶಿಕ್ಷಕರು ಬಾಲಕರ ನೈತಿಕ ಶಿಕ್ಷಣವಲ್ಲಿ ಹೆಚ್ಚಾಗಿ ಉಪಯೋಗಿಸಿಕೊಳ್ಳಬಹುದು. ಕ್ರೂರಾಚರಣೆಯ ಮತ್ತು ಅಸ್ವಚ್ಛತೆಯ ಎಲ್ಲ ಪ್ರಸಂಗಗಳಲ್ಲಿ ಈ ಭಾವನೆಯನ್ನು ಜಾಗ್ರತಗೊಳಿಸಬೇಕು.

೩. **ಶೋಧಕಬುದ್ಧಿ** (Curiosity) **ಅಥವಾ ಕುತೂಹಲ ಮತ್ತು ಆಶ್ಚರ್ಯಭಾವನೆ—** ಬಾಲಕರಿಗೆ ಅಂಶತಃ ಅಪರಿಚಿತವಾದ ಸಂಗತಿಗಳಿಂದ ಮನೋವೃತ್ತಿಯು ಜಾಗ್ರತವಾಗುವದು; ಮತ್ತು ಅಸಂಗತಿಗಳ ಬಗ್ಗೆ ಹೆಚ್ಚಿನ ತಿಳಿವಳಿಕೆಮಾಡಿಕೊಳ್ಳಬೇಕೆಂಬ ಬಯಕೆಯನ್ನು ಹುಟ್ಟಿಸುವದರ ಮೂಲಕ ಈ ಭಾವನೆಯು ತೃಪ್ತಿಹೊಂದುವದು. ಈ ಸಂದರ್ಭಗಳಲ್ಲಿ ಆಶ್ಚರ್ಯಭಾವನೆಯೊಡನೆಯೇ ಭಯದ ಉತ್ಪತ್ತಿಯು ಆಗುತ್ತಿದ್ದರೂ ಅದು ಭಯದಿಂದ ಓಡಿಹೋಗುವ ಅಥವಾ ಅಡಗಿಕೊಳ್ಳುವ ಪ್ರವೃತ್ತಿ (ಪಲಾಯನೆಯದು) ಯಷ್ಟು ಪ್ರಬಲವಾಗಿರುವದಿಲ್ಲ.

ಶೈಕ್ಷಣಿಕ ದೃಷ್ಟಿಯಿಂದ ಈ ಭಾವನೆಗೆ ತುಂಬ ಮಹತ್ವವಿರುವದು. ಬಾಲಕರಿಗೆ ತಮ್ಮ ಕೆಲಸದಲ್ಲಿ ಅಭಿರುಚಿಯುಂಟಾಗಲಿಕ್ಕೆ ಈ ಭಾವನೆಯು ತೀ ಆವಶ್ಯಕವಾಗಿರುವದು. ಶೋಧಕಬುದ್ಧಿಯು ಚಿಕ್ಕಬಾಲಕರಲ್ಲಿ ವಿಶೇಷವಾಗಿ ಕಂಡುಬರುವದು. ಮತ್ತು ಅವರು ಆ ಪದಾರ್ಥಗಳನ್ನು ಮುಟ್ಟಿ, ಮಾತೆಗೆದುಕೊಂಡು, ಬಾಯೊಳಗಿಟ್ಟು ರುಚಿನೋಡಿ ಇಲ್ಲವೆ ಇದ್ದದ್ದರೊಳಗೆ ಏನಾದರೂ ಹೆಚ್ಚುಕಡಿಮೆಯಾಗಿ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ

ಪುತ್ತಿರುವರು. ಇಂಥ ಶಿಶುಗಳಿಗಾಗಲಿ ಪರರಿಗಾಗಲಿ ಏನಾದರೂ ಕೇಡು ಸಬಹುದಾದ ಸಂದರ್ಭವಿದ್ದಹೊರತು ಅಘಾತ್ ಯೋಗ್ಯ ಕಾರಣವಿದ್ದ ರತು ಪರರು ಹೀಗೆ ಶೋಧಕಬುದ್ಧಿಯು ಪ್ರೇರಣೆಯಿಂದ ಕೆಲಸಮಾಡುತ್ತಿರುವ ಕರನ್ನು ಪ್ರತಿಬಂಧಿಸಲಾಗದು. ಬೇರೆ ಬೇರೆ ಬಾಲಕರಲ್ಲಿ ಈ ಶೋಧಕ ದ್ಧಿಯ ಪ್ರಮಾಣವು ಭಿನ್ನಭಿನ್ನವಾಗಿರುವದು. ಈ ಮನಃಪ್ರವೃತ್ತಿಯು ಪು ಪ್ರಮಾಣದಲ್ಲಿರುವ ಬಾಲಕರಲ್ಲಿ ಇದನ್ನು ಜಾಗ್ರತಗೊಳಿಸಿ ಬೆಳಿಸುವದಕ್ಕೆ ಕರು ಯತ್ನಿಸಬೇಕಾಗುವದು. ಯಾಕಂದರೆ, ಈ ಮನೋವೃತ್ತಿಯು ಲಕವಾಗಿಯೇ ಹೊಸ ಹೊಸ ಶಾಸ್ತ್ರೀಯ ಶೋಧಗಳು ಜಗತ್ತಿನಲ್ಲಿ ಬೆಳಕಿಗೆ ಸು ಸಮುಗೆ ಅತ್ಯಂತ ಉಪಕಾರಮಾಡಿವೆ; ಈ ಮನೋವೃತ್ತಿಯೇ ಶಾಸ್ತ್ರೀಯ ೀಧಗಳ ಉತ್ಪತ್ತಿಗೆ ಕಾರಣವಾಗುವದು. ಅದುವರಿಂದ ಬಾಲಕರಲ್ಲಿರುವ ತರದ ಪ್ರಶ್ನೆಕೇಳುವ ಕುತೂಹಲಬುದ್ಧಿಯು ಅವರ ಜ್ಞಾನಕ್ಕೆ ಅತಿ ಮುಖ್ಯ ದ ಸಾಧನವೆಂದು ಹೇಳಲ್ಪಡುವದು. ಮತ್ತು ಶಿಕ್ಷಕರು ಈ ಕುತೂಹಲ ನ್ನ ಬಾಲಕರಲ್ಲಿ ಹೆಚ್ಚಿಸುತ್ತಿರಬೇಕೆಂದು ಬಲ್ಲವರು ಹೇಳುವರು.

೪. **ಜಗಳಗಂಟತನ ಮತ್ತು ಕೋಪ**— ವ್ಯಕ್ತಿಗತವಾದ ಅಧಿಕಾರದ ವಾ ಇಚ್ಛೆಯ ವಿರುದ್ಧ ವರ್ತನೆಯಿಂದ ಈ ಮನೋವೃತ್ತಿಯು ವ್ಯಕ್ತವಾಗು ಂ. ಉದಾ:— ಎಡವಿಬಿದ್ದ ಮಗುವು ತನ್ನ ಕಾಲಿಗೆ ತಡೆದ ಕಲ್ಲುಕಟ್ಟಿಗೆಗಳ ಲೆ ಸಿಟ್ಟಿಗೇಳಬಹುದು. ಮತ್ತು ಅದನ್ನು ತುಳಿದು ಅಥವಾ ಎತ್ತಿ ಬಿಗೆದು ಸೇಡುತೀರಿಸಿಕೊಳ್ಳಲು ಯತ್ನಿಸಬಹುದು. ಅದರಂತೆಯೇ ತಾನು ಮಾಡ ಹೊರೆದೆನಿಸುವ ಕೆಲಸಕ್ಕೆ ತಡೆಯನ್ನುಂಟುಮಾಡುವ ಓರಗೆಯ ಗೆಳೆಯರ ಲೆಯೂ ಇತರರ ಮೇಲೆಯೂ ಮಗುವು ಕೋಪಗೊಳ್ಳುವದು. ಆ ಕೋಪವು ಗೆ ಸೋವನ್ನುಂಟುಮಾಡಿದ, ತೊಂದರೆಗೊಳಿಸಿದ ಇಲ್ಲವೆ ತನ್ನ ಇಚ್ಛಾಪೂರ್ತಿಗೆ ವನ್ನುಂಟುಮಾಡಿದ ವ್ಯಕ್ತಿಯನ್ನು ದೂರಮಾಡುವ ಇಲ್ಲವೆ ತನಗಾಗುವ ಹಿಸನ್ನು ಪರಿಹಾರಮಾಡಿಕೊಳ್ಳುವ ಬಯಕೆಯಿಂದ ಕೆಲವೊಂದು ಕಾರ್ಯವನ್ನು ಸಲು ಪ್ರೇರಿಸುವದು. ಈ ಮನಃಪ್ರವೃತ್ತಿಯು ನಮ್ಮ ಅಂಕಿತದಲ್ಲಿದ್ದಾಗ ತ್ತು ಸರಿಯಾದ ಮಾರ್ಗದಲ್ಲಿರುವಾಗ ಮಾತ್ರ ತುಂಬಾ ಪ್ರಯೋಜನಕಾರಿ ಾಗಿರುವದು. ಜಗಳಗಂಟ ಹುಡುಗರನ್ನು ಹಿಂದುಮುಂದು ನೋಡದೆ ದಂಡಿಸಿ ನ ಆ ಮನೋವೃತ್ತಿಯನ್ನು ಕೊಂದುಬಿಡಲು ಯತ್ನಿಸಲಾಗದು. ಅದರೆ ಆ ವೃತ್ತಿಯ ಮೂಲಕ ಓರಗೆಯ ಗೆಳೆಯರಿಗೆ ತೊಂದರೆಯಾಗದಂತೆಯೂ ಆ ವೃತ್ತಿಯು ಯೋಗ್ಯವಾರ್ಗದಲ್ಲಿ ಬೆಳೆವಣಿಗೆಹೊಂದುವಂತೆಯೂ ಅಂಥ ಬಾಲಕ

ರಲ್ಲಿ ಕಂಡುಬರುವ ಆ ತರದ ಚಟುವಟಿಕೆಯಿಂದ ತಕ್ಕ ಪ್ರಯೋಜನವನ್ನು
ಮಂತೆಯೂ ನೋಡಿಕೊಳ್ಳುವುದು ಜಾಣರಾದ ಶಿಕ್ಷಕರ ಕರ್ತವ್ಯವಾಗಿದೆ. ಆ
ತಮ್ಮ ಕೋಪದಿಂದ ತಮಗೆ ಪ್ರಯೋಜನವಾಯಿತೆಂದಾಗಲಿ ತನ್ನು ಮನೋಭೀ
ವನ್ನು ಪಡೆಯುವದಕ್ಕೆ ಕೋಪವು ಒಂದು ಸಾಧನವಾಗುವುದೆಂದಾಗಲಿ ಬಾಲಕ
ಭಾವನೆಯುಂಟಾಗಲಾಗದು. ಕೋಪದ ಅಥವಾ ಜಗಳಗಂಟತನದ ಎಲ್ಲ ಸಂದ
ಗಳಲ್ಲಿ ಬಾಲಕರಿಗೆ ಕೆಡುಕಾಗದಂತೆ ಹೇಗೆ ನಡೆಯಬೇಕೆಂಬುದನ್ನು ನಿರ್ದೇ
ಹೇಳುವದು ಸುಲಭವಲ್ಲ. ತನ್ನು ಪ್ರೀತಿಯ ಯಾವದೇ ಕೆಲಸದಲ್ಲಿ ತೊಡಗಿದ್ದ
ಅವನಕ್ಕೆ ಪ್ರತಿಬಂಧವುಂಟಾದಕೂಡಲೆ ಕೋಪಗೊಳ್ಳುವದು ಚಿಕ್ಕಮಕ್ಕಳ ಸ್ವಭಾ
ವಾಗಿದೆ. ಒಂದು ಮಗುವು ಗೊಂಬೆಯನ್ನು ತೆಗೆದುಕೊಂಡು ಆಡುತ್ತಿದೆಯೆಂ
ತಿಳಿಯೋಣ. ಅದು ಆ ಗೊಂಬೆಯನ್ನು ಇನ್ನೊಬ್ಬನಿಗೆ ಕೊಡಬೇಕಾದ ಸಂದರ್ಭ
ಬಂದಕೂಡಲೆ ಸಿಟ್ಟಿಗೇಳಬಹುದು. ಅಥವಾ ಆ ಆಟವನ್ನು ಬಿಟ್ಟು ಊಟಕ್ಕೆ
ಹೋಗಬೇಕಾದ ಸಮಯ ಒಂದರೂ ಕೂಡ ಅದು ಕೋಪಗೊಳ್ಳಬಹುದ
ಇಂಥ ಸಂದರ್ಭಗಳಲ್ಲಿ ಆ ಸಮಯಕ್ಕಿಂತ ಸ್ವಲ್ಪ ಕಾಲ ಮೊದಲೇ ಅದಕ್ಕೆ ತ
ಸೂಚನೆಯನ್ನು ಕೊಟ್ಟಿರಬೇಕು. ಎಂದರೆ ಅದಕ್ಕೆ ನೀನು ಇಷ್ಟುಹೊತ್ತಿ
ತರುವಾಯ ಈ ಗೊಂಬೆಯನ್ನು ಇಂಥವರಿಗೆ ಕೊಡಬೇಕಾಗುವದು; ಅಥವಾ
ಕೆಲಸವನ್ನು ನಿಲ್ಲಿಸಬೇಕಾಗುವದು; ಆದ್ದರಿಂದ ಅಷ್ಟರೊಳಗಾಗಿಯೇ ನೀ
ಮಾಡುವದನ್ನೆಲ್ಲ ಮಾಡಿಕೊಂಡು ಸಿದ್ಧನಾಗಿರು, ಎಂದು ಮುಂತಾಗಿ ಹೇ
ಬೇಕು. ಇದರಿಂದ ಆ ಮಗುವಿಗೆ ವಿಚಾರಮಾಡಲಿಕ್ಕೆ ಸಾಕಷ್ಟು ಅವಕಾಶ ದೊ
ಯುವದರಿಂದ ತಟ್ಟನೆ ಕೋಪವು ಪ್ರಕಟವಾಗದಿರಲಿಕ್ಕೆ ಕಾರಣವಾಗುವ
ಹುಟುಮಾತಿನವನ ಅಥವಾ ಕೋಪದ ಸ್ವಭಾವದ ಮಗುವಿನ ಮುಂದೆ ಅದು ಪ
ಇದು ಹೀಗೆ, ಎಂದು ಪ್ರತಿಪಾದನೆಮಾಡುವದರಿಂದ ಏನೂ ಪ್ರಯೋಜನವಾಗ
ಅಥವಾ ತಾವೂ ಕೋಪಗೊಂಡು ಬೆದರಿಸಿ ಅದರ ಆ ತರದ ಮನಃಪ್ರವೃತ್ತಿಯ
ಹತ್ತಿಕ್ಕುವದರಿಂದಲೂ ಕಾರ್ಯವಾಗದು. ಕೋಪಗೊಂಡ ಮಗುವನ್ನು ಕ
ದಂಡಿಸಿದು ಶಾಂತವಾಗುವವರೆಗೂ ತನ್ನ ಹತ್ತರ ಇಟ್ಟುಕೊಂಡು ಅದರ ಸಿ
ಇಳಿದು ಸಮಾಧಾನಹೊಂದಿದ ಬಳಿಕ ಅವನ್ನು ಪ್ರೀತಿಸಿ ಅದು ಕೋಪದ ಸಮ
ದಲ್ಲಿ ಮಾಡಿದ ತಪ್ಪನ್ನು ಕ್ಷಮಿಸಿ ತರುವಾಯ ಯೋಗ್ಯ ಸಮಯ ಬಂದ
ಸಮಾಧಾನದಿಂದ ನೀನು ಕೋಪಗೊಂಡು ಮಾಡಿದ ಈ ಕೆಲಸದಿಂದ ಅ
ಅನರ್ಥವಾಯಿತೆಂಬುದನ್ನು ಸಕಾರಣವಾಗಿ ತಿಳಿಯಹೇಳುವದು ಶಿಕ್ಷಕರ ಕ
ವ್ಯವು. ಇದರಿಂದ ಆಗುವಷ್ಟು ಸತ್ಪರಿಣಾಮವು ಬೇರೆ ಯಾವ ಮಾರ್ಗದಿಂದ
ಆಗಲಾರದೆಂದು ಹೇಳಬಹುದು. ಮತ್ತು ಆ ಮಗುವಿನ ಕೋಪಕ್ಕೆ ಕಾರಣವ

ಪ್ರತಿಫಲಿಕೆಯನ್ನು ದೂರಮಾಡಲು ಯತ್ನಿಸುವದಕ್ಕಿಂತ ಮೊದಲು ಬೇರೆ ಪಾಪದಾದರೊಂದು ವಿಷಯದ ಕಡೆಗೆ ಅದರ ಮನಸ್ಸನ್ನು ಸೆಳೆದುಕೊಂಡು ಪ್ರಯತ್ನಿಸಬೇಕಾಗುವದು.

೫. **ಆತ್ಮಪ್ರೌಢಿ ಮತ್ತು ಅಹಂಕಾರ**— ಈ ಮನೋವೃತ್ತಿಯು ಪಕ್ಷಿಗಳಲ್ಲಿಯೂ ಚಿಕ್ಕಮಕ್ಕಳಲ್ಲಿಯೂ ಒಡೆದು ಕಾಣಿಸುತ್ತಿರುವದು. ಪಕ್ಷಿಗಳಲ್ಲಿ ನವಿಲು ಇದಕ್ಕೆ ಉತ್ತಮವಾದ ಉದಾಹರಣೆಯಾಗಬಹುದು. ಅನೇಕ ಜಾತಿಗಳ ನಡುವೆ ಆಲೆದಾಡುವ ಹುಂಜದಲ್ಲಿಯೂ ಈ ಮನಃಪ್ರವೃತ್ತಿಯನ್ನು ಗುರುತಿಸಬಹುದು.

ಇದೊಂದು ಸಾಮಾಜಿಕ ಭಾವನೆ ತನ್ನ ಹೆಚ್ಚಳವನ್ನು ಅನ್ಯರಿಗೆ ತೋರಿಸಿ ಹೌದೆನ್ನಿಸಿಕೊಳ್ಳಬೇಕೆಂಬ ಮನೋವೃತ್ತಿಯು ಇದರ ಮೂಲ ರೂಪವೆಂದು ಹೇಳಬಹುದು.

ಚಿಕ್ಕದೊಂದು ಮಗುವು ಹೊಸ ಅಂಗಿಯನ್ನು, ಆಲಂಕಾರವನ್ನು ಅಥವಾ ಹೊಸದೊಂದು ಬೂಟನ್ನು ಹಾಕಿಕೊಂಡು ಶಾಲೆಗೆ ಬಂದಿರುವದೆಂದು ತಿಳಿಯೋಣ. ಆ ಒರಗೆಯ ಗೆಳೆಯರ ನಡುವೆ ಆ ಮಗುವಿನ ಅಂದಿನ ನಡತೆಯೇ ಬೇರೆಯಾಗಿ ತೋರುವುದುಂಟಲ್ಲವೇ? ತನ್ನ ಯೋಗ್ಯತೆಯನ್ನೂ ತಾನು ಕಲಿತಿರುವ ತಿಳಿದಿರುವ ವಿಷಯಗಳನ್ನೂ ಅನ್ಯರಿಗೆ ತೋರಿಸಬೇಕೆಂಬ ಲವಲವಿಕೆಯೂ ಚಿಕ್ಕ ಮಗುವಿನಲ್ಲಿ ಇರುವುದುಂಟು. ತಾನು ಎಷ್ಟು ದೂರ ಜಿಗಿಯುವೆನೆಂಬುದನ್ನೂ ತನ್ನ ಪಟವನ್ನು ಎಷ್ಟು ದೂರ ಹಾರಿಸಬಲ್ಲೆನೆಂಬದನ್ನೂ ಅನ್ಯರಿಗೆ ತೋರಿಸಿ ಹೌದೆನ್ನಿಸಿಕೊಳ್ಳುವ ಉತ್ಸುಕತೆಯನ್ನು ತೋರಿಸುವ ಮಕ್ಕಳನ್ನೂ ಅನೇಕರು ನೋಡಿರಬಹುದು.

ಚಿಕ್ಕ ಮಗುವು ತಾಯಿಯ ಗರ್ಭದಿಂದ ಹೊರಗೆ ಬಂದಾಗ ಅದು ಸರ್ವತೋ ಪ್ರಥಮವಾಗಿ ಪರಾವಲಂಬಿಯಾಗಿರುವದು. ಹಾಲು ನೀರುಗಳನ್ನು ಮೊದಲು ಕೊಡಲು ಎಲ್ಲ ಸಂಗತಿಗಳಲ್ಲಿಯೂ ತಾನು ಪರಾವಲಂಬಿಯಾಗಿರಬೇಕಾಗಿರುವದೆಂಬ ಅರಿವೆಯು, ಕೇವಲ ಪರಾವಲಂಬನೆಯು, ಆ ಮಗುವಿನ ಆಯುಷ್ಯದಲ್ಲಿ ಅನುಭವಕ್ಕೆ ಬಂದ ಎಲ್ಲಕ್ಕೂ ಮೊದಲನೆಯ ಮನೋವಿಕಾರವಾಗಿರುವದು. ಅದು ಸ್ವಲ್ಪ ದೊಡ್ಡದಾಗುತ್ತ ಹೋದಂತೆ ತನ್ನವರೊಡನೆ ಕೂಡಿ ನಡೆಯುವದರಿಂದ ಸಹಿತ ಸಮತೆಗಳನ್ನೂ ಮಾನಮರ್ಯಾದೆಗಳನ್ನೂ ಗ್ರಹಿಸತೊಡಗುವದು. ತನು ಪರರಿಂದ ಹೌದೆನ್ನಿಸಿಕೊಳ್ಳಬೇಕೆಂದು ಬಯಸಹತ್ತುವದು. ಮುಂದೆ ಯೋಗ್ಯ ಶಿಕ್ಷಣದಿಂದ ಈ ಮನೋವೃತ್ತಿಯು ಬೆಳೆವಣಿಗೆ ಹೊಂದಿ ಸತ್ಯತೆ ಪರಸ್ಪರ ಸಹಿತ ಸಹಾನುಭೂತಿಗಳೆಂಬ ಉಚ್ಚ ಮನೋವಿಕಾರಗಳಾಗಿ ಮಾರ್ಪಡುವದು.

ಚಿಕ್ಕ ಮಕ್ಕಳು ಯಾವದಾದರೂ ಕಾರಣವಿಂದ ತಮಗೆ ಸಾಕಷ್ಟು ಮನ್ನ
ದೊರೆಯಲಿಲ್ಲೆಂಬ ಮನೋವೃತ್ತಿಗೆ ಒಳಗಾಗಿರುವಾಗ ಒಂಟಿಗರಾಗಿ ಇ
ಕುಳಿತು ಮಿಕ್ಕವರ ದೃಷ್ಟಿಯನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಯತ್ನ
ಬಹುದು. ಬಟ್ಟಲತುಂಬ ಪಾಯಸ ದೊರೆಯುದೆ ಇದ್ದದರಿಂದ ಮುಗ್ಧ
ಕೋಣೆಯ ಮೂಲೆಯನ್ನು ಸೇರಿ ಕುಳಿತದ್ದು ಅತನ ಹಟಮಾರಿತನವೆಂದು ಕ
ಲ್ಪಟ್ಟಿದ್ದರೂ ಅದರಲ್ಲಿ ಅತನ ಈ ಬಗೆಯ – ಅನ್ಯರ ದೃಷ್ಟಿಯನ್ನು ತನ್ನ ಕಡೆಗೆ
ದಾರಿಯಿಂದ ಸೆಳೆದುಕೊಳ್ಳಬೇಕೆಂಬ – ಮನೋವೃತ್ತಿಯು ವ್ಯಕ್ತವಾಗುವ
ಜ್ವರ ಬಂದಾಗ ಮುಸಂಬೆಯ ಹಣ್ಣು ತಿನ್ನಲಿಕ್ಕೆ ಸಿಕ್ಕಿದ ನೆನಪಿನಿಂದ ಮಗ
ಜ್ವರವ ನಟನೆ ಮಾಡುವದು ಆಶ್ಚರ್ಯಕ್ಕೆ ಕಾರಣವಲ್ಲ. ಅಶಕ್ತ ಬಾ
ನೊಬ್ಬನನ್ನು ಹುಚ್ಚು ಹಿಡಿಸಿ ಪಾಠ ತೆಗೆದುಕೊಳ್ಳಬಾರದೆಂದು ಶಿಕ್ಷಕನು ಕೈ
ವಿಷಯ ಸುಮ್ಮನೆ ಬಿಟ್ಟರೆ ಅವನು ತನ್ನ ಆ ಅಶಕ್ತತೆಯನ್ನು ಮೇಲೆ ಮೇಲೆ ತೋ
ಸಲು ಬಯಸಿದರೆ ಅದು ಅವನ ತಪ್ಪೆಂದು ಹೇಳಲಾಗದು. ತಾನು ಮುಂದೆ
ಬೇಕೆಂದು ಹಾತೊರೆಯುವ ಒಬ್ಬ ಹುಡುಗನು ತನ್ನ ಪ್ರಯತ್ನದಿಂದ, ತಾ
ಅನುಸರಿಸಿದ ಮಾರ್ಗದಿಂದ, ಯಶಸ್ವಿಯಾಗದೆ ಇದ್ದ ಸಂದರ್ಭದಲ್ಲಿ ತನ್ನ ಪ
ಸ್ಸಿಗೆ ತೋರಿದ ಬಂದು ತುಂಟತನದ ದಾರಿಯಿಂದ ನಡೆದು ಶಾಲೆಯಲ್ಲಿ ಶಿಕ್ಷಕ
ಅಥವಾ ಮನೆಯಲ್ಲಿ ಪಾಲಕರ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದುಕೊಳ್ಳು
ಎಷ್ಟೋ ಉದಾಹರಣೆಗಳಿರುವುವು. ಅಂಥ ಬಾಲಕರನ್ನು ಹೇಗೆ ಸಮಾಧಾ
ಪಡಿಸಬಹುದು? ಅವರನ್ನು ವರ್ಗದ ಮುಂದೆ ನಿಲ್ಲಿಸಿ ಅವರ ತಪ್ಪನ್ನು ವಿವರ
ವರಿಂದ ಪ್ರಯೋಜನವಾದೀತೇನು? ಅಥವಾ ಶಿಕ್ಷಕನು ಆ ಬಾಲಕನನ್ನು ಪೆ
ಯಾಗಿ ಕರೆದು ನೀನು ಈಗ ಅನುಸರಿಸಿರುವ ಮಾರ್ಗವನ್ನು ಬಿಟ್ಟು ಈ ಹೊ
ದಾರಿಯಿಂದ ಹೋದರೆ ನಿನ್ನ ಬಯಕೆಯು ಈಡೇರುವದೆಂದು ಉಪದೇಶಮಾ
ವದರಿಂದ ಯೋಗ್ಯ ಪರಿಣಾಮವಾದೀತೇನು? ಇಂಥ ಸಂದರ್ಭಗಳಲ್ಲಿ ಬಾಲ
ಹಟಮಾರಿತನವು ಅಥವಾ ತುಂಟತನವು ಬಯಲಿಗೆ ಬರುವುದೂ ಉಂಟು. ತಪ
ಚಾರಣತನದ ಅಥವಾ ಧೈರ್ಯದ ಪ್ರಶಂಸೆಯಾಗಿ ಮಿಕ್ಕವರ ದೃಷ್ಟಿಯು ತನ
ಕಡೆಗೆ ಹೊರಳಬೇಕೆಂಬ ವಿಚಾರದಿಂದಲೇ ಆ ಬಾಲಕರು ಇಂಥ ಯಾವದೊಂ
ತುಂಟತನದ ಅಥವಾ ಹಟಮಾರಿತನದ ಕೆಲಸಮಾಡುತ್ತಿರುವರು.

ಅತ್ಮ ಪ್ರತಿಷ್ಠೆಯ ಮನೋವೃತ್ತಿಯು ಪ್ರಬಲವಾಗಿರುವ ಯಾವುದೊಂ
ಮಗುವು ತುಂಟ (ಕಿಡಿಗೇಡಿ) ತನದ ಇನ್ನೊಂದು ಮಗುವು ತನಗಿಂತ
ಹೆಚ್ಚಿನ ಮನ್ನಣೆಯನ್ನು ಪಡೆದಿರುವುದನ್ನು ನೋಡಿದಾಗ ತನ್ನ ಪ್ರತಿಷ್ಠೆಯನ

ಸಿಕೊಳ್ಳುವುದಕ್ಕಾಗಿ ದೂರ ಸರಿದು ಕುಳಿತು ಮುಕ್ತಪರ ಲಕ್ಷ್ಯವನ್ನು ತನ್ನ
ಳೆ ಸೆಳೆದುಕೊಳ್ಳುವುದೂ ಉಂಟು.

ಪಗುವಿನ ಬಗಳಗಂಟಿತನ ಅಥವಾ ತುಂಟತನದ ಮನೋವೃತ್ತಿಯನ್ನು
ಂರಿಸಿ ಕಿತ್ತು ಹಾಕುವುದಕ್ಕೆ ಯತ್ನಿಸುವುದಾಗಲಿ ಅಂಥ ಬಾಲಕರನ್ನು ಕ್ರೂರ
ಂದ ನಡಿಸಿಕೊಳ್ಳುವುದಾಗಲಿ ಯೋಗ್ಯವಲ್ಲ. ಯಾಕೆಂದರೆ ಈ ಮನೋ
ೃತ್ತಿಯಲ್ಲಿ ಬಂದು ತರದ ತಾನು ಹೆಚ್ಚಿನವನಾಗಬೇಕೆಂಬ ಉಚ್ಚ ಮನೋ
ೀರಣ ಕುರುಹು ಇರುವುದು. ಆದ್ದರಿಂದ ಇದನ್ನು ಸರಿಯಾದ ಮಾರ್ಗಕ್ಕೆ
ನ್ನು ಮುಟ್ಟಿಸುವುದಕ್ಕಾಗಿ ಮಗುವನ್ನು ತಕ್ಕ ವಿವೇಚನೆಯಿಂದ ಸಮಾಧಾನ
ಿ ಅದಕ್ಕೆ ಹಿತಾಹಿತದ ಜ್ಞಾನಮಾಡಿಕೊಟ್ಟು ಸರಿಪಡಿಸುವುದೇ ಯೋಗ್ಯ
ುವುದು. ಮಿಕ್ಕ ಸಂಗಡಿಗರ ಉತ್ಕರ್ಷಕ್ಕೆ ಬಾಧೆಯನ್ನುಂಟುಮಾಡುವ
ಾ ಅನ್ಯರನ್ನು ದುರ್ಮಾರ್ಗಕ್ಕೆ ಪ್ರೇರಿಸುವ ಸಂದರ್ಭವಿದ್ದಾಗ ಮಾತ್ರ ಈ
ು ನಡತೆಯನ್ನು ಪ್ರತಿಬಂಧಿಸುವುದು ಆವಶ್ಯಕವಾಗುವುದು.

೬. **ಅಧೀನತೆ ವಿಧೇಯತೆಗಳು**—ಈ ಗುಣಗಳು ಬಾಲಕರಲ್ಲಿ ಶಿಕ್ಷಕರ
ಂಧದಿಂದ ಒಡೆದುಕಾಣಿಸುವವು. ಶಿಕ್ಷಕರಿಗೆ ವಿಧೇಯನಾಗಿರುವುದು
ರೆ ಶಿಕ್ಷಕರು ಹೇಳಿದಂತೆ ಕೇಳುವದು, ತಮ್ಮ ಕರ್ತವ್ಯವೆಂದೂ ತಮ್ಮ
ಲೆ ಅವರ ಅನಿಯಂತ್ರಿತವಾದ ಅಧಿಕಾರವಿರುವುದೆಂದೂ ಬಾಲಕರು ತಿಳಿದು
ಂಡಿರುವರು. ತಾವು ತಮ್ಮ ಶಿಕ್ಷಕರಿಂದ ಅನೇಕ ಸಂಗತಿಗಳನ್ನು ಕಲಿತು
ಕ್ಕಬೇಕಾಗಿರುವದೆಂದೂ ಅವರು ತಮಗಿಂತ ಹೆಚ್ಚು ಜಾಣರೆಂದೂ ಬಾಲಕರು
ುಕೊಳ್ಳುವುದಂತೂ ತೀರ ಸ್ವಾಭಾವಿಕವಾದ ಮಾತು. ಆದರೆ ಈ ಮನೋ
ೃತ್ತಿಯು ವರಾಕಾಷ್ಠೆಯಿಂದಲೂ ಕೆಡಕಾಗುವ ಸಂಭವವಿದೆ. ಇದರಿಂದ ಬಾಲಕರ
ಸ್ಸಿನಲ್ಲಿ ತಾವು ಹೀನ ದೀನ ಕಂಗಾಲರೆಂಬ ಕ್ಷುಲ್ಲಕ ವಿಚಾರವುಂಟಾಗಲು
ಕಾರಕೊಡದಂತೆ ಶಿಕ್ಷಕರು ತುಂಬ ಚಾಣ್ಮೆಯಿಂದ ನೋಡಿಕೊಳ್ಳಬೇಕಾಗು
ು. ತೀರ ಚಿಕ್ಕ ಮಗುವಿನಲ್ಲಿಯೂ ಕೂಡ ತನ್ನಲ್ಲಿ ಹೆಚ್ಚಿಲ್ಲದಿದ್ದರೆ ಸ್ವಲ್ಪ
ನೂ ಶಕ್ತಿಸಾಮರ್ಥ್ಯಗಳಿವೆ ಬುದ್ಧಿಯಿದೆ ಎಂಬ ಆತ್ಮವಿಶ್ವಾಸವುಂಟಾಗು
ಿ ಮಾಡುವದು ಅವಶ್ಯವಾಗಿದೆ. ಶಾಲೆಯಲ್ಲಿ ಮಗುವು ಕೈಕೊಂಡಿರುವ
ನು ಸಾಮಾನ್ಯ ಕೆಲಸದಿಂದಲೂ ಸಹ ಅದರಲ್ಲಿ ಆತ್ಮವಿಶ್ವಾಸವುಂಟಾಗುವಂತೆ
ಾಡಬಹುದು. ಅಧೀನತೆ ವಿಧೇಯತೆಗಳು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ
ಾವಶ್ಯಕವಾಗಿದ್ದರೂ ಈ ಗುಣಗಳ ಪೋಷಣ ನಡೆದಾಗ ಆತ್ಮವಿಶ್ವಾಸದ ಕೊಲೆ
ಾಗದಂತೆ ನೋಡಿಕೊಳ್ಳಬೇಕಾಗುವದು.

೭. **ಹಿರಿಯತನದ ಭಾವನೆ ಮತ್ತು ಕೋಮಲತೆ**– ಈ ಮ
ಭಾವನೆಯು ಎಲ್ಲ ಪ್ರಾಣಿಗಳಲ್ಲಿಯೂ ಮನುಷ್ಯನಲ್ಲಿಯೂ ಹೆಚ್ಚು ಪ್ರಬಲ
ಕಾಣಬರುವುದು. ಅಂಜುಬುರುಕ ಸ್ವಭಾವದ ಪ್ರಾಣಿಯು ಕೂಡ ತನ್ನ ಕರು
ಗಳಿಗೆ (ಸಂತತಿಗೆ) ಏನಾದರೂ ಆಪತ್ತು ಬಡಗುವ ಲಕ್ಷಣ ತೋರಿದ ಕೂ
ಅತಿಶಯ ಧೈರ್ಯವನ್ನು ತಾಳಿ ಹಗೆಯನ್ನು ಎದುರಿಸಲು ಸಿದ್ಧವಾಗುವದು.

ಈ ಮನಃಪ್ರವೃತ್ತಿಯು ಚಿಕ್ಕ ಬಾಲಕರಲ್ಲಿಯೂ ಕಂಡುಬರುವುದು. ೭
ಮಗುವು ತನ್ನ ಆಟಿಗೆಯ ಗೊಂಬೆಯೊಡನೆ ಆಡುತ್ತಿರುವಾಗ ಈ ತರದ ಮನ
ಭಾವಗಳನ್ನು ತೋರ್ಪಡಿಸುವದು. ಮಕ್ಕಳಲ್ಲಿ ಈ ಭಾವನೆಯು ಎಲ್ಲಕ
ಕೊನೆಗೆ ಕಂಡುಬಂದು ಬೆಳೆವಣಿಗೆ ಹೊಂದುವದು.

ಈ ಮನಃಪ್ರವೃತ್ತಿಯೇ ಎಲ್ಲ ತರದ ಪ್ರೀತಿಯ ಮನೋವಿಕಾರಗ
ಮೂಲಕಾರಣವೆಂದು ಹೇಳುವುದುಂಟು. ಪಶುಪಕ್ಷಿಗಳ ಮೇಲಿನ ಪ್ರೀತಿ ಬ
ಸಿದ್ದವರ ಅರೈಕೆ ನಿರಾಶ್ರಿತರ ಮೇಲೆ ದಯ ತೋರಿಸುವುದು ಇವೇ ಮೊದಲ
ಮನೋವ್ಯತ್ತಿಗಳು ಹಾಗು ಭೂತದಯೆ ಸಹಾನುಭೂತಿ ಮುಂತಾದ
ಮನೋವಿಕಾರಗಳು ಈ ಮೂಲ ಮನಃಪ್ರವೃತ್ತಿಯಿಂದಲೇ ಹುಟ್ಟಿ ಬೆಳೆದ
ಪೊಡು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಬಾಲಕರಲ್ಲಿ ಮೇಲೆ ಹೇಳಿದ ಏಳು ಪ್ರಾಥಮಿಕ ಮನಃ ಪ್ರವೃತ್ತಿಗಳ್ಳ
ಸಹಾಯಕ (ರಚನಾತ್ಮಕ) ಪ್ರವೃತ್ತಿ ಸ್ವಾಮಿತ್ವದ ಕಲ್ಪನೆ ಮತ್ತು ಅನುಕ
ಯಿಂದ ಪುನರ್ಘಟನೆ ಮಾಡುವ ಮನೋಭಾವನೆ ಎಂಬ ಮೂರು ದ್ವಿತೀಯ
ಭಾವನೆಗಳೂ ಕಂಡುಬರುವವ. ಇವು ಶೈಕ್ಷಣಿಕ ದೃಷ್ಟಿಯಿಂದ ಶಿಕ್ಷಕ
ತುಂಬ ಪ್ರಯೋಜನಕಾರಿಯಾಗಿರುವವ.

ಸ್ವಾಮಿತ್ವ (ಒಡೆತನ) ದ ಕಲ್ಪನೆ— ಎಷ್ಟೋ ಚಿಕ್ಕ ಮಕ್ಕ
ಮೂರು ವರ್ಷ ವಯಸ್ಸಿಗೆ ಮುಟ್ಟಿದಾಗ ತಮ್ಮ ಆಟದ ಗೊಂಬೆಗಳು ಉಪಕ
ಗಳು ಮುಂತಾದವುಗಳ ಬಗ್ಗೆ ಅವು ತಮ್ಮ ಸ್ವಂತದವೆಂದೂ ಅವುಗಳ ಮೆ
ತಮ್ಮ ಸಂಪೂರ್ಣ ಸ್ವಾಮಿತ್ವವಿರುವದೆಂದೂ ಪರರು ಅವನ್ನು ಹಿಡಿಯಬ
ದೆಂದೂ ಅಪೇಕ್ಷೆಪಡುವರು. ಇದು ಸ್ವಾರ್ಥಪರತೆಯ ಲಕ್ಷಣವೆಂದೂ ಹೇಳು
ದುಂಟು. ಆದರೆ ಇದು ಮಗುವು ಪ್ರಪಂಚದಲ್ಲಿ ತನ್ನ ಅಸ್ತಿತ್ವವನ್ನು, ತ
ಸಂಬಂಧಪಟ್ಟ ಹಲಕೆಲವು ಒಡೆತನಗಳೂ ಅಧಿಕಾರವೂ ಇರುವವೆಂಬುದನ
ತೋರ್ಪಡಿಸುವ ಮನೋಭಾವನೆಯು ಉಗಮವೆಂದು ಹೇಳಬಹುದು.
ಭಾವನೆಯ ಮೂಲಕವಾಗಿ ಮಕ್ಕಳು ಹಲವು ಒಡೆತನಗಳನ್ನು ಸಂಗ್ರಹಿಸಿ ಕ

್ಮ ಸ್ವಂತ ಸಂಪಾದನೆಯವೆಂದೂ ಅವುಗಳ ಮೇಲೆ ತಮ್ಮ ಸಂಪೂರ್ಣ
ಮಿತ್ವವಿರುವವೆಂದೂ ಭಾವಿಸುವರು. ಮತ್ತು ಅದರಿಂದ ಅವರಿಗೆ ಆನಂದ
ಗುವದು. ಕಡ್ಡಿಯ ಪೆಟ್ಟಿಗೆ, ಸಿಗರೇಟ ಪೆಟ್ಟಿಗೆ, ಸೋಡಾಬಾಟಲಿಯ
ಚ್ಚಳಗಳು ಮುಂತಾದ ಹಿಣಿಯಲ್ಲಿ ಬಿದ್ದ ಒಡವೆಗಳನ್ನು ಸಂಗ್ರಹಿಸಿಟ್ಟಿರುವ
ಲಕರನ್ನು ನಾವು ಅಡಿಗಡಿಗೆ ನೋಡುತ್ತಿರುವೆವಷ್ಟೆ? ಶಾಲೆಗಳಲ್ಲಿ ಬಾಲಕರ ಈ
ೋಭಾವನೆಯನ್ನು ಉಪಯೋಗಿಸಿಕೊಂಡು ಶೈಕ್ಷಣಿಕ ದೃಷ್ಟಿಯಿಂದ ಮಹತ್ವ
ಚಿತ್ರಗಳು, ಹಲಕೆಲವು ಮಾದರಿಗಳು, ಸ್ಟಾಂಪುಗಳು ಮುಂತಾದವುಗಳನ್ನು
ಗ್ರಹಿಸಲಿಕ್ಕೆ ಅವರಿಗೆ ಉತ್ತೇಜನಕೊಡಬೇಕು.

ಹಲಕೆಲವು ಪದಾರ್ಥಗಳು ತಮ್ಮ ಸ್ವಂತದವೆಂಬ ಅಭಿಮಾನವೂ ಅವುಗಳನ್ನು
ಸಿಕೊಳ್ಳಬೇಕೆಂಬ ಪ್ರೀತಿಯೂ ಬಾಲಕರಲ್ಲಿ ಬೆಳೆಯುವಂತೆ ಶಿಕ್ಷಕರು ನೋಡಿ
ಳ್ಳಬೇಕಾಗಿರುವದು. ಹಾಗೆಯೇ ಪರರ ಸ್ವಾಮಿತ್ವಕ್ಕೆ ಒಳಪಟ್ಟ ವಸ್ತುಗಳ
ಯದಲ್ಲಿ ಅನ್ಯರ ಒಡವೆಗಳ ಮೇಲಿರುವ ಅನ್ಯರ ಸ್ವಾಮಿತ್ವವನ್ನು ನೋಡಿ
ಸ್ಥವೂ ಅವಶ್ಯವೆಂಬ ಮತ್ತು ಶಾಲೆಗೆ ಸಂಬಂಧಿಸಿದ ಸಾರ್ವಜನಿಕ
ಸಿಗಳ ವ್ಯವಸ್ಥೆಯನ್ನು ನೋಡಿಕೊಳ್ಳುವದು ತನ್ನ ಕರ್ತವ್ಯವೆಂಬ ವಿಚಾರ
ನ್ನು ಬಾಲಕರಲ್ಲಿ ಹುಟ್ಟಿಸಬೇಕಾಗಿರುವದು. ಅಲ್ಲದೆ ಸಾರ್ವಜನಿಕ ಪದಾರ್ಥ
ನ್ನು ಉಪಯೋಗಿಸಿಕೊಳ್ಳುವಾಗ ಯೋಗ್ಯ ಎಚ್ಚರಿಕೆಯನ್ನು ತಕ್ಕೊಳ್ಳುವ
ವನ್ನು ಹುಡುಗರಲ್ಲಿ ಈಗಲೇ ಹುಟ್ಟಿಸಬೇಕಾಗಿರುವದು. ಇದು ತನ್ನದು
ಸ್ವಂತದ್ದು ಎಂಬ ಅಭಿಮಾನವು ಒಳ್ಳೆಯದಾದರೂ ಅದನ್ನು ಅನ್ಯರು ಹಿಡಿಯಲೇ
ದು, ಅದನ್ನು ಬೇರೆಯವರು ಉಪಯೋಗಿಸಲೇಬಾರದು, ಎಂಬ ಭಾವನೆಯು
ಳ್ಳ ಒಳ್ಳೆಯದಲ್ಲ. ಇಂಥ ಸಂದರ್ಭಗಳಲ್ಲಿ ಮಕ್ಕಳ ಮನೋಭಾವನೆಯು
ಗ್ಯಮಾರ್ಗವನ್ನು ಅನುಸರಿಸುವದೆಂಬದನ್ನು ಶಿಕ್ಷಕರು ಅಡಿಗಡಿಗೆ ನೋಡಿ
ಳ್ಳಬೇಕಾಗುವದು. ಮತ್ತು ಮಕ್ಕಳಿಗೆ ಯೋಗ್ಯ ರೀತಿಯಿಂದ ಉತ್ತೇಜನ
ಟ್ಟು ಅವರು ಅನ್ಯರೊಡನೆ ಕೂಡಿ ನಡೆಯುವಂತೆಯೂ ದೊಡ್ಡ ಮನಸ್ಸಿನ
ಸಾಯದ) ಆವಶ್ಯಕತೆಯು ಅವರಲ್ಲಿ ಬಿಂಬಿಸುವಂತೆಯೂ ನೋಡಿಕೊಳ್ಳಬೇಕು.
ಳ ಗುಣಗಳಿಗೆ ಯೋಗ್ಯ ಮನ್ನಣೆ ದೊರೆಯುವದೆಂದು ಚಿಕ್ಕ ಮಗುವು ಒಮ್ಮೆ
ಗಂಡಿತೆಂದರೆ ಅದು ಅವ್ರಗಳನ್ನು ತೋರಿಸಲಿಕ್ಕೆ ಹಾತೊರೆಯುಹತ್ತುವದು.

ರಚನಾಪರ (ವಿಧಾಯಕ) ಪ್ರವೃತ್ತಿ :— ಈ ಮನೋಭಾವನೆಯ
ಲಕ ಮಗುವು ಜ್ಞಾನಸಂವಾದನೆ ಮಾಡಿಕೊಳ್ಳುವದು ಇಷ್ಟೇ ಅಲ್ಲ.
ೋಭಾವನೆಗಳನ್ನು ಅನುಸರಿಸಿ ಕೆಲಸ ಮಾಡುವದಕ್ಕೆ ಆವಶ್ಯಕವೆನಿಸುವ

ಅದರ ಶರೀರದೊಳಗಿನ ಸ್ನಾಯುಗಳಿಗೂ ತಕ್ಕ ಶಿಕ್ಷಣ ದೊರೆಯುವದು. ಬೇರೆ ಬೇ
ಮಾದರಿಗಳನ್ನು ಮಾಡಬೇಕೆನ್ನುವ ಹಂಬಲವು ಬಹುತರ ಎಲ್ಲ ಮಕ್ಕಳಲ್ಲಿ ಇದ್ದ
ಇರುವದು. ಬಾಲಕರ ಈ ಮನೋಭಾವನೆಯು ಕಾರ್ಯರೂಪಕ್ಕೆ ಒರುವ
ಮಾಡುವದಕ್ಕಾಗಿ ಶಾಲೆಗಳಲ್ಲಿ ಬೇಕಾದಷ್ಟು ಸಲಕರಣೆಗಳನ್ನೂ ಸಂದರ್ಭಗಳನ್ನ
ಒದಗಿಸಿ ಕೊಡುವದು ಶಿಕ್ಷಕರ ಕರ್ತವ್ಯವಾಗಿರುವದು. ಬಾಲಕರ ಕಲ್ಪನ
ಶಕ್ತಿಯನ್ನೂ ನಿರೀಕ್ಷಣ ಶಕ್ತಿಗ್ರಹಣ ಶಕ್ತಿಗಳನ್ನೂ ಜಾಗ್ರತಗೊಳಿಸಿ ಕಾರ್ಯ
ರೂಪಕ್ಕೆ ತರಲು ಈ ರಚನಾಪರ ಪ್ರವೃತ್ತಿಯ ಮೂಲಕ ಬಾಲಕರು ಕೆಲ
ಮಾಡತೊಡಗಿದ ಸಂದರ್ಭವು ತುಂಬ ಅನುಕೂಲವುಳ್ಳದ್ದಿರುವದು. ಈಗ ಮಗ
ವಿಗೆ ತಾನು ಗಳಿಸಿಕೊಂಡ ಜ್ಞಾನವನ್ನೂ ಅನುಭವವನ್ನೂ ಕಾರ್ಯರೂಪಕ್ಕ
ತರುವದಕ್ಕೂ ಹೊಸ ಅನುಭವ ಪಡೆಯಲಿಕ್ಕೂ ಅನುಕೂಲ್ಯವುಂಟಾಗುವದು.

ಸಾಮೂಹಿಕವಾಗಿ ಕಲಸ ಮಾಡುವ ಪ್ರವೃತ್ತಿ :- ಈ ಮನೆ
ಭಾವನೆಯು ಬಾಲಕರಲ್ಲಿ ನಾಲ್ಕೈದು ವರುಷ ವಯಸ್ಸಾದಾಗ ಕಂಡುಬರುವ
ಈ ವಯಸ್ಸಿನಲ್ಲಿ ಬಾಲಕರು ತಮ್ಮ ಓರಗೆಯ ಬಾಲಕರೊಡನೆ ಕೂಡಿ ನಡೆದು
ದರಿಂದ ತುಂಬಾ ಆನಂದಪಡುವರು. ಮತ್ತು ಇದಕ್ಕೂ ಮುಂದಿನ ವಯಸ್ಸಿ
ಅವರು ತಮಗಿಂತ ದೊಡ್ಡವರ ಸಹವಾಸವನ್ನು ಹೆಚ್ಚಿಗೆ ಪ್ರೀತಿಸಹತ್ತುವ
ಇಲ್ಲವೆ ತಮ್ಮಷ್ಟಕ್ಕೆ ತಾವೇ ಆಡುವ ಪ್ರವೃತ್ತಿಯನ್ನು ತೋರಿಸುವರು.
ಸಮಯದಲ್ಲಿ ಅವರಲ್ಲಿ ಸಾಮೂಹಿಕ ಜೀವನದ ಭಾವನೆಯು ಜಾಗ್ರತವಾ
ವದು. ಆದ್ದರಿಂದ ಈ ಸಮಯದಲ್ಲಿ ಶಿಕ್ಷಕರು ಹೆಚ್ಚು ಕಾರ್ಯವನ್ನು ಮ
ಬಹುದಾಗಿರುವದು. ಈ ಕಾಲದಲ್ಲಿ ಬಾಲಕರಲ್ಲಿ ಸಮಾಜಕ್ಕೆ ಸಂಬಂಧಿ
ಯೋಗ್ಯ ಮನೋಭಾವನೆಗಳನ್ನೂ ಯೋಗ್ಯ ಕಾರ್ಯಪ್ರವೃತ್ತಿಯನ್ನೂ ಹುಟ್
ಲಿಕ್ಕೆ ಸಾಧ್ಯವಿರುವದು. ಪುನಃ ಪುನಃ ಉತ್ತೇಜನ ಕೊಟ್ಟು ಅವನ್ನೇ ಕಾ
ರೂಪದಲ್ಲಿ ವ್ಯಕ್ತಪಡಿಸುವದರಿಂದ ಬಾಲಕರಲ್ಲಿ ಅಂಥ ಸ್ವಭಾವವೇ ಬಡಮೂ
ವದು. ವ್ಯಕ್ತಿಯ ಹಿತಸಂಬಂಧಗಳನ್ನಷ್ಟೇ ಅಲ್ಲದೆ ಸಮಾಜದ ಹಿತಸಂಬಂ
ಳನ್ನು ಬಾಲಕರ ಮುಂದಿಡುವದಕ್ಕೆ ಈ ಕಾಲದಲ್ಲಿ ಪ್ರಾರಂಭಮಾಡಬಹುದು

ಶಿಶುಶಾಲೆಗಳು ನೆರವೇರಿಸುವ ಅನೇಕ ಮಹತ್ವದ ಕಾರ್ಯಗಳಲ್ಲಿ, ಬಾ
ರಿಗೆ ಸಮಾಜ ಜೀವನಕ್ಕೆ ಯೋಗ್ಯವಾದ ಮಾರ್ಗವನ್ನು ತೋರಿಸಿಕೊಟ್ಟು
ರನ್ನು ಮುಂದಿನ ಜೀವನಕ್ಕೆ ಯೋಗ್ಯರಾದ ವ್ಯಕ್ತಿಗಳನ್ನಾಗಿ ಮಾರ್ಪಡಿಸುವ
ಕೊಟ್ಟುಕೊಳ್ಳುವದು, (Give and take) ತಾನು ಅನ್ಯರೊಡನೆ ಯಾವ ರೀ
ತಿಯಿಂದ ನಡೆಯುವನೋ ಅದೇ ರೀತಿಯಾಗಿ ಅನ್ಯರು ತನ್ನೊಡನೆ ನಡೆಯುವದು

ರ್ಥಾತ್ ತಾನು ಒಳ್ಳೆಯವನಾದರೆ ಜಗತ್ತೇ ಒಳ್ಳೆಯದಾಗುವದೆಂಬ ಭಾವನೆ
ನ್ನು ಅವರಲ್ಲಿ ಹುಟ್ಟಿಸುವದು, ಸ್ವಾರ್ಥಪರಾರ್ಥಗಳೆರಡನ್ನೂ ಸಮತೆಯಿಂದ
ನೋಡುವದಕ್ಕೆ ಕಲಿಸುವದು, ಇವು ಅತ್ಯಂತ ಹೆಚ್ಚಿನವಾಗಿರುವವು.

ಇಂಗ್ಲಂಡದೇಶದ ಒಂದು ಹಳ್ಳಿಯ ಶಾಲೆಯು

(ಪಿ|| ತಾವಡೆ ಸಾ|| ಎಂ. ಎ. ಅವರ ಮರಾಠಿ ಲೇಖನದ ಆಧಾರದಿಂದ ಬರೆದದ್ದು.)

[ಕಳೆದ ತಿಂಗಳಿನಿಂದ ಮುಂದೆ ಸಾಗಿದೆ.]

ಇಂಗ್ಲಂಡ ದೇಶದ ಹಳ್ಳಿಯ ಶಾಲೆಗಳು ಬಹುತರವಾಗಿ ಒಂದೇ ನಮೂನೆ
ವು ಇರುತ್ತವೆ. ಅಲ್ಲಲ್ಲಿಯ ಪರಿಸ್ಥಿತಿಗನುಸರಿಸಿ ಶಾಲೆಗಳ ಅಭ್ಯಾಸಪತ್ರಿಕೆ
ನ್ನು ಅಲ್ಪ ಸ್ವಲ್ಪ ಬದಲು ಮಾಡಿಕೊಳ್ಳಲಿಕ್ಕೆ ಶಾಲೆಯ ಹೆಡ್‌ಮಾಸ್ತರನಿಗೆ
ಧಿಕಾರವಿದೆ. ಹೀಗೆ ಅಭ್ಯಾಸಕ್ರಮವನ್ನು ಹೆಚ್ಚುಕಡಿಮೆ ಮಾಡಿಕೊಳ್ಳುವಾಗ
ಆರಂಭದಲ್ಲಿ ಶಾಲೆಯ ಹೆಡ್‌ಮಾಸ್ತರನು ತನ್ನ ವರಿಷ್ಠರಿಗೆ ಹೆಚ್ಚುಕಡಿಮೆಯ
ಕಾರಣವನ್ನು ತಿಳಿಸಿ ಅವರ ಅಪ್ಪಣೆಯನ್ನು ಪಡೆದುಕೊಂಡಿರುತ್ತಾನೆ.

ಬಾಲಕರ ವರ್ಗಕ್ಕೆ ವಾಚನ ವಿಷಯವನ್ನು ಕಲಿಸುವಾಗ ಯಾವದೊಂದು
ವಾಕ್ಯದ ಅರ್ಥವನ್ನು ಹೇಳುತ್ತ ಇಲ್ಲವೆ ಆ ವಾಕ್ಯದ ರಚನೆಯ ವಿಷಯವಾಗಿ
ವಿಚಾರಿಸುತ್ತ ಬಾಲಕರ ವೇಳೆಯನ್ನು ವ್ಯರ್ಥವಾಗಿ ಅವರು ಕಳೆಯುವದಿಲ್ಲ. ವಾಚನ
ವಿದಾಗ ವಾಚನಕ್ಕೇ ಹೆಚ್ಚು ಮಹತ್ವವಿರುವದು. ಓದುತ್ತ ಸಾಗಿದಂತೆ ಅದರ
ರ್ಥವು ಒಟ್ಟಾಗಿ ತಿಳಿದರೆ ತೀರಿತು. ಮಕ್ಕಳ ವಾಚನಾಭಿರುಚಿಯು ಬೆಳೆದು
ದೇ ಯೋಗ್ಯತೆಯ ಅನೇಕ ಪುಸ್ತಕಗಳನ್ನು ಅವರು ಓದಲು ಅವರ ಭಾಷಾ
ಜ್ಞಾನವು ತಾನಾಗಿ ಹೆಚ್ಚುತ್ತ ನಡೆಯುವದು. ಹುಡುಗರು ಓದುವಾಗ ಯಾವ
ದಾದರು ಶಬ್ದದ ಅರ್ಥವು ತಿಳಿಯದಂತಾದರೆ ಅವರು ತಾವಾಗಿಯೇ ಶಿಕ್ಷಕನನ್ನು
ಕೇ ತಿಳಿದುಕೊಳ್ಳುವರು. ವರ್ಗದಲ್ಲಿ ಸಾಮೂಹಿಕವಾಗಿ ಒಂದು ಪಾಠವು
ಮುಗಿದ ನಂತರ ಯಾರಿಗೆ ಯಾವ ವಾಕ್ಯವು ತಿಳಿಯಲಿಲ್ಲ ಅಂದರೆ ವಾಕ್ಯದ ಅರ್ಥ
ಜ್ಞಾನವಾಗುವದಕ್ಕಾಗಿ ಯಾವ ಶಬ್ದವು ತಡೆದುನಿಲ್ಲಿಸಿದೆ ಎಂಬ ಬಗ್ಗೆ ಚರ್ಚೆಯು
ಆಗುವದು. ಈ ಪ್ರಕಾರವಾಗಿ ಒಂದು ಪಾಠವು ಮುಗಿದ ಬಳಿಕ ಮತ್ತೊಂದು
ಪಾಠವೂ ಒಂದು ಪುಸ್ತಕವು ಮುಗಿದ ಬಳಿಕ ಇನ್ನೊಂದು ಪುಸ್ತಕವೂ ಅನುಸರಿ
ಸಲ್ಪಡುವವು, ಈ ರೀತಿಯಾಗಿ ಅಲ್ಲಿ ವಾಚನಪಾಠವು ನಡೆಯುವದು.

ಬಾಲಕರನ್ನು ಕೆಲಸದಲ್ಲಿ ತೊಡಗಿಸುವದಕ್ಕಾಗಿ ವರ್ಗ ಸಾಗಿಸುವ ಪ್ರ
ತಿಯು ಸಮ್ಮಿಲ್ಲಿಯಂತೆಯೇ ಇರುತ್ತದೆ. ಮಕ್ಕಳ ಕೈಯಲ್ಲಿ ಚಿತ್ರವನ್ನು ಕೊಟ್ಟ
ಅದರ ಹೆಸರನ್ನು ಬರೆಯಲಿಕ್ಕೆ ಹೇಳುತ್ತಾರೆ. ಇದೇ ರೀತಿಯಾಗಿ ಚಿತ್ರಗಳನ್ನು
ಅವುಗಳ ಹೆಸರಿನ ಚೀಟಿಗಳನ್ನೂ ಗುಂಪುಗೂಡಿಸಿಟ್ಟು ಚಿತ್ರದ ಸಾಲುಗಳ ಕೆ
ಅವುಗಳ ಹೆಸರುಗಳ ಚೀಟಿಗಳನ್ನು ಇಡಲಿಕ್ಕೆ ತಿಳಿಸುತ್ತಾರೆ. ಕರಿಹಲಗೆಯ ಮೇ
ಶಬ್ದ ಬರೆದು ಅದರಂತೆ ಬರೆಯಲಿಕ್ಕೆ ತಿಳಿಸುತ್ತಾರೆ. ಅನೇಕ ವಸ್ತುಗಳನ್ನು ಕೊಟ್ಟ
ಅವನ್ನು ಎಣಿಸಿ ಸಂಖ್ಯೆ ಬರೆಯಲಿಕ್ಕೆ ಹೇಳುತ್ತಾರೆ. ಸಂಖ್ಯೆಯನ್ನು ಹೇಳಿ ಅಷ್ಟ
ವಸ್ತುಗಳನ್ನು ಎಣಿಸಿ ಜೇರೆಯಾಗಿಡಲಿಕ್ಕೆ ತಿಳಿಸುತ್ತಾರೆ. ಸಣ್ಣ ಸಣ್ಣ ಜೇರೀಜ
ಚಾಪಾಕಿ. ಗುಣಾಕಾರಗಳ ವಿಷಯವಾಗಿ ಎಲ್ಲ ಹುಡುಗರ ಕೈಯಲ್ಲಿದು
ಕಾರ್ಡುಗಳನ್ನು ಕೊಟ್ಟು ಉದಾಹರಣಗಳನ್ನು ಬಿಡಿಸಲು ತೊಡಗಿಸುತ್ತಾ
ವಸ್ತುಗಳನ್ನು ಕೊಟ್ಟು ಅದರಂತೆ ಚಿತ್ರತೆಗೆಯಲು ಹೇಳುತ್ತಾರೆ. ಕಾಗದಗಳ
ಇಲ್ಲವೆ ಬೆಂಡುಗಳಿಂದ ವಸ್ತುಗಳ ಮಾದರಿಗಳನ್ನು ಮಾಡಿಸುತ್ತಾರೆ. ಹೀ
ಅನೇಕ ಬಗೆಯಾಗಿ ಹುಡುಗರನ್ನು ಕೆಲಸದಲ್ಲಿ ತೊಡಗಿಸುವ ಕ್ರಮವು ಇ
ನಡೆಯುತ್ತದೆ. ಇದೇ ರೀತಿಯಿಂದ ಹೆಚ್ಚು ವರ್ಗಗಳನ್ನು ಕಲಿಸುವ ಶಿಕ್ಷಕ
ಎಲ್ಲ ವರ್ಗಗಳ ಹುಡುಗರನ್ನು ಒಂದಿಲ್ಲ ಒಂದು ಕೆಲಸದಲ್ಲಿ ತೊಡಗಿಸಬಹುದು
ಹುಡುಗರು ತಾವೇ ಕೆಲಸದಲ್ಲಿ ತೊಡಗಲು ಕಲಿತ ಸಂಗತಿಗಳು ಅವರ ಹೃದ
ದಲ್ಲಿ ದೃಢವಾಗಿ ಉಳಿಯುತ್ತವೆ. ಈ ಪ್ರಕಾರವಾಗಿ ಕಲಿತ ಬಗ್ಗೆ ಅವ
ಆತ್ಮವಿಶ್ವಾಸವು ಉತ್ಪನ್ನವಾಗುತ್ತದೆ. ಶಿಕ್ಷಕನಿಂದ ಆಯತ್ನವಾಗಿ ದೊರೆದ ಜ್ಞಾ
ಕ್ಕಿಂತ ತಾವೇ ಕೆಲಸದಲ್ಲಿ ತೊಡಗಿ ಅನುಭವ ಪಡೆದು ಸಂಪಾದಿಸಿದ ಜ್ಞಾನ
ಹೆಚ್ಚಿನದೆಂದು ವಿದ್ಯಾರ್ಥಿಗಳು ಬಗೆಯುತ್ತಾರೆ. ತಾವೇ ತಮ್ಮ ಕೈಯಿ
ಮಾಡುತ್ತ ಕಲಿಯುವದಕ್ಕೆ ವಿದ್ಯಾರ್ಥಿಗಳು ಮೆಚ್ಚುವದು ಸ್ವಾಭಾವಿಕವಾದದ
ಒಟ್ಟಿನ ಮೇಲೆ ವರ್ಗದಲ್ಲಿ ತಕ್ಕ ಪದ್ಧತಿಗಳು ಚಟಗಳಂತೆ ಪರಿಣಮಿಸುವ
ವಿದ್ಯಾರ್ಥಿಗಳಲ್ಲಿ ತಕ್ಕ ಶಿಸ್ತನ್ನು ನೆಲೆಗೊಳಿಸುವದೂ ಮಹತ್ವದ ಮಾತುಗಳಾ

ಒಬ್ಬನೇ ಶಿಕ್ಷಕನಿರುವ ತಾಲೆಗಳಲ್ಲಿ ಅಥವಾ ಒಬ್ಬೊಬ್ಬ ಶಿಕ್ಷಕನು ಎ
ಕ್ಕಿಂತ ಹೆಚ್ಚು ಇಯತ್ತೆಗಳನ್ನು ಕಲಿಸುವ ಪ್ರಸಂಗದಲ್ಲಿ ಕವಿತೆ, ಗಾಯ
ಇತಿಹಾಸ, ಭೂಗೋಲ, ಡ್ರಾಯಿಂಗು, ಆರೋಗ್ಯವಿಜ್ಞಾನ, ಟ್ರಿಲಾ
ಮುಂತಾದ ವಿಷಯಗಳನ್ನು ಕೆಲವು ವರ್ಗಗಳಿಗೆ ಸಾಮೂಹಿಕವಾಗಿ ಕಲಿಸ
ಬರುವಂತೆ ಯೋಜನೆಯಿರುವದು. ಉದಾಹರಣಾರ್ಥವಾಗಿ ಬಾಲಕರ ವ
ಮೊದಲನೆಯ ಇಯತ್ತೆಗಳಿಗೆ ಗಾಯನ, ಕಥೆ ಈ ವಿಷಯಗಳೂ, ಸೆನೆಯ ಳ
ಇಯತ್ತೆಗಳಿಗೆ ಇತಿಹಾಸ. ಭೂಗೋಲ ವಿಷಯಗಳೊಳಗಿನ ಹಲಕೆಲವು ಸ

ನ್ನೂ ಒಟ್ಟಾಗಿ ಕಲಿಸಲಿಕ್ಕೆ ಬರುವಂತೆ ಇರುತ್ತವೆ. ಇದೇ ರೀತಿಯಾಗಿ ಶಿಕ್ಷಕನು ಪಠ್ಯಪುಸ್ತಕದಲ್ಲಿಯಿಂದ ಇನ್ನೂ ಕೆಲಕೆಲವು ವಿಷಯಗಳನ್ನು ಒಟ್ಟಾಗಿ ಕಲಿಸುವಂತೆ ಯೋಜನೆ ಮಾಡಿಕೊಳ್ಳಲು ಅನುಕೂಲವಿರುತ್ತದೆ. ಮುಖ್ಯವಾಗಿ ವಿದ್ಯಾರ್ಥಿಗಳೇ ಹೆಚ್ಚು ಕೆಲಸ ಮಾಡಿ ಜ್ಞಾನಸಂಪಾದನೆ ಮಾಡಿಕೊಳ್ಳುವಂತೆ ವಿಷಯಗಳನ್ನು ನಿರ್ಧರಿಸಿ ಕೊಡುವದು ಶಿಕ್ಷಕನ ಜಾಣತನವನ್ನು ಅವಲಂಬಿಸಿರುತ್ತದೆ. ವಿದ್ಯಾರ್ಥಿಗೆ ಕೆಲಸಗಳನ್ನು ನಿಯಮಿಸಿಕೊಟ್ಟು ಅವರು ತಮ್ಮ ಕಾರ್ಯದಲ್ಲಿ ತೊಡಗಿರುವಾಗ ಮೇಲು ನೋಡುತ್ತ ಅವಶ್ಯ ಪ್ರಸಂಗದಲ್ಲಿ ಸಹಾಯ ಮಾಡುತ್ತ ವಿಷಯವನ್ನು ಕಲಿಸುವದು ಚಲೋಪದ್ಧತಿಯಾಗಿದೆ. ಒಬ್ಬ ಶಿಕ್ಷಕನು ಒಂದೇ ಇಯತ್ತೆಯನ್ನು ಕಲಿಸುವಾಗ ತಾನೇ ಹೇಳುತ್ತ ವಿದ್ಯಾರ್ಥಿಗಳ ಬೇಸರದ ಕಡೆ ಲಕ್ಷ್ಯವಿಡದೆ ವಿಷಯ ಕಲಿಸುವದಕ್ಕಿಂತ ಹಳ್ಳಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದಲೇ ಅಭ್ಯಾಸ ಮಾಡಿಸುತ್ತ ಅವಶ್ಯ ಕಂಡಾಗ ಸಹಾಯ ಮಾಡುತ್ತ ಕಲಿಸುವ ಪದ್ಧತಿಯು ಉತ್ತಮವಾಗಿರುವದು. ಶಿಕ್ಷಕನೊಬ್ಬನೇ ಯತ್ನಮಾತುವ ಪದ್ಧತಿಗಿಂತ ವಿದ್ಯಾರ್ಥಿಗಳೊಡನೆ ಯತ್ನಿಸುವ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಜವಾಬುದಾರಿಯು ಹೆಚ್ಚಾಗಿ ಉಳಿಯಲಿಕ್ಕೆ ಮಾರ್ಗವಿದೆ.

ಹಿಂದುಳಿದ ವಿದ್ಯಾರ್ಥಿಗಳ ಶಿಕ್ಷಣ

ಇಂಗ್ಲಂಡದ ಹಳ್ಳಿಯ ಶಾಲೆಯಲ್ಲಿ ೯ ವರ್ಗಗಳಿವೆ ಎಂದು ಈ ಮೊದಲೇ ಹೇಳಿದೆ. ಈ ಪ್ರತಿಯೊಂದು ವರ್ಗದಲ್ಲಿ ನಮ್ಮಲ್ಲಿಯಂತೆ ಕೆಲವರು ಬುದ್ಧಿವಂತರೂ ಕೆಲವರು ಮಧ್ಯಮರೂ ಇನ್ನು ಕೆಲವರು ತೀರ ಹಿಂದುಳಿದವರೂ ಇರುವರು. ಈ ವರ್ಗದ ಕನಿಷ್ಠ ವಿದ್ಯಾರ್ಥಿಗಳ ದೆಸೆಯಿಂದ ಅಲ್ಲಿಯ ಶಾಲಾಮಾಸ್ತರರು ಬಹಳ ತೊಂದರೆ ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ಹಿಂದುಳಿದ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಾಗ ಮೇಲು ತರಗತಿಯ ವಿದ್ಯಾರ್ಥಿಗಳು ಹಿಂದುಳಿಯುದಂತೆ ಮುತ್ತಿಷ್ಟು ಹೆಚ್ಚಾಗಿ ಜಾಗ್ರತೆ ಪಡಬೇಕಾಗುತ್ತದೆಂದು ಬರೆಯುವ ಕಾರಣವಿಲ್ಲ. ಒಟ್ಟಿನ ಮೇಲೆ ವ್ಯಕ್ತಿಶಃ ಶಿಕ್ಷಣಪದ್ಧತಿಯನ್ನು ಕೈಕೊಂಡು ಹಿಂದುಳಿದವರಿಗೆ ಪ್ರತ್ಯೇಕ ಸಹಾಯಗಳನ್ನು ಕೊಟ್ಟು ಮಾಡಿಸಬೇಕಾಗುತ್ತದೆ. ನಮ್ಮಲ್ಲಿಯ ಹಳ್ಳಿಯ ಶಾಲೆಗಿಂತಲೂ ಅಲ್ಲಿಯ ಹಳ್ಳಿಯ ಶಾಲಾಮಾಸ್ತರರಿಗೆ ಇನ್ನೊಂದು ಬಗೆಯ ತೊಂದರೆಯು ಅಂಟಿರುತ್ತದೆ, ಅದೇನೆಂದರೆ— ವಿದ್ಯಾರ್ಥಿಗಳ ವಯೋಮಾನಕ್ಕನುಸರಿಸಿ ಕನಿಷ್ಠ ವರ್ಗಕ್ಕೆ ಏರಿಸುವದು. ಇದೂ ಇಲ್ಲದೆ, ಒಬ್ಬ ವಿದ್ಯಾರ್ಥಿಯು ಭಾಷಾ ವಿಷಯದಲ್ಲಿ ಬಲ್ಲಿದನಿದ್ದರೆ ಇನ್ನೊಂದು ವಿಷಯದಲ್ಲಿ ಹಿಂದುಳಿಯುತ್ತಿರುತ್ತಾನೆ. ಇಲ್ಲಿಯ ತೊಂದರೆಗಳನ್ನೆಲ್ಲ ಪರಿಹರಿಸಿಕೊಂಡು ನಿಜವಾಗಿ ಪ್ರತಿಯೊಬ್ಬ ವಿದ್ಯಾ

ರ್ಥಿಯ ಪ್ರತಿಯೊಂದು ವಿಷಯದ ಕಡೆಗೆ ಲಕ್ಷ್ಯಗೊಟ್ಟು ಕೆಲಸ ಮಾಡಬೇಕಾ
ಅಲ್ಲಿಯ ಹಳ್ಳಿಯ ಶಾಲೆಯ ಶಿಕ್ಷಕರು ಬಹಳ ಶ್ರಮಪಟ್ಟು ಕೆಲಸ ಮಾಡು
ರೆಂದು ವಾಚಕರಿಗೆ ಸಹಜವಾಗಿ ಗೊತ್ತಾಗುತ್ತದೆ. ಉದಾಹರಣಾರ್ಥವ
ಗಣಿತ ವಿಷಯದಲ್ಲಿ ಜಾಣನಾದ ಒಬ್ಬ ವಿದ್ಯಾರ್ಥಿಯು ೪ನೆಯ ಇಯತ್ತೆಯಲ್ಲಿ
ಭಾಷಾ ವಿಷಯದಲ್ಲಿ ಹಿಂದುಳಿದು ೩ನೆಯ ಇ. ಯ ವಿದ್ಯಾರ್ಥಿಗಳಿಗೆ ಸರಿಯಾ
ನಿದ್ದರೆ ಭಾಷಾವಿಷಯವು ನಡೆಯುವಾಗ ಅವನನ್ನು ೩ನೆಯ ಇಯತ್ತೆಯ ಭ
ಅಭ್ಯಾಸ ನಡೆಯಿಸಿ ಸರಿಪಡಿಸಿಕೊಂಡು ಪ್ರತ್ಯೇಕವಾಗಿ ಹೆಚ್ಚಿಗೆ ಲಕ್ಷ್ಯಗೊ
ಮೇಲಿನ ಇಯತ್ತೆಯ ಅಭ್ಯಾಸಕ್ಕೆ ಸರಿಪಡಿಸಿಕೊಳ್ಳುವರು. ಹೀಗೆ ಕ
ಮಾಡಿ ತೋರಿಸಬೇಕಾದರೆ ಶಾಲೆಯ ವೇಳೆಯ ಹೊರತಾಗಿ ಸಹ ಕೆಲಸ ಮ
ಬೇಕಾಗಬಹುದು. ಈ ಬಗೆಯ ಹೆಚ್ಚಿನ ವೇಳೆಯಲ್ಲಿ ಹಿಂದುಳಿದ ವಿದ್ಯಾರ್ಥಿಗ
ಸಹಾಯ ಮಾಡಲು ಅನುಕೂಲವಾಗುತ್ತದೆ. ಇದರಂತೆ ಪಟ್ಟಣದ ಶಾಲೆಗ
ಸಹ ಪ್ರತಿಯೊಂದು ವರ್ಗದಲ್ಲಿಯೂ ಭಿನ್ನ ಭಿನ್ನ ಯೋಗ್ಯತೆಯ ಹುಡುಗ
ವದು ಸಹಜ. ವರ್ಗದ ಅನುಕೂಲಕ್ಕಾಗಿ ಜಾಣ ಹುಡುಗರನ್ನು ಹಿಂದೆ ಬ
ಯುವ ಹುಡುಗರ ಕೂಡ ತಡೆದು ಹಿಡಿಯುವ ಕಾರಣವಿಲ್ಲ. ಜಾಣ ಹುಡುಗ
ಮುಂದೆ ಸಾಗಲಿಕ್ಕೆ ಉತ್ತೇಜನ ಕೊಡುತ್ತಾರೆ. ಹಿಂದೆ ಉಳಿಯುವ ಹುಡುಗ
ಹತ್ತಿರ ಹೋಗಿ ಅವರಿಗೆ ಒದಗುವ ತೊಂದರೆಗಳಿಗಾಗಿ ತಕ್ಕ ಸಹಾಯ ಮಾ
ಕಲಿಸುತ್ತಿರುತ್ತಾರೆ. ಒಂದೇ ವರ್ಗದಲ್ಲಿ ಒಂದು ಕಠಿಣ ವಿಷಯದ ಪುಸ್ತ
ಅದೇ ವಿಷಯದ ಮತ್ತೊಂದು ಸುಲಭ ಪುಸ್ತಕ ಈ ರೀತಿಯಾಗಿ ವಿಭಾಗ ಮಾ
ಕೊಂಡು ಹುಡುಗರ ಯೋಗ್ಯತೆಗೆ ತಕ್ಕಂತೆ ಅವನ್ನು ಉಪಯೋಗಿಸುತ್ತಾ
ಈ ವಿಷಯವಾಗಿ ಮುಂದೊಮ್ಮೆ ಪ್ರತ್ಯೇಕವಾಗಿ ಬರೆಯೋಣ.

ಇಂಗ್ಲಂಡದಲ್ಲಿಯ ಹಳ್ಳಿಯ ಶಾಲೆಗಳ ಸಂಬಂಧವಾದ ಹೆಚ್ಚಿನ ಮಾಹಿತಿ.

೧. ನಮ್ಮಲ್ಲಿಯಂತೆ ಇಂಗ್ಲಂಡದೇಶದ ಹಳ್ಳಿಯ ಶಾಲೆಗಳಲ್ಲಿಯೂ ಇಬ್ಬ
ಶಿಕ್ಷಕರಿದ್ದ ಶಾಲೆಗಳು ಇರುತ್ತವೆ. ಅವರಲ್ಲಿ ಒಬ್ಬೊಬ್ಬರಿಗೆ ಹೆಚ್ಚಿಗೆ ವರ್ಗಗಳನ್ನ
ಕಲಿಸುವ ಪ್ರಸಂಗವು ಬಂದೇಬರುವದು. ಇಂಗ್ಲಂಡದೇಶದಲ್ಲಿ ಸಾರ್ವತ್ರಿ
ಶಿಕ್ಷಣವು ಮಕ್ಕಳ ೫ನೆ ವರ್ಷದ ಆರಂಭದಿಂದ ಅವರಿಗೆ ೧೪ ವರ್ಷಗಳು ಮು
ಯುವವರೆಗೂ ಬಲಾತ್ಕಾರದಿಂದ ಸಾಗುತ್ತದೆ. ಒಂದೊಂದು ಶಾಲೆಯಲ್ಲಿ ಒಬ್ಬ
ಶಿಕ್ಷಕನು ಒಂಬತ್ತು ವರ್ಗಗಳನ್ನು ಒಂದೇ ಕೋಣೆಯಲ್ಲಿ ಕೂಡಿತು ಕಲಿಸ
ಪ್ರಸಂಗವು ಕ್ವಚಿತ್ತಾಗಿ ಬರುತ್ತದೆ. ನಮ್ಮಲ್ಲಿಯ ಹಳ್ಳಿಯ ಶಾಲೆಗಳಲ್ಲಿ ಸಾಮ

ತ್ರಗಳನ್ನು ಮಾತ್ರ ಬಹುಶಃ ಕಲಿಸುತ್ತಿರುವದರಿಂದ ಒಬ್ಬ ಶಿಕ್ಷಕನು ರ್ಗಗಳನ್ನು ಕಲಿಸಬೇಕಾಗುವದು. ನಮ್ಮ ದೇಶದಲ್ಲಿ ಒತ್ತಾಯದ ಶಿಕ್ಷಣದ ಮಿತಿಯು ೬ ರಿಂದ ೧೧ರ ವರೆಗೆ ಎಂದು ಗೊತ್ತಾಗಿದೆ.

೨. ಒಂಬತ್ತು ವರ್ಗಗಳನ್ನು ಕಲಿಸುವ ಪ್ರಸಂಗವು ಅಲ್ಲಿ ಇರುವದರಿಂದ ನು ಶಿಕ್ಷಕರಿದ್ದರೆ ಜೋಡಿ ಜೋಡಿಯ ಇಯತ್ತೆಗಳನ್ನು ಹಂಚಿಕೊಳ್ಳುತ್ತಾರೆ; ಉದಾ— ೧–೨–೩, ೪–೫, ಹೀಗೆ, ಒಟ್ಟಾಗಿ ವಿಷಯಗಳನ್ನು ಕಲಿಸಲಿಕ್ಕೆ ಕೆಂಬದೇ ಈ ವಿಭಾಗ ಪದ್ಧತಿಯ ಧ್ಯೇಯವಾಗಿರುವದು. ನಮ್ಮಲ್ಲಿ ಕೆಲವು ಗಳಲ್ಲಿ ೭ನೆಯ ಇ., ಬಾಲಕರ ವರ್ಗ ಇವುಗಳನ್ನು ಒಬ್ಬೊಬ್ಬ ಶಿಕ್ಷಕರು ುವದನ್ನು ನೋಡುತ್ತೇವೆ. ೭ನೆಯ ಇ. ಯ ಹುಡುಗರು ಪ್ರೌಢರು ಇರು ುದ ಸರತಿಯಂತೆ ಅನುಕೂಲ ಸಮಯದಲ್ಲಿ ವಿದ್ಯಾರ್ಥಿ ಶಿಕ್ಷಕರ ಕೆಲಸಕ್ಕೆ ಹೋಗಬೇಳುವರೆಂಬದೇ ಇಲ್ಲಿಯ ಶಿಕ್ಷಕರ ಧ್ಯೇಯವಾಗಿರುವದು. ಯ ವರ್ಗಕ್ಕೆ ಗಾಯನ, ಇತಿಹಾಸ ಭೂಗೋಲ, ಚಿತ್ರಕಲೆ, ಹಸ್ತವ್ಯವ ು ಇತ್ಯಾದಿ ವಿಷಯಗಳನ್ನು ಒಟ್ಟಾಗಿ ಕಲಿಸಲಿಕ್ಕೆ ಬರುವದು.

೩. ಇಂಗ್ಲಂಡದೇಶದ ಹಳ್ಳಿಯ ಶಾಲೆಗಳಲ್ಲಿ ವ್ಯಕ್ತಿಶಃ ಶಿಕ್ಷಣಪದ್ಧತಿಗೆ ಾವಕಾಶವಿರುವದೆಂದು ಮೇಲೆ ಬರೆದದೆ. ಒಂದೊಂದು ವರ್ಗಕ್ಕೆ ಇಂಥಿಂಥ ುವೆಂದು ಗೊತ್ತುಮಾಡಿ ಆ ಪ್ರಕಾರ ಕೆಲಸಮಾಡ ಹಚ್ಚಿ ಸಹಾಯಮಾಡ ಕ್ಕೆ ಶಿಕ್ಷಕನು ಓಡಾಡುತ್ತ ಮೇಲು ನೋಡುತ್ತ ಇರಬೇಕಾಗುವದು ಈ ಯಾಗಿ ವರ್ಗ ನಡೆಯಲು ಅನುಕೂಲವಾಗುವಂತೆ ಗಣಿತದ ಉದಾಹರಣೆಗಳು, ರ್ಡುಗಳು, ಶಬ್ದಗಳ ಕಾರ್ಡುಗಳು ಚಿತ್ರಗಳು ಮುಂತಾದ ಇನ್ನೂ ಹಲವು ು ಉಪಕರಣಗಳನ್ನು ಅವರು ಕಲ್ಪಿಸಿಕೊಂಡಿರುವರು. ಈ ಬಗೆಯ ಉಪಕರಣ ನ್ನು ನಮ್ಮ ಶಾಲೆಗಳಲ್ಲಿಯೂ ಕಲ್ಪಿಸಿ ಉಪಯೋಗಿಸಿಕೊಳ್ಳಲಿಕ್ಕೆ ಶಿಕ್ಷಕರು ೃಹಮಾಡಬೇಕು. ಶಿಕ್ಷಕರು ಈ ಪ್ರಕಾರ ವರ್ಗಗಳು ಸುಸೂತ್ರವಾಗಿ ನಡೆಯು ಿ ಪೂರ್ವಸಿದ್ಧತೆ ಮಾಡಿಟ್ಟುಕೊಳ್ಳಬೇಕಾಗುವದು. ನಡುನಡುವೆ ಅವಶ್ಯ ುಂತೆ ಹೆಚ್ಚಿಗೆ ಸಾಹಿತ್ಯಗಳನ್ನು ಸಿದ್ಧಪಡಿಸುತ್ತ ನಡೆದರೆ ಶಾಲೆಯು ಒಳ್ಳೇ ರ್ಷಕವಾಗಿ ತೋರುವದು.

೪. ಮೇಲೆ ಬರೆದಂತೆ ಶಿಕ್ಷಣ ನಡೆಯುವದಕ್ಕಾಗಿ ಅಭ್ಯಾಸ ಕ್ರಮದ ಿಜನೆಯನ್ನು ಮೊದಲೇ ಮಾಡಿಟ್ಟುಕೊಳ್ಳಬೇಕಾಗುವದು. ಪ್ರತಿ ವಾರದಲ್ಲಿ ಥಿಂಥ ವರ್ಗಕ್ಕೆ ಇಷ್ಟಿಷ್ಟು ವಿಷಯ ಕಲಿಸಬೇಕೆಂಬದಾಗಿ ಅಭ್ಯಾಸಪತ್ರಿಕೆಯನ್ನು ಾಗಿಸಿಟ್ಟುಕೊಳ್ಳಬೇಕಾಗುವದು. ಅವು ಯೋಜನೆಗೆ ಸರಿಯಾಗಿ ಸಾಗಿದವೋ

ಏನಾದರೂ ಸ್ವಲ್ಪ ಉಳಿದಿರುವದೋ, ಮುಂತಾದದ್ದನ್ನೂ ಬರೆದಿಟ್ಟುಕೊಂ
ಉಳಿದ ವಿಷಯಗಳನ್ನು ಮತ್ತೆ ಮುಂದಿನ ವಾರದಲ್ಲಿ ಸೇರಿಸಿಕೊಳ್ಳಬೇಕಾಗುವ

೫. ಹಳ್ಳಿಯ ಶಾಲೆಗಳಿಗಾಗಿ ಕರಿಹಲಗೆ ಮುಂತಾದ ಉಪಕರಣಗಳ
ಅಲ್ಲಿಯ ಬೋರ್ಡಿನವರು ಬೇಕಾದಷ್ಟು ಪೂರೈಸುವರೆಂದು ಮೊದಲೇ ಹೇಳ
ಹಾಗೆಯೇ ವಾಚನಕ್ಕಾಗಿ ಸುಲಭ ವಾಚನ ಪುಸ್ತಕಗಳನ್ನೂ ಕೊಡುವ
ಶಿಕ್ಷಕರೆಲ್ಲ ಟ್ರೇಂಡರೇ ಇರುವರು. ನಮ್ಮಲ್ಲಿಯ ಹಳ್ಳಿಯ ಶಾಲೆಗಳಿಗೂ ಇ
ಪ್ರಕಾರದ ಅನುಕೂಲತೆಯ ಅವಶ್ಯಕತೆಯಿದೆ. ಟ್ರೇಂಡ ಶಿಕ್ಷಕರಿದ್ದರೆ ತಮ್ಮ ತಮ್
ಬೇಕಾದ ಉಪಕರಣಗಳನ್ನು ತಾವೇ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವ

ಈ ವರೆಗೆ ಬೇಸ್ಸ್ಲ್ಲ ಮತ್ತು ಪೇಟಿಟ್ ಶಾಲೆಯ ವಿಷಯವಾಗಿ ಹೇಳಿದಂ
ಯಿತು. ಇನ್ನು 'ಗ್ರಿಂಡಲಟನ ಲೇಸ ಯೇಂಡ್ಸ' ಎಂಬ ಮತ್ತೊಂದು ಶಾಲೆ
ವಿಷಯವಾಗಿ ಸ್ವಲ್ಪವಿಚಾರಿಸಿದೆ.

ಈ ಶಾಲೆಯಲ್ಲಿ ಹುಡುಗರು ೧೧ ವರ್ಷದವರೆಗೆ ಮಾತ್ರ ಇದ್ದಾರೆ. ಇದಕ
ಹೆಚ್ಚಿನ ವರ್ಷದವರಿಗಾಗಿ ಮತ್ತೊಂದು ಮಧ್ಯವರ್ತಿ ಶಾಲೆಯು ಇರುವ
ಅದು ಕ್ಲಿಫರೋ ಎಂಬಲ್ಲಿ ಇರುತ್ತದೆ.

ಗ್ರಿಂಡಲಟನ್ ಲೆನಯೇಂಡ್ಸ ಎಂಬ ಶಾಲೆಯಲ್ಲಿ ಹಾಜರಿ ಪಟದಲ್ಲಿ ೧
ಹುಡುಗರು ಇರುವರು. ಒಬ್ಬಳೇ ಶಿಕ್ಷಕೆಯು ಕೆಲಸ ಸಾಗಿಸುತ್ತಿರುವಳು. ಶಾಲ
ಕಟ್ಟಡವು ಚೆನ್ನಾಗಿರುವದು. ಆಡಲಿಕ್ಕಾಗಿ ಪಟಾಂಗಣವು ಸಾಕಷ್ಟು ವಿಸ್ತಾ
ವಾದದ್ದಿಲ್ಲ. ಮಿಕ್ಕ ವ್ಯವಸ್ಥೆಯೆಲ್ಲ ಮೇಲಿನ ಶಾಲೆಯಂತೆಯೇ ಇರುತ್ತದೆ.

ಈ ಹದಿನೆಂಟು ಹುಡುಗರಲ್ಲಿ ಬಾಲಕರ ವರ್ಗದಲ್ಲಿ ೬. ಮಿಕ್ಕ ವರ್ಗದಲ್ಲಿ ೧
ಹೀಗೆ ಆವೆ. ಇಯತ್ತೆಗಳು ಬಾಲಕರ ವರ್ಗವನ್ನು ಕೂಡಿ ೫ ವರ್ಗಗಳಾಗಿರುವವು
ಅಲ್ಲಿ ಕಲಿಸುವ ಪದ್ಧತಿಯು ಮೊದಲು ನೋಡಿದ ಹಳ್ಳಿಯ ಶಾಲೆಯಂತೆಯೇ ಇ

ಇನ್ನೊಂದು 'ಥಾನೀಹೋಲ್ಮ್' ಎಂಬ ಶಾಲೆಯು ಹೆಚ್ಚು ಮಾದರಿಯದಾಗಿ
ಕಂಡದ್ದರಿಂದಲೂ ಅಲ್ಲಿ ಧಾರ್ಮಿಕ ಶಿಕ್ಷಣವು ನಡೆಯುತ್ತಿರುವದರಿಂದಲೂ ಅದ
ವಿಷಯವಾಗಿ ಸ್ವಲ್ಪ ಸಂಗತಿಯನ್ನು ಕೆಳಗೆ ಬರೆದಿದೆ.

ಈ ಶಾಲೆಯು ರೋಮನ್ ಕೆಥೋಲಿಕರದು. ಆ ಕಾರಣ ಇಲ್ಲಿ ಧಾರ್ಮಿಕ
ಶಿಕ್ಷಣವು ರೋಮನ್ ಕೆಥೋಲಿಕ ಪದ್ಧತಿಗೆ ಸರಿಯಾಗಿ ನಡೆಯುತ್ತದೆ. ಈ
ಸಂಸ್ಥೆಯ ಚಾಲಕರು ರೋಮನ್ ಕೆಥೋಲಿಕ ಧರ್ಮದವರಿರುವರು. ಆದುದರಿಂ
ಈ ಶಾಲೆಗೆ ರೋಮನ್ ಕೆಥೋಲಿಕ ಶಾಲೆಯೆನ್ನುವರು. ಈ ಸಂಸ್ಥೆಯು ಅಲ್ಲಿಯ

ರ್ಗಿನವರಿಂದ ಮಾನ್ಯಮಾಡಲ್ಪಟ್ಟಿದೆ. ಇಲ್ಲಿಯ ಹುಡುಗರು ಮಾತ್ರ ಎಲ್ಲ ಧರ್ಮದವರೂ ಇರುವರು. ಸರಕಾರಿ ಅಧಿಕಾರಸ್ಥರು ಇದರ ಪರೀಕ್ಷೆಯನ್ನು ಮಾಡಿ ಸಹಾಯಮಾಡುವರು. ಇಲ್ಲಿ ಹುಡುಗರ ಸಂಖ್ಯೆಯು ೨೩ ಇರುವದು; ಶಿಕ್ಷಕಿಯರು ಮಾತ್ರ ಇಬ್ಬರು, ಶಾಲಾಗೃಹವು ಯೋಗ್ಯವಾಗಿದ್ದು ಪಟಾಂಗಣವು ವಿಶಿಷ್ಟ ಇರುವದು. ಬಾಲಕರ ವರ್ಗದಲ್ಲಿ ೨, ೧ನೆಯ ಇ. ಯಲ್ಲಿ ೪, ೨ನೆಯ ಇ. ಯಲ್ಲಿ ೩, ೩ನೆಯ ಇ. ಯಲ್ಲಿ ೩, ೪ನೆಯ ಇ. ಯಲ್ಲಿ ೩, ೫ನೆಯ ಇ. ಯಲ್ಲಿ ೨, ೬ನೆಯ ಇ. ಯಲ್ಲಿ ೨, ೭ನೆಯ ಇ. ಯಲ್ಲಿ ೩. ಈ ಪ್ರಕಾರ ಹುಡುಗರ ವರ್ಗೀಕರಣವಿದೆ. ಈ ಎಲ್ಲ ವರ್ಗಗಳಲ್ಲಿ ೩ ಜೋಡಿಗಳನ್ನು ಕಲ್ಪಿಸಿದ್ದಾರೆ. ಬಾಲಕರ ವರ್ಗ ೧ನೆಯ ಇ. ೧ನೆಯ ಜೋಡಿಯಲ್ಲಿ, ೨ನೆಯ ೩ನೆಯ ೪ನೆಯ ಇಯತ್ತೆಗಳು ೫ನೆಯ ಜೋಡಿಯಲ್ಲಿ, ಮಿಕ್ಕವು ೩ನೆಯ ಜೋಡಿಯಲ್ಲಿ. ೧ನೆಯ ಜೋಡಿಯನ್ನು ಒಬ್ಬ ಶಿಕ್ಷಕಿಯೂ ೨ನೆಯ ೩ನೆಯ ಜೋಡಿಗಳನ್ನು ಇನ್ನೊಬ್ಬ ಶಿಕ್ಷಕಿಯೂ ಶಿಕ್ಷಿಸುತ್ತಿರುತ್ತಾಳೆ. ಮುಖ್ಯ ಶಿಕ್ಷಕಿಯು ಒಳ್ಳೆಯ ಬುದ್ಧಿವಂತಳೂ ಅನುಭವವುಳ್ಳವಳೂ ಇರುತ್ತಾಳೆ. ಇನ್ನೊಬ್ಬಳು ಮಾತ್ರ ಹೊಸಬಳು. ಈ ಶಾಲೆಯನ್ನು ೨, ೩ ವರ್ಷ ನೋಡಿದರೂ ಸಾಕಾಗಲಿಲ್ಲ. ಹುಡುಗರ ಅಕ್ಷರಗಳು ಬಹು ಸುಂದರವಾಗಿವೆ. ವಾಚನ ವಿಷಯವಾದರೂ ಉತ್ಕೃಷ್ಟವಿತ್ತು. ಹುಡುಗರು ಒಳ್ಳೆಯ ಚುರುಕಿನವರಾಗಿಯೂ ಬುದ್ಧಿವಂತರಾಗಿಯೂ ತೋರಿದರು. ಶಾಲೆಯು ಚಿಕ್ಕದಾಗಿದ್ದರೂ ಮೇಲುಪಂಕ್ತಿಯದಾಗಿ ತೋರಿತು. ಆ ಶಾಲೆಯ ಅಧಿಕಾರಿಗಳೂ ಸಹ ಆ ಶಾಲೆಯ ಕೆಲಸದ ಬಗ್ಗೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಹಳ್ಳಿಯ ಶಾಲೆಗಳ ವರ್ಣನೆಯು ಇನ್ನೂ ಸ್ವಲ್ಪ ಇದ್ದರೂ ಸ್ಪಷ್ಟ ವಿಸ್ತಾರವಾದುದಿಂದಲೂ ಅವೆಲ್ಲ ಮೇಲಿನ ಹಳ್ಳಿಯ ಶಾಲೆಗಳಿಗೆ ಸಮವಾಗಿದ್ದರಿಂದಲೂ ಇಷ್ಟಕ್ಕೇ ಬಿಟ್ಟು ಮುಂದೆ ಹಳ್ಳಿಯ ಶಾಲೆಗಳ ಹೆಚ್ಚಿನ ಮಾಹಿತಿಯನ್ನು ಕೆಳಗೆ ವರಿಸುವೆವು.

ನಮ್ಮಲ್ಲಿಯ ಶರಾ ಪುಸ್ತಕದಂತೆ ಅಲ್ಲಿಯ ಪ್ರತಿಯೊಂದು ಹಳ್ಳಿಯ ಶಾಲೆಯಲ್ಲಿ ಲಾಗಬುಕ್ಕು ಎಂಬದು ೬೦೦ ಪುಟಗಳುಳ್ಳದ್ದು ಅಂದರೆ ೩೦೦ ಕಾಗದವಿರುವದು. ಈ ಪುಸ್ತಕದಲ್ಲಿ ಆ ಶಾಲೆಯ ಹೆಡ್‌ಮಾಸ್ತರನಾಗಲಿ ಅಧಿಕಾರಿಯಾಗಲಿ ಶಾಲೆಯಲ್ಲಿ ಒದಗಿದ ಮಹತ್ವದ ಸಂಗತಿಗಳನ್ನು ಬರೆದಿಡುವರು. ಕ್ರಮವಾಗಿ ಹಿಂದಿನಿಂದ ಈ ವರೆಗೆ ಶಾಲೆಯಲ್ಲಾದ ಸುಧಾರಣೆಗಳು ಈ ಪುಸ್ತಕದಿಂದ ತಿಳಿಯುವದರಿಂದ ಇದಕ್ಕೆ ಒಳ್ಳೇ ಮಹತ್ವವು ಪ್ರಾಪ್ತವಾಗಿರುವದು. ಪ್ರತಿಯೊಂದು ಶಾಲೆಯವರು ಅದನ್ನು ಜೋಕೆಯಿಂದ ಇಟ್ಟಿರುತ್ತಾರೆ.

ಅಧಿಕಾರಸ್ಥರು ಶಾಲೆಯನ್ನು ತಪಾಸಿಸಲಿಕ್ಕೆ ಬಂದಾಗ ಶಾಲಾಪಾಠ್ಯ
ಹೆಚ್ಚಿನ ವಿನಯಾದಿಗಳನ್ನು ವ್ಯಕ್ತಪಡಿಸುವದಿಲ್ಲ. ಅಧಿಕಾರಸ್ಥರೂ ಶಾ
ಮಾಸ್ತರರೂ ಬೆರೆತು ಸದ್ಯದ ವಿದ್ಯಾರ್ಥಿಗಳ ಶಿಕ್ಷಣದ ಸ್ಥಿತಿಗತಿಯ ವಿಷಯ
ವಿಚಾರವಿನಿಮಯ ಮಾಡಿಕೊಳ್ಳುವರು. ಇಲ್ಲಿಯಂತೆ ಹೆಚ್ಚಿನ ಭಯ, ಆದರ
ಅಲ್ಲಿ ಕಂಡುಬರಲಾರವು. ಶಾಲೆಯನ್ನು ನೋಡಿಕೊಂಡು ಹಸ್ತಾಂದೋಲನಕ್ಕೆ
ಅಧಿಕಾರಸ್ಥರು ಹೊರಟು ಹೋಗುವರು. ನಮ್ಮಲ್ಲಿಯ ಪ್ರಾ. ಶಿ. ರಲ್ಲಿ ಸಾ
ಮಾನವೇ ತೋರಿಬರುವದಿಲ್ಲ. ಇವರು ತಮ್ಮ ಬೆಲೆಯನ್ನು ತಾವೇ ತೀರ ಕ
ಮಾಡಿಕೊಂಡಿರುವರು. ಶಿಕ್ಷಕರಲ್ಲಿಯೇ ಸ್ವಾವಲಂಬನ ಧೈರ್ಯ ಇತ
ಚಲೋ ಗುಣಗಳು ಇರದಿದ್ದರೆ ಭಾವೀ ರಾಷ್ಟ್ರದಲ್ಲಿ ಆ ಗುಣಗಳು ಉಂಟಾಗ
ಬಗೆ ಹೇಗೆ?

ಇಂಗ್ಲಂಡದೇಶದ ಸ್ಕೌಟ ಶಿಕ್ಷಣ:— ಚಿಂಗಫರ್ಡ ಸ್ಟೇಶನದ ಹ
ಇಪ್ಪ ಗಿಲವೇಲ ಪಾರ್ಕದಲ್ಲಿ ಸ್ಕೌಟ ಶಿಕ್ಷಣವು ನಡೆಯುತ್ತಿರುತ್ತದೆ. ಈ
ಮಾಸ್ತರರ, ಇಲ್ಲವೆ ಸ್ಕೌಟಮಾಸ್ತರರ, ಅಥವಾ ರೋವ್ಹರ್ಗ ಇಲ್ಲವೆ ಕಮಿಶ
ಶಿಕ್ಷಣದ ವರ್ಗಗಳು ಮೇಲಿಂದಮೇಲೆ ಇಲ್ಲಿ ನಡೆಯುತ್ತಿರುತ್ತವೆ. ಸ್ಕೌಟ ಕ
ಶನರು ಈ ಬಾಲವೀರ ಶಿಕ್ಷಣವು ಚೆನ್ನಾಗಿ ನಡೆದು ವೃದ್ಧಿಂಗತವಾಗುವಂತೆ
ಸ್ಕೌಟ ಶಿಕ್ಷಿತರ ಮೇಲ್ವಿಚಾರ ನೋಡುವದಕ್ಕಾಗಿಯೂ ಬಹಳ ಲಕ್ಷ್ಯ ತೆ
ಕೊಳ್ಳುತ್ತಿರುತ್ತಾರೆ. ಗ್ರೇಟಬಟನದ ಯಾವ ಭಾಗದವರೇ ಆಗಲಿ ತರುಣರು ಇ
ಬಂದು ಸ್ಕೌಟ ಶಿಕ್ಷಣಪಡೆದು ಹೊರಗೆ ಹೋಗುತ್ತಾರೆ. ಸ್ಕೌಟ ಜಿಲ್ಲಾ
ಮಧ್ಯವರ್ತಿ ಸ್ಕೌಟ ಶಿಕ್ಷಣದ ದ್ವಾರವಾಗಿ ಇಲ್ಲಿ ಶಿಕ್ಷಣವು ನಡೆಯುತ್ತಿರುತ್ತ
ಕಮೀಶನರ ಶಿಕ್ಷಣ ಪಡೆಯುವರು ಹೆಚ್ಚಿನ ಉದ್ಯೋಗಸ್ಥರೂ ಗೌರವವುಳ್ಳವ
ಇರುವರು. ಉದಾ– ಡಾಕ್ಟರರು, ಇಂಜನಿಯರು, ಸಿವ್ಹಿಲ್ ಸರ್ವಿಸ
ಪೆನಶನ್ನರು ಇ. ದೇಶದ ಭವಿತವ್ಯವು ದೇಶದಲ್ಲಿಯ ತರುಣರ ಮೇಲೆ ಅವಲಂಬ
ವದರಿಂದ ಅವರು ಕಾರ್ಯಕ್ಷಮರೂ ಜವಾಬುದಾರಿಯನ್ನರಿತವರೂ ಆಗು
ಸಹಾಯಮಾಡುವದಕ್ಕಾಗಿ ಅನುಭವಿಕರು ಮುಂದೆ ಬರುತ್ತಿರುತ್ತಾರೆ. ಪ
ದಲ್ಲಿಯ ಸುಜ್ಞರೂ ವಿಚಾರವುಳ್ಳವರೂ ಆದ ಅನುಭವಿಕರು ಇಲ್ಲಿಗೆ ಬ
ತರುಣ ಜನರ ಮುಖಂಡರಾಗಿ ಅವರಿಗೆ ಯೋಗ್ಯ ಮಾರ್ಗವನ್ನು ತೋರಿಸುತ್ತ
ಇಲ್ಲಿಯ ಸ್ಕೌಟ ಟ್ರೂಪ್ಪುಗಳಲ್ಲಿ "ಓಪನ್, ಕಂಟ್ರೋಲ್ಡ" ಎಂಬದಾಗಿ ಎ
ವಿಧಗಳುಂಟು. ಮೊದಲನೆಯದರಲ್ಲಿ ಎಲ್ಲರೂ ಸ್ಕೌಟ ಅಸೋಸಿಯೇಶನದ ಪ
ವಾಗಿ ಶಿಕ್ಷಣ ಪಡೆಯುತ್ತಾರೆ. ಎರಡನೆಯದರಲ್ಲಿ ಬಂದು ಧಾರ್ಮಿಕ ಸ
ವನವರಾಗಲಿ, ಪಾಠಶಾಲೆಯವರಾಗಲಿ ನಡೆಯಿಸಿದ ಸ್ಕೌಟ ಶಿಕ್ಷಣ ಟ್ರೂಪ್ಪುಗ

ಇಲ್ಲಿ ಓಪನ್ ಟ್ರೈಪ್ಪುಗಳು ಹೆಚ್ಚು; ಯಾಕಂದರೆ ಪೆನ್‌ಶನರಾಗಲಿ, ಎರಡ ಉದ್ಯೋಗಗಳಲ್ಲಿ ತೊಡಗಿದವರಾಗಲಿ ಈ ತರದ ಲೋಕಸೇವೆಯಲ್ಲಿ ತೊಡಗಿ ಲಿಕ್ಕೆ ಇಚ್ಛಿಸುತ್ತಿರುತ್ತಾರೆ. ಅವರಿಗಾಗಿ ಈ ಓಪನ್ ಸಂಸ್ಥೆಗಳಿರುತ್ತವೆ. ವೇತನಬು ಇಲ್ಲದೆ ಕೆಲಸ ಮಾಡುತ್ತಾರೆ.

ಮೇಲೆ ಬರೆದ ಕಮೀಶನರ ವರ್ಗದಲ್ಲಿ ಸ್ಕೌಟ ಶಿಕ್ಷಣದ ಹೆಚ್ಚಿನ ಜ್ಞಾನವು ಯುತ್ತಿರುತ್ತದೆ. ಈ ವರ್ಗವು ಮೂರೇ ದಿವಸ ನಡೆಯುವದು. (ಶುಕ್ರವಾರ ನಾರ, ರವಿವಾರ) ಈ ವರ್ಗದ ಫೀ ೧೫ ಶಿಲ್ಲಿಂಗು ಇರುವದು. ಇಲ್ಲಿ ವಾಖ್ಯಾನ ರವಾಗಿ ಬಾಲವೀರ ಸ್ಕೌಟ ಜಳವಳಿಯ ವಿಷಯವನ್ನು ಹೇಳುವರು. ಬಾಲ ಜಳವಳಿಯಲ್ಲಿ ಅಡ್ಡಬರುವ ಸಂಗತಿಗಳ ವಿಷಯವಾಗಿಯೂ ಚರ್ಚಿಸುವರು. ಯ ಕೂಡ ಸ್ಕೌಟರ ವರ್ತನೆ, ಲೋಕಲ ಅಥಾರಿಟಿಗಳ ಸಂಬಂಧ, ಇತ್ಯಾದಿ ಮಾಹಿತಿಗಳ ಬಗ್ಗೆ ಇಲ್ಲಿ ವಿಚಾರವು ನಡೆಯುವದು. ಇಲ್ಲಿ ದೊಡ್ಡ ದೊಡ್ಡವರ ಖ್ಯಾನಗಳು ನಡೆಯುವವು.

ಈ ವರ್ಗಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸವನ್ನು ತಾವೇ ಮಾಡಿ ಳ್ಳುವರು. ವ್ಯವಸ್ಥೆಗಾಗಿ ೪ ವರ್ಗಗಳನ್ನು ಕಲ್ಪಿಸಿರುವರು. ಅಡಿಗೆಯನ್ನು ಮಿಸಿ ತಂದನಂತರ ಊಟದ ವ್ಯವಸ್ಥೆಯನ್ನು ವಿದ್ಯಾರ್ಥಿಗಳೇ ಮಾಡಿಕೊಳ್ಳು . ದಿವಸಕ್ಕೆ ೪ ಸಾರೆ ಆಹಾರದ ವ್ಯವಸ್ಥೆಯು ಇರುವದು. (ಪ್ರಾತಃಕಾಲದ ಹರಿ, ಮಧ್ಯಾಹ್ನದ ಊಟ, ಸಾಯಂಕಾಲದ ಜಹಾ ರಾತ್ರಿಯ ಊಟ ಇ.) ಖ್ಯಾನಕ್ಕಾಗಿ ಬಂದ ಮಹನೀಯರು ಸಹ ವಿದ್ಯಾರ್ಥಿಗಳ ಗುಂಪಿನಲ್ಲಿ ಕೆಲಸ ಸಲಿಕ್ಕೆ ತೊಡಗುತ್ತಾರೆ, ಎಲ್ಲರೂ ಪರಸ್ಪರ ನಗುತ್ತ ಕೆಲೆಯುತ್ತ ಆನಂದದಿಂದ ಕಳೆಯುವರು.

ದುಃಖವಾರ್ತೆ

ತಂತಿಯಿಲ್ಲದ ತಾರಾಯಂತ್ರದ ಜನಕರಾದ ಎಮ್. ಜಿ. ಮಾರ್ಕೋನಿಯವರು ೫ ಜುಲೈತಿಂಗಳ ೨೦ನೆಯ ತಾರೀಖಿನ ದಿನ ರೋಮು ಪಟ್ಟಣದಲ್ಲಿ ಹೃದಯದ ರದಿಂದ ಅಕಸ್ಮಾತ್ ಮರಣಹೊಂದಿದರು. ಜಗತ್ತಿನ ಪ್ರಗತಿಗೆ ಕಾರಣ ೪ ಅತಿ ಮಹತ್ವದ ವೈಜ್ಞಾನಿಕ ಪ್ರಪಂಚದಲ್ಲಿ ಅಭಿಜ್ಞರಾದ ಇವರ ನಿಧನ ೪ ಜಗತ್ತಿಗೇ ಅತಿಶಯ ದುಃಖವಾಗಿರುವದು. ಪ್ರಾಥಮಿಕ ಶಿಕ್ಷಕರಿಗೆ

ತಂತಿಯಿಲ್ಲದ ತಾರಾಯಂತ್ರದ ಜನಕರೆಂದು ಪರಿಚಿತರಾದ ಜಗತ್ತಿನ ಮ
ಪುರುಷರಲ್ಲೊಬ್ಬರಾದ ಈ ಮಹನೀಯರ ಸಂಕ್ಷಿಪ್ತಚರಿತ್ರೆಯನ್ನೂ ಅ
ಕಾರ್ಯಗಳನ್ನೂ ಇಲ್ಲಿ ಕೊಟ್ಟಿರುವೆವು.

ಜಗತ್ತಿನಲ್ಲೆಲ್ಲ ಹೆಸರು ಪಡೆದ ಮಾರ್ಕೋನಿಯು ೧೮೭೪ನೆಯ ಇಸ್ವಿ
ಏಪ್ರಿಲ್ ೨೫ನೆಯ ತಾರೀಖಿನ ದಿನ ಇತಾಲಿಯೊಳಗಿನ ಬೋಲೋನಾ ಎ
ಊರಲ್ಲಿ ಹುಟ್ಟಿದನು. ಈತನ ತಾಯಿಯು ಆಯರ್ಲಂಡದವಳು. ತಂದೆಯು ಇಟ
ಯನ್ನನು. ಇವರಿಬ್ಬರೂ ಗಾಯನ ಕಲೆಯ ಅಭ್ಯಾಸಕ್ಕಾಗಿ ಬೊಲೋನಾ
ಬಂದಾಗ ಈ ಮಹಾಪುರುಷನ ಜನ್ಮವಾಯಿತು. ಚಿಕ್ಕಂದಿನಿಂದಲೂ ಈತ
ಮನಸ್ಸಿನ ಏಕಾಗ್ರತೆ ಮಾತ್ರ ಯಾವದೊಂದು ಕೆಲಸದಲ್ಲಿ ತೊಡಗುವ ಶಕ್ತಿ
ಅಸಾಧಾರಣವಾಗಿದ್ದಿತು. ಈತನು ೧೪ ವರ್ಷ ವಯಸ್ಸಿನವನಾದಾಗಲೇ ಪದಾ
ವಿಜ್ಞಾನ ಶಾಸ್ತ್ರ ರಸಾಯನ ಶಾಸ್ತ್ರಗಳನ್ನು ತನ್ನ ಪ್ರೀತಿಯ ವಿಷಯವೆಂದು ಕ
ಕೊಂಡು ಅಭ್ಯಾಸಮಾಡಹತ್ತಿದನು. ಮತ್ತು ೨೦ ವರ್ಷ ವಯಸ್ಸಾದ
ವಿದ್ಯುತ್‌ಶಕ್ತಿಯ ಸಹಾಯದಿಂದ ಸುದ್ದಿಯನ್ನು ಕಳಿಸುವ ಸಾಧನವನ್ನು ಕು
ಅಭ್ಯಾಸ ಮಾಡತೊಡಗಿದನು.

ಈ ತನ್ನ ಪ್ರಯೋಗಗಳನ್ನು ಬೋಲೋನಾದ ಹತ್ತಿರದ ಒಂದು ಹಳ್
ಲ್ಲಿದ್ದ ತನ್ನ ತಂದೆಯ ಮನೆಯಲ್ಲಿಯೇ ನಡೆಯಿಸಿದ್ದನು. ೧೮೯೫ನೆಯ ಇಸ್ವಿ
ಡಿಸೆಂಬರ ತಿಂಗಳಲ್ಲಿ ಒಂದು ದಿನ ರಾತ್ರಿ ಅಕಸ್ಮಾತ್ತಾಗಿ ತನ್ನ ಪ್ರಯೋಗ ಶಾ
ತಾಯಿಯನ್ನು ಕರೆದುಕೊಂಡು ಹೋಗಿ ೩೦ ಫೂಟು ಅಂತರದಲ್ಲಿದ್ದ ಬ
ಗಂಟೆಯು ಅದರ ಎದುರಿನಲ್ಲಿಟ್ಟ ವಿದ್ಯುದ್ಯಂತ್ರದಲ್ಲಿ ವಿದ್ಯುತ್ತಿನ ತರಂಗಗಳ
ಹುಟ್ಟಿಸಲು ತಾನಾಗಿಯೇ ಬಾರಿಸುವದನ್ನು ತೋರಿಸಿದನು. ತುಸುದಿನಗಳಲ್ಲಿ
ಈ ಅಂತರವನ್ನು ಒಂದು ಮೈಲಿನವರೆಗೆ ಬೆಳಿಸಿ ಪ್ರಯೋಗಮಾಡಿ ತೋರಿಸಿದ

೧೮೯೭ರಲ್ಲಿ ಇಂಗ್ಲಂಡದಲ್ಲಿರುತ್ತಿದ್ದ ತನ್ನ ತಾಯಿಯ ಸಂಬಂಧಿಕರ
ನೋಡಲು ಇಂಗ್ಲಂಡಕ್ಕೆ ಹೋಗಬೇಕಾಗಿ ಬಂದದ್ದರಿಂದ ಅಲ್ಲಿಗೆ ಹೋಗಿ ಮರುವ
ಇತಾಲಿಯನ್ ಸರಕಾರದ ಆಮಂತ್ರಣ ಬರಲು ಇತಾಲಿಗೆ ಬಂದು ಅಲ್ಲಿ ತಂತಿಯ
ತಾರಾ ಯಂತ್ರವನ್ನು ನಡೆಯಿಸುವ ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸಿದ
ಮತ್ತು ಒಂದು ಇಂಗ್ಲಿಷ ಕಂಪನಿಯವರು ಮಾರ್ಕೋನಿಯ ಈ ವಿದ್ಯಾಸವ
ಜಗತ್ತಿನ ತುಂಬ ಹಬ್ಬಿಸುವ ಕಾರ್ಯವನ್ನು ಪ್ರಾರಂಭಿಸಿದರು. ೧೯೦೧ನೆ
ಇಸ್ವಿಯಿಂದ ತಂತಿಯಿಲ್ಲದೆ ವಿದ್ಯುತ್ತಿನ ತರಂಗಗಳ ಮೂಲಕ ಸುದ್ದಿಯ
ಕಳುಹಿಸುವ ಕಾರ್ಯಕ್ರಮವು ತುಂಬ ಯಶಸ್ವಿಯಾಗಿ ನಡೆಯತೊಡಗಿ

ದ್ರದಲ್ಲಿದ್ದ ಹಡಗುಗಳಿಗೆ ಅಪಾಯ ಸಂಭವಿಸಿದಾಗ ದಂಡೆಯಲ್ಲಿರುವವರಿಗೆ
ಯಸ್ಸು ಮುಟ್ಟಿಸುವದರ ಮೂಲಕ ಜನರ ವಿತ್ತಜೀವಿತಗಳ ರಕ್ಷಣೆಗೆ ಇದ
ಟುಂಬ ಸಹಾಯವಾಗಹತ್ತಿತು. ೧೯೧೧ನೆಯ ಇಸ್ವಿಯಲ್ಲಿ ಈತನ ಯಂತ್ರಗಳ
ಕ ಅತ್ಲಾಂಟಿ ಮಹಾಸಾಗರದ ಒಂದು ದಂಡೆಯಿಂದ ಮತ್ತೊಂದು
ಿ ಸಿಗ್ನಲ್ ಕಳಿಸುವದು ಸಾಧ್ಯವಾಯಿತು. ೧೯೦೨ನೆಯ ಇಸ್ವಿಯಲ್ಲಿ
ಸಾವಿರ ಮೈಲುಗಳ ಅಂತರದಲ್ಲಿದ್ದವರು ಪರಸ್ಪರ ಮಾತಾಡಲು ಅನುಕೂಲ
ಯಿತು. ೧೯೧೦ನೆಯ ಇಸ್ವಿಯಲ್ಲಿ ಈ ಅಂತರವು ಆರುಸಾವಿರ ಮೈಲುಗಳ
ಬೆಳೆಯಿತು. ೧೯೧೫ನೆಯ ಇಸ್ವಿಯಲ್ಲಿ ಮಾರ್ಕೋನಿಯು ಇಂಗ್ಲಂಡದಲ್ಲಿ
ು ಆಸ್ಟ್ರೇಲಿಯದವರೊಡನೆ ಮಾತಾಡಲು ಸಾಧ್ಯಮಾಡಿಕೊಟ್ಟನು.

ಮಾರ್ಕೋನಿಯಂತೆಯೇ ಎಷ್ಟೋ ಜನ ಶಾಸ್ತ್ರಜ್ಞರು ಈ ವಿಷಯದ ಅಭ್ಯಾಸ
ಕೈಕೊಂಡಿದ್ದರೂ ಅವರಲ್ಲಿ ಹಲವರು ನಡುವೆಯೇ ಕೈಬಿಟ್ಟರು. ಮುಕ್ಕುಳಿ
ು ತಮ್ಮ ಪ್ರಯೋಗಪರೀಕ್ಷೆಗಳನ್ನು ಮುಂದೆಸಾಗಿಸಿದರೂ ಮಾರ್ಕೋನಿಯು
ದೆ ಅವರ ಬೆಳಕು ಬೀಳಲೇ ಇಲ್ಲ. ೪೨ ವರ್ಷಗಳ ಹಿಂದೆ ಮಾರ್ಕೋನಿಯು
ತಾಯಿಗೆ ತೋರಿಸಿದ ೩೦ ಫೂಟು ಅಂತರದಲ್ಲಿ ಗಂಟೆಯನ್ನು ಬಾರಿಸುವ
ದು ಪ್ರಯೋಗದ ತರುವಾಯ ಆ ವಿದ್ಯೆಯು ಇಂದು ಇಡಿಯ ಜಗತ್ತನ್ನೇ
ಬಿಸಿಬಿಟ್ಟಿರುವದು. ಇದೀಗ ಮಾರ್ಕೋನಿಯು ಏಕನಿಷ್ಠೆಯ ಪ್ರಯತ್ನದ
ರ್ಶನವಲ್ಲದೆ ಮತ್ತೇನು? ಇಂದು ಮುಂಬಯಿಯಲ್ಲಿ ಕೂತ ಮನುಷ್ಯನು
ೋಪದ ದೇಶಗಳು, ಕಾನಡಾ, ಅಮೇರಿಕೆಯ ಸಂಯುಕ್ತ ರಾಜ್ಯಗಳು,
ೀಲಿಯಾ, ದಕ್ಷಿಣ ಆಫ್ರಿಕಾ, ದಕ್ಷಿಣ ಅಮೇರಿಕಾ ಮೊದಲಾದ ಜಗತ್ತಿನೊಳ
ೀಕಾದ ದೇಶಗಳು ಇವುಗಳೊಡನೆ ಮಾತಾಡಲು ಸಾಧ್ಯವಾಗಿದೆ. ಗ್ರೇಟ
ನ್ನವೊಂದೇ ದೇಶದಲ್ಲಿ ೭೦ ಲಕ್ಷ ಮನೆಗಳಲ್ಲಿ ವಾಯರಲೆಸ್ ರಿಸೀವರ
ಪ್ರಗಳಿವೆ! ಹಿಂದುಸ್ತಾನ ಸರಕಾರದವರೂ ಇದರ ಪ್ರಸಾರವನ್ನು ಇತ್ತೀಚಿಗೆ
ಂಡಿರುವರು.

ಈ ಅದ್ವಿತೀಯಶಾಸ್ತ್ರ ಶೋಧಕನು ಜಗನ್ಮಾನ್ಯ ವ್ಯಕ್ತಿಯಾಗಿದ್ದನು. ೧೯೦೯
ಇಸ್ವಿಯಲ್ಲಿ ಈತನಿಗೆ ಪದಾರ್ಥವಿಜ್ಞಾನಶಾಸ್ತ್ರದಅಭ್ಯಾಸಕ್ಕಾಗಿ ನೋಬೆಲ್
ಿಮ್ಮು ದೊರೆಯಿತು. ಮತ್ತು ಮೂರು ವರ್ಷಗಳ ತರುವಾಯ ಗ್ರಾಂಡ್
ಆಫ್ ಆಲ್ಫಾನ್ಸೊ XII ಎಂಬ ಬಹುಮಾನವು ದೊರೆಯಿತು. ಈತನು
ಲಿಯನ್ ಸರಕಾರದಲ್ಲಿಯೂ ಸೈನ್ಯದಲ್ಲಿ ಹಡಗುಪಡೆಯಲ್ಲಿಯೂ ಲೆಫ್ಟಿನೆಂಟ್
ಂತರ ಮುಂತಾದ ಅನೇಕ ದೊಡ್ಡ ದೊಡ್ಡ ಅಧಿಕಾರಗಳಲ್ಲಿ ಕೆಲಸ ಮಾಡಿರು

ವನು. ಮತ್ತು ಇತಾಲಿನ್ ಸರಕಾರದ ಅನೇಕ ಗೌರವದ ಬಿರುದುಗಳನ್ನು ಪಡೆದಿದ್ದನು. ಇಂಗ್ಲಂಡ ದೇಶದಲ್ಲಿಯೂ ಆತನಿಗೆ ತುಂಬಾ ಗೌರವವಿದ್ದಿತ್ತು. ಈತನು ಲಂಡನ್ನಿನೊಳಗಿನ ಮಾರ್ಕೋನಿ ಕಂಪನಿಯ ಬೋರ್ಡ ಆಫ್ ಡಾಯರೆಕ್ಟರ್ಸ ದ ಚೆಅರಮನ್ನನಾಗಿದ್ದನು. ಈತನ ಸನ್ಮಾನಕ್ಕಾಗಿ ಕಳೆದ ತಿಂಗಳ ೨೫ನೇ ತಾರೀಖಿನ ದಿನ ಈತನ ಅಂತ್ಯವಿಧಿಯು ನಡೆದಾಗ ಜಗತ್ತಿನೊಳಗಿನ ಎಲ್ಲ ತಾರ ಯಂತ್ರಗಳೂ ವಾಯರಲೆಸ್ ಸ್ಟೇಶನ್ನಗಳೂ ರೇಡಿಯೋ ಟೆಲಿಫೋನೋಗಳೂ ೨ ನಿಮಿಟಗಳವರೆಗೆ ತಮ್ಮ ಕೆಲಸವನ್ನು ನಿಲ್ಲಿಸಿದ್ದವು.

ತನ್ನ ಶಾಸ್ತ್ರೀಯ ಶೋಧಗಳಿಂದ ಅಸಾಧಾರಣವಾದ ಲೋಕ ಕಲ್ಯಾ ಕರ್ತನೆಂದು ಪೆಸರುಪಡೆದ ಮಾರ್ಕೋನಿಯು ಮರಣದಿಂದ ಪ್ರಪಂಚಕ್ಕೇ ಪ್ರಜ್ಞಾ ಹಾನಿತಟ್ಟಿತು. ಕಾಲಪುರುಷನ ಈ ಕ್ರೂರ ಕಾರ್ಯಕ್ಕಾಗಿ ಪ್ರಪಂಚವೇ ದುಃ ದಿಂದ ನಿಟ್ಟುಸಿರು ಹಾಕಿತು!

ಬ್ರಹ್ಮದೇಶದ ಸ್ತ್ರೀಯರು

(ಕನ್ನಡ ಲೇಖದ ಆಧಾರದಿಂದ)

ಬ್ರಹ್ಮದೇಶವು ನಮ್ಮಲ್ಲಿಯ ದಿಲ್ಲಿ ಮಧುರೆಗಳ ಅಕ್ಷಾಂಶದಲ್ಲಿದೆ. ಇದ ಮುಪತ್ಪದ ಭಾಗವು (ಇರಾವತಿಯ ಡೆಲ್ಟಾ) ಉಷ್ಣಕಟಿ ಬಂಧದಲ್ಲಿದೆ, ಉಷ್ಣಮಾ ಬೇಕಾದಷ್ಟು ಮಳೆ, ಪೂರದಿಂದ ನೀರಾಡುವ ರೇವೆಯ ಬೈಲು ಇವೆಲ್ಲ ಕಾರ ಗಳಿಂದ ಬಂಗಾಲದಂತೆ ಬತ್ತದ ನಾಡಾಗಿದೆ. ಆದುದರಿಂದ ಇದಾದರೂ ನಮ್ಮ ದೇಶದಂತೆ ಒಕ್ಕಲತನದ ದೇಶವಾಗಿದೆ, ಇಲ್ಲಿ ಅವಿಭಕ್ತಸಂಯುಕ್ತ ಕುಟುಂ ಗಳು ಬಹಳ. ಸಮಾಜದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಬಹಳ. ಪೂರ್ವ ದೇಶಗಳ ಇದು ನಿಜವಾಗಿ ಸ್ತ್ರೀರಾಜ್ಯವೆಂದು ಹೇಳಬಹುದು. ಸ್ತ್ರೀಯರು ಇಲ್ಲಿ ಒಕ್ಕಲು ವ್ಯಾಪಾರಗಳನ್ನು ಮಾಡುವರು. ಗಂಡಸರಿಗಿ ತ ಹೆಂಗಸರೇ ಹೆಚ್ಚಾಗಿ ದುಡಿಯ ತ್ತಾರೆ. ಕೆಲವರು ಸ್ತ್ರೀಯರು ಕಾರಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಸೂಲ ನೇಯುವ ಕೆಲಸಗಳಲ್ಲಿಯೂ ಮತ್ತೆ ಕೆಲವರು ತೊಡಗಿರುವರು. ಬಹು ಸ್ತ್ರೀಯರು ಗಂಡಸರಂತೆ ಪೇಟೆ ಅಂಗಡಿಗಳಲ್ಲಿ ಬೇಕಾದ ಹಾಗೆ ನಿರ್ಭಯದಿ ವ್ಯಾಪಾರಮಾಡುತ್ತಾರೆ.

ಅಲ್ಲಿಯಾದರೂ ನಮ್ಮಲ್ಲಿಯಂತೆ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳೂ ನಗರ
ಆಂಗ್ಲ ಭಾಷೆಯ ಶಾಲೆಗಳೂ ಇರುತ್ತವೆ. ಬ್ರಹ್ಮೀ ಹುಡುಗರೆಲ್ಲ ಕೆಲಕಾಲ
ಪಗೋಡಾಗಳಲ್ಲಿದ್ದು ಬೌದ್ಧ, ಭಿಕ್ಷುಕ ಭಿಕ್ಷುಕಿಯರ ಸೇವೆ ಮಾಡುತ್ತ
ಕಲಿಯುವ ಪರಿಪಾಠವಿದೆ. ಆಂಗ್ಲ ಭಾಷೆಯಲ್ಲಿ ನಿಪುಣೆಯರಾದ ಸ್ತ್ರೀಯರು
ಕಾರೀ ಕೆಲಸದಲ್ಲಿ ತೊಡಗಿರುತ್ತಾರೆ. ಪಾಶ್ಚಾತ್ಯ ಪದ್ಧತಿಯಂತೆ ಅಲ್ಲಿ ಸ್ತ್ರೀ
ಕ್ಲಬ್ಬುಗಳಿವೆ. ಅವೆಲ್ಲ ಸ್ತ್ರೀಯರ ಏಳಿಗೆಗಾಗಿ ಪ್ರಯತ್ನ ಮಾಡುತ್ತಿರುವವು.
ಇತ್ತೀಚೆ ಸುಧಾರಿಸಿದ ಬಳಿಕ ಸ್ತ್ರೀಯರು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿ
ಸಹಾಯಮಾಡುತ್ತಿರುವದು ಸಹಜವಾದದ್ದೇ ಸರಿ.

ಬ್ರಹ್ಮೀಸ್ತ್ರೀಯರ ಸ್ವಭಾವವು ಸರಳವಾದದ್ದು. ಸ್ತ್ರೀಸ್ವಭಾವಕ್ಕನುಸರಿಸಿ
ಅಪವಾದಗಳೂ ಇರುವವು. ಅಪಮಾನವಾದರೆ ಮಾತ್ರ ತೀರ ಸಹಿಸುವದಿಲ್ಲ.
ಬೇಕಾದಷ್ಟು ಕ್ರೂರತನವು ಅವರಲ್ಲಿ ತೋರಿಬರುತ್ತದೆ. ಪುರುಷರ ಕೂಡ
ಕು ಒಡಾಡಲಿಕ್ಕೆ ನಮ್ಮ ಸಮಾಜದಲ್ಲಿ ಸಂಕೋಚಪಡಿಸುವದು : ಆದರೆ
ಯರು ಅಲ್ಲಿ ಏನೂ ಅನುಮಾನವಿಲ್ಲದೆ ಉಗೆಬಂಡಿಗಳಲ್ಲಿ ಸಹಜವಾಗಿ ಗಂಡಸರ
ಡ ಕೂಡ್ರಬಲ್ಲರು.

ಅಲ್ಲಿಯ ಸ್ತ್ರೀಯರ ಮುಖ್ಯ ಉದ್ಯೋಗವು ಒಕ್ಕಲತನ. ಹೊಲದಲ್ಲಿ ಕೆಲಸ
ಡುವಾಗ ತೆಂಗಿನ ಸೊಪ್ಪಿನಿಂದ ಸಿದ್ಧಪಡಿಸಿದ ಕೊಡೆಯಂಥ ಟೊಪ್ಪಿಗೆಯನ್ನು
ಸಿಕೊಳ್ಳುವರು ; ಯಾಕಂದರೆ ಇಲ್ಲಿ ಳಂ ರಿಂದ ಲಂ ಇಂಚಿನ ವರೆಗೆ ಮಳೆ ಸುರಿ
ತ್ತದೆ. ಈ ಬಗೆಯಾಗಿ ಮಳೆಸುರಿಯುವಾಗ ಸ್ತ್ರೀಯರು ಸಹಜವಾಗಿ
ಲದಲ್ಲಿ ಉದ್ಯೋಗಮಾಡುತ್ತಿರುವರು. ಆದರೆ ಪೇಟೆಯಲ್ಲಿ ಓಡಾಡುವಾಗ
ಏಮೆಯ ಅಂಗಿ ಲುಂಗಿಗಳಿಂದ ಭೂಷಿತರಾಗಿ ಹಿಕ್ಕಿದ ಹೊಳಪು ಕೇಶಗಳ ತರ
ನ ಆಕಾರದ ಮುಡಿಗಳಲ್ಲಿ ಅಂದವಾದ ಹೂಗಳನ್ನು ಧರಿಸಿಕೊಂಡು ಓಡಾಡು
ರುತ್ತಾರೆ. ಓಡಾಡುವಾಗ ಬಾಯಲ್ಲಿ ಇಲ್ಲಿಯ ಗಂಡಸರಂತೆ ಚಿರೂಟುಗಳನ್ನು
ಸೇದಿ ಹೊಗೆಬಿಡುತ್ತ ನಿರ್ಭಯವಾಗಿ ಓಡಾಡಬಲ್ಲರು.

ಇವರ ನಿಲುವಿಕೆ ಸಾಧಾರಣ. ಎಂಥ ಬಡತನದ ಸ್ತ್ರೀಯಳಿದ್ದರೂ ರೇಶಿಮೆಯ
ಬಟ್ಟೆಗೆ ತೊಡಿಗೆಗಳನ್ನೇ ಧರಿಸುವಳು. ಹೆಚ್ಚಿನ ಆಭರಣಗಳ ಅಗತ್ಯವು ಅವರಿ
ಗಿಲ್ಲವಿಲ್ಲ. ಏಳು ಅಥವಾ ಒಂಬತ್ತು ಹರಳುಗಳುಳ್ಳ ಬೆಂಡವಾಲೆಗಳು ಕಿವಿಯಲ್ಲಿ
ದ್ದರೆ ಸಾಕು. ಕೈಗಳಲ್ಲಿ ಮಾತ್ರ ಎರಡು ಹರಳಿನ ಎರಡೆರಡು ಬಳೆಗಳು.
ಶ್ರೀಮಂತರು ಮಾತ್ರ ಕೊರಳಲ್ಲಿ ಹರಳುಕೆಚ್ಚಿದ ಹಾರವನ್ನು ಧರಿಸಿಕೊಳ್ಳುವರು.

ಇವರ ಪ್ರತಿನಿತ್ಯದ ಆಹಾರವು ಅಕ್ಕಿಯಿಂದ ಸಿದ್ಧಪಡಿಸಿದ್ದು. ಪ್ರೀತಿಸಹ ಮಣ್ಣಿನ ಪಾತ್ರೆಗಳಲ್ಲಿಯೇ ಅಡಿಗೆಮಾಡಿಕೊಳ್ಳುವರು. ಕರಿದ ಪದಾರ್ಥಮೇಲೆ ಇವರ ಮೆಚ್ಚುಗೆ ಬಹಳ. ಆದರೆ ಕರಿದ ವಾಸನೆ ಮಾತ್ರ ಇವರಿಗೆ ಆಗಾರದು; ಆದುದರಿಂದ ಅಡಿಗೆಯ ಮನೆಗಳು ಕೂಡುವ ಸ್ಥಳಕ್ಕೆ ದೂರವವು. ಬರ್ಮೀಯರು ಮೀನು, ಹಕ್ಕಿ, ಪ್ರಾಣಿಗಳಿಂದ ಅಡಿಗೆಯನ್ನು ಸಿದ್ಧಮಾಡಿಕೊಳ್ಳುವರು. ಇವರು ಹಸಿ ಕಾಯಿಪಲ್ಲೆಗಳನ್ನು ಸೇವಿಸಲಿಕ್ಕೆ ಪ್ರೀತಿಪಡುವರು. ಹಸಿ ಮೆಣಸಿನಕಾಯಿಯು ಉಪಯೋಗವನ್ನು ಅಡಿಗೆಯಲ್ಲಿ ಹೇರಳವಾಗಿ ಉಪಯೋಗಿಸುತ್ತಿರುತ್ತಾರೆ.

ಊಟಮಾಡುವಾಗ ಗಂಡಸರೂ ಹೆಂಗಸರೂ ಒತ್ತಟ್ಟಿಗೆ ಸೇರುತ್ತಾರೆ. ನೆಲಕ್ಕಿಂತ ೧೪ ಫೂಟು ಎತ್ತರಿಸಿದ ಮೇಜುಗಳ ಮೇಲೆ ಬಟ್ಟಲುಗಳನ್ನು ಮುಂದಿಟ್ಟುಕೊಂಡು ಕುಳಿತು ಊಟಮಾಡುವರು.

ಇವರು ಸ್ವಚ್ಛತೆ ಓರಣಗಳಿಗೆ ಹೆಚ್ಚಿಗೆ ಮೆಚ್ಚಿರುವರು. ಸ್ನಾನಮಾಡಿ ಉಡುಪುಗಳನ್ನು ಧರಿಸಿ ಪ್ರಾತಃಕಾಲದಲ್ಲಿ ಹವೆಗಾಳಿ ಓಡಾಡುವರು. ಭಾಷಸ್ತ್ರೀಯರ ಕೂಡ ಮಮತೆಯಿಂದ ವರ್ತಿಸುವರು.

ಇವರು ಮೊಂಗೋಲಿಯನ್ ಬರ್ಮಾ-ತಿಬೇಟು ಪಂಥಕ್ಕೆ ಸೇರಿದವರಾಗಿ ಇತ್ತಿತ್ತಲಾಗಿ ಇವರಲ್ಲಿಯೂ ಸಮ್ಮೆಲ್ಲಿಯಂತೆ ಅನೇಕ ಪಂಗಡಗಳಾಗಿವೆ. ಇವರ ಭಾಷೆಯು ಸಾಮಾನ್ಯವಾಗಿದ್ದರೂ ಪಂಗಡಕ್ಕೊಂದರಂತೆ ಆಡುವ ಬೇರೆಗಳಿರುತ್ತವೆ.

ಕಲಿಸುವ ಪಾಠವೂ ವಿಷಯ ಟಿಪ್ಪಣಿಯೂ

ಲೇಖಕ— ಸಾತೇನಹಳ್ಳಿ

ಕೈಲಿಬಾರದ ವಜಾಬಾಕಿ

೧. ಮೊದಲು ಸಾದಾ ವಜಾಬಾಕಿಯನ್ನು ಕಲಿಸುವ ಪೂರ್ವದಲ್ಲಿ ಕಲಿತ ಬೇರೀಜಿನ ಜ್ಞಾನವು ಸ್ಥಿರವಾದ ಬಗ್ಗೆ ಮನದಟ್ಟು ಮಾಡಿಕೊಳ್ಳಬೇಕು.

೨. ಹಿಂದೆ ಬೇರೀಜು ಕಲಿಸುವಾಗ ಸಹ ಪ್ರತ್ಯಕ್ಷ ವಸ್ತುಗಳ (ಹಣಸಿ ಬೀಜ ಸಹಾಯದಿಂದ ೧೦೦ರ ಒಳಗಿನ ಸಣ್ಣ ದೊಡ್ಡ ಸಂಖ್ಯೆಗಳಲ್ಲಿ ಎರಡನ್ನು

ರು ಮೂರರಂತೆ ಬೆಳಿಸುತ್ತ ೧೦೦ರ ವರೆಗೂ ಆಗುವಂತೆ ರೂಢಿಮಾಡಿಸಿರ
ಕು. ಇದರಿಂದ ಅಂಕೆಗಳ ಬೇರೀಜು ಅಂದರೆ ವಸ್ತುಗಳ ಬೇರೀಜು ಎಂದು
ಸ್ಪವಾಗುವದು. ೩. ಅವರು ಕೂಡಿಸಿದ ಸಂಖ್ಯೆಗಳ ಬೇರೀಜನ್ನು ಕೇಳಿದಾಗ
ಮುಂದ ಹೇಳಲು ಸಮರ್ಥರಾಗುವಂತೆ ಒಳ್ಳೇ ರೂಢಿ ಮಾಡಿಸಬೇಕು. ಈ ರೀತಿ
ಗಿ ಕಲಿತ ಬೇರೀಜಿನ ಜ್ಞಾನವು ಬಳಕೆಯಲ್ಲಿ ಬರುವದಕ್ಕಾಗಿ ಸಂತೆಯಲ್ಲಿಯೂ
ಪವಾ ಮನೆಯಲ್ಲಿಯೂ ಬೆಣ್ಣಿಯ ಲೆಕ್ಕ, ಮನರಿನ ಲೆಕ್ಕಗಳನ್ನು ಮಾಡಿಸಲಿಕ್ಕೆ
ಷ್ಟಬೇಕು. ವ್ಯವಹಾರದ ಲೆಕ್ಕಗಳನ್ನು ಮಾಡುವಾಗ ಹಣದ ಕೋಷ್ಟಕವು
ನಾಗಿ ಬರುವದು. ಪೈಗಳನ್ನು ಕೊಟ್ಟು ಬಿಲ್ಲೀ ಕಟ್ಟಿಸಬೇಕಾಗುವದು.
ನಂತೆ ಬಿಲ್ಲಿಗಳನ್ನು ಕೊಟ್ಟು ಆಣೆ ಕಟ್ಟಿಸಬೇಕಾಗುವದು. ೪. ಒಂದನೆಯ
ಮತ್ತೆಯಲ್ಲಿ ಸಂಖ್ಯೆಯ ಬರಹದ ಜ್ಞಾನವು ೧೦ ಸಾವಿರದವರೆಗೂ ಆಗಿರುವದು.
ನ್ನೇ ಮುಂದೆ ಎಳೆದು ಲಕ್ಷ, ದಶಲಕ್ಷಗಳವರೆಗೂ ಸಂಖ್ಯೆಗಳ ಕಲ್ಪನೆ ಮಾಡಿ
ಟ್ಟು ಅವುಗಳ ಬರಹವನ್ನು ಕಲಿಸಿರಬೇಕು.

ಈ ಬಗೆಯಾಗಿ ಎಲ್ಲ ಜ್ಞಾನವು ಸರಿಯಾಗಿ ಆಗದಿದ್ದರೆ ಮುಂದೆ ಕಲಿಸುವಾಗ
ಂದರೆ ಬರುವದು. ಮುಂದ ಹುಡುಗರಿಗೆ ಏನೂ ತಿಳಿಯದಂತಾಗುವದು.
ನು ಸಂಖ್ಯೆಗಳ ಬೇರೀಜು ಮಾಡಲಿಕ್ಕೆ ಗೊತ್ತಾದಬಳಿಕ ಅವರ ಕಲ್ಪನೆ ವೃದ್ಧಿ
ಗುವಂತೆ ಒಂದು ಬುಟ್ಟಿಯಲ್ಲಿ ೨೫ ಹಣ್ಣುಗಳಿವೆ, ಅದಕ್ಕಿಂತ ೯ ಹೆಚ್ಚು
ತ್ತೊಂದು ಬುಟ್ಟಿಯಲ್ಲಿ ಅವೆ. ಎರಡೂ ಕೂಡಿಸಿದರೆ ಎಷ್ಟಾಗುವವು? ಇತ್ಯಾದಿ
ದಾಗ ಒಂದು ಬುಟ್ಟಿಯೊಳಗಿನ ವಸ್ತುಗಳ ಸಂಖ್ಯೆಯಿಂದ ಮತ್ತೊಂದು
ಟ್ಟಿಯೊಳಗಿನ ಸಂಖ್ಯೆಯನ್ನು ತೆಗೆದು ಅವೆರಡನ್ನು ಕೂಡಿಸಬೇಕಾಗುವದು.
ಲ್ಲಿ ಆದಬಳಿಕ ವಜಾಬಾಕಿಯನ್ನು ಹೇಗೆ ಕಲಿಸಬೇಕೆಂಬ ವಿಷಯವಾಗಿ
ನ ಟಿಪ್ಪಣಿಯನ್ನು ವಾಚಕರು ನೋಡಬೇಕು.

ಗಣಿತ ವಜಾಬಾಕಿ

೨ನೆಯ ಇಯತ್ತೆ

ವೇಳೆ—೩೫ ಮಿನುಟು

ಕಲಿಸುವ ಉದ್ದೇಶ— ವಿದ್ಯಾರ್ಥಿಗಳಿಗೆ ವಜಾಬಾಕಿಯ ಕಲ್ಪನೆ ತಂದ
ಕೊಡುವದು,

,, ವಜಾಬಾಕಿಯು ಗಣಿತದ ಕ್ರ
ತಿಳಿಸುವದು,

ವಜಾಬಾಕಿಯ ವ್ಯವಹಾರದ ಉದಾಹರಣೆಗಳನ್ನು
ಬಿಡಿಸಲು ವಿದ್ಯಾರ್ಥಿಗಳು ಸಮರ್ಥರಾಗುವದು.

ಉಪಕರಣ—೧೦೦ ಗಂಟುಗಳು, ಬಿಡಿಗಾಳುಗಳು.

೧. **ಉಪ್ಪೋ.**— ೮ ದುಡ್ಡುಗಳಲ್ಲಿ ೫ ದುಡ್ಡು ಕೊಟ್ಟರೆ ಎಷ್ಟು ದುಡ್ಡು ಉಳಿಯುವವು ?

೨. ೧೪ ಆಗಿಗಳಲ್ಲಿ ೩ ಆಗಿಗಳು ಪತ್ತಲಿಲ್ಲ, ಎಷ್ಟು ಆಗಿಗಳು ಪತ್ತದಂತಾದವು ?

೩. ೧೦ ಜೋಳದ ಚೀಲಗಳಲ್ಲಿ ಸಂತೆ ದಿನ ಮಾರಿ ೩ ಚೀಲ ಉಳಿದವು ಎಷ್ಟು ಚೀಲ ಮಾರಿದಂತಾಯಿತು ?

೪. ೧೨ ರೂಪಾಯಿಗಳಲ್ಲಿ ೩ ರೂಪಾಯಿಗಳನ್ನು ಕೊಟ್ಟೆನು, ಇನ್ನೆಷ್ಟು ಉಳಿದವು ?

ಜಾತ್ರೆಯಲ್ಲಿ ೯೯ ರೂಪಾಯಿಗಳನ್ನು ಒಯ್ದಿದ್ದೆವು. ೭೩ ರೂಪಾಯಿಗಳನ್ನು ಎತ್ತುಗಳಿಗಾಗಿ ಖರ್ಚು ಮಾಡಿದೆವು. ಇನ್ನೆಷ್ಟು ಉಳಿದವು ? ಇದನ್ನು ಬೇಗ ಹೇಳಲಿಕ್ಕೆ ಬಂದೀತೇ ? ಇದಕ್ಕೂ ದೊಡ್ಡ ಅಂಕೆಗಳ ಲೆಕ್ಕವನ್ನು ನೆನಪಿನಿಂದ ಮಾಡಲಿಕ್ಕೆ ಬರಬಹುದೇ ? ಇಂಥ ಲೆಕ್ಕಗಳನ್ನು ಮಾಡುವ ರೀತಿಯನ್ನು ನಿಮಗೆ ಈ ದಿನ ಕಲಿಸುವೆನು.

೧. ವಜಾಬಾಕಿಯ ಕಲ್ಪನೆ ಮಾಡಿ ಕೊಡುವದು.

ಉದಾ.—೬೭ ಹಣ್ಣುಗಳಿದ್ದವು. ಅವುಗಳಲ್ಲಿ ೩೪ ಹಣ್ಣುಗಳನ್ನು ಎಲ್ಲರೂ ಕೂಡಿ ತಿಂದೆವು. ಇನ್ನೆಷ್ಟು ಉಳಿಯುವವು?

(ಪ್ರತ್ಯಕ್ಷ)

೬೭ (ಇದರಲ್ಲಿ ಹತ್ತರ ಗಂಟು ಬಿಡಿಗಾಳು ಇಡಲಿಕ್ಕೆ ಹೇಳಬೇಕು) ಇದರಂತೆ ೩೪ರಲ್ಲಿ ಹೇಳು ಇದರಲ್ಲಿ ೩೪ ಕಳೆಯಿರಿ. ಇನ್ನೆಷ್ಟು ಉಳಿದವು?

೨. ಕರಿಹಲಗೆಯ ಮೇಲೆ ಮಾಡಿಸುವದು.

ಹತ್ತರ ಗಂಟು ಎಷ್ಟು ಇದ್ದವು ಎಷ್ಟು ಕೊಟ್ಟೆ?

ಬಿಡಿಗಾಳು ಎಷ್ಟು ಇದ್ದವು? ಎಷ್ಟು ಕೊಟ್ಟೆ?

(ಬರೆಹ)

ಮೇಲೆ ಪ್ರತ್ಯಕ್ಷವಾಗಿಟ್ಟದ್ದನ್ನೇ ಕರಿಹಲಗೆಯ ಮೇಲೆ ಬರೆಯಲಿಕ್ಕೆ ಹೇಳುವದು ಹ್ಯಾಗಂದರೆ—

		ಹತ್ತರ ಗಂಟು	ಬಿಡಿಗಾಳು
ಎಷ್ಟು ಹಣ್ಣು ಇದ್ದವು?	೬೭	೬	೭
ತಿಂದ ಹಣ್ಣುಗಳೆಷ್ಟು?	೩೪	೩	೪
ಉಳಿದವು ಎಷ್ಟು (ಬಾಕಿ)	೩೩	೩	೩

		ಕಳೆಯಿಸಿಕೊಂಡ ಸಂಖ್ಯೆ	೬೭
		ಯಾವದು ಬರೆಯಿರಿ	
		ಕಳೆದ ಸಂಖ್ಯೆ ಯಾವದು	೩೪
		ಬರೆಯಿರಿ	
		ಬಾಕಿ ಯಾವದು ಬರೆಯಿರಿ	೩೩
೭. ರೂಢಿ.	ಉದಾಹರಣೆ—	ಪ್ರತ್ಯಕ್ಷವಾಗಿ ತೋರಿಸು	
		ಕರಿಹಲಿಗೆಯ ಮೇಲೆ ಬರೆದು	
	೬೪ ಶೇರು ಕಾಳು ಇವೆ.	ತೋರಿಸು.	
	ಅವುಗಳಲ್ಲಿ ೫೫ ಶೇರು ಮಾರಿ	ಕಳೆಯಿಸಿಕೊಂಡ ಸಂಖ್ಯೆ	
	ದೆವು?	ಯಾವದು?	೬೪
		ಕಳೆದ ಸಂಖ್ಯೆ ಯಾವದು?	೫೫
		ಬಾಕಿ ಯಾವದು?	೯
೮. ವಜಾಬಾಕಿಯ	— ಉಣಾ ಚಿಹ್ನ	ಉಣಾ ಚಿಹ್ನವನ್ನು ಯಾವ	ಬಾಕಿ
ಗುರುತು.	ಮೇಲಿನ ಲೆಕ್ಕದಲ್ಲಿ	ಸಂಖ್ಯೆಯ ಹಿಂದೆ ಬರೆದದೆ?	೬೪— ೫೫ = ೯
	೬೪		
	—೫೫	ಯಾವ ಸಂಖ್ಯೆಯಲ್ಲಿ ಯಾವ ಸಂಖ್ಯೆ	
		ಕಳೆದದೆ ಓದಿ ಹೇಳು	
	ಬಾಕಿ ೯		

ಉ ಪ ಸಂ ಹಾ ರ

೧. ೫ ಹಣ್ಣುಗಳಲ್ಲಿ ೩ ಹಣ್ಣು ತಿಂದು ಉಳಿದದ್ದನ್ನು ಬರೆದು ತೋರಿಸು.

೨. ೮—೪=೪ ಇದನ್ನು ಓದಿ ತೋರಿಸು.

ನಮ್ಮ ಶಾಲೆಗಳಲ್ಲಿಯ ವ್ಯಾಯಾಮ ಶಿಕ್ಷಣ

ಕನ್ನಡ ಲೇಖದ ಆಧಾರದಿಂದ

ಶರೀರ ಸಂಪತ್ತೇ ಎಲ್ಲ ಸಂಪತ್ತುಗಳಲ್ಲಿ ಶ್ರೇಷ್ಠವಾದದ್ದು ಎಂಬದಾಗಿ ಎಲ್ಲರೂ ಹೇಳಬಲ್ಲರು. ಅದರಂತೆಯೇ ಯಾವದೊಂದು ದೇಶದ ನಿಜವಾದ ಧನವು ಅಲ್ಲಿಯ ಮಳೆ, ಬೆಳೆ, ಉದ್ಯೋಗ ಐಶ್ವರ್ಯಾದಿಗಳಿಂದ ಎಣಿಸಲ್ಪಡದೆ ದೇಶದ ನಿವಾಸಿಗಳ ದೈಹಿಕ ಹಾಗು ಮಾನಸಿಕ ಬಲದ ಉನ್ನತಿಯಿಂದ ಎಣಿಸಲ್ಪಡುವದೆಂದು ಬಲ್ಲವರು ಹೇಳುತ್ತಿರುವರು. ವಿದ್ಯಾರ್ಥಿಗಳ ಬುದ್ಧಿಬಲದ ಕಡೆಗೆ ಗಮನಕೊಟ್ಟಂತೆ ಅವರ ದೇಹ ಸಾಮರ್ಥ್ಯದ ಬೆಳವಣಿಗೆಯ ಕಡೆಗೂ ಗಮನಿಸಬೇಕು; ಯಾಕಂದರೆ ಬುದ್ಧಿಬಲವೂ ದೇಹಬಲವೂ ಒಂದನ್ನೊಂದು ಅವಲಂಬಿಸಿರುತ್ತವೆ. ಇವು ಒಂದನ್ನೊಂದು ಅಗಲಿ ಇದ್ದರೆ ಉಪಯೋಗ ಬೀಳದೆ ಹೋಗುವವು. ಇವೆರಡೂ ಸ್ವಾಭಾವಿಕವಾಗಿ ಚಿಕ್ಕ ವಯಸ್ಸಿನಿಂದಲೇ ಸರಿಯಾಗಿ ಬೆಳೆಯುತ್ತ ಹೋಗಬೇಕಾಗುವದು, ಅಂದಮೇಲೆ ಇವೆರಡೂ ಸಮಕಾಲಿಕವಾಗಿ ಸರಿಯಾಗಿ ಬೆಳೆಯುತ್ತ ಹೋಗಬೇಕು ಎಂದು ಗೊತ್ತಾಗುವದು.

ಸುಧಾರಿಸಿದ ದೇಶಗಳಲ್ಲಿ ಶಿಕ್ಷಣಜ್ಞರು ವಿದ್ಯಾರ್ಥಿಗಳ ಶಾರೀರಿಕ ಶಕ್ತಿ, ಮಾನಸಿಕ ಶಕ್ತಿ, ಇವೆರಡರ ಕಡೆಗೂ ಸರಿಯಾಗಿ ಲಕ್ಷ್ಯಗೊಡಲಿಕ್ಕೆ ಬೇಕೆಂದು ನಿರ್ಣಯಿಸಿ ವಿದ್ಯಾಭ್ಯಾಸ ಕ್ರಮದಲ್ಲಿ ವ್ಯಾಯಾಮ ಶಿಕ್ಷಣಕ್ಕೂ ಯೋಗ್ಯವಾದ ಸ್ಥಾನವನ್ನು ಕಾದು ಇಟ್ಟಿದ್ದಾರೆ. ಜಪಾನ ಸರಕಾರದವರು ಹುಡುಗರ ಶರೀರಾರೋಗ್ಯ ವಿಷಯವಾಗಿ ಪ್ರತ್ಯೇಕವಾಗಿ 'ಬ್ಯುರೋ ಆಫ್ ಫಿಜಿಕಲ್ ಎಜ್ಯುಕೇಶನ್' ಎಂಬ ಒಂದು ಖಾತೆಯನ್ನೇ ಏರ್ಪಡಿಸಿದ್ದಾರೆ. ಇಂಗ್ಲಂಡಿನಲ್ಲಿಯ ಶಾಲೆಗಳು ವ್ಯಾಯಾಮ ಶಿಕ್ಷಣಕ್ಕಾಗಿ ಕೊಡುತ್ತಿರುವ ಪ್ರಾಮುಖ್ಯತೆಯು ಅನುಕರಣೀಯವಾಗಿರುವದು.

ನಮ್ಮಲ್ಲಿಯ ಅಭ್ಯಾಸ ಕ್ರಮದಲ್ಲಿ ವ್ಯಾಯಾಮಕ್ಕಾಗಿ ಕೆಲವು ತಾಸುಗಳನ್ನು ಮಾತ್ರ ಇಟ್ಟಿದ್ದಾರೆ. ಆ ವೇಳೆಯನ್ನು ವಿದ್ಯಾರ್ಥಿಗಳು ಹ್ಯಾಗೋ ಹ್ಯಾಗೋ ಕಳೆಯುತ್ತಿರುತ್ತಾರೆ. ವೇಳಾಪತ್ರಿಕೆಗನುಸರಿಸಿ ಆಟದ ಬೈಲಿಗೆ ಹೋದರೂ ವ್ಯಾಯಾಮದ ಕಡೆಗೆ ವಿದ್ಯಾರ್ಥಿಗಳೂ ಶಿಕ್ಷಕರೂ ಸರಿಯಾಗಿ ಲಕ್ಷ್ಯಗೊಡುವದಿಲ್ಲ; ಯಾಕಂದರೆ ಶಾಲಾಭ್ಯಾಸದಂತೆ ವ್ಯಾಯಾಮ ವಿಷಯದಲ್ಲಿ ಇಂಥ ದಿವಸ ಇಂಥ ಆಟವನ್ನಾಗಲಿ, ಈ ಬಗೆಯ ವ್ಯಾಯಾಮವನ್ನಾಗಲಿ ಮಾಡತಕ್ಕದ್ದೆಂದು ನಿರ್ಬಂಧಪಡಿಸಿರುವದಿಲ್ಲ. ಆಯತ್ತವಾದ ವೇಳೆಯಲ್ಲಿ ಮನಸ್ಸಿಗೆ ಬಂದದ್ದನ್ನು ಆಡಿ ಕಳೆದು ಬಂದರೆ ತೀರಿಹೋಯಿತು. ಆರೋಗ್ಯ, ಶುಚಿತ್ವ, ಶರೀರದಾರ್ಢ್ಯ ಇವು

ಬಂದಸ್ನೊಂದು ಅವಲಂಬಿಸಿರುವವು. ಇವಕ್ಕೆ ಸಂಬಂಧಪಟ್ಟ ನಿಯಮಗಳು
ಅವುಗಳ ಕಾರಣಗಳನ್ನೂ ಶಿಕ್ಷಕರು ಹೇಳಿಬಲ್ಲರು; ವಿದ್ಯಾರ್ಥಿಗಳೂ ಕೇಳಿಬಲ್ಲ
ನಿಜವಾಗಿ ನೋಡಿದರೆ ಆಚರಣೆಯಲ್ಲಿ ಅವು ಏನೂ ತೋರಿಬರುವದಿಲ್ಲ. ಹೀಗ
ಲಿಕ್ಕೆ ವ್ಯಾಯಾಮ ಶಿಕ್ಷಣ ಕ್ರಮವನ್ನು ಅಭ್ಯಾಸ ಕ್ರಮದಂತೆ ನಿಶ್ಚಿತ
ಬರೆದುಕೊಟ್ಟಿರುವದಿಲ್ಲ. ಅಭ್ಯಾಸ ಕ್ರಮದಲ್ಲಿ ಪುಸ್ತಕ ಉಪಕರಣಗಳು, ಮ
ನವು ಎಂದಿನಿಂದಲೂ ನಿಶ್ಚಿತವಾದಂತೆ ವ್ಯಾಯಾಮದ ಬಗ್ಗೆಯೂ ಪು
ಮುಂತಾದವು ಗೊತ್ತಾಗಲಿಕ್ಕೆಬೇಕು. ಹೊಸದಾಗಿ ಪ್ರಚಾರದಲ್ಲಿ ಬಂದ ಪ
ವದ್ಧತಿಯಲ್ಲಿ ಮಾತ್ರ ಸ್ಕೌಟ ಜ್ಞಾನಕ್ಕಾಗಿ ಪುಸ್ತಕ, ಕಲಿಯತಕ್ಕ ಸಂಗತಿ
ನಿಶ್ಚಿತವಾಗಿ ಗೊತ್ತಾಗಿರುವದರಿಂದ ಅದು ಎಲ್ಲ ಕಡೆಗೂ ಒಂದೇ ಸಮ
ಒಂದೇ ರೀತಿಯಿಂದ ಬಳಕೆಯಲ್ಲಿ ಬಂದಿರುವದು. ಅದೇ ಕ್ರಮವನ್ನು
ಶಾಲಾಭ್ಯಾಸಕ್ರಮದಲ್ಲಿ ವ್ಯಾಯಾಮದಬಗ್ಗೆ ವ್ಯವಸ್ಥೆಯನ್ನು ಮಾಡಬೇಕ
ಬರಿ ಪುಸ್ತಕವೂ ಉಪಯೋಗದ್ದಲ್ಲ. ಆರೋಗ್ಯದ ಬಗ್ಗೆ ಬೇಕಾದಷ್ಟು ಮ
ಗುಣಗಳನ್ನು ಪಡೆದು ಅರಿತು ಬಂದ ವಿದ್ಯಾರ್ಥಿಗಳ ಹಲ್ಲುಗಳನ್ನೂ ಬಟ್ಟೆಗಳ
ದೇಹದಾರ್ಢ್ಯವನ್ನೂ ನೋಡಿದರೆ ಆ ವಿದ್ಯಾರ್ಥಿಯು ತಾನು ಓದಿದ್ದರ ಸ್ವಲ್ಪ
ವನ್ನು ಸಹ ಬಳಕೆಯಲ್ಲಿ ತಂದಿರುವದಿಲ್ಲವೆಂದು ಗೊತ್ತಾಗುತ್ತದೆ. ವಾಯು
ಡ್ರಿಲ್ಲುಗಳು ಶಾಲೆಗಳಲ್ಲಿ ಪಾತಗಳ ಬೇಸರ ಕಳೆಯುವದಕ್ಕಾಗಿ ಏರ್ಪಡಿಸ
ಸದ್ಯದ ಸ್ಥಿತಿಯಾಗಿದೆ.

ನಮ್ಮ ಪ್ರಾಥಮಿಕ ಶಾಲೆಗಳಿಂದ ಆರಂಭಿಸಿ ವಿಶ್ವವಿದ್ಯಾನಿಲಯದವ
ನೋಡಿದರೂ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಉದ್ದೇಶವು ವಿದ್ಯಾಭ್ಯಾಸದ
ಒಲಿದಿರುವದೇ ಹೆಚ್ಚಾಗಿ ಕಂಡುಬರುತ್ತದೆ. ಜ್ಞಾನಾರ್ಜನೆಯೇ ವಿದ್ಯಾಧ
ಧ್ಯೇಯವಾಗಿದೆ. ಎಲ್ಲೆಲ್ಲಿ ನೋಡಿದರೂ ವ್ಯಾಯಾಮ ಶಿಕ್ಷಣವು ತನ್ನ ಯೋ
ಸ್ಥಾನವನ್ನು ಪಡೆದಿರುವದಿಲ್ಲ. ನಮ್ಮಲ್ಲಿಯ ಸ್ಕೂಲು ವಿದ್ಯಾನಿಲಯಗ
ಸಾಹಿತ್ಯ ಚರಿತ್ರೆ, ಅಲಂಕಾರ, ತತ್ತ್ವಶಾಸ್ತ್ರ, ವಿಜ್ಞಾನಶಾಸ್ತ್ರ ಇವೆಲ್ಲವನ್ನು
ವಿದ್ಯಾರ್ಥಿಗಳು ನೆಟ್ಟಗೆ ನಿಲ್ಲುವದನ್ನೂ ಕೂಡುವದನ್ನೂ ಸಹ ಅರಿಯದ
ಉಪಹಾಸಪಾಡುವ ನುಡಿಯಲ್ಲಿ ನಿಜವಾಗಿ ಅರ್ಥವಿರುತ್ತದೆ. ಅವರು
ದಿನಂಪ್ರತಿಯ ಆಹಾರ, ಬಟ್ಟೆಗಳ ಶುಚಿತ್ವ, ದೇಹದ ನೈರ್ಮಲ್ಯಗಳ ಬಗ್ಗೆ ಮೈ
ಏನೂ ಅರಿಯದಂತೆ ತಮ್ಮ ಆಚರಣೆಯನ್ನು ಇಟ್ಟುಕೊಂಡಿರುತ್ತಾರೆ.

ಹೀಗೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಜ್ಞಾನಾರ್ಜನೆಯೇ
ಧ್ಯೇಯವೆಂದು ತಿಳಿಯದೆ ಆರೋಗ್ಯವೂ ಶರೀರ ದಾಢ್ಯವೂ ತಮಗೆ ತೀರ ಸಹ
ಸಿರುವವೆಂದು ತಿಳಿಯಲಿಕ್ಕೆ ಬೇಕು.

ಈ ಮಾತಿನ ಸತ್ಯತೆಗಾಗಿ ದೇಶವಿದೇಶಗಳ ಹಾಗು ಹಿಂದುಸ್ಥಾನದ ಪುರಾಣ ಯ ವಿಷಯವಾಗಿ ವಿಚಾರಿಸುವಾ—

ದೇಶ	೧೦೦೦ ಜನಸಂಖ್ಯೆಯಲ್ಲಿ ಸಾಯುವವರ ಸಂಖ್ಯೆ
ಇಂಡಿಯ	೩೪
ಜಪಾನ	೨೪
ಫ್ರಾನ್ಸ	೧೬
ಇಟಲಿ	೧೫
ಇಂಗ್ಲಂಡ ವೇಲ್ಸ	೧೩

ಮೇಲಿನ ಪಟ್ಟಿಯಿಂದ ನಮ್ಮ ದೇಶದಲ್ಲಿಯ ಸಾಯುವವರ ಸಂಖ್ಯೆಯು ಎಲ್ಲ ಕಿಂತ ಅಧಿಕವಾಗಿರುವದೆಂಬ ವಿಷಾದಕರ ಸಂಗತಿಯು ಪ್ರಕಟವಾಗುವದು.

ಬೇಕಾದಷ್ಟು ವಿದ್ಯಾಧ್ಯಯನ ಮಾಡಿ ಸಮಾಜದಲ್ಲಿ ಬೆಳಕಿಗೆ ಬರಬೇಕೆನ್ನುವ ರು ಸಾವಿಗೀಡಾಗುವ ದುಃಖಕರ ಉದಾಹರಣಗಳು ಅನೇಕವುಂಟು. ಮುವ ನೀರು ಶುಚಿಯಾಗಿಲ್ಲದಿದ್ದರೆ ವಾಂತಿಭೇದಿ, ಟೈಫಾಯಿಡ್ ಜ್ವರಗಳು ಹುದು. ಸರಿಯಾಗಿ ಬೆಳಕೂ ಹವೆಯೂ ಸ್ವಚ್ಛತೆಯೂ ಇಲ್ಲದ ಮನೆಗಳಲ್ಲಿ ಸುವದರಿಂದ ಕ್ಷಯ ಮುಂತಾದ ಅಂಟು ರೋಗಗಳು ಗಂಟು ಬೀಳಬಹುದು. ಷಯಗಳಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳಿಗೂ ಪಾಲಕರಿಗೂ ಸರಿಯಾಗಿ ಸಬೇಕು.

ವಿದ್ಯಾರ್ಥಿಗಳ ಬೆಳವಣಿಗೆಗೆ ವಿಘ್ನಕಾರಕವಾದ ಇನ್ನೂ ಅನೇಕ ಸಂಗತಿಗಳು ವು.

೧. ಸರಿಯಾದ ಪುಷ್ಟಿಕರವಾದ ಆಹಾರದ ಕೊರತೆ

೨. ಆರೋಗ್ಯಕಾರಕವಾದ ಹವೆಯ ಅಭಾವ

೩. ಬಡತನ, ಅಜ್ಞಾನ, ದುರ್ಲಕ್ಷ್ಯ ಇತ್ಯಾದಿ

೪. ಪಾಲಕರಲ್ಲಿ ಆರೋಗ್ಯ ಜ್ಞಾನದ ಅಭಾವ

ಷ್ಟೆಲ್ಲ ತೊಂದರೆಗಳಿದ್ದರೂ ಅವನ್ನೆಲ್ಲ ಒಮ್ಮೆಲೆ ನೀಗಿಸುವದು ಕಠಿಣ. ಕೆಲವಂಶದಲ್ಲಿ ಶಿಕ್ಷಕರು ಪ್ರಯತ್ನಿಸಲು ಅನುಕೂಲವಿದೆ.

ಶಿಕ್ಷಕರ ಯತ್ನ :— ತಮ್ಮ ವೇತನಪತ್ರಿಕೆಯಲ್ಲಿ ಕಾದಿಟ್ಟ ಆಟದ ವೇಳೆ ಸರಿಯಾಗಿ ಕಳೆಯಲು ಅನುಕೂಲವಾಗುವಂತೆ ಮೊದಲೇ ಯತ್ನಿಸಿರಬೇಕು.

ಈ ದಿನ ಇಂಥ ಆಟವನ್ನಾಗಲಿ ಈ ಬಗೆಯ ವ್ಯಾಯಾಮವನ್ನಾಗಲಿ ಮುಗಿಸಬೇಕೆಂದು ಅಭ್ಯಾಸಪತ್ರಿಕೆ ಬರೆದು ಇಟ್ಟಿರಬೇಕು. ಆಟವಾಡುವ ಆಡಲಿಕ್ಕೆ ಅನುಕೂಲವಾಗುವಂತೆ ಆಡತಕ್ಕ ಸ್ಥಳವನ್ನು ಸಿದ್ಧಪಡಿಸಿ (ಗೆರೆ ಹೊ ಇಟ್ಟಿರಬೇಕು. ಆ ಸ್ಥಳಕ್ಕೆ ಹೋದ ಕೂಡಲೆ ಪದ್ಧತಿಗೆ ತಕ್ಕಂತೆ ಸಿಂತು ಸರಿಯಾಗುವಂತೆ ಆಡಬೇಕು. ವ್ಯಾಯಾಮಗಳಸಾಧನ (ಲೇಝಿಯೇಮ್, ಡಂ ಲೋಡು) ಗಳನ್ನು ಮೊದಲೇ ಕ್ರಮಗೊಳಿಸಿ ಇಡಬೇಕು. ಆಟದ ಬೈಲಿಗೆ ತ ಕೂಡಲೆ ಪದ್ಧತಿಗೆ ಸರಿಯಾಗಿ ಆಡಬೇಕು. ವಿದ್ಯಾರ್ಥಿಗಳಿಗೆ ಮನೋ ಯಾಗುವಂತೆ ಪಿಯಾನು, ಸೀಟಿ, ಮುಂತಾದವುಗಳನ್ನು ಸಕಾಲದಲ್ಲಿ ಉಪ ಗಿಸಬೇಕು. ಪ್ರತಿತಿಂಗಳ ಕೊನೆಗೆ ತೂಕ, ಎದೆಯ ಹರವು ಇತ್ಯಾ ಬೆಳೆದದ್ದರ ನಿದರ್ಶನಕ್ಕಾಗಿ ಒಂದು ಪಟ್ಟಿಯನ್ನು ಬರೆದು ತೂಗ ಹಾಕ ವ್ಯಾಯಾಮ ಶಾಲೆಯಲ್ಲಿ ಅಂಗಸಾಧನೆಯ ಪ್ರಕಾರಗಳನ್ನು ತೋರಿಸುವ (ಚಾರ್ಟ) ಗಳನ್ನು ತೂಗಹಾಕಬೇಕು. ಆಟ, ವ್ಯಾಯಾಮಗಳಲ್ಲಿ ಅಂಗ ಯಿಂದ ಶರೀರದಲ್ಲಿಯ ಮಾಂಸಖಂಡಗಳೆಲ್ಲ ಸಾಧನೆ ಹೊಂದಿ ಗಟ್ಟಿಮುಟ ತ್ತವೆ. ಕಣ್ಣಿಗೆ ಅಂದಕಾಣುವಂತೆ ದೇಹರಚನೆಯು ಸಿದ್ಧವಾಗುತ್ತದೆ. ಪುಟ್ಟ ತೊಂದರೆಗಳಿಗೆ ದೇಹವು ಬಳಲುವದಿಲ್ಲ. ದೇಹದಲ್ಲಿ ಕಾಂತಿಯೂ ಉ ಹವೂ ತುಂಬುತುಳುಕುವದು. ಇತ್ಯಾದಿಗಳಲ್ಲಿ ಒಂದನ್ನಾದರೂ ವಿದ್ಯಾರ್ಥಿ ತಮ್ಮ ದೇಹದಲ್ಲಿ ಕಂಡದ್ದಾದರೆ ಆಟ, ವ್ಯಾಯಾಮಗಳಿಗೆ ಮೆಚ್ಚುತ

ಆಹಾರ :—ವಿದ್ಯಾರ್ಥಿಗಳು ದೇಹಪೋಷಣೆಗಾಗಿ ತಕ್ಕ ಆಹಾರ ಸೇ ವಿಸು ಅವಶ್ಯ. ಡಾಕ್ಟರರು ಸಮ್ಮಿಲ್ಲಿಯ ವಿದ್ಯಾರ್ಥಿಗಳ ಆಹಾರದ ವಿಷಯ ವಿಚಾರಿಸಿ ಅವರ ಆಹಾರದಲ್ಲಿಯ ಕುಂದುಕೊರತೆಗಳನ್ನು ವಿಶದಪಡಿಸಿದ ನಮ್ಮವರ ಆಹಾರದಲ್ಲಿ ಶರ್ಕರೆ ಪಿಷ್ಟಭಾಗಗಳು ಪ್ರಮಾಣಕ್ಕಿಂತ ಹೆ ಬಳಕೆಯಲ್ಲಿವೆ. ಮೇದಸ್ಸು, ಸಾರಜನಕ ಪದಾರ್ಥಗಳು ಅಲ್ಪ ಪ್ರಮಾಣದ ತ್ತವೆ; ಆದುದುರಿಂದ ಆಹಾರದೊಡನೆ ಹಣ್ಣು ಹಾಲು ಮುಂತಾದವುಗ ಅಥವಾ ಅವು ಕೂಡಿದ ಪದಾರ್ಥಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೆ ಪುಷ್ಟಿಕರವಾದ ಆಹಾರಕ್ಕೆ ಹೆಚ್ಚು ಬೆಲೆ ಬೀಳುವದೆಂದು ತಿಳಿಯಬಾರದು. ಪ್ರತಿನಿತ್ಯ ವೆಚ್ಚ ಮಾಡುವ ಹಣದಲ್ಲಿಯೇ ಯೋಗ್ಯ ಆಹಾರಗಳು ನಮಗೆ ದೊರೆ ವಂತೆ ಅವೆ. ತೀರ ಕಡಿಮೆ ಬೆಲೆಯಿಂದ ಕೆಳಗೆ ತೋರಿಸಿದಂತೆ ಯೋಗ್ಯ ಆ ವನ್ನು ಸಿದ್ಧಪಡಿಸುವ ಸಾಧನಗಳನ್ನು ಪಡೆಯಬಹುದು.

(ಕವ್ಹರ ಪುಟ ೩ ನೋಡಿರಿ.)

(೧) ಅಕ್ಕಿ, ರಾಗಿ ಅಥವಾ ಜೋಳ. (೨) ತಾಜಾ ಕಾಯಿಪಲ್ಲೆಗಳು ಸವಾಗಿ ಸೊಪ್ಪುಗಳು. (೩) ಹಾಲು ಹಾಗು ಅದರಿಂದಾದ ಪದಾರ್ಥಗಳು. ಹೊಟ್ಟುಗೂಡಿದ ಗೋದಿ ಹಿಟ್ಟು. (೫) ಸೋಯಾಬೀನ ಮುಂತಾದ ಗಳು. (೬) ಹಣ್ಣುಗಳು– ಬಾಳೆ, ಚಪ್ಪರಬದನೆ, ಲಿಂಬೀಹಣ್ಣು, ಬದಾಮು, ಸೆಪ್ಪೆ.

೩. ಆಹಾರದ ಕಡೆಗೆ ಲಕ್ಷ್ಯಗೊಟ್ಟಂತೆ ಶುಚಿತ್ವದ ಕಡೆಗೂ ಲಕ್ಷ್ಯ ಡಬೇಕು. ಪ್ರತಿನಿತ್ಯ ಶಾಲೆಯಲ್ಲಿ ಕಾಣುವ ಅಂಗಳ, ಕೋಣೆ, ಗೋಡೆ, ಲಗೆ, ಉಡುತೊಡಿಗೆ, ಪುಸ್ತಕ ಮುಂತಾದ ಎಲ್ಲೆಡೆಗಳಲ್ಲಿಯೂ ಶುಚಿತ್ವವು ದು ಕಾಣುವಂತೆ ಸ್ಥಿತಿಯು ಇರಬೇಕು. ನಡಿದಂತೆ ನಡೆ ಎಂಬುದಕ್ಕೆ ಂತೆ ಶಿಕ್ಷಕನು ಸ್ವಚ್ಛತೆಗೂ, ವ್ಯವಸ್ಥೆಗೂ ಆರೋಗ್ಯಕ್ಕೂ ತಾನು ಮಾದರಿ ಗಿರಬೇಕು.

ಜಾಹೀರಾತು

(ಶೀ. ಉಮಡಿಕರ ಎಮ್. ಎ. ಕೃತ)

ಹಿಂದೂಪದ್ಧತಿಯ ಜಮಾಖರ್ಚು ಭಾಗ ೧ (ಹೊಸ ಆವೃತ್ತಿ)

ಪುಟ ೧೨೮ ಬೆಲೆ ೧–೧೦–೦

ಇದರ ಮೊದಲಿನ ಆವೃತ್ತಿ ತೀರಿದುದರಿಂದ ಈಗ ೨ನೆಯ ಆವೃತ್ತಿಯು ರಿಸಿ ವಿಸ್ತರಿಸಿ ಪ್ರಕಟಿಸಲ್ಪಟ್ಟಿದೆ. ಈ ಆವೃತ್ತಿಯಲ್ಲಿ ಮನೆಯ ಜಮಾ ನ್ನು ಹೇಗೆ ಬರೆಯಬೇಕೆಂಬದನ್ನು ವಿಸ್ತಾರವಾಗಿ ಬರೆದು ತೋರಿಸಿದೆ. ಎಲ್ಲ ರಣಗಳಲ್ಲಿ ಮೊದಲಿಗಿಂತ ಹೊಸ ಉದಾಹರಣಗಳನ್ನು ಸೇರಿಸಿದೆ.

ಪ್ರತಿಯೊಂದು ಪ್ರಕರಣದ ಕೊನೆಗೆ ಪ್ರಶ್ನಗಳಿವೆ. ಕಟ್ಟಕಡೆಗೆ ರೂಢಿಗಾಗಿ ಕಾಲೇಜ, ಸ್ಕೂಲಫಾಯನಲ್ ಪರೀಕ್ಷೆಗಳಿಗೆ ಬಿದ್ದ ಪ್ರಶ್ನಗಳು ಕೊಡ ನೆ. ಜಮಾಖರ್ಚುಬರೆಯುವ ಇಂಗ್ಲಿಶ್ ಪದ್ಧತಿಯನ್ನು ದೇಶೀಯ ಪದ್ಧತಿ ನೆ ಸೇರಿಸಿ ದೇಶೀಯ ಪದ್ಧತಿಯು ಈಗಿನ ಕಾಲಕ್ಕೆ ಹೇಗೆ ಉಪಯುಕ್ತವಾಗ ದೆಂಬದನ್ನು ತೋರಿಸುವದು ಈ ಪುಸ್ತಕದ ಗುರಿಯಾಗಿದೆ. ಈಗಿನ ಕಾಲದ ಕರು ಕೇವಲ ಹಳೆಯ ಪದ್ಧತಿಯ ಪುಸ್ತಕಗಳಿಗಿಂತ ಈ ಪುಸ್ತಕದಿಂದ ಹೆಚ್ಚಿನ ್ತಿಸವ್ಯಕ್ಕೆ ಬೇಕಾಗಿರುವ ಜ್ಞಾನವನ್ನು ಪಡೆಯಬಹುದು.

ಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು } **ಕೃಷ್ಣಾಜಿ ರಾಮರಾವ ಕುಲಕರ್ಣಿ, ಕಿಲ್ಲೆ ಧಾರವಾಡ**

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಪ್ಹಿ. ಕಾಮತ, ಬಿ. ಎ. (ಆನ್ಸ
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸಾ
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚು
ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ಬಾವ ಕಾಮತ
ಶಿರ್ಸಿ, ಉ. ಕಾನಡಾ

ತ್ವರೆಮಾಡಿರಿ! ಬೆಲೆ ತೀರ ಕಡಿಮೆ!! ಹತ್ತೇ ಆಣೆಗಳ

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಚಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

—೦೦೪೦೦—

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಇ
ಮುಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂದ
ತೋರಿಸಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆಗ
ಕೊಟ್ಟಿದೆ. ಲ. ಸಾ. ಭಾ. ಧ್ಯ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ವಿ
ಗಳ ಸವಿಸ್ತಾರೋಪದೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನೆಗಳನ್ನೂ, ಹಿ ವ. ದ ಮು
ಪರೀಕ್ಷೆಯ ಪ್ರಶ್ನೆಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋಗ
ಚನ್ನಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆ
ಕಡಿಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಒನೇ ಇ
ಸ್ವತಂತ್ರವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯುಕ್ತ
ಬಗ್ಗೆ ಬರೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆರ್. ಆರ್. ಅಕಳವಾಡಿ ಎಂಡ ಸನ್ಸ್,
ರಾಮಾಶ್ರಯ ಬುಕ್‌ಡಿಪೋ, ಧಾರವಾ

ನಂಬರ ೧೯೨೨ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ	ವಿಷಯ	ಪುಟ.
೧.	ಮುಂಬಯಿ ಇಲಾಖೆಯ ಆಯವ್ಯಯದ ಅಂದಾಜ ಪತ್ರಿಕೆ	೧
೨.	ಪಂಜಾಬದೊಳಗಿನ ಹಳ್ಳಿಯ ಶಾಲೆಗಳು	೩
೩.	ಪ್ರಾಥಮಿಕ ಶಾಲೆಗಳಲ್ಲಿ ನಿಬಂಧ ಶಿಕ್ಷಣ	೧೧
೪.	ಪ್ರಕಟನೆ	೨೮

Printed by K R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹು

	ರೂ. ಆ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	0– 6.
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	0– 6.
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	0–
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	0–
ಲಘುವ್ಯಾಕರಣ (ವೈ. ಕಟ್ಟೀಕೃತ)	0–
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	0–
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	0–0
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	0–
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	0–
,, ೩ನೇ ,,	0–
,, ,, ೪ನೇ ,,	0–
ಅಂಕಗಣಿತ (ಗಾಂವಕರಕೃತ) ೩ನೇ ,,	0–
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	0–
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	0–
ಧಾರವಾಡ ಜಿಲ್ಲಾ ,, (ಕುರಡೀಕೃತ)	0–
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	0–
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	0–
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	0–
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	0–0
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	0–
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	0–0
ಭೂಮಿತಿ (ಚಂದಾವರಕರ ಕೃತ)	0–
ಸರಸ್ವತೀ ವಿಜಯ (ಬೂದೀಹಾಳಕೃತ)	0–

ಪತ್ರೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬	ಸಪ್ಟಂಬರ ೧೯೩೭	ವರ್ಷ ೯ ಸಂ. ೬.

ಮುಂಬಯಿ ಇಲಾಖೆಯ ಆಯವ್ಯಯದ ಅಂದಾಜ ಪತ್ರಿಕೆ

(೧೯೩೭–೩೮)

ಅಗಸ್ಟ ತಿಂಗಳ ೨೪ನೆಯ ತಾರೀಖಿನ ದಿನ ಮುಂಬಯಿ ಕಾಯದೆ ಮಂಡ
ದ ಅಧಿವೇಶನದ ಮುಂದೆ ಈ ವರ್ಷದ ಆಯವ್ಯಯದ ಅಂದಾಜ ಪತ್ರಿಕೆಯು
ಡಲ್ಪಟ್ಟತು. ಅದರಲ್ಲಿ ಈ ವರ್ಷದ ಒಟ್ಟು ವೆಚ್ಚವು ೧೨,೧೭,೨೨,೦೦೦ ರೂ.
ಳಾಗಬಹುದೆಂದೂ ಒಟ್ಟು ಉತ್ಪನ್ನವು ೧೧,೯೯,೫೫,೦೦೦ ರೂ. ಗಳು ಬರಬಹು
ಂದೂ ಅಂದಾಜುಮಾಡಲಾಗಿದೆ. ಮತ್ತು ಪರಿಣಾಮದಲ್ಲಿ ೧೭,೬೭,೦೦೦ ರೂ.
ಡಿನು ಬೀಳಬಹುದೆಂದೂ ಈ ಕೊರತೆಯು ಇದೊಂದೇ ವರ್ಷದ ಮಟ್ಟಿಗೆ ಹೊರ
ುವದಾದ್ದರಿಂದ ಇದನ್ನು ಕಳೆದ ವರ್ಷದ ಶಿಲಿಕಿನೊಳಗಿನ ರಕವಿನಿಂದ ಬಾಯಿ
ೂಡಿಸಿಕೊಳ್ಳಬೇಕೆಂದೂ ಅಧಿಕಾರಿಗಳು ನಿರ್ಣಯಿಸಿರುವರು.

ಈ ವರ್ಷದ ಅಂದಾಜಪತ್ರಿಕೆಯಲ್ಲಿ ನೀರಿನ ಪೂರೈಕೆಗಾಗಿ ಹತ್ತು ಲಕ್ಷ
ರೂ. ಗಳನ್ನೂ ಹಳ್ಳಿಗಳ ಉದ್ಯೋಗವ್ಯವಸಾಯಗಳ ಬೆಳೆವಣಿಗೆಗಾಗಿ ೧೫೦
ಾವಿರ ರೂ. ಗಳನ್ನೂ ತೆಗೆದಿಡಲಾಗಿದೆ. ಕೆಲಕೆಲವು ಪ್ರದೇಶಗಳ ಭೂಕಂದಾ
ುವನ್ನು ಕಡಿಮೆಮಾಡುವದಕ್ಕಾಗಿ ೫ ಲಕ್ಷ, ಅಬಕಾರಿಯ ಉತ್ಪನ್ನದ ದೃಷ್ಟಿ
ುನ್ನು ಬದಲಾಯಿಸಿದುದರಿಂದ ಕಡಿಮೆಯಾಗಬಹುದಾದ ಉತ್ಪನ್ನ ೨ ಲಕ್ಷ,

ಹಿಂದುಳಿದ ವರ್ಗದ ಜನರ ಶಿಕ್ಷಣಕ್ಕಾಗಿ ಇನ್ನುಳಿದ ಆರುತಿಂಗಳುಗಳಿಗೆ ಬ
ಸಾವಿರ, ಗೋಚರಾಯಿ ಫೀ (ಹುಲ್ಲಬನ್ನಿ) ಯನ್ನು ತೆಗೆದುಹಾಕಿದ್ದರಿಂದ ಕಡಿಮೆ
ಬರಬಹುದಾದ ರಕಮು ೫ ಲಕ್ಷ, ಇವುಗಳ ಸೇರ್ಪಡೆಯಾಗಿದೆ. ಇದ್ದ
ಖರ್ಚಿನ ಬಾಬುಗಳಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಕಡಿಮೆ
ಮಾಡಲಾಗಿದೆ. ಈ ರಕಮಿನಲ್ಲಿ ೪೫೦ ಸಾವಿರ ರೂಪಾಯಿಗಳನ್ನು ತಂಗಳೆ
೭೫ ರೂ. ಗಿಂತ ಹೆಚ್ಚಿಗೆ ಪಗಾರವಿರುವ ಸರಕಾರೀ ನೌಕರ ಭತ್ತೆಯ ರಕ್ಷ
ನಿಂದಲೂ ಕಾಂಟಂಜೆನ್ಸಿ (ಸಾದಿಲವಾರ) ರಕಮಿನೊಳನಿಂದಲೂ ಉಳಿಸಿಕೊಂ
ಬಹುದೆಂದು ಗೊತ್ತಾಗಿದೆ. ಮುಂಬಯಿ ಇಲಾಖೆಯೊಳಗಿನ ಬಾಯ್ ಸ್ಕೌಟ್
ಹಾಗು ಗರ್ಲ್‌ಗಾಯಿಡ್ ಸಂಸ್ಥೆಗಳಿಗೆ ಕೊಡುವ ಸಹಾಯದ್ರವ್ಯದಲ್ಲಿಯೂ ಕೆ
ವೊಂದು ರಕಮನ್ನು ಕಡಿಮೆಮಾಡಲಾಗಿದೆ.

ನಮ್ಮ ಇಲಾಖೆಯ ಈ ವರ್ಷದ ಮುಖ್ಯ ಬಾಬುಗಳ ಉತ್ಪನ್ನದ ವಿವ

	೧೯೩೭–೩೮		೧೯೩೮–೩೯	
ಭೂಕಂದಾಯ	೩೨೯೨೫	ಸಾವಿರ	೩೨೨೭೬	ಸಾವಿರ
ಅಬಕಾರಿ	೩೧೨೬೯	,,	೩೨೩೯೭	,,
ಸ್ಟ್ಯಾಂಪು	೧೩೯೭೯	,,	೧೪೪೪೫೫	,,
ಫಾರೆಸ್ಟ	೪೨೦೬	,,	೪೪೩೯	,,
ರೆಜಿಸ್ಟ್ರೇಶನ್	೧೫೦೩	,,	೧೫೦೩	,,
ಮೋಟಾರ ಟ್ಯಾಕ್ಸ	೩೭೭೩	,,	೩೬೯೧	,,
ಇತರ ಟ್ಯಾಕ್ಸುಗಳು	೪೭೩೩	,,	೪೭೯೦	,,
ಇರಿಗೇಶನ್ ಮುಂ.	೧೨೫೦	,,	೨೦೩೭	,,
ವಿದ್ಯಾಖಾತೆ	೧೫೧೪	,,	೧೪೭೨	,,

ಮುಖ್ಯ ಬಾಬುಗಳ ಖರ್ಚಿನ ವಿವರ.

ಭೂಕಂದಾಯ	೪೬೦೩	ಸಾವಿರ	೪೪೧೨	ಸಾವಿರ
ಅಬಕಾರಿ	೩೯೬೨	,,	೪೧೬೨	,,
ಸ್ಟ್ಯಾಂಪ	೧೯೪	,,	೨೦೪	,,
ಫಾರೆಸ್ಟ	೨೬೯೧	,,	೨೯೨೯	,,
ರೆಜಿಸ್ಟ್ರೇಶನ್	೫೬೬	,,	೫೭೫	,,
ಮೋಟಾರ ಟ್ಯಾಕ್ಸ	೧೫೧೭	,,	೧೩೭೦	,,

ಇತರ ಟ್ಯಾಕ್ಸುಗಳು	೧೪೯೦	,,	೧೬೨೫	,,
ಇರಿಗೇಶನ್ ಮುಂ.	೪೨೦೨	,,	೪೧೪೯	,,
ನಿದ್ಯಾಖಾತೆ	೧೬೧೧೪	,,	೧೫೯೬೬	,,

ಈ ವರ್ಷದ ಅಂದಾಜಪತ್ರಿಕೆಯನ್ನು ನಿರೀಕ್ಷಣೆಮಾಡಿದ ತಜ್ಞರೊಬ್ಬರು ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. "ಹುಲ್ಲಬನ್ನಿಯನ್ನು ಗೆದುಹಾಕುವದು, ಭೂಕಂದಾಯವನ್ನು ಇಳಿಸುವದು, ಬಾಕಿ ಉಳಿದ ಹಪ್ತೆಯ ಕಮನ್ನುಸೂಟಬಿಡುವದು, ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನೆಕೊಡುವದು, ರಿನ ಪೂರೈಕೆಯ ವ್ಯವಸ್ಥೆ ಮಾಡುವದು, ಪ್ರಬುದ್ಧರ ಶಿಕ್ಷಣ, ಶಾರೀರಿಕಶಿಕ್ಷಣ, ಂದುಳಿದ ವರ್ಗಗಳ ಶಿಕ್ಷಣ ಇವುಗಳಿಗೆ ಪ್ರೋತ್ಸಾಹ ಮುಂತಾದ ಅನೇಕ ಜನ ತದ ಕಾರ್ಯಗಳಿಗೆ ಇದರಲ್ಲಿ ಅನುಕೂಲ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ತ್ಯಂತ ಉತ್ತಮ ಅಂದಾಜ ಪತ್ರಿಕೆಯೆಂದು ಹೇಳಬಹುದು."

"ಈ ಅಂದಾಜಪತ್ರಿಕೆಯನ್ನು ತಯಾರಿಸಿದ ಶ್ರೇಯಸ್ಸು ಬಹ್ವಂಶದಿಂದ ನಾಮದಾರ ಲ್ಲೆಯವರಿಗೆ ಸಲ್ಲುವದು. ಇವರು ತೀರ ಅಲ್ಪಾವಧಿಯಲ್ಲಿ ಪ್ರಾಂತದ ರ್ಥಿಕ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸಿ ತಮ್ಮ ಮುತ್ಸದ್ದಿತನವನ್ನು ತೋರಿ ುವರು. ಖರ್ಚನ್ನು ಕಡಿಮೆಮಾಡುವದು, ಕರಭಾರವನ್ನು ಇಳಿಸುವದು, ರ್ವಜನಿಕ ಉದ್ಯೋಗಗಳ ಬೆಳೆವಣಿಗೆ ಮೊದಲಾದ ಲೋಕಹಿತದ ಕಾರ್ಯ ಂದ ಈ ಅಂದಾಜಪತ್ರಿಕೆಯು ಜನಪ್ರಿಯವಾಗಿದೆ. ಆದ್ದರಿಂದ ನಾಮದಾರ ಯವರ ಬಗ್ಗೆ ನಾವು ಹೆಮ್ಮೆ ಪಡುವದು ಸ್ವಾಭಾವಿಕವಾಗಿದೆ" ಇತ್ಯಾದಿ.

ಪಂಜಾಬದೊಳಗಿನ ಹಳ್ಳಿಯ ಶಾಲೆಗಳು

ಹಳ್ಳಿಯ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಶಿಕ್ಷಕರ ಕಾರ್ಯಗಳಲ್ಲಿ ಸಮಾ ವಾಗುವ ಅತಿಮಹತ್ವದ್ದೂ ಹೆಚ್ಚು ಸ್ಥಿರವಾದ ಪರಿಣಾಮವನ್ನುಂಟು ಮಾಡು ಪದೂ ಆದ ಇನ್ನೊಂದು ಕಾರ್ಯದ ವಿಷಯವಾಗಿ ಇಲ್ಲಿ ವಿವೇಚನೆ ಮಾಡ ಲಾಗಿದೆ.

ಪಂಜಾಬ ಪ್ರಾಂತದಲ್ಲಿ ಹಳ್ಳಿಗಳ ಸುಧಾರಣೆಯ ಕಾರ್ಯವು ಬಹುಕಾಲದ ದೆಯೇ ಪ್ರಾರಂಭವಾಗಿದೆ. ಅದಕ್ಕಾಗಿ ಬೇರೆ ಬೇರೆ ಅಧಿಕಾರಿಗಳೂ ನಿಯಮಿಸ

ಲ್ಪಟ್ಟದ್ದಾರೆ ಗ್ರಾಮ ಸುಧಾರಣೆಯ ಕಾರ್ಯಕ್ಕಾಗಿಯೇ ಕಮಿಶ
ಅಧಿಕಾರದಲ್ಲಿ ನಿಯುಕ್ತರಾಗಿದ್ದ ಶ್ರೀ. ಎಫ್. ಎಲ್. ಬ್ರೇಯನ್ (I. C.
ಇವರು ಬರೆದ ಒಂದು ಲೇಖನವು ಇದೇ ಅಗಷ್ಟ ತಿಂಗಳ ಮೂರನೆಯ ತಾರೀ
ದಿನ ಟೋಕಿಯೋ ನಗರದಲ್ಲಿ ನೆರೆದ ಜಗತ್ತಿನ ವಿದ್ಯಾಸುಧಾರಣೆಯ ವಿ
ವನ್ನು ಕೈಕೊಂಡಿರುವ ಒಂದು ಸಂಸ್ಥೆಯ ದ್ವೈವಾರ್ಷಿಕ ಅಧಿವೇಶನದ ಮು
ಓದಲ್ಪಟ್ಟಿತು ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

ಜಿಲ್ಲಾ ಸಭೆಗಳು— (District Councils) ಜಾತಿ ವಿಷ
ಜಿಲ್ಲಾ ಸಭೆಯು ಸುಮಾರು ೧೯೨೫–೨೬ರ ಸುಮಾರಿಕ್ಕೆ ಪ್ರಚಾರದಲ್ಲಿ ಬಂದಿತ
ಈ ಸಭೆಯು ಪ್ರಾರಂಭವಾದ ಕೆಲವು ದಿನಗಳಲ್ಲಿಯೇ ಈ ಸಭೆಗಳ ಚಾಲಕರು
ವಿದ್ಯಾ ಇಲಾಖೆಯ ಅಧಿಕಾರಿಗಳೂ ಇದರ ಕಾರ್ಯಗಳು ಯಶಸ್ವಿಯಾಗಿ ಜರು
ಲಿಕ್ಕೂ ಗ್ರಾಮ ಸುಧಾರಣೆಯ ಕಾರ್ಯಗಳು ಸುಫಲಕಾರಿಯೂ ಸ್ಥಿರಪರಿಣಾಮ
ಕಾರಿಯಾಗಿಯೂ ನಡೆಯಬೇಕಾದರೆ ಪ್ರಾಥಮಿಕ ಶಾಲಾ ಶಿಕ್ಷಕರೇ
ಕಾರ್ಯದಲ್ಲಿ ಮನಸ್ಸು ತುಂಬಿ ಪ್ರೀತಿಯಿಂದ ಕಾರ್ಯಮಾಡಬೇಕು. ಪ್ರಾ
ಮಿಕ ಶಿಕ್ಷಕರನ್ನು ಬಿಟ್ಟರೆ ಅನ್ಯರಿಂದ ಈ ಕಾರ್ಯವು ಎಂದಿಗೂ ಯಶಸ್ವಿಯಾ
ನಡೆಯಲಾರದು; ಪ್ರಾಥಮಿಕ ಶಿಕ್ಷಕರನ್ನು ಈ ಕಾರ್ಯಕ್ಕೆ ತಕ್ಕ ಶಿಕ್ಷ
ಕೊಟ್ಟು ತಯಾರಿಸಬೇಕು, ಎಂದು ಅಭಿಪ್ರಾಯಪಟ್ಟರು. ಶಿಕ್ಷಕರಿಗೆ
ಬಗೆಯ ಶಿಕ್ಷಣ ಕೊಡದೆ ಈ ಕಾರ್ಯವು ಅಷ್ಟು ಯಶಸ್ವಿಯಾಗಿ ನಡೆಯಲಾ
ದೆಂದೂ ಅವರ ಅನುಭವಕ್ಕೆ ಬಂದಿತು. ಆದ್ದರಿಂದ ಅವರು ಪ್ರಾಥಮಿಕ ಶಾಲ
ಶಿಕ್ಷಕರನ್ನೂ ಜಿಲ್ಲೆಯ ವಿದ್ಯಾಧಿಕಾರಿಗಳನ್ನೂ ಕರೆಯಿಸಿಕೊಂಡು ಅವ
ಗ್ರಾಮ ಸುಧಾರಣೆಗೆ ಸಂಬಂಧಿಸಿದ ವಿಷಯಗಳನ್ನೂ ಅವನ್ನು ಆಚರಣೆಯ
ತರುವ ದಾರಿಗಳನ್ನೂ ಕಲಿಸುವ ಹೊಸ ವರ್ಗ (Refresher courses
ಗಳನ್ನು ಪ್ರಾರಂಭಿಸಿದರು. ಮತ್ತು ಈ ಮಾರ್ಗದಿಂದ ಅವರಿಗೆ ಗ್ರಾಮಸುಧಾ
ರಣೆಯ ಕಾರ್ಯವನ್ನು ಹೆಚ್ಚು ಹುರುಪಿನಿಂದಲೂ ಹೆಚ್ಚು ಪರಿಣಾಮಕಾ
ಯಾಗಿಯೂ ನಡೆಯಿಸಲು ಯೋಗ್ಯ ಜನರ ಸಮೂಹವೇ ಸಹಾಯಕ್ಕೆ ದೊರೆ
ಅವರ ಕಾರ್ಯಕ್ಕೆ ತುಂಬ ಅನುಕೂಲವಾಯಿತು. ಪಂಜಾಬ ಇಲಾಖೆ
ಬಹುತರ ಎಲ್ಲ ಜಿಲ್ಲೆಗಳಲ್ಲಿ ಈ ತರದ ಹೊಸ ವರ್ಗಗಳನ್ನು (Refresh
courses) ಪ್ರಾರಂಭಿಸಿದರು. ಇಷ್ಟಾದರೂ ಮೆಸರ್ಸ ಸ್ಯಾಂಡರ್ಸನ್ ಮತ್ತ
ಪಾರ್ಕಿನ್‌ಸನ್ ಕಂಪನಿಯವರು ಹಳ್ಳಿಯ ಶಾಲೆಗಳ ಶಿಕ್ಷಕರ ಅಭ್ಯಾಸಕ್ರ
ದಲ್ಲಿ ಗ್ರಾಮಸುಧಾರಣೆಯ ವಿಷಯಗಳಿಗೆ ಪ್ರಾಮುಖ್ಯತೆಯುಳ್ಳ ಹೊಸದೊಂ

ಜನೆಯನ್ನು ತಯಾರಿಸಿಕೊಡುವವರೆಗೂ ಈ ಕಾರ್ಯಕ್ರಮವು ಕಾದಷ್ಟು ಯಶಸ್ವಿಯಾಗಿ ನಡೆಯಲಿಲ್ಲ. ಸಾಂಪ್ರತಕ್ಕೆ ಶಿಕ್ಷಕರ ಟ್ರೇನಿಂಗ್ ಸ್ಥೆಗಳ ಅಭ್ಯಾಸ ಕ್ರಮದಲ್ಲಿ ಈ ಗ್ರಾಮಸುಧಾರಣೆಯ ವಿಷಯಗಳಿಗೆ ತುಂಬ ಪ್ರಾಧಾನ್ಯವುಂಟಾಗಿರುವದು

ಈ ಶಿಕ್ಷಕರ ಟ್ರೇನಿಂಗ್ ಕಾರ್ಯಕ್ರಮದಲ್ಲಿ ಸಹಕಾರ, ಸಾರ್ವಜನಿಕ ರೋಗ್ಯ, ಒಕ್ಕಲತನ ಇವುಗಳಿಗೆ ಸಂಬಂಧಿಸಿದ ವಿಷಯಗಳ ಮೂಲತತ್ವಗಳ ಜ್ಞಾನಕ್ಕೂ ಆ ತತ್ವಗಳ ವ್ಯಾವಹಾರಿಕ ಉಪಯೋಗಕ್ಕೂ ಈ ವಿಷಯಗಳಲ್ಲಿ ತ್ಯಕ್ಷ ಕೆಲಸಮಾಡುವದಕ್ಕೂ ಪ್ರಾಧಾನ್ಯವಿರುವದು. ವಿದ್ಯಾರ್ಥಿಗಳಲ್ಲಿ ಸ್ಪ ಸೊಸಾಯಿಟಿಗಳೂ ರೆಡ್‌ಕ್ರಾಸ ಸೊಸಾಯಿಟಿಗಳೂ ನಿರವೇರಿಸಲ್ಪಟ್ಟರು ವು. ಮತ್ತು ಅವನ್ನು ವಿದ್ಯಾರ್ಥಿಗಳು ಕೇವಲ ಸ್ವಂತ ಅನುಭವ ಉತ್ಸಾಹ ಳಿಂದಲೇ ನಡೆಯಿಸುತ್ತಿರುವರು. ವಿದ್ಯಾರ್ಥಿಗಳನ್ನು ಶಿಕ್ಷಕರು ಸಮೀಪದ ಳ್ಳಿಗಳಿಗೆ ಕರೆದುಕೊಂಡು ಹೋಗಿ ಹಳ್ಳಿಯ ದಾರಿಗಳನ್ನು ಸ್ವಚ್ಛಮಾಡುವದು: ಗಳಿಗೆ ಕಲ್ಲು ಹಾಕಿಸುವದು, ಕಟ್ಟಿ ಕೆಟ್ಟು ಹೋದ ಗಟಾರಗಳನ್ನು ತೋಡಿ ದು ನೀರು ಸರಿಯಾಗಿ ಹರಿದು ಹೋಗುವಂತೆ ಮಾಡುವದು ಗೊಬ್ಬರದ ಗುಣಿಗಳಗನ್ನು ತಯಾರಿಸುವದು, ತಮ್ಮ ಕೈಯಲ್ಲಿಯೇ ಕಸಬರಿಗೆಗಳನ್ನು ಡು ರಸ್ತೆಗಳನ್ನು ಉಡುಗುವದು ಮುಂತಾದ ಕೆಲಸಗಳನ್ನು ಮಾಡಿದರು. ಾಜದ ಅಹಿತಕ್ಕೆ ಕಾರಣವಾದ ಬೇರೆ ಬೇರೆ ವಿಷಯಗಳ ಚಳವಳಿಗಳಲ್ಲಿ ಈ ್ಯಾರ್ಥಿಗಳು ಯಾವ ರೀತಿಯಾಗಿ ಕೆಲಸಮಾಡಬೇಕೆಂಬದನ್ನೂ ಹಳ್ಳಿಗರಲ್ಲಿ ವಿಷಯಗಳಲ್ಲಿ ಹೇಗೆ ಸುಧಾರಣೆ ಮಾಡಬೇಕೆಂಬದನ್ನೂ ಮನೆಗಳ ಕಟ್ಟಡದ ನೆ, ಕುಡಿಯುವದಕ್ಕೆ ಒಳ್ಳೆಯ ನೀರಿನ ಪೂರೈಕೆ, ಮುಂತಾದ ವಿಷಯ ನ್ನೂ ತಿಳಿಯ ಹೇಳಿ ಆರೋಗ್ಯದ ವಿಷಯದಲ್ಲಿ ಜನರಿಗಿರುವ ಅಜ್ಞಾನ ಾದರಗಳನ್ನು ದೂರಮಾಡುವ ಕಾರ್ಯವನ್ನೂ ಈ ವಿದ್ಯಾರ್ಥಿಗಳು ತಾವು ತು ಹಳ್ಳಿಗರಿಗೆ ಕಲಿಸಲಿಕ್ಕೆ ಯೋಗ್ಯರಾಗುವಂತೆ ಮಾಡಲಾಗುವದು.

ಶ್ರಮಜೀವನದ ಮಹತ್ವ—ಈ ಶಿಕ್ಷಕರ ಟ್ರೇನಿಂಗ್ ಕಾರ್ಯಕ್ರಮದಲ್ಲಿ ನ್ನೂ ಒಂದು ಅತಿ ಮಹತ್ವದ ಮಾತಿನ ಸೇರ್ಪಡೆಯಾಗುವದು. ಮುಂದೆ ಿಯಲ್ಲಿ ಶಿಕ್ಷಕರಾಗಿ ಹೋಗಿ ಕೆಲಸಮಾಡಬೇಕಾಗಿರುವ ವಿದ್ಯಾರ್ಥಿಗಳಿಗೆ ಮ ರಿ ದುಡಿದು ಹೊಟ್ಟೆತುಂಬಿಕೊಳ್ಳುವದರಲ್ಲಿ ಗೌರವವೂ ಶಾಲೆಯ ಸವಿಲ್ಲದ ವೇಳೆಯ ಸದುಪಯೋಗವೂ ಕಲಿಸಲ್ಪಡುವದು ಅವಶ್ಯಕವಾಗಿದೆ. ರಲ್ಲಿ ತಾವು ಕೆಲಸಮಾಡುತ್ತಿರುವ ಹಳ್ಳಿಗಳ ನಿವಾಸಿಗಳ ಪ್ರೀತಿಯನ್ನು

ದೊರಕಿಸಿಕೊಳ್ಳುವದನ್ನೂ ಅವರಲ್ಲಿ ಮಾನಮಾನ್ಯತೆಗಳನ್ನು ಹೊಂದುವದ
ಹಳ್ಳಿಯ ಶಿಕ್ಷಕರಿಗೆ ತುಂಬ ಅನುಕೂಲವಾಗುವದು ಒಕ್ಕಲತನ, ತೋ
ಕೆಲಸ, ಹಣ್ಣು ಹೂಗಳನ್ನು ಬೆಳೆಯಿಸುವದು, ದನ ಕುರಿಗಳನ್ನೂ ಕೋಳಿಗಳ
ಸಾಕುವದು, ಮತ್ತೆ ಕೆಲವು ಕೈಗಾರಿಕೆಗಳು ಇವು ಹಳ್ಳಿಯ ಶಾಲೆಗಳ ಶಿಕ್ಷ
ಟ್ರೇನಿಂಗಿನಲ್ಲಿಯ ವ್ಯವಸಾಯ ಶಿಕ್ಷಣದ ವಿಷಯಗಳಾಗಿವೆ. ಅದುದರಿಂದ
ಶಿಕ್ಷಕರು ಟ್ರೇನಿಂಗ್ ಸಂಸ್ಥೆಗಳಲ್ಲಿ (Normal Schools) ರುವಾಗ ತ
ಅರಿವೆ ಅಂಚಡಿಗಳನ್ನು ತಾವೇ ತಯಾರಿಸಿಕೊಳ್ಳುವದು, ದುರಸ್ತಿ ಮಾ
ಕೊಳ್ಳುವದು, ಒಗೆದು ಮಡಿಮಾಡಿಕೊಳ್ಳುವದು, ಅಡುಗೆಮಾಡಿಕೊಳ್ಳುವ
ತಮ್ಮ ಮೇಜು ಖುರ್ಚಿ ಮಂಚ ಮುಂತಾದ ಉಪಕರಣಗಳನ್ನು ರಿಪೇರಿ ಮಾ
ಕೊಳ್ಳುವದು, ಚಿಕ್ಕ ಪುಟ್ಟ ಪಂಜೆ ಮುಂತಾದವುಗಳನ್ನು ನೆಯ್ದುಕೊಳ್ಳುವ
ಹಗ್ಗಗಳನ್ನು ಹೊಸೆಯುವದು, ಪುಸ್ತಕಗಳನ್ನು ಬಾಯಿಂಡ್ ಮಾಡಿಕೊಳ್ಳುವ
ಮುಂತಾದ ತಮ್ಮ ನಿತ್ಯದ ವ್ಯವಹಾರದ ಕೆಲಸಗಳನ್ನು ತಾವೇ ಮಾಡಿಕೊಳ್ಳು
ರೆಂದು ಹೇಳಿದರೆ ತಪ್ಪಾಗದು. ಈ ಶಿಕ್ಷಕರ ಟ್ರೇನಿಂಗ್ ಕ್ರಮದಲ್ಲಿ ಸ್ಕೌಟಿಂಗ
ಮತ್ತು ಪ್ರಥಮ ಚಿಕಿತ್ಸೆಗಳ ವಿಷಯಗಳು ಕೂಡ ಕಲಿಸಲ್ಪಡುವವು.

ಈ ತರದ ಶಿಕ್ಷಣದಿಂದ ಅವರ ಮನಸ್ಸಿನ ಮೇಲಾಗುವ ಪರಿಣಾ
ದಿಂದಲೂ ಶಾರೀರಕ ಕೆಲಸ ಮಾಡುವ ಯೋಗ್ಯತೆಯುಂಟಾಗುವದರಿಂದಲೂ
ಹಳ್ಳಿಯ ಶಾಲೆಗಳ ಶಿಕ್ಷಕರು ಮೊದಲು ಹಳ್ಳಿಗಳಿಂದಲೇ ಬಂದವರಾಗಿರು
ರಿಂದಲೂ ಅವರು ತಿರುಗಿ ಹಳ್ಳಿಗಳಿಗೆ ಹೋದ ಬಳಿಕ ಮತ್ತೆ ಹಳ್ಳಿಗಳ ನಿವಾಸಿ
ಆಗಿ ಬಿಡುವರಲ್ಲದೆ ಹಳ್ಳಿಯ ಜನರಲ್ಲಿ ಸಮ್ಮಿಶ್ರವಾಗಿ ಕಲೆತು ಕೆಲಸಮಾಡಿ
ಉತ್ಕರ್ಷಕ್ಕೆ ಕಾರಣರಾಗುವರು. ಹಳ್ಳಿಗಳ ನಿವಾಸಿಗಳಲ್ಲಿ ಈ ವಿಷಯಗ
ಯೋಗ್ಯ ಸುಧಾರಣೆ ಮಾಡಿ ಅವರ ಪುರೋವೃದ್ಧಿಗೆ ನೆರವಾಗುವರು. ಕ
ಹತ್ತು ಅಥವಾ ತುಸು ಹೆಚ್ಚು ವರ್ಷಗಳ ಅನುಭವದಿಂದ ಈ ಮ
ಚೆನ್ನಾಗಿ ನಿದರ್ಶನಕ್ಕೆ ಬಂದಿರುವದು. ಇವನ್ನು ಮೊಟ್ಟ ಮೊದಲು ಪ್ರಾರಂ
ದವರ ಆಶೆ ಆಕಾಂಕ್ಷೆಗಳು ಚೆನ್ನಾಗಿ ನೆರವೇರಿದವೆಂದು ಹೇಳಲು ಅ
ಅಡ್ಡಿಯಿಲ್ಲ.

ಪ್ರತ್ಯಕ್ಷ ಕೆಲಸ ಮಾಡುವದು— ಟ್ರೇನಿಂಗ್ ಸಂಸ್ಥೆಗಳ ಅಭ
ಕ್ರಮದಲ್ಲಿ ಗ್ರಾಮ ಸುಧಾರಣೆ, ಸಾಮಾಜಿಕ ಕಾರ್ಯಗಳು ಇವುಗ
ಪ್ರಾಧಾನ್ಯವಿರುವದೆಂದು ಮೇಲೆ ಹೇಳಿದೆಯಷ್ಟೇ? ಅಲ್ಲಿ ಒಕ್ಕಲತನ, ಸಾರ್ವಜ

ಕೋಗ್ಯ, ಸಹಕಾರ ಮತ್ತು ಹಳ್ಳಿಯ ಜನರ ಜೀವನ ಅವರ ಸಾಂಪತ್ತಿಕ
ಧಾರಣೆ ಈ ವಿಷಯಗಳ ಮೂಲತತ್ವಗಳಿಗೆ ಸಂಬಂಧಿಸಿದ ವಿಚಾರಗಳನ್ನು
ವ್ಯಾರ್ಥಿಗಳಿಗೆ ಮನನಮಾಡಿಕೊಡುವದಲ್ಲದೆ ಆ ಜ್ಞಾನವನ್ನು ವ್ಯವಹಾರದಲ್ಲಿ
ಗೆ ಉಪಯೋಗಮಾಡಿಕೊಳ್ಳಬೇಕೆಂಬದನ್ನೂ ಅವರಿಗೆ ಕಲಿಸಿಕೊಡುವರು.
ಲೆಗಳಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ತಾತ್ವಿಕ ವಿವೇಚನೆಯನ್ನು ಕಲಿ
ವದಲ್ಲದೆ ಅವರನ್ನು ನೆರೆಯ ಹಳ್ಳಿಗಳಿಗೆ ಕರೆದೊಯ್ದು ಅದನ್ನು ಪ್ರತ್ಯಕ್ಷ
ಚಾರದಲ್ಲಿ ಹೇಗೆ ತರಬೇಕೆಂಬದನ್ನೂ ಕಲಿಸಲಾಗುವದು. ಮಲೇರಿಯಾ,
ಲರಾ, ಮೈಲಿಜೀನೆ, ಪ್ಲೇಗು ಮುಂತಾದ ಸುಂಕುರೋಗಗಳು ನೆರೆಯ ಹಳ್ಳಿ
ಳಲ್ಲಿ ಹಬ್ಬಿದಾಗ ಟ್ರೇನಿಂಗ್ ಸಂಸ್ಥೆಗಳಲ್ಲಿರುವ ಶಿಕ್ಷಕರು ಅಲ್ಲಿಗೆ ಹೋಗಿ
ನೀನುಗಳನ್ನು ಉಪಯೋಗಿಸುವದು, ನೀರಿನಲ್ಲಿ ಕ್ಲೋರೀನ್ ಹಾಕಿ ರೋಗ
ನಕ ಕ್ರಿಮಿಗಳನ್ನು ನಾಶಪಡಿಸುವದು, ವ್ಯಾಕ್ಸಿನೇಶನ್, ಇನಾಕ್ಯುಲೇಶನ್
ಾಡಿಸಿಕೊಂಡು ತಮ್ಮ ಉದಾಹರಣೆಗಳಿಂದ ಹಳ್ಳಿಯ ನಿವಾಸಿಗಳನ್ನು
ೋತ್ಸಾಹಿಸುವದು ಮುಂತಾದ ಉಪಾಯಗಳಿಂದ ಆ ಸುಂಕು ರೋಗಗಳ
ಸಾರವಾಗದಂತೆ ಮಾಡುವದು, ಒಕ್ಕಲತನದ ಕೆಲಸಗಳನ್ನು ಸುಪ್ರಯೋಗ
ಗಿ ಹಳ್ಳಿಗರ ಮುಂದೆ ಇಟ್ಟು ಅವುಗಳ ಮಹತ್ವವನ್ನು ತಿಳಿಯಹೇಳುವದು,
ೂಸ ಹೊಸ ತರದ ಒಕ್ಕಲತನದ ಉಪಕರಣಗಳನ್ನೂ ಅವುಗಳ ಉಪಯೋಗ
ಳನ್ನೂ ತಿಳಿಸಿಕೊಡುವದು, ಸುಧಾರಿಸಿದ ಬೀಜಹಿಡಿಯುವ ಕ್ರಮವನ್ನು ವಿವ
ಸುವದು ಮುಂತಾದ ಕಾರ್ಯಗಳನ್ನು ಹಳ್ಳಿಗಳ ನಿವಾಸಿಗಳಿಗೆ ತಿಳಿಸಿಕೊಡುವ
ಕ್ಕಾಗಿ ವರ್ಷಕ್ಕೊಮ್ಮೆ 'ಒಕ್ಕಲಿಗರ ಸಪ್ತಾಹ'ವೆಂಬ ವಿಶಿಷ್ಟ ದಿನಗಳನ್ನು
ತ್ತುಪಡಿಸಿಕೊಂಡು ಸುತ್ತಲಿನ ಹಳ್ಳಿಗಳ ನಿವಾಸಿಗಳನ್ನು ಕಲೆಹಾಕಿ ಈ
ಯಕ್ಕೆ ಸಂಬಂಧಿಸಿದ ಹಲವು ಮಹತ್ವದ ವಿಚಾರಗಳನ್ನು ಅವರಿಗೆ ಸಪ್ರು
ೀಗವಾಗಿ ತಿಳಿಸಿಕೊಡುವ ಕೆಲಸವನ್ನು ಟ್ರೇನಿಂಗ್ ಸಂಸ್ಥೆಗಳೊಳಗಿನ
ವ್ಯಾರ್ಥಿಗಳೂ ಶಿಕ್ಷಕರೂ ಮಾಡುತ್ತಿರುವರು. ಈ ವಿದ್ಯಾರ್ಥಿ ಶಿಕ್ಷಕರ
ವಿನಿಂದ ಹಳ್ಳಿಗಳಲ್ಲಿಯ ಹೆಣ್ಣುಮಕ್ಕಳ ಹಾಗು ಗಂಡಸರ ಸಹಕಾರೀ ಸಂಘ
ು ನಡೆಯಿಸಲ್ಪಡುವವು. ಹಳ್ಳಿಗಳಲ್ಲಿ ಶಾರೀರಿಕ ಶಿಕ್ಷಣಕ್ಕೆ ಸಂಬಂಧಿಸಿದ
ತರದ ಆಟಗಳ ಯೋಜನೆಯಾಗಿರುವದು. ಮತ್ತು ಈ ಶಿಕ್ಷಕರು ಹಳ್ಳಿಯ
ಡ ಕುಲಕರ್ಣಿಯರ ನೆರವಿನಿಂದ ವರ್ಷಕ್ಕೊಮ್ಮೆ ಇಂಥ ಅನೇಕ ಹಳ್ಳಿಗಳ
ಾಸಿಗಳ ನಡುವೆ ಪಂದ್ಯಾಟಗಳನ್ನು ನೆರವೇರಿಸುವರು. ಮೇಲ್ತರಗತಿಯ
ಜಗಳನ್ನು ಹಿಡಿದಿಡುವದು, ಬಿತ್ತುವ ತತಿಯಲ್ಲಿ ಅವನ್ನು ಬಿತ್ತಿ ಬೆಳೆಯಿಸು
ು, ಟೊಂಗೆಗಳನ್ನು ಕತ್ತರಿಸಿ ಹಚ್ಚಿ ಬೆಳೆಯಿಸುವದು, ಕಲಮು ಮಾಡುವದು

ಮುಂತಾದ ಕೆಲಸಗಳನ್ನೂ ಇವರು ಕಲಿಸುತ್ತಿರುವರು. ಇವರು ಒಳ್ಳೆಯ ತತ್ತಿಗಳನ್ನು ಅಗ್ಗದ ಬೆಲೆಗೆ ಒದಗಿಸಿಕೊಟ್ಟು ಕೋಳಿಗಳನ್ನು ಸಾಕುವ ಸಾಯವನ್ನು ಮಾಡುವದಕ್ಕೂ ಹಳ್ಳಿಗರನ್ನು ಪ್ರೋತ್ಸಾಹಿಸುತ್ತಿರುವರು.

ಪ್ರಬುದ್ಧರ ಶಿಕ್ಷಣ ಶಾಲೆಗಳು – ಈ ವಿದ್ಯಾರ್ಥಿಗಳು ಟ್ರೇನಿಂಗ್ ಸ್ಕೂ ಸಮೀಪದಲ್ಲಿ ವಾಸಿಸುವ ಜನರಲ್ಲಿ ಪ್ರಬುದ್ಧರಾದವರಿಗೆ ಓದುಬರೆಹಗಳನ್ನು ಸುವ ಸಾಲೆಗಳನ್ನು ನಡೆಯಿಸುವರು. ಸಂತೆಯ ದಿನಗಳಲ್ಲಿ ಅಥವಾ ಜಾತ್ರೆ ವೇಳೆಯಲ್ಲಿ ಬಹುಜನರು ನೆರೆದಿರುವಾಗ ಇವರು ಅಲ್ಲಿಗೆ ಹೋಗಿ ಟ್ರೇನಿ ಸ್ಕೂಲಿನ ಶಿಕ್ಷಕರು ರಚಿಸಿ ಪ್ರಕಟಿಸಿರುವ ಚಿಕ್ಕದೊಡ್ಡ ನಾಟಕಗಳನ್ನು ನಯಿಸಿ ತೋರಿಸುವರು. ಒಟ್ಟಿನಮೇಲೆ ಈ ಟ್ರೇನಿಂಗ್ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಗ್ರಾಮಸುಧಾರಣೆಯ ಮೂಲತತ್ವಗಳನ್ನು ತಾತ್ಪಿಕ ಅಭ್ಯಾಸಮಾಡುವದಲ್ಲದೆ ಟ್ರೇನಿಂಗ್ ಸಂಸ್ಥೆಯಲ್ಲಿರುವಾಗಲೇ ಹಳ್ಳಿಗಳಿಗೆ ಈ ತತ್ವಗಳನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ತರುವ ಕಾರ್ಯವನ್ನೂ ಮಾಡು ವರು. ಮತ್ತು ಮುಂದೆ ಇವರು ಹಳ್ಳಿಯ ಶಾಲೆಗಳ ಶಿಕ್ಷಕರಾಗಿ ಹೋದಬಳಿ ಕಾರ್ಯಗಳನ್ನು ಹೀಗೆಯೇ ಮುಂದೆ ಸಾಗಿಸುವರೆಂದು ತಿಳಿಯಲ್ಪಡು ಅಲ್ಲದೆ ಈ ಬಗೆಯ ಕಾರ್ಯಗಳಿಂದ ಅವರು ಕಲಿಯುವ ವಿಷಯಗಳ ತಾ ವಿವೇಚನೆ ಅವುಗಳ ವ್ಯಾವಹಾರಿಕ ಉಪಯೋಗ ಇವೆರಡೂ ಅವರಿಗೆ ಚೆ ಅವಗತವಾಗುವದು; ಅಲ್ಲದೆ ಮುಂದೆ ಪ್ರತ್ಯಕ್ಷ ಕಾರ್ಯಾರಂಭಮಾಡಿದಾಗ ಬಹುದಾದ ಅಡಚಣೆಗಳನ್ನು ತಿಳಿದುಕೊಳ್ಳಲಿಕ್ಕೂ ಅವುಗಳ ನಿವಾರಣೋಪ ಗಳನ್ನು ಕಲ್ಪಿಸಿಕೊಳ್ಳಲಿಕ್ಕೂ ಇದರಿಂದ ತುಂಬಾ ಸಹಾಯವಾಗುವದು. ಮೆ ಗತಿಯ ಶಾಲೆಗಳಲ್ಲಿಯ ವಿದ್ಯಾರ್ಥಿಗಳಂತೆ ಪ್ರಾಥಮಿಕ ಹಾಗು ಮಾಧ್ಯ ಶಾಲೆಗಳ ವಿದ್ಯಾರ್ಥಿಗಳು ಈಬಗೆಯ ಕಾರ್ಯಗಳನ್ನು ಮಾಡಲು ಸಾಧ ವೆಂಬದಂತೂ ಸಹಜವೇ ಸರಿ. ಆದರೂ ಅವರು ಗುಂಪುಗುಂಪಾಗಿ ಮೆ ಗಳನ್ನು ಹೊರಡಿಸಿ ಹಾಡುತ್ತ ಹಿರುಗಾಡಿ ಜನರಲ್ಲಿ ಆರೋಗ್ಯವಿಷಯಕ ವಿದ್ಯಾವಿಷಯಕ ವಿಚಾರಗಳನ್ನು ಪ್ರಸಾರಮಾಡಲು ನೆರವಾಗುತ್ತಿರುವರು

ವಿದ್ಯಾರ್ಥಿಗಳ ನಾಟಕ ಸಂಸ್ಥೆಗಳು—ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿ ನಾಟಕಸಂಸ್ಥೆಗಳಿರುವವು. ಈ ಸಂಸ್ಥೆಗಳು ಆಡುವ ಚಿಕ್ಕದೊಡ್ಡ ನಾಟಕಗ ಜನರಲ್ಲಿ ವಿದ್ಯಾಪ್ರಸಾರವಾಗುವದಲ್ಲದೆ ಇವುಗಳಿಂದ ಜನರಿಗೆ ತಾತ್ಕಾಲಿಕ ಮ ರಂಜನೆಯೂ ಆಗುವದು. ಈ ದೃಷ್ಟಿಯಲ್ಲಿ ಇವು ತುಂಬ ಪರಿಣಾಮಕಾರಿ ರುವವು. ಈ ಬಾಲಕರು ಹಳ್ಳಿಗಳಲ್ಲಿ ಸಂಚಾರಮಾಡಿ ಕ್ವೀನೀನ್ ಪೋಟಾಸಿಯ

ಮಾಂಗೆನೇಟ ಮುಂತಾದವುಗಳನ್ನು ಹಂಚುವ ಕೆಲಸವನ್ನು ಮಾಡುವರು. ಶಾಲೆಯ ಆವಾರದಲ್ಲಿ ಸ್ಥಳದ ಅನುಕೂಲತೆಯಿದ್ದರೆ ಹೂದೋಟವನ್ನು ಮಾಡುವರು. ಆ ತೋಟಗಳಲ್ಲಿ ಅನೇಕ ತರದ ಅಡವಿಯ ಹೂಗಿಡವನ್ನು ನಿಯತಕಾಲಿಕವಾಗಿ ಬೆಳೆಯುವ ಹೂವಿನ ಗಿಡಬಳ್ಳಿಗಳನ್ನೂ ಬೆಳೆಯಿಸುವರು. ಹಲಕೆಲವು ಶಾಲೆಗಳಲ್ಲಿ ಬುಕ್ ಬಾಯಿಂಡಿಂಗ್, ಮಶಿಮಾಡುವದು, ಕಾಗದ ಮಾಡುವದು ಮುಂತಾದ ಚಿಕ್ಕಪುಟ್ಟ ವ್ಯವಸಾಯಗಳನ್ನು ಕಲಿಸುವ ಏರ್ಪಾಟೂ ಇರುವದು. ಇಂಥ ಹಳ್ಳಿಗಳಲ್ಲಿ ಈ ವ್ಯವಸಾಯಗಳು ತುಂಬ ಸುಲಭವಾಗಿರುವವು.

ಹಳ್ಳಿಯ ಶಾಲೆಗಳ ಶಿಕ್ಷಕರು ಆಟನೋಟಗಳು ಮೊದಲಾದವುಗಳ ನಿಮಿತ್ತವಾಗಿ ಹಳ್ಳಿಗಳೊಳಗಿನ ತರುಣರೊಡನೆ ಕೂಡಿ ನಡೆಯುವರು. ಮತ್ತು ಜೀವನದ ಸುಧಾರಣೆ, ವಾಚನಾಲಯಗಳ ಯೋಜನೆ, ಆಯಾ ಜನರ ವಿಷಯಕ ಸುಖದುಃಖಗಳು, ಅನುವು ಆಪತ್ತುಗಳು ಇವುಗಳಲ್ಲಿ ಒಂದರ ಮತ್ತು ಅನೇಕ ವಿಷಯಗಳಮೂಲಕ ಊರ ಪ್ರಬುದ್ಧ ಜನರಲ್ಲಿ ಬಳಕೆಮಾಡಿಕೊಳ್ಳುವರು.

ಹಳ್ಳಿಯ ಕೇಂದ್ರಗಳು— ಸುತ್ತುಮುತ್ತಲಿನ ನಾಲ್ಕೈಂಟುಹಳ್ಳಿಗಳ ನಡುವೆ ಚಿಕ್ಕ ಹೈಸ್ಕೂಲಿನ ಅಥವಾ ದೊಡ್ಡ ಪ್ರಾಥಮಿಕ ಶಾಲೆಗಳ ಶಿಕ್ಷಕರು ನಡೆಸಬಹುದಾದ ಗ್ರಾಮಸುಧಾರಣೆಯ ಕಾರ್ಯಗಳನ್ನು ಇಂಥ ಕೇಂದ್ರಗಳಲ್ಲಿ ನಡೆಸಲು ತುಂಬಾ ಅನುಕೂಲವಿರುವದು. ಇಂಥ ಶಾಲೆಗಳಲ್ಲಿ ಹೆಚ್ಚು ಜನ ಕಲಿಯುವದರಿಂದಲೂ ಪ್ರಬುದ್ಧ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿಗೆ ಇರುವದರಿಂದಲೂ ಇವರಿಗೆ ಈ ಬಗೆಯ ಗ್ರಾಮಸುಧಾರಣೆಯ ಕಾರ್ಯಗಳನ್ನು ನೆರವೇರಿಸಲು ಚಿಕ್ಕಹಳ್ಳಿಯ ಶಾಲೆಗಳ ಶಿಕ್ಷಕರಿಗಿಂತಲೂ ಹೆಚ್ಚಾಗಿ ಅನುಕೂಲವಿರುವದನ್ನು ಹೇಳುವಕಾರಣವಿಲ್ಲ. ಆದ್ದರಿಂದ ಇಂಥ ಶಾಲೆಗಳು ತಮ್ಮ ಹಳ್ಳಿಯೂ ನೆರೆಯ ಹಳ್ಳಿಗಳಲ್ಲಿಯೂ ಮೇಲೆ ಹೇಳಿದಂಥ ಕಾರ್ಯಗಳನ್ನು ಹೆಚ್ಚು ಪ್ರಮಾಣದಿಂದಲೂ ಹೆಚ್ಚು ಯಶಸ್ವಿಯಾಗಿಯೂ ಮಾಡುತ್ತಿರುವವು. ಇದಕ್ಕೆ ಸಂಬಂಧಿಸಿದ ಪ್ರಚಾರ ಕಾರ್ಯಗಳನ್ನು ಮೆರವಣಿಗೆ, ಚಿಕ್ಕದೊಡ್ಡ ನಾಟಕಗಳನ್ನು ಅಭಿನಯಿಸುವದು, ಗೋಡೆಗಳಿಗೆ ದೊಡ್ಡದೊಡ್ಡ ಪಟಗಳನ್ನು ಅಂಟಿಸುವದು ಮುಂತಾದ ಸಾಧನಗಳ ಮೂಲಕ ನೆರವೇರಿಸುವರು. ಮ್ಯಾಜಿಕ್ ಲ್ಯಾಂಟರ್ನದ ಸಹಾಯದಿಂದ ಚಿತ್ರಗಳನ್ನು ತೋರಿಸಿ ಉಪನ್ಯಾಸಗಳನ್ನು ಮಾಡುವರು. ಸಂಕುರೋಗಗಳು ಹಬ್ಬಿದಾಗ ಜನರಿಗೆ ಉಪದೇಶಮಾಡಿ ಇನಾಕ್ಯುಲೇಶನ್

ಮುಂತಾದ ಉಪಾಯಗಳಿಂದ ಅವು ಹಬ್ಬದಂತೆ ಮಾಡಲು ಯತ್ನಿಸುವರು. ಜನರನ್ನು ಈ ಕಾರ್ಯಕ್ಕೆ ಉತ್ತೇಜನಗೊಳಿಸುವರು. ಹಳ್ಳಿಗಳಲ್ಲಿಯ ಗೊಬ್ಬರ ಕುಣಿಗಳು, ಮಲಮೂತ್ರವಿಸರ್ಜನೆಮಾಡುವ ತಗ್ಗುಗಳು ಮುಂತಾದವುಗಳನ್ನು ತೋಡಿಕೊಡುವ ಕೆಲಸಗಳನ್ನೂ ಕೂಡ ಅನೇಕಸಾರೆ ಇಂಥ ಶಾಲೆಗಳ ವಿದ್ಯಾರ್ಥಿಗಳು ಮಾಡುವರು. ಮನೆಗಳಿಗೆ ಹೊಗೆಯ ಕೆಂಡಿಗಳನ್ನು ಹಚ್ಚುವದು, ಬೀದಿಗಳನ್ನು ಸ್ವಚ್ಛವಾಗಿಡುವದು, ಮಾರ್ಗಗಳನ್ನು ಕಲ್ಲುಹಾಸಿ ಗಟ್ಟಮಾಡುವದು, ಸಾರ್ವಜನಿಕ ಬಾವಿಗಳಿಗೆ ಕಟ್ಟೆಕಟ್ಟಿ ಸುತ್ತಲೂ ಬಿದ್ದ ನೀರು ಹರಿದುಹೋಗುವಂತೆ ಮಾಡುವದು ಇವೇ ಮೊದಲಾದ ಕೆಲಸಗಳನ್ನೂ ಇವರು ಮಾಡುವರು. ಶಾಲೆಗಳೊಳಗಿನ ಸ್ಕೌಟ ಟ್ರೂಪಿನವರು ಊರಸಂತೆ ಜಾತ್ರೆಗಳ ವೇಳೆಯಲ್ಲಿ ಜನರಿಗೆ ಬಗೆಬಗೆಯಿಂದ ನೆರವಾಗುವರು. ನಾನಾತರದ ಆಟನೋಟಗಳ ಮೂಲಕ ಬೇರೆಬೇರೆ ಹಳ್ಳಿಗಳ ಜನರಲ್ಲಿ ಬಳಕೆಯುಂಟಾಗಿ ಪರಸ್ಪರ ಪ್ರೀತಿವಿಶ್ವಾಸಗಳು ಬೆಳೆಯುವಂತೆ ಮಾಡುವ ಕಾರ್ಯವನ್ನೂ ಈ ಶಿಕ್ಷಕರು ಕೈಕೊಂಡಿರುವರು. ಈ ಶಿಕ್ಷಕರ ಪ್ರಯತ್ನದಿಂದಲೇ ಕುಸ್ತಿಗಳು ಈ ಭಾಗದಲ್ಲಿ ಹೆಚ್ಚಾಗಿ ಪ್ರಚಾರಕ್ಕೆ ಬಂದು ತುಂಬಾ ಜನಪ್ರಿಯವಾಗಿವೆ. ಅನೇಕ ತರದ ದೇಶೀಯ ಆಟಗಳ ಮಾವಲಿಗಳನ್ನು ರಚಿಸಿ ಪ್ರಕಟಿಸಿ ಅವನ್ನು ಜನತೆಯಲ್ಲಿ ಪ್ರಚಾರಮಾಡುವ ಕಾರ್ಯವನ್ನು ಈ ಶಿಕ್ಷಕರು ಕೈಕೊಂಡಿರುವರು.

ತೋಟದ ಕೆಲಸ— ಈ ಪ್ರಾಂತದೊಳಗಿನ ಅನೇಕ ಶಾಲೆಗಳಿಗೆ ಹಸಿ ತೋಟವಾಗಲಿ ಹೊಲವಾಗಲಿ ಇರುವದು. ಇವು ಹಳ್ಳಿಯ ನಿವಾಸಿಗಳ ಮಾದರಿಯವಾಗಿರುವವು. ಹಳ್ಳಿಯ ಒಕ್ಕಲಿಗರನ್ನು ಕರೆಯಿಸಿ ಅವರಿಗೆ ಆಧುನಿಕ ತನದ ಆಧುನಿಕ ಸಾಧನಗಳ ಉಪಯೋಗದಿಂದಲೂ ಒಳ್ಳೆಯ ಬೀಜಗಳ ಬಿತ್ತುವದರಿಂದಲೂ ಆಗುವ ಸತ್ಪರಿಣಾಮಗಳನ್ನು ತೋರಿಸುವರು. ಶಾಲೆಯ ತೋಟಗಳಲ್ಲಿ ಬೆಳೆಯಿಸುವ ಕಾಯಿಪಲ್ಲೆಗಳು ಹಣ್ಣುಗಳು ಇವು ಅಲ್ಲಿಯ ಜನ ವ್ಯಾಪಾರದಾರರ ಲಕ್ಷ್ಯವನ್ನು ತಮ್ಮಕಡೆಗೆ ಎಳೆದುಕೊಂಡಿರುವವು. ಶಾಲೆಗಳಲ್ಲಿ ಗಿಡಗಳನ್ನು ಬೆಳೆಯಿಸುವ ಕ್ರಮವನ್ನು ನೋಡಿಕೊಂಡು ಹಳ್ಳಿಯ ನಿವಾಸಿಗಳು ಈ ವಿಷಯದಲ್ಲಿ ತುಂಬ ಅಭಿರುಚಿಯುಂಟಾಗಿರುವದು. ಈ ಕಾರ್ಯಕ್ಕೆ ಉತ್ತೇಜನ ದೊರೆಯಲೆಂದು ಈಗ ಅನೇಕ ಜಿಲ್ಲೆಗಳಲ್ಲಿ ದೊಡ್ಡಪ್ರಮಾಣದಿಂದ ತರಕಾರಿ ಕ್ಕೊಮ್ಮೆ ಹೂವಿನ ಪ್ರದರ್ಶನ (Flower show) ಗಳನ್ನು ನೆರವೇರಿಸುವ ರೂಢಿಯುಂಟಾಗಿರುವದು. ಮುಲ್ತಾನ್ ಡಿವಿಜನ್ನಿನಲ್ಲಿ ಪ್ರತಿಮನೆಯ ಮುಂದೆ ಚಿಕ್ಕದೊಂದು ತೋಟವನ್ನು ಮಾಡಿಕೊಳ್ಳುವ ರೂಢಿಯು ಬಳಕೆಗೆ ಬಂದಿರುವದು.

ಹಳ್ಳಿಯ ವಿದ್ಯಾರ್ಥಿಗಳ ಸಂಘಗಳನ್ನು ಸ್ಥಾಪಿಸುವದರಮೂಲಕ ಊರ ನವರಿಗೂ ವಿದ್ಯಾರ್ಥಿಗಳಿಗೂ ಪರಸ್ಪರ ಬಳಕೆಯುಂಟಾಗಲು ಅನುಕೂಲವಾಗಿರು ದು. ಶಾಲೆಗಳಲ್ಲಿ 'ಪಾಲಕರ ದಿನ' (Parents day) ವನ್ನು ಆಚರಿಸುವದ ನಲೂ ಈ ಕಾರ್ಯಕ್ಕೆ ಸಹಾಯವಾಗುವದು. ಅನೇಕ ಶಾಲೆಗಳಲ್ಲಿ ವಾಚನಾ ಯಗಳಿರುವವು. ಅವುಗಳಲ್ಲಿ ಸರಕಾರದಿಂದ ದೊರೆಯುವ ಪುಸ್ತಕ ಪತ್ರಿಕೆಗಳ ಗ್ರಹವಿರುವದು. ಅವನ್ನು ಹಳ್ಳಿಯ ನಿವಾಸಿಗಳು ಉಪಯೋಗಿಸಿಕೊಳ್ಳು ವರು. ಓದುಬರೆಹಬಲ್ಲ ಅಲ್ಲಿಯ ಹಳ್ಳಿಯ ನಿವಾಸಿಗಳು ಇವುಗಳಿಂದ ಪುಸ್ತಕ ಕೆಗಳನ್ನು ಮನೆಗೆಒಯ್ದು ಓದಿ ತಿರುಗಿ ತಂದುಕೊಡುವರು. ಶಾಲೆಗಳಲ್ಲಿ ಣಪುಣ್ಯಕಥೆಗಳು, ಕೀರ್ತನೆಗಳು, ಲಾವಣಿಹಾಡು ಮುಂತಾದವು ಗುವವು. ಅವುಗಳಮೂಲಕ ಜನರಲ್ಲಿ ಧರ್ಮಪ್ರಸಾರಕ್ಕೂ ನೀತಿಯ ಬೆಳೆ ಗೆಗೂ ಸಹಾಯವಾಗುವದು.

ಪ್ರಾಥಮಿಕ ಶಾಲೆಗಳಲ್ಲಿ ನಿಬಂಧ ಶಿಕ್ಷಣ



ನಿಬಂಧ ಶಿಕ್ಷಣವು ಭಾಷಾವಿಷಯದ ಒಂದು ಮುಖ್ಯಾಂಗವಾಗಿರುವದು. ಷಾವಿಷಯಗಳ ಶಿಕ್ಷಣದಿಂದ ಬಾಲಕರ ಭಾಷೆ ಒಳ್ಳೆಯದಾಗಬೇಕೆಂಬದು ಬ್ಯೋದ್ದೇಶ್ಯವಷ್ಟೇ. ವ್ಯಾಕರಣ, ಪದ್ಯ ಮುಂತಾದ ವಿಷಯಗಳು ಅಪ್ರತ್ಯಕ್ಷ ಗಿ ಭಾಷಾಸುಧಾರಣೆಗೆ ಸಹಾಯಕವಾಗುವುವು; ಆದರೆ ನಿಬಂಧ ಶಿಕ್ಷಣವು ತ್ಯಕ್ಷವಾಗಿ ಭಾಷಾಸುಧಾರಣೆಗೆ ಸಹಾಯಕವು. ನಿಬಂಧದ ಎರಡು ಅಂಗಗಳಲ್ಲಿ ದು ಅಂಗವು ವಿಚಾರಶಕ್ತಿ, ಕಲ್ಪನಾಶಕ್ತಿ ಮೊದಲಾದವುಗಳನ್ನು ಬೆಳೆಸುವುದು; ರೆ ಇನ್ನೊಂದು ಅಂಗವು ಭಾಷೆಯನ್ನು ತಿದ್ದುವದು.

ನಿಬಂಧವು ಭಾಷಾವಿಷಯಗಳಲ್ಲಿ ಒಂದು ಮುಖ್ಯ ವಿಷಯವಾಗಿದ್ದರೂ ಟೆಗಳಲ್ಲಿ ಈಗ ಇವಕ್ಕೆ ಕೊಡಬೇಕಾದಷ್ಟು ಗಮನವು ಕೊಡಲ್ಪಡುವುದಿಲ್ಲ; ತ್ತು ನಿಬಂಧ ಶಿಕ್ಷಣದ ಆರಂಭವು ಬಾಲಕರ ವರ್ಗದಿಂದ ಆಗದೆ, ೫ನೆಯ ುತ್ತಿಯಿಂದ ಪತ್ರ ಬರಹದ ರೂಪವಾಗಿ ಆಗುವುದು. ದೊಡ್ಡ ದೊಡ್ಡ ವಿಷಯ ಮೇಲೆ ನಿಬಂಧಗಳನ್ನು ಬರೆಯುವುದಕ್ಕೆ ಬಾಲಕರಿಗೆ ಬರಬೇಕೆಂಬುದೇ ಈಗ

ನಿಬಂಧಶಿಕ್ಷಣದ ಉದ್ದೇಶ್ಯವೆಂದು ಇಟ್ಟುಕೊಂಡಂತೆ ತೋರುತ್ತ
ರಿಂದಲೇ ನಿಬಂಧಗಳಿಂದರೆ ಪ್ರವಾಸ, ಮಹತ್ವಾಕಾಂಕ್ಷೆ, ಮೊದಲಾದುವು, ಮು
ವಾದುವುಗಳೆಂಬ ತಿಳಿವಳಿಕೆಯೂ ನೆಲೆಸಿರುವಂತೆ ಕಾಣುವುದು. ಈ ತಿಳಿವ
ಯಿರುವುದರಿಂದಲೇ ಇಂತಹ ವಿಷಯಗಳನ್ನು ಕುರಿತು ಬರೆಯುವುದು ಹಸಿ
ಇಯತ್ತೆಗಿಂತ ಮೊದಲಿನ ಇಯತ್ತೆಗಳ ಬಾಲಕರಿಗೆ ಸಾಧ್ಯವಲ್ಲವೆಂಬ ವಿಚಾರವಿ
ಆ ಇಯತ್ತೆಗೆ ಆರಂಭವಾಡುವಂತೆ ಅಭ್ಯಾಸಪತ್ರಿಕೆಯೂ ಹೇಳುವುದು.

ಆದರೆ ಕೆಲವು ವರ್ಷಗಳಿಂದೀಚೆಗೆ ಈ ವಿಚಾರದಲ್ಲಿ ಪರಿವರ್ತನೆಯಾ
ನಿಬಂಧ ಶಿಕ್ಷಣದ ಉದ್ದೇಶ್ಯವು ಬಾಲಕರು ನಿಬಂಧಕಾರರೇ ಆಗಬೇಕೆಂಬ
ಮುಖ್ಯವಲ್ಲವೆಂಬುದೂ, ಬಾಲಕರು ತಮ್ಮ ವಿಚಾರಗಳನ್ನು ಭಾಷೆಯಿಂ
ಭಾಷಣರೂಪವಾಗಿ ಇಲ್ಲವೆ ಲೇಖನರೂಪವಾಗಿ—ಪ್ರಕಟಿಸಲು ಸಮರ್ಥ
ಬೇಕೆಂಬುದೇ ಉದ್ದೇಶ್ಯವೆಂಬುದೂ ಈಗ ಗೊತ್ತಾದ ಮಾತು. ಈ ಮೆ
ಉದ್ದೇಶ್ಯದಲ್ಲಿ ಪರಿವರ್ತನೆಯುಂಟಾಗಲು ಅದಕ್ಕೆ ಅನುಸಾರವಾಗಿ ವಿಷಯ
ವಿಚಾರದಲ್ಲಿಯೂ ಪರಿವರ್ತನೆಯುಂಟಾಯಿತು. ಇದರಿಂದ ನಿಬಂಧ ಶಿ
ವನ್ನಾರಂಭಿಸುವ ಕಾಲವಿಚಾರದಲ್ಲಿಯೂ ಪರಿವರ್ತನೆಯುಂಟಾಗಿ ಬಾ
ವರ್ಗದಿಂದಲೇ ಈ ವಿಷಯವನ್ನಾರಂಭಿಸಬೇಕೆಂದು ಗೊತ್ತುಮಾಡಲ್ಪಟ್ಟಿರು

ಈ ವಿಚಾರ ಪರಿವರ್ತನೆಯನ್ನನುಸರಿಸಿ ಕೆಲವು ಸಂಸ್ಥೆಗಳ ಸಾಲೆಗಳಲ್ಲಿ
ವರ್ಷಗಳ ಮುಂಚೆಯೇ ಬಾಲಕವರ್ಗದಿಂದ ಈ ವಿಷಯದ ಶಿಕ್ಷಣವನ್ನಾರಂಭಿ
ಕ್ರಮವು ನಡೆದುಬಂದಿದೆ. ಧಾರವಾಡದ ಹೆಣ್ಣುಮಕ್ಕಳ ಟ್ರೇ. ಕಾಲೇಜಿನ
ಸ್ಕೂಲಿನಲ್ಲಿ ಈ ಪ್ರಯೋಗವು ೪೫ ವರ್ಷಗಳ ಪೂರ್ವದಲ್ಲಿಯೇ ನಡೆದಿದ್ದು
ಸಫಲವಾಗಿದೆಯೆಂದು ತಿಳಿಯುವುದು.

ಸರ್ಕಾರದವರು ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಕೆಲವು
ಸೂಚನೆಗಳನ್ನು ಬೇಗನೆ ಮಾಡುವರೆಂದು ಕೇಳುತ್ತೇವೆ. ಹಾಗೆ ಅಭ್ಯಾಸ
ಯಲ್ಲಿ ಹೆಚ್ಚುಕಡಿಮೆಗಳಾದಲ್ಲಿ ನಿಬಂಧಶಿಕ್ಷಣವು ಬಾಲಕರ ವರ್ಗದಿಂದಲೇ
ಆಗುವುದನ್ನು ನಿರೀಕ್ಷಿಸಬಹುದೆಂದು ತೋರುತ್ತದೆ.

ಅಭ್ಯಾಸಪತ್ರಿಕೆಯ ಒತ್ತಾಯವು ಬಾರದಿದ್ದರೂ ಬಾಲಕರ ಹಿತವನ್ನಪೇಕ್ಷಿ
ಶಿಕ್ಷಕರಿಗೆ ಈ ವಿಷಯದ ಶಿಕ್ಷಣವನ್ನು ಬಾಲಕರ ವರ್ಗದಿಂದಲೇ ಆರಂಭಿಸು
ಪ್ರೇರಣೆ ದೊರೆಯಬೇಕೆಂಬ ಉದ್ದೇಶದಿಂದ ನಿಬಂಧ ಶಿಕ್ಷಣ ವಿಷಯವಾಗಿ
ವಿಚಾರಗಳನ್ನು ಇಲ್ಲಿ ಬರೆಯಬೇಕೆಂದಿದ್ದೇನೆ.

ನಿಬಂಧವೆಂದರೇನು ?—'ನಿ' ಉಪಸರ್ಗಪೂರ್ವಕವಾದ 'ಬಂಧ್' ಧಾತು ಮುಂದೆ 'ಅ' ಪ್ರತ್ಯಯವು ಸೇರಿ ಹುಟ್ಟಿದ (ನಿ+ಬಂಧ್+ಅ) ನಿಬಂಧ ಶಬ್ದವು ಗಟ್ಟಿಗಿ ಕಟ್ಟುವುದು, ರಚಿಸುವುದು, ವಾಕ್ಯರೂಪವಾಗಿ ರಚನೆಮಾಡುವುದು, ವಿಚಾರಗಳನ್ನು ವಾಕ್ಯರೂಪವಾಗಿ ಚೆನ್ನಾಗಿ ಜೋಡಿಸುವುದು, ಇಲ್ಲವೆ ಟ್ಟಿಸುವುದು ಎಂಬ ಅರ್ಥವನ್ನು ಹೇಳುವುದು. ಎಂದರೆ ಮನುಷ್ಯನು ತನ್ನ ರಗಳನ್ನು ವಾಕ್ಯರೂಪವಾಗಿ ಹೊಂದಿಸಿ ಭಾಷಣರೂಪದಿಂದಾಗಲಿ, ಲೇಖನ ದಿಂದಾಗಲಿ ಪ್ರಕಟಿಸುವುದು ನಿಬಂಧವೆನಿಸುವುದು.

ನಿಬಂಧ ಪ್ರಕಾರಗಳು— ಮೇಲೆ ಹೇಳಿದ ಮೇರೆಗೆ ನಿಬಂಧವು ಭಾಷಣ ರವಾದ ನಿಬಂಧವೆಂದೂ ಲೇಖನರೂಪವಾದ ನಿಬಂಧವೆಂದೂ ಎರಡು ವಿಧ ರುವುದು ಇವನ್ನೇ ಶ್ರಾವ್ಯ, ಲೇಖ್ಯ ಎಂದು ಹೇಳಬಹುದು. ವಾಡಿಕೆಯಲ್ಲಿ ಖನರೂಪವಾದ ನಿಬಂಧವನ್ನೇ ನಿಬಂಧವೆಂದೂ, ಲೇಖವೆಂದೂ, ಪ್ರಬಂಧ ದೂ ಹೇಳುವರು. ಭಾಷಣರೂಪವಾದ ನಿಬಂಧವನ್ನು ಉಪನ್ಯಾಸವೆಂದೂ ಖ್ಯಾನವೆಂದೂ ಪ್ರವಚನವೆಂದೂ ಹೇಳುವುದುಂಟು. ಲೇಖನರೂಪವಾದ ಬಂಧವನ್ನು **ಲೇಖನ ನಿಬಂಧ**ವೆಂದೂ, ಭಾಷಣರೂಪವಾದ ನಿಬಂಧವನ್ನು **ವಾಚನಿಕ ನಿಬಂಧ**ವೆಂದೂ ಹೇಳುವುದುಂಟು.

ವಾಚನಿಕ ನಿಬಂಧವು ಧ್ವನಿ ಕೇಳಿಸುವಷ್ಟು ಪ್ರದೇಶದೊಳಗಿನ ಜನರನ್ನು ತ್ರ ಸಂಬಂಧಿಸುವುದು ; ಲೇಖನ ನಿಬಂಧವು ಭಾಷೆಯನ್ನು ಓದಬಲ್ಲ ಎಲ್ಲ ರನ್ನೂ ಸಂಬಂಧಿಸುವುದು. ವಾಚನಿಕ ನಿಬಂಧವು ಹೆಚ್ಚು ವಿವರವಾಗಿರುವು ಟು ; ಲೇಖನ ನಿಬಂಧವು ಸಂಕ್ಷೇಪದ ಒಲವುಳ್ಳದ್ದಿರುವುದು. ವಾಚನಿಕ ಬಂಧವು ಭಾವೋದ್ರೇಕವನ್ನುಂಟುಮಾಡುವಲ್ಲಿ ಹೆಚ್ಚಿಗೆ ಸಮರ್ಥವಾದುದು. ಖನ ನಿಬಂಧವು ಯಥಾರ್ಥ ಜ್ಞಾನವನ್ನು ಒಳಗೊಳ್ಳುವಲ್ಲಿ ಹೆಚ್ಚು ಎಚ್ಚರ ಳ್ಳುವುದು. ವಾಚನಿಕ ನಿಬಂಧವು ತಾತ್ಕಾಲಿಕ ವಿಷಯಗಳನ್ನು ಪ್ರತಿಪಾದಿಸಲು ರಡುವುದು.

ನಿಬಂಧವು ಏತಕ್ಕೆ ?—ನಿಬಂಧರಚನೆಗೆ ಲೋಕೋಪಕಾರವೇ ಪ್ರಯೋ ವು. ನಿಬಂಧವು ಒಬ್ಬನ ವಿಚಾರಗಳನ್ನು ಪರರಲ್ಲಿ ಉಂಟುಮಾಡಿ ಅವರನ್ನು ಮನವರಿಯಿಸುವುದು. ಪರರಲ್ಲಿ ಜ್ಞಾನವನ್ನುಂಟುಮಾಡುವುದು, ಅವರನ್ನು ೃತಿಗೊಳಿಸುವುದು ; ಅವರಲ್ಲಿ ಆವೇಶವನ್ನುಂಟುಮಾಡುವುದು. ನಿಬಂಧದಿಂದ ನುಷ್ಯನು ಕಾರ್ಯಾಭಿಮುಖನಾಗುವನು. ಲೋಕದ ಪರಿಚಯಕ್ಕೂ ನಿಬಂಧವು ಾಯಕವಾಗಿರುವುದು. ನಿಬಂಧವು ಆನಂದಸಾಮಗ್ರಿಯೂ ಆಹುದು.

ಈ ಸಂದರ್ಭದಲ್ಲಿ ನಾವು ನಿಬಂಧವೆಂದರೆ ಶಾಲೆಗಳಲ್ಲಿ ಬಾಲಕರು ಬರೆಯು ಇಲ್ಲವೆ ಅವರು ಭಾಷಿಸುವ ನಿಬಂಧಗಳನ್ನೇ ಕಣ್ಣಿದಿರಿಗೆ ತಂದುಕೊಳ್ಳಬಾರದು ಅವು ಮೇಲೆ ಹೇಳಿದ ಪ್ರಯೋಜನಗಳನ್ನು ಪೂರೈಸಲಾರವು, ಅವು ನಿಜವಾ ನಿಬಂಧಗಳನ್ನು ರಚಿಸುವ ಶಕ್ತಿಯನ್ನು ಸಂಪಾದಿಸುವ ಸಾಧನವು, ಅಭ್ಯಾಸವ್ಯ.

ನಿಬಂಧ-ಗ್ರಂಥ ಇವುಗಳ ಭೇದ—ಲೇಖನ ನಿಬಂಧಕ್ಕೂ ಗ್ರಂಥಕ್ಕೂ ನಿಷ್ಕ ಭೇದವಿಲ್ಲದಿದ್ದರೂ ಗ್ರಂಥವು ಒಂದು ವಿಷಯದ ಸಮಗ್ರತೆಯನ್ನನುಲಕ್ಷಿಸಿರುವು ನಿಬಂಧವು ಅನುಲಕ್ಷಿಸುವುದಿಲ್ಲ ; ನಿಬಂಧವು ಒಂದು ವಿಷಯವನ್ನು ಅಸಮಗ್ರವಾ ಇಲ್ಲವೆ ಒಂದು ವಿಷಯದ ಒಂದು ಭಾಗವನ್ನು ಸಮಗ್ರವಾಗಿ ಚರ್ಚಿಸುವುದೆಂ ತಿಳಿಯಬಹುದು. ನಿಬಂಧವು ಹಲವೆಡೆಯಲ್ಲಿ ತಾತ್ಕಾಲಿಕ ವಿಷಯಗಳನ್ನು, ಕ್ಷ ಹೊಸದಾಗಿ ಕಂಡುಹಿಡಿದ ವಿಷಯಗಳನ್ನು, ಇಲ್ಲವೆ ಕಾಲೋಚಿತ ವಿಷಯಗ ಹಿಡಿದು ಹೊರಟಿರುವುದೆಂಬದನ್ನು ನಾವು ಕಾಣಬಹುದು. ಗ್ರಂಥವು ನಿಜ ವಿಷಯಗಳನ್ನು ಪ್ರತಿಪಾದಿಸುವುದು ; ಆದರೆ ನಿಬಂಧದ ವಿಷಯವು ಒಪ್ಪೊ ಹಸಿಬಿಸಿಯಾಗಿಯೂ ಇರುವುದುಂಟು. ಈ ಕಾರಣಗಳಿಂದಲೇ ನಿಬಂಧದ, ಗ್ರಂಥದ ಆಯುಷ್ಯಪರಿಮಿತಿಯಲ್ಲಿ ಹೆಚ್ಚುಕಡಿಮೆಯಾಗುವದು. ಗ್ರಂಥೋ ನಿಬಂಧವು ಬಹುಕಾಲ ಬಾಳುವುದು. ದೇಶಕಾಲಪರಿಸ್ಥಿತಿಗಳನ್ನನುಲಕ್ಷಿಸಿ ಹೊರಟ ನಿಬಂಧವು ಅವುಗಳಲ್ಲಿ ಪರಿವರ್ತನೆಯುಂಟಾದಲ್ಲಿ ಮೂಲೆಗೆ ಬೀಳುವ ಗಾತ್ರವನ್ನು ಮಿತಿಮೀರಿ ಬೆಳೆಯಿಸಿಕೊಂಡ ನಿಬಂಧವು ಗ್ರಂಥವಾಗುವ ಅಪೂರ್ಣತೆಯಲ್ಲಿಯೇ ನಿಬಂಧಕ್ಕೆ ಸ್ವತ್ವ (ನಿಬಂಧತನ)ವುಂಟು ; ಪರಿಪೂ ಯುಂಟಾದಾಗ ಅದು ಗ್ರಂಥರೂಪದಲ್ಲಿ ಪರಿಣಮಿಸುವುದು.

ನಿಬಂಧಕಾರರು—ಯಾವದೊಂದು ವಿಷಯವನ್ನು ಹೆಚ್ಚಿಗೆ ಬಲ್ಲ ಪರರಲ್ಲಿ ಆ ವಿಚಾರಗಳನ್ನು ಉಂಟುಮಾಡಬೇಕು ; ಯಾವ ಸಮಯದಲ್ಲಿ ಆ ವಿಚಾರಗಳನ್ನು ಜನತೆಯಲ್ಲಿ ಉಂಟುಮಾಡಬೇಕಾಗಿದೆಯೋ ಆ ಸಮಯದಲ್ಲಿ ವಿಚಾರಗಳನ್ನು ಪ್ರಕಟಿಸಬೇಕು ; ಯಾವಾಗ ಒಬ್ಬನು ಒಂದು ವಿಷಯದಲ್ಲಿ ಆ ವಿಚಾರಗಳನ್ನು ಕಂಡುಹಿಡಿದನೋ ಆಗ ಆತನು ತನ್ನ ಆ ಹೊಸ ವಿಚಾರಗ ಜನರ ಮುಂದೆ ಇಡಲು ತವಕಬಡುವನು.

ಪರರಲ್ಲಿ ತನ್ನ ವಿಚಾರಗಳನ್ನು ಮೂಡಿಸಬೇಕಾದರೆ ನಿಬಂಧಕಾರನು ವಿ ಸಂಗ್ರಹವುಳ್ಳವನಿರಬೇಕಾದಂತೆ ಭಾಷಾಸಾಮರ್ಥ್ಯವುಳ್ಳವನೂ ಇರಬೇಕೆಂ ಸಹಜವು. ಈ ಗುಣವಿಲ್ಲದಲ್ಲಿ ಶಾಸ್ತ್ರೀಯ ನಿಬಂಧವು ಇಲ್ಲವೆ ಉಪನ್ಯಾಸವು ನಿ

ಗಿ, ಲೇಖ್ಯ ನಿಬಂಧವು ವಿಸ್ಖಲಿತವಾಗಿ, ಅನಾವಶ್ಯಕವಾಗಿ ಬೆಳೆದು, ಹೆಚ್ಚು ಪ್ರಾಮುಕರವಾಗದೆ ಹೋಗಬಹುದು.

ನಿಬಂಧಕಾರನ ಸ್ಥಾನ—ಪರರನ್ನು ಮೇಲಕ್ಕೆ ತರುವುದೇ ನಿಬಂಧಕಾರನ ಧ್ಯೇಯವಾಗಿರುವುದರಿಂದ ಆತನ ಸ್ಥಾನವು ಮೇಲುಗಡೆಯಲ್ಲಿ. ಆತನು ಪೀಠದ ಮೇಲೆ; ಕೇಳುವವರು, ಓದುವವರು ಕೆಳಗೆ. ವಿಷಯ ಸಂಗ್ರಹವಿದ್ದು, ವಿಚಾರ ಗಳನ್ನು ವ್ಯವಸ್ಥೆಗೊಳಿಸಿಕೊಂಡು, ಅವುಗಳನ್ನು ಚೆನ್ನಾಗಿ ಒಡಮೂಡಿಸಬಲ್ಲ ನಿಬಂಧಕಾರನು ಓದುಗರಿಗೂ ಕೇಳುಗರಿಗೂ ಮಾನ್ಯನು. ವಕ್ತಾರನನ್ನು ಹೂಮಾಲೆ ಯಿಂದ, ಲೇಖಕನನ್ನು ದ್ರವ್ಯದಿಂದ ಸಂಭಾವಿಸುವುದುಂಟು. ನಿಬಂಧಕಾರನು ಪುರುಷಾರ್ಥವಾದಿಯು, ನಿಬಂಧಕಾರನು ಮಧ್ಯಸ್ಥನು, ನಿಬಂಧಕಾರನು ವಕೀಲನು, ನಿಬಂಧಕಾರನು ನ್ಯಾಯಾಧೀಶನು, ನಿಬಂಧಕಾರನು ಋಷಿಯು, ನಿಬಂಧಕಾರನು ಜನನಾಯಕನು ಎಂದು ಹೇಳಿ ನಾವು ನಿಬಂಧಕಾರನ ಸ್ಥಾನವನ್ನು ನಿರ್ದೇಶಿಸ ಬಹುದು. ಶ್ರಾವ್ಯ ನಿಬಂಧಕಾರನಿಗೆ ಅಧ್ಯಕ್ಷನಿರಬಹುದು, ಲೇಖ್ಯ ನಿಬಂಧಕಾರನು ಅಧ್ಯಕ್ಷನು; ಸ್ವಯಮಧ್ಯಕ್ಷನೇ ಆಗಿರುವನು.

ಜ್ಞಾನಿಯಾದಷ್ಟಕ್ಕೇ ನಿಬಂಧಕಾರನಾಗಲಾರನು—ಮೇಲಿನ ವಿವೇಚನೆ ಯಿಂದ ವಿಷಯಜ್ಞಾನವುಳ್ಳವನು ನಿಬಂಧಕಾರನಾಗಬಹುದೆಂದು ತೋರುವುದು; ಆದರೆ ನಿಬಂಧಕ್ಕೆ ವಿಚಾರ ಪ್ರಕಟನ ಸಾಮರ್ಥ್ಯವು ಇಲ್ಲವೆ ಭಾಷಾಸಾಮರ್ಥ್ಯವು ಅತ್ಯವಶ್ಯಕವಾದುದೆಂದು ಹೇಳಬಹುದು. ಬೇಕಾದಷ್ಟು ವಿಷಯಜ್ಞಾನವುಳ್ಳವ ರೂ ಒಬ್ಬನು ಹೇಳಿ ಇಲ್ಲವೆ ಬರೆದು ತಿಳಿಸಲಸಮರ್ಥನಿರಬಹುದು. ಜ್ಞಾನವ ನ್ನಗಡ ನಿರ್ಣಯಶಕ್ತಿ, ಉಪಪಾದನಸಾಮರ್ಥ್ಯ, ಬುದ್ಧಿಯ ಸಮತೋಲತೆ ಯಂತಾದ ಗುಣಗಳೂ ವಾಚನಿಕ ನಿಬಂಧಕಾರನಿಗೆ ಬೇಕು; ಇವೂ ಅಲ್ಲದೆ ನೈಯ್ಯ ಕೌಶಲ್ಯ ಮುಂತಾದುವೂ ಆತನಿಗೆ ಬೇಕು. ಮನುಷ್ಯನು ಜ್ಞಾನಿಯಾಗು ವು ಆವಶ್ಯಕವಿದ್ದಂತೆ ಆತನು ಲೋಕಕ್ಕೆ ಉಪಯುಕ್ತ ಮನುಷ್ಯನೆನಿಸುವುದಕ್ಕೆ ನಿಬಂಧಕಾರನಾಗುವುದೂ ಆವಶ್ಯಕವು. ತನ್ನ ಜ್ಞಾನವನ್ನು ತನಗೆ ಮಾತ್ರ ಉಪ ಯೋಗಿಸಿಕೊಂಡವನನ್ನು ಲೋಕವು ಹೆಚ್ಚಿಗೆ ಪೂಜಿಸುವುದಿಲ್ಲ. ತನ್ನ ಜ್ಞಾನವು ಜನರಿಗೆ ಉಪಯುಕ್ತವೆನಿಸಬೇಕಾಗಿದ್ದರೆ ಆತನು ಅದನ್ನು ಅವರಿದಿರಿಗೆ ಇಡಬೇಕು ಅದರೆ ನಿಬಂಧಕಾರನಾಗಬೇಕು. ಲೋಕಸೇವಕರಾದ ಜನರೇ ದೇಶಕ್ಕೆ ಇಲ್ಲವೆ ಸಮಾಜಕ್ಕೆ ಹೆಚ್ಚಾಗಿ ಬೇಕು.

ನಿಬಂಧವು ಒಂದು ಕಲೆ ಎಂದು ಹೇಳಬಹುದು; ಆದುದರಿಂದ ಇದು ಜನುಳ್ಳವರಿಗೆ ಸಾಧಾರಣ ಪರಿಶ್ರಮದಿಂದ ಸಾಧ್ಯವಾದುದು; ಒಲವಿಲ್ಲದವರಿಗೆ

ಶಿಕ್ಷಣವು ಆವಶ್ಯಕವಾದುದು. ವಿಚಾರಶಕ್ತಿ ಇದ್ದರೆ ನಿಬಂಧವನ್ನು ಬರೆಯಬಹುದು; ನಿಬಂಧವನ್ನು ರಚಿಸಿ ವಿಚಾರಶಕ್ತಿಯನ್ನು ಬೆಳೆಯಿಸಿಕೊಳ್ಳಬಹುದು; ನಿರ್ಣಯ ಕಲ್ಪನಾದಿ ಶಕ್ತಿವಂತರು ನಿಬಂಧವನ್ನು ರಚಿಸಬಹುದು; ನಿಬಂಧವನ್ನು ರಚಿಸಿ ನಿರ್ಣಯ ಕಲ್ಪನಾದಿ ಶಕ್ತಿಗಳನ್ನು ಬೆಳೆಯಿಸಿಕೊಳ್ಳಬಹುದು; ವಾಕ್ಯರಚನಾಶಕ್ತಿ ಭಾಷಾಸೌಷ್ಠವಗಳಿದ್ದವರು ನಿಬಂಧಕಾರರಾಗಬಹುದು; ನಿಬಂಧಕಾರರಾಗಿ ವಾಕ್ಯರಚನಾಶಕ್ತಿ ಭಾಷಾಸೌಷ್ಠವಗಳನ್ನು ಬೆಳೆಯಿಸಿಕೊಳ್ಳಬಹುದು. ಕಲಿತು ಮೂಢ ಮೂಡಿ ಕಲಿ ಎಂಬ ಮಾತು ಎಲ್ಲ ವಿಷಯಗಳಿಗೂ ಕಲೆಗಳಿಗೂ ಸಂಬಂಧಿಸುವುದು. ನಿಬಂಧವು ಒಂದು ಕಲೆ ಎಂದು ಹೇಳಿದರೆ ಒಲವುಳ್ಳವರಿಗೆ ಶಿಕ್ಷಣವು ಬೇಡವೆಂದು ಹೇಳಲಾಗದು. ಒಲವುಳ್ಳವನು ಸ್ವಲ್ಪ ಶಿಕ್ಷಣದಿಂದ, ಒಲವಿಲ್ಲದವನು ಹೆಚ್ಚು ಶಿಕ್ಷಣದಿಂದ ಕಲೆಯನ್ನು ಸಂಪಾದಿಸುವನು. ಒಲವುಳ್ಳವನು ಹೆಚ್ಚಿಗೆ ಕುಶಲನಾಗಬಹುದು. ಆದರೆ ಶಿಕ್ಷಣಕ್ಕೂ ಪರಿಶ್ರಮಕ್ಕೂ ಏನೂ ಸಾಧ್ಯವಾಗದ ವಿಷಯವಾಗಲಿ ಕಲೆಯಾಗಲಿ ಇರಲಾರದು. ಸಮಾಜಕ್ಕೆ ಉಪಯುಕ್ತನೆನಿಸುವ ಮನುಷ್ಯನಾಗಬೇಕಾದರೆ ನಿಬಂಧ ಶಿಕ್ಷಣವು ಅವಶ್ಯವಾದುದು. ಈ ಕಾರಣದಿಂದ ಸಾಲೆಗಳಲ್ಲಿ ನಿಬಂಧವು ಶಿಕ್ಷಣದ ಒಂದು ಅಂಗವಾಗಿರುವುದು ಈ ಶಿಕ್ಷಣದಿಂದ ಎಲ್ಲರೂ ವಕ್ತಾರರಾಗಿ, ಇಲ್ಲವೆ ಲೇಖಕರಾಗಿ ಸಮಾಜಸೇವೆಯನ್ನು ಮಾಡಲಾರರಾದರೂ ಅವರು ತಮ್ಮ ವಿಚಾರಗಳನ್ನು—ತಾವು ಹೇಳಬೇಕೆಂದಿರುವುದನ್ನು— ಸರಿಯಾಗಿ ಪ್ರಕಟಿಸಿ ವ್ಯವಹಾರಕ್ಕೆ ತಕ್ಕವರಾದರೂ ಆಗುವರು; ಹಾಗೆ ಆಗುವುದು ಆವಶ್ಯಕವೂ ಆಹುದು.

ಸಾಲೆಗಳಲ್ಲಿ ನಿಬಂಧ ಶಿಕ್ಷಣದ ಉದ್ದೇಶ— ಬಾಲಕರು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಪ್ರಕಟಿಸಬೇಕು, ಪರರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ತಾವು ಹೇಳುವುದನ್ನು ಹೇಳಬೇಕು; ಎಂದರೆ ಅವರು ಚೆನ್ನಾಗಿ ಮಾತಾಡಬೇಕು ಚೆನ್ನಾಗಿ ಬರೆಯಬೇಕು ಎಂಬುದೇ ನಿಬಂಧ ಶಿಕ್ಷಣದ ಉದ್ದೇಶ್ಯವಾಗಿರುವುದು. ಮನುಷ್ಯನು ವ್ಯವಹಾರಕ್ಕೆ ತಕ್ಕವನಾಗದಿರುವಲ್ಲಿ ಮುಖ್ಯವಾಗಿ ತನ್ನ ಮನಸ್ಸಿನಲ್ಲಿರುವುದನ್ನು ಸರಿಯಾಗಿ ಪ್ರಕಟಿಸಲು ಬಾರದಿರುವುದೇ ಮುಖ್ಯ ಕಾರಣವಾಗಿರುವುದೆಂಬುದನ್ನು ಹಲವೆಡೆಯಲ್ಲಿ ಕಾಣಬಹುದು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾದರೂ ನಿಬಂಧ ಶಿಕ್ಷಣವು ತನ್ನ ಆವಶ್ಯಕತೆಯನ್ನು ಸಮರ್ಥಿಸುವುದು.

ಸಾಲೆಗಳಲ್ಲಿ ನಿಬಂಧ ಶಿಕ್ಷಣದ ಆರಂಭ— ಪ್ರಾಥಮಿಕ ಸಾಲೆಗಳಲ್ಲಿ ಐದನೆಯ ಇಯತ್ತೆಯಲ್ಲಿ ಪತ್ರಲೇಖನದಿಂದ ಈ ವಿಷಯವನ್ನಾರಂಭಿಸುವುದುಂಟು. ಮತ್ತು ಮುಂದೆ ಕೂಡ ಪ್ರವಾಸ, ವಸ್ತುಶಾಲೆಯ ಮುಂತಾದ ಕೆಲವು ಗೊತ್ತಾ

ಯಗಳನ್ನು ಕೊಟ್ಟು, ಶಿಕ್ಷಕರೇ ಕೆಲವು ಮುಖ್ಯಮಾತುಗಳನ್ನು ಹೇಳಿ ಕೊಪ್ಪೆಮ್ಮೆ ಬರೆಯಿಸುವ ವಾಡಿಕೆಯೂ ಹಲವೆಡೆ ಕಾಣಬರುವುದು. ಯಾವ ಯವನ್ನು ಕೊಟ್ಟರೂ ವ್ಯಾಖ್ಯೆ, ಲಾಭ, ಹಾನಿ, ಸಾರಾಂಶ ಎಂಬ ಮುಖ್ಯ ತುಗಳನ್ನಿಟ್ಟುಕೊಂಡೇ ಬರೆಯಬೇಕೆಂದು ಹಲವು ಜನ ವಿದ್ಯಾರ್ಥಿಗಳ ಭಾವನೆ ಾಗಿರುವದೆಂಬದು ವ್ಹ. ಫಾ. ಪರೀಕ್ಷೆಯ ನಿಬಂಧದ ಉತ್ತರ ಕಾಗದಗಳನ್ನು ೀಡಿದವರ ಅನುಭವಕ್ಕೆ ಬಂದ ಮಾತು. ಈ ಅವಸ್ಥೆಯು ಹೋಗಬೇಕು. ಇದ ಗಿ ಈ ವಿಷಯವನ್ನು ಬೇರೆ ವಿಷಯಗಳಂತೆ ಬಾಲಕರ ವರ್ಗದಿಂದ ಆರಂಭಿಸು ೂ, ನಿಬಂಧ ಶಿಕ್ಷಣದ ಪದ್ಧತಿಯಲ್ಲಿ ಪರಿವರ್ತನ ಮಾಡುವುದೂ ಅವಶ್ಯವು.

ನಿಬಂಧದ ಅಂಗಗಳು— ನಿಬಂಧ ಶಿಕ್ಷಣದಲ್ಲಿ ನಿಬಂಧ ಇಲ್ಲವೆ ವಿಚಾರ ನ್ನು ವ್ಯವಸ್ಥೆಯಿಂದ ಸಾಲುಗೊಳಿಸುವುದು, ಮತ್ತು ಅವುಗಳನ್ನು ಭಾಷೆಯಿಂದ ಲವೆ ಲೇಖನದಿಂದ ಸರಿಯಾಗಿ ಪ್ರಕಟಿಗೊಳಿಸುವುದು ಎಂಬ ಎರಡು ಅಂಗಗಳಿರು ವೆ. ಬಾಲಕರ ವರ್ಗದಲ್ಲಿ ಲೇಖನವಿಲ್ಲ; ಬಾಲಕರು ಭಾಷೆಯಿಂದ ತಮ್ಮ ಾರಗಳನ್ನು ಪ್ರಕಟಿಸಲು ಸಮರ್ಥರಾಗುವಂತೆ ಮಾಡುವುದೇ ಈ ವರ್ಗದಲ್ಲಿ ಂಧ ಶಿಕ್ಷಣವು.

ನಿಬಂಧ ಪ್ರಕಾರಗಳು— ಕೆಲವು ನಿಬಂಧಗಳು **ಕಥನಾತ್ಮಕಗಳು,** ಇಲ್ಲವೆ ರೂಪಗಳು, ಕೆಲವು **ವರ್ಣನಾತ್ಮಕಗಳು,** ಇನ್ನು ಕೆಲವು **ವಿಚಾರಾತ್ಮಕಗಳು.** ನಾತ್ಮಕಗಳು ಕಥೆಗಳಂತೆ ನಡೆದ ಸಮಾಚಾರಗಳನ್ನು ಹೇಳುವಂಥವು; ವರ್ಣ ತ್ಮಕಗಳು ಒಂದು ವಸ್ತುವನ್ನು ಇಲ್ಲವೆ ಸಂಗತಿಯನ್ನು ವರ್ಣಿಸಿ ಹೇಳುವಂಥವು, ಾರಾತ್ಮಕಗಳು ಯಾವದೊಂದು ವಿಷಯದಲ್ಲಿ ಹಲವು ವಿಚಾರಗಳನ್ನು ಚರ್ಚೆ, ನೆ, ವಿಮರ್ಶೆ, ಪ್ರತಿಪಾದನೆ ಮುಂತಾದ ರೂಪದಿಂದ ಹೇಳುವಂಥವು. ವಿದ್ಯಾರ್ಥಿ ು ತಾವು ಮಾಡಿದ ಪ್ರವಾಸದ ಇಲ್ಲವೆ ಆಡಿದ ಆಟದ ಸಮಾಚಾರವನ್ನು ಹೇಳು ು ಕಥಾನಾತ್ಮಕವು; ಬಾಲಕರು ತಾವು ನೋಡಿದ ಮರ ಕಟ್ಟಡ, ಚಿತ್ರ, ಪ್ರಾಣಿ ಮೊದಲಾದವನ್ನು ವರ್ಣಿಸುವುದು ವರ್ಣನಾತ್ಮಕವು; ಪ್ರವಾಸ, ಪುಸ್ತಕಾಲಯ, ದಲಾದ ವಿಷಯಗಳನ್ನು ಕುರಿತು ತಮ್ಮ ವಿಚಾರಗಳನ್ನು ಪ್ರಕಟಿಸುವುದು ಾರಾತ್ಮಕವು. ಇವು ಮಿಶ್ರವಾಗಿರುವುವೇ ಹೊರತು ಕೇವಲ ಕಥನಾತ್ಮಕವು, ದರೆ ಅದು ವರ್ಣನೆ, ವಿಚಾರ ಇಲ್ಲವೆ ವಿಮರ್ಶೆ ಇವುಗಳ ಸಂಪರ್ಕವಿಲ್ಲದ್ದೇ ುವುದು ಎಂದು ತಿಳಿಯಬಾರದು. ಕಥನವು ಮುಖ್ಯವಾಗಿದ್ದದ್ದೇ ಕಥನಾತ್ಮಕವು. ಿಯೂ ಹೀಗೆಯೇ. ಕಥನಾತ್ಮಕ ವರ್ಣನಾತ್ಮಕ ವಿಚಾರಾತ್ಮಕಗಳು ತರಗತಿ ಲ್ಲಿ ಕ್ರಮವಾಗಿ ಹೆಚ್ಚಿಗೆ ಕಠಿಣವಾಗಿರುವುವು.

ಬಾಲಕರ ವರ್ಗದಲ್ಲಿ ನಿಬಂಧ ಶಿಕ್ಷಣ— ಈ ವರ್ಗದ ಹುಡುಗರು ಸಾ
ಹೊಸಬರು. ಭಯ, ಸಂಕೋಚಗಳಿಂದಲೂ ಅವರು ಮಾತಾಡುವುದು ಕಡಿ
ಆದದರಿಂದ ಶಿಕ್ಷಕನು, ಬಾಲಕರು ಮನಸ್ಸು ತೆರೆದು ಮಾತಾಡುವಂತೆ ಮಾಡುವ
ಈ ವರ್ಗದ ನಿಬಂಧ ಶಿಕ್ಷಣದ ಮುಖ್ಯಾಂಗವೆಂದು ಹೇಳಬಹುದು. ಶಿಕ್ಷ
ಬಾಲಕರ ಸ್ನೇಹಿತನಾಗಿ ಹಿತ ಸಂಭಾಷಣೆ, ಅವರ ಮನೆಯೊಳಗಿನ ಜನರು, ಪ
ಸಾಕಿದ ಪ್ರಾಣಿಗಳು, ಅವರಾಡಿದ ಆಟಗಳು, ಅವರು ನೋಡಿದ ಉತ್ಸವ
ಮೊದಲಾದ ಸಂದರ್ಭಗಳನ್ನು ಕುರಿತು ಅವರಿಗೆ ಮಾತಾಡುವ ಆಸ್ಪದವನ್ನು
ಮಾಡಬೇಕು. ಅವರು ಶುದ್ಧವಾಗಿ ಮಾತನಾಡುವಂತೆ ನೋಡಿಕೊಳ್ಳಬೇ
ಸಂದರ್ಭಕ್ಕೆ ತಕ್ಕ ಶಬ್ದಗಳನ್ನು ಅವರ ನೆನಪಿಗೆ ತಂದುಕೊಡಬೇಕು. ಆ
ಕಟ್ಟಾಗಿ, ಒಂದೊಂದು ಸಂಗತಿಯನ್ನು ಹಿಡಿದು ಮಾತಾಡುವ ದಾರಿಗೆ ಅವ
ತರಬೇಕು. ಒಟ್ಟಿನಲ್ಲಿ ಅವರ ವಾಕ್ಯರಚನೆಯು ಒಳ್ಳೆಯದಾಗುವಂತೆ ನೆ
ಕೊಳ್ಳಬೇಕು. **ಬಾಲಕರ ವರ್ಗಕ್ಕೆ ವಾಚನಿಕ ನಿಬಂಧಗಳೇ ಹೊ
ಲೇಖನ ನಿಬಂಧಗಳಿಲ್ಲ.** ಈ ವರ್ಗಕ್ಕೆ ಕೆಳಗೆ ತೋರಿಸಿದ ಸಂದರ್ಭಗ
ಶಿಕ್ಷಕನು ಉಪಯೋಗಿಸಿಕೊಳ್ಳಬಹುದು.

೧. ಆಟಗಳು, ಸಾಕಿದ ಪ್ರಾಣಿಗಳು, ಆಟಿಗೆಗಳು ಮುಂತಾದ
ವಿಷಯವಾಗಿ.

೨. ಶಿಕ್ಷಕನು ಮತ್ತು ಮನೆಯವರು ಹೇಳಿದ ಸಣ್ಣ ಸಣ್ಣ ಆಕ
ಕಥೆಗಳು.

೩. ಬಾಲಕರ ಮನವನ್ನಾಕರ್ಷಿಸಿದ ಮೋಟಾರು ಮೊದಲಾದ ವಸ್ತು
ಯಂತ್ರಗಳೂ.

೪. ಚಿತ್ರಗಳು. (ತೊಡಕಿಲ್ಲದಿರುವಂಥವು) ('ಚಿತ್ರವಾಚನ').

೫. ಹಬ್ಬ, ಮದುವೆ, ಜಾತ್ರೆ, ಗುಡಿಯೊಳಗಿನ ಉತ್ಸವ ಮುಂತಾದ
ರಂಭಗಳು.

೬. ಶಿಕ್ಷಕ ಬಾಲಕರ ಇಲ್ಲವೆ ಬಾಲಕ–ಬಾಲಕರ ಸಂಭಾಷಣೆ.

ಈ ವರ್ಗದಲ್ಲಿ ಶಿಕ್ಷಕನು ಬಾಲಕರ ಭಾಷೆಯನ್ನು ವ್ಯಾಕರಣ ಶುದ್ಧವಾಗುವ
ಮಾಡುವೆನೆಂಬ ಹಟವನ್ನು ಹಿಡಿಯದೆ ಅವರು ಒಂದು ಸಂದರ್ಭವನ್ನು ಕುರಿ
ನಾಲ್ಕು ಮಾತುಗಳನ್ನು ಹೊಂದಿಸಿ ಹೇಳುವಂತೆ ನೋಡಿಕೊಳ್ಳುವುದು ಮಹತ್ವವ
ದ್ದೆಂದು ತಿಳಿಯಬೇಕು. ಜೊಳ್ಳು ಮಾತುಗಳನ್ನಾಡದೆ ಹುರುಳಿನ ಮಾತುಗಳನ್ನಾ

ನೀ ಮಾತುಗಾರನು. ಮಕ್ಕಳು ಮುಂದೆ ಮಾತುಗಾರರಾಗಬೇಕು; ಬಗುಳುವನ
ಗಬಾರದು; ಮುಖಹೀನನೂ ಆಗಬಾರದು.

೧ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ—ಬಾಲಕವರ್ಗದವರು ಒಂದು
ಯವನ್ನು ಕುರಿತು ೩-೪ ಮಾತುಗಳನ್ನಾಡುವರಾದರೆ ಈ ವರ್ಗದವರು
೦ಟುಮಾತುಗಳನ್ನಾಡಬೇಕು. ಇವರ ಮಾತುಗಳು ಇನ್ನಿಷ್ಟು ಶುದ್ಧವಾಗಿಯೂ,
ಯವನ್ನು ಸರಿಯಾಗಿ ಸಂಬಂಧಿಸುವಂಥವಾಗಿಯೂ ಇರಬೇಕು. ಕಲ್ಪನಾಶಕ್ತಿ,
ಜ್ಞಾನಾಶಕ್ತಿ, ವಿವೇಚನಶಕ್ತಿಗಳಿಗೆ ಚಾಲನೆ ಸಿಕ್ಕುವ ವಿಷಯಗಳನ್ನೊದಗಿಸ
ಕು.

ಕೆಳಗಿನ ವಿಷಯಗಳನ್ನು ಉಪಯೋಗಿಸಿಕೊಳ್ಳಬಹುದು.

೧. ಕಥೆಗಳು (ಬಾಲಕರವರ್ಗಕ್ಕಿಂತ ಸ್ವಲ್ಪ ದೊಡ್ಡವು.)

೨. ವಸ್ತುಗಳು, ಪ್ರಾಣಿಗಳು, ಗಿಡಬಳ್ಳಿಗಳು ಮುಂತಾದುವನ್ನು ಪ್ರತ್ಯಕ್ಷ
ಗಿ ನೋಡಿ ಅವುಗಳ ವಿಷಯವಾಗಿ ತಮಗೆ ಕಾಣುವ ಮಾತುಗಳನ್ನು ಹೇಳುವುದು.

೩. ಆತ್ಮಕಥನ—ಯಾವದೊಂದು ವಸ್ತು ಇಲ್ಲವೆ ಪ್ರಾಣಿಯು ತಾನೇ
ತಾಡಿದಂತೆ ಹೇಳುವುದು.

೪. ಸಮಾರಂಭಗಳ ವಿವರಣೆ.

೫. ಬೇರೆ ಬೇರೆ ಕೆಲಸಗಳುಳ್ಳ ಸ್ವಲ್ಪ ತೊಡಕುಳ್ಳ ಚಿತ್ರಗಳನ್ನು ಕುರಿತ
ಸುವುದು. ಚಿತ್ರವಾಚನ.

೬. ಒಂದು ಕಥೆಗೆ ಇಲ್ಲವೆ ಒಂದು ಸಂಗತಿಗೆ ಸಂಬಂಧಿಸಿದ ಕೆಲವು ಕ್ರಮಿಕ
ಗಳಿಂದ ಆ ಕಥೆಯನ್ನು ಇಲ್ಲವೆ ಸಂಗತಿಯನ್ನು ಜೋಡಿಸಿ ಹೇಳುವುದು.

೭. ಭಾವವನ್ನು ತಿಳಿಪುಕೊಂಡ ಸುಲಭಕಥೆಗಳನ್ನು (ವಿಶೇಷವಾಗಿ ಕಥಾ-
ಗಳನ್ನು) ವಿವರವಾಗಿ ಅನುವಾದಿಸುವುದು.

೮. ಬಾಲಕರ ಗ್ರಹಣಕ್ಕೆ ತಕ್ಕ ಸಣ್ಣ ನಾಟಕಗಳನ್ನು ಅಭಿನಯಿಸುವದು.
ತ್ರಗಳ ಭಾಷಣಗಳನ್ನು ಬಾಲಕರು ಪಾಠಮಾಡುವುದು.)

ವಿದ್ಯಾರ್ಥಿಗಳು ಒಂದು ವಿಷಯವನ್ನು ಕುರಿತು ಹೇಳಿದ ಒಳ್ಳೆಯ ವಾಕ್ಯ
ನ್ನು ಶಿಕ್ಷಕನು ಕರಿಯ ಹಲಗೆಯಮೇಲೆ ಬರೆಯಬೇಕು. ಕೊನೆಯಲ್ಲಿ
ವಿದ್ಯಾರ್ಥಿಗಳಿಂದ ಅವನ್ನು ಓದಿಸಬೇಕು.

ಶಿಕ್ಷಕನು ನಿಬಂಧಕ್ಕಾಗಿ ಹೇಳುವ ಕಥೆಗಳನ್ನು ಒಮ್ಮೊಮ್ಮೆ ಬರೆಯು ಬೇಕು. ಓದಿದ ಕಥೆಗಳಿಗಿಂತ ಹೇಳಿದ ಕಥೆಗಳನ್ನು ತಿರುಗಿ ಸರಿಯಾಗಿ ಹೇ ಕೊಳ್ಳುವಲ್ಲಿ ನಿಬಂಧ ದೃಷ್ಟಿಯಿಂದ ವಿಶೇಷ ಪ್ರಯೋಜನವುಂಟೆಂಬದು ನಿಜ; ಬರೆದ ಕಥೆಯನ್ನು ಓದಿ ತಿರುಗಿ ಹೇಳಿಸಿಕೊಳ್ಳುವಲ್ಲಿ ವಾಕ್ಯರಚನೆಯ ದೃಷ್ಟಿಯಿ ಪ್ರಯೋಜನವುಂಟು. ಭಾಷೆ ಒಳ್ಳೆಯದಾಗುವುದಕ್ಕೆ ಅನುಕರಣವು ಪ್ರಯೋ ಕಾರಿಯಾಗುವುದು: ಮಾದರಿಯ ಭಾಷೆಯುಳ್ಳ ಗ್ರಂಥಗಳನ್ನು ಓದಿ ಹಲ ತಮ್ಮ ಭಾಷೆಯನ್ನು ತಿದ್ದಿಕೊಳ್ಳುವುದುಂಟು. ಅಚ್ಚುಕಟ್ಟುತನ, ಶುದ್ಧಿ, ಪುಷ್ಟಿ, ಸಂದರ್ಭೋಚಿತಶಬ್ದಗಳ ಯೋಜನೆ ಮುಂತಾದ ಗುಣಗಳಿಂದ ಯಾಗಿರುವ ಭಾಷೆಯನ್ನೇ ನಿಬಂಧಕ್ಕಾಗಿ ಓದುವ ಕಥೆಗೆ ಉಪಯೋಗಿಸಬೇಕ ವಿಷಯದಲ್ಲಿ ಎಚ್ಚರಗೊಂಡಿದ್ದರೆ ಮಾತ್ರ ಈ ಕಥಾವಾಚನದಿಂದ ಪ್ರಯೋ ವಾಗುವುದು.

ಈ ಇಯತ್ತೆಯಲ್ಲಿಯೂ ನಿಬಂಧವಿಷಯವು ವಾಚನಿಕವೇ ಸರಿ.

೨ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ— ತರಗತಿಯು ಹೆಚ್ಚಿ ಶಿಕ್ಷಕನು ವಿದ್ಯಾರ್ಥಿಗಳಿಂದ ಹೆಚ್ಚಿನದನ್ನು ಅಪೇಕ್ಷಿಸಬೇಕು. ಈ ಇಯತ್ತೆ ಉಪಯೋಗಿಸುವ ಕಥೆಗಳು ಕೆಳಗಿನ ವರ್ಗಗಳಂತೆ ಕಾಗೆ ಗುಬ್ಬಿಗಳ ಕ ಆಗಿರದೆ ಪಂಚತಂತ್ರ ಹಿತೋಪದೇಶಗಳೊಳಗಿನ ಕಥೆಯಂತಹ ಕಥೆಗಳು, ಕೃಷ್ಣ, ಅರ್ಜುನ ಮೊದಲಾದ ಪೌರಾಣಿಕ ವ್ಯಕ್ತಿಗಳ ಕಥೆಗಳು ಇರಬಹುದು ಇಯತ್ತೆಯಿಂದ ಮುಂದಿನ ಇಯತ್ತೆಗಳಲ್ಲಿ ಕಥೆಗಳನ್ನು ಕೆಳಗೆ ಹೇಳ ಉಪಯೋಗಿಸಿಕೊಳ್ಳಬಹುದು:—

೧. **ಅ.** ಸಂಕ್ಷೇಪವಾಗಿ ಹೇಳಿದ ಕಥೆಯನ್ನು ವಿಸ್ತರಿಸಿ ಹೇಳುವ ವಿಸ್ತರಿಸಿ ಹೇಳಿದ ಕಥೆಯನ್ನು ಸಂಕ್ಷೇಪವಾಗಿ ಹೇಳುವುದು.

ಆ. ನಡುನಡುವಿನ ಶಬ್ದ, ವಾಕ್ಯಗಳನ್ನು ಕೊಟ್ಟು ಕಥೆಯನ್ನು ಪ ವಾಗಿ ಹೇಳುವಂತೆ ಮಾಡುವುದು.

ಇ. ಶಿಕ್ಷಕನು ಅರ್ಧ ಹೇಳಿದ ಕಥೆಯನ್ನು ವಿದ್ಯಾರ್ಥಿಯು ಮು ವುದು.

ಈ. ಮುಖ್ಯಾಂಶಗಳನ್ನು ಕೊಟ್ಟರೆ ಕಥೆಯನ್ನು ಪೂರ್ತಿಗೊಳಿಸು

ಉ. ವಿದ್ಯಾರ್ಥಿಗಳು ತಾವೇ ಒಂದು ಕಥೆಯನ್ನು ಕಲ್ಪಿಸುವದು.

ಊ. ಕಥೆಯಲ್ಲಿ ಬಿಟ್ಟುಹೋದ ಮಹತ್ವದ ಮಾತುಗಳನ್ನೂ ಶಬ್ದಗಳನ್ನೂ ತುಂಬುವುದು.

ಈ ಇಯತ್ತೆಯಲ್ಲಿ ಕಥೆಗಳನ್ನಲ್ಲದೆ ಕೆಳಗಿನ ವಿಷಯಗಳನ್ನೂ ಉಪಯೋಗಿಸಿಬೇಕು.

೨. ಕೆಳಗಿನ ಇಯತ್ತೆಗಳಿಗೆ ಹೇಳಿದ ವಿಷಯಗಳು. (ಇನ್ನಿಷ್ಟು ಹೆಚ್ಚಾಗಿ, ಗಿ.)

೩. ಬಾಲಕರು ಮಾಡಿದ ಪ್ರವಾಸಗಳು, (ಭೂಗೋಲ ಪರಿಚಯಕ್ಕಾಗಿ ನೆ ಸೃಷ್ಟಿಸೌಂದರ್ಯ ನಿರೀಕ್ಷಣಕ್ಕಾಗಿ).

೪. ಸಣ್ಣಸಣ್ಣ ಪತ್ರಗಳನ್ನು ಬರೆಯುವುದು.

ನದಾ :—

ಶ್ರೀ.

ಲೈನ್‌ಬಜಾರ್, ಧಾರವಾಡ.

ರವಿವಾರ, ತಾ॥ ೨೧–೪–೧೯೩೭.

ತಯ ಗೆಳೆಯನಾದ ಜಮ್ಮಿಹಾಳದ **ಶಿವರಾಯ**ನಿಗೆ—

ಬಿನ್ನಹ. ಇಂದು ಮಧ್ಯಾಹ್ನದ ಬಿಡುವಿನಲ್ಲಿ ನಮ್ಮ ಓಣಿಯ ಗೆಳೆಯರೆಲ್ಲ ಡಿ ತಿಳ್ಳಿಯ **ಆಟ**ವನ್ನು ಆಡಬೇಕೆಂದು ಮಾಡಿದ್ದೇವೆ. ಆಟವು ೩ ಘಂಟೆಗೆ ಂಭವಾಗುವದು. ನೀನು ಒಂದು ಕತೆಗೆ ಹಿರಿಯಹುಡ್ಗರಿ ಆಗಬೇಕೆಂದು ನ್ನೂ ಬಯಸುತ್ತಾರೆ. ಆದದರಿಂದ ನೀನು ವೇಳೆಗೆ ಸರಿಯಾಗಿ ಬರಬೇಕು.

ನಿನ್ನ ಗೆಳೆಯನಾದ

—ಹನುಮಂತ]

೫. ಓದಿದ **ವಾಚನ** ಪಾಠಗಳ ಸಾರಾಂಶವನ್ನು ಹೇಳುವದು; ಮತ್ತು ಯುವುದು. ಈ ಸಾರಾಂಶಕಥನಕ್ಕೆ ಇಲ್ಲವೆ ಲೇಖನಕ್ಕೆ ಪುಸ್ತಕದ ಭಾಷೆಯನ್ನೇ ಲಕರು ಉಪಯೋಗಿಸದೆ ತಮ್ಮ ಭಾಷೆಯನ್ನು ಉಪಯೋಗಿಸಬೇಕು.

೬. ಉತ್ತಮವಾದ ಕೆಲವು **ವಾಕ್ಯ**ಗಳನ್ನು ನಿಬಂಧಗಳಲ್ಲಿ ಉಪಯೋಗಿಸುವ ಡಿ.

ಈ ಇಯತ್ತೆಯಲ್ಲಿಯೂ ಮುಂದಿನ ಇಯತ್ತೆಗಳಲ್ಲಿಯೂ ನಿಬಂಧವು ಚನಿಕ, ಲೇಖನ ಎಂಬೀ ಎರಡು ರೂಪಗಳಲ್ಲಿಯೂ ಇರತಕ್ಕುದು.

ಲೇಖನ ನಿಬಂಧಗಳನ್ನು ಶಿಕ್ಷಕನು ಚೆನ್ನಾಗಿ ನೋಡುವುದೂ, ಅದರಲ್ಲಿರುವ ಕ್ಷ
ಗಳನ್ನು ವಿದ್ಯಾರ್ಥಿಗಳ ಲಕ್ಷಕ್ಕೆ ತಂದುಕೊಡುವುದೂ ಅವಶ್ಯವು.

೩ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :— ೨ನೆಯ ಇಯತ್ತೆ
ವಿಷಯಗಳನ್ನೇ ಮುಂದೆ ಸಾಗಿಸುವುದು. ಬಾಲಕರ ವಾಕ್ಯರಚನೆ ಒಳ್ಳೆಯದಾ
ವಂತೆಯೂ, ಅವರ ಶಬ್ದಭಾಂಡಾರವು ಬೆಳೆಯುವಂತೆಯೂ ನೋಡಿಕೊಳ್ಳಬೇ

೪ನೆಯ ಇಯತ್ತೆಯಲ್ಲಿ ನಿಬಂಧ ಶಿಕ್ಷಣ :—

ಈ ಇಯತ್ತೆಗೆ ಉಪಯೋಗಿಸಿಕೊಳ್ಳಬೇಕಾದ ಸಂದರ್ಭಗಳು:

೧. ಕಲ್ಪಿತ ಕಥೆಗಳಿಗೆ ಪ್ರತಿಯಾಗಿ ಐತಿಹಾಸಿಕ, ಪೌರಾಣಿಕ ಕಥೆಗಳ

೨. ವಾಚನಪಾಠ, ಇತಿಹಾಸ ಪಾಠಗಳ ಸಾರಾಂಶ. (ಈ ಪಾಠಗಳು
ಬಾಲಕರು ಮೊದಲು ಓದಿಕೊಳ್ಳಬೇಕು; ಅವುಗಳೊಳಗಿನ ಯಾವ ಮಾತುಗ
ಮುಖ್ಯವಾದಂಥವು, ಯಾವ ಮಾತುಗಳನ್ನು ಬಿಟ್ಟರೆ ನಡೆಯಬಹುದು ಎಂಬದ
ಹುಡುಗರು ಆಲೋಚಿಸುವುದು, ಅವಶ್ಯವಿದ್ದಲ್ಲಿ ಶಿಕ್ಷಕನು ನೆರವಾಗುವುದು.

೩. ಸಂಭಾಷಣ ರೂಪವನ್ನು ಕೊಡಲು ಬರುವಂಥ ಪಾಠಗಳನ್ನು ಸಂ
ಷಣರೂಪದಲ್ಲಿ ರಚಿಸುವುದು.

೪. ಸಂಭಾಷಣ ರೂಪದ ಪಾಠಗಳನ್ನು ಕಥನರೂಪವಾಗಿ ಮಾಡುವ

೫. ಕೆಳಗಿನ ಇಯತ್ತೆಯ ಪತ್ರಗಳಿಗಿಂತ ದೊಡ್ಡ ಪತ್ರಗಳು.

೬. ಭಾಷಾಪದ್ಧತಿಗಳು (ಇಡಿಯಮ್ಸ್), ಗಾದೆಗಳು ಇವುಗಳ
ಯೋಗ.

೭. ಪುರಾಣ, ಕೀರ್ತನ, ಪ್ರವಚನ, ವ್ಯಾಖ್ಯಾನಗಳನ್ನು ಕೇಳುವುದು;

೮. ಯಾವದೊಂದು ಸುಲಭ ವಿಷಯವನ್ನು ಕುರಿತು ವಿದ್ಯಾರ್ಥಿ
ಮಾತಾಡುವದು. (ವ್ಯಾಖ್ಯಾನ)

೯. ಬಾಲಕರು ಸಣ್ಣ ದೃಶ್ಯಗಳಲ್ಲಿ (ನಾಟಕ) ಪಾತ್ರಗಳನ್ನು ಸ್ವೀ
ವುದು.

ಮೇಲಿನ ಇಯತ್ತೆಗಳಲ್ಲಿ ನಿಬಂಧ ಶಿಕ್ಷಣ :— ೫ನೆಯ ಇಯತ್ತೆಗೆ ಬ
ವಿದ್ಯಾರ್ಥಿಗಳು ಬಳಕೆಯಲ್ಲಿರುವ ಶುದ್ಧ ಭಾಷೆಯನ್ನು ಬರೆಯಬಲ್ಲವರಾಗಿರಬೇ
ಒಂದು ವಿಷಯವನ್ನು ಕುರಿತು ನಾಲ್ಕು ಮಾತುಗಳನ್ನು ಹೊಂದಿಸಿ ಪ
ತಿಳಿಯುವಂತೆ ಮಾತಾಡಬಲ್ಲವರಾಗಿರಬೇಕು. ಅವರು ಕಥನಾತ್ಮಕ ನಿಬಂಧಗಳ

ನ್ನಾಗಿ ಬರೆಯಲು, ಕಥೆಗಳನ್ನು ಚೆನ್ನಾಗಿ ಹೇಳಲು ಬಲ್ಲವರಾಗಿರಬೇಕು; ಪ್ರಾಣಿ, ಳು, ಕಟ್ಟಡ, ಚಿತ್ರ ಮುಂತಾದ ವಿಷಯಗಳನ್ನು ತಕ್ಕಂತೆ ವರ್ಣಿಸಬಲ್ಲವರಾಗಿರ ಬೇಕು.

ಮೇಲಿನ ಎಂದರೆ ಐದನೆಯದರಿಂದ ಮುಂದಿನ ಇಯತ್ತೆಗಳಲ್ಲಿ ವಿಚಾರಾತ್ಮಕ ಪ್ರಬಂಧಗಳನ್ನು ರಚಿಸುವ ರೂಢಿಯನ್ನು ಮಾಡಿಸಬೇಕು. ಆರಂಭದಲ್ಲಿ ನಿಬಂಧ ರಚನೆಗೆ ಕೆಲಮಟ್ಟಿಗೆ ಶಿಕ್ಷಕರು ನೆರವಾಗಬೇಕು; ಎಂದರೆ ಯಾವದೊಂದು ವಿಷಯ ವನ್ನು ಕುರಿತು ವಿದ್ಯಾರ್ಥಿಗಳೊಡನೆ ಮಾತನಾಡಿ ಆ ವಿಷಯದ ಎಲ್ಲ ವಿಚಾರಗಳ ಚಿಂತನ ಮಾಡಿಸಬೇಕು. ಆವಾಗಲೇ ಮುಖ್ಯ ಮಾತುಗಳನ್ನು ಗೊತ್ತುಪಡಿಸ ಬೇಕು. ವಿದ್ಯಾರ್ಥಿಗಳ ತಪ್ಪು ವಿಚಾರಗಳನ್ನು, ಕಾರಣಗಳನ್ನು ತೋರಿಸಿ ತಿದ್ದ ಬೇಕು. ಮುಖ್ಯ-ಮಾತುಗಳನ್ನು ಅನುಕ್ರಮಗೊಳಿಸುವಂತೆ ಹೇಳಬೇಕು. ಬಳಿಕ ವಿದ್ಯಾರ್ಥಿಗಳು ಒಂದೊಂದು ಮುಖ್ಯ-ಮಾತಿನ ವಿಷಯವಾಗಿ ತಾವು ಸಂಗ್ರಹಿಸಿದ ವಿಚಾರಗಳನ್ನು ಜೋಡಿಸಿ ಹೇಳಬೇಕು; ತರುವಾಯ ಅವನ್ನೇ ಬರೆಯಬೇಕು. ಈ ನಿಬಂಧಗಳು ಹೀಗೆ ಸಾಗಿದ ಬಳಿಕ, ಒಂದೆರಡು ನಿಬಂಧಗಳ ಮುಖ್ಯ ಮಾತು ಗಳನ್ನು ಸೂಚಿಸಿ ಅವುಗಳನ್ನು ರಚಿಸಲು ಹೇಳಬೇಕು. ತರುವಾಯ ವಿದ್ಯಾರ್ಥಿ ಗಳೇ ಮುಖ್ಯ ಮಾತುಗಳನ್ನು ಗೊತ್ತುಮಾಡಲು, ಮತ್ತು ಅವುಗಳನ್ನು ಕ್ರಮಗೊಳಿಸಲು ಸಮರ್ಥರಾಗಬೇಕು. ಹಾಗೆ ಯಾವ ಸಹಾಯವೂ ಇಲ್ಲದೆ ನಿಬಂಧಗಳನ್ನು ರಚಿಸಲು ಅರ್ಹರಾದರೆ ಶಿಕ್ಷಕನ ಕೆಲಸವು ತೀರಿತು. ಈ ಗೆ ರಚನಾಸಾಮರ್ಥ್ಯವು ಅವರಲ್ಲಿ ಉಂಟಾಗಬೇಕಾದರೆ ಹಿಂದೆ ಹೇಳಿದ ವಿಷಯಗಳನ್ನಲ್ಲದೆ ಕೆಳಗೆ ಹೇಳುವ ಉಪಾಯಗಳನ್ನು ಯೋಜಿಸಬಹುದು.

೧. ಒಂದೊಂದು ವಿಷಯವನ್ನು ಕುರಿತು ಬೇರೆಬೇರೆ ಜನರ ನಿಬಂಧಗಳನ್ನೂ ವ್ಯಾಸಗಳನ್ನೂ ವಿದ್ಯಾರ್ಥಿಗಳು ಪರಿಶೀಲಿಸುವುದು.

೨. ವಿದ್ಯಾರ್ಥಿಗಳಲ್ಲಿ ಉಪನ್ಯಾಸ-ಸಂಘಗಳನ್ನು ಮಾಡಿಸಿ ಅಲ್ಲಿ ಭಾಷಣ ಗಳು-ವಿಶೇಷವಾಗಿ ಖಂಡನ ಮಂಡನಾತ್ಮಕ, ಚರ್ಚಾತ್ಮಕ ಭಾಷಣಗಳನ್ನು-ಆಗುವ ಏರ್ಪಾಡು ಮಾಡುವುದು; ಮತ್ತು ಹಾಗೆ ಬರೆಯುವ ಯೋಜನೆ ಮಾಡುವುದು.

೩. ವಿಚಾರಪೂರ್ಣವಾದ ವಿದ್ವಾಂಸರ ಗ್ರಂಥಗಳನ್ನು, ಮಾಸಪತ್ರ ಮಾನಪತ್ರಗಳನ್ನು ಓದುವ ಸಾರಾಂಶ, ಹೇಳುವ ರೂಢಿಯನ್ನಿಡುವುದು.

೪. ಮಾಸಪತ್ರ ವರ್ತಮಾನಪತ್ರಗಳಿಗೆ ಲೇಖಗಳನ್ನು ಬರೆಯಿಸುವ ಏರ್ಪಾಡು ಮಾಡುವುದು.

೫. ಶಬ್ದಭಾಂಡಾರವು ಹೆಚ್ಚುವಂತೆ ಮಾಡುವುದು.

೬. ಭಾಷಾಶುದ್ಧಿಗೆ ಸಹಾಯಕವಾದ ವ್ಯಾಕರಣವಿಚಾರಗಳನ್ನು ಸುವುದು.

೭. ಭಾಷೆಯ ಗುಣಗಳು, ದೋಷಗಳು, ರಸಗಳು, ಅಲಂಕಾ ಇವುಗಳ ಪರಿಚಯಮಾಡಿಕೊಳ್ಳುವುದು.

೮. ದೊಡ್ಡವಿದ್ವಾಂಸರ ಗ್ರಂಥಗಳೊಳಗಿನ ಅವತರಣಗಳಲ್ಲಿ ಕೆಲ ಪಾಠಮಾಡಬಹುದು. ಗಾದೆಗಳನ್ನು, ಭಾಷಾಪದ್ಧತಿಗಳನ್ನು, ಆಧಾರವಾಕ್ಯಗ ಸಂಗ್ರಹಿಸಿಕೊಳ್ಳುವುದು.

ಮೇಲಿನ ತರಗತಿಗಳ ವಿದ್ಯಾರ್ಥಿಗಳ ನಿಬಂಧಗಳಲ್ಲಂತೂ ಮುಂದೆ ಹೆ ದೋಷಗಳು ಆಗಲೇಬಾರದು.

೧. ನಿಬಂಧವು ಹೆಚ್ಚಿನ ವಿಚಾರಗಳನ್ನು ಒಳಗೊಂಡಿರುವುದಿಲ್ಲ. ವಿಷಯವು ತಕ್ಕಮಟ್ಟಿಗಾದರೂ ಪೂರ್ಣವಾಗುವುದಕ್ಕೆ ಎಷ್ಟು ಮುಖ್ಯ-ಮಾ ವಿವೇಚನೆಯಿರಬೇಕೋ ಅಷ್ಟು ಮುಖ್ಯ-ಮಾತುಗಳ ವಿವೇಚನೆಯಿರುವುದಿಲ್ಲ. ವಾಕ್ಯವೃಂದ (ಪ್ಯಾರಾ) ಗಳು ಒಂದೊಂದು ಮುಖ್ಯಮಾತನ್ನು ಚೆನ್ನಾಗಿ ಪ್ರತಿಪ ವಂತೆ ರಚಿತವಾಗಿರುವುದಿಲ್ಲ. ೪. ನಿಬಂಧಗಳು ದೊಡ್ಡವಾಗುವು ಜೊಳ್ಳುಮಾತುಗಳಿಂದ ತುಂಬಿರುವುವು. ೫ ವಾಕ್ಯರಚನೆಯ ಮತ್ತು ವ್ಯಾ ದೋಷಗಳು ಕಾಣಬರುವವು. ೬. ಅನುಸರಣಪ್ರಿಯತೆಯು ಬಹಳ ಕಾಣಬರುವುದು. ೭. ಸ್ವಂತವಿಚಾರಗಳು, ಸ್ವಂತ ನಿರ್ಣಯ ಇವು ಕಾಣಬರು

ನಿಬಂಧ ಪುಸ್ತಕಗಳು—ಮಾದರಿಗಾಗಿ ನಿಬಂಧಗಳನ್ನು ಬರೆದ ಪುಸ್ತಕಗಳನ್ನು ಒದಿ, ಬಳಿಕ ವಿದ್ಯಾರ್ಥಿಗಳು ನಿಬಂಧಗಳನ್ನು ಬರೆಯುಬ ತಾವು ನಿಬಂಧವನ್ನು ಬರೆದ ಬಳಿಕ ಅಲ್ಲಿ ಹೇಗೆ ಬರೆದಿದೆಯೆಂಬುದನ್ನು ಕೊಳ್ಳುವುದಕ್ಕಷ್ಟೇ ಆ ಪುಸ್ತಕಗಳನ್ನು ಓದಬಹುದು. ಪುಸ್ತಕದೊಳಗಿನ ಗಳ ವಿಚಾರ, ರಚನೆ, ಭಾಷೆ ಮೊದಲಾದವುಗಳ ಮಾದರಿಯು ಜೊರೆಯುವು ಅನುಕರಣದಿಂದ ಪರವಿಚಾರದಾಸ್ಯವುಂಟಾಗುವ ಸಂಭವವುಂಟು.

ನಿಬಂಧವನ್ನು ಕಲಿಸುವ ಪಾಠದ ಒಂದು ಟಿಪ್ಪಣಿ ಕೆಳಗೆ ಕೊಟ್ಟಿ

(ಪ್ರಕೃತ ಲೇಖಕನು ತಾ॥ ೭-೮-೧೯೩೭ನೆಯ ದಿವಸ ಧಾರವಾಡ ಸ್ಕೂಲಿನ ವಿದ್ಯಾರ್ಥಿಶಿಕ್ಷಕರಿಗಾಗಿ ಪ್ರಾಯೋ. ಸ್ಕೂ. ನ ವಿದ್ಯಾರ್ಥಿಗಳಿಗೆ ಕಲಿ ಸಿದ ಪಾಠ.)

ನಿಬಂಧ ಪಾಠದ ಟಿಪ್ಪಣಿ

* ೫ನೆಯ ಇಯತ್ತೆ— ತಾ॥ ೭-೮-೧೯೩೭

ವಿಷಯ— ನಿಬಂಧ– ಸಾಕಿದ ಪಶುಗಳ ಮೇಲೆ ಪ್ರೀತಿ ಎಂಬ ಕಥೆ.

ವೇಳೆ— ೪೫ ನಿ.

ಉದ್ದೇಶ— ರಚನಾಶಕ್ತಿ, ಭಾಷಾಜ್ಞಾನ ಇವು ಬೆಳೆಯಬೇಕು.

ಉಪೋ— ಬಾಲಕರೇ, ನಾನು ಈಗ ನಿಮಗೆ ಕಥೆಯೊಂದನ್ನು ಓದಿ ಳುವೆನು; ನೀವು ಅದನ್ನು ತಿರುಗಿ ಹೇಳಬೇಕು, ಮತ್ತು ಬರೆಯಬೇಕು.

೧. ಕೆಳಗಿನ ಕಥೆಯನ್ನು ಓದುವುದು;

೧. ಒಬ್ಬ ಅರಬನು ಬಹಳ ಬಡವನಾಗಿದ್ದನು. ಅವನ ಬಳಿಯಲ್ಲಿ ಒಂದು ಡುರೆ ಮಾತ್ರ ಇತ್ತು. ಅದನ್ನು ಅವನು ಪ್ರೀತಿಯಿಂದ ಜೋಪಾನಮಾಡಿದ್ದನು.

೨. ಆ ಕುದುರೆಯನ್ನು ಕೊಂಡುಕೊಳ್ಳಬೇಕೆಂದು ಒಬ್ಬ ಸಾವುಕಾರನು ಂದನು. ಅರಬನು ಮನಸ್ಸಿಲ್ಲದಿದ್ದರೂ ಬಡತನದ ಸಲುವಾಗಿ ಅದನ್ನು ಕೊಡಲು ಒಪ್ಪಿದನು. ಸಾವುಕಾರನು, ಗೊತ್ತುಮಾಡಿದ ಅದರ ಬೆಲೆಯ ರೂಪಾಯಿ ಳನ್ನು ಅರಬನ ಮುಂದೆ ಎಣಿಸಿದನು; ಮತ್ತು ಕುದುರೆಯನ್ನು ಒಯ್ಯಲು ಸಿದನು.

೩. ಆಗ ಅರಬನು ಕುದುರೆಯ ಕಡೆಗೆ ನೋಡಿ– ಈ ವರೆಗೆ ಪ್ರೀತಿಯಿಂದ ಹಿದ ನನ್ನ ಕುದುರೆಯನ್ನು ಹೆರವರ ಕೈಗೆ ಹೇಗೆ ಕೊಡಲಿ, ಇದು ಇಲ್ಲದಿದ್ದರೆ ನ್ನ ಮನಸ್ಸಿಗೆ ಹೇಗೆ ಸೊಗಸಾದೀತು ಎಂದು ಮರುಗಿದನು.

೪. ಆಗ, ಅರಬನು ಆ ರೂಪಾಯಿಗಳನ್ನು ತಿರುಗಿ ಕೊಟ್ಟು ಸಾವುಕಾರ ನ್ನ ಹಾಗೆಯೇ ಹಿಂದಕ್ಕೆ ಕಳುಹಿದನು.

೨. ೨ನೆಯ ಬಾರಿ ಕಥೆಯನ್ನೋದುವುದು— (ಈ ಕಥೆಯನ್ನು ಳೆ ಈ ಮೊದಲು ೨ನೆಯ ಇಯತ್ತೆಯಲ್ಲಿ ಓದಿರುವಿರೆಂದು ನೆನಪಿಗೆ ತಂದು ಡಬಹುದು.)

ಈ ಸಾರೆ ದೊಡ್ಡ ಅಕ್ಷರಗಳನ್ನು ಹಾಕಿದಲ್ಲಿ ಪ್ರಶ್ನಗಳನ್ನು ಮಾಡುತ್ತ ಓದ ಸುದು. ಇದರಿಂದ ಕಥೆ ತಿಳಿಯುವುದನ್ನೂ ವಿದ್ಯಾರ್ಥಿಗಳ ಅವಧಾನವಿರುವುದನ್ನೂ ೀಡಲವಕಾಶವಾಗುವುದು.

* ನಿಬಂಧಶಿಕ್ಷಣವನ್ನು ಬಾಲಕರ ವರ್ಗದಿಂದ ಪಡೆದ ವಿದ್ಯಾರ್ಥಿಗಳಿವ್ವಲ್ಲಿ ಈ ಪಾಠ ದಕ್ಕೂ ಕೆಳಗಿನ ಇಯತ್ತೆಗೆ ತೆಗೆದುಕೊಳ್ಳಬೇಕು.

೩. **ಸಾರಾಂಶವನ್ನು ಕೇಳಿಕೊಳ್ಳುವುದು—** (ಈ ಕಥೆ ನಿಮಗೆ ದಿದೆ, ಹಾಗಾದರೆ ಹೇಳಿರಿ.)

ಪ್ರಶ್ನೆಗಳು **ಕ. ಹ. ಬರಹ**

೧. ಈ ಕಥೆಯಲ್ಲಿ ಆರಂಭದಲ್ಲಿ ಯಾರ ವಿಷಯವಾಗಿ ಹೇಳಿದೆ ? ೧ ಅರಬ.

೨. ತರುವಾಯ ಏನು ಹೇಳಿದೆ ? ೨ ಕುದುರೆಯ ವ್ಯಾಪಾರ

೩. ಬಳಿಕ ಏನು ಹೇಳಿದೆ? ೩ ಅರಬನ ಕಳವಳ (ಚಿಂತೆ)

೪. ಕೊನೆಯಲ್ಲಿ ಏನು ಹೇಳಿದೆ ? ೪ ವ್ಯಾಪಾರವನ್ನು ನಿಲ್ಲಿಸಿದ್ದ

೪. **ವಾಕ್ಯರಚನೆ—** (ಯಾವದೊಂದು ಮಾತನ್ನು) **ವಿಸ್ತರಿಸುವುದ**

ಅ. ಅರಬನು ಬಹಳ ಬಡವನಾಗಿದ್ದನು. (ಮನೆಯಲ್ಲಿ ತಿನ್ನಲಿಕ್ಕೆ ಕ ಕಡಿ ಇದ್ದಿಲ್ಲ. ಹೊದ್ದುಕೊಳ್ಳಲಿಕ್ಕೆ ಅರಿವೆಯಂಚಡಿ ಇದ್ದಿ ಕೊಳ್ಳಲಿಕ್ಕೆ ಹಣವಿದ್ದಿಲ್ಲ. ಮುಂತಾದ ರೂಪದಿಂದ ಈ ವಾಕ್ಯವ ವಿದ್ಯಾರ್ಥಿಗಳು ವಿಸ್ತರಿಸಬೇಕು.)

ಬ. ಈ ಮೇರೆಗೆ ಅವನು ಕುದುರೆಯನ್ನು ಪ್ರೀತಿಯಿಂದ ಜೋ ಮಾಡಿದ್ದನು.

[ಎಳಕರಿಕೆ, ಕಡಲೆಯ ದಾಣಿ, ತಿಳಿನೀರು, ಕರಾರಿ, ಮುಳ್ಳಿಲ್ಲದ ಕಡಿಸಾ ಮೃದುವಾದ ಜೀನು ಮುಂತಾದ ಶಬ್ದಗಳನ್ನು ಕೊಟ್ಟು ವಾಕ್ಯಗಳನ್ನು ಹೇಳುವುದು. ಈ ಮೇರೆಗೆ ವಾಕ್ಯವನ್ನು ವಿವರಿಸಲಿ.]

(ಯಾವದೊಂದು ಮಾತನ್ನು) **ಸಂಕ್ಷೇಪಿಸುವದು—**

" ಅವನ ಬಳಿಯಲ್ಲಿ ಚೆಲೋ ನಡಿಗೆಯ ಎತ್ತರವಾದ ಮತ್ತು ಚೆಂದವಾ ಈ ವಾಕ್ಯ ಭಾಗಕ್ಕೆ ಪ್ರತಿಯಾಗಿ ಒಂದು ಶಬ್ದವನ್ನು ಉಪಯೋಗಿಸಿರಿ. ' ಉತ್ತ ವಾದ ' ಇಲ್ಲವೆ ಉತ್ಕೃಷ್ಟವಾದ; ಎಂದು ಉತ್ತರವನ್ನು ಹೊರಡಿಸಿಕೊಳ್ಳುವುದು

ಯುಕ್ತತೆಯನ್ನು ಗ್ರಹಿಸುವುದು— ಕೆಳಗಿನ ವಾಕ್ಯಗಳನ್ನು ನೀವು ಹೇಳುವಿರಿ ?

೧ ಜಪಾನದೇಶದಲ್ಲಿ ಕಲ್ಲಪ್ಪನೆಂಬ ಒಬ್ಬ ಅರಬನಿದ್ದನು.

೨. ಆ ಕುದುರೆಯು ಬಡಿಗೆಯ ಹೊಡೆತವನ್ನರಿಯದು; ಬಾರುಕೋ ಏಟನ್ನು ಕಾಣದು. ಚಬಕದ ಸೆಳೆತವೆಂಬುದು ಅದಕ್ಕೆ ಗೊತ್ತಿರಲಿಲ್ಲ. ಗಳಲ್ಲಿ ಯಾವುದು ಸಮ ?)

೩. **ವ್ಯಾಕರಣ ವಿಚಾರ—** ಸಾವುಕಾರನು ರೂಪಾಯಿಗಳನ್ನು ಎಣಿಸಿ ; ಆದರೆ ಕುದುರೆಯನ್ನು ಒಯ್ಯಲನುವಾದನು. (ತಿದ್ದಿ ಹೇಳು !)

೫. **ವಾಚನಿಕ ನಿಬಂಧ—** ೧ನೆಯ ಭಾಗದ ವಿಷಯವಾಗಿ ಹೇಳು. ೨ಯ ಹಲಗೆಯ ಮೇಲೆ ೩ನೆಯ ಮೆಟ್ಟಿನಲ್ಲಿ ತೋರಿಸಿದ ಒಂದೊಂದು ಭಾಗದ ಯವಾಗಿ ೪।೬ ವಾಕ್ಯಗಳನ್ನು ರಚಿಸಿ ವಿದ್ಯಾರ್ಥಿಯು ಹೇಳಬೇಕು; ಆ ಮೇರೆಗೆ ಪೊಂದು ಭಾಗದ ವಿಷಯವಾಗಿ ಹಲವರು ಹೇಳಬೇಕು.)

ಇದೇ ಮೇರೆಗೆ ೨ನೆಯ ೩ನೆಯ ೪ನೆಯ ಭಾಗಗಳ ವಿಷಯವಾಗಿಯೂ ವರು ಹೇಳಬೇಕು.

೬. **ಕಥೆಗೆ ಯಾವ ಹೆಸರನ್ನಿಡುವಿರಿ?** "ಅರಬನೂ ಆತನ ಕುದು ೂ" "ಕುದುರೆಯನ್ನು ಸಾಕಿದ ಅರಬ" "ಸಾಕಿದ ಪಶುಗಳ ಮೇಲೆ ಪ್ರೀತಿ" ತಹ ಹೆಸರುಗಳನ್ನು ವಿದ್ಯಾರ್ಥಿಗಳು ಸೂಚಿಸಬಹುದು. ಅವುಗಳಲ್ಲಿ ಯೋಗ್ಯ ುವನ್ನು ಆರಿಸಹೇಳುವುದು.

೭. **ವಿದ್ಯಾರ್ಥಿಗಳ ಬರಹ—** ಮುಖ್ಯ ಸೂತ್ರಗಳನ್ನು ಗಮನಿಸಿದು ನ್ನು ನೋಡಿ ಬಳಿಕ ಬರೆಯಹೇಳುವುದು.

[ಅನುವಾದನು, ಹೆರವರ, ಸೊಗಸು, ಮರುಗು ಈ ಶಬ್ದಗಳನ್ನು ತಕ್ಕ ದರ್ಭದಲ್ಲಿ ಉಪಯೋಗಿಸಿರಿ.]

೮. **ನೋಡುವುದು—** ನೋಡಿ ತಿದ್ದುವುದು, ತಪ್ಪುಗಳ ಕಾರಣಗಳನ್ನು ುವುದು, ವಿದ್ಯಾರ್ಥಿಗಳು ಬರೆದ ನಿಬಂಧಗಳ ತರಗತಿಯನ್ನು ಗೊತ್ತುಮಾಡು ಸು.

ನಿಬಂಧ ಶಿಕ್ಷಣವಿಷಯವಾಗಿ ಹೇಳಬೇಕಾದುದನ್ನೆಲ್ಲ ಇಲ್ಲಿ ಹೇಳಿದೆನೆಂದು ತಿಳಿ ಾಗದು. ದಿಗ್ದರ್ಶನಕ್ಕಾಗಿ ಕೆಲವು ವಿಚಾರಗಳು ಇಲ್ಲಿ ಹೇಳಿವೆ. ಬಲ್ಲವರಾದ ರು ತಾವು ಹೆಚ್ಚಾಗಿ ವಿಚಾರಮಾಡಿ ಈ ವಿಷಯವನ್ನು ಕಲಿಸಲು ತೊಡಗುವ ು ಸಾರ್ಥಿಸಿದ್ದೇನೆ.

ಸಾರವಾಡ ಟ್ರೇನಿಂಗ್ ಸ್ಕೂಲ್
ತಾ॥ ೨೨-೬-೧೯೩೭

—ಎಂ. ಪಿ. ಪೂಜಾರ.

ಪ್ರ ಕ ಟ ನೆ

ಕನ್ನಡ ಬುಕ್ ಕಮಿಟಿ (ಧಾರವಾಡ) ಯವರು ಅಗಷ್ಟ ತಿಂಗಳಿನಲ್ಲಿ (೧೯೩೭) ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ವ್ಹ. ಟ್ರೇ. ಸಂ. = ವ್ಹರ್ನಾಕ್ಯುಲರ ಟ್ರೇನಿಂಗ ಸಂಸ್ಥೆ ; ಶಿ. = ಶಿಕ್ಷಕರು ; ವಿ. = ವಿದ್ಯಾರ್ಥಿಗಳು ; ಪ್ರಾ. ಶಾ. = ಪ್ರಾಥಮಿಕ ಶಾಲೆಗಳು

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂ. ಮಾಡಿದೆ.	ಮೈ. ಇ. ಸಾ. ಮಂ. ನಂಬರು.
೧	ಹಿಂದೀ ಹುಡುಗರ ಬುದ್ಧಿ ಮಾಪನವು ೧೯೩೬	ಮ್ಯಾನೇಜರ ದಿ. ಆಕ್ಸ ಫರ್ಡ ಯುನಿವ್ಹರ್ಸಿಟಿ ಪ್ರೆಸ್ ಬಾಂಬೆ	ಗ್ರಂ. ಕರ್ತರು	೧–೦–೦	ವ್ಹ. ಟ್ರೇ. ಸಂ.ಗಳ ವಿ.ಗಳ ಮತ್ತು ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ.	47/P 3785 7–8–37
೨	ನವಲಗುಂದ ತಾಲೂಕಿನ ಭೂಗೋಲು ೧೯೩೬	ಮ. ಏ. ಆರ್. ಶಿವನಾಗಪ್ಪ ಬುಕ್‌ಸೇಲರ ಹುಬ್ಬಳ್ಳಿ	ಗ್ರಂ. ಕರ್ತರು	೦–೨–೦	ಪ್ರಾ. ಶಾ.ಗಳ ಶಿ. ರ L ಬುಕ್ಕು	ಸದರ 3787 ಸದರ
೩	ಹೆಂಡಕುಡಿದ ಗುಂಡು ೧೯೩೬ ಆ. ೧೯೩೬	ಮೆ. ಎಸ್. ಎನ್. ಭಟ ದೇವನಿಮಠ, ಹಾಗು ಜಿ. ಎಸ್. ಭಟ ಕೆರೆ, ಗುಡೆ ಅಂಗಡಿ	ಎಸ್. ಎಮ್. ಭಟ ಗುಡೆ ಅಂಗಡಿ ಕುಮಟಾ	೦–೦–೬	ಪ್ರಾ. ಶಾ. ಗಳ ವಿ.ಗಳ L ಬುಕ್ಕು	ಸದರ 3895 9–8–37
	ಹಾನಗಲ್ಲ ತಾಲೂಕಿನ [illegible]	ಮ. ಎಮ್. ಸಿ. ಹಿರೇ	ಸಿದ್ದಿಂಗಯ್ಯಾ ಜವಳಿ ಮತ್ತ ಹೆ. ಪಾ. ಚಾ.	೦–೨–೦	ಪ್ರಾ. ಶಾ.ಗಳ ಶಿ.ರ L ಬುಕ್ಕು	ಸದರ 3897 ಸದರ

ಟ್ರೇನಿಂಗ ಕಾಲೇಜ

	(ತಿಗ್ಗಾಂಪ) ಭೂಗೋಲ ೧೯೩೪	ಶಿವನಾಗಪ್ಪ ಹುಬ್ಬಳ್ಳಿ				ಸದರ
೬	ಧ್ರುವ ೧೯೩೭	ಮೆ. ಎಸ್. ಎಮ್. ಭಟ ದೇವನಿಮತ ಹಾಗು ಜಿ. ಎಸ್. ಭಟ ಕೆರೆ ಗುಡಿ ಅಂಗಡಿ	ಎಸ್. ಎನ್. ಭಟ ಗುಡಿ ಅಂಗಡಿ	೦-೦-೬	ಪ್ರಾ. ಶಾ.ಗಳ ವಿ.ಗಳ L ಬುಕ್ಕು	ಸದರ 3901 ಸದರ
೭	ಧಾರವಾಡ ಜಿಲ್ಲಾ ಭೂಗೋಲು	ಮ. ಎ. ಆರ್. ಶಿವನಾಗಪ್ಪ ಬುಕ್‌ಸೆಲರ ಹುಬ್ಬಳ್ಳಿ	ಎ. ಆರ್. ಶಿವ ನಾಗಪ್ಪ ಹುಬ್ಬಳ್ಳಿ	೦-೪-೬	ಪ್ರಾ. ಶಾ.ಗಳ ಶಿ. ರ L ಬುಕ್ಕಾಗಿ	47/P 3903 9-8-37
	ಸೂ. ಮುಂದಿನ ಆವೃತ್ತಿ	ಯಲ್ಲಿ ತಪ್ಪುಗಳ ವ	ಅಚ್ಚುಪಡಿ	ಯ ತಪ್ಪುಗಳ	ಸುಧಾರಣೆ ಮಾಡಬೇಕು.	
೮	ಹುಬ್ಬಳ್ಳಿ ತಾಲೂಕಿನ ಭೂಗೋಲ ಸು. ಆ. ೧೯೩೭	ಸದರ	ಸದರ	೦-೨-೦	ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ	ಸದರ 3905 ಸದರ
೯	ಕುಂಕಾನ ಇಲಿಬುಡಕ	ಮೆ. ಎಸ್. ಎಮ್. ಭಟ ದೇವನಿಮತ ಹಾಗು ಜಿ. ಎಸ್. ಭಟ ಕೆರೆ ಗುಡಿ ಅಂಗಡಿ	ಎಸ್. ಎಮ್. ದೇವನಿಮತ ಗುಡಿ ಅಂಗಡಿ	೦-೦-೯	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 3907 ಸದರ
೧೦	ಗರ್ಭ ರತ್ನಾಕರ ೧೯೩೭	ಗಿರಿಜಾದೇವಿ ಇಚ್ಛುಂಗಿ ಮತ ಗರ್ಲ್ಸ, ಫ್ರೀ ಬೋರ್ಡಿಂಗ ಚರಂತೀ ಮತ ಓಣಿ ಧಾರವಾಡ	ಗ್ರಂಥಕರ್ತರು	೦-೬-೦	ಹೈ. ಸ್ಕೂ. ಸಂ.ಗಳ ವಿ.ಗಳ L ಬುಕ್ಕು ಹಾಗು ಪ್ರಾ. ಶಾ.ಗಳ ಶಿ.ರ L ಬು.	ಸದರ 3709

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಸ್ಕೂಲ ಬುಕ್ ಕಮೀಟಿಯವರು ೧೨-೬-೧೯೩೭ನೆಯು ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ. T=ಟೆಕ್ಸ್ಟ ಬುಕ್ಕು ; L ಲಾಯಬ್ರರಿ ಬುಕ್ಕು ; ವಿ=ವಿದ್ಯಾರ್ಥಿಗಳು ; ಶಿ=ಶಿಕ್ಷಕರು;

ಅ.ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ ಮಾಡಿದೆ;
೧	ಉರ್ದುಕಿ ಪಹಿಲಿ ಕಿತಾಬ ೨ನೆ. ಆ. ೧೯೩೫	ಶಮಸುಲ್ ಉಲೆಮಾ ಸೈಯದ ಮಮತಾರುಲಿಲಿ ಹಾಗು ಸನ್ಸ ಲಾಹೋರ	ದರುಲ್ ಇಶಾತ್ ಪಂಜಾಬ ಲಾಹೋರ	೦- ೭-೦	ಪ್ರಾ. ಶಾ. ಗಳ T ಬುಕ್ಕಾಗಿ
೨	ಉರ್ದುಕಿ ದುಸರಿ ಕಿತಾಬ ೨ನೆ ಆ. ೧೯೩೫	ಸದರ	ಸದರ	೦- ೮-೦	ಸದರ
೩	ಉರ್ದುಕಿ ತಿಸರಿ ಕಿತಾಬ ೨ನೆ ಆ. ೧೯೩೫	ಸದರ	ಸದರ	೦- ೯-೦	ಸದರ
೪	ಖಯಾಖಾನೆ ಉರ್ದು ಭಾ. ೧ ೧ನೆ ಆ. ೧೯೩೫	ಸದರ	ಸದರ	೦-೯-೧೦	ಸದರ
೫	ಖಯಾಖಾನೆ ಉರ್ದು ಭಾ. ೨ ೧ನೆ ಆ. ೧೯೩೫	ಸದರ	ಸದರ	೦-೧೦-೩	ಸದರ
	ಖಯಾಖಾನೆ ಉರ್ದು ಭಾ. ೩ ೧ನೆ ಆ. ೧೯೩೫	ಸದರ	ಸದರ	೦-೧೦-೯	ಸದರ

೧೯೩೭ ಜೂನ್ ೧೨

೮	ಉರ್ದು ವ್ಹರ್ನಾಕ್ಯೂಲರ ಭೂಮಿತಿ ಭಾ. ೧ ೧೯ೆ ಆ.	ಮಿಯಾ ಸಜ್ಜದ ಅಲಿ 'ಶಾಕಿರ್' ಮತ್ತು ಮುಹಮ್ಮದ ಹುಶೇನ ತಾರಕ್	ದಿ. ಬ್ರಿಟಾನಿಯನ್ ಪ್ರೆಸ್ ಬಾಂಬೆ	೦– ೮–೦	ಪ್ರಾ. ಶಾ. ಗಳ T ಬುಕ್ಕು
೯	ಅನೀಸುಲ್ ಕವಾಯಿದ್ ಭಾಗ ೨ ೪ನೆಯ ಇ. ಗಾಗಿ ೧೯ೆ ಆ. ೧೯೩೬	ಅಸಾದ ಅನ್ಸಾರಿ ನಾಸಿರ ಬಾದಿ	ಅಲಂಗೀರ ಪ್ರೆಸ್ ಲಾಹೋರ	೦– ೩–೦	ಸದರ
೧೦	ದೀನಿಯಾತಕಿ ಕಿತಾಬ ಭಾ. ೧ (ಆ. ೧೯೩೭)	ಮೌ. ಫಾಜಲುಲ್ಲಾಖಾನ ಶಹಾಜಹಾನ ಪುರಿ	ಇಲ್ಮಿಯಾ ಬುಕ್‌ಡಿಪೋ ಬಾಂಬೆ ೨	೦– ೧–೬	ಇಸ್ಲಾಮಿಕ ಶಾ. ಗಳ T ಬುಕ್ಕು
೧೧	ದೀನಿಯಾತಕಿ ದುಸರಿ ಕಿತಾಬ ಆ. ೧೯೩೭	ಸದರ	ಸದರ	೦– ೩–೦	ಸದರ
೧೨	ಜದೀದ ಉರ್ದು ಖತ್ ವ ಕಿತಾಬತ್ ಆ. ೧೯೩೭	ಸದರ	ಸದರ	೦– ೩–೬	ಪ್ರಾ. ಶಾ. ಗಳ ಶಿ. ರ L ಬುಕ್ಕು
೧೩	ರಫೀಕಿ ಸಯೂಹ ಆ. ೧	ಮುಹಮ್ಮದಖಾನ ಚಾಂದಖಾನ	ಅಜ್ಮಲ್ ಪ್ರೆಸ್ ಬಾಂಬೆ	೦– ೪–೬	ಪ್ರಾ. ಶಾ. ಗಳ ವಿ. ಗಳ L ಬುಕ್ಕು

ಸಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧೪	ಹಾಯಸ್ಕೂಲ್ ಜಾಗ್ರಫಿಯಾ (ಉರ್ದು) ಆ. ೧೯೩೭	ಎಲ್. ಡಡ್ಲೆ ಸ್ಟ್ಯಾಂಪ	ಲಾಂಗಮೆನ್ಸ ಗ್ರೀನ್ ಆ್ಯಂಡಕಂಪನಿ ಲಿ.ಬಾಂಬೆ	೧–೧೪–೦	ಪ್ರೌ. ಶಾ. ಗಳ ಶಿ. ರ L ಬುಕ್ಕು
೧೫	ಹಿಸ್ಟ್ರೀ ಆಫ್ ಮಹಾರಾಷ್ಟ್ರ ೧೯೩೪	ಮುನ್ಸಿ ಮಹ್ಮದ ಅಬ್ದುರ್ರಹಿಮಾನ ಅಹಮ್ಮದ ಸಾಹೇಬ ಉರ್ದು ಸ್ಕೂಲ ನಂ. ೧೦ ಪೂನಾ	ಮುಫೀದ–ಎ–ಆಮ್ ಪ್ರೆಸ್ ಲಾಹೋರ	೦– ೪–೦	ಪ್ರೌ.ಶಾ. ಗಳ T ಬುಕ್ಕು

ಮುಂಬಯಿ,
೩೭–೮–೧೯೩೭

ವ್ಹಿ. ಟಿ. ಘಾಟೆ.
ಎ. ಇ. ಬಿ. ಡಿ. ಆ್ಯಂಡ ಪ್ರೆಸಿಡೆಂಟ,
ಉರ್ದು ಸ್ಕೂಲ ಬುಕ್ ಕಮಿಟಿ ಬಾಂಬೆ.

ಪುಟ ೬

ಜಾಹೀರಾತು

ಕನ್ನಡ ಬಾಲಬೋಧನೆ

ಬಾಲಕರ ವರ್ಗದ ಶಿಕ್ಷಣವು ಸುಲಭವಾಯಿತು

ಅಕ್ಷರಗಳನ್ನು ತೀಡಿಸುತ್ತ ಬಾಲಕರ ವರ್ಗದ ಚಿಕ್ಕಮುಕ್ಕಳಿಗೆ ವಿತಕ್ಕೆ ಸವನ್ನುಂಟುಮಾಡುತ್ತೀರಿ! ಮೊದಲೇ ಓದುವದಕ್ಕೆ ಕಲಿಸಿರಿ. ಈ ಪದ್ಧತಿ ದ ಬಾಲಕರಿಗೆ ಬೇಸರವಿಲ್ಲ. ಶಿಕ್ಷಕರಿಗೆ ಶ್ರಮವಿಲ್ಲ. ಹೀಗೆ ಕಲಿಸುವದಕ್ಕೆ ಕೂಲವಾದ ಪುಸ್ತಕವೆಂದರೆ ಈ ಬಾಲಬೋಧನೆಯೊಂದೇ. ಬೆಲೆ ೧ ಆ. ೬ ಪೈ. ಕ್ರ. ಬಾಲಕರ ವರ್ಗಕ್ಕೆ ಪಠ್ಯಪುಸ್ತಕವೆಂದು ಮಂಜೂರ ಆಗಿರುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾಗಿ ಕಮೀಶನ್ನು, ಒಂದು ಊರಲ್ಲಿ ಒಬ್ಬರಿಗೇ ಾರದ ಹಕ್ಕು ದೊರಕುವದು. ಇಪ್ಪತ್ತು ಪುಸ್ತಕಗಳನ್ನು ಒಮ್ಮೆಲೆ ತರಿಸಿ ಡಲೆ ಅಂಚೇವೆಚ್ಚವಿಲ್ಲ. ಈ ಸವಲತ್ತು ಶಿಕ್ಷಕರಿಗೆ ಮಾತ್ರ. ಅದೂ ಇದೊಂದು ಳು. ಧಾರವಾಡದ ಕರ್ನಾಟಕ ಸಾಹಿತ್ಯಮಂದಿರದಲ್ಲೀಗ ಈ ಪುಸ್ತಕಗಳು ಕುತ್ತವೆ ಕಮೀಶನ್ನು ಮು. ರ ಸಂಬಂಧವಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ವ್ಹಿ. ಕಟ್ಟಿ ಹೆಡ್‌ಮಾಸ್ತರ ನರಸಾಪುರ,
(ತಾ. ಬದಾಮಿ.)

ಜಾಹೀರಾತು

(ಶ್ರೀ. ಉಮಡಿಕರ ಎಮ್. ಎ. ಕೃತ)

ಹಿಂದೂಪದ್ಧತಿಯ ಜಮಾಖರ್ಚು ಭಾಗ ೧ (ಹೊಸ ಆವೃತ್ತಿ)

ಪುಟ ೧೨೮ ಬೆಲೆ ೦–೧೦–೦

ಇದರ ಮೊದಲಿನ ಆವೃತ್ತಿ ತೀರಿದುದರಿಂದ ಈಗ ತಿನೆಯ ಆವೃತ್ತಿಯು ರಿಸಿ ವಿಸ್ತರಿಸಿ ಪ್ರಕಟಿಸಲ್ಪಟ್ಟಿದೆ. ಈ ಆವೃತ್ತಿಯಲ್ಲಿ ಮನೆಯ ಜಮಾ ನ್ನು ಹೇಗೆ ಬರೆಯಬೇಕೆಂಬದನ್ನು ವಿಸ್ತಾರವಾಗಿ ಬರೆದು ತೋರಿಸಿದೆ. ಎಲ್ಲ ರಣಗಳಲ್ಲಿ ಮೊದಲಿಗಿಂತ ಹೊಸ ಉದಾಹರಣಗಳನ್ನು ಸೇರಿಸಿದೆ.

ಪ್ರತಿಯೊಂದು ಪ್ರಕರಣದ ಕೊನೆಗೆ ಪ್ರಶ್ನಗಳಿವೆ. ಕಟ್ಟಕಡೆಗೆ ರೂಢಿಗಾಗಿ ಕಾಲೇಜ, ಸ್ಕೂಲಫಾಯನಲ್ ಪರೀಕ್ಷೆಗಳಿಗೆ ಬಿದ್ದ ಪ್ರಶ್ನಗಳು ಕೊಡ ಸಿ. ಜಮಾಖರ್ಚುಬರೆಯುವ ಇಂಗ್ಲಿಶ್ ಪದ್ಧತಿಯನ್ನು ದೇಶೀಯ ಪದ್ಧತಿ ಸೆ ಸೇರಿಸಿ ದೇಶೀಯ ಪದ್ಧತಿಯು ಈಗಿನ ಕಾಲಕ್ಕೆ ಹೇಗೆ ಉಪಯುಕ್ತವಾಗ ದೆಂಬದನ್ನು ತೋರಿಸುವದು ಈ ಪುಸ್ತಕದ ಗುರಿಯಾಗಿದೆ. ಈಗಿನ ಕಾಲದ ಸಕರು ಕೇವಲ ಹಳೆಯ ಪದ್ಧತಿಯ ಪುಸ್ತಕಗಳಿಗಿಂತ ಈ ಪುಸ್ತಕದಿಂದ ಹೆಚ್ಚಿನ ನ್ನ ಸದ್ಯಕ್ಕೆ ಬೇಕಾಗಿರುವ ಜ್ಞಾನವನ್ನು ಪಡೆಯಬಹುದು.

ಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು

ಕೃಷ್ಣಾಜಿ ರಾಮರಾವ ಕುಲಕರ್ಣಿ,
ಕಿಲ್ಲೆ ಧಾರವಾಡ

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ಪ್ಪಿ. ಕಾಮುತ, ಬಿ. ಎ. (ಆನ
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೈ|| ಡಾಯರೆಕ್ಟರಸಾ
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚು
ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ಬಾವ ಕಾಮುತ
ಶಿರ್ಶಿ, ಉ. ಕಾನಡಾ

ತ್ವರೆಮಾಡಿರಿ! ಬೆಲೆ ತೀರ ಕಡಿಮೆ!! ಹತ್ತೇ ಆಣೆಗ

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಜಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಮುಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂದ ತೋರಿಸಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆ ಕೊಟ್ಟಿದೆ. ಲ. ಸಾ. ಭಾ. ದೃ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ಗಳ ಸಮಾವೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನೆಗಳನ್ನೂ, ಶಿ ಪ. ದ ಪರೀಕ್ಷೆಯ ಪ್ರಶ್ನೆಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋ ಚನ್ನಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂ ಕಡಿಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಇಷ್ಟೇ ಸ್ವತಂತ್ರವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯು ಬಗ್ಗೆ ಬರೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆಯ್. ಆರ್. ಆಕಳವಾಡಿ ಎಂಡ ಸಂ

ರಾಮಾಶ್ರಯ ಬುಕ್‌ಡಿಪೋ, ಧಾ

ಫೆಬ್ರವರಿ ೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ಸಂ.	ವಿಷಯ.	ಪುಟ.
೧.	ನಮ್ಮ ಶಿಕ್ಷಣದ ವಿಚಾರಗಳು	೧
೨.	ಸ್ತ್ರೀಶಿಕ್ಷಣ	೪
೩.	ಪಾಠಗಳಲ್ಲಿ ಉಪಕರಣಗಳ ಉಪಯೋಗ	೧೧
೪.	ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆ ೧೯೩೭	೧೬
೫.	ಬ್ರಹ್ಮದೇಶ	೨೨
೬.	ಪ್ರಕಟನೆ	೪೦

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರಹ ಶಾಲೋಪಯೋಗಿ ಪುಸ್ತಕಗಳು ಸಿಗು
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹ

	ರೂ. ಪ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	೦-
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-
ಹಿಂದುಸ್ತಾನದ ಇತಿಹಾಸ (ಬಸವಪಸಾಳಕೃತ)	೧-
ಲಘುವ್ಯಾಕರಣ (ವೈ. ಕಟ್ಟೀಕೃತ)	೦-
ಪೇಟೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦-
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೮-
೩ನೇ ,,	೦-
,, ೪ನೇ ,,	೦-
ಅಂಕಗಣಿತ (ಗಾಂವಕರಕೃತ) ೩ನೇ ,,	೦-
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	೦-
ಭೂಮಿತಿ-ರೇಖಾಗಣಿತ (ಕುಲಕರ್ಣಿ ಕೃತ)	೦-
ಧಾರವಾಡ ಜಿಲ್ಲಾ ,, (ಕುರಡೀಕೃತ)	೦-
ಹಿಂದುಸ್ತಾನ ಭೂಗೋಲು (ಮುಗದಾಲಕೃತ)	೦-
ಪ್ರಶ್ನೋತ್ತರ ಜಮಾಖರ್ಚು (ಬೆಟಗೇರಿ ಕೃತ)	೧-
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೮-
.. ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೮-
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-
ಭೂಮಿತಿ (ಚಂದಾವರಕರ ಕೃತ)	೦-
ಸರಸ್ವತೀ ವಿಜಯ (ಬೂದೀಹಾಳಕೃತ)	೮-

ಪತ್ರೆ:— **ವಿ. ಆರ್. ಶಿವನಾಗಪ್ಪ,**
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಪುಟ ೭೬ | ಅಕ್ಟೋಬರ ೧೯೩೭ | ವರ್ಷ ೯ ಸಂ. ೭.

ನಮ್ಮ ಶಿಕ್ಷಣದ ವಿಚಾರಗಳು

ನಮ್ಮ ದೇಶದ ಪ್ರಗತಿಗಾಗಿ ಪ್ರಯತ್ನಿಸುತ್ತಿರುವ ಪ್ರಜಾಪ್ರಮುಖರಲ್ಲಿಯೂ
ಗಳ ಹಿತಚಿಂತನೆಯನ್ನು ಬಯಸುವ ಅಧಿಕಾರಿಗಳಲ್ಲಿಯೂ ಈಚೀಚೆಗೆ ಹೊಸ
ಮ ಭಾವನೆಯು ತಲೆದೋರಿದೆ. "ನಮ್ಮ ದೇಶದ ಶಿಕ್ಷಣದ ಯೋಜನೆ
ಕಾಲಾನುಗುಣವಾದ ಬದಲಾವಣೆಯಾಗಿಲ್ಲ; ಹಿಂದಿನ ಶತಮಾನದಲ್ಲಿ
ಕಾರ್ಯವನ್ನು ಮೊತ್ತಮೊದಲು ಪ್ರಾರಂಭಿಸಿದಾಗ ಜನತೆಯು ಹಾಗು
ನರದ ಮುಂದಿರುವ ಗುರಿಯು ಈಗ ತೀರ ಬದಲಾಗಿಹೋಗಿರುವದರಿಂದ ಆ
ದ ಯೋಜನೆಯು ಈ ಕಾಲಕ್ಕೆ ಎಷ್ಟುಮಾತ್ರಕ್ಕೂ ಪ್ರಯೋಜನಕಾರಿಯಾಗಿ
ಮಿಸಲಾರದು" ಎಂಬ ಬಹುಮುಖದ ಕೋಲಾಹಲವು ಅಲ್ಲಲ್ಲಿ ಕೇಳಿಬರ
ಗಿದೆ. ೧೯೩೬ನೆಯ ಇಸ್ವಿಯು ಅಗಷ್ಟ ತಿಂಗಳಲ್ಲಿ ಹಿಂದುಸ್ತಾನ ಸರಕಾರ
ಯ ಇಂಗ್ಲಂಡದೊಳಗಿನ ಇಂಡಿಯಾ ಆಫೀಸಿನಲ್ಲಿದ್ದ ಸ್ಟೇಟ ಸೆಕ್ರೆಟರಿಯವರಿಗೆ
ಯ ವಿನ್ನಹಪತ್ರವನ್ನು ಕಳುಹಿದರು. ಅದರಲ್ಲಿ ಇಂಗ್ಲಂಡದೊಳಗಿನ ಬೋರ್ಡ
ಎಜ್ಯುಕೇಶನ್ನಿನಲ್ಲಿ ಕೆಲಸಮಾಡುತ್ತಿರುವ ಕೆಲವರು ತಜ್ಞರು ಈ ದೇಶಕ್ಕೆ
ಯ ಇಲ್ಲಿಯ ಶಿಕ್ಷಣ ಕ್ರಮದ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ, ಬೇರೆ ಬೇರೆ
ಗಳಲ್ಲಿ ಪ್ರವಾಸಮಾಡಿ, ಪ್ರತ್ಯಕ್ಷನೋಡಿ, ತಮಗೆ ತಿಳಿದುಬರುವ ಪರ್ಯಂತದ ಸ್ಥಿತಿ
ಯ ಕುಂದುಕೊರತೆಗಳನ್ನು ಅವಲೋಕಿಸಿ, ಯೋಗ್ಯ ಸೂಚನೆಗಳನ್ನು

ಸರಕಾರದ ಮುಂದಿಡಬೇಕೆಂದೂ ಅಂಥ ಹತ್ತು ಜನರನ್ನು ಆರಿಸಿ ಕೂಡಲೆ ಹಿಂದು ಸ್ಥಾನಕ್ಕೆ ಕಳುಹಿಸಿಕೊಟ್ಟು ನಮಗೆ ಸಹಾಯಮಾಡಬೇಕೆಂದೂ ಕೇಳಿಕೊಳ್ಳಲಾಗಿತ್ತು. ಆ ವಿಜ್ಞಾಪನೆಯ ಮೇರೆಗೆ ಹತ್ತುಜನರನ್ನು ಆರಿಸಿ ಕಳುಹಿಸುವ ಬೋರ್ಡ ಆಫ್ ಎಜ್ಯುಕೇಶನ್ನಿನವರಿಗೆ ಸಾಧ್ಯವಾಗದೆ ಇದ್ದುದರಿಂದಲೂ ಮಿಕ್ಕಿನ್ನಿ ತೊಂದರೆಗಳಮೂಲಕವಾಗಿಯೂ ಆದೇಶದಲ್ಲಿ ತಜ್ಞರೆನಿಸಿಕೊಂಡಂಥ, (೧) ಬ್ರಿಟಿಷ್ ಸ್ಕೂಲುಗಳ ಇನ್‌ಸ್ಪೆಕ್ಟರರಾದ **ಮಿ. ಅಬಟ್** ಮತ್ತು (೨) ಡಾಯರೆಕ್ಟರ ಆ ಇಂಟೆಲಿಜನ್ಸಿನ ಕೆಲಸವಮಾಡುತ್ತಿರುವ **ಮಿ. ವುಡ್** ಎಂಬ ಇಬ್ಬರನ್ನು ಮಾತ್ರ ಆರಿಸಿ ಈ ದೇಶಕ್ಕೆ ಕಳುಹಿಸಿದರು. ಕಳೆದ ನವಂಬರ ತಿಂಗಳ ೨೦ನೆಯ ತಾರೀಖಿ ಅವರಿಬ್ಬರೂ ಹಿಂದುಸ್ಥಾನಕ್ಕೆ ಬಂದರು. ಅವರು ಪಂಜಾಬ, ದಿಲ್ಲಿ ಮತ್ತು ಸಂಯು ಪ್ರಾಂತ ಈ ಮೂರು ಪ್ರಾಂತಗಳಲ್ಲಿ ಪ್ರವಾಸಮಾಡಿ ಅನೇಕ ಸಂಸ್ಥೆಗಳ ಸಂದರ್ಶಿಸಿ ಹಲವರು ಅಧಿಕಾರಿಗಳನ್ನು ಕಂಡು ಮಾತಾಡಿ ಅವರ ಅಭಿಪ್ರಾಯ ಗಳನ್ನು ಕೇಳಿಕೊಂಡು ಒಂದು ಸವಿಸ್ತಾರವಾದ ವರದಿಯನ್ನು ೧೯೩೫ ಇಸ್ವಿಯ ಮೇ ತಿಂಗಳಲ್ಲಿ ಹಿಂದುಸ್ಥಾನ ಸರಕಾರಕ್ಕೆ ಒಪ್ಪಿಸಿದರು. ಆಧುನಿ ಶಿಕ್ಷಣಸಂಸ್ಥೆಗಳಲ್ಲಿ ಶಿಕ್ಷಣಹೊಂದಿದ ವಿದ್ಯಾರ್ಥಿಗಳು, ಸುಶಿಕ್ಷಿತರೆನಿಸಿಕೊಂ ವವರು, ಸದ್ಯಕ್ಕಿಂತಲೂ ಹೆಚ್ಚಿನ ಮಟ್ಟಕ್ಕೆ ಹೋಗುವಂತೆ ಮಾಡುವದು, ಅವ ಔದ್ಯೋಗಿಕ ಅಭಿರುಚಿಯನ್ನು ಹೆಚ್ಚಿಸುವದು, ದೇಶದ ಉದ್ಯೋಗ ವ್ಯವಸಾಯ ಅಭಿವೃದ್ಧಿ, ಈಗಿರುವ ಶಿಕ್ಷಣ ಸಂಸ್ಥೆಗಳ ದೋಷಗಳನ್ನು ಹೇಗೆ ದೂರಮಾಡಿ ಬಹುದು ? ಈ ಸಂಸ್ಥೆಗಳಿಂದ ಹೆಚ್ಚು ಪ್ರಯೋಜನವನ್ನು ಪಡೆಯಬೇಕಾದ ಯಾವ ಮಾರ್ಗವನ್ನು ಅವಲಂಬಿಸಬಹುದು ? ಇವೇ ಮೊದಲಾದ ಹಲವು ಮಹ ವಿಚಾರಗಳು ಈ ವರದಿಯಲ್ಲಿ ಅಡಕವಾಗಿವೆ. ಅವುಗಳಲ್ಲಿ ಪ್ರಾಥಮಿಕ ಶಿಕ್ಷಣ ಸಂಬಂಧಿಸಿದ ಹಲ ಕೆಲವು ವಿಚಾರಗಳನ್ನು ನಾವು ಇನ್ನೊಮ್ಮೆ ವಿವರಿಸುವ ಸದ್ಯಕ್ಕೆ ಅವರು ಹೇಳುವ ಸಾಮಾನ್ಯ ಶಿಕ್ಷಣಕ್ಕೆ (General Educatio ಸಂಬಂಧಿಸಿದ ಕೆಲವು ಮಹತ್ವದ ಸೂಚನೆಗಳನ್ನು ಮಾತ್ರ ಇಲ್ಲಿ ಹೇಳುವೆವು.

೧. ಸಾಧ್ಯವಿದ್ದ ಮಟ್ಟಿಗೂ ಬಾಲಕರ ವರ್ಗದ ಶಿಕ್ಷಣಕಾರ್ಯವ ಶಿಕ್ಷಕಿಯರಿಗೆ ಒಪ್ಪಿಸಬೇಕು. ಅದಕ್ಕಾಗಿಯೂ ಮಿಕ್ಕ ಕಾರಣಗಳಿಗಾಗಿಯೂ ಶಿಕ್ಷಣವು ಹೆಚ್ಚು ಪ್ರಮಾಣದಿಂದಲೂ ಹೆಚ್ಚು ಸುವ್ಯವಸ್ಥಿತವಾಗಿಯೂ ನಡೆಯುವ ಅತ್ಯಗತ್ಯವು ಮಾತಾಗಿದೆ.

೨. ಸದ್ಯಕ್ಕೆ ಪ್ರಾಥಮಿಕ ಶಾಲೆಗಳೊಳಗಿನ ವಿದ್ಯಾರ್ಥಿಗಳ ಶಿಕ್ಷಣವು ಕೆ ಪುಸ್ತಕಪಾಠಗಳನ್ನೇ ಅವಲಂಬಿಸಿದೆ. ಅದು ಸಾಧ್ಯವಿದ್ದಮಟ್ಟಿಗೂ ಸ್ವಾಭಾ

ಪ್ಪೂ ಬಾಲಕರ ಚಟುವಟಿಕೆಗಳಿಗೆ ಅನುಗುಣವಾಗಿಯೂ ಆಗಿರಬೇಕು. ಲಕರಿಗೆ ಓದುಬರೆಹಗಳನ್ನು ಕಲಿಸಿ ಅವರನ್ನು ಸಾಕ್ಷರಿಗಳನ್ನಾಗಿ ಮಾಡುವದೇ ಥಮಿಕ ಶಿಕ್ಷಣದ ಧ್ಯೇಯವೆಂಬ ತೀರಸಾಮಾನ್ಯವಾದ ಗುರಿಯನ್ನು ಮುಂದೆ ಟ್ಟುಕೊಳ್ಳುವದು ಯೋಗ್ಯವಲ್ಲ.

೩. ಮಿಡಲ್ ಸ್ಕೂಲುಗಳ ಅಭ್ಯಾಸ ಕ್ರಮವೂ ಕೂಡ ಬಾಲಕರ ಪರಿಸ್ಥಿತಿಗೆ ಂಬ ಅನುಗುಣವಾದದ್ದಿರಬೇಕು. ಆ ಶಾಲೆಗಳಲ್ಲಿ ಇಂಗ್ಲಿಷ ಭಾಷೆಯನ್ನು ಸುವಾಗ ಆ ಭಾಷಾಭ್ಯಾಸವೇ ಮುಖ್ಯ ಗುರಿಯಾಗಿರಕೂಡದು. ಅದಕ್ಕಾಗಿಯೇ ಲಕರ ವೇಳೆಯ ಬಹುಭಾಗವು ಹೋಗಲಾಗದು.

೪. ಹೈಸ್ಕೂಲುಗಳ ಅಭ್ಯಾಸವೆಲ್ಲ ದೇಶಭಾಷೆಯ ಮೂಲಕವಾಗಿಯೇ ಗತಕ್ಕದ್ದು. ಆದರೆ ಈ ಶಾಲೆಗಳ ಎಲ್ಲ ವಿದ್ಯಾರ್ಥಿಗಳು ಇಂಗ್ಲಿಷ ಭಾಷೆಯನ್ನು ಶ್ಯಕ ವಿಷಯವಾಗಿ ಕಲಿಯಲೇಬೇಕು.

೫. ಇಂಗ್ಲಿಷ ಭಾಷೆಯ ಅಭ್ಯಾಸವನ್ನು ಸಾಧ್ಯವಿದ್ದಷ್ಟು ವ್ಯವಹಾರಾನು ಣವಾಗಿ ನಡೆಯಿಸಬೇಕು. ಸಾಮಾನ್ಯತರಗತಿಯ ವಿದ್ಯಾರ್ಥಿಗಳು ಸಹ ಂಗ್ಲಿಷ ಗದ್ಯಪದ್ಯಕಾವ್ಯಗಳನ್ನು ಭಾಷಾಧ್ಯಯನದ ಗುರಿಯನ್ನಿಟ್ಟುಕೊಂಡೇ ಲಿಯಬೇಕೆಂದು ನಿರ್ಬಂಧಿಸಲಾಗದು. ವಿಶಿಷ್ಟತರಗತಿಯ ಅಥವಾ ವಿಶಿಷ್ಟ ಯ ಸಾಧನೆಗಾಗಿ ಯತ್ನಿಸುವ ವಿದ್ಯಾರ್ಥಿಗಳ ಸಲುವಾಗಿ ಈ ಶಾಲೆಗಳಲ್ಲಿ ಂಗ್ಲಿಷ ಭಾಷಾಭ್ಯಾಸಕ್ಕಾಗಿ ವಿಶಿಷ್ಟತರದ ಯೋಜನೆಯನ್ನಿಟ್ಟುಕೊಳ್ಳಬಹುದು.

೬. ಕೈಕೆಲಸ ಮತ್ತು ಉದ್ಯೋಗವ್ಯವಸಾಯಗಳಿಗೆ ಸಂಬಂಧಿಸಿದ ವಿಷಯ ಶಿಕ್ಷಣವು ಎಲ್ಲ ಶಾಲೆಗಳ ಅಭ್ಯಾಸ ಕ್ರಮದಲ್ಲಿ ಸೇರ್ಪಡೆಯಾಗಿರಬೇಕು.

೭. ಶಾಲೆಗಳಲ್ಲಿ ಕಲಾಶಿಕ್ಷಣಕ್ಕೆ (Teaching of Art) ಹೆಚ್ಚು ಸ್ಥಿತವಾದ ಯೋಜನೆಯಿರಬೇಕು. ಆ ಕಡೆಗೆ ಬಾಲಕರ ಲಕ್ಷ್ಯವಿರಬೇಕು. ವಿಷಯಗಳನ್ನು ಕಲಿಸುವದಕ್ಕಾಗಿ ಪ್ರತಿ ಹೈಸ್ಕೂಲಿನಲ್ಲಿಯೂ ತಜ್ಞರಾದ ಕರನ್ನು ನಿಯಮಿಸಿಕೊಳ್ಳಬೇಕು.

೮. ಶಾರೀರಿಕ ಶಿಕ್ಷಣವು ಬರೀ ವ್ಯವಸ್ಥಿತವಾದ ಆಟಗಳು, ಅಂಗಸಾಧನೆ ಳಿಂದಲೇ ಪೂರ್ಣವಾಗಲಾರದು. ಚಿಕ್ಕಮಕ್ಕಳಿಗೆ ಆಟದ ಬಯಲಿನಲ್ಲಿ ಷ್ಟು ಕೆಲಸ ಮಾಡಲಿಕ್ಕೂ ಹೆಚ್ಚು ಹೊತ್ತು ಅಲ್ಲಿರಲಿಕ್ಕೂ ಅನುಕೂಲತೆಯನ್ನು ಸಿಕೊಡಬೇಕು.

೯. 'ಶಿಕ್ಷಕ ಶಿಕ್ಷಣ' (Training of teachers) ದಲ್ಲಿ ಎ ವಿಭಾಗಗಳಿರಬೇಕು. ಶಿಕ್ಷಕರ ಕೆಲಸವನ್ನು ಪ್ರಾರಂಭಿಸುವದಕ್ಕಿಂತ ಮೊ ಟ್ರೇನಿಂಗ್ ಪಡೆದ ಬಳಿಕ ಒಮ್ಮೆ, ಕೆಲವು ವರ್ಷಗಳವರೆಗೆ ಕೆಲಸ ಅನುಭವಪಡೆದತರುವಾಯ ಮತ್ತೊಮ್ಮೆ ಹೀಗೆ ಎರಡು ಸಾರಿ ಅವರು ಟ್ರೇನಿ ಸಂಸ್ಥೆಗೆ ಹೋಗಿ ಶಿಕ್ಷಣಪಡೆಯುವಂತೆ ಯೋಜನೆಯಿರಬೇಕು. ಸರಕಾರದ ಇಂಥ ಶಿಕ್ಷಣಸಂಸ್ಥೆಗಳನ್ನು ಪ್ರಾರಂಭಿಸಬೇಕು.

೧೦. ಪ್ರಾಥಮಿಕ ಹಾಗು ಮಾಧ್ಯಮಿಕಶಾಲೆಗಳ ಶಿಕ್ಷಕರಾಗಲಿಚ್ಛಿಸುವ ಕನಿಷ್ಟ ಮೂರು ವರ್ಷಗಳವರೆಗೆ ಟ್ರೇನಿಂಗ್ ಪಡೆದ ತರುವಾಯವೇ ಕೆಲ ಹೋಗಬೇಕು.

೧೧. ಅಯೋಗ್ಯವಾದ ಆಡಳಿತದ ಸಂಬಂಧದಿಂದ ಸ್ಥಾನಿಕ ಸಂಸ್ಥೆ ಮೇಲೆ ಸರಕಾರದ ಯೋಗ್ಯ ನಿಯಂತ್ರಣವಿರಬೇಕು.

೧೨. ವಿದ್ಯಾಖಾತೆಯ ಅಧಿಕಾರಸ್ಥಾನದಲ್ಲಿರುವ ಸಂಸ್ಥೆಗಳೂ ಅಧಿಕಾರಿಗ ಹೆಚ್ಚು ದೀರ್ಘಕಾಲದ ಕಾರ್ಯಕ್ರಮವನ್ನು ಕೈಕೊಳ್ಳಲು ಅನುಕೂ ಇರಬೇಕು. ಅವರು ಆಗಾಗ ಬದಲಾಗಬಾರದು.

೧೩. ಇನ್‌ಸ್ಪೆಕ್ಟಿಂಗ್ ಆಫೀಸರರು ಅನೇಕ ಅಧಿಕಾರಿಗಳ ಆಳಿಕೆಗೆ ಒಳಪ ತೊಂದರೆಗೀಡಾಗುವಂತಿರಬಾರದು. ಅವರಿಗೆ ಸಾಕಾದಷ್ಟು ಪ್ರವಾಸವ ಕಾರ್ಯ ಮಾಡುವದಕ್ಕೆ ಅವಶ್ಯವಿರುವಷ್ಟು ಪ್ರವಾಸ ಭತ್ತೆಯು ದೊರೆಯಬೇಕು

೧೪. ಇನ್‌ಸ್ಪೆಕ್ಟರರೂ ಆರಿಸಿದ ಹಲಕೆಲವು ಶಿಕ್ಷಕರೂ (ಹಣದ ಅನುಕ ತೆಯಿರುವ ಮಟ್ಟಿಗೆ) ಪರದೇಶಗಳಿಗೆ ಹೋಗಿ ಅಲ್ಲಿಯ ಶಿಕ್ಷಣಕಾರ್ಯವ ನೋಡಿ ಬರಲು ಅನುಕೂಲತೆಯನ್ನು ಕಲ್ಪಿಸಿಕೊಡಬೇಕು.

ಸ್ತ್ರೀ ಶಿಕ್ಷಣ

ಸ್ತ್ರೀಶಿಕ್ಷಣದ ಮಹತ್ವವೆಷ್ಟೆಂಬದು ಇನ್ನೂ ನಮ್ಮನವರಿಗೆ ಸರಿಯಾಗಿ ಅ ವಾದಂತಿಲ್ಲ. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪರಿಮಿತಿಯೂ ಅಭ್ಯಾಸದ ವಿಷ ಗಳೂ ಅವುಗಳನ್ನು ಕಲಿಸುವ ಸಾಲೆಕಾಲೇಜಗಳ ಯೋಜನೆಯೂ ಯಾವ ಯಾಗಿ ಆಗಬೇಕೆಂಬ ಅರೀತಿಯಾಗಿ ಇನ್ನೂ ಆಗಿಲ್ಲವೆಂದೇ ಹೇಳಬೇಕಾ

ಶಿಕ್ಷಿತರ ಸಂಖ್ಯೆಯನ್ನು ಬೆಳೆಯಿಸಿ ನಿರಕ್ಷರತೆಯ ಪ್ರಮಾಣವನ್ನು ಕಡಿಮೆ ಗಡುವ ಅತಿ ಮಹತ್ವದ ಪ್ರಶ್ನೆಯು ನಮ್ಮ ಕಣ್ಣಮುಂದೆ ಕಟ್ಟಿರುವಾಗ ಮುಂದ ಯಿಂದ ಮುಂದಡಿಯಿಡುತ್ತ ಸಾಗಿರುವ ನಮ್ಮ ಪ್ರಗತಿಯು ಈ ವಿಷಯಗಳಲ್ಲಿ ಯಾಗಿಲ್ಲವೆಂದು ಹೇಳಿದರೆ ತಪ್ಪಾಗದು. ಸ್ತ್ರೀಯರಿಗೆ ಕಲಿಸಿದರೆ ಜನಾಂಗಕ್ಕೇ ಶಿಸುತಾಗುವದೆಂದೂ ಹೆಣ್ಣುಮಕ್ಕಳ ವಿದ್ಯಾಭ್ಯಾಸವೆಂದರೆ ತಾಯಂದಿರ ವ್ಯಾಭ್ಯಾಸವೆಂದೂ ತನ್ಮೂಲಕ ಅವರ ಮಕ್ಕಳ ವಿದ್ಯಾಪ್ರಗತಿಯೆಂದೂ ಳಿಯಗುವದು. ಸುಶಿಕ್ಷಿತರಾದ ಸ್ತ್ರೀಯರು ದೇಶದ ಒಂದು ಅತಿ ಬಲಶಾಲಿಯಾದ ಗವೆಂದು ತಿಳಿಯಲ್ಪಡುವರು.

ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಗತಿಗೆ ಮೂರು ಪ್ರಬಲವಾದ ಪ್ರತಿಬಂಧ ಗಳಿವೆ. ತಂದೆತಾಯಿಗಳು ಪುರಾತನ ಮಾರ್ಗಕ್ಕೆ ಅಂಟಿಕೊಂಡವರಾಗಿದ್ದುದ ದ ಅವರ ಧಾರ್ಮಿಕ ಭಾವನೆಯೂ ಪ್ರಾಪಂಚಿಕ ಪ್ರತಿಕೂಲತೆಯೂ ಹೆಣ್ಣು ಕ್ಕಳನ್ನು ಸಾಲೆಗೆ ಕಳುಹಿಸಲಿಕ್ಕೆ ಪ್ರಬಲವಾದ ತಡೆಯನ್ನುಂಟುಮಾಡುತ್ತಿವೆ. ಲವಿವಾಹದ ಪದ್ಧತಿಯು ಮೂಲಕ ನಮ್ಮ ದೇಶದ ಬಾಲಿಕೆಯರು ಇನ್ನೂ ಪೂರ್ಣ ಭುಸ್ಸಿನಲ್ಲಿಯೇ ಸಂಸಾರದ ಹೊರೆಯನ್ನು ಹೊರಬೇಕಾಗುವದರಿಂದಲೂ ಅವರನ್ನು ಸ್ತ್ರೀ ಪ್ರಾಥಮಿಕ ಶಾಲೆಯ ಅಭ್ಯಾಸವು ಪೂರ್ಣವಾಗುವದಕ್ಕಿಂತ ಮೊದಲೇ ಸಾಲೆ ಂದ ಬಿಡಿಸಿಕೊಳ್ಳಬೇಕಾಗುವದು. ಮಹಮ್ಮದೀಯರಲ್ಲಿ ಧಾರ್ಮಿಕ ಭಾವನೆ ಂದ ಪ್ರಚಾರದಲ್ಲಿರುವ "ಪರದಾ" ಪದ್ಧತಿಯಂತೂ ಹೆಣ್ಣುಮಕ್ಕಳ ವ್ಯಾಭ್ಯಾಸಕ್ಕೆ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಯನ್ನುಂಟುಮಾಡಿದೆ. ಈ ಮೂರು ಎಲಕಾರಣಗಳಲ್ಲದೆ ಶಾಲೆಗಳಲ್ಲಿ ಯೋಗ್ಯರಾದ ಶಿಕ್ಷಕೆಯರಿಲ್ಲದಿರುವದೂ ಸ್ತ್ರೀ ವ್ಯಾಭ್ಯಾಸದ ಪ್ರಗತಿಗೆ ತುಂಬಾ ಪ್ರತಿಬಂಧವನ್ನುಂಟುಮಾಡಿರುವದು.

ಇಷ್ಟಾದರೂ ಪರಿಸ್ಥಿತಿಯ ಪ್ರಬಲವಾದ ಪ್ರೇರಣೆಯಿಂದ ಜನತೆಯಲ್ಲಿ ಕಸ್ಮಿ ಜಾಗ್ರತೆಯುಂಟಾಗಿರುವದನ್ನು ನಾವು ಪ್ರತ್ಯಕ್ಷ ಕಾಣಬಹುದಾಗಿದೆ. ಶಿಕ್ಷಣದ ವಿಷಯದಲ್ಲಿ ಜನರಲ್ಲಿ ರೂಢಮೂಲವಾಗಿದ್ದ ತಿರಸ್ಕಾರ, ವಿರುದ್ಧ ಸನೆ, ಅನಾದರ ಮುಂತಾದ ಅಯೋಗ್ಯ ತಿಳಿವಳಿಕೆಗಳು ಕ್ರಮವಾಗಿ ದೂರಾಗುತ್ತ ಮತ್ತು ಹೆಣ್ಣುಮಕ್ಕಳು ಗಂಡುಮಕ್ಕಳಂತೆ ಕಲಿತರೂ ಕಲಿಯಲಿ, ನಾವೇಕೆ ಬರಬೇಕು, ಎಂಬ ಸೌಮ್ಯ ಭಾವನೆಯೊಂದು ಪಾಲಕರಮನಸ್ಸಿನಲ್ಲಿ ಈಗೀಗ ಸಮವಾಗುತ್ತಲಿದೆ. ಸಮಾಜಸುಧಾರಣೆಯ ಮಾರ್ಗದಲ್ಲಿ ಪ್ರಯತ್ನಿಸುತ್ತಿರುವ ಸಾರಕರ ಪ್ರಯತ್ನದ ಫಲವಾಗಿ ಸ್ತ್ರೀಶಿಕ್ಷಣದ ವಿಚಾರವು ಮೊದಲು ನಮ್ಮಲ್ಲಿ ನೋನಿತು. ಮೊತ್ತಮೊದಲು ಸಮಾಜದೊಳಗಿನ ಅನಿಷ್ಟಕಾರಕವಾದ ಹಲವೆಲವು

ರೂಢಿಗಳನ್ನೂ ಅನಾಚಾರ ಅತ್ಯಾಚಾರಗಳನ್ನೂ, ಹೊಡೆದೋಡಿಸಲು ಸ್ತ್ರೀಶಿಕ್ಷಣ
ಒಂದು ಪ್ರಬಲವಾದ ಆಯುಧವೆಂದು ಜನರ ಭಾವನೆಯುಂಟಾಯಿತ
ಬರಬರುತ್ತ ಈ ವಿಚಾರವು ಒಳ್ಳೆಯ ಗೃಹಿಣಿಯರೂ ಒಳ್ಳೆಯ ತಾಯಂದಿ
ಆಗಬೇಕಾದರೆ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸವು ಆವಶ್ಯಕವೆಂಬ ತಿಳಿವಳಿಕೆಯ
ಮೂರ್ಪಟ್ಟಿತು. ಆಗ ಹೆಣ್ಣುಮಕ್ಕಳು ಸರಕಾರದ ನೌಕರಿಗಾಗಿ ಕಲಿಯಬೇಕೆ
ವಿಚಾರವಿರಲಿಲ್ಲ. ಸಮಾಜಸುಧಾರಣೆಯ ಕಾರ್ಯಕ್ರಮವು ಮುಂದೆ ಸಾಗು
ಹೋದಂತೆ ನಮ್ಮ ಸ್ತ್ರೀಸಮಾಜವು ನಾನಾದಿಕ್ಕುಗಳಲ್ಲಿ ಪ್ರಗತಿಹೊಂದು
ಬಂದು ವಿವಾಹದ ಕಾಲವು ಮುಂದೆ ಬೀಳುತ್ತ, ಪ್ರೌಢವಿವಾಹವು ಪ್ರಚಾರ
ಬರತೊಡಗಿತು. ಗಂಡುಮಕ್ಕಳೊಡನೆಯೇ ಹೆಣ್ಣುಮಕ್ಕಳೂ ವಿದ್ಯಾ
ಮಾಡತೊಡಗಿದರು. ಹಲವರು ಶಿಕ್ಷಕಿಯರಾಗಿಯೂ ವೈದ್ಯಕೀ ವೃತ್ತಿಯ
ಡಾಕ್ಟರ ನರ್ಸ ಮೊದಲಾದ ತರಗತಿಗಳಲ್ಲಿಯೂ ಸ್ವಸಂತೋಷದಿಂದ ಕಲಸ
ತೊಡಗಿದರು. ಜನತೆಯ ಹಿತಸಂಬಂಧದ ಕಾರ್ಯಗಳಲ್ಲಿ ಮನಸ್ಸು ಕ
ಹಲಕೆಲವು ಪ್ರಗತಿಪರ ಸ್ತ್ರೀಯರು ನಮ್ಮ ಹೆಣ್ಣುಮಕ್ಕಳ ಪ್ರಾಪಂಚಿಕ ಮ
ಸಾಮಾಜಿಕ ಜೀವನವನ್ನು ಎತ್ತಿ ಸುಧಾರಿಸಲು ಪ್ರಯತ್ನಪಟ್ಟು ಬೇರೆ ಬೇರೆ
ಸಂಸ್ಥೆಗಳನ್ನು ಪ್ರಾರಂಭಿಸಿದರು. ಕ್ರಿಸ್ತಿಯನ್ ಮಿಶನ್, ಅಖಿಲ ಭಾರ
ಸ್ತ್ರೀ ಸಂಘ, (All India Women's Conferences) ಸೇವಾ
ಪುಣೆಯ ಹಿಂದೂ ಮಹಿಳೆಯರ ವಿಶ್ವವಿದ್ಯಾಲಯ (Indian Wom
University) ಮುಂತಾದವು ಹುಟ್ಟಿ ಹಿಂದೂಮಹಿಳೆಯರು ತಮ್ಮ ಪ್ರಗ
ಮಾರ್ಗದಲ್ಲಿ ಮೆಲ್ಲಡಿಯಿಟ್ಟು ಮುಂದೆ ಸಾಗುವಂತೆ ಮಾಡತೊಡಗಿದವು. ಈ
ಇವು ನಮಗೆ ಅತ್ಯವಶ್ಯವಾದ ಸ್ತ್ರೀಶಿಕ್ಷಣದ ಮಾರ್ಗದಲ್ಲಿರುವ ಕಲ್ಲುಕಂಟಿಗ
ತೆಗೆದೊಗೆಯತೊಡಗಿವೆ. ಪ್ರಬುದ್ಧ ಮಹಿಳೆಯರ ಶಿಕ್ಷಣಕ್ಕಾಗಿಯೂ ಈ
ಸಂಘ ಸಂಸ್ಥೆಗಳು ಅಲ್ಲಲ್ಲಿ ಮೊಳೆತು ಮೂಡಿ ಬೆಳೆಯತೊಡಗಿವೆ. ಸಾ
ಸೇವಾಸಂಘ (Social Service Centres) ಸಹಾಯಕ
(Rescue Homes) ಮಹಿಳೆಯ ಗ್ರಾಮಸಂಸ್ಥೆಗಳು ಮುಂತಾದ ಹೆಸರಿ
ಅವು ಕೆಲಸಮಾಡಲು ಹೊರಟಿವೆ. ಈ ಎಲ್ಲ ಸಂಘಸಂಸ್ಥೆಗಳ ಪ್ರಯ
ಫಲವಾಗಿ ನಮ್ಮ ಸ್ತ್ರೀಸಮಾಜದ ಶಿಕ್ಷಣಕಾರ್ಯವು ಮುಂದವಾಗಿಯೇ ಈ
ಮುಂದೆ ಸಾಗಿದೆಯೆಂದು ಹೇಳಲು ಪ್ರತ್ಯವಾಯವಿಲ್ಲ.

ಇಷ್ಟಾದರೂ ಅಖಿಲ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಕಿಗಳ ತ
ಮಾಡಿ ನೋಡಿದರೆ ಅದು ಅತ್ಯಂತ ವ್ಯಸನಕಾರಿಯಾಗಿ ಪರಿಣಮಿಸು
ಇಪ್ಪತ್ತು ವರ್ಷಗಳ ಹಿಂದೆ ೧೨,೩೦,೬೯೮ ವಿದ್ಯಾರ್ಥಿನಿಯರು ಶಾಲೆಗಳಲ್ಲಿ

ಹತ್ತುವರ್ಷಗಳ ಹಿಂದೆ ಈ ಸಂಖ್ಯೆಯು ೧೮,೪೨,೩೫೨ ಕ್ಕೆ ಏರಿದ್ದು ಇಂದು ೨೫,೯೦,೨೪೬ ಆಗಿರುವದು. ಈ ಅಲ್ಪ ಸಂಖ್ಯೆಯನ್ನು ಬೇರೆ ಬೇರೆ ಸ್ತರಗಳಲ್ಲಿ ವಿಭಾಗಿಸಿ ನೋಡಿದರಂತೂ ಇನ್ನಷ್ಟು ನಿರಾಶೆಯಾಗುವದು. ಈ ಸಂಖ್ಯೆಯಲ್ಲಿ ನೂರರಲ್ಲಿ ೯೪.೪ ರಷ್ಟು ವಿದ್ಯಾರ್ಥಿನಿಯರು ಪ್ರಾಥಮಿಕ ಶಾಲೆಗಳಲ್ಲಿಯೂ ೪.೫೫ ರಷ್ಟು ಮಾಧ್ಯಮಿಕ ಶಾಲೆಗಳಲ್ಲಿಯೂ ಇರುವರು. ಮಿಕ್ಕುಳಿದವರಲ್ಲಿ ಸಾವಿರದಲ್ಲಿ ೫ ವಿದ್ಯಾರ್ಥಿನಿಯರು ಮಾತ್ರ ವಿಶ್ವವಿದ್ಯಾಲಯಗಳ ಮೆಟ್ಟಿಲು ಹತ್ತಿರುವರು. ಅಲ್ಲದೆ ಪ್ರಾಥಮಿಕ ಶಾಲೆಗಳಿಗೆ ಸೇರಿದ ೧೦೦ ವಿದ್ಯಾರ್ಥಿನಿಯರಲ್ಲಿ ೧೩ ರಷ್ಟು ಮಾತ್ರ ಸಾಕ್ಷರತೆಯ ಹಕ್ಕು ಸ್ಥಾಪಿಸಲು ಸಾಧ್ಯವಿರುವಷ್ಟಕ್ಕೆ ಅಂದರೆ ನಾಲ್ಕನೆಯ ತರಗತಿಗೆ ಮುಟ್ಟುವರು. ಮಿಕ್ಕವರು ನಡುದಾರಿಯಲ್ಲೇ ತಮ್ಮ ಶಿಕ್ಷಣವನ್ನು ಕೊನೆಮುಟ್ಟಿಸಿ ಹೊರಗೆಬರುವರು. ಹೆಣ್ಣುಮಕ್ಕಳ ಸಂಖ್ಯೆಯನ್ನೂ ಗಂಡುಮಕ್ಕಳ ಸಂಖ್ಯೆಯನ್ನೂ ಹೋಲಿಸಿ ನೋಡಿದರೆ ಈ ಪ್ರಮಾಣವು ಪ್ರಾಥಮಿಕ ಶಾಲೆಗಳಲ್ಲಿ ೧ : ೪ ಮಾಧ್ಯಮಿಕ ಶಾಲೆಗಳಲ್ಲಿ ೧ : ೧೪ ವಿಶ್ವವಿದ್ಯಾಲಯಗಳಲ್ಲಿ ೧ : ೩೪ ಹೊರಡುವದು. ಶಿಕ್ಷಣದ ಒಟ್ಟು ವೆಚ್ಚದಲ್ಲಿ ೧೦೦ ಕ್ಕೆ ೧೭ ರಷ್ಟು ಮಾತ್ರ ಹೆಣ್ಣುಮಕ್ಕಳ ಪಾಲಿಗೆ ಬರುವದು. ನಮ್ಮ ದೇಶದ ವಿದ್ಯಾಭ್ಯಾಸದ ಸಮಸ್ಯೆಯನ್ನು ಕೈಕೊಂಡವರಿಗೆ ಗಂಡುಮಕ್ಕಳ ಪ್ರಶ್ನೆಯು ಮೊದಲನೆಯದೂ ಸ್ತ್ರೀಶಿಕ್ಷಣವು ಅದರ ಹಿಂದೆ, ಚಿತ್ರದ ಹಿಂದಿನ ಪರದೆಯಂತೆಯೂ ಇರುತ್ತಿದೆ ಆಧುನಿಕ ಶಿಕ್ಷಣಸುಧಾರಣೆಯ ಪ್ರಶ್ನೆಯನ್ನು ಬಿಡಿಸಲು ಹೊರಟ ಹಾರ್ಟಾಗ್ ಕಮೀಟಿ ಮುಂತಾದ ಪ್ರಮುಖರ ಅಭಿಪ್ರಾಯದಂತೆ ಬಾಲಿಕೆಯರ ವಿದ್ಯಾಭ್ಯಾಸಕ್ಕೆ ಹೆಚ್ಚು ಲಕ್ಷ್ಯವೂರೈಸುವದು ಆವಶ್ಯಕವಾಗಿದ್ದರೂ ಹಣದ ಅನನುಕೂಲತೆಯ ಪ್ರಶ್ನೆಯನ್ನು ಬಿಡಿಸುವ ಸಂದರ್ಭಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಪ್ರಶ್ನೆಯೇ ಮೊದಲು ಕುಡುಗೋಲು ಚಾಚಲ್ಪಡುತ್ತಿದೆ. ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಹೊತ್ತ ಸ್ಥಾನಿಕ ಸಂಸ್ಥೆಗಳು ಕೂಡ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅಷ್ಟು ಶ್ರದ್ಧೆಯನ್ನು ವಹಿಸಿದಂತೆ ಕಾಣುವದಿಲ್ಲ. ವೆಚ್ಚದ ಸಾರ್ಥಕವಾಗ ಭವಿಷ್ಯ ಪರಿಸ್ಥಿತಿಯ ಗಂಡುಮಕ್ಕಳ ಶಾಲೆಯನ್ನು ಕೂಡ ನಡೆಯಿಸುವಲ್ಲಿ ತೋರಿಸುವಷ್ಟು ಆಸ್ಥೆಯನ್ನು ಈ ಸಂಸ್ಥೆಯವರು ಯೋಗ್ಯರೀತಿಯಿಂದ ನಡೆಯಬಹುದಾದ ಸ್ಥಳದಲ್ಲಿ ಹೆಣ್ಣುಮಕ್ಕಳ ಶಾಲೆಯನ್ನು ಪ್ರಾರಂಭಿಸಲು ತೋರ್ಪಡಿಸುವದು ದುಃಖದ ಸಂಗತಿಯು.

ಟ್ರೇಂಡ್ ಆದ ಶಿಕ್ಷಕಿಯರ ಕೊರತೆಯಂತೂ ಮಿತಿಯನ್ನು ಮೀರಿದೆ. ಆಧುನಿಕ ಜಿಜ್ಞಾಸ್ರಜ್ಞರ ತಿಳಿವಳಿಕೆಯ ಮೇರೆಗೆ ಚಿಕ್ಕ ಬಾಲಕಬಾಲಿಕೆಯರ ಶಿಕ್ಷಣದ ಕರ್ತೃಕ್ಕೆ ಶಿಕ್ಷಕರಿಗಿಂತಲೂ ಶಿಕ್ಷಿಕೆಯರೇ ಹೆಚ್ಚು ಯೋಗ್ಯರೆಂದು ಗೊತ್ತಾಗಿದೆ.

ಅವರೇ ಬಾಲಕ ಬಾಲಿಕೆಯರ ಅಂತಃಕರಣವನ್ನು ಆಕರ್ಷಿಸಿಕೊಂಡು ಅ
ಕುಂದುಕೊರತೆಗಳನ್ನು ಸಹಾನುಭೂತಿಯಿಂದ ತಿಳಿದು ನೋಡಿ ಯೋಗ್ಯ ಮಾರ್ಗ
ದಿಂದ ಶಿಕ್ಷಣ ಸಾಗಿಸಬಲ್ಲರೆಂದು ಅನುಭವದಿಂದ ಗೊತ್ತಾಗಿದೆ ಮೊನ್ನೆ ಪ್ರ
ಪ್ರಕಟವಾದ ವುಡ್ ಕಮಿಟಿಯವರೂ ತಮ್ಮ ವರದಿಯಲ್ಲಿ ಸುಶಿಕ್ಷಿತೆಯರಾ
ಫ್ರೋಂಡ್ ಶಿಕ್ಷಕೆಯರು ಬಾಲಕರ ವರ್ಗದ ಶಿಕ್ಷಣಕಾರ್ಯವನ್ನು ಕೈಕೊಳ್ಳುವು
ಹಿಂದುಸ್ತಾನದ ಶಿಕ್ಷಣಮಂದಿರವು ಆಸ್ಥಿರವಾದ ಅಯೋಗ್ಯ ಅಸ್ಥಿವಾರದ ಮೇ
ಕಟ್ಟಲ್ಪಡುತ್ತಿದೆಯೆಂದು ನಿರ್ಭಿಡವಾಗಿ ಹೇಳಬೇಕಾಗುವದೆಂದು ಸ್ಪಷ್ಟ
ಅಭಿಪ್ರಾಯಪಟ್ಟಿರುವರು. ಆದರೆ ಈ ಮಾರ್ಗದಲ್ಲಿ ಒಂದು ಪ್ರಬಲವಾದ
ಯಿದೆ. ಶಹರವಾಸಿಗಳಾದ ತರುಣ ಸ್ತ್ರೀಯರು ಶಿಕ್ಷಣಹೊಂದಿ ಹಳ್ಳಿ
ಶಿಕ್ಷಕೆಯರಾಗಿ ಹೋಗಿ ಕೆಲಸಮಾಡಲು ಅಷ್ಟು ಉತ್ಸುಕತೆಯನ್ನು ತೋ
ಲಾರರು. ಅವರು ಅಂತಹ ಹಳ್ಳಿಯ ವಾಸದ ಪರಿಸ್ಥಿತಿಯ ಅನುಭವವುಳ್ಳವ
ದಿಲ್ಲ. ಅವರು ಒಂಟಿಗರಾಗಿ ದೂರದ ಹಳ್ಳಿಗಳಲ್ಲಿ ಹೋಗಿ ವಾಸ ಮಾಡಲು
ತೊಂದರೆಪಡುವರು. ಆಳಿನಂತಾಗಲಿ ಸಹಕಾರಿಯಂತಾಗಲಿ ಸಂಗಡ ಇನ್ನೊಬ್ಬ
ಕರೆದುಕೊಂಡು ಹೋಗಿ ಸುಖದಿಂದ ಜೀವನ ಮಾಡಲು ಸಾಕಾ
ವೇತನವೂ ಅವರಿಗೆ ಸಿಗುತ್ತಿರುವದಿಲ್ಲ. ಆದ್ದರಿಂದ ಶಹರವಾಸಿಗಳಿಗಿಂ
ಹಳ್ಳಿಯ ನಿವಾಸಿಗಳಾದ ತರುಣ ಸ್ತ್ರೀಯರನ್ನೇ ಶಿಕ್ಷಣ ಕೊಟ್ಟು ಶಿಕ್ಷಕಿ
ಕೆಲಸದ ಮೇಲೆ ನಿಯಮಿಸಿಕೊಂಡಪಕ್ಷ ಅವರಿಂದ ಹಳ್ಳಿಯ ಶಾಲೆಗಳು ಸುಧಾ
ತುಂಬ ಅನುಕೂಲವಾಗುವದೆಂದು ಅನುಭವದಿಂದ ಕಂಡುಬಂದಿದೆ. ಪಂ
ಪ್ರಾಂತದಲ್ಲಿ ಇಂಥ ಪ್ರಯೋಗಮಾಡಿ ನೋಡಿ ಸುಪರಿಣಾಮವನ್ನು ಕಂಡು
ಲಾಗಿದೆ. ಜಲಂಧರ, ಲ್ಯಾಲಪುರ ಮತ್ತು ಗಾಖಾರ ಈ ಮೂರು ಸ್ಥಳಗಳಲ್ಲಿ
ಶಿಕ್ಷಕೆಯರನ್ನು ತಯಾರಿಸುವ ಶಿಕ್ಷಣಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ. ಸ
ಕೊರತೆಗಳನ್ನು ತಿಳಿದುಕೊಂಡು ಹಳ್ಳಿಯ ಜನರ ಜೀವನದ ಗುಟ್ಟನ್ನು
ಶಿಕ್ಷಕೆಯರು ಎಷ್ಟು ಯೋಗ್ಯರೀತಿಯಿಂದ ಕೆಲಸಮಾಡುವರೋ ಹಳ್ಳಿಯ ಸ
ಗಳಾಗಿದ್ದು ಶಿಕ್ಷಣಹೊಂದಿ ತಿರುಗಿ ಹಳ್ಳಿಗಳಿಗೆ ಶಿಕ್ಷಕೆಯರಾಗಿ ಹೋದವರು
ಸುಪರಿಣಾಮಕಾರಿಯಾಗಿಯೂ ಉತ್ಸುಕತೆಯಿಂದಲೂ ಆದರದಿಂದಲೂ ಸ
ಅಡಚಣೆಗಳಿಂದಲೂ ಕೆಲಸಮಾಡುವರೋ, ಅಷ್ಟು ಸುಯಂತ್ರಿತವಾಗಿ, ಬಂಧು
ವರನ್ನೂ ನೆರೆಹೊರೆಯವರನ್ನೂ ಬಿಟ್ಟು ದೂರ ಹೋದ ಶಹರದ ಶಿಕ್ಷಕೆಯ
ಹಳ್ಳಿಗಳಲ್ಲಿ ಕೆಲಸಮಾಡಲು ಸಾಧ್ಯವಿಲ್ಲ. ಮೇಲೆ ಹೇಳಿದ ಶಿಕ್ಷಣ ಸಂಸ್ಥೆಗ
"ಗುರುನಾನಕ ವಿದ್ಯಾ ಭಾಂಡಾರ" ಎಂಬ ಖಾಸಗಿ ಸಂಸ್ಥೆಯವರು ಪ್ರಾ
ಸಿರುವರು. ಇದು ಮಿಕ್ಕವರಿಗೂ ಸರಕಾರಕ್ಕೂ ಒಂದು ಬಗೆಯಿಂದ ಮಾ
ಯೋಗ್ಯವಾಗಿ ಪರಿಣಮಿಸಿರುವದು.

ಸಹಶಿಕ್ಷಣ— ಹಣದ ಕೊರತೆಯ ನೆನಪಿನಿಂದ ಹುಟ್ಟುವ ಅನೇಕ ಕಾರಣಗಳ ಮೂಲಕವಾಗಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ತೊಡಗಿದ ಬಹು ಸಂಖ್ಯೆಯ ವಿದ್ಯಾರ್ಥಿನಿಯರು ಗಂಡುಮಕ್ಕಳ ಶಾಲೆಗಳಿಗೆ ಹೋಗುತ್ತಿರುವರು. ಇವರಲ್ಲಿ ೬೦ ರಷ್ಟು ವಿದ್ಯಾರ್ಥಿನಿಯರಿಗೆ ಮಾತ್ರ ಸ್ವತಂತ್ರ ಶಾಲೆಗಳಿರುವವು. ಉಳಿದ ೪೦ ರಷ್ಟು ವಿದ್ಯಾರ್ಥಿನಿಯರು ಗಂಡುಮಕ್ಕಳ ಶಾಲೆಗೆ ಹೋಗಬೇಕಾ . ಈ ೪೦ ರಷ್ಟು ವಿದ್ಯಾರ್ಥಿನಿಯರು ತಮಗೆ ಸ್ವತಂತ್ರ ಶಾಲೆ ಇಲ್ಲವೆಂದು ಮನೆಯಲ್ಲಿ ಉಳಿಯುವದಕ್ಕಿಂತಲೂ ಗಂಡುಮಕ್ಕಳ ಶಾಲೆಗೆ ಹೋಗುವದಾದರೂ ಲೇಸೆಯದೆಂಬ ವಿಚಾರದಿಂದ ಶಾಲೆಗೆ ಹೋಗಬೇಕಾಗಿದೆ. ಹಳ್ಳಿಗಳಲ್ಲಿ ಒಬ್ಬಳೇ ಇರುವ ಅಯೋಗ್ಯವಾದ ಶಾಲೆಗಳಿಗಿಂತಲೂ ಇಂಥ ಮಿಶ್ರಶಾಲೆಗಳಲ್ಲಿಯೇ ಹುಡುಗಿಯರ ಅಭ್ಯಾಸವು ಚೆನ್ನಾಗಿ ನಡೆಯಬಹುದೆಂದು ಆಶಿಸಿದರೆ ತಪ್ಪಾಗದು. ಆದರೆ ಇಲ್ಲಿ ಇನ್ನೂ ಒಂದು ಕೊರತೆಯಿದೆ. ಬಾಲಕಬಾಲಿಕೆಯರಿಬ್ಬರೂ ಓದುತ್ತಿರುವ ಶಾಲೆಗಳಲ್ಲಿ ಶಿಕ್ಷಕರೆಲ್ಲರೂ ಗಂಡಸರೇ ಏಕಿರಬೇಕು ? ಹಿಂದೆ ಹೇಳಿ ಬಾಲಕರ ವರ್ಗದಂಥ ಕೆಳಗಿನ ತರಗತಿಗಳಲ್ಲಿ ಕೆಲಸಮಾಡಲಿಕ್ಕೆ ಶಿಕ್ಷಿಕೆಯರೇ ಅಯೋಗ್ಯರೆಂದು ಪ್ರಪಂಚವೇ ಸಾರುತ್ತಿರುವಾಗ ಇಂಥ ಮಿಶ್ರ ಶಾಲೆಗಳಲ್ಲಿಯೂ ಹುಡುಗಿಯರಿಗೂ ಮಿಕ್ಕನೇಕ ವಿಷಯಗಳಲ್ಲಿ ಸಹ ನೆರವಾಗಲು ಸಾಧ್ಯವಾಗುವಂತೆ ಶಾಲೆಗಳಲ್ಲಿ ಶಿಕ್ಷಿಕೆಯರನ್ನು ಯಾಕೆ ನಿಯಮಿಸಬಾರದು ? ಶಿಕ್ಷಿಕೆಯರಿಲ್ಲದೆ ಕೇವಲ ಗಂಡಿಂದಲೇ ನಡೆಯಿಸಲ್ಪಡುವ ಮಿಶ್ರ ಶಾಲೆಗಳು ಈ ದೃಷ್ಟಿಯಿಂದ ತುಂಬ ಕನಿಷ್ಠ ತರಗತಿಯಲ್ಲಿ ಸೇರುವವು. ಹೀಗೆ ಶಾಲೆಗಳಲ್ಲಿ ಶಿಕ್ಷಿಕೆಯರನ್ನು ಹೆಚ್ಚು ಪ್ರಮಾಣದಿಂದ ನಿಯಮಿಸುವದರಿಂದ ಸ್ತ್ರೀ ಶಿಕ್ಷಣದ ಪ್ರಸಾರಕ್ಕೆ ಅಪ್ರತ್ಯಕ್ಷವಾಗಿ ಸಹಾಯವಾಗುವದಷ್ಟೇ ?

ಹೆಣ್ಣುಮಕ್ಕಳಿಗಾಗಿ ಗೊತ್ತುಪಡಿಸಿದ ಅಭ್ಯಾಸಕ್ರಮವು ಕೂಡ ಸಮಾಧಾನ ಕಾರಿಯಲ್ಲವೆಂದೂ ಅವರ ದಿನದ ಜೀವನ ಕ್ರಮಕ್ಕೆ ಅದು ಯೋಗ್ಯವೂ ಸಹಾಯಕವೂ ಆಗಿಲ್ಲವೆಂದೂ ಹೇಳುವದುಂಟು. ಗಂಡುಮಕ್ಕಳ ಅಭ್ಯಾಸಕ್ರಮವೂ ಹೆಣ್ಣುಮಕ್ಕಳ ಅಭ್ಯಾಸಕ್ರಮವೂ ಒಂದೇ ಆಗಿರಕೂಡದೆಂದು ಬಹುಕಾಲದ ಹಿಂದಿ ನಿಂದಲೂ ಜನತೆಯು ದೂರಿಕೊಳ್ಳುತ್ತಿದೆ. ಈ ವಿಷಯದಲ್ಲಿ ಇನ್ನೂ ಭಿನ್ನಾಭಿಪ್ರಾಯವಿದೆ. ಬಾಲಕಬಾಲಿಕೆಯರಿಬ್ಬರೂ ಒಂದೇ ಯೋಗ್ಯತೆಯವರಾಗುವದು ಸಾಧ್ಯವೆಂದು ಹಲವರ ಹೇಳಿಕೆ. ಆ ಸಂದರ್ಭದಲ್ಲಿ ಇಬ್ಬರ ಅಭ್ಯಾಸಕ್ರಮವೂ ಒಂದೇ ಇರಬೇಕಾಗುವದು. ಬಹುತರವಾಗಿ ನಮ್ಮ ಮಹಿಳೆಯರೆಲ್ಲರೂ ವಿವಾಹಿತ ಕೌಟುಂಬಿಕ ಜೀವನವನ್ನು ಸಾಗಿಸುವರು. ಒಳ್ಳೆಯ ಮಾತೆಯರಾಗಿಯೂ ಒಳ್ಳೆಯ ಗೃಹಿಣಿಯರಾಗಿಯೂ ಅವರು ತಮ್ಮ ಆಯುಷ್ಯವನ್ನು ಕಳೆಯಬೇಕಾ

ಗಿದೆ. ಅವರು ಸಮಾಜದಲ್ಲಿ ಪುರುಷರ ಭುಜಕ್ಕೆ ಭುಜ ಹಚ್ಚಿ ಕೆಲಸಮಾಡಬೇಕ
ಪರಿಸ್ಥಿತಿ ನಮ್ಮಲ್ಲಿಲ್ಲ. ನಮ್ಮ ಹೆಣ್ಣುಮಕ್ಕಳಿಗೆ ಮನೆತನದ ಆಯವ್ಯಯಗಳ
ನೋಡಿಕೊಂಡು ತಮ್ಮ ಮನೆತನದ ಜನರ, ಮಕ್ಕಳುನುರಿಗಳ, ಪಾಲನಪೋಷ
ಗಳನ್ನು ಸಾಗಿಸಿಕೊಂಡು ಹೋಗಲು ಬೇಕಾದ ಶಿಕ್ಷಣವು ದೊರೆತರೆ ಸಾಕ
ಹೇಳುವ ಜನರೇ ನಮ್ಮಲ್ಲಿ ಹೆಚ್ಚು. ಸಾರ್ವಜನಿಕ ಹಿತಸಂಬಂಧದ ಕಾರ್ಯಗಳ
ಕೈಕೊಂಡು ಕೆಲಸಮಾಡುವ ಯೋಗ್ಯತೆಯುಳ್ಳ ಮಹಿಳೆಯರನ್ನು ತಯಾರಿಸುವ
ಶಿಕ್ಷಣದ ಧ್ಯೇಯನೇ ಆಗಿದ್ದರೂ ಅಂಥವರ ಸಂಖ್ಯೆಯು ಸದ್ಯಕ್ಕೆ ತೀರ ಎ
ವಾಗಿದೆ. ಈ ಎರಡೂ ದೃಷ್ಟಿಯಿಂದ ನಾವು ಮುಂದೆ ಸಾಗುವದು ಅವಶ್ಯವಾ

ಈ ಎಲ್ಲ ಸಮಸ್ಯೆಗಳನ್ನು ಬಿಡಿಸುವದಕ್ಕಾಗಿ ವಿದ್ಯಾ ಇಲಾಖೆಯಲ್ಲಿ ಬೇ
ಬೇರೆ ಬೇರೆ ವಿಭಾಗಗಳನ್ನೇ ಕಲ್ಪಿಸಿ ಒಂದು ವಿಭಾಗದವರು ಗಂಡುಮ
ವಿದ್ಯಾಭ್ಯಾಸವನ್ನೂ ಇನ್ನೊಂದು ವಿಭಾಗದವರು ಸ್ತ್ರೀಶಿಕ್ಷಣದ ಕಾರ್ಯವನ್ನ
ವಹಿಸಿಕೊಳ್ಳಬೇಕೆಂದು ಅನೇಕರು ಅಭಿಪ್ರಾಯಪಡುವರು.

ಏನೇ ಇದ್ದರೂ ಗಂಡುಮಕ್ಕಳಂತೆಯೇ ಹೆಣ್ಣುಮಕ್ಕಳಿಗೂ ಪ್ರ
ಶಿಕ್ಷಣವು ಅವಶ್ಯವೆಂಬ ಮಾತು ನಿರ್ವಿವಾದವಾಗಿದೆ. ಶಿಕ್ಷಣಹೊಂದುವ ಅಧಿಕ
ಗಂಡುಸರಿಗಿರುವಷ್ಟೇ ಹೆಂಗುಸರಿಗೂ ಇದ್ದೇ ಇರುವದು. ಆತ್ಮೋನ್ನತಿಯ ದಾರಿ
ಇಬ್ಬರಿಗೂ ಅಷ್ಟೇ ಮುಕ್ತದ್ವಾರವಾಗಿರಬೇಕೆಂಬ ಪ್ರಶ್ನೆಯು ಎಷ್ಟು ಮಾತ್ರ
ವಾದಗ್ರಸ್ತವಾಗಿಲ್ಲ. ನಮ್ಮ ಮಹಿಳೆಯರು ಒಳ್ಳೆಯ ಗೃಹಿಣಿಯರಾಗಿ
ಬೇಕೆಂಬ ವಿಚಾರವು ಅವರನ್ನು ಗಂಡುಸರಿಗಿಂತ ಹಿಂದಿನ ಸ್ಥಾನಕ್ಕೆ ಕಳ
ದೇನೊ ನಿಜ. ಮನೆತನದ ಆಯವ್ಯಯಗಳನ್ನು ನೋಡಿಕೊಂಡು ಲೆಕ್ಕಪತ್ರ
ಸ್ಥಿಡುವದಕ್ಕೂ ತನ್ನ ಪತಿಯ ಯೋಗ್ಯತೆಗೆ ತಕ್ಕಂತೆ ಪ್ರಪಂಚ ಸಾಗಿಸಿಕೊ
ಹೋಗುವದಕ್ಕೂ ಅವನ ಜೀವನವನ್ನು ಸುಖಕರವಾಗಿ ಮಾರ್ಪಡಿಸುವದ
ಯೋಗ್ಯವಾದ ಶಿಕ್ಷಣವನ್ನು ಪಡೆದು ಯೋಗ್ಯ ಪತಿಯನ್ನು ಆಕರ್ಷಿಸಿಕೊ
ಮಟ್ಟಿಗೆ ಅವಳು ಸುಶಿಕ್ಷಿತೆಯಾದರೆ ಸಾಕೆಂದೂ ಆಧುನಿಕಶಿಕ್ಷಣ ಪಡೆದ ತರುಣಿಯ
ಅವಿವಾಹಿತರೇ ಹೆಚ್ಚಾಗಿರುವದೆಂದೂ ಇದು ನಮ್ಮ ಸಾಮಾಜಿಕ ಅವನ
ದ್ಯೋತಕವೆಂದೂ ಕೆಲವರು ಹೇಳುವರು. ಮತ್ತೆ ಕೆಲವರು ನಮ್ಮ ಸಾವಿ
ಜೀವನದ ಮೆಟ್ಟನ್ನು ಮೇಲೆತ್ತಿ ನಾವು ರಾಷ್ಟ್ರೀಯ ಉನ್ನತಿಯ ಮಾರ್ಗದಲ್ಲಿ
ಗತಿಯಿಂದ ಮುಂದೆ ಸಾಗಬೇಕಾದರೆ ಅರ್ಧ ರಾಷ್ಟ್ರವನ್ನೇ ಆಕ್ರಮಿ
ಸ್ತ್ರೀಸಮಾಜವನ್ನು ನಮಗೆ ಸಮಸಮವಾಗಿ ಸುಧಾರಿಸಿ ಯಾವ ದೃಷ್ಟಿಯಲ್ಲೂ
ಗಂಡುಸರಿಗಿಂತ ಕಡಿಮೆಯಲ್ಲದಂಥ ಮಹಿಳೆಯರನ್ನು ತಯಾರಿಸುವ
ಯನ್ನಿಟ್ಟುಕೊಂಡೇ ಸಾಗದೆ ನಮಗೆ ಗತ್ಯಂತರವಿಲ್ಲವೆಂದೂ ಹೇಳುತ್ತಿರುವರು

ಪಾಠಗಳಲ್ಲಿ ಉಪಕರಣಗಳ ಉಪಯೋಗ

ಕರು—ಶ್ರೀ. ಎಸ್. ಆರ್. ತಟ್ಟ ಬಿ. ಎ., ಅಸಿ. ಮೂ. ಫಿಮೇಲ ಟ್ರೇ. ಕಾ. ಧಾರವಾಡ

ಟ್ರೇನಿಂಗ ಕಾಲೇಜುಗಳ ಅನುಭವವಿದ್ದ ಎಲ್ಲ ಶಿಕ್ಷಕಶಿಕ್ಷಿಕೆಯರಿಗೆ ಪಾಠ
ುವದರಲ್ಲಿ ಉಪಕರಣಗಳ ಅಗತ್ಯವಿದೆ ಎಂಬದನ್ನು ಬೇರೆಯಾಗಿ ಹೇಳಲಿಕ್ಕೇ
ಉಪಕರಣವಿಲ್ಲದೆ ಪಾಠಕಲಿಸುವದೆಂದರೆ ಮದುಮಗನನ್ನು ಬಿಟ್ಟು
ುವಗೆ ಹೋದಂತೆಯಾಗಿ ಬಿಟ್ಟಿದೆ. ಆದರೆ ಪಾಠದಲ್ಲಿ ಉಪಕರಣವನ್ನು ತಂದ
ತ್ರದಿಂದ ಆ ಪಾಠವು ಒಳ್ಳೆಯದೆಂದು ಎಣಿಸಿಕೊಳ್ಳಲಾರದು. ಆ ಉಪಕರಣದ
ನೂಪ ಉಪಯೋಗದಿಂದಲೇ ಪಾಠದ ಬೆಲೆಯು ಕಟ್ಟಲ್ಪಡುವದು. ಎಂಬದನ್ನು
ುದಲ್ಲಿಡಬೇಕು.

ಮೊದಲು 'ಮೂರ್ತವಸ್ತುವಿನಿಂದ ಅಮೂರ್ತಭಾವಕ್ಕೆ ಹೋಗುವದು'
ುವದರ ನಿಜವಾದ ಅರ್ಥದ ಬಗ್ಗೆ ವ್ಯಾಖ್ಯಾನ ಮಾಡುವದು ಅಗತ್ಯವಿದೆ.
ು ಇಯತ್ತೆಯ ವಿದ್ಯಾರ್ಥಿಗಳಿಗೆ ೩ ರೂ- ೫ ಆಣೆಗಳಲ್ಲಿ ೨ ರೂ. ೮ ಆಣೆ
ನ್ನು ಕೂಡಿಸಹೇಳುವಾಗ ಪ್ರತ್ಯಕ್ಷ ರೂಪಾಯಿ ಆಣೆಗಳನ್ನು ತರುವ ಉದಾಹರಣೆ
ನ್ನು ತಕ್ಕೊಳ್ಳಿರಿ. ೩ ರೂ. ೫ ಆಣೆ ಎಂಬ ಪರಿಮಾಣಗಳನ್ನು ಹುಡುಗರು
ಸ್ಸಿನಲ್ಲಿ ಕಲ್ಪಿಸಬೇಕಾಗಿದ್ದರೂ ಅವುಗಳ ಸ್ಪಷ್ಟವಾದ ಕಲ್ಪನೆಯು ಈ ಮೊದಲು
ಹೋಗಿರುವದರಿಂದ ಅವರ ಮಟ್ಟಿಗೆ ಅದು ಮೂರ್ತವಸ್ತುವೆಂದೇ ಭಾವಿಸ
ಹೀಗೆ ಯಾರಿಗೆ ಯಾವದರ ಸ್ಪಷ್ಟವಾದ ಕಲ್ಪನೆಯಾಗಿರುವದೋ ಅದು
ಪಾಲಿಗೆ ಮೂರ್ತವಸ್ತುವು. ಈ ವ್ಯಾಖ್ಯೆಯನ್ನು ಲಕ್ಷ್ಯದಲ್ಲಿಟ್ಟುಕೊಂಡರೆ
ೀ ಪಾಠಗಳು ಪಾಠಗಳ ಆಭಾಸವಾಗಿ ಪರಿಣಮಿಸಲಿಕ್ಕಿಲ್ಲ. ಮೇಲೆ
ಂಥ ಉದಾಹರಣೆಗಳಲ್ಲಿ ತಂದ ದೃಶ್ಯ ಸಾಧನಗಳು ಪಾಠದ ಉದ್ದೇಶವು
ಡುವದಕ್ಕಾಗಿ ಸಹಾಯಮಾಡುವದಕ್ಕೆ ಪ್ರತಿಯಾಗಿ ಅದಕ್ಕೆ ತಡೆಯವಾಗಿ
ಮಿಸುವವು. ಯಾವದಾದರೊಂದು ಸಂಗತಿಯ ಬಾಯಮಾತಿನ ವರ್ಣನೆ
ನ್ನು ತಿಳಿದುಕೊಳ್ಳುವದು ಕಠಿಣವಾದಾಗ ದೃಶ್ಯ ಸಾಧನವು ಬೇಕಾಗುವದು.
ಿ ಇಲ್ಲವೆ ಆಕೃತಿ ಇಲ್ಲದೆ ಶರೀರದ ಒಳಭಾಗದ ರಚನೆಯನ್ನು ತಿಳಿದು
ುವದು ಎಷ್ಟು ಕಠಿಣವಾಗುವದು ನೋಡಿರಿ. ಋತುಮಾನಗಳು ಹೇಗಾಗು
ಂಬದನ್ನು ತಿಳಿಯುವದಕ್ಕೆ ಚಂಡು, ದೀಪ ಮುಂತಾದವು ಇಲ್ಲವೆ 'ಆರರಿ'
ಯಂತ್ರವಾಗಲಿ ಹೇಗೆ ಸಹಾಯಮಾಡುವದು ನೋಡಿರಿ.

ಇದೇ ಮೇರೆಗೆ ೫ ರೂಪಾಯಿ ÷ ೮ ಇದನ್ನು ಬಾಯಮಾತಿನಿಂದ ತಿಳಿಸಿ ಹೇಳಬಹುದು ? ೧ ರೂಪಾಯಿಯಲ್ಲಿ ೫ ಸಮಭಾಗಗಳನ್ನು ಮಾಡಿ ಎರಡನ್ನು ತಕ್ಕೊಂಡಿದ್ದೇವೆ. ಈ ಎರಡು ಭಾಗಗಳಲ್ಲಿ ಮತ್ತೆ ೮ ಭಾಗಗಳನ್ನು ಮಾಡಬೇಕಾಗಿದೆ. ಒಂದೊಂದರಲ್ಲಿ ೪ ಸಣ್ಣ ಭಾಗಗಳನ್ನು ಮಾ ಒಟ್ಟಿಗೆ ೮ ಸಣ್ಣ ಭಾಗಗಳಾಗುವವು ಇಂಥ ಸಣ್ಣ ಭಾಗಗಳು ೧ ರೂಪಾಯಿ ಎಷ್ಟಾಗುವವೆಂಬದನ್ನು ನೋಡೋಣ—೧ ದೊಡ್ಡ ಭಾಗದಲ್ಲಿ ೪ ಸಣ್ಣ ಭಾಗ ಆಗಿರುವದರಿಂದ ೫ ದೊಡ್ಡ ಭಾಗಗಳಲ್ಲಿ ೫×೪ ಭಾಗಗಳಾದವು. ೫ ರೂ ಯಲ್ಲಿ ಆದ ೮ ಸಮ ಸಣ್ಣ ಭಾಗಗಳಲ್ಲಿ ಒಂದನ್ನು ತಕ್ಕೊಳ್ಳಬೇಕಾಗಿದೆ. ಆವ ಇನು ೧ ರೂಪಾಯಿಯ ೧/೮ ಆಗುವದು.



೫ ಭಾಗವು ಅ ಕ ರೇಖೆಯು ಆದೆ. ಅ ಕ ರೇಖೆಯ ೮ನೆಯ ಪಾಲು ಅ ಆ ರೇಖೆ ಆ ಇ ರೇಖೆಯು ಇ ಈ ರೇಖೆಯು ಎಷ್ಟನೆಯ ಪಾಲು ? ೫÷೮=೧/೮ ಸ್ಪಷ್ಟವಾದ

ಆದರೆ ಮಾನವಶರೀರಶಾಸ್ತ್ರ, ರಸಾಯನಶಾಸ್ತ್ರ, ವಿಜ್ಞಾನಶಾಸ್ತ್ರ ಗಳಿಗಿಂತಲಿನ ಪ್ರಯೋಗ ಮೊದಲಾದವುಗಳನ್ನು ತಿಳಕೊಳ್ಳಲಿಕ್ಕೆ ಒಂದು ತರದ ಉಪಕರಣಗಳು ಬೇಕೇಬೇಕು. ಭೂವರ್ಣನೆಯ ವಿಷಯದಲ್ಲಿ ಸ್ಥಾನ, ಭೂಸ್ವರೂಪ ಮೊದಲಾದವುಗಳ ಕಲ್ಪನೆಯಾಗಲಿಕ್ಕೆ ನಕಾಶ, ಚಿ ಮೊದಲಾದವು ಬೇಕೇಬೇಕು. ಇದರಂತೆ ಅಂಕಗಣಿತವನ್ನು ಕಲಿಸಲಿಕ್ಕೆ ಉಪ ಗಳು ಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವಿರಲಾರದು. ಎಷ್ಟು, ಎಂಥವು ಮಾತನ್ನು ಮಾತ್ರ ಚರ್ಚಿಸಬಹುದು. ಅಂಕಗಣಿತದ ಮೂಲದಲ್ಲಿರುವ ಗಳು, ಪರಿಮಾಣಗಳು ಇವುಗಳ ಕಲ್ಪನೆಗಳು ವ್ಯವಹಾರದಲ್ಲಿ ಬಹು ಸಾಮಾನ್ಯ ಬರುವದರಿಂದ ಅವು ಶಾಸ್ತ್ರೀಯ ವಿಷಯದಲ್ಲಿ ಬರುವಷ್ಟು ಸೂಕ್ಷ್ಮವಾದ ಗಳಿಗೆ ಸಂಬಂಧಿಸುವದಿಲ್ಲ. ಅಂಕಗಣಿತಕ್ಕೆ ಮೂಲಭೂತವಾದ ಮುಖ್ಯ ಕಲ್ಪನೆಗಳು ಹುಡುಗರಿಗೆ ಅಜ್ಞಾತವಾಗಿ ವ್ಯವಹಾರದಲ್ಲಿ ಸುಲಭವಾಗಿ ಬಿಡುವವು. ವಸ್ತುಗಳನ್ನು ಎಣಿಸುವದು, ಒಂದು ರಾಶಿಯಲ್ಲಿ ಮತ್ತೊ ರಾಶಿಯನ್ನು ಕೂಡಿಸುವದು, ಕಡಿಮೆಮಾಡುವದು, ಹಂಚುವದು, ಪ ಮಾಡುವದು, ಅಳೆಯುವದು ಮುಂತಾದ ಕಲ್ಪನೆಗಳು ವ್ಯವಹಾರದಲ್ಲಿ ಅತಿ ಸಾಮಾ ತರದವು. ಆದ್ದರಿಂದ ಈ ವಿಷಯಕ್ಕೆ ಅಷ್ಟೊಂದು ವಿಶಿಷ್ಟರೀತಿಯಿಂದ ಪ್ರ ಉಪಕರಣಗಳು ಬೇಕಾಗಿಲ್ಲವೆಂದು ತೋರುವದು.

ಉಪಕರಣಗಳು ಒಂದುವರ್ಗದಲ್ಲಿ ಬಹು ದಿವಸ ಉಪಯೋಗಿಸಲಿಕ್ಕೆ ಬರು
ನಿದ್ದರೆ ಒಳ್ಳೆಯದು. ಆದರೆ ಅವುಗಳನ್ನು ಮಾಡಲಿಕ್ಕೆ ಮೊದಲು ಸ್ವಲ್ಪವೆಚ್ಚವೂ
ಯೂ ಶ್ರಮವೂ ಹಲವರ ಸಹಕಾರವೂ ಬೇಕಾಗುವವು, ಅವು ಹಳೆಯವಾದ
ಆಗಾಗ್ಗೆ ಅವುಗಳನ್ನು ಸೆಟ್ಟುಗೆಮಾಡಿಸುವ ತೊಂದರೆಯನ್ನುತಕ್ಕೊಳ್ಳಬೇಕಾಗು
ು. ಹುಡುಗರು ಅಂಥವುಗಳನ್ನು ತಕ್ಕೊಂಡು ಲೆಕ್ಕಮಾಡಲಿಕ್ಕೆ ಇಷ್ಟಪಡು
ು. ಎಲ್ಲರಿಗೂ ಒಂದೇತರದಿಂದ ಸಿದ್ಧಮಾಡಿದ ಸಾಮಗ್ರಿಯಿದ್ದರೆ ಪಾಠವು
ವ್ಯವಸ್ಥಿತವಾಗಿ ನಡೆಯುವದು. ಇನ್ನು ಇದಕ್ಕೆ ಪ್ರತಿಯಾಗಿ, ಕೈಗೆ ಸುಲಭವಾಗಿ
ಯುವ ಇಲ್ಲವೆ ಅಗ್ಗವಾಪ ಆಗಿರುವಾಗಲೇ ಮಾಡಿಕೊಳ್ಳಲಿಕ್ಕೆ ಬರುವಂಥ
ಕರಣವಿರುವದು ಒಂದುರೀತಿಯಿಂದ ಗುಣ, ಮುಖ್ಯವಾಗಿ ಇದಕ್ಕೆ ವೆಚ್ಚ
ನು. ಪಾಠಮುಗಿದಮೇಲೆ ಅದು ಕೆಟ್ಟುಹೋದರೂ ಮಿಡುಕುವ ಕಾರಣವಿಲ್ಲ.
ಪರಿಸ್ಥಿತಿಯಲ್ಲಿಯೂ ಸುಲಭವಾಗಿ ದೊರೆಯುವಂಥದಿರುವದು. ಉಪಕರಣ
ನ್ನು ಆರಿಸುವಾಗ ಈ ಮಾತುಗಳಕಡೆಗೆ ಲಕ್ಷಕೊಡಬೇಕು. ವಿಶೇಷವಾಗಿ
ಯ ಶಾಲೆಗಳಲ್ಲಿ ಹುಣಸಿಯ ಕಾಳು, ಬೀಜ, ಹರಳು, ಕಡ್ಡಿ, ರದ್ದೀಕಾಗದ
ಗಳಿಂದಲೇ ಕೆಲಸವನ್ನು ಮಾಡಿಕೊಳ್ಳಬಹುದು. ಅಂಕಗಣಿತವನ್ನು ಕಲಿಸಲಿಕ್ಕೆ
ಳ ದುಡ್ಡು ಖರ್ಚಾಗುವ ಉಪಕರಣಗಳು ಬೇಕೆನ್ನುವದು, ಹುಚ್ಚತನವು.
ು ಉಪಕರಣಗಳ ಅಭಾವವನ್ನೇ ಮುಂದಿಟ್ಟುಕೊಂಡು ಈ ಪದ್ಧತಿಗಳು
ಗಳಲ್ಲಿ ಉಪಯೋಗವಿಲ್ಲವೆಂದು ಹೇಳುವದು ಕೇವಲ ಪೈಗಳ್ಳತನವೇ ಸರಿ.

ಉಪಕರಣಗಳ ಉಪಯೋಗದ ಜೊತೆಗೆ ಮನಸ್ಸಿನ ಚಟುವಟಿಕೆಯು
ಗತ್ಯವಾದದ್ದೆಂಬದು ನಮ್ಮ ಲಕ್ಷಕ್ಕೆ ಅಷ್ಟೊಂದು ಬರುವದಿಲ್ಲ. ವಸ್ತುಗಳಿಂದ
ಸಮಾಡುವಾಗ ಅವಧಾನ, ನಿರೀಕ್ಷಣ, ಆಲೋಚನೆ ಮುಂತಾದ ಚಟುವಟಿಕೆಗಳು
ಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಮನಸ್ಸಿನಲ್ಲಿ ನಡೆಯುತ್ತಿರಬೇಕು, ಆದರೆ
ಸಾಮ್ಯವಾಗಿ ನಾವು ನೋಡುವ (ಶಹರದ ಶಾಲೆಗಳಲ್ಲಿ ನೋಡಲಿಕ್ಕೆ ಹೋದಾಗ
ರಿಸುವಂಥ) ಪಾಠಗಳಲ್ಲಿ ಏನು ಕಂಡುಬರುವದು? ಹುಡುಗರು ಒಂದು
ದಲ್ಲಿ "ನಾವು ಕೆಲವು ಸಂಗತಿಗಳನ್ನು ಲಕ್ಷಗೊಟ್ಟು ನೋಡಿ ಒಂದು ಕೆಲಸವನ್ನು
ಮಾಡಬೇಕು ಎಂಬದನ್ನು ಕಲಿಯಬೇಕಾಗಿರುವದು" ಎಂಬ ಭಾವನೆಯಿಂದ
ಕ್ಕೆ ಕೂಡುವದೇ ಇಲ್ಲ. ಶಿಕ್ಷಕರು ಒಂದು ಪ್ರಶ್ನೆಯನ್ನು ಕೇಳಿದ ಕೂಡಲೆ
ಎತ್ತಬೇಕು, ಏನಾದರೂ ಆ ಪ್ರಶ್ನೆಗೆ ತುಸುಮಟ್ಟಿಗಾದರೂ ಸಂಬಂಧವಿದ್ದ
ು ಮಾತನ್ನು ಹೇಳಬೇಕು. ಅದು ಅಕಸ್ಮಾತ್ತಾಗಿ ಸರಿಯಾದರೆ ನಾನು ಶಿಕ್ಷಕ
ಜಾಣನೆನಿಸಿಕೊಂಡೆ ಎಂಬ ಭಾವನೆಯೊಂದೆ ಪಾಠಕಲಿತದ್ದರ ಫಲವವನಿಗೆ!

ಈ ಬುದ್ಧಿಯೇನೂ ಕೆಟ್ಟದಲ್ಲ; ಆದರೆ ಪಾಠದ ವಿಷಯದಲ್ಲಿ ಅವರಿಗಿರುವ ಭಾವನೆ ಬದಲಾಗಬೇಕು. ಪರೀಕ್ಷೆಯ ವಿಷಯದಲ್ಲಿ ಯಾವ ಸಾಶಂಕಭೀತಿಯು ಹುಡುಗ ಸಾಮಾನ್ಯವಾಗಿರುವದೋ ಅದೇ ವೃತ್ತಿಯು ಪ್ರತಿಯೊಂದು ಪಾಠದ ಬಗ್ಗೆ ಇ ದೆಂದರೆ ತಪ್ಪಾಗಲಿಕ್ಕಿಲ್ಲ. ತಾವು ಹೇಳಿದ ಉತ್ತರವನ್ನು ಶಿಕ್ಷಕರು ಸ್ವೀಕರಿ ಮುಕ್ಕಳು ಮೋರೆಯನ್ನು ಅರಳಿಸುವದು, ಇಲ್ಲವಾದರೆ ಖಿನ್ನರಾಗುವದು ವೃತ್ತಿಯು ಹೋಗಬೇಕು. "ನಾವು ನಮ್ಮ ಕಣ್ಣು, ಕಿವಿ, ಬುದ್ಧಿಗಳನ್ನು ಸಜ್ಜ ಗಿಸಿ ನಮ್ಮ ಮುಂದಿಟ್ಟ ಸಂಗತಿಗಳನ್ನು ಲಕ್ಷಗೊಟ್ಟು ನೋಡಿ ಶಿಕ್ಷಕರು ಕೇಳ ಪ್ರಶ್ನಗಳ ಹೊಲಬಿನ ಮೇಲೆ ವಿಚಾರಮಾಡುತ್ತ ಹೋಗಬೇಕು. ನಮ್ಮ ಅನು ಗಳನ್ನು ನೆನಪುಮಾಡಿಕೊಳ್ಳಬೇಕು, ನಾವೇ ತಿಳಿದುಕೊಳ್ಳಬೇಕು, ಪ್ರಶ್ನೆ ಸರಿಯಾದ ಉತ್ತರವನ್ನು ತಡಮಾಡಿ ಹೇಳಿದರೂ ಚಿಂತೆಯಿಲ್ಲ, ಎಲ್ಲರಿಗೂ ಸುಲ ವಾಗಿ ಆಲೋಚನೆಯು ಹರಿಯುವಂತೆ ಉದಾಹರಣಗಳನ್ನು ಶಿಕ್ಷಕರು ಶ್ರಮದಿ ನಮಗಾಗಿ ಕೂಡಿಸಿರುತ್ತಾರೆ, ಅವರು ಕೇಳುವ ಪ್ರಶ್ನೆಗೆ ನಾವು ಪ್ರಾಮಾಣಿಕ ದಿಂದ ನಮಗೆ ತಿಳಿದ ಉತ್ತರಗಳನ್ನು ಹೇಳಬೇಕು, ಹೀಗೆ ವಿದ್ಯಾರ್ಥಿಗಳು ಸಜ್ಜಾ ಪಾಠಕ್ಕೆ ಕೂಡಬೇಕು. ಈಗಿನ ಸ್ಥಿತಿಯು ಇದಕ್ಕೆ ವಿಪರೀತವಾಗಿದೆ. ಹುಡ ರೆದುರಿಗಿಟ್ಟ ಯಾವ ಪ್ರಶ್ನೆಯ ಉತ್ತರವನ್ನು ಅವರು ಸ್ವಸ್ಥಚಿತ್ತರಾಗಿ ಸರಿಯ ಹುಡುಕುವದಿಲ್ಲ. ಹುಡುಕಿ ಹೇಳಲಿಕ್ಕೆ ವರ್ಗದ ವ್ಯವಸ್ಥೆಯಲ್ಲಿ ತಕ್ಕ ಕಟ್ಟು ಪಾ ಇರುವದಿಲ್ಲ. ಶಿಕ್ಷಕನ ಕಡೆಗೆ ಲಕ್ಷ್ಯವಿರುವದಲ್ಲದೆ ಪಾಠದ ಕಡೆಗೆ ಇರುವದಿ ಉತ್ತರದ ಎರಡು ಮೂರು ಅಕ್ಷರಗಳನ್ನು ವಟವಟಿಸಿ ಶಿಕ್ಷಕನ ಮೋರೆಯ ನೋಡುವರು, ಅವನು ಹೌದು ಎನ್ನುವ ಲಕ್ಷಣ ಕಂಡುಬಂದರೆ ಮುಂದುವರಿಯ ವರು. ಇಲ್ಲದಿದ್ದರೆ ನಿಂತುಬಿಡುವರು. ಇಲ್ಲವೆ ಹತ್ತರ ಕುಳಿತ ಹುಡುಗ ಹಗುರಾಗಿ ಬಾಯಲ್ಲಿ ಅಂದುಕೊಳ್ಳುವ ಉತ್ತರವನ್ನೇ ಎತ್ತಿ ಹೇಳುವರು. ಈ ರಿ ಯಾಗಿ ಪಾಠಗಳು ಸಾಗುತ್ತಲಿವೆ. ಪ್ರಶ್ನೆಯನ್ನಾದರೂ ವಿದ್ಯಾರ್ಥಿಗಳ ಬುದ್ಧಿ ನಿಲುಕುವಂತೆಯೂ ಅವರ ಜಾಣತನಕ್ಕೆ ಅವಕಾಶದೊರೆಯುವಂತೆಯೂ ನಾ ಕೇಳುವದಿಲ್ಲ. ಪ್ರಶ್ನಗಳು ಅಚ್ಚುಕಟ್ಟಾಗಿರುವದಿಲ್ಲ. ಕೇಳಕೇಳುತ್ತ ವಾಕ್ಯಸ ಯಲ್ಲಿ ಬಪಲುಮಾಡುವದು, ಇಲ್ಲವೆ ಎರಡುಮೂರುಸಾರಿ ಪರ್ಯಾಯದಿ ಅದನ್ನೇ ಕೇಳುವದು, ಇತ್ಯಾದಿ ಪ್ರಶ್ನಗಳ ದೋಷಗಳಿಗೆ ನಾವು ಅಸ್ಪದಕೊಡುವೆ ಆದ್ದರಿಂದ ಉತ್ತರಗಳು ತಪ್ಪಾಗಿ ಹೊರಡುವವು ಇಲ್ಲವೆ ಅರ್ಧಮುರ್ಧ ಉತ್ತರಗ ದೊರೆಯುವವು. ಹೀಗಾಗಿ ಏನಾದರೊಂದು ಉತ್ತರ ಬರುವದೇ ತಡ, ಅದು ಸರಿಯಾಗುವಂತೆ ತಿದ್ದಿಕೊಂಡು ನಾವು ಪಾಠಗಳ ಮುಕ್ತಾಯ ಮಾಡಿಬಿಡುವೆ ಈ ಎಲ್ಲ ಕಾರಣಗಳಿಂದ ನಾವು ಬಹಳ ಪರಿಶ್ರಮದಿಂದ ಸಿದ್ಧಮಾಡಿಕೊಂಡ ಕ

ಣವು ನಮ್ಮ ಪಾಠಕ್ಕೆ ಬರಿ ಅದೊಂದು ಉತ್ತಮ ಪಾಠದ ಸೋಗುಹಾಕಲಿಕ್ಕೆ
ತ್ರ ಉಪಯೋಗವಾದಂತಾಗುವದರಲ್ಲಿ ಆಶ್ಚರ್ಯವಿಲ್ಲ.

ಈಗಿನ ಶಿಕ್ಷಣಕ್ರಮದಲ್ಲಿ ಇಂಥ ದೃಶ್ಯ ಸಾಧನಗಳ ಉಪಯೋಗಕ್ಕೆ ಬೇಕಾ
ಷ್ಟು ಉತ್ತೇಜನವಿದೆ. ಆದರ್ಶಪದ್ಧತಿಯಲ್ಲಿ ಯಾವದೊಂದು ಬಗೆಯ ದೃಶ್ಯ
ಧನವಿರಲೇಬೇಕು. ಹೀಗಿದ್ದರೂ ನಮ್ಮ ಪಟ್ಟಣದ ಸಾಲೆಗಳಲ್ಲಿ ಕಲಿತ ಹುಡು
ಗ ಒಂದು ಸ್ಕಾಲರಶಿಪ್ ಟೆಸ್ಟಿನಂಥ ಪ್ರಶ್ನ ಪತ್ರಿಕೆಯನ್ನು ಕೊಟ್ಟರೆ ಬಹಳ ಸ್ವಲ್ಪ
ಡುಗರು ಮಾತ್ರ ಸಮಾಧಾನಕರವಾಗಿ ಅದನ್ನು ಬಿಡಿಸುವರು. ಹೀಗೇಕೆ ಆಗಬೇಕು?
ಡುಗರನ್ನು ಕೂಡಿಹಾಕುವದರಲ್ಲಿಯೇ ಶಿಕ್ಷಕನ ಲಕ್ಷವೆಲ್ಲವೂ ವ್ಯಗ್ರವಾಗುವದ
ದ ಹಳ್ಳಿಯ ಸಾಲೆಯಲ್ಲಿ ಚಿತ್ರ ಆಕೃತಿ ಮೊದಲಾದವುಗಳನ್ನು ಪ್ರತಿಯೊಂದು
ಶದಲ್ಲಿ ಉಪಯೋಗಿಸಲಿಕ್ಕೆ ಶಿಕ್ಷಕರಿಗೆ ಅನುಕೂಲವಾಗುವದಿಲ್ಲವೆಂದು ಹೇಳಿದರೆ
ದು ವೇಳೆ ನಿಜವಿರಬಹುದು. ಅಲ್ಲಿ ಆದರ್ಶಪದ್ಧತಿಯು ನಡೆಯುವದು ಕಷ್ಟ,
ದು ಒಂದುವೇಳೆ ಒಪ್ಪಬಹುದು. ಆದರೆ ಶಹರದ ಸಾಲೆಗಳ ಹುಡುಗರ ಸ್ಥಿತಿ
ಾದರೂ ಹಳ್ಳಿಯ ಹುಡುಗರ ಸ್ಥಿತಿಗಿಂತ ಖಂಡಿತವಾಗಿ ಮೇಲ್ಮಟ್ಟಕ್ಕೆ ಹೋಗಿದೆ
ದು ಯಾರು ಹೇಳಬಲ್ಲರು? ಅವರ ಸಾಮಾನ್ಯ ಬುದ್ಧಿಯಲ್ಲಿ ಸ್ವಲ್ಪ ಅಂತರವು
ಣಬಹುದು. ಇದಕ್ಕೆ ಶಹರದ ಸುತ್ತಲಿನ ವಾತಾವರಣವೇ ಕಾರಣವಿರುವ
ದು ಹೊಳೆಯದೆ ಇರದು.

ಟ್ರೇನಿಂಗ್ ಕಾಲೇಜಗಳಲ್ಲಿ ಪ್ರ್ಯಾಕ್ಟಿಸಿಂಗಸ್ಕೂಲಿನ ಹುಡುಗರು ಉಳಿದ
ುನಸಿಪಲ್ ಶಾಲೆಗಳ ಹುಡುಗರಿಗಿಂತ ತಮ್ಮ ಸ್ವಂತ ಬುದ್ಧಿಯನ್ನು ಉಪಯೋ
ಸಲಿಕ್ಕೆ ಕಲಿತಿರುತ್ತಾರೆ ಎಂದು ಖಂಡಿತವಾಗಿ ಹೇಳಬಹುದೋ? ಇದನ್ನು ಆಯಾ
ುಡುಗರ ಬುದ್ಧಿಮಾಪನದಿಂದ ದೊರೆತ ತುಲನಾತ್ಮಕ ಅಂಕಿಗಳಿಂದ ಹೇಳಬಹು
ಲ್ಲದೆ ಸುಮ್ಮನೆ ನಮ್ಮ ಅಭಿಪ್ರಾಯವನ್ನು ಹೇಳುವದರಲ್ಲಿ ಏನೂ ಅರ್ಥವಿಲ್ಲ.

ಉಪಕರಣಗಳಿಂದ ಪೂರ್ಣಲಾಭವಾಗದಿರಲಿಕ್ಕೆಮತ್ತೊಂದು ಸಣ್ಣ ಕಾರಣವಿದೆ.
ದೇನೆಂದರೆ ಹುಡುಗರನ್ನು ಕ್ರಮವಾಗಿ ಉಪಕರಣಗಳನ್ನು ಬಿಡಲಿಕ್ಕೆ ಸಿದ್ಧಮಾಡ
ುವದು—ವಸ್ತುಗಳ ಸಹಾಯದಿಂದ ಯಾವದೊಂದು ಸಂಗತಿಯನ್ನು ಮನ
ಣುವ ರೀತಿ, ಅದನ್ನು ಬಿಟ್ಟರೆ ಕೇವಲ ಕುರುಡತನದ ರೀತಿ.—ಇವೆರಡೇ
ನ್ನು ಶಿಕ್ಷಕಶಿಕ್ಷಿಕೆಯರಿಗೆ ಗೊತ್ತಿರುವಂತೆ ಕಾಣುವವು. ಇವೆರಡಕ್ಕೂ ಮಧ್ಯವರ್ತಿ
ಾಗಿ ವರಿಮಾಣಗಳನ್ನು ಮುಂದಿಟ್ಟುಕೊಂಡು ಅವುಗಳಿಂದ ಅಂಕಗಣಿತದ
ುಲಭೂತವಾದ ಮುಖ್ಯ ನಿಯಮಗಳಿಗನುಸಾರವಾಗಿ ಕೃತಿಗಳನ್ನು ಮಾಡುತ್ತ

ಹೋಗುವ ಕೆಲಸವು ಮಹತ್ವವುಳ್ಳದ್ದು. ಈ ಮೆಟ್ಟಿನ್ನು ನಾವು ಕಲಿಸುವಾಗ ಪಾಠದಲ್ಲಿಯೂ ಇಟ್ಟುಕೊಳ್ಳುವದೇ ಇಲ್ಲ. ಉದಾಹರಣೆಗಾಗಿ ಹಿಂದೆ ಆಕ ಸಹಾಯದಿಂದ ತಿಳಿದುಕೊಂಡ ಕೃತಿಯನ್ನು ಕೊಟ್ಟು ಸಂಖ್ಯೆಗಳಿಂದ ಮಾಡಿ ಹೇಗೆಂದರೆ—

$$\frac{\text{ಕ್ಷ}}{\text{ಗ್ಯ}} \text{ ರೂ.} + \text{ಲ}$$

[ಅಂಶಛೇದಗಳ ಬದಲಾವಣೆಯ ನಿಯಮ] $= \frac{\text{ಗ್ಯ}}{\text{ಗ್ಯ}} \text{ ರೂ.} \div \text{ಲ}$

[ಲ ಭಾಗಗಳು $\div$ ಲ $=$ ೧ ಭಾಗ] $= \frac{\text{ಗ್ಯ}}{\text{ಗ್ಯ}} \text{ ರೂ.}$

ಯಾವ ಸಾಲೆಯಲ್ಲಿಯೂ ಹುಡುಗರು ಹೀಗೆ ಕೆಲವು ಲೆಕ್ಕಗಳನ್ನು ಉತ್ತರ ತೆಗೆದದ್ದು ನನ್ನ ಲಕ್ಷದಲ್ಲಿ ಬಂದಿಲ್ಲ.

ವ್ಹರ್ನಾಕ್ಯೂಲರ ಫಾಯಿನಲ್ ಪರೀಕ್ಷೆ ೧೯೩೭

ಕಳೆದ ಎಪ್ರಿಲ್ ತಿಂಗಳಲ್ಲಿ ನಡೆದ ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗ ಉತ್ತರದ ಕಾಗದಗಳನ್ನು ನೋಡಿದ ಪರೀಕ್ಷಕರು ಸಾಮಾನ್ಯವಾಗಿ ತಮಗೆ ಕಂ ಬಂದ ಅಭಿಪ್ರಾಯಗಳನ್ನು ಆಯಾ ಸೆಂಟರುಗಳ ಪ್ರೆಸಿಡೆಂಟರಿಗೆ ತಿಳಿಸಿದರು. ಅವ ಇದರಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರುವ ಗುಣದೋಷಗಳ ಸಂಕ್ಷೇಪವಾಗಿ ನಿವರಿಸಿರುವರು. ಪ್ರಾಥಮಿಕ ಶಿಕ್ಷಕರಿಗೆ ಇದರಿಂದ ತುಂ ಪ್ರಯೋಜನವಾಗುವಂತಿರುವದರಿಂದ ಅವನ್ನು ಇಲ್ಲಿ ಸಂಕ್ಷೇಪವಾಗಿ ಕೊಟ್ಟಿದೆ.

೧. **ಗಣಿತ**:— ದಕ್ಷಿಣ ಭಾಗದೊಳಗಿನ ಎಲ್ಲ ಸೆಂಟರುಗಳಲ್ಲಿ ಪರೀ ಕೂತ ಒಟ್ಟು ವಿದ್ಯಾರ್ಥಿಗಳಲ್ಲಿ ೧೦೦ಕ್ಕೆ ೫೦ ರಷ್ಟು ಜನರು ಗಣಿತದಲ್ಲಿಯೆ ನಾಪಾಸಾಗಿರುವರು. ಪ್ರಶ್ನೆಗಳಲ್ಲಿ ೧ (ಬ) ಮತ್ತು ೭—ಲ ಪ್ರಶ್ನೆಗಳನ್ನು ಬಾ ವಿದ್ಯಾರ್ಥಿಗಳು ಬಿಡಿಸಲು ಯತ್ನಿಸಲಿಲ್ಲ. ಬಹುಜನ ವಿದ್ಯಾರ್ಥಿಗಳಿಗೆ ೧ (ಪ್ರಶ್ನೆಯೂ ೨-೩-೪ ಮತ್ತು ೬ನೆಯ ಪ್ರಶ್ನೆಗಳೂ ಸುಲಭವೆನಿಸಿರಬೇಕು.

ಬಹುತರ ಎಲ್ಲ ವಿದ್ಯಾರ್ಥಿಗಳಲ್ಲಿ ವ್ಯವಸ್ಥೆ, ಸ್ವಚ್ಛತೆ, ಪ್ರಶ್ನೆಗಳನ್ನು ಮೆ ಮೆಟ್ಟಿಲುಗಳಂತೆ ಕ್ರಮಬದ್ಧವಾಗಿ ಬಿಡಿಸುತ್ತ ಹೋಗುವದು ಈ ಚಟವೇ ಇ ಧಾರವಾಡ ಸೆಂಟರಿನಲ್ಲಿ ಕೆಲವು ವಿದ್ಯಾರ್ಥಿಗಳು ಅನವಶ್ಯಕವಾಗಿ ಪ್ರತಿಮೆಟ್ಟಿಗ

ಜಮಾಖರ್ಚು:— ಈ ವಿಷಯದಲ್ಲಿ ಪಾಸಾದವರ ಸಂಖ್ಯೆಯ ಪ್ರಮಾ
ವೇನೋ ಸಮಾಧಾನಕರವಾಗಿದೆ. ೧-೨ನೆಯ ಪ್ರಶ್ನೆಗಳನ್ನು ಬಹುತರ
ವಿದ್ಯಾರ್ಥಿಗಳು ಬಿಡಿಸಿರುವರು. ಮತ್ತು ಇಷ್ಟರಿಂದಲೇ ಅವರು ಪರೀಕ್ಷೆಯ
ಪಾಸಾಗಲಿಕ್ಕೆ ಅವಶ್ಯವಿರುವಷ್ಟು ಗುಣಗಳನ್ನು ದೊರಕಿಸಿರುವರು. ಆದರೆ ಬಹು
ವಿದ್ಯಾರ್ಥಿಗಳಿಗೆ ಜಮಾಖರ್ಚನ್ನು (ಖಾತೆ ಕಿರ್ದಿಗಳನ್ನು) ಬರೆಯುವ ಸರಿಯಾ
ಪದ್ಧತಿಯ ಜ್ಞಾನವೇ ಇಲ್ಲವೆಂದು ಕಂಡುಬಂದಿದೆ. ಅರ್ಧಕ್ಕಿಂತ ಹೆ
ಸಂಖ್ಯೆಯ ಉಮೇದವಾರರು ಮೂರನೆಯ ಪ್ರಶ್ನೆಯನ್ನು ಬಿಡಿಸಲು ಯತ್ನಿಸ
ಇಲ್ಲ. ನಾಲ್ಕನೆಯ ಪ್ರಶ್ನೆಯನ್ನು ಸರಿಯಾಗಿ ಆರಂಭಿಸಲಿಕ್ಕೆ ಬಹುಜನ ಉಮೆ
ವಾರರಿಗೆ ಬರಲಿಲ್ಲ. ಆದ್ದರಿಂದ ಅವರ ಜಮಾಖರ್ಚನ ಕೊನೆಯ ಶಿಲಕು ಸರಿಯಾ
ಬರಲೇ ಇಲ್ಲ. ಉಮೇದವಾರರಿಗೆ 'ಕ್ರಾಸ್ ಚೆಕ್' ಎಂದರೇನೆಂಬದು ತ
ಹೊಸ ವಿಚಾರವಾಗಿರಬೇಕು. ಕೆಲಕೆಲವು ಉಮೇದವಾರರಂತೂ ಕೇವಲ ಕಾಲ್ಪ
ವಾಗಿ ಇದನ್ನು ವಿವರಿಸಿರುವರು.

ಎಲ್ಲ ಸೆಂಟರುಗಳ ಎಗ್ಸಿಕ್ಯುಟಿವ್ ಬಾಯೂಸದ ಉಮೇದವಾರರ ಈ ವಿಷ
ಗಳ ಉತ್ತರಗಳು ತಕ್ಕಮಟ್ಟಿಗೆ ಸಮಾಧಾನಕರವಾಗಿವೆಯೆಂದು ಹೇಳಬಹು
ಸಾಮಾನ್ಯವಾಗಿ ಕ್ಷೇತ್ರಫಲ ಮತ್ತು ಜಮಾಖರ್ಚು ಈ ವಿಷಯಗಳ ಜ್ಞಾನ
ಮಾತ್ರ ಸಾಕಷ್ಟು ಚೆನ್ನಾಗಿರಲಿಲ್ಲ.

೨. ಭಾಷಾವಿಷಯಗಳು— ಸಂಕ್ಷೇಪರೂಪದ ಬರಿವಣಿಗೆಗೆ ಸಂಬಂ
ಸಿದ ಮೊದಲನೆಯ ಪ್ರಶ್ನೆಯನ್ನು ಬಹುತರ ಎಲ್ಲ ವಿದ್ಯಾರ್ಥಿಗಳೂ ಬಿಡಿಸ
ಯತ್ನಿಸಿದ್ದರೂ ತೀರ ಸ್ವಲ್ಪ ಜನರಿಗೆ ಮಾತ್ರ ಈ ಪ್ರಶ್ನೆಯ ನಿಜವಾದ ಸ್ವರೂಪ
ತಿಳಿದಿತ್ತೆಂದೂ ಅಷ್ಟೇ ಜನರು ಸಮರ್ಪಕ ಉತ್ತರ ಬರೆದಿರುವದೆಂದೂ ಹೆ
ಬೇಕಾಗಿದೆ.

ಸಾಮಾನ್ಯವಾಗಿ ಹೇಳುವದಾದರೆ ಉಮೇದವಾರರ ಭಾಷಾವಿಷಯ
ಜ್ಞಾನವು ಸರಿಯಾಗಿ ಇಲ್ಲವೆಂದೇ ಹೇಳಬೇಕಾಗುವದು. ಅವರ ಉತ್ತರ
ಅಶುದ್ಧ ರೂಪಗಳು ವಿಪುಲವಾಗಿವೆ; ವ್ಯಾಕರಣದೋಷಗಳೂ ಅಶುದ್ಧ ಬರೆ
ಗೆಯ ದೋಷಗಳೂ ತುಂಬಿವೆ. ವ್ಯಾಕರಣದ ಪ್ರಶ್ನೆಗಳಿಗೆ ಸಮರ್ಪಕ ಉ
ಬರೆದ ವಿದ್ಯಾರ್ಥಿಗಳ ಸಂಖ್ಯೆಯಂತೂ ತೀರ ಕಡಿಮೆ.

ಕೈ ಬರೆಹವು ಸಾಮಾನ್ಯವಾಗಿ ಚೆನ್ನಾಗಿರುವದಾದರೂ ಪ್ರಶ್ನೆಗೆ ಸಮರ್ಪ
ಉತ್ತರವೇನೆಂಬದನ್ನು ತಿಳಿದು ಬರೆದವರು ತೀರ ಸ್ವಲ್ಪ ಜನರು; ಯಾವ
ಪ್ರಶ್ನೆಗೆ ಏನೋ ಒಂದು ಉತ್ತರ ಬರೆದು ಪಾರಾಗಲು ಯತ್ನಿಸಿದವರೇ ಬಹುಜನ

ವಿದ್ಯಾರ್ಥಿಗಳಿಗೆ ಪರೀಕ್ಷೆಯ ರೂಢಿಯಿಲ್ಲದಿರುವದೂ, ಪ್ರಶ್ನೆಯೇನು ? ಉತ್ತರ
ನ್ನು ಬೇಕಾಗಿದೆಯೆಂಬುದನ್ನೂ ಈ ಉತ್ತರವು ತಾವು ಓದಿದ ಯಾವ ಭಾಗದಲ್ಲಿದೆ
ಂಬದನ್ನೂ ನಿರ್ದಿಷ್ಟವಾಗಿ ತಿಳಿದುಕೊಳ್ಳದೆ ಉತ್ತರ ಬರೆಯಲಿಕ್ಕೆ ಹವಣಿಸುವದೂ
ಕ್ಕೆ ಕಾರಣವೆಂದು ಹೇಳಬೇಕಾಗುವದು. ಪ್ರಾಥಮಿಕ ಶಾಲೆಗಳಲ್ಲಿ ವ್ಯಾಕರಣದ
ಗಳು ತೃಪ್ತಿಕರವಾಗಿ ನಡೆಯುವದಿಲ್ಲೆಂಬ ಆಕ್ಷೇಪಣೆಗೆ ವ್ಯಾಕರಣದ ಪ್ರಶ್ನೆ
ರುವ ೩೦ ಗುಣಗಳಲ್ಲಿ ಉಮೇದವಾರರು ಪಡೆದಿರುವ ಅತ್ಯಲ್ಪ (೧-೨-೩)
ಗಳು ಬಲವತ್ತರವಾದ ಆಧಾರವಾಗಿವೆ.

೩. **ನಿಬಂಧ ಬರೆಹ**— ಬಹುತರ ಎಲ್ಲ ವಿದ್ಯಾರ್ಥಿಗಳು ನಿಬಂಧಗ
ನ್ನೂ ಬಿಟ್ಟು ರಿಪೋರ್ಟನ್ನೇ ಬರೆಯಲು ಹವಣಿಸಿರುವರು. ಇದರಿಂದ ಪ್ರಶ್ನ
ೆಯಲ್ಲಿ ಕೇಳಿದಂಥ ಸ್ವತಂತ್ರ ನಿಬಂಧವನ್ನಾಗಲಿ ಜೀವನಕಥೆಯನ್ನಾಗಲಿ
ುವ ರೂಢಿಯು ಉಮೇದವಾರರಿಗೆ ಇರಲಿಲ್ಲವೆಂದು ಊಹಿಸಬೇಕಾಗುವದು.
ನ ಬರೆಹದ ಆರಂಭದ ಕಲ್ಪನೆಗಳ ಜ್ಞಾನವು ಕೂಡ ಇಲ್ಲದಂಥ, ಮತ್ತು ವಿರಾಮ
ಗಳ ಉಪಯೋಗದ ಬಗ್ಗೆ ಕೇವಲ ಅಜ್ಞತೆಯನ್ನು ಪ್ರಕಟಿಸುವಂಥ, ಬರೆಹ
ವಿಪುಲವಾಗಿವೆ.

ಬಳಕೆಯಲ್ಲಿರುವಂಥ ಅನೇಕ ಸಾಮಾನ್ಯ ಶಬ್ದಗಳ ವಿಷಯದಲ್ಲಿಯೂ ಸಹ
ಬ್ದಗಳ ಶುದ್ಧಸ್ವರೂಪದ ಜ್ಞಾನವಿಲ್ಲದ ಉಮೇದವಾರರ ಸಂಖ್ಯೆಯೇ ಹೆಚ್ಚು.
ವರಿಗೆ ಶುದ್ಧ ಬರೆಹದ ರೂಢಿ ಮಾಡಿಸುವದೂ, ಅಂತಹ ಬರೆವಣಿಗೆಯನ್ನು
ಂದ ಮೇಲೆ ಬರೆಯಿಸುತ್ತಿರುವದೂ ಅವಶ್ಯವಾಗಿದೆ.

ಎಷ್ಟೋ ಉಮೇದವಾರರು ಉತ್ತರದ ಸಮರ್ಪಕತೆಯನ್ನು ಎಷ್ಟುಮಾತ್ರವೂ
ದೆ ಏನಾದರೊಂದು ವಿಷಯವಿವೇಚನೆ ಮಾಡಿ ಪಾರಾಗಲು ಯತ್ನಿಸಿರುವರು.

೪. **ಶಾಸ್ತ್ರೀಯ ವಿಷಯ**— ಒಟ್ಟಿನ ಮೇಲೆ ಈ ವರ್ಷದ ಉಮೇದ
ರರ ಬರೆವಣಿಗೆಯು ಹಿಂದಿನ ವರ್ಷಗಳಿಗಿಂತ ನೆಟ್ಟಗಿರುವದು; ಆದರೆ ಅದು
ಕಾದಷ್ಟು ಚೆನ್ನಾಗಿರಲಿಲ್ಲವೆಂಬದನ್ನು ಮರೆಯಲಾಗದು. ಉಮೇದವಾರರಿಗೆ
ಮ್ಮ ಅನುಕೂಲತೆಯ ಮೇರೆಗೆ ಸ್ವತಂತ್ರ ಆರಿಸಿಕೊಳ್ಳಲು ಅನುಕೂಲವಾಗುವಂತೆ
ಶ್ನಪತ್ರಿಕೆಯ ರಚನೆಯಿದ್ದಿತು. ಆದರೆ ಅವರು ಉತ್ತರ ಬರೆಯಲು ಆರಿಸಿಕೊಂಡ
ಶ್ನೆಗಳನ್ನೂ ಅವರ ಉತ್ತರದ ಪದ್ಧತಿಯನ್ನೂ ನೋಡಿದರೆ, ಅವರು ವಿಷಯದ
ಟ್ಟನ್ನು ತಿಳಿದುಕೊಳ್ಳುವದನ್ನು ಎಲ್ಲಿಯೋ ಬಿಟ್ಟುಬಿಟ್ಟು, ಪುಸ್ತಕದಲ್ಲಿದ್ದ ವಿಷಯ
ನು ಗಾಯಿಸಾತ ಮಾಡಿ ಪರೀಕ್ಷೆಯಲ್ಲಿ ಹೇಗಾದರೂ ಪಾರಾಗಬೇಕೆಂಬ ಧೋರಣೆ

ಯನ್ನಿಟ್ಟುಕೊಂಡು ಈ ವಿಷಯದ ಅಭ್ಯಾಸ ನಡೆಸಿರುವನೆಂದು ನಿನಿ. ಎಲ್ಲವನ್ನೂ ಹೇಳುವಂತಿದೆ. ಉಮೇದವಾರರ ನಿರೀಕ್ಷಣಶಕ್ತಿಯನ್ನೂ ವಿವೇಚನಾಶಕ್ತಿಯನ್ನೂ ಪರೀಕ್ಷಿಸುವಂಥ ಪ್ರಶ್ನೆಗಳಿಗೆ ಅವರು ಬರೆದ ಉತ್ತರವನ್ನು ನೋಡಿದರೆ ಬ ದುಃಖವಾಗುವದು. ಅನೇಕ ಪ್ರಶ್ನೆಗಳಿಗೆ ಮನಬಂದಂತೆ ಕೇವಲ ಕಲ್ಪನೆಯಿಂದ ಉತ್ತರ ಬರೆದಿರುವರು. ಅದರಿಂದ ಅವರ ಶಾಸ್ತ್ರೀಯ ವಿಷಯದ ಅಭ್ಯಾ ವ್ಯಾವಹಾರಿಕ ದೃಷ್ಟಿಯು ಅಂಧವಾಗಿದೆಯೆಂದು ಹೇಳಬೇಕಾಗುವದು. ವಿದ್ಯಾ ಗಳು ವ್ಯವಹಾರದೊಳಗಿನ ಯಂತ್ರ ಮೊದಲಾದ ಸಾಮಗ್ರಿಗಳನ್ನು ಲಕ್ಷ್ಯಪೂವ ವಾಗಿ ನಿರೀಕ್ಷಿಸಿ ಅವುಗಳ ತತ್ವಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು; ಚ ನಕಾಶೆ, (ಆಕೃತಿ) ಮಾಡೆಲ್ಲುಗಳು ಮೊದಲಾದವುಗಳಿಂದ ಆಯಾ ವಿಚಾರಗಳ ಸರಿಯಾಗಿ ಅರಿತುಕೊಳ್ಳಬೇಕು; ಉಪಲಬ್ಧವಿರುವ ಉಪಕರಣಗಳ ಸಹಾಯದ ಪ್ರಯೋಗಗಳನ್ನು ಮಾಡಿ ಫಲಿತಗಳನ್ನು ಕಂಡುಕೊಳ್ಳಬೇಕು. ಈ ಮಾರ್ಗದ ಶಾಸ್ತ್ರೀಯಪಾಠಗಳು ನಡೆದರೆ ಹಳ್ಳಿಯ ಹಾಗು ಶಹರದ ಸಾಲೆಗಳಲ್ಲಿ ಈ ವಿಷಯ ಅಭ್ಯಾಸವು ಸರಿಯಾಗಿ ಸಾಗಿ ವಿದ್ಯಾರ್ಥಿಗಳ ಜ್ಞಾನವು ಬೆಳೆವಣಿಗೆ ಹೊಂ ಅನುಕೂಲವಾಗುವದು. ಈ ಕೊರತೆಗಳ ಮೂಲಕವಾಗಿಯೇ ಶಾಸ್ತ್ರ ವಿಷಯದ ಅಭ್ಯಾಸವು ಪ್ರಾಥಮಿಕ ಶಾಲೆಗಳಲ್ಲಿ ಸರಿಯಾಗಿ ಸಾಗುವದಿಲ್ಲವೆ ದೂರು ಹುಟ್ಟುವದು.

೫. **ಇತಿಹಾಸ** — ಕೇವಲ ಪಾಯಿಪಾಠದ ಬಲದಿಂದಲೇ ಸಾಧ್ಯ ಮಟ್ಟಿಗೆ, ಈ ವಿಷಯದ ಅಭ್ಯಾಸವು ಸರಿಯಾಗಿ ಸಾಗಿದೆಯೆಂಬ ಭಾವನೆ ಹ ವಂತೆ, ಈ ವರ್ಷದ ಉಮೇದುವಾರರಲ್ಲಿ ಬಹುಜನರು ಪರೀಕ್ಷೆಯಲ್ಲಿ ಪಾಸಾಗ ಬೇಕಾಗುವಷ್ಟು ಗುಣಗಳನ್ನು ದೊರಕಿಸಿರುವರು. ಅರ್ಥಾತ್ ಈ ಪಾ ವಿದ್ಯಾರ್ಥಿಗಳಿಗೂ ಕೂಡ ಈ ವಿಷಯದ ಯೋಗ್ಯ ಜ್ಞಾನವಾಗಿಲ್ಲವೆಂದು ಹೇಳ ತಾಗಿದೆ. ಐತಿಹಾಸಿಕ ಘಟನೆಗಳು ಕಾಲಕ್ರಮ ಇವುಗಳ ನಿಜವಾದ ತಿಳಿ ಯಿಪ್ಪ ವಿದ್ಯಾರ್ಥಿಗಳ ಮಾತೇ ಬೇರೆ; ಅವುಗಳ ಸರಿಯಾದ ಕಲ್ಪನೆಯಿಲ್ಲದೆ ಕೇ ಪುಸ್ತಕಪಾಠದ ಬಲವಿಂದ ಕೇಳಿದ ಪ್ರಶ್ನೆಗೆ ಏನಾದರೊಂದು ವಿಚಾರವನ್ನು ತಿಳಿ ನಿಂದ ಉತ್ತರಕೊಟ್ಟು ಪಾರಾಗುವವರ ವಿಚಾರ ಬೇರೆ.

ಹಿಂದುಸ್ತಾನದ ಪ್ರಾಚೀನ ಇತಿಹಾಸದ ಜ್ಞಾನವಂತೂ ಉಮೇದವಾ ಸರಿಯಾಗಿ ಆಗಿಲ್ಲವೆಂದೇ ಹೇಳಬಹುದು. ಇಂದಿನ ಪ್ರಚಲಿತ ಮಹತ್ವದ ವಿ ವಾದ ಹಿಂದುಸ್ತಾನದ ರಾಜ್ಯದಾಡಳಿತಕ್ಕೆ ಸಂಬಂಧಿಸಿದ ವಿಷಯಗಳ ಅ ವಂತೂ ಮನಸ್ಸಿಗೆ ಅತ್ಯಂತ ವಿಷಾದವನ್ನುಂಟುಮಾಡುತ್ತಿದೆ.

ಉಮೇದವಾರರ ಉತ್ತರದಲ್ಲಿ ಪ್ರಮಾಣಬದ್ಧತೆ, ವ್ಯವಸ್ಥೆ, ಸಮರ್ಪಕತೆಗಳ ಕಲ್ಪನೆಯೇ ಇರಲಿಲ್ಲ.

ಈ ಕೆಳಗೆ ಹೇಳುವ ಉದಾಹರಣೆಗಳಿಂದ ವಿದ್ಯಾರ್ಥಿಗಳ ಯೋಗ್ಯತೆಯ ಪ್ರಮಾಣವನ್ನು ಅಳೆಯಬಹುದು. ಇವು ಈ ವರ್ಷದ ಉಮೇದವಾರರ ಉತ್ತರದ ಪತ್ರದಲ್ಲಿವೆ.

(ಅ) ಶಹಾಜಹಾನನು ಔರಂಗಜೇಬನ ಮಗನು.

(ಬ) ಶಹಾಜಹಾನನು ಅಕಬರನ ಹಿರಿಯ ಮಗನು.

(ಕ) ಶಹಾಜಹಾನನು ಶಿವಾಜಿಯ ತಂದೆಯು.

(ಡ) ಡುಪ್ಲೆಯು ಕ್ಲೈವನ ಸಹಾಯದಿಂದ ಮದ್ರಾಸಿನ ಗವರ್ನರನಾದನು.

(ಇ) ಭರತನೆಂಬ ಅರಸನು ಹಿಂದುಸ್ತಾನದಲ್ಲಿ ಕೆಲವ್ರಕಾಲ ಆಳಿದ್ದರಿಂದ ಅವನಿಗೆ ಭಾರತ ಮಂತ್ರಿಯೆಂದು ಹೆಸರು ಬಂದಿತು.

(ಫ) ಇಂಡಿಯನ್ ನೇಶನಲ್ ಕಾಂಗ್ರೆಸು ವಿಠ್ಠಲಭಾಯಿ ಪಟೇಲರ ಕಾಲದಲ್ಲಿ ಆರಂಭವಾಯಿತು.

೬. **ಭೂಗೋಲ** — ಒಟ್ಟಿನಮೇಲೆ ಪಾಸಾದ ಉಮೇದವಾರರ ಸಂಖ್ಯೆಯಿಂದ ಪರೀಕ್ಷೆಯ ಪರಿಣಾಮವು ಸಾಕಾದಷ್ಟು ಚೆನ್ನಾಗಿ ಆಗಿರುವದಾದರೂ ಕೆಳಗೆ ಕಾಣಿಸಿದ ದೋಷಗಳು ಉಮೇದವಾರರ ಉತ್ತರದಲ್ಲಿ ಕಂಡುಬರುವವು.

೧. ಉಮೇದವಾರರಿಗೆ ನಕಾಶೆಯನ್ನು ಓದಲಿಕ್ಕೂ ನಕಾಶೆ ತೆಗೆಯಲಿಕ್ಕೂ ಬೇಕಾದ ಮೂಲಭೂತ ಕಲ್ಪನೆಗಳ ಸರಿಯಾದ ಜ್ಞಾನವೇ ಇರಲಿಲ್ಲ. ಸ್ಕೇಲೂ ಪ್ರಮಾಣಬದ್ಧತೆಯೂ ಉಮೇದವಾರರ ತಿಳವಳಿಕೆಯಲ್ಲಿ ಎಂದೂ ಬಂದಿಲ್ಲವೆನ್ನಿಸಿತು. ನಕಾಶೆಯು ವಿದ್ರೂಪವಾಗಿತ್ತು.

೨. ಭೌಗೋಲಿಕ ಘಟನೆಗಳಲ್ಲಿ ಕಂಡುಬರುವ ಕಾರ್ಯಕಾರಣ ವಿವೇಚನೆಯ ಪರಿಜ್ಞಾನವು ಉಮೇದವಾರರಿಗೆ ಎಳ್ಳಷ್ಟೂ ಇರಲಿಲ್ಲವೆಂಬದು ಅವರ ಉತ್ತರದಿಂದ ಹೇಳಬಹುದಾಗಿದೆ ಶಾಸ್ತ್ರೀಯ ವಿವೇಚನೆಗೆ ಒಳಪಟ್ಟ ಭೂಗೋಲದ ಕಾರ್ಯಕಾರಣಭಾವವನ್ನು ಪೂರಾ ಮರೆತುಬಿಟ್ಟು ಪರೀಕ್ಷೆಗೆ ಕುಳಿತಾಗ ತಮ್ಮ ನೆನಪಿಗೆ ಹೊಳೆದಂತೆ ಏನಾದರೊಂದು ಉತ್ತರ ಬರೆದುಕೊಟ್ಟು ಪರೀಕ್ಷಕರ ಕೈಯೊಳಗೆ ಸಿಕ್ಕಾಗಿಬಿಡಬೇಕೆಂದು ಯತ್ನಿಸಿದ ಉಮೇದವಾರರೇ ಹೆಚ್ಚು.

ಈ ಕೆಳಗಿನ ಉದಾಹರಣೆಗಳಿಂದ ಈ ಮಾತು ಎಷ್ಟು ಚೆನ್ನಾಗಿ ಸಿದ್ಧವಾಗುವದನ್ನು ನೋಡಿರಿ.

(ಅ) ಎಸ್ಕಿಮೊ ಜನರು ವೆಕ್ಸಿಕೊ ದೇಶದ ನಿವಾಸಿಗಳು.

(ಬ) ಹೋಆಂಗಹೊ, ಯಾಂಗತ್ಸಿಕ್ಯಾಂಗ, ಸಿಂಧು, ಗಂಗಾನದಿ ಆರ್ಕ್‌ಟಿಕ್ ಮಹಾಸಾಗರಕ್ಕೆ ಕೂಡುವವು.

(ಕ) ಯೂಕ-ಇದು ಒಂದು ಬಗೆಯ ಮೀನವು.

(ಡ) ಚೀನೀ ಜನರ ಕಾಲುಗಳು ಗಿಡ್ಡವಾಗಿರುವದರಿಂದ ಅವರು ಗಳನ್ನು ಉಪಯೋಗಿಸುವರು.

(ಇ) ಗಲ್ಫ್‌ಸ್ಟ್ರೀಮವು ಯಾವದೋ ಒಂದು ಆಖಾತದಿಂದ ಹೊಸ ಯಾವದೋ ಒಂದು ಖಂಡಕ್ಕೆ ಹೋಗಿ ಅವರ ವಿರುದ್ಧದಿಕ್ಕಿಗಿನ ಇನ್ನೊಂದು ಖಂಡವನ್ನು ಸೇರುವದು.

ಬ್ರಹ್ಮದೇಶ

(ಕನ್ನಡ ಲೇಖದ ಆಧಾರದಿಂದ)

ಲೇ.—ಸಾತೇನಹಳ್ಳಿ

ಬ್ರಹ್ಮದೇಶವು ಬ್ರಿಟಿಶ ಚಕ್ರಾಧಿಪತ್ಯಕ್ಕೆ ಸೇರಿದೆ. ಅಲ್ಲಿ ಹರಿಯು ಇರಾವತಿ, ಸಿತಾಂಗ ಇತ್ಯಾದಿ ನದಿಗಳ ಹೆಸರುಗಳಿಂದ ಪ್ರಾಚೀನ ಆರ್ಯಾವತ ಇದು ಸಂಬಂಧಿಸಿದ್ದೆಂದು ತೋರುತ್ತದೆ. ಇದರಲ್ಲಿ ಉತ್ತರ ಬ್ರಹ್ಮದೇಶ, ದ ಬ್ರಹ್ಮದೇಶಗಳೆಂದು ಎರಡು ಸ್ವಾಭಾವಿಕ ವಿಭಾಗಗಳಿವೆ. ಇವೆರಡೂ ಭಾಗ ಕೂಡಿ ೩ ಲಕ್ಷ ೭೦ ಸಾವಿರ ಚೌರಸಮೈಲುಗಳಷ್ಟು ವಿಸ್ತಾರವಾದ ಪ್ರ ವನ್ನೊಳಗೊಂಡಿವೆ. ಇದು ಸ್ವಲ್ಪ ಹೆಚ್ಚುಕಡಿಮೆಯಾಗಿ ಮುಂಬಯಿ, ಮ ಇಲಾಖೆಗಳಷ್ಟು ವಿಶಾಲವಾದ ಪ್ರದೇಶವೆಂದು ಹೇಳಬಹುದು. ಜನಸಂಖ್ಯೆ ಸುಮಾರು ೧ ಕೋಟಿಗೆ ಸಮೀಪಿಸಿದೆ.

ನಮ್ಮ ಹಿಂದುಸ್ತಾನದಲ್ಲಿ ಕೆಲವೆಡೆ ಮಳೆ ಬೀಳದ್ದರಿಂದ ಅಲ್ಲಲ್ಲಿ ಸ್ವಲ್ಪ ಭೂಮಿಗಳಿವೆ. ಆದರೆ ಬ್ರಹ್ಮದೇಶದಲ್ಲಿ ಎಲ್ಲಿಡೆಗಳಲ್ಲಿ ಮಳೆ ಸುರಿಯುವದ ಎಲ್ಲೆಲ್ಲಿ ನೋಡಿದರೂ ಪಚ್ಚಗೆ ಕಂಗೊಳಿಸುತ್ತದೆ. ಮುಖ್ಯವಾಗಿ ಸಮುದ್ರ ಪ್ರದೇಶಗಳಲ್ಲಿ ಮಳೆಯು ಸಮೃದ್ಧಿಯಾಗಿ ಸುರಿಯುವದರಿಂದ ಅಲ್ಲಿ ಫಲವ ಭೂಭಾಗವಿರುವದು.

ಬ್ರಹ್ಮದೇಶದ ಉತ್ತರಭಾಗವು ಪರ್ವತಪ್ರದೇಶವಾಗಿದ್ದು ವೃಕ್ಷಮಯವಾಗಿದೆ. ಅಲ್ಲಿಂದ ಇರಾವತಿ, ಸಿತಾಂಗ, ಸಾಲವೇನ ನದಿಗಳು ಹುಟ್ಟಿ ದಕ್ಷಿಣಕ್ಕೆ ಹರಿಯುತ್ತವೆ. ಅವುಗಳಲ್ಲಿ ಇರಾವತಿಯು ದೊಡ್ಡದು. ಈ ನದಿಯಿಂದ ಹರಿದು ಬಂದ ಮಣ್ಣಿನಿಂದ ಡೆಲ್ಟಾ ಪ್ರದೇಶದಲ್ಲಿ ಸಣ್ಣ ಸಣ್ಣ ದ್ವೀಪಗಳಾಗಿವೆ. ಬೇಸಗೆ ಅವು ಬೆಸ್ತರಿಗೆ ವಸತಿಸ್ಥಾನಗಳಾಗಿವೆ. ಸಾಲ್ವೇನ ನದಿಯು ಇರಾವತಿಯ ಮಲ್ಲಿಯೇ ಉಗಮವಾಗುತ್ತದೆ. ಅದು ಇರಾವತಿಯಂತೆ ಜಲಮಾರ್ಗಕ್ಕೂ ಸಹ ಉಪಯುಕ್ತವಲ್ಲದಿದ್ದರೂ ಅದರ ಉಗಮಸ್ಥಾನದ ಹತ್ತರ ಬೆಳೆಯುವ ಮರಗಳ ತೊಲೆಗಳನ್ನು ಮುಖದ ವರೆಗೆ ಸಾಗಿಸಲು ಅನುಕೂಲತೆಯುಳ್ಳದಾಗಿದೆ.

ಇರಾವತಿ ನದಿಯ ಬಳಿಯಲ್ಲಿ ಒಂದು ಗ್ರಾಮದ ಹತ್ತರ ಕಲ್ಲೆಣ್ಣೆಯ ಬಾವಿ ಇದೆ. ಅದು ೨೦೦,೩೦೦ ಅಡಿ ತಗ್ಗಾಗಿದೆ. ಅದರೊಳಗಿಂದ ಎಣ್ಣೆಯು ಉಕ್ಕಿ ಬರುವದು. ಅದರಿಂದ ಪ್ರತಿವರ್ಷ ೧೨ ಸಾವಿರ ಟನ್ನುಗಳಷ್ಟು ಎಣ್ಣೆಯು ದೊರೆಯುವದು.

ಬರ್ಮಾದೇಶದ ಕಣಿಗಳಲ್ಲಿ ಕೆಂಪುರತ್ನವು ದೊರೆಯುವದು ಕೆಲವೆಡೆ ಉಕ್ಕಲ್ಲುಗಳೂ ದೊರೆಯುವವು. ಇವು ಮಂಡಲೆ ಪಟ್ಟಣದ ಉತ್ತರಕ್ಕೆ ೭೦ ಮೈಲುಗಳಾಚೆಯಲ್ಲಿ ೧೦೦ ಚೌರಸಮೈಲುಗಳಷ್ಟು ಸ್ಥಳದಲ್ಲಿ ದೊರೆಯುತ್ತವೆ. ಬರ್ಮಾ ಅರಸರ ಕಾಲದಲ್ಲಿ ಆ ರತ್ನಗಳನ್ನೆಲ್ಲ ರಾಜಮಂದಿರಕ್ಕೆ ಸಲ್ಲಿಸತಕ್ಕದ್ದೆಂದೂ ಬೇರೆ ಇತರರು ಯಾರೂ ಹೋಗಲಾಗದೆಂದೂ ನಿರ್ಬಂಧಿಸಿದ್ದರು. ಅವುಗಳಿಂದ ರಾಜಮಂದಿರಕ್ಕೆ ಪ್ರತಿವರ್ಷ ಏನಿಲ್ಲೆಂದರೂ ೧೮ ಲಕ್ಷ ರೂಪಾಯಿಗಳಷ್ಟು ಪ್ರಾಪ್ತಿಯಾಗುತ್ತಿತ್ತು.

ಬರ್ಮಾದೇಶದಲ್ಲಿ ಬತ್ತವೇ ಮುಖ್ಯ ಬೆಳೆಯು. ದಕ್ಷಿಣ ಬ್ರಹ್ಮದೇಶಕ್ಕಂತೂ ಮೊದಲೇ ಪ್ರಾಶಸ್ತ್ಯವು ದೊರೆದಿದೆ. ಅಲ್ಲಿಂದ ಪ್ರತಿವರ್ಷ ೬ ಕೋಟಿ ಮಣಿಗಳ ಅಕ್ಕಿಯು ರಫ್ತಾಗುತ್ತದೆ. ಈ ಬೆಳೆಯ ತರುವಾಯ ರೊಕ್ಕದ ಬೆಳೆಯೆಂದರೆ ತೇಗಿನದು. ಆನೆಗಳಿಂದ ತೇಗಿನ ದೊಡ್ಡ ದೊಡ್ಡ ತೊಲೆಗಳನ್ನು ಹೊಳೆಗಳಲ್ಲಿ ಹಾಕಿಸಿ ಅವುಗಳನ್ನು ಮುಂದಕ್ಕೆ ಸಾಗಿಸುತ್ತಾರೆ. ತಂಬಾಕವು ಸಹಜವಾಗಿ ಬೆಳೆಯುತ್ತಿದ್ದರೂ ತಂಬಾಕ ಸೇದುವವರಲ್ಲಿ ಅವರು ಒಳ್ಳೇ ನುರಿತಿರುವದರಿಂದ ಅದು ಸಾಕಾಗದೆ ಹೋಗಿ ಹಿಂದುಸ್ತಾನದಿಂದ ಮತ್ತೆ ತಂಬಾಕವನ್ನು ತರಿಸಿಕೊಳ್ಳುತ್ತಾರೆ. ಕಬ್ಬು ಸಾಕಾಗುವಷ್ಟು ಬೆಳೆಯುವದರಿಂದ ತಾಳೆಮರದಿಂದ ಬೆಲ್ಲ ಮಾಡಿಕೊಳ್ಳುತ್ತಾರೆ. ಇಲ್ಲಿ ಬಾಳೆ, ಪೇರು, ಕಿತ್ತಳೆ ಫಲಗಳು ಹೇರಳವಾಗಿ

ಬೆಳೆಯುತ್ತವೆ. ತಮ್ಮಲ್ಲಿ ಬೆಳೆಯುವ ಬಿದುರಿನಿಂದ ಮನೆಕಟ್ಟಿಕೊಳ್ಳುತ್ತಾ
ಇತ್ತೀಚೆಗಾಗಿ ಯುರೋಪ, ಅಮೇರಿಕಾಖಂಡದವರು ಬಿದುರಿನಿಂದ ಬಣ್ಣ
ಉಪಯೋಗಿಸುವ ರಾಳವನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಆದುದರಿಂದ ಅತ್ತಕಡೆ
ಬಿದುರು ರಫ್ತಾಗಲಾರಂಭಿಸಿದೆ. ಶಾನ ಪ್ರಾಂತದ ಬೆಟ್ಟಗಳಲ್ಲಿ ಹೈಗೂಕುದುರೆಗ
ದೊರೆಯುತ್ತವೆ. ಅವು ಕಾಡುಕುದುರೆಗಳು, ಮರಿಗಳನ್ನು ಹಿಡಿತಂದು ಸ
ಮಾರುತ್ತಾರೆ.

ಬ್ರಹ್ಮೀಜನರು ಮಹತ್ವಾಕಾಂಕ್ಷಿಗಳಲ್ಲ. ಅವರೂ ಚಟುವಟಿಕೆಯಿಂದ ಕ್ಷ
ಮಾಡಿ ದುಡ್ಡುಗಳಿಸಬೇಕೆಂದು ಇಚ್ಛಿಸುವದಿಲ್ಲ. ಒಂದುವೇಳೆ ಹಣವನ್ನು ಗ
ದರೂ ಯಾವದೊಂದು ಪುಣ್ಯಕಾರ್ಯಕ್ಕೆ ವೆಚ್ಚಮಾಡಿಬಿಡುವರು, ಇ
ಆಪ್ತೇಷ್ಟರಿಗೆ ಔತಣಮಾಡಿಸಿ ವ್ಯಯಮಾಡುವರು. ಬೆಳಿಗ್ಗೆ ಎದ್ದು ಸ್ನಾನಸಂ
ಊಟದಹೊತ್ತಾಗುವವರೆಗೆ ಓದಾಡುವರು. ಊಟವಾದಮೇಲೆ ಮಧ್ಯಾಹ್ನ
ಬಿಸಿಲಲ್ಲಿ ನಿದ್ದೆಮಾಡುವರು. ಪುನಃ ಸಾಯಂಕಾಲವಾದಕೂಡಲೆ ತಿರುಗಾಡಲಿ
ಹೊರಡುವರು. ಯಾವ ಪ್ರಾಪಂಚಿಕ ಸಂಕಟದಲ್ಲಿ ಸಹ ಅವರು ಕಳವಳಪಡು
ದಿಲ್ಲ. ಎಂಥ ಅಪಾರವಾದ ಸಂಕಟವೊದಗಿದಾಗಲೂ ಸ್ವಾಭಾವಿಕವಾದ ವಿನೋ
ಮೇಲಣ ಅಪೇಕ್ಷೆಯುಳ್ಳವರಿರುವರು. ಪ್ರತಿನಿತ್ಯ ಪ್ರಾತಃಕಾಲಕ್ಕೆ ಎದ್ದು
ವಾಗಿ ಜಳಕಮಾಡಿಕೊಂಡು ಊಟದಹೊತ್ತಾಗುವ ವರೆಗೂ ಶಾಂತರೀತಿ
ಓದಾಡುವರು. ನಾವು ಬೇಕಾದಷ್ಟು ವೇದಾಂತವಚನಗಳನ್ನು ಓದಿ ಇಲ್ಲವೆ
ಬರಿಬಾಯಿಂದ ಮಾತ್ರ ಅಡುವೆವು; **परोपदेशे पांडित्यं** ಎಂಬಂತೆ ನಮ್ಮ
ಇರುವದು. ಬ್ರಹ್ಮೀಯರು ಏನೂ ಓದದೆ ಇದ್ದರೂ, ದುಃಖವನ್ನು ಹೆ
ಹಚ್ಚಿಕೊಂಡು ಕಳವಳಪಡುವ ಗುಣವು ಅವರ ಸಮಾಜದಲ್ಲಿಯೇ ನಾಟಿರುವ
ಗದ್ದೆಯಲ್ಲಿ ನಾಟಿಹಾಕತಕ್ಕ ಕಾಲದಲ್ಲಿ ಸಹ ಜಾಗ್ರತೆಮಾಡಿ ಮುಗಿಸುವ ಆತ
ಅವರಲ್ಲಿರುವದಿಲ್ಲ; ಇದೇನೂ ಅನುಕರಣೀಯವಲ್ಲ. ದುಡಿತವನ್ನು ಪ್ರೀ
ಅದರಲ್ಲಿ ಮಗ್ನವಾಗುವ ಗುಣವು ಮನುಷ್ಯಪ್ರಾಣಿಗೆ ತೀರ ಅವಶ್ಯವಾದ
ವರ್ಷಕ್ಕೊಮ್ಮೆ ಸಂಭ್ರಮದಿಂದ ಯಾತ್ರೆಗೆಹೋಗುವ ಮೆಚ್ಚಿಗೆ ಇವರಲ್ಲಿ ವಿ
ವಾಗಿ ಕಾಣಬರುವದು.

ಗಂಡಸು ತಾನು ಏನೂ ಕೆಲಸಮಾಡದೆ ಆರಾಮವಾಗಿರಬೇಕೆಂದೇ ದೇ
ಹೆಂಗಸನ್ನು ಭೂಲೋಕಕ್ಕೆ ಕಳಿಸಿದ್ದಾನೆಂದು ಬ್ರಹ್ಮೀಜನರ ಭಾವನೆಯಿರು
ತೋರುತ್ತದೆ. ಸ್ತ್ರೀಯರು ಸ್ವಾತಂತ್ರ್ಯವುಳ್ಳವರೂ ಉತ್ಸಾಹಶಾಲಿಗಳೂ
ತಮ್ಮ ತಮ್ಮ ಗೃಹಕೃತ್ಯಗಳನ್ನು ಮುಗಿಸಿಕೊಂಡು ಮನೆತನಕ್ಕೆ ಸಂಬಂ
ಲೌಕಿಕವ್ಯವಹಾರಗಳನ್ನು ಮಾಡಲಿಕ್ಕಾಗಿ ಗಂಡಸರಂತೆ ಬೇಕಾದಷ್ಟು ಓಡಾಡು

ಕುಟುಂಬದ ಒಡಹುಟ್ಟಿದ ಮನೆತನದ ಹೆಣ್ಣುಮಕ್ಕಳು ತಮ್ಮ ತಮ್ಮ ಮನೆಗಳಲ್ಲಿ ಅಡಿಕೆ, ತಂಬಾಕು, ತೆಂಗಿನಕಾಯಿ ಮುಂತಾದವುಗಳನ್ನು ಮಾರುವರು. ಸಮಯದೊರೆದಾಗ ಇವರು ತಮ್ಮ ಮನೆಯಮುಂದಣ ಒಳಅಂಗಳದಲ್ಲಿ ಬಟ್ಟೆಗಳನ್ನು ನೆಯ್ಯುವರು. ಬ್ರಹ್ಮದೇಶದ ಸ್ತ್ರೀಯರು ಸಣ್ಣ ಸಣ್ಣ ವ್ಯಾಪಾರಗಳನ್ನಲ್ಲದೆ ಹೆಚ್ಚಿನ ಬಂಡವಲವುಳ್ಳ ಹತ್ತಿದ ವ್ಯಾಪಾರೋದ್ಯೋಗಗಳನ್ನೂ ಸಾಗಿಸುತ್ತಾರೆ. ಇವರು ಸಿಟ್ಟಿಗೆದ್ದಾಗ ಮಲ್ಲಯ ಹಳ್ಳಿಗಾಡು ಸ್ತ್ರೀಯರಂತೆ ಭೀಭತ್ಸಕರವಾದ ಮಾತುಗಳನ್ನಾಡಲಿಕ್ಕೆ ಮುಮುಂದು ನೋಡುವದಿಲ್ಲ. ಅದು ಅವರ ಪರಂಪರಾಗತ ಪದ್ಧತಿ ಗಿರುತ್ತದೆ.

ಬ್ರಹ್ಮೀಯರು ಒಮ್ಮೆಲೆ ಊಟಕ್ಕೆ ಕೂಡುವರು. ಮುಂದೆ ಒಂದು ತಟ್ಟೆಯಲ್ಲಿ ರಪದಾರ್ಥಗಳನ್ನಿಟ್ಟುಕೊಂಡು ಎಲ್ಲರೂ ತಮತಮಗೆ ಬೇಕಾದಷ್ಟನ್ನು ತಾವೇ ಳ್ಳುವರು. ಅನ್ನವೇ ಮುಖ್ಯಾಹಾರ. ಅದಕ್ಕೆ ಬೇಕಾಗುವ ವ್ಯಂಜನ ರ್ಥಗಳನ್ನು ಉಳ್ಳಿಗಡ್ಡೆ, ಮೆಣಸಿನಕಾಯಿಗಳಿಂದ ಮಾಡಿಕೊಳ್ಳುವರು. ತೀರ ಪಾಪವರು ಹುಣಿಸೆ, ಮಾವು ಇವುಗಳ ಎಲೆಗಳಿಂದ ರಸವನ್ನು ಸಿದ್ಧಪಡಿಸಿ ಳ್ಳುವರು. ವ್ಯಂಜನಪದಾರ್ಥಗಳಲ್ಲಿ ಉಪ್ಪು, ಎಣ್ಣೆಗಳ ಉಪಯೋಗವನ್ನು ವಾಗಿ ಮಾಡಿಕೊಳ್ಳುವರು. ಅನ್ನಕ್ಕೆ ಬೇಕಾಗುವ ವ್ಯಂಜನಾದಿಗಳನ್ನು ಬೇರೆ ಬೇರೆ ಬಟ್ಟಲುಗಳಲ್ಲಿಟ್ಟುಕೊಂಡು ಅನ್ನದ ಮೇಲೆ ಸುರಿದುಕೊಳ್ಳುವರು. ವ್ಯಂಜನಾದಿ ಲ್ಲಿ ಮೀನುಗಳನ್ನು ಉಪಯೋಗಿಸಿಕೊಳ್ಳುವರು. ಆವರು ನಮಗಿಂತ ಹೆಚ್ಚಾಗಿ ಕುಡಿಯುವರು. ಅದನ್ನು ಸಿದ್ಧಪಡಿಸುವ ಮತ್ತು ಕುಡಿಯುವ ಬಗೆಯೂ ಕ್ಷಣವಾಗಿರುವದು. ಕುದಿಯುವ ನೀರಲ್ಲಿ ಚಹದ ಸೂಪ್ಪನ್ನು(ಹಾಕಿ ಅರ್ಕವನ್ನು ನಾಕ್ಷನ್ನು) ತಯಾರಿಸಿ ಸೋಸಿ ಹಾಲು ಹಾಕಿ ಪೇಯಮಾಡಿಕೊಳ್ಳುವರು. ಪೆಯನ್ನು ಪ್ರಕಿಯೊಂದು ಗುಟುಕಿನ ಮೊದಲೇ ಬಾಯಲ್ಲಿ ಹಾಕಿಕೊಂಡು ಮೇಲೆ ಪೆತುಸು ಚಹ ಕುಡಿಯುವರು. ಊಟದ ವೇಳೆಯಲ್ಲಿ ಏನನ್ನೂ ಕುಡಿಯುವ . ಊಟವಾದ ಬಳಿಕ ಪಡಸಾಲೆಯಲ್ಲಿಟ್ಟ ಗಡಿಗೆಯಲ್ಲಿಯ ನೀರನ್ನು ಮುಕ್ಕಳಿಸಿ ಬಳಿ ಸಂಭ್ರಮದಿಂದ ಬತ್ತಿಯನ್ನು ಸೇದುತ್ತಾರೆ. ಗಂಡಸರು ಮಾತ್ರ ಹೆಂಗಸರ ತಪ್ಪಿಸಿ ಸರಾಯಿ ಅಂಗಡಿಗೆ ಹೋಗುತ್ತಾರೆ. ಇಂತಿಷ್ಟೇ ಕುಡಿಯಬೇಕೆಂದು ಏನೆ ಗೊತ್ತೇ ಇರುವದಿಲ್ಲ. ಮನದಣಿ ಮದ್ಯಪಾನ ಮಾಡುವರು. ಇದೊಂದು ಪದ್ಧತಿಯು ಅಲ್ಲಿ ರೂಢವಾಗಿರುವದು. ಸಂಸಾರದ ಜವಾಬುದಾರಿಯನ್ನು ತ್ತು ರಸದಗಾಲಿಗಳಂತಿರುವ ಪುರುಷಸ್ತ್ರೀಯರು ಸಮಾನವಾಗಿರದೆ ಸಂಸಾರ ಸ್ತ್ರೀಯೇ ಮುಖ್ಯ ಸಾರಥಿಯಾದದ್ದು ಇದರ ಮುಖ್ಯ ಗುಟ್ಟಾಗಿರುವದು. ಪ್ರತಿ

ಯೊಂದು ಸಂಸಾರದಲ್ಲಿ ಗಂಡಸು, ಹೆಂಗಸು, ಪ್ರೌಢ ಮಕ್ಕಳು ಸಹ ಸ್ವ
ಜವಾಬುದಾರಿಯನ್ನು ವಹಿಸುವದು ಶ್ರೇಯಸ್ಕರವೆಂದು ಗೊತ್ತಾಗುವದು.

ಗಂಡಸರೂ ಹೆಂಗಸರೂ ತಲೆಯ ಮೇಲೆ ಉದ್ದವಾಗಿ ಕೂದಲುಬಿಟ್ಟ
ಕೊಳ್ಳಲಿಕ್ಕೆ ಮೆಚ್ಚುವರು. ಅವನ್ನು ಕಟ್ಟಿಕೊಳ್ಳುವ ಪದ್ಧತಿ ಬೇರೆ
ಯಾಗಿರುವದು.

ಇವರ ಉಡುತೊಡಿಗೆಗಳು ವಿಚಿತ್ರವಾಗಿರುವವು. ಎಲ್ಲರೂ ರೇಶಿಮೆ
ಬಟ್ಟೆಯನ್ನು ಪ್ರೀತಿಸುವರು. ಬಡವರು ನಿರ್ವಾಹವಿಲ್ಲದೆ ಹತ್ತಿಯನೂಲಿನ
ಯನ್ನು ಧರಿಸುವರು. ಗಂಡಸರು ೧೫ ಮೊಳ ಉದ್ದವೂ ೩೫ ಮೊಳ ಅಗ
ಲದ ಹಚ್ಚಡದಂಥ ಬಟ್ಟೆಯನ್ನು ಮುಂದುಗಡೆ ಧೋತರದ ಹಾಗೆ ಸುತ್ತಿಕೊ
ಉಳಿದ ಭಾಗವನ್ನು ಮೇಲಕ್ಕೆ ಹೆಗಲವರೆಗೆ ಒಯ್ದು ಹೊದ್ದುಕೊಂಡು ನ
ನಿಲುವಂಗಿಯನ್ನು ಹಾಕಿಕೊಳ್ಳುವರು. ತಲೆಗೆ ರೇಶಿಮೆಯ ಚೌಕ ಲುಂಗಿಯ
ಸುತ್ತಿಕೊಳ್ಳುವರು.

ಹೆಂಗಸರು ೨ ಉಡುವ ಲುಗಿಯು ಎರಡು ತುಂಡಾಗಿರುತ್ತದೆ. ಇ
ಡನ್ನೂ ಸುತ್ತಿಕೊಂಡು ಮೇಲೆ ಹೊದ್ದುಕೊಳ್ಳುವರು. ಮೇಲೆ ಚಿಕ್ಕ ಅಂಗಿಯ
ಹಾಕಿಕೊಳ್ಳುವರು. ತಲೆಯಲ್ಲಿ ಹೆಳಲನ್ನು ನಾನಾವಿಧವಾಗಿ ಹೆಣೆದುಕೊ
ಹೂಗಳನ್ನು ಧರಿಸುವರು.

ಸಿರಿವಂತರು ಸಹ ಬಿದರಿನ ಗುಡಿಸಲುಗಳನ್ನೇ ಮನೆಗಳನ್ನಾಗಿ ಮಾಡಿಕೊ
ವರು. ಇವೆಲ್ಲ ಒಂದೇ ಅಂತಸ್ತಿನವಿರುವದು ಸಹಜ. ಈ ರೀತಿಯಾಗಿ
ಕಟ್ಟಿಕೊಳ್ಳುವದು ಪರಂಪರಾಗತ ಪದ್ಧತಿಯದಾಗಿರುವದು. ಈ ಕಾಲದ ನ
ಇಟ್ಟಿಗೆಯಿಂದ ಮನೆಕಟ್ಟಲಾರರು. ಬಣ್ಣಹಚ್ಚಿ ಸುಶೋಭಿತವಾಗಿ ಮಾಡಿಕೆ
ಲಾರರು. ಬ್ರಹ್ಮೀಯರು ತಮ್ಮ ಮನೆಗಳನ್ನು ಕಂಬಗಳ ಮೇಲೆ ರಚಿಸುವ
ನಮ್ಮಲ್ಲಿ ದೊಡ್ಡಾಟವಾಡುವ ಅಟ್ಟಗಳಂತೆ ಗೃಹರಚನೆಯು ತಳಹದಿಯಿರುವ
ಅದರಿಂದ ನೆಲದ ತೇವಿನ ತೊಂದರೆಯು ಅವರಿಗೆ ಹೂರವಾಗುವದು. ಒಂದುವೆ
ಕೆಳಕ್ಕೆ ನೀರುಹರಿದರೂ ಏನೂ ಬಾಧೆ ಆಗಲಾರದು. ಮನೆಗೆ ೬ ಕಂಬಗಳಿರುವ
ಜೋಯಿಸರು ಕಟ್ಟುವ ಮುಹೂರ್ತವನ್ನೂ ಕಂಬಗಳ ರಚನೆಯನ್ನೂ ಹೇಳುವ
ಕಂಬಗಳಿಗೆ ಒಳ್ಳೆಯ ಮಹತ್ವವಿರುವದು ಮೇಲ್ಚಾಗಕ್ಕೆ ಹುಲ್ಲಿನ ಹೊದಿಕೆಯ
ಹಂಚುಹೊಚ್ಚುವದು ತೀರ ವಿರಲ. ಹೊಚ್ಚಿದರೂ ಹುಲ್ಲಿನಮೇಲೆ ಹೊಚ್ಚುವ
ರಂಗೂನ ಪಟ್ಟಣದಲ್ಲಿ ಮಾತ್ರ ಮೇಲ್ಚಾಗಕ್ಕೆ ಹಲಿಗೆ ಜೋಡಿಸಿ ಮೇಲೆ ಹು
ಹೊಚ್ಚುವ ಪದ್ಧತಿಯು ರೂಢವಾಗಿದೆ. ಮುಂದೆ ಇದೇ ಪದ್ಧತಿಯು ಸರ್ವ
ಬಳಕೆಯಲ್ಲಿ ಬರಬಹುದು.

ಅಲ್ಲಿ ಸ್ಥಳವು ಬೇಕಾದಷ್ಟು ಇರುವದರಿಂದ ಹಿತ್ತಲವು ವಿಶಾಲವಾಗಿರುವದು. ಲದಲ್ಲಿ ಅಡಿಗೆಯ ಸ್ಥಳ, ಬತ್ತದ ಕಣಜ, ಅಕ್ಕಿ ಕುಟ್ಟುವ ಯಂತ್ರಗಳಿರುವವು. ಲದಲ್ಲಿ ಕುರಿ ಕೋಳಿಗಳನ್ನು ಸಾಕುವರು. ನಾಯಿಯನ್ನು ಬಹುತರವಾಗಿ ಯೊಂದು ಮನೆಯಲ್ಲಿ ಸಾಕೇ ಸಾಕುತ್ತಾರೆ. ಮನೆಯು ಕಟ್ಟಿಗೆಯ ಕಂಬಗಳ ಲೆ ಕಟ್ಟಿರುವದರಿಂದ ಮನೆಯ ತಳದಲ್ಲಿ ಹಾಕಿದ ಕಟ್ಟಿಗೆಯ ಹಲಿಗೆಗಳ ಸಂದಿ ದ ಕೆಳಗೆ ಬಿದ್ದ ಪದಾರ್ಥಗಳು ನೀರಿನಿಂದ ಕೊಳೆತು ಕೆಡದಂತೆ ನಾಯಿಯು ನ್ನೆಲ್ಲ ತೆಗೆದುಹಾಕುವ ಕೆಲಸಕ್ಕೆ ಉಪಯೋಗಬೀಳುತ್ತದೆ.

ಬ್ರಹ್ಮದೇಶಕ್ಕೂ ನಮ್ಮದೇಶಕ್ಕೂ ಪುರಾತನಕಾಲದಿಂದಲೇ ಸಂಬಂಧವಿದ್ದದ್ದು ನ ಸಂಗತಿಯಿಂದ ಮತ್ತಿಷ್ಟು ದೃಢವಾಗುತ್ತದೆ. ಕೂಸು ಹುಟ್ಟಿದ ಬಳಿಕ ಚಿತನ, ನಾಮಕರಣ, ಹೆಸರಿಡತಕ್ಕ ಪದ್ಧತಿ ಇತ್ಯಾದಿಗಳೆಲ್ಲ ನಮ್ಮಲ್ಲಿಯ ತಿಗಳಿಗೆ ಹೊಂದುತ್ತವೆ. ಇವೆಲ್ಲವುಗಳಿಗೂ ಶುಭನುಮುಹೂರ್ತವನ್ನು ಜೋಯಿ ನಮ್ಮಲ್ಲಿಯಂತೆ ಕಲ್ಪಿಸಿಕೊಡುತ್ತಾನೆ ನಮ್ಮಲ್ಲಿಯ ನಾಮಕರಣವ ಪದ್ಧ ು ಹುಟ್ಟಿದ ನಕ್ಷತ್ರದ ಮೇಲಿಂದಾಗಲಿ, ಪರಂಪರಾಗತ ಹಿರಿಯರ ಪದ್ಧತಿ ಾಗಲಿ ನಿರ್ಣಯಿಸಲ್ಪಡುತ್ತದೆ. ಅಲ್ಲಿ ಮಾತ್ರ ಕೂಸು ಹುಟ್ಟಿದ ವಾರದಿಂದ ಯಿಸುತ್ತಾರೆ. ಸೋಮವಾರ ಹುಟ್ಟಿದ ಮಕ್ಕಳಿಗೆ ಕ, ಖ, ಗ, ಘ, ಙ ಆದಿಯಲ್ಲಿ ಉಳ್ಳ ಯಾವದೊಂದು ಹೆಸರನ್ನು ಇಡುವರು. ಇದರಂತೆ ಮಂಗಳ ಹುಟ್ಟಿದ ಮಕ್ಕಳಿಗೆ ಸ, ಷ, ಜ, ಝ. ಞ, ಐಂಗಾ ಇತ್ಯಾದಿಗಳಲ್ಲಿ ಯಾವ ೊಂದು ಅಕ್ಷರವು ಪ್ರಾರಂಭದಲ್ಲಿ ಉಳ್ಳ ಹೆಸರನ್ನಿಡುವರು. ಬುಧವಾರ ದ ಕೂಸಿಗೆ ತ, ಥ, ದ, ಧ, ನ ಸನಾಯ್ ಇತ್ಯಾದಿ ಅಕ್ಷರಗಳಲ್ಲಿ ಯಾವ ು ಅಕ್ಷರವನ್ನು ಸೂಚಿಸುವ ಹೆಸರನ್ನಿಡುತ್ತಾರೆ.

ಅವರಲ್ಲಿ ನಮ್ಮಲ್ಲಿಯಂತೆ ಸ್ಥಿರವಾದ ಹೆಸರು ಇರುವದಿಲ್ಲ. ಮೇಲಿಂದಮೇಲೆ ನ್ನು ಬದಲಿಸುತ್ತಾರೆ. ಈ ಪ್ರಕಾರವಾಗಿ ಹೆಸರನ್ನು ಬದಲಿಸುವಾಗ ಒಂದು ು ಫಲಾಹಾರವನ್ನು ಪೊಟ್ಟಣಗಳಲ್ಲಿ ಕಟ್ಟಿ ತನ್ನ ಇಷ್ಟಮಿತ್ರರಿಗೆ ಕಳಿಸಿ ಇನ್ನು ನನ್ನ ಹೆಸರು ಈ ರೀತಿಯಾಗಿರುತ್ತದೆ. ಇನ್ನು ಮುಂದೆ ನನ್ನನ್ನು ಇದೇ ರೀತಿ ಕರೆಯಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುವನು.

ಜೂನ್-ಕೆಳಗಣ ಬ್ರಹ್ಮದೇಶದಲ್ಲಿರುವ ಇರಾವತಿ ನದಿಯ ಕೊಳ್ಳದಲ್ಲಿ ಬತ್ತವು ಾಗಿ ಬೆಳೆಯುತ್ತದೆ. ಜೂನ್ ತಿಂಗಳಿನಲ್ಲಿ ನೈಋತ್ಯ ಮನ್ಸೂನ ಮಳೆಯಿಂದ ಯೆಲ್ಲ ಕೆಸರಾಗುತ್ತದೆ. ಆಗ ಕೋಣ, ಎಮ್ಮೆ ಅಥವಾ ಎತ್ತುಗಳನ್ನು ಸೇಗಿಲದಿಂದ ಭೂಮಿಯನ್ನು ಹರಗುತ್ತಾರೆ. ಮೊದಲೇ ಒತ್ತಟ್ಟಿಗೆ ಬತ್ತದ

ಅಗಿಗಳನ್ನು ಹಾಕಿರುತ್ತಾರೆ. ಅವನ್ನು ತಂದು ಸಿದ್ಧವಾದ ಕ್ಷೇತ್ರದಲ್ಲಿ ಅಲ್ಲಲ್ಲಿ ಹಚ್ಚುತ್ತಾರೆ. ಈ ಎಲ್ಲ ಕೆಲಸಗಳಲ್ಲಿ ಯಜಮಾನನು ತನ್ನ ಮಕ್ಕಳಿಂ ಹೆಂಗಸರಿಂದಾಗಲಿ ಮಾಡಿಸುತ್ತ ತಾನು ತಂಬಾಕ ಸೇದುತ್ತ ಒಡ್ಡಿನ ಮೇಲೆ ಮೇಲು ವ್ಯವಸ್ಥೆ ನೋಡುತ್ತಿರುತ್ತಾನೆ. ಇಷ್ಟೆಲ್ಲಾ ಆಗಿ ಪೈರು ಚೆನ್ನಾಗಿ ಕೊಯ್ಯುವ ಕಾಲವು ಜನವರಿ ತಿಂಗಳಿಗೆ ಪ್ರಾಪ್ತವಾಗುತ್ತದೆ. ಅವರು ವಿಧವಾಗಿಯೇ ಹೊಲಗೆಲಸಮಾಡಿದರೂ ಭೂಮಿ, ಹವೆ, ಮಳೆ ಇವುಗ ಕೂಲತೆಯಿಂದ ಕನಿಷ್ಠ ಪಕ್ಷಕ್ಕೆ ಎಕರೆಗೆ ೮೦–೧೦೦ ರೂಪಾಯಿಗಳ ಪಸಿಗೆ ಯಾಗುತ್ತದೆ. ಪೈರು ಕೊಯ್ಯುವಾಗ ನಮ್ಮಲ್ಲಿಯಂತೆ ಬೊಡ್ಡಿಗೆ ಸರಿಸಿ ಕೆ ಬರಿ ತೆನೆಯನ್ನಷ್ಟೇ ಕೊಯ್ದು ತಕ್ಕೊಳ್ಳುತ್ತಾರೆ. ಉಳಿದದ್ದನ್ನೆಲ್ಲ ಭೂ ಸೇರಿಸಿ ರಂಟಿಹೊಡೆದು ಗೊಬ್ಬರಮಾಡಿಕೊಳ್ಳುತ್ತಾರೆ. ಸಿದ್ಧವಾದ ಬ ಯಂತ್ರದಿಂದ ತಿರುವಿ ಸ್ವಚ್ಛವಾದ ಅಕ್ಕಿಯನ್ನು ಸಿದ್ಧಪಡಿಸಿ ಯು ಅಮೇರಿಕಾ, ಚೀನ ದೇಶಗಳಿಗೆ ಕಳುಹುವರು.

ಬತ್ತದ ತರುವಾಯ ರಫ್ತಾಗುವ ಪದಾರ್ಥವು ತೇಗಿನ ತೊಲೆ. ಇ ಯಲ್ಲಿ ಬರ್ಮಾ ದೇಶದ ತೇಗಿನ ಬೆಳೆಯೇ ಬಹಳವಾದದ್ದು. ಅಡವಿಗಳಲ್ಲಿ ಆನೆಗಳಿಂದ ನದಿಗಳಲ್ಲಿ ಚೆಲ್ಲಿ ಬೇಕಾದ ಪಟ್ಟಣಗಳಿಗೆ ಒಯ್ಯುತ್ತಾರೆ.

ಬೌದ್ಧಧರ್ಮದ ಅಹಿಂಸಾಧರ್ಮವು ಕೆಲಮಟ್ಟಿಗೆ ಇನ್ನೂ ಅಲ್ಲಿ ಆಚ ವದರಿಂದ ರೇಶಿಮೆ ಹುಳಗಳನ್ನು ಸಾಕಿ ರೇಶಿಮೆ ತೆಗೆಯಲಿಕ್ಕೆ ಶಿಷ್ಟರು ಇ ದಿಲ್ಲ. ಆದರೂ ಗುಡ್ಡಗಳಲ್ಲಿ ವಾಸಿಸುವ ಬೆಸ್ತರೂ ಜೇಡರೂ ಹುಳಗಳನ್ನು ರೇಶಿಮೆ ತೆಗೆದು ಊರ ಜನರಿಗೆ ಮಾರುತ್ತಾರೆ. ಪ್ರತಿಯೊಂದು ಮನ ಒಂದು ಮುಗ್ಗವಂತೂ ಇದ್ದೇ ಇರುತ್ತದೆ, ನೆಯುವ ಕೆಲಸವನ್ನು ಹೆಂಗಸರೇ ಮಾಡುವರು. ಹೆಂಗಸರು ಒಳ್ಳೇ ಚಟುವಟಿಕೆಯಿಂದಲೂ ಸಾ ದಿಂದಲೂ ನೇಯಿಗೆಯ ಕೆಲಸಕ್ಕೆ ಒಳ್ಳೇ ತಕ್ಕವರಾಗಿರುತ್ತಾರೆ. ಆವರು ಇ ಬಟ್ಟೆಗಳಲ್ಲಿ ಕೆಲವು ವಿಚಿತ್ರವಾದ ಮಾದರಿಯವು ಇರುವದರಿಂದ ಒ ಒಬ್ಬಳೇ ೨೦–೩೦ ಲಾಳಗಳನ್ನು ಕೈಯಾಡಬೇಕಾಗುತ್ತದೆ. ಇಲ್ಲಿ ನಿ ಬಟ್ಟೆಗಳಿಗಿಂತ ಚೀನಾದೇಶದ ಬಟ್ಟೆಗಳು ನಯವಾಗಿರುವದರಿಂದ ನಿ ಚೀನಾದೇಶದ ಬಟ್ಟೆಗಳನ್ನೇ ಉಪಯೋಗಿಸುತ್ತಾರೆ. ಬಡವರು ಮಾತ್ ಸಿದ್ಧವಾದ ಬಟ್ಟೆಗಳನ್ನೇ ಉಟ್ಟುಕೊಳ್ಳುತ್ತಾರೆ.

ಬರ್ಮೀಯರು ಮರದ ಕಟ್ಟಿಗೆಯಿಂದಲೂ ಬಿದುರಿನ ಸೀಳುಗಳ ಕಟ್ಟಿಗೆಯಪಾತ್ರೆಗಳನ್ನೂ ಸಂಪುಷ್ಟಗಳನ್ನೂ ಮಾಡಿ ಅವಕ್ಕೆ ಬಣ್ಣ ಕೊಟ್ಟು ಇ

ಗಂಧ ಮರದ ಎಣ್ಣೆಯನ್ನು ಅವಕ್ಕೆ ಸವರುತ್ತಾರೆ, ಈ ತರದ ಸಂಪುಷ್ಟಗಳು ಶರೀನ, ಕುಂಕುಮಗಳ ಭರಣಿಗಳಂತೆ ಉಪಯೋಗಿಸಲ್ಪಡುತ್ತವೆ. ಇವು ಬಹು ವಸ ತಾಳುವವಲ್ಲದೆ ಬಣ್ಣವು ಸಹ ಎಂದೂ ಹಾರಿಹೋಗುವದಿಲ್ಲ.

ಕಟ್ಟಿಗೆಯಲ್ಲಿ ಚಿತ್ರಗಳನ್ನು ಕೆತ್ತುವದರಲ್ಲಿ ಬರ್ಮೀಯರು ಸಮರ್ಥರು. ಈ ತರದ ಶಿಲ್ಪವು ದೇವಸ್ಥಾನಗಳಲ್ಲಿಯೂ ಸಾಧುಗಳ ಮಠಗಳಲ್ಲಿಯೂ ಬೇಕಾ ಷ್ಟು ಕಾಣಬಹುದು. ಕೆಲಕೆಲವು ಮನೆಗಳಲ್ಲಿ ಕೆತ್ತಿಗೆ ಕೆಲಸದ ಅಲಂಕಾರಗಳು ಸಗ್ಗಳವಾಗಿ ಕಾಣುತ್ತವೆ. ಈ ಬಗೆಯ ಚಿತ್ರದ ಕೆಲಸಗಳಲ್ಲಿ ನಿಪುಣರಾದವರಿಗೆ ದೇಶದಲ್ಲಿ ಬಹಳ ಮರ್ಯಾದೆಯು ದೊರೆಯುತ್ತದೆ ಬರ್ಮೀಯರು ಚಿನ್ನ ಬೆಳ್ಳಿ ಗಳಿಂದ ಬಗೆಬಗೆಯ ಅಲಂಕಾರಗಳನ್ನು ಮಾಡುವದರಲ್ಲಿಯೂ ಹೆಸರಾದವರಿರು ತ್ತಾರೆ. ಗಂಟೆಗಳನ್ನು ಎರಕ ಹೊಯ್ಯುವದರಲ್ಲಿಯೂ ಗೌತಮಬುದ್ಧನ ಪ್ರತಿಮೆ ಗಳನ್ನು ಕೆತ್ತುವದರಲ್ಲಿಯೂ ಬರ್ಮೀಯರ ಕೈಹಿಡಿವವರು ಯಾರೂ ಇಲ್ಲ.

ಬರ್ಮೀಯರು ಹಿಂದುಸ್ಥಾನದಲ್ಲಿಯ ಪ್ರಸಿದ್ಧ ಪರಾಕ್ರಮಿಗಳಾದ ಪುರುಷ ರ ಸಂಬಂಧಿಸಿದ ಕಥೆಗಳ ವಿಷಯವಾಗಿಯೂ ಗೌತಮಬುದ್ಧನ ವಿಷಯವಾಗಿಯೂ ನಾಟಕಗಳನ್ನು ಕಟ್ಟಿ ಆಡಿಕೊಳ್ಳುತ್ತಾರೆ. ನಮ್ಮಲ್ಲಿಯಂತೆ ಇತರ ಯಾವ ಕಥೆಗಳ ಮೇಲೆಯೂ ಕಥೆ ಕಟ್ಟಿ ನಾಟ್ಯವಾಡುವದಿಲ್ಲ. ಈ ಸಂಗತಿಯು ಮೇಲಿಂದ ಅವರ ದ್ದ ಪೂರ್ವಪರಂಪರಾಭಿಮಾನವು ವ್ಯಕ್ತವಾಗುತ್ತದೆ.

ನಮ್ಮಲ್ಲಿಯಂತೆ ಅಲ್ಲಿಯೂ ಗೊಂಬೆಯಾಟಗಳನ್ನು ಆಡುವರು. ಒಮ್ಮೊಮ್ಮೆ ಯಂದೊಂದು ಆಟವನ್ನು ೩–೭ ದಿವಸಗಳವರೆಗೆ ರಾತ್ರಿಯಲ್ಲಿ ಆಟವಾಡುವರು. ಗೊಂಬೆಯ ಆಟಗಳು ಸೂರ್ಯೋದಯವಾಗುವವರೆಗೂ ನಡೆಯುವವು. ರಾತ್ರಿ ಯೆಲ್ಲಾ ಎಚ್ಚರವಾಗಿರಬೇಕೆಂದು ತೇಮಲೆಯ ಪದಾರ್ಥಗಳನ್ನು ಸೇವಿಸುವರು. ಬರ್ಮಾದೇಶದ ಸ್ತ್ರೀಪುರುಷರು ಕುಣಿಯುವದನ್ನು ಪ್ರೀತಿಸಿ ಆಸ್ಥೆಯಿಂದ ಕಲಿತಿ ರುತ್ತಾರೆ; ಆದರೆ ಇದೇ ಕೆಲಸವನ್ನು ಆ ಜನ್ಮವಾಡತಕ್ಕ ನಾಟ್ಯಗಾತಿಯರು ಬರ್ಮಾ ದಲ್ಲಿದ್ದಾರೆ. ಬರ್ಮಾದಲ್ಲಿ ನದಿಗಳು ಹೇರಳವಾಗಿರುವದರಿಂದ ಹಳ್ಳಿಯವರು ಸಣ್ಣಸಣ್ಣ ದೋಣಿಗಳನ್ನು ನಡೆಯಿಸಲಿಕ್ಕೆ ಕಲಿತು ಪ್ರಾಯವದವರು ಜೂಜಾಟ ವಾಡಿ ಈ ಜೆದ್ದಿನಲ್ಲಿ ಗೆದ್ದವರನ್ನು ಮೆರಿಸುವರು. ಇದರಂತೆ ಬಿದರಿನ ಚಂಡಿನ ಚೆಂಡಾಟವನ್ನು ಆಟವಾಡುವರು. ಕೋಣನ ಕಾಳಗ, ಜೂಜಿನ ಆಟಗಳು ಅಪಾಯ ಕರವಾಗುವದರಿಂದ ಸರಕಾರದವರು ಪ್ರತಿಬಂಧಿಸಿದ್ದಾರೆ.

(ಮುಂದೆ ಸಾಗುವದು)

ಪ್ರ ಕ ಟ ನೆ

ಮೆ॥ ಇ. ಸಾ॥ ರವರ 47 P. ಪ್ರಕಾರ

ಕನ್ನಡ ಬುಕ್ ಕಮೀಟಿ ಧಾರವಾಡ ಇವರು ಆಗಷ್ಟ (೧೯೩೭) ತಿಂಗಳಿನಲ್ಲಿ ಮುಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಪ್ರಾಥಮಿಕ ಶಾಲೆ=ಪ್ರಾ. ಶಾ ; ಶಿಕ್ಷಕರು=ಶಿ ; ವಿದ್ಯಾರ್ಥಿಗಳು=ವಿ ; ಲಾಯಬ್ರರಿ=L ; ವ್ಹರ್ನಾಕ್ಯುಲರ ಟ್ರೈನಿಂಗ ಇನ್‌ಸ್ಟಿಟ್ಯೂಶನ್=ವ್ಹ. ಟ್ರೇ. ಸಂ. T=ಟೆಕ್ಸ್ಟ

ನಂ.	ಪುಸ ಕಗಳ ಹೆಸರು.	ಗ್ರಂ. ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾ. ಮುಂಜೂರ ಮಾಡಿದೆ.	ಇ. ಸಾ. ನಂ.	ಡಾ. ಸಾ. ರ ನಂ.
೧	ಕನ್ನಡ ನುಡಿಯ ಹುಟ್ಟು ೧೯೩೭	ಮು. ಎಸ್. ಬಿ. ಆರ್. ಜೋಸಿ ಕೆರೆ ಧಾರವಾಡ	ಮಾಧವ ಬಲ್ಲಾಳ ಸಾಧನ ಬ್ರದರ್ಸ ಸಾಧನ ಕೆರೆ ಧಾರವಾಡ	೧—೦—೦	ಪ್ರಾ. ಶಾ. ಗಳ ಶಿ. ರ ಹಾಗು ವಿ. ಗಳ ವ್ಹ. ಟ್ರೇ. ಸಂ.ಗಳ ವಿ.ಗಳ L ಬುಕ್ಕಾಗಿ ಹಾಗು ಮೂ.ಶಾ ಗಳ ಶಿ. ರ L	47/P 4568 31/8	S. 86 C 751 C 13-8-37
೨	ಉಪನಿಷತ್ ಕಥಾವಳಿ ೧೯೩೭	ಮ್ಯಾನೇಜರ ಅಧ್ಯಾತ್ಮಕಾರ್ಯಾಲಯ ಧಾರವಾಡ	ಗ್ರಂಥಕರ್ತರು	೦—೮—೦	ಪ್ರಾ. ಶಾ. ಗಳ ಶಿ. ರ ಹಾಗು ವ್ಹ. ಟ್ರೇ. ಸಂ. ಗಳ ವಿ. ಗಳ L ಬುಕ್ಕು ಹಾಗು ಮೂ. ಶಾ. ಗಳ ವಿ. ಗಳ L	ಸದರ 4570 31/8	ಸದರ 755 13-8-37
೩	ಹರಿಹರನ ರಗಳೆಗಳು ಭಾಗ ೩ ೧೯೩೭	ರಾವಸಾ॥ ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ಪ್ಲೀಡರ ವಿಜಾಪೂರ	ಗ್ರಂಥಕರ್ತರು	೦—೬—೦	ಪ್ರಾ. ಶಾ. ಗಳ ವಿ. ಗಳ ಹಾಗು ಶಿ. ರ ಹಾಗು ವ್ಹ. ಟ್ರೇ. ಸಂ. ಗಳ L ಬುಕ್ಕು ಹಾಗು ಮೂ. ಶಾ. ಗಳ ಶಿ. ರ ಮತ್ತು ವಿ. ಗಳ L	ಸದರ 4574 31/8	ಸದರ 746 10-8-37

ಗಳು ಭಾಗ ೪						ಸದರ 4576	ಸದರ 746
						31-8-37	10-8-37
೫ ಹರಿಹರನ ರಗಳೆ ಗಳು ಭಾಗ ೨ ೧೯೩೬	ಸದರ	ಸದರ	೦—೪—೦	ಸದರ		ಸದರ 4572	ಸದರ 746
						31-8-37	10-8-37
೬ ಹಿಂದುಸ್ಥಾನದ ಇತಿಹಾಸ ಬೋಧಿನಿ ಭಾ. ೩ ೧೯ೆ ಆ. ೧೯೩೭	ಮು. ಎಸ್. ಎಸ್. ಕುಲಕರ್ಣಿ ಧಾರವಾಡ	ಗ್ರಂಥಕರ್ತರು	೦-೧೦-೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ T ಬುಕ್ಕಾಗಿ		ಸದರ 4517	ಸದರ 752
						30-8-37	13-8-37
೭ ಹಿಂದುಸ್ಥಾನದ ಇತಿಹಾಸ ಬೋ. (ಕಂಬಾಯಿಂಡ) ೧೯ೆ ಆ. ೧೯೩೭	ಮು. ಎಸ್. ಎಸ್.ಕುಲಕರ್ಣಿ ಧಾರವಾಡ	ಗ್ರಂಥಕರ್ತರು	೧—೮—೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ T ಬುಕ್ಕು		ಸದರ 4519	ಸದರ 752
						30-8-37	13-8-37
೮ ಹಿಂದುಸ್ಥಾನದ ಇತಿಹಾಸ ಬೋಧಿನಿ ಭಾಗ ೨ ೧೯ೆ ಆ. ೧೯೩೭	ಸದರ	ಸದರ	೦—೮—೦	ಸದರ		ಸದರ 4515	ಸದರ ಸದರ
						30-8-37	
೯ ಹಿಂದುಸ್ಥಾನದ ಇತಿಹಾಸ ಬೋಧಿನಿ ಭಾಗ ೧ ೧೯ೆ ಆ. ೧೯೩೭	ಸದರ	ಸದರ	೦—೬—೦	ಸದರ		ಸದರ 4530	ಸದರ ಸದರ
						30-8-37	

(ಜಿ. ಡಿ. ಜಿ. ಬ.

ನಂ.	ಪುಸ್ತಕಗಳ ಹೆಸರು.	ಗ್ರಂ. ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾ. ಮಂಜೂರ ಮಾಡಿದೆ.	ಇ. ಸಾ. ನಂ.	ಡಾ. ಸಾ. ರ ನಂ.
೧೦	ಸಪ್ರಯೋಗ ಸಸ್ಯಶಾಸ್ತ್ರ	ಮ. ಬ್ಹಿ. ಸಿ. ಪಾವಟೆ ಕಾಟನ್ ಸು.ಎಸ್.ಎಮ್. ಸಿ. ಧಾರವಾಡ	ಸದರ	೦-೧೦-೦	ಅಗ್ರಿಕಲ್ಚರಲ್ ಬಾಯಸ ಕ್ಲಾಸುಗಳಿಗಾಗಿ T ಬುಕ್ಕು ಮತ್ತು ಟ್ರೇ. ಸ. ಗಳ ಮತ್ತು ಮಾ. ಶಾ. ಗಳ ಎ. ಗಳ L ಬುಕ್ಕು ಹಾಗು ಮಾ. ಶಾ. ಗಳ ಶಿ. ರ L ಬುಕ್ಕು	ಸದರ 4862 14-9-37	ಸದರ 748 10-8-37
೧೧	ಕನ್ನಡ ಶಿಶು ಬೋಧೆ ೧ನೆ ಆ. ೧೯೩೭	ಮ. ಎಸ್.ಎಫ್. ಕಟ್ಟೀಮನಿ ಕನ್ನಡ ಬಾಯ್ಸ ಸ್ಕೂಲ ಹುಬ್ಬಳ್ಳಿ	ಗ್ರಂಥಕರ್ತರು	೦—೧-೩	ಪ್ರಾ. ಶಾ. ಗಳ T ಬುಕ್ಕಾಗಿ	ಸದರ 4864 ಸದರ	ಸದರ 749 13-8-37
೧೨	ಸುಲಭ ಬಾಲ ಬೋಧೆ ಸುಧಾರಿಸಿದ ಆ. ೧೯೩೭	ಮ. ಎ. ಆರ್. ಶಿವನಾಗಪ್ಪ ಬುಕ್ಕ ಶೇಲರ ಹುಬ್ಬಳ್ಳಿ	ಮ. ಎ. ಆರ್. ಶಿವನಾಗಪ್ಪ ಬುಕ್ಕ ಶೇಲರ ಹುಬ್ಬಳ್ಳಿ	೦—೧-೯	ಸದರ	ಸದರ 4804 10-9-37	ಸದರ 747 10-8-37
೧೩	ಸಚಿತ್ರ ಕನ್ನಡಿಗರ ಕಫೆ ಅಥವಾ ಕರ್ನಾಟಕದ ಇತಿಹಾಸ	ಸದರ	ಸದರ	೦—೪-೦	ಸದರ	ಸದರ 4902 16-9-37	ಸದರ 753 13-8-37

ಪುಟ ೬ ಕಾಲಿ ಇದೆ.

ಜಾಹೀರಾತು

ಕನ್ನಡ ಬಾಲಬೋಧನೆ

ಬಾಲಕರ ವರ್ಗದ ಶಿಕ್ಷಣವು ಸುಲಭವಾಯಿತು

ಅಕ್ಷರಗಳನ್ನು ತೀಡಿಸುತ್ತ ಬಾಲಕರ ವರ್ಗದ ಚಿಕ್ಕಮಕ್ಕಳಿಗೆ ಏತಕ್ಕೆ ಸಸ್ಪೆನ್ಸುಂಟುಮಾಡುತ್ತೀರಿ ! ಮೊದಲೇ ಓದುವವಕ್ಕೆ ಕಲಿಸಿರಿ. ಈ ಪದ್ಧತಿ ಬಾಲಕರಿಗೆ ಬೇಸರವಿಲ್ಲ. ಶಿಕ್ಷಕರಿಗೆ ಶ್ರಮವಿಲ್ಲ. ಹೀಗೆ ಕಲಿಸುವದಕ್ಕೆ ಹೊಲವಾದ ಪುಸ್ತಕವೆಂದರೆ ಈ ಬಾಲಬೋಧನೆಯೊಂದೇ. ಬೆಲೆ ೧ ಆ. ೬ ಪೈ. ಬಾಲಕರ ವರ್ಗಕ್ಕೆ ಪಠ್ಯಪುಸ್ತಕವೆಂದು ಮಂಜೂರ ಆಗಿರುತ್ತದೆ.

ವ್ಯಾಪಾರಸ್ಥರಿಗೆ ಧಾರಾಳವಾಗಿ ಕಮೀಶನ್ನು. ಒಂದು ಊರಲ್ಲಿ ಒಬ್ಬರಿಗೇ ಏಜನ್ಸಿಯ ಹಕ್ಕು ದೊರಕುವದು. ಇಪ್ಪತ್ತು ಪುಸ್ತಕಗಳನ್ನು ಒಮ್ಮೆಲೆ ತರಿಸಿ ಕೊಳ್ಳಿಂಚೇವೆಚ್ಚವಿಲ್ಲ. ಈ ಸವಲತ್ತು ಶಿಕ್ಷಕರಿಗೆ ಮಾತ್ರ. ಅದೂ ಇದೊಂದು ಧಾರವಾಡದ ಕರ್ನಾಟಕ ಸಾಹಿತ್ಯಮಂದಿರದಲ್ಲೀಗ ಈ ಪುಸ್ತಕಗಳು ಸಿದ್ಧವಿವೆ. ಕಮೀಶನ್ನು ಮು. ರ ಸಂಬಂಧವಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಟಿ. ವ್ಹಿ. ಕಟ್ಟಿ ಹೆಡ್‌ಮಾಸ್ತರ ನರಸಾಪುರ,
(ತಾ. ಬದಾಮಿ.)

ಜಾಹೀರಾತು

(ಶ್ರೀ. ಉಮಡಿಕರ ಎಮ್. ಎ. ಕೃತ)

ಹಿಂದೂಪದ್ಧತಿಯ ಜಮಾಖರ್ಚು ಭಾಗ ೧ (ಹೊಸ ಆವೃತ್ತಿ)

ಪುಟ ೧೨೬ ಬೆಲೆ ೦-೧೦-೦

ಇದರ ಮೊದಲಿನ ಆವೃತ್ತಿ ತೀರಿದುದರಿಂದ ಈಗ ತಿನೆಯ ಆವೃತ್ತಿಯು ತಿದ್ದಿ ವಿಸ್ತರಿಸಿ ಪ್ರಕಟಿಸಲ್ಪಟ್ಟಿದೆ. ಈ ಆವೃತ್ತಿಯಲ್ಲಿ ಮನೆಯ ಜಮಾಖರ್ಚನ್ನು ಹೇಗೆ ಬರೆಯಬೇಕೆಂಬದನ್ನು ವಿಸ್ತಾರವಾಗಿ ಬರೆದು ತೋರಿಸಿದೆ. ಎಲ್ಲ ಪಾಠಗಳಲ್ಲಿ ಮೊದಲಿಗಿಂತ ಹೊಸ ಉದಾಹರಣಗಳನ್ನು ಸೇರಿಸಿದೆ.

ಪ್ರತಿಯೊಂದು ಪ್ರಕರಣದ ಕೊನೆಗೆ ಪ್ರಶ್ನೆಗಳಿವೆ. ಕಟ್ಟಕಡೆಗೆ ರೂಢಿಗಾಗಿ ಕಾಲೇಜು, ಸ್ಕೂಲಫಾಯನಲ್ ಪರೀಕ್ಷೆಗಳಿಗೆ ಬಿದ್ದ ಪ್ರಶ್ನೆಗಳು ಕೊಡಲ್ಪಟ್ಟಿವೆ. ಜಮಾಖರ್ಚುಬರೆಯುವ ಇಂಗ್ಲಿಶ್ ಪದ್ಧತಿಯನ್ನು ದೇಶೀಯ ಪದ್ಧತಿಯೊಳಗೆ ಸೇರಿಸಿ ದೇಶೀಯ ಪದ್ಧತಿಯು ಈಗಿನ ಕಾಲಕ್ಕೆ ಹೇಗೆ ಉಪಯುಕ್ತವಾಗಬಹುದೆಂಬದನ್ನು ತೋರಿಸುವದು ಈ ಪುಸ್ತಕದ ಗುರಿಯಾಗಿದೆ. ಈಗಿನ ಕಾಲದ ಕೆಲವು ಕೇವಲ ಹಳೆಯ ಪದ್ಧತಿಯ ಪುಸ್ತಕಗಳಿಗಿಂತ ಈ ಪುಸ್ತಕದಿಂದ ಹೆಚ್ಚಿನ ಉಪಯೋಗಕ್ಕೆ ಬೇಕಾಗಿರುವ ಜ್ಞಾನವನ್ನು ಪಡೆಯಬಹುದು.

ಪ್ರತಿಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವವು

ಕೃಷ್ಣಾಜಿ ರಾವುರಾವ ಕುಲಕರ್ಣಿ,
ಕಿಲ್ಲೆ ಧಾರವಾಡ

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನ
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರಸ
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚ
ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ
ಶಿರ್ಶಿ, ಉ. ಕಾನಡಾ

ತ್ವರೆಮಾಡಿರಿ! ಬೆಲೆ ತೀರ ಕಡಿಮೆ!! ಹತ್ತೇ ಆಣೆಗ

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಜಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

—ಂಂ:ಃಂಂ—

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಮುಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂ ತೋರಿಸಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆ ಕೊಟ್ಟಿದೆ. ಲ. ಸಾ. ಭಾ. ಭ್ಯ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ಗಳ ಸಮಾವೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನೆಗಳನ್ನೂ, ಶ ಮ. ದ ಪರೀಕ್ಷೆಯ ಪ್ರಶ್ನೆಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋ ಜನ್ನಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂ ಕಡಿಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಒನೇ ಸ್ವತಂತ್ರವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯು ಬಗ್ಗೆ ಬರೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆಯ್. ಆರ್. ಅಕಳವಾಡಿ ಎಂದ ಸಣ್
ರಾಮಾಶ್ರಯ ಬುಕ್‌ಡಿಪೋ, ಧಾರ

ಂಬರ ಡಿಸೆಂಬರ

Reg. No. B. 3691

(ಇವರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸನ್ನಿವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ	ವಿಷಯ	ಪುಟ.
೧.	ನಹೆಜ ಪ್ರವೃತ್ತಿಗಳು	೧
೨.	ಅಂಕಗಣಿತದಲ್ಲಿ ಶಿಕ್ಷಣನ ಮಾರ್ಗದರ್ಶಿತ್ವವು ಯಾವಬಗೆಯಾಗಿರ ಬೇಕು	೪
೩.	ಜೇಮ್ಸ್ ರ್ಯಾಮ್ಸೆ ಮ್ಯಾಗ್ಡೊನಾಲ್ಡ	೯
೪.	ಹಿಂದೀ ಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳೂ ಸಮತೋಲ ವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳೂ ..	೧೪
	ಪ್ರಾಥಮಿಕ ಶಿಕ್ಷಣದ ಇನಸ್ಪೆಕ್ಟಿಂಗ ಆಫೀಸರರ ಬಗ್ಗೆ ಪುಣೆಯಲ್ಲಿ ನೆರೆದ ರಫ್ರೇಶರ ಕೋರ್ಸ	೨೧
	ಪದ್ಯಗಳ ಸಂಗ್ರಹ	೨೩
	ಜಗದೀಶಚಂದ್ರ ಬೋಸರ ನಿಧನವಾರ್ತೆ	೨೮ ಉದ್ದೇಶ
	ಬ್ರಹ್ಮದೇಶ	೨೮ ಉದ್ದೇಶ
	ಕ್ರೀಡಾಪ್ರವೃತ್ತಿ	೨೮ ಉದ್ದೇಶ
	ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳ ಬರಹದ ಸುಧಾರಣೆ	ಟಿಕೆಗಳು ಅವುಗಳ
	ವಾಕ್ಯರಚನೆ	೨೮ ಮಾನಸಿಕ
	ಪ್ರಕಟನೆ	೨೮
	೧೯೩೭ ನೆಯ ಇಸ್ವಿಯಲ್ಲಾದ ಹೆ. ಮಕ್ಕಳ ವ್ಹ. ಫಾ. ಪ	ಮಾತ್ರ ಅನುಭವದಿಂದ
	ಜಾರ್ಡಾಯಿನ್ ಪ್ರಾಯಿಝುಹೊಂದಿದ ವಿದ್ಯಾರ್ಥಿನಿಗ	೨೯ ಪ್ರಾಣಿಗಳಿಗೆ ಇಂಥ
	ಪ್ರಕಟನೆಗಳು	ಗಿಂತ ಮನುಷ್ಯನಲ್ಲಿ ಪಡ್ಡು

nted by K. R. Bhise at the Karnatak Printir
and Published by D. V. Kale, B. A.
Training School, Dharwar at

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತ
ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹ

	ರೂ. ಆ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	0-
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಿಕೃತ)	0-
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	0-
ಹಿಂದುಸ್ತಾನದ ಇತಿಹಾಸ (ಬಸವನಾಳಕೃತ)	0-
ಲಘುವ್ಯಾಕರಣ (ವೈ. ಕಟ್ಟೀಕೃತ)	0-
ದೇಶೀ ಜವಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	0-
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	0-
ಚಿತ್ರಮಯ ಕೋಷ್ಟಕ (ಉಗ್ಗುರಕೃತ) ೩ನೇ ಇ ಗೆ	0-
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	0-
,, ೩ನೇ ,,	0-
,, , ೪ನೇ ,,	0-
ಅಂಕಗಣಿತ (ಗಾಂವಕರಕೃತ) ೩ನೇ ,,	0-
ಕರ್ನಾಟಕ ಇತಿಹಾಸ (ಅಡಬಡ್ಡಿ ಕೃತ)	0-
ಭೂಮಿತಿ–ರೇಖಾಗಣಿತ (ಕುಲಕರ್ಣಿ ಕೃತ)	0-
ಧಾರವಾಡ ಜಿಲ್ಲಾ ,, (ಕುರಡೀಕೃತ)	0-
ಮುಂದುಸ್ತಾನ ಭೂಗೋಲು (ಮಗದಾಲಕೃತ)	0-
ತೋರಿ[illegible]ತ್ತರ ಜವಾಖರ್ಚು (ಬೆಟಗೇರಿ ಕೃತ)	0-
ಕೊಟ್ಟಿದೆ. [illegible]ಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	0-
ಗಳ ಸಮಾ[illegible] ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	0-
ಪರೀಕ್ಷೆಯ [illegible]ಲಜೋಧಿನಿ (ಕರಿಬಸವಶಾಸ್ತ್ರೀಕೃತ)	0-
ಚನ್ನಾಗಿ ಮಾಡ[illegible]ಲ್ಲೋ ಶಿಕ್ಷಣವು ಅತ್ಯವಶ್ಯವೆಂದು	
ಕಡಿಮೆಯಾಗುವದೇ[illegible] ಪ್ರತಿಪಾದಿಸುವ ಕಾದಂಬರಿ	0-
ಸ್ವತಂತ್ರವಾದ ಇಂಗ್ಲಿ[illegible]ರಕರ ಕೃತ)	0-
ಬಗ್ಗೆ ಬರೆಯುವ ಕಾರ್ಡ[illegible]ಡೀಹಾಳಕೃತ)	0-

ಪ್ರಕಾ[illegible] ಪತ್ರೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ, ಹುಬ್ಬಳ್ಳಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೬ | ನವಂಬರ, ದಿಶಂಬರ ೧೯೩೭ | ವರ್ಷ ೯ ಸಂ. ೮–೯.

ಸಹಜ ಪ್ರವೃತ್ತಿಗಳು

ಅಧ್ಯಾಪನಕಾರ್ಯವೆಲ್ಲ ಶಿಕ್ಷಣಶಾಸ್ತ್ರತತ್ವಗಳಿಗನುಸಾರವಾಗಿ ನಡೆಯು ಪದ್ದು. ಶಿಕ್ಷಣಶಾಸ್ತ್ರವು ಮಾನಸಶಾಸ್ತ್ರವನ್ನು ಬಹಳಮಟ್ಟಿಗೆ ಅವಲಂಬಿ ಸಿರುವದು. ಇತ್ತೀಚಿನ ಮಾನಸಶಾಸ್ತ್ರವು ವಿವಿಧತತ್ವಗಳನ್ನು ಹೇಳಿರುವಂತೆ ಸಹಜಪ್ರವೃತ್ತಿಗಳನ್ನು ವಿಶದವಾಗಿ ವರ್ಣಿಸಿರುವದು. ಅಂಥ ಜ್ಞಾನವನ್ನು, ಬಾಲಕರ ಬೆಳೆವಣಿಗೆಯನ್ನು ಅಪೇಕ್ಷಿಸುವವರೆಲ್ಲರು ಗೊತ್ತುಮಾಡಿಕೊಳ್ಳ ಬೇಕಾದ್ದು. ಶಿಕ್ಷಕರಂತೂ ಅದರ ಸಂಪೂರ್ಣ ಅಭ್ಯಾಸಮಾಡತಕ್ಕದ್ದು.

ಪ್ರಾಣಿಮಾತ್ರಗಳಲ್ಲಿ ಕಂಡುಬರುವ ಕಾರ್ಯಪ್ರವೃತ್ತಿಯು ಉದ್ದೇಶ ಪೂರ್ವಕವಾಗಿರುವದು. ಅದು ಸಹಜಪ್ರವೃತ್ತಿಗಳಿಗನುಸರಿಸಿರುವದು. ಉದ್ದೇಶ ಪೂರ್ವಕವಾಗಿರುವ ಪ್ರಾಣಿಗಳ ಹಾಗು ಮನುಷ್ಯನ ಚಟುವಟಿಕೆಗಳು ಅವುಗಳ ಸ್ವಭಾವ ಅನುಸರಿಸಿ ನಡೆ–ಇಲ್ಲವೆ ಆಚಾರದಿಂದ ಗೊತ್ತಾಗುವವು. ಅದು ಮಾನಸಿಕ ವ್ಯಾಪಾರಗಳನ್ನು ತಿಳಿಸಿ ಕೊಡುವ ಒಂದು ಬಲವಾದ ಸಾಧನವು.

ಹಿಂದಿನ ಮಾನಸಶಾಸ್ತ್ರಜ್ಞರು ಮನುಷ್ಯನಿಗೆ ಮಾತ್ರ ಅನುಭವದಿಂದ ಫಲಾಗಮವಾಗಿಕೊಳ್ಳುವ ಸಾಮರ್ಥ್ಯವಿರುವದು, ಪ್ರಾಣಿಗಳಿಗೆ ಇಂಥ ಸಾಮರ್ಥ್ಯವಿಲ್ಲೆಂದು ತಿಳಿದಿದ್ದರು. ಪ್ರಾಣಿಗಳಿಗಿಂತ ಮನುಷ್ಯನಲ್ಲಿ ಹೆಚ್ಚು

ಸುಧಾರಣೆಯಿರುವದು; ಯಾಕಂದರೆ, ಗ್ರಹಣ–ಧಾರಣ–ಪ್ರತ್ಯಾನಯನ ಒಲಗ
ಮನುಷ್ಯನಿಗಿರುವಷ್ಟು ಪ್ರಮಾಣದಿಂದ ಪ್ರಾಣಿಗಳಲ್ಲಿರುವದಿಲ್ಲ. ಆದಕಾರಣ ಪ್ರಾ
ಗಳ ಆಚಾರವೆಲ್ಲ ಸಹಜಪ್ರವೃತ್ತಿಗಳಿಂದ ಉಂಟಾಗುತ್ತವೆ ಎಂದು ಅನ್ನಲಾಗ
ಮನುಷ್ಯನೂ ಪ್ರಾಣಿಗಳೂ ಸ್ವಸಂರಕ್ಷಣ–ಸಂತತಿಸಂವರ್ಧನಗಳಿಗಾಗಿ ಶಮಿಸು
ತ್ತಿರುವವು. ಮನುಷ್ಯನಂತೆ ಅವುಗಳಲ್ಲಿಯೂ ಮೇಲೆ ಹೇಳಿದ ಗ್ರಹಣ–ಧಾರ
ಪ್ರತ್ಯಾನಯನ ಒಲಗಳಿರುವವು. ಆದಾಗ್ಯೂ ಅವುಗಳ ಬಲಗಳು ಹೀನವೆ
ಹೇಳಬೇಕು. ಯಾಕಂದರೆ, ಬಹುಶಃ ಬಾಹ್ಯಪ್ರೇರಣೆಯಿದ್ದರೆ ಅವುಗಳಲ್ಲಿ ಕಾರ್ಯ
ಪ್ರವೃತ್ತಿಯು ಇರುವದು; ಅಲ್ಲದೆ ಪ್ರಾಣಿಪ್ರಾಣಿಗಳ ಕಾರ್ಯಪ್ರವೃತ್ತಿಯಲ್ಲಿ
ತಾರತಮ್ಯವಿರುವದು. ಈ ರೀತಿ ವ್ಯತ್ಯಾಸವಾಗಲು ವಿಕಾರ–ಭಾವನೆ–ವಿಚ
ಮೊದಲಾದವುಗಳು ಕಾರಣವಾಗಿರುವವು. ಇವು ಕಾರ್ಯಪ್ರವೃತ್ತಿಗೆ ಪ್ರಮು
ವಾದ ಕಾರಣವಾಗಿರುವವು. ಇವುಗಳನ್ನು ತಿಳಿದುಕೊಳ್ಳುವದೂ ಭಾವನೆಗಳನ್ನು
ಪ್ರಚೋದನಗೊಳಿಸುವದೂ ಶಿಕ್ಷಕನ ಆವಶ್ಯಕರ್ತವ್ಯವಾಗಿರುವದು.

ಸಹಜ ಪ್ರವೃತ್ತಿ:— ಇನ್ನು ಸಹಜ ಪ್ರವೃತ್ತಿಯೆಂದರೇನು ? ಎಂಬುದ
ಕುರಿತು ವಿಚಾರಿಸುವಾ. ಕೆಲವೊಂದು ವಿಶಿಷ್ಟಪ್ರಸಂಗದಲ್ಲಿ ವಿಶಿಷ್ಟರೀತಿಯ
ವರ್ತಿಸುವ ಪ್ರವೃತ್ತಿಯೇ ಸಹಜಪ್ರವೃತ್ತಿಯು. ಈ ರೀತಿಯಿಂದ ವರ್ತಿ
ವದು ಬಿಡಿಯ ವ್ಯಕ್ತಿಗೆ ಮಾತ್ರ ಸಂಬಂಧವಿಲ್ಲದೆ ಇಡಿಯ ಜಾತಿಗೆ ಸಂಬಂಧಿ
ನವು. ಇಂಥ ಆಚಾರವು ಅನುಷಂಗಿಕವಾಗಿ ಕಲಿತು ಬಂದದ್ದಲ್ಲ; ಆದರೆ ಹು
ಸಿಂದಲೇ ಪ್ರತಿಯೊಬ್ಬರಲ್ಲಿ ಇಂಥ ಆಚಾರವು ಒಡಮೂಡಿರುವದನ್ನು ಕಾಣಬಹುದ
ಇದು ಶಿಕ್ಷಣ–ಸಂಸ್ಕಾರ–ಅನುಭವಗಳಿಂದ ಆಗತಕ್ಕದ್ದಲ್ಲ. ಸಂಕಟ ಇಲ್ಲ
ಗಂಡಾಂತರ ಒದಗಿದಾಗ ಪಲಾಯನ ಪ್ರವೃತ್ತಿಯು ಕಂಡುಬರುವದು. ಒಬ್ಬನಿ
ಪ್ರತ್ಯಕ್ಷ ಪಲಾಯನವಿಲ್ಲದಿದ್ದರೂ ಅಂಥ ಭಾವನೆ–ಪ್ರೇರಣೆ–ಇಲ್ಲವೆ ಬುದ್ಧಿ
ಬಹುದು. ಆದಕಾರಣ ಸಹಜಪ್ರವೃತ್ತಿಯೆಂದರೆ ಇಂಥ ಆಂತರ್ಯಪ್ರೇರ
ಎಂದು ಹೇಳಬಹುದು. ಪಲಾಯನವಿಲ್ಲದೆ ಪಲಾಯನಬುದ್ಧಿಯಿದ್ದರೂ ಅದನ
ಸಹಜ ಪ್ರವೃತ್ತಿಯೆಂದು ಹೇಳಬೇಕು. ಸಕಲ ಕಾರ್ಯಪ್ರವೃತ್ತಿಗೂ ಈ ಸಹ
ಪ್ರವೃತ್ತಿಗಳು ಹೇಗೆ ಕಾರಣವಾಗಿರುವವೆಂಬುದನ್ನು ತಿಳಿದುಕೊಳ್ಳಬೇಕು. ಆ ರೀ
ಪ್ರತಿನಿತ್ಯ ಕಾರ್ಯದಲ್ಲಿ ಶಿಕ್ಷಕನು ಅವುಗಳನ್ನು ಉಪಯೋಗಿಸಿಕೊಳ್ಳಬೇಕು.

ಮಾನಸಶಾಸ್ತ್ರಜ್ಞರಲ್ಲಿ ಇವು ಎಷ್ಟು ಇರುವವು ಎಂಬ ಬಗ್ಗೆ ಏಕಮತ
ಕೆಲವರು ಸ್ವಸಂರಕ್ಷಣೆ, ಸಂತತಿ–ಸಂವರ್ಧನೆಗಳಿರಡೇ ಸಹಜಪ್ರವೃತ್ತಿಗ
ವರು. ಇನ್ನು ಕೆಲವರು ನಾಲ್ವತ್ತರ ಮಟ್ಟಿಗೆ ಚಿತ್ರಗಳ ನಾಮಾವಳಿಯ

ಳುವರು. ಈ ವಿಷಯವಾಗಿ ಮ್ಯಾಗ್ಡೂಗಲ್ಲನೆಂಬ ಇಂಗ್ಲಂಡ ದೇಶದ ಶಾಸ್ತ್ರ
ನ ಆಧಾರವನ್ನು ಇಟ್ಟುಕೊಂಡು ಇತ್ತೀಚಿನವರು ಹದಿನಾಲ್ಕು ಪ್ರವೃತ್ತಿಗಳಿ
ವೆನ್ನುವರು. ಇವುಗಳಾದರೂ ಮೊದಲು ಹೇಳಿದ ಮೂಲ ಎರಡು ಪ್ರವೃತ್ತಿ
ಗಳಲ್ಲಿಯೇ ಮೂಡಿರುವವೆಂದು ಅವರ ಅಭಿಪ್ರಾಯ. ಅಲ್ಲದೆ ಒಂದೊಂದು
ಪ್ರವೃತ್ತಿಗೆ ಒಂದೊಂದು ಭಾವನೆ ಇಲ್ಲವೆ ಪ್ರೇರಣೆ ಇರುವದೆಂದು ಅವರು ತಿಳಿದಿರು
ವರು. ಈ ವಿಕಾರಗಳು ಇಲ್ಲವೆ ಭಾವನೆಗಳು ಕಾರ್ಯಪ್ರವೃತ್ತಿಯ ಪ್ರಬಲವಾದ
ಕಾರಣಗಳು. ಇವುಗಳನ್ನು ತಿಳಿದುಕೊಳ್ಳುವದು ತೀರ ಅವಶ್ಯ. ಈ ವಿಕಾರ
ಗಳನ್ನು ಬಾಹ್ಯಪ್ರೇರಣೆಯು ಮೂಲಕ ಸ್ವಜೋದನಗೊಳಿಸಲು ಮಕ್ಕಳಲ್ಲಿ ಕಾರ್ಯ
ಪ್ರವೃತ್ತಿಯು ವಿಶಿಷ್ಟ ರೀತಿಯಿಂದ ಆಗದೇ ಉಳಿಯುವದು.

ಬಾಲಕರು ಮೊದಲು ಜಾಹ್ಯೋತ್ತೇಜಕವನ್ನು ನೋಡುವರು. ಅದು ಅವರ
ತ್ಕುವುತ್ಕಲಿನ ಪ್ರಪಂಚದಲ್ಲಿಯು ಒಂದು ಪರಿಚಯದ ವಸ್ತುವಿರುವದು.
ಇಂದ ಪ್ರೇರಣೆಯುಂಟಾಗುವದು ಅಂದರೆ ಒಂದು ವಿಶಿಷ್ಟ ವಿಕಾರವು ಹುಟ್ಟು
ವು. ಈ ವಿಕಾರವು ಇಲ್ಲವೆ ವಿಕಾರಭಾವನೆಯು ಕಾರ್ಯದಲ್ಲಿ ಪ್ರವೃತ್ತಿ
ಯನ್ನು ಉಂಟುಮಾಡಬೆ ಬಿಡಲಾರದು. ಈ ಬಾಹ್ಯೋತ್ತೇಜಕಗಳು ಆತ್ಮರಕ್ಷಣೆ
ಗು ಜಾತಿವರ್ಧನೆಗಳಿಗಾಗಿ ಸಂಬಂಧಪಟ್ಟವುಗಳಿರುವವು. ಆತ್ಮಸಂರಕ್ಷಣೆಯು
ಟೀ ಆಹಾರಸಂಪಾದನೆಯು ಸಮಾವೇಶವಾಗಿರುವದು.

ಈ ಎರಡು ಪ್ರವೃತ್ತಿಗಳ ಕೂಡ ಮೂರನೆಯದಾದ ಸಾಂಘಿಕ ಪ್ರವೃತ್ತಿಯು
ಸುಸುವದು. ಸಜಾತೀಯ ಪ್ರಾಣಿಗಳು ತಮ್ಮ ಹಿಂಡಿನೊಳಗಿನ ಇತರ ಪ್ರಾಣಿ
ಗಳನ್ನು ದೂರದಿಂದಲೇ ಗುರುತಿಸಿಕೊಂಡು ಅವುಗಳ ಕೂಡ ಸೇರಿಕೊಳ್ಳುವವು.
ಸಾಂಘಿಕ ಪ್ರವೃತ್ತಿಯು ಜಾತಿ-ವ್ಯಕ್ತಿಗಳ ಸಂರಕ್ಷಣೆಗೆ ಉಪಯುಕ್ತವಾದದ್ದು.
ಗೆ ಅನುರೂಪವಾದ ಪಾಂಪತ್ಯಗಳನ್ನು ಉಂಟುಮಾಡುವದಕ್ಕೂ ಚಿಕ್ಕವರ
ಕ್ಷಣೆ-ಸಂರಕ್ಷಣೆಗೂ ಸಾಧನವಾಗುವದು. ಈ ಸಾಂಘಿಕ ಪ್ರೇರಣೆಯು
ಹದಿಯ ಮೇಲೆಯೇ ಮಾನವಸಮಾಜಬಂಧನವು ನಿಂತಿರುವದು. ಸಮಾಜ
ಸೇವೆಯಲ್ಲಿ ಸ್ವಾರ್ಥತ್ಯಾಗ, ಸಮಾಜಸೇವೆ ಮೊದಲಾದ ಉಚ್ಚತರ ತತ್ವಗಳು ಬೆಳ
ಯುತ್ತಿರುವವು. ಇದೇ ಮೇರೆಗೆ ವಾತ್ಸಲ್ಯ, ಯುದ್ಧಮಾಡುವದು, ಕೃತಿಪ್ರೇಮ,
ಪರೀಕ್ಷೆ ಮೊದಲಾದ ಪ್ರವೃತ್ತಿಗಳು ಉಂಟಾಗಿರುವವು. ಮಾಗ್ಡೂಲ್ಲನ ವಿವರಣೆ
ಯಲ್ಲಿ ಒಂದೊಂದು ಪ್ರವೃತ್ತಿಗೆ ಒಂದೊಂದು ವಿಶಿಷ್ಟ ಪ್ರೇರಣೆಯಿರುವದೆಂದು
ಹೇಳುವನು. ಇದೇ ಅವನ ವರ್ಗಾನೆಯ ವೈಶಿಷ್ಟ್ಯ. ಅವುಗಳನ್ನೆಲ್ಲ ಸ್ಪಷ್ಟವಾಗಿ
ತಿಳಿದುಕೊಂಡು ಶಿಕ್ಷಕರಲ್ಲಿರು ತಮ್ಮ ಅಧ್ಯಾಪನಕಾರ್ಯದಲ್ಲಿ ಉಪಯೋಗಿಸಿದರೆ

ಶಿಕ್ಷಣವು ಮೇಲ್ತರದ್ದಾಗಿ ತಕ್ಕ ಬೆಳೆವಣಿಗೆಯು ಬಾಲಕರಲ್ಲಿ ಉಂಟಾಗು
ವೆನ್ನಲಿಕ್ಕೆ ಏನೂ ಬಾಧಕವಿಲ್ಲ.

ಅಂಕಗಣಿತದಲ್ಲಿ ಶಿಕ್ಷಕನ ಮಾರ್ಗದರ್ಶಿತ್ವವು ಯಾವಬಗೆಯುದಾಗಿರಬೇಕು?

ಲೇಖಕ—ತಬ್ಬಿ, ಶ್ಯಾಮರಾಯರು ಬಿ.ಎ. ಬಿ.ಟಿ. ಅ. ಮಾ. ಫೀಮೇಲ ಟ್ರೇ. ಕಾ. ಧಾ:

ಹೊಸ ಅಭ್ಯಾಸಕ್ರಮದಲ್ಲಿ ವಿದ್ಯಾರ್ಥಿಯು ಒಬ್ಬ ಸಾಹಸಿಗನಾದ ಅ
ಮಗನಂತೆ ತನ್ನ ಜಾಣತನವನ್ನು ಉಪಯೋಗಿಸಬೇಕಾಗಿರುತ್ತದೆಂದು ತಿ
ಬೇಕು. ಅಂಕಗಣಿತದ ರಾಜ್ಯಕ್ಕೆ ಹಕ್ಕನ್ನು ಪಡೆಯುವ ರಾಜಕುಮಾರ
ರಾಜ್ಯದೊಳಗಿನ ಸುಲಭವಾದ ಕೋಟೆಗಳಿಂದ ಆರಂಭಿಸಿ ಒಂದಕ್ಕಿಂತ ಒ
ಹೆಚ್ಚು ಕಠಿಣವಾದ ದುರ್ಗಗಳನ್ನು ವಶಮಾಡಿಕೊಳ್ಳುತ್ತ ಹೋಗಬೇಕಾ
ವದು. ಈ ವಿಜಯಯಾತ್ರೆಯಲ್ಲಿ ಮುಂತಾಲೋಚನೆಯನ್ನು ಹೇಳುವ ಮ
ಯೊಬ್ಬನು ಅವನ ಬಳಿಯಲ್ಲಿರುವನು. ಆದರೆ ದೇಶಗಳನ್ನು ಗೆಲ್ಲಲಿಕ್ಕೆ ಅ
ಕಷ್ಟಪಡದಿದ್ದರೆ ಅಥವಾ ತನ್ನ ಬುದ್ಧಿಯನ್ನು ಉಪಯೋಗಿಸದಿದ್ದರೆ ಅವುಗಳ
ಜಯಿಸುವ ಆನಂದವು ಅವನಿಗೆ ಸಿಕ್ಕಲಾರದು. ಅಥವಾ ಬೇರೊಬ್ಬನು ಅ
ಗಾಗಿ ಯುದ್ಧಮಾಡಿ ಅವುಗಳನ್ನು ಗೆದ್ದುಕೊಟ್ಟರೆ ಆ ದೇಶಗಳು ಯಾ
ಅವನ ಕೈಬಿಟ್ಟುಹೋಗುವವೆಂಬ ನಿಯಮವಿಲ್ಲ. ಕೋಟೆಕೊತ್ತಳಗಳ ರೂ
ವನ್ನು ಬಿಟ್ಟು ಗದ್ಯದಲ್ಲಿ ಹೇಳಬೇಕಾದರೆ ವ್ಯವಹಾರದೊಳಗಿನ ಲೆಕ್ಕಮಾಡಿ
ಗುವ ಸಣ್ಣಪೊಡ್ಡ ಪ್ರಸಂಗಗಳನ್ನು ಕಣ್ಣಮುಂದೆ ಸ್ಪಷ್ಟವಾಗಿ ತಂದುಕೊ
ಬುದ್ಧಿವಂತಿಕೆಯಿಂದ ಅವುಗಳಿಗೆ ಯಾವ ಯೋಜನೆಗಳನ್ನು ಮಾಡಬೇಕೆಂಬ
ಪ್ರತಿಯೊಬ್ಬ ವಿದ್ಯಾರ್ಥಿಯು ಶಿಕ್ಷಕನ ನೇತೃತ್ವದಲ್ಲಿ ತಾನೇ ಕಲಿಯಬೇ
ಮತ್ತು ಹಾಗೆ ಕಲಿಯುವದರಲ್ಲಿ ಅವನಿಗೆ ಸ್ವಾಭಾವಿಕವಾಗಿ ಆಗುವ ಜಯ
ತ್ಸಾಹಗಳೇ ಹೊಸಪದ್ಧತಿಯು ಹೆಚ್ಚಳವಾಗಿರುತ್ತದೆಂದು ಹೇಳಬಹುದು "ಇ
ಪ್ರಸಂಗದಲ್ಲಿ ನೀವು ಏನುಮಾಡುವಿರಿ?" ಎಂದು ವಿದ್ಯಾರ್ಥಿಗಳನ್ನು ಕೇಳು
ಕ್ಕಿಂತ ಮುಂಚೆ ಅಥವಾ ಹುಡುಗರಿಗೆ ಯಾವದೊಂದು ಪ್ರಶ್ನೆಯು ಉತ್ತರ
ಹುಡುಕಬೇಕೆಂದು ಆಸಿಸುವ ಮುಂಚೆಯೇ ಶಿಕ್ಷಕನು ಉದ್ದಕ್ಕೆ ಲೆಕ್ಕದ

ನ್ನು ಹೇಳುವದು ಹಳೆಯ ಪದ್ಧತಿಯ ವೈಶಿಷ್ಟ್ಯವಾಗಿದ್ದಿತೆಂದು ಹೇಳಿದರೆ ನ್ಯಾಗಲಿಕ್ಕಿಲ್ಲ.

ಶಿಕ್ಷಕನ ಮಾರ್ಗದರ್ಶಿತ್ವವು ಯಾವಬಗೆಯದಾಗಿರಬೇಕು? ವಿದ್ಯಾರ್ಥಿಗಳು ಷ್ಟಷ್ಟಕ್ಕೆತಾವೇ ಕಲಿಯುತ್ತಿರಬೇಕು; ಶಿಕ್ಷಕರು ಕೇವಲ ಅವರಿಗೆ ಮಾರ್ಗ ರ್ಶಿಗಳಾಗಿರಬೇಕು. ಎಂದು ಮೇಲಿಂದಮೇಲೆ ಅನ್ನುವದುಂಟು. ಹೀಗೆ ನ್ನುವದು ಸರಿಯಾದದ್ದೇ. ಪ್ರತಿಯೊಂದು ವಿಷಯದಲ್ಲಿ ಮಾರ್ಗದರ್ಶಿತ್ವವು ಾವಬಗೆಯದಾಗಿರಬೇಕು ಎಂಬದನ್ನು ವಿಚಾರಿಸಬೇಕು. ಆಯಾ ವಿಷಯದ ಲಿಂದ ಈ ಮಾರ್ಗದರ್ಶಿತ್ವಕ್ಕೆ ಸ್ವಲ್ಪ ಬೇರೆಬೇರೆ ಸ್ವರೂಪವು ಬರುವದು. ಕಗಣಿತದಲ್ಲಿ ಈ ಪ್ರಶ್ನೆಯನ್ನು ವಿಚಾರಿಸುವದು ಪ್ರಕೃತವಾಗಿದೆ ಇದು ನ್ನ ಮಹತ್ವವುಳ್ಳ ಪ್ರಶ್ನೆ. ಯಾಕಂದರೆ ಈ ವಿಷಯದಲ್ಲಿ ಸಾಮಾನ್ಯವಾಗಿ ನ್ನಕರು ದಾರಿತೋರಿಸುವವರು ಎನ್ನುವದಕ್ಕಿಂತ ಆ ದಾರಿಗುಂಟ ಹುಡುಗರನ್ನು ಳ್ಳಕಟ್ಟಿ ದರದರ ಎಳಕೊಂಡು ಹೋಗುವರು ಎಂದು ವರ್ಣಿಸುವದು ಹೆಚ್ಚು ೀಗ್ಯವಾಗಬಹುದು. ಆದ್ದರಿಂದ ಈ ಪ್ರಶ್ನೆಯನ್ನು ವಿಚಾರಿಸದಿದ್ದರೆ ವ್ಯವಸ್ಥೆಯುಂಟಾಗುವದು; ಮತ್ತು ಪ್ರತಿಯೊಬ್ಬ ಶಿಕ್ಷಕನು ಆತನು ಹುಡು ರಿಗೆ ಹೇಗೆಯೇ ಕಲಿಸುತ್ತಿರಲಿ, ತಾನು ಕೇವಲ ಮಾರ್ಗದರ್ಶಿಯಾಗಿಯೇ ುವೆನೆಂದು ಬಗೆಯಬಹುದು.

ಅಂಕಗಣಿತದಲ್ಲಿ ಹುಡುಗರು ಕಲಿಯಬೇಕಾದ ಅನೇಕ ಸಂಗತಿಗಳಿರು ವಷ್ಟೇ. ಉದಾಹರಣೆಗಾಗಿ ಒಂದನ್ನು ತಕ್ಕೊಳ್ಳುವ:— ಬೇರೀಚಿನ ರೀತಿ, ಕ್ಷಕನು ಇದನ್ನು ಒಮ್ಮೆಲೆ ದೊಡ ಸಂಖ್ಯೆಗಳಿಂದ ಪ್ರಾರಂಭಿಸುವದಿಲ್ಲೆಂದು ತಿಯೋಣ; ಸುಲಭವಾದ ಮೆಟ್ಟುಗಳನ್ನು ಮಾಡಿಕೊಳ್ಳುವನೆಂದು ತಿಳಿಯೋಣ— ು ರೊಳಗೆ ಬೇರೀಜು ಬರುವಂಥ ಎರಡು ಒಂಟಿ ಅಂಕಿಗಳನ್ನು ಕೂಡಿಸುವದು, ಮೇಲೆ ಬೇಕಾದ ಎರಡು ಒಂಟಿ ಅಂಕಿಗಳು— ದಶಕಗಳಲ್ಲಿ ದಶಕಗಳು— ೀಡಂಕಿಯ ಸಂಖ್ಯೆಯಲ್ಲಿ ಕೈಲಿಬರದ ಒಂಟಿ ಅಂಕಿ, ಆ ಮೇಲೆ ಅವೇ ಕೈಲಿ ರುವಂಥವು— ಜೋಡಂಕಿಯ ಎರಡು ಸಂಖ್ಯೆಗಳು ಕೈಲಿಬರದಂಥವು; ಕೈಲಿ ದಂಥವು; ಹೀಗೆ ಅನೇಕಾನೇಕ ಸುಲಭ ಮೆಟ್ಟುಗಳನ್ನು ಮಾಡಿಕೊಳ್ಳುವ ಮು ತಿಳಿಯೋಣ, ಇದೆಲ್ಲ ಒಳ್ಳೆಯದೇ. ಇದು ಅವನ ನಿಜವಾದ ಮಾರ್ಗ ರ್ಶಿತ್ವವು. ಆದರೆ ಇವುಗಳಲ್ಲಿ ಯಾವದಾದರೊಂದು ಪಾಠವನ್ನು ಹುಡುಗರು ೀಗಾಗಿಯೇ ಹೇಗೆ ಕಲಿಯುವರೆಂಬದನ್ನಷ್ಟು ನೋಡೋಣ. ಇಂಥ ಪಾಠಗಳು ಕ್ಕೆ ಉಪಕರಣಗಳಿಂದ ಕೂಡಿದ ಸಾಲೆಗಳಲ್ಲಿ ಹೇಗೆ ನಡೆಯುವವೆಂಬದನ್ನು ೀಡೋಣ.

ಪ್ರತಿಯೊಬ್ಬ ವಿದ್ಯಾರ್ಥಿಯ ಬಳಿಯಲ್ಲಿ ಸಾಕಷ್ಟು ಹತ್ತರ ಗಂಟುಗಳ ಬಿಡಿ ಕಡ್ಡಿಗಳು ಪೆಟ್ಟಿಗೆಯಲ್ಲಿ ಇರುವವು. ಶಿಕ್ಷಕನು ವ್ಯವಹಾರದ ಒಂದು ಪ್ರಶ್ನೆಯ ರೂಪದಲ್ಲಿ ಒಂದು ಲೆಕ್ಕವನ್ನು ಹುಡುಗರ ಮುಂದೆ ಇಡುವನು. ಉದಾ— ಒಂದು ಗಿಡದಲ್ಲಿ ೨೮ ಮಾವಿನಕಾಯಿ ಇನ್ನೊಂದರಲ್ಲಿ ೩೭ ಆಗ ಎರಡೂ ಗಿಡಗಳಲ್ಲಿ ಕೂಡಿ ಎಷ್ಟು ಕಾಯಿಗಳಿವೆ? ಆ ಮೇಲೆ ಕೆಳಗಿನ ಪ್ರಶ್ನೆಗಳನ್ನು ಕೇಳತೊಡಗುವನು.

ಶಿಕ್ಷಕ— ೨೮ ರಲ್ಲಿ ಎಷ್ಟು ಹತ್ತರಗಂಟು, ಬಿಡಿಕಾಳು ಅವೆ?

ಉತ್ತರ— ೨ ಹತ್ತರಗಂಟು, ೮ ಬಿಡಿಕಾಳು.

ಶಿಕ್ಷಕ— ನೀವೆಲ್ಲರೂ ನಿಮ್ಮ ರಟ್ಟಿನಮೇಲೆ ೨ ಹ. ೮ ಬಿಡಿ ಕಾಳುಗಳ ತೆಗೆದು ಇಡಿರಿ. (ಹುಡುಗರು ಹಾಗೆ ಮಾಡುವರು.)

ಶಿಕ್ಷಕ— ೩೭ ರಲ್ಲಿ ಎಷ್ಟು ಹ? ಎಷ್ಟು ಬಿ? **ಉತ್ತರ** ೩ ಹ, ೭ ಬಿ.

ಶಿಕ್ಷಕ— ಮೇಲೆ ಇಟ್ಟ ೨ ಹ. ೮ ಬಿ. ಕಾಳುಗಳ ಕೆಳಗೆ ಈ ೩ ಹ. ೭ ಬಿ. ಕಾಳುಗಳನ್ನು ಇಡಿರಿ.

ಶಿಕ್ಷಕ— ಮೇಲಿನ ಸಾಲಿನಲ್ಲಿ ಎಷ್ಟು ಬಿಡಿಕಾಳುಗಳಿವೆ? ೮

ಕೆಳಗಿನ ಸಾಲಿನಲ್ಲಿ ಎಷ್ಟು ಬಿಡಿಕಾಳುಗಳಿವೆ? ೭

ಒಟ್ಟು ಎಷ್ಟು ಬಿಡಿಕಾಳು ಆಗುವವು? ೧೫

ಶಿಕ್ಷಕ— ೧೫ ರಲ್ಲಿ ಎಷ್ಟು ಹತ್ತರಗಂಟು, ಎಷ್ಟು ಬಿಡಿಕಾಳು ಆಗುವವು

ಉತ್ತರ— ೧ ಹತ್ತರಗಂಟು ೫ ಬಿಡಿಕಾಳು

ಶಿಕ್ಷಕ— ೫ ಬಿಡಿಕಾಳುಗಳನ್ನು ಬಿಡಿಕಾಳಿನ ಕೆಳಗೆ ಇಟ್ಟು ಒಂದು ಹತ್ತ ಗಂಟನ್ನು ಹತ್ತರ ಗಂಟುಗಳಲ್ಲಿ ಕೂಡಿಸಿರಿ. ಎಷ್ಟು ಹತ್ತರಗಂಟು ಆಯಿತು ಉತ್ತರ ೬

ಒಟ್ಟು ಎಷ್ಟು ಹತ್ತರಗಂಟು ಎಷ್ಟು ಬಿಡಿಕಾಳು ಬಂದವು? ಹಾಗಾದ ಎರಡೂ ಗಿಡಗಳ ಮೇಲೆ ಕೂಡಿ ಎಷ್ಟು ಕಾಯಿಗಳಿದ್ದಂತಾಯಿತು? ೬೫.

ಇದು ಕೇವಲ ಸಂಖ್ಯೆಗಳನ್ನು ಪಾಟಿಯ ಮೇಲೆ ಹೇಳ ಮಾಡಿಸುವದಕ್ಕೆ ಎಷ್ಟೋ ಸುಧಾರಿಸಿದ ಪದ್ಧತಿಯೆಂದು ನಾವು ಒಪ್ಪಿಕೊಳ್ಳುವೆವು. ಆದರೆ ಇದು

ುಣುಗರು ತಮ್ಮಷ್ಟಕ್ಕೆ ತಾವೇ ಕಂಡು ಹಿಡಿಯುವ ವಿಧಾನವು ನಮಗಂತೂ ಾಣಲಿಲ್ಲ. ಶಿಕ್ಷಕರು ತಾನೇ ಆ ಲೆಕ್ಕವನ್ನು ಮಾಡುವದಿನ್ನೇನು ಉಳಿಯಿತು?

ಕೊಟ್ಟ ಸಂಖ್ಯೆಗಳೊಳಗಿನ ಹತ್ತರ ಗಂಟು ಬಿಡಿಕಾಳುಗಳನ್ನು ಬೇರೆಮಾಡುವ ಂದು ಸುಲಭವಾದ ಹಂಚಿಕೆ; ಅವುಗಳನ್ನು ಒಂದರಕೆಳಗೊಂದನ್ನು ಇಟ್ಟು ಳ್ಳುವದು ಇನ್ನೊಂದು ಹಂಚಿಕೆ. ಬಲಗಡೆಯಿಂದ ಬೇರೀಜನ್ನು ಪ್ರಾರಂಭ ಮ ಮೂರನೆಯ ಹಂಚಿಕೆ.

ಶಿಕ್ಷಕನು ಕೇವಲ ಮಾರ್ಗದರ್ಶಿಯಾಗಿದ್ದು ಈ ಎಲ್ಲ ಹಂಚಿಕೆಗಳನ್ನು ವಿದ್ಯಾರ್ಥಿಗಳು ತಾವಾಗಿ ಕಂಡುಹಿಡಿದರೇನು?

ಶಿಕ್ಷಕನು ಮಾರ್ಗದರ್ಶಿಯಾಗಿರಬೇಕೆಂಬದರ ಅರ್ಥವು ಹೀಗೆ ಹುಡುಗರ ೃಯಂಸ್ಫೂರ್ತಿ, ಶೋಧಕಬುದ್ಧಿ ಇವುಗಳನ್ನು ಹಾಳು ಮಾಡಬೇಕೆಂದಿದ್ದರೆ ಂಥ ಮೊಸ ಪದ್ಧತಿಯಿಂದ ಅದಷ್ಟು ದೂರಿರುವದು ಒಳಿತಾಗಲಿಕ್ಕಿಲ್ಲವೇ? ಾಗಲ್ಲ: ಹೊಸ ಪದ್ಧತಿಯೊಳಗಿನ ಈ ದೋಷವನ್ನು ನಾವು ಬಿಟ್ಟುಜಿತಬೇಕು. ೂಸ ಪದ್ಧತಿಯು ಮರ್ಮವು ಸಾಮಾನ್ಯ ಶಿಕ್ಷಕರಿಗೆ ತಿಳಿಯುವದಿಲ್ಲವೆಂಬದಕ್ಕೆ ೊಂದು ಸಾಕ್ಷಿ.

ಈ ಲೆಕ್ಕದಲ್ಲಿ ಏನು ಮಾಡಬೇಕಾಗಿರುವದೆಂಬದರ ಕಲ್ಪನೆಯು ಹುಡುಗರಿಗೆ ುವದು. ಅದನ್ನು ಮಾಡಲಿಕ್ಕೆ ಕಡ್ಡಿಗಳ ಸಾಧನವನ್ನು ಉಪಯೋಗಿಸಲಿಕ್ಕೆ ಬೇಕಿನ ಪಾಠಗಳಲ್ಲಿ ಅವರು ಕಲಿತಿರುವರು. ಆಂದಮೇಲೆ ಶಿಕ್ಷಕನು "ಈ ಕಡ್ಡಿ ೇ ಮಾವಿನಕಾಯಿಗಳೆಂದು ತಿಳಿದು ಎರಡೂ ಗಿಡಗಳ ಮೇಲೆ ಕೂಡಿ ಎಷ್ಟು ಾಯಿಗಳಿವೆ ಎಂಬದನ್ನು ನೋಡಿ ಹೇಳಿರಿ" ಇಂಥ ಅವಶ್ಯವಿರುವ ಒಂದೆರಡು ಾತುಗಳನ್ನಾಡಿ ಕೊಟ್ಟ ಪ್ರಶ್ನೆಯನ್ನು ಬಿಡಿಸಲಿಕ್ಕೆ ಹುಡುಗರು ಯಾವ ಬಗೆ ಾಗಿ ಪ್ರಯತ್ನ ಮಾಡುವರೆಂಬದನ್ನು ನಿರೀಕ್ಷಿಸಬೇಕು.

ಮೇಲೆ ಮಾದರಿಗಾಗಿ ವರ್ಣಿಸಿದ ಪದ್ಧತಿಯು ಸಂಪೂರ್ಣವಾಗಿ ಉಕ್ತವು ಾದದ್ದು. ಹಾಗಾದರೆ ಅಂಕಗಣಿತದಲ್ಲಿ ನಿಜವಾದ ಮಾರ್ಗದರ್ಶಕನಾದ ಶಿಕ್ಷ ನು ಏನೇನು ಮಾಡಬಹುದು?

೧. ತಿಳಿದುಕೊಂಡು ನೋಡಿ ಹೇಳಬಹುದಾದಂಥ ಒಂದು ಪ್ರಶ್ನೆಯನ್ನು ಕ್ಷಕನು ವರ್ಗಕ್ಕೆ ಕೇಳಬಹುದು.

೨. ಕೆಲಸ ಮಾಡಲಿಕ್ಕೆ ಬೇಕಾಗುವ ತಕ್ಕ ಸಾಧನಗಳನ್ನು ಒದಗಿಸಿಕೊಡ ುವದು.

೩. ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸಿ ಮಾಡಬಹುದಾದ ಒಂದು ಕೆಲಸವನ್ನು ಅವರಿಗೆ ಕೊಡಬಹುದು.

೪. ದೊಡ್ಡ ಕೆಲಸದಲ್ಲಿ ಸುಲಭವಾದ ಮೆಟ್ಟಿಲುಗಳನ್ನು ಮಾಡಿಕ್ಕಿ ಬಹುದು.

೫. ಹೇಳಿದ ಹೊತ್ತು ಹುಡುಗರಿಗೆ ತಿಳಿಯುಲಿಕ್ಕೆ ಅಶಕ್ಯವಾದ ಮಾ ಗಳನ್ನು ಹೇಳಬಹುದು.

೬. ಒಂದು ಕಠಿಣವಾದ ಪ್ರಶ್ನೆಯ ಉತ್ತರವನ್ನು ಹೇಗೆ ಹುಡು ಬೇಕೆಂಬದರ ಹಾದಿಯನ್ನು ಸ್ವಲ್ಪ ಮಾತ್ರ ಸೂಚಿಸಬಹುದು. ಸಾಧ್ಯವಿ ತಮ್ಮ ಸ್ವಂತ ಬುದ್ಧಿಯನ್ನು ಉಪಯೋಗಿಸಲಿಕ್ಕೆ ಈಗಿನಕಿಂತ ಹೆಚ್ಚು ಅವಕಾಶವನ್ನು ಕೊಡಬೇಕು. ಮೇಲಿನ ಉದಾಹರಣೆಯಲ್ಲಿ ಹುಡುಗ ೨೮ರ ಮುಂದೆ ೩೭ ಬಿಡಿ ಕಡ್ಡಿಗಳನ್ನು ಒಂದೊಂದಾಗಿ ಎಣಿಸಿ ಉತ್ತರ ಹೇಳಿ ಹೇಳಲಿ. ಆಗ ಇದಕ್ಕೂ ತೀವ್ರವಾಗಿ ಆಗುವ ಹಂಚಿಕೆಯನ್ನು ಹುಡು ಎಂದು ಸೂಚಿಸಬಹುದು. ಕೆಲವು ಚಾಣ ಹುಡುಗರು ಹತ್ತರ ಗಂಟು ಮ ಕಾಳುಗಳನ್ನು ಬೇರೆಬೇರೆ ಇಟ್ಟು ಕೂಡಿಸಿರಹುದು. ಒಂದೊಂದಾಗಿ ಎಣಿಸು ರೀತಿಗಿಂತ ಇದು ಎಷ್ಟು ಸುಲಭವಾದ ರೀತಿಯಾಗಿದೆ ಎಂಬದನ್ನು ಉಳಿದ ಹು ಗರಿಗೆ ತೋರಿಸಬೇಕು.

ಮಕ್ಕಳು ಹತ್ತರ ಗಂಟುಗಳನ್ನು ಬಿಡಿ ಕಡ್ಡಿಗಳನ್ನು ಬೇರೆಬೇರೆಯಾ ಕೂಡಿಸಿದ್ದರೆ 'ಹ, ಬಿ.' ಎಂಬ ಹೆಸರುಗಳನ್ನು ಹಾಕದೆ ಉತ್ತರವನ್ನು ಬರೆ ತೋರಿಸಲಿಕ್ಕೆ ಹೇಳಬೇಕು. ಅವರು ಅದನ್ನು '೫೧೫' ಹೀಗೆ ಬರೆದರೆ ಈ ಉತ್ತರ ಹೇಗೆ ತಪ್ಪಾಗುವದೆಂಬದನ್ನು ಅವರ ಲಕ್ಷ್ಯಕ್ಕೆ ತಂದುಕೊಡಬೇಕು. ಈ ಸಂ ಯನ್ನು (೫ ಹ ೧೫ ಬಿ) ಗುಂಡಿನ ಚೌಕಟ್ಟಿನ ಮೇಲೆ ತೋರಿಸಬಹುದೆಂ ಯಾಕೆ ಬರುವದಿಲ್ಲ? (೫ ಹ. ೧೫ ಬಿ) ಇದನ್ನು ಗುಂಡಿನ ಚೌಕಟ್ಟಿನ ಮೇ ಹೇಗೆ ತೋರಿಸಬಹುದು? ಎಂಬ ಪ್ರಶ್ನೆಗಳನ್ನು ಕೇಳುವವರಿಂದ ಹುಡು ಮನಸ್ಸಿನ ಚಟುವಟಿಕೆಯು ಹೆಚ್ಚಾಗಿ ಅವರ ಲಕ್ಷ್ಯವೂ ಉತ್ಸಾಹವೂ ಜಿಗಿಯುವ ಇದು ನಿಜವಾದ 'ಮೊಸ' ಶಿಕ್ಷಣದ ದಾರಿಯಾಗಿಲ್ಲವೇ?

ಜೇಮ್ಸ್ ರ್ಯಾಮ್ಸೆ ಮ್ಯಾಗ್ಡೊನಾಲ್ಡ್

ಲೇ: ಕೊಪ್ಪಳ ಗುಂಡೇರಾಯರು ಬಿ. ಎ. ಅಸಿ ಪೂ. ಟ್ರೇ. ಕಾ. ಧಾರವಾಡ

ಇಸವಿಸನ್ ೧೯೨೪ ರಿಂದ ೧೯೩೫ ರ ವರೆಗೆ ಇಂಗ್ಲಂಡ ದೇಶದ ಮುಖ್ಯ ಮಂತ್ರಿಗಳೂ ಬ್ರಿಟಿಶಸಾಮ್ರಾಜ್ಯಸೌಕೆಯ ಕರ್ಣಧಾರರೂ ಜಗತ್ತಿನ ಪ್ರಮುಖ ರಾಷ್ಟ್ರಗಳ ಮುತ್ಸದ್ದಿಗಳಲ್ಲಿ ಅಗ್ರೇಸರರೂ ಎಂದೆನಿಸಿದ ಮಹನೀಯರಾದ ಜೇಮ್ಸ್ ರ್ಯಾಮ್ಸೆ ಮ್ಯಾಗ್ಡೊನಾಲ್ಡ್ ಎಂಬವರು, ತಮ್ಮ ಪ್ರಕೃತಿಯ ಅಸ್ವಸ್ಥತೆಯ ನಿಮಿತ್ತ ಕೆಲಕ ವಿಶ್ರಾಂತಿಪಡೆಯಬೇಕೆಂದು ಇಂಗ್ಲಂಡದಿಂದ ಅಮೇರಿಕೆಗೆ ಜೋಗಲಿರು ಸಮುದ್ರಯಾತ್ರೆಯಲ್ಲಿಯೇ ಹೃದಯವಿಕಾರಬೇನೆಯಿಂದ ಅಕಸ್ಮಿಕ ಮರಣಹೊಂದಿದ ಸುದ್ದಿಯನ್ನು ಅರುಹಲು ನಮಗೆ ಅತ್ಯಂತ ವಿಷಾದವೆನಿಸುತ್ತದೆ. ಇವರ ಮರಣದ ಸಮಯದ ಜಗತ್ತಿನ ಅತ್ಯಂತ ಬಿಕ್ಕಟ್ಟಿನ ಪ್ರಸಂಗದಲ್ಲಿ ಕೆಚ್ಚೆದೆಯ ಒಬ್ಬ ಮುತ್ಸದ್ದಿಗಳೂ ಅಲೋಚಕರೂ ಬ್ರಿಟಿಶ್ ಸಾಮ್ರಾಜ್ಯಕ್ಕೆ ಇಲ್ಲದಂತಾಯಿತೆಂಬು ದಕ್ಕೆ ಸಂದೇಹವೇ ಇಲ್ಲ. ಈ ವಾರ್ತೆಯನ್ನು ನಮ್ಮ ಬಾಡಶಹರು ಕೇಳಿದ ತಡಲೆ ಅವರ ಮನೆಗೆ ಇದೇ ಅರ್ಥದ ಸಂದೇಶವನ್ನು ಕಳುಹಿಸ್ದೇ ಈ ಮಾತಿಗೆ ಪುಷ್ಟಿಯಾಗಿದೆ. ಇಂಥವರ ಚರಿತ್ರೆಯು ಬೋಧಪ್ರದವೂ ಆದರ್ಶಭೂತವೂ ಆದುದರಿಂದ ನಮ್ಮ ಶಿಕ್ಷಕಬಂಧುಗಳಿಗಾಗಿ ಇಲ್ಲಿ ಕೊಡಲು ಇಚ್ಛಿಸುತ್ತೇವೆ.

ಸ್ಕಾಟ್ಲಂಡದ ಗುಡ್ಡುಗಾಡುಗಳಲ್ಲಿರುವ ಬಡಪರ ಗುಡಿಸಲಿನಲ್ಲಿ ಅವರ ಜನ್ಮ. ಮುಂದೆ ಕೂಲಿಕಾರರ ಸಂಘವೊಂದನ್ನು ನಿರ್ಮಿಸಿ. ಅದರ ಮುಖ್ಯ ಧುರೀಣತನವನ್ನು ಹೊಂದಿ, ಕೊನೆಗೆ ರೂಢಬದ್ಧಪಕ್ಷದ ಸರಕಾರದ ಮುಖ್ಯ ಮಂತ್ರಿ ಪದವಿಯವರೆಗೆ ಅವರ ಅತ್ಯಂತ ಉನ್ನತಿಯಾಯಿತು. ಈಗಿನ ಸಮತಾವಾದ-ಸಮಾಜವಾದಗಳ ಯುಗದಲ್ಲಿ ಇಂಥ ಒಬ್ಬ ಅಲೌಕಿಕ ಚರಿತ್ರಪುರುಷನನ್ನು ಪಡೆದ ದೇಶವು, ಹೆತ್ತತ್ತೆಂದು ಆ ಜನರು ಅಭಿಮಾನಪಡುತ್ತಿರುವರು. ಮೊದಲು ಕೂಲಿಕಾರರ ಸಂಘವೊಂದನ್ನು ಹುಟ್ಟಿಸಿ, ಬೆಳೆಸಿ ಅದಕ್ಕೊಂದು ಉಚ್ಚಸ್ಥಾನವನ್ನು ಮಾಡಿಕೊಟ್ಟವರೆಂದರೆ ಇವರೇ. ಇವರಿಲ್ಲದಿದ್ದರೆ ಆ ಸಂಘಕ್ಕೆ ಇಷ್ಟೊಂದು ಪ್ರಶಸ್ತ್ಯವು ಬರುತ್ತಿರಲಿಲ್ಲವೆಂದು ಹೇಳುವದುಂಟು. ಹೀಗಿರಲು ಆ ಸಂಸ್ಥೆಯ ಮುಖ್ಯ ಚಾಲಕರೂ ಪ್ರವರ್ತಕರೂ ಅಧ್ಯಕ್ಷರೂ ಆಗಿದ್ದು ಇಸವಿಸನ್ ೧೯೧೯ನೆಯ ವಸಂತಕಾಲದಲ್ಲಿ ಆ ಪಕ್ಷವನ್ನು ಬಿಟ್ಟುಕೊಟ್ಟು, ಅದಕ್ಕೆ ವಿರುದ್ಧವಾಗಿದ್ದ ರೂಢಪದ್ಧಪಕ್ಷದ (Conservative) ಸರಕಾರದ ಮುಖ್ಯ ಮಂತ್ರಿ

ಗಳಾಗಲು ಒಪ್ಪಿಕೊಂಡದ್ದನ್ನು ನೋಡಿದರೆ, ಇತಿಹಾಸದಲ್ಲಿ ಇದೊಂದ ಅಪವಾದ ದೃಷ್ಟಾಂತವೆಂದು ಹೇಳಬಹುದು.

ಇಸವಿಸನ್ ೧೮೬೬ ರಲ್ಲಿ ಸ್ಕಾಟಲಂಡಿನ ಪರ್ವತಶ್ರೇಣಿಯಲ್ಲಿರುವ ಲ್ಯಾ ಮಫ್ ಎಂಬುದು ಇವರು ಹುಟ್ಟಿದ ಊರು. ಆ ಊರ ಸಾಲೆಯಲ್ಲಿ ಪ್ರಾಥಮಿ ಶಿಕ್ಷಣ ಹೊಂದುತ್ತಿರುವಾಗಲೇ ಅವರ ಶಿಕ್ಷಕರು ಇವರೊಬ್ಬ ಕರ್ತೃತ್ವ ಪುರು ರಾಗುವರೆಂದು ತಿಳಿದು, ಅವರ ವಿಶೇಷಾಭ್ಯಾಸಕ್ಕಾಗಿ ತಮ್ಮ ಹೆಚ್ಚಿನ ಗಮನವನ್ನು ಪೂರೈಸುತ್ತಿದ್ದರು.

ಮನೆತನದ ಬಡತನದ ಮೂಲಕ, ಅವರು ೧೩ನೆಯ ವರ್ಷವೇ ಸಾಲೆಯನ್ನು ಬಿಡಬೇಕಾಗಿ ಬಂದಿತು. ಆದರೆ ಕೊನೆಯವರೆಗೂ ಹಾಗೆಯೇ ಸಾಗಿಬಿಟ್ಟಿದ್ದರೆ ಅವರ ಇತಿಹಾಸವೇ ಬೇರೆ ಆಗುತ್ತಿತ್ತು. ಒಮ್ಮೆ ಅವರು ಸಮುದ್ರದಲ್ಲಿ ಆಳವಾಗಿ ಮೀನಗಾರರಾಗಬೇಕೆಂದೂ ಪ್ರಯತ್ನ ಮಾಡಿದ್ದರು. ಆದರೆ ಅದನ್ನೂ ಮಾಡದೆ ಹೊಲಗಳಿಗೆ ಹೋಗಿ, ಆಲುಗಡ್ಡೆಗಳನ್ನು ಬೆಳೆಯಿಸುವ ವ್ಯವಸಾಯದಲ್ಲಿ ತೊಡಗಿ ಕೊಂಡರು. ಈ ಸುದ್ದಿ ತಿಳಿದ ಕೂಡಲೆ ಅವರ ಶಿಕ್ಷಕರು ಅವರನ್ನು ಅಲ್ಲಿಂದ ಕರೆತಂದು ಅವರ ಹಿಂದಿನ ಫೀ ಹಣವನ್ನು ಬೇಡದೆ ತಮ್ಮ ಸಾಲೆಯಲ್ಲಿಟ್ಟುಕೊಂಡು ಅವರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲತೆಯನ್ನು ಒದಗಿಸಿಕೊಟ್ಟರು. ಅರ್ಥ ಶಾಸ್ತ್ರ, ಶಾಸ್ತ್ರೀಯವಿಷಯ, ತತ್ವಜ್ಞಾನ ಮೊದಲಾದವುಗಳೇ ಅವರು ಪ್ರೀತಿ ಯಿಂದ ಅಭ್ಯಸಿಸಿದ ವಿಷಯಗಳು. ಆದುದರಿಂದ ಚಿಕ್ಕತನದಲ್ಲಿಯೇ ಅನೇಕ ಕ್ರಾಂತಿಕಾರಕ ಮತಗಳು ಉಂಟಾದುವು.

ಇಂಥ ಮಹತ್ವಾಕಾಂಕ್ಷೆಯಾದ ಕ್ರಾಂತಿಕಾರಕ ತರುಣನಿಗೆ ಅವರ ಜ ಗ್ರಾಮವು ತೀರ ಚಿಕ್ಕದಾದ ಕ್ಷೇತ್ರವೇ ಸರಿ. ಅಷ್ಟರಲ್ಲಿಯೇ ಲಂಡನ್ ಪಟ್ಟ ಣದಲ್ಲಿ ಪ್ರಸಿದ್ಧವಾಗುತ್ತಿರುವ ಒಂದು ವರ್ತಮಾನಪತ್ರದಲ್ಲಿಯ ಪ್ರಕಟನೆಯನ್ನ ಓದಿಕೊಂಡು ತಮಗೊಂದು ಲೇಖಕರ ಸ್ಥಾನವು ಆ ವರ್ತಮಾನಪತ್ರದ ಕಚೇ ರಿಯಲ್ಲಿ ದೊರೆಯಬಹುದೆಂಬ ಆಶೆಯಿಂದ ಅಲ್ಲಿಗೆ ಬಂದು ನೋಡಲು ಅದೊಂದ ಟೊಳ್ಳು ವಾರ್ತೆಯೆಂದು ಕಂಡುಬಂದದರಿಂದ ಅವರ ನಿರಾಶೆಗೆ ಮೇರೆ ಇಲ್ಲದಾಗಿ ಯಿತು. ಜೇಬಿನಲ್ಲಿ ಒಂದೆರಡು ಶಿಲಿಂಗುಗಳು ಮಾತ್ರ ಉಳಿದಿದ್ದವು. ಮ ಮರಳಿ ಹೋಗಬೇಕೆಂಬ ವಿಚಾರವೇ ಹೆಚ್ಚಾಗಿದ್ದರೂ ಮೇಲಾಸೆಯುಳ್ಳ ೧ ವರ್ಷದ ವಯಸ್ಸಿನ ಈ ಯುವಕರು ಧೈರ್ಯತಾಳಿ ಕಾಲುಗಾಡಿಗಳನ್ನು ಮಾರಿ ಒಂದು ಅಂಗಡಿಯಲ್ಲಿ ಪತ್ರಗಳ ಮೇಲ್‌ವಿಳಾಸಗಳನ್ನು ಬರೆಯುವಂಥ ಚಿಕ್ಕ

ನಂತರ ಉದ್ಯೋಗವನ್ನು ದೊರಕಿಸಿಕೊಂಡರು. ಕೆಲವು ಕಾಲದ ತರುವಾಯ ಒಂದು ಅಂಗಡಿಯಲ್ಲಿ ವಾರಕ್ಕೆ ೧೨ ಶಿಲಿಂಗುಗಳಿಂದಲೇ ತೃಪ್ತಿಹೊಂದಿ ದುಡಿಯಬೇಕಾಯಿತು. ಇಷ್ಟು ಹಣವೆಲ್ಲ ಅವರೊಬ್ಬರ ಜೀವನಕ್ಕೂ ಕೂಡ ಸಾಕಾಗುತ್ತಿರಲಿಲ್ಲ. ಆದರೂ ತಮ್ಮ ವಿರಾಮದ ವೇಳೆಯನ್ನು ವ್ಯರ್ಥ ಹೋಗಗೊಡದೆ ಅಲ್ಲಿನ ಪ್ರಸಿದ್ಧ ವಾಚನಾಲಯಗಳಲ್ಲಿ ಓದುವುದರಲ್ಲಿ ಕಳೆಯುತ್ತಿದ್ದರು.

ಇಸವಿಸನ್ ೧೮೮೫ರಲ್ಲಿ ಅಂದರೆ ತಮ್ಮ ವಯಸ್ಸಿನ ೨೯ನೆಯ ವರ್ಷ ಅವರು ಕೂಲಿಕಾರರ ಸಂಘದ ಪರವಾಗಿ ಸದಸ್ಯರಾಗಿ ಕಾಮನ್ಸರ ಸಭೆಯನ್ನು ಸೇರಲು ಪ್ರಯತ್ನ ಮಾಡಿದರು. ಮುಂದೆ ನಾಲ್ಕು ವರ್ಷಗಳ ತರುವಾಯ ಪ್ರಾ. ಜಾನ್ ಹ್ಯಾಡ್ಸ್ಟನ್ ಎಂಬ ಪ್ರಸಿದ್ಧ ರಸಾಯನಶಾಸ್ತ್ರದ ಪ್ರೊಫೆಸರರ ಮಗಳ ಕೂಡ ಇವರ ವಿವಾಹವಾಗಲು ಕೂಲಿಕಾರರ ಸಂಘಕ್ಕೆ ಹೊಸ ಕಳೆಬಂದು ಪಾರ್ಲಮೆಂಟಿನಲ್ಲಿ ಇವರ ಪ್ರಾಬಲ್ಯ ಬೆಳೆಯಲು ಅನುವಾಯಿತು. ಇದೇ ಕಾಲಕ್ಕೆ ಇವರ ಪ್ರಯತ್ನಗಳಿಂದ ಕೂಲಿಕಾರರ ಸಂಘಕ್ಕೂ ಟ್ರೇಡ್ಸ್ ಯೂನಿಯನ್ ಕಾಂಗ್ರೆಸ್ಸಿಗೂ ಬಂದರೆ ವ್ಯಾಪಾರಸ್ಥರ ಸಂಘಕ್ಕೂ ಇದ್ದ ವಿರೋಧವೆಲ್ಲ ಅಳಿದುಹೋಯಿತು.

೧೯೦೬ರಲ್ಲಿಯ ಆಯ್ಕೆಯಲ್ಲಿ (ಇಲೆಕ್ಷನ್) ಒಟ್ಟಿಗೆ ೫೦ ಜನ ಕೂಲಿಕಾರರ ಪ್ರತಿನಿಧಿಗಳು ಪಾರ್ಲಮೆಂಟಿಗೆ ಬಂದರು. ಅವರಲ್ಲಿ ೨೯ ಜನರು ಲೇಬರ್ ಸಂಘದಿಂದ ಆರಿಸಿಬಂದರು. ಮ್ಯಾಗ್ಡೊನಾಲ್ಡರು ಲೇಬರ್ ಸಂಘದಿಂದ ಆರಿಸಿಬಂದರು. ಇದರಿಂದ ಕೂಲಿಕಾರರ ಬಂದು ಬಲವಾದ ಸಂಗಡವು ಈಗ ಪಾರ್ಲಿಮೆಂಟಿನಲ್ಲಿ ಹುಟ್ಟಿತೆಂದು ಹೇಳಬಹುದು. ಈ ರೀತಿ ಪ್ರಯತ್ನ ಬಡುತ್ತಿರಲು ಇವರಿಗೆ ೧೯೧೮ರಲ್ಲಿಯ ಆಯ್ಕೆಯು ಸುಸಂಧಿಯಾಗಿ ಒದಗಿತು.

ಅಲ್ಪಕಾಲದಲ್ಲಿಯೇ ಇವರು ತಮ್ಮ ರಾಜ್ಯಸಿರ್ವಾಹಸಾಮರ್ಥ್ಯ, ಅಪ್ರತಿಮ ನೇತೃತ್ವ, ಪಾರ್ಲಿಮೆಂಟಿನ ಪದ್ಧತಿಗಳ ಜ್ಞಾನ ಮೊದಲಾದವುಗಳಿಂದ ಪಾರ್ಲಿಮೆಂಟಿನ ಸದಸ್ಯರನ್ನೂ ಇತರರನ್ನೂ ಬೆರಗುಗೊಳಿಸಿದರು. ಅಲ್ಲಿದ್ದ ಜನರಿಗೆ ಇವರೊಬ್ಬರು ಅಸಾಧಾರಣ ಪುರುಷರು ಇರುವರೆಂದೂ ವಿಲಕ್ಷಣ ಪರಿಣಾಮಗಳನ್ನು ಅಲ್ಪಕಾಲದಲ್ಲಿಯೇ ಮಾಡಬಲ್ಲವರೆಂದೂ ಎನಿಸಿತು. ಈ ಕಾರಣಗಳ ಮೂಲಕ ಆ ಜನರು ತಮ್ಮ ಪಕ್ಷದ ಪಾರ್ಲಿಮೆಂಟಿನ ಮುಖಂಡರನ್ನಾಗಿ ಇವರನ್ನು ಆರಿಸಿದರು. ಇಲ್ಲಿನ ಅವರ ಕಾರ್ಯವು ಅಸಾಧಾರಣವಾದದ್ದು. ಆದರ ಜೊತೆಯೂ ವಿಶೇಷವಾಗಿ ಅಂತರರಾಷ್ಟ್ರೀಯ ಸಮಸ್ಯೆಗಳ ವಿಷಯವಾಗಿ ಅವರು ತಮ್ಮ ಗಮನವನ್ನು ಹೆಚ್ಚಾಗಿಟ್ಟುಕೊಂಡಿದ್ದರು. ಪರರಾಷ್ಟ್ರಗಳ ವಿಷಯ ಇಷ್ಟಲ್ಲಂತೂ ಇವರನ್ನು ಸರಿಗಟ್ಟುವವರು ಅಲ್ಲಿ ಯಾರೂ ಇರಲಿಲ್ಲ.

ಕಳಿದ ಮಹಾಯುದ್ಧದಲ್ಲಿ ಆಗಿನ ಸರಕಾರದವರು ತಾವು ಯುದ್ಧವನ್ನು ಸೇರುವೆವೆಂದು ಹೇಳಿದಾಗ, ಅವರನ್ನು ತೀಕ್ಷ್ಣವಾಗಿ ವಿರೋಧಿಸಿದರು. ಆಗ ಅವರ ಭಾಷಣವು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾಗಿದೆ. ಕೂಲಿಕಾರ ಸಂಘದ ಸದಸ್ಯರು ಭಿನ್ನಾಭಿಪ್ರಾಯಗಳನ್ನು ತಾಳಿದ್ದರಲ್ಲದೆ ಯುದ್ಧವನ್ನು ಕೂಡ ಗಾಣಿಸಬೇಕೆಂದು ಹೇಳಿದರು. ಕೂಡಲೆ ಆ ಸಂಘದ ತಮ್ಮ ಮುಂದಾಳುತನವನ್ನು ಇವರು ಬಿಟ್ಟುಕೊಟ್ಟರು. ಇಂಗ್ಲಂಡದಲ್ಲಿಯೂ ಮಿತ್ರರಾಷ್ಟ್ರಗಳಲ್ಲಿಯೂ ಇವರನ್ನು ಕಂಡರೆ ಆಗುತ್ತಿದ್ದಿಲ್ಲ. ಇಂಥ ಸಮಯದಲ್ಲಿಯೂ ತಮ್ಮ ಕೆಲ ಜನ ಅನುಯಾಯಿಗಳನ್ನು ಕೂಡಿಸಿಕೊಂಡು ತಮ್ಮ ಅಭಿಪ್ರಾಯಗಳಿಗೆ ಜನರ ಮನಸ್ಸು ಪರಿವರ್ತಿಸಲು ಅವಿಶ್ರಾಂತಪರಿಶ್ರಮ ಮಾಡಿದರು.

೧೯೧೮ ರಲ್ಲಾದ ಆಯ್ಕೆಯಲ್ಲಿ "ಜರ್ಮನ್ ಜನರು ಇಂಗ್ಲಂಡಕ್ಕೆ ಯುದ್ಧವೆಚ್ಚವನ್ನೂ ತೆರುವಂತೆ ಮಾಡಿರಿ" ಎಂಬ ಕೂಗಾಟದ ಕಾಲದಲ್ಲಿ ಇವರಿಗೆ ಜಯ ಬಾರದಿದ್ದುದು ಆಶ್ಚರ್ಯದ ಸಂಗತಿಯಲ್ಲ. ಮುಂದೆ ನಾಲ್ಕು ವರ್ಷ ಇವರು ಪಾರ್ಲಿಮೆಂಟಿನ ಸಭಾಸದರಾಗಿರಲಿಲ್ಲ. ಯಾವ ತರದ ಸಾರ್ವಜನಿಕ ಕಾರ್ಯಗಳಿಂದಲೂ ಇವರಿಂದ ನೆರವೇರಲಿಲ್ಲ. ಅಲ್ಲದೆ ೧೯೨೧ ರಲ್ಲಾದ ಉಪ ಆಯ್ಕೆಯಲ್ಲಿ ಕೂಡ ಸ್ವಲ್ಪದರಲ್ಲಿಯೇ ತಮ್ಮ ಸ್ಥಾನವನ್ನು ಕಳೆದುಕೊಂಡರು.

ಆದರೂ ಕೂಲಿಕಾರ ಸಂಘಗಳಲ್ಲಿಯೇ ಆಗಬೇಕಾದ ಸುಧಾರಣೆಗಳೆಲ್ಲ ಆಗುತ್ತಿದ್ದವು. ಮಹಾಯುದ್ಧದ ತರುವಾಯದಲ್ಲಿ ದೇಶದ ತುಂಬ ನಿರುದ್ಯೋಗ ದಾರಿದ್ರ್ಯ ಸ್ಥಿತಿಗಳು ಹಬ್ಬಲು, ಆ ಸಮಸ್ಯೆಗಳನ್ನು ನಿರ್ವಹಿಸಲು ವ್ಯಾಪಾರ ಸಂಘಗಳು ರಾಜಕೀಯ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಯವನ್ನು ತೀವ್ರತೆಯಿಂದ ಮಾಡುತ್ತಿರುವಾಗ ೧೯೨೩ರ ಆಯ್ಕೆಯು ಬಂದಿತು. ಸಂಯುಕ್ತ ಪಕ್ಷದ ಸರಕಾರವು ಕುಸಿಬಿದ್ದಿತು. ಆಗ ಮ್ಯಾಗ್ಡೊನಾಲ್ಡರು ಸಾವುಧಪೇಲ್ಪದಿಂದ ಆರಿಸಿ ಬಂದರು. ಒಂದೇ ಒಂದು ವರ್ಷದಲ್ಲಿ ಪುನಃ ಆದ ಜುನಾವಣಿಯಲ್ಲಿ ೧೯೨೯ ಜನ ಕೂಲಿಕಾರರು ಆರಿಸಿ ಬಂದುದರಿಂದ ಗ್ರೇಟಬ್ರುಟನದಲ್ಲಿ ಮೊದಲನೆಯ ಸಾರಿ ಕೂಲಿಕಾರ ಪಕ್ಷದ ಸರಕಾರವು ಅಧಿಕಾರ ಪದವನ್ನು ಹೊಂದಲು ಅವಕಾಶವಾಯಿತು. ಮ್ಯಾಗ್ಡೊನಾಲ್ಡರು ಮುಖ್ಯ ಮಂತ್ರಿಗಳೂ ಪರರಾಷ್ಟ್ರ ಸೆಕ್ರೆಟರಿಗಳೂ ಆಗಿದ್ದರು. ಅಂತರ ರಾಷ್ಟ್ರಗಳಲ್ಲಿದ್ದ ಅನವಸ್ಥೆಯೊಳಗಿಂದ ರಕ್ಷಿಸಿ ದೇಶವನ್ನು ಮೇಲಕ್ಕೆ ಎತ್ತಿ ಹಿಡಿದು ಯುರೋಪದ ರಾಷ್ಟ್ರಗಳ ಕೂಡ ಯುನೈಟೆಡ್ ಸ್ಟೇಟ್ಸಪದರ ಬಳಕೆ ಬೆಳೆಯುವಂತೆ ಮಾಡಿ ಇಂಗ್ಲಂಡ ದೇಶವನ್ನು ಉನ್ನತ ಸ್ಥಿತಿಗೆ ಒಯ್ದರು. ಕೂಲಿಕಾರ ಪಕ್ಷದ ಸರಕಾರವು ಬಹುದಿವಸ ಅಧಿಕಾರ

ವದಲ್ಲಿ ಉಳಿಯಲಿಲ್ಲ. ಒಳಜಗಳಗಳ ಮೂಲಕ ತಮ್ಮ ಅಧಿಕಾರವನ್ನು ಬಿಟ್ಟು ಡಲು ಪುನಃ ಇವರು ಸರಕಾರದ ವಿರುದ್ಧ ಪಕ್ಷದ ಮುಖಂಡರಾಗಿಯೇ ಉಳಿಯು ೀಕಾಗಿ ಬಂದಿತು.

ಬರುವ ಆಯ್ಕೆಯಲ್ಲಿ ಕೂಲಿಕಾರ ಸಂಘದವರು ಬಹುಸಂಖ್ಯಾಕರಾಗಬೇ ು ಇವರು ಜನರಲ್ಲಿ ದೊಡ್ಡದಾದ ಚಳವಳವನ್ನು ವಿಕಪ್ರಕಾರವಾಗಿ ನಾಲ್ಕು ರ್ಷಗಳ ವರೆಗೆ ನಡಿಸಿದರು. ೧೯೨೯ ರಲ್ಲಿಯ ಆಯ್ಕೆಯಲ್ಲಿ ೨೮೮ ಜನರು ಆರಿಸಿ ಬಂದು ಇವರ ಶ್ರಮದ ಫಲವೆಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ನಿರುದ್ಯೋಗ ಯು ದೇಶದಲ್ಲೆಲ್ಲ ಹರಡಿದ್ದಲ್ಲದೆ ೧೯೩೧ ನೆಯ ಇಸವಿಯಲ್ಲಿ ಬ್ಯಾಂಕ ಆಫ್ ಗ್ಲಂಡ ಎಂಬ ಬ್ಯಾಂಕಿನಲ್ಲಿಟ್ಟಿದ್ದ ಕೇವಿನ ಹಣವನ್ನೆಲ್ಲ ಪರದೇಶದವರು ತಿರುಗಿ ಪಡೆದುಕೊಂಡದ್ದರಿಂದ ಇಂಗ್ಲಂಡದ ಆರ್ಥಿಕ ಸ್ಥಿತಿಯು ೧೯೩೧ ರಲ್ಲಿ ತೀರ ನಿಕೃಷ್ಟ ಸ್ಥಿತಿಗೆ ಒಂದಿತು. ಆಗ ಮ್ಯಾಗ್ಡೊನಾಲ್ಡರು, ಸರಕಾರದವರು ೭೦ ಕೋಟಿ ರೂಪಾಯಿ ಸಾಲವನ್ನು ಮುಟ್ಟಿಸುವದನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದರು. ಆಗ ಅಲ್ಲಿಯೇ ಇವರು ತಮ್ಮ ಮಂತ್ರಿಪದವನ್ನು ಬಿಟ್ಟುಕೊಟ್ಟರು. ಅದರಿಂದ ಕೂಲಿಕಾರರ ಸರಕಾರವು ನಿಂತುಹೋಯಿತು. ಇದಾದ ಬಳಿಕ ಪುನಃ ರೂಢಬದ್ಧ ಪಕ್ಷದವರು ಅಧಿಕಾರಾರೂಢವಾಗಬೇಕಾಗಿತ್ತು. ಅದನ್ನು ಬಿಟ್ಟು ಎರಡೂ ಪಕ್ಷಗಳನ್ನು ಕೂಡಿಸಿಕೊಂಡು ಒಂದು ರಾಷ್ಟ್ರೀಯ ಮಂತ್ರಿಮಂಡಳವನ್ನು ಇವರು ಸ್ಥಾಪಿಸಿದರು. ಈ ಬದಲಾವಣೆಯು ಎರಡು ತಿಂಗಳ ಮಾತ್ರ ಬದುಕಿತು. ಮತ್ತೆ ಹೊಸ ಆಯ್ಕೆ ಮಾಡಬೇಕಾಯಿತು. ಆಗ ಇವರು ಕೂಲಿಕಾರ ಪಕ್ಷವನ್ನು ಬಿಟ್ಟು ರೂಢಬದ್ಧ ಹಾಗೂ ಉದಾರ ಮತ ಪಕ್ಷಗಳನ್ನು ಕೂಡಿದ ಹೊಸ ಪಕ್ಷವನ್ನು ಗೊತ್ತು ಮಾಡಿ ದೇಶದಲ್ಲೆಲ್ಲ ಸಂಚಾರ ಮಾಡಿ ಹೊಸ ಚಳವಳವನ್ನು ನಡಿಸಲು ಇವರೂ ೧೦೦ಕ್ಕೆ ೯೧ ಜನ ಇವರ ಸ್ನೇಹಿತರೂ ಆರಿಸಿ ಬಂದರು. ತುಸು ಅವಧಿಯಲ್ಲಿಯೇ ಜಗತ್ತಿನ ವ್ಯಾಪಾರ–ಆರ್ಥಿಕ ಸ್ಥಿತಿಗಳ ಕೂಡ ಇಂಗ್ಲಂಡದ ಸ್ಥಿತಿಯನ್ನು ಸುಧಾರಿಸಿದರಲ್ಲದೆ ಅಮೇರಿಕೆಗೆ ಪ್ರವಾಸವನ್ನು ಬೆಳೆಸಿ, ಅಲ್ಲಿನ ಸರಕಾರದವರ ಕೂಡ ಹಾಗೂ ವ್ಯಾಪಾರಸ್ಥರ ಕೂಡ ಮಾತುಕತೆಗಳನ್ನಾಡಿಕೊಂಡು ಬರಲು ಇಂಗ್ಲಂಡದಲ್ಲಿ ಕೂಡಿದ ಜಗತ್ತಿನ ಎಲ್ಲ ಪ್ರಮುಖ ರಾಷ್ಟ್ರಗಳ ವ್ಯಾಪಾರ ಮತ್ತು ಆರ್ಥಿಕ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಿಬಂದರು.

ಈ ಮೇರೆಗೆ ೬ ವರ್ಷಗಳ ವರೆಗೆ ಮುಖ್ಯ ಮಂತ್ರಿಪದವನ್ನು ಹೊಂದಿ, ಶ್ರಾಂತಪರಿಶ್ರಮ ಮಾಡಿ ೧೯೩೫ರಲ್ಲಿ ಆ ಸ್ಥಲಕ್ಕೆ ಪುನಃ ರಾಜೀನಾಮೆಯನ್ನು ಟ್ಟರು. ಮುಂದೆ ಬಂದ ಬಾಲ್ಡವಿನ್ನರ ಮಂತ್ರಿಮಂಡಲದಲ್ಲಿಯೂ ಅವರಿಗೆ

ಪ್ರಾಶಸ್ತ್ಯವುಳ್ಳ ಸ್ಥಳವೊಂದನ್ನು ಕೊಟ್ಟಿದ್ದರು. ಇವರ ಆಳಿಕೆಯಲ್ಲಿ ಇಡಿ
ದೇಶದಲ್ಲಿ ಸಾಮಾಜಿಕ ಕ್ರಾಂತಿಯಾಯಿತೆಂದು ಹೇಳಿದರೆ ಅತಿಶಯೋಕ್ತಿಯ
ಲಾರದು. ಬಾಲ್ಡವಿನ್ನರ ಕೂಡ ಇವರು ೧೯೩೬ ರಲ್ಲಿ ವಿಶೇಷ ಕಾರಭಾರವ
ಬಿಟ್ಟುಕೊಟ್ಟರು. ಹಿಂದುಸ್ತಾನದ ವಿಷಯವಾಗಿ ಅವರು ಯಾವಾಗಲೂ ಸ
ಪ್ರಾಯಗಳನ್ನೇ ಪಡೆದಿದ್ದರು. ಕೂಲಿಕಾರರ ಸಂಘದ ಅಧ್ಯಕ್ಷರಾಗಿದ್ದಾಗ
ದೇಶಕ್ಕೆ ಹೆಚ್ಚಿನ ಹಕ್ಕುಗಳನ್ನು ಕೊಡುವದೇ ಬ್ರಿಟಿಶ್ ಪಾರ್ಲಿಮೆಂಟಿನ
ಕರ್ತವ್ಯವೆಂದು ಮೇಲಿಂದ ಮೇಲೆ ಹೇಳುತ್ತಿದ್ದರು. ಈ ದೇಶಕ್ಕೆ ಬಂದು
ಬೇರೆ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿ ಪ್ರತ್ಯಕ್ಷ ದೇಶದ ಸ್ಥಿತಿಯನ್ನು ತಿ
ಕೊಂಡು ಹೋಗಿ ೨-೩ ದುಂಡುಮೇಜಿನ ಪರಿಷತ್ತುಗಳನ್ನು ಕೂಡಿಸಿ, ಎಲ್ಲರ
ಸಮ್ಮತವಾಗುವ ಹಾಗೆ ಪ್ರಾಂತಿಕ ರಾಜ್ಯಕಾರಭಾರದ ಸಂಪೂರ್ಣ ಅಧಿಕಾರವ
ದಿಲ್ಲಿಯ ಸರಕಾರದ ಆಳಿಕೆಯಲ್ಲಿ ಈ ದೇಶದವರಿಗೆ ಹೆಚ್ಚಿನ ಅಧಿಕಾರಗಳ
ಉದಾರಮನಸ್ಸಿನಿಂದ ಕೊಡಿಸಿದ್ದಕ್ಕಾಗಿ ಇಲ್ಲಿಯ ಜನರು ಅವರಿಗೆ ಚಿರಋ
ಯಾಗಿರಬೇಕಾಗಿದೆ.

ಹಿಂದೀ ಜನರ ಆಹಾರದಲ್ಲಿಯ ಪೋಷಕ ದ್ರವ್ಯಗಳು ಸಮತೋಲವಾದ ಆಹಾರದ ಬಗ್ಗೆ ವಿಚಾರಿಸತಕ್ಕ ಸಂಗತಿಗಳು

ಲೇ—ಕೆ. ಬಿ. ತೇರದಾಳಕರ ಬಿ. ಎಸ್. ಸಿ. ಬಿ. ಟಿ. ಅನಿ ಮಾ. ಟ್ರೇ. ಕಾ. ಧಾರವಾ

ಆಹಾರದ ಆವಶ್ಯಕತೆ:— ನಾವು ದಿನಾಲು ಆಹಾರವನ್ನು ತೆಗೆದುಕೊ
ವದು ನಮ್ಮ ದೇಹದ ಬೆಳವಣಿಗೆಗೂ, ದಿನಾಲು ನಮ್ಮಲ್ಲಿ ಆಗುವ ಸವಕಳಿಯ
ಹೋಗಲಾಡಿಸುವದಕ್ಕೂ ಇರುತ್ತದೆಂಬದು ಎಲ್ಲರಿಗೂ ಗೊತ್ತಿದ್ದ ಮಾತಾ
ಇದಲ್ಲದೆ ನಾವು ಯಾವದಾದರೊಂದು ಕೆಲಸವನ್ನು ಮಾಡಬೇಕಾದರೆ ಕೆಲವೊ
ಶಕ್ತಿಯೂ ಕೂಡ ಬೇಕಾಗುವದು. ಆದ್ದರಿಂದ ಈ ಶಕ್ತಿಯನ್ನು ನಮ
ಹುಟ್ಟಿಸಲಿಕ್ಕೆ ಆಹಾರವು ಬೇಕಾಗುವದು. ಹೀಗಾಗಿ ನಮ್ಮ ಪೂರ್ಣ
ಮತ್ತು ಪೋಷಕವಾದ ಆಹಾರದಲ್ಲಿ ಈ ಗುಣಗಳುಳ್ಳ ದ್ರವ್ಯಗಳು ಇರಬೆ
ಗುವದು. ಇವನ್ನು ಬೇರೆ ರೀತಿಯಿಂದ ಹೇಳಬೇಕಾದರೆ ನಮ್ಮ ದೇಹದ

ೇಕ ಇಂದ್ರಿಯಗಳೂ, ಎಲುವು ರಕ್ತಮಾಂಸ ಸ್ನಾಯು ಮುಂತಾದವುಗಳೂ
ಾವ ಯಾವ ದ್ರವ್ಯಗಳಿಂದ ಆಗಿರುವವೋ ಆ ಎಲ್ಲ ದ್ರವ್ಯಗಳು ಯೋಗ್ಯ
ಪ್ರಮಾಣದಲ್ಲಿರುವ ಆಹಾರವೆಂದರೆ ಪೂರ್ಣ ಆಹಾರವೆಂದು ಅನ್ನುವದು ವಿಹಿತವು.
ಮ್ಮ ದೇಹದಲ್ಲಿಯ ಇಂದ್ರಿಯಗಳು ಮುಖ್ಯವಾಗಿ ಸಸಾರಯುಕ್ತ ದ್ರವ್ಯ, ನೆಣ,
ಾರ್ಬೋಹಾಯಡ್ರೇಟುಗಳೂ ಅನೇಕ ಕ್ಷಾರಗಳೂ ನೀರೂ ಇವುಗಳ ಭಿನ್ನ ಭಿನ್ನ
ಪ್ರಮಾಣದಿಂದ ಕೂಡಿ ಆಗಿರುತ್ತವೆ. ಇದಲ್ಲದೆ ನಮ್ಮ ದೇಹದಲ್ಲಿಯ ವ್ಯಾಪಾರ
ು ಯೋಗ್ಯರೀತಿಯಿಂದ ಸಾಗಬೇಕಾದರೆ ಜೀವಸತ್ವಗಳೆಂಬ ಕೆಲವು ವಿಶಿಷ್ಟ
ದ ದ್ರವ್ಯಗಳೂ ಬೇಕಾಗುತ್ತವೆ. ಆದ್ದರಿಂದ ನಮ್ಮ ಆಹಾರದಲ್ಲಿ ಇವೆಲ್ಲವು
ು ಯೋಗ್ಯಪ್ರಮಾಣದಲ್ಲಿ ಸಮಾವೇಶವಾಗಿವೆಯೋ ಇಲ್ಲವೋ ಎಂಬದನ್ನು
ೋಡಬೇಕು.

೧. ಶಕ್ತಿಪೂರಕಗಳು ಉದಾ:— ಸಸಾರಜನಕದ್ರವ್ಯ, ನೆಣ, ಮತ್ತು
ಾರ್ಬೋ ಹಾಯಡ್ರೇಟುಗಳು.

೨. ನಿರ್ಮಾಣ ಸಾಮಗ್ರಿಯನ್ನು ತಯಾರಿಸುವಂಥವು:— ಸಸಾರ
ನಕದ್ರವ್ಯ.

೩. ನಮ್ಮ ದೇಹದೊಳಗಿನ ಎಲ್ಲ ವ್ಯಾಪಾರಗಳು ನಿಯಮದಿಂದ ಸಾಗಲು
ವಶ್ಯವಾದಂಥವು. ಉದಾ:— ಜೀವಸತ್ವಗಳು, ಮತ್ತು ಕ್ಷಾರಗಳು.

ನೀರಾದರೂ ಒಂದು ಆಹಾರದ ಮುಖ್ಯ ಅಂಗಗಳ ಅಂಶವೆಂದೆನಿ
ಸ್ಕೊಳ್ಳುತ್ತದೆ.

ನಾವು ಯಾವದಾದರೊಂದು ಆಹಾರವನ್ನು ತೆಗೆದುಕೊಳ್ಳುವ ಮೊದಲು
ಆಹಾರವು ಮೇಲಿನ ಸಂಗತಿಗಳ ಪ್ರಮಾಣಾನುರೂಪವಾಗಿದೆಯೊ ಇಲ್ಲವೊ
ಾಬನ್ನು ತಿಳಿದುಕೊಳ್ಳುವದು ಲೇಸು.

ಚಿಕ್ಕಮಕ್ಕಳಿಗೆ ಕೀಳುಆಹಾರವನ್ನು ಹಾಕಿ ಅವರು ಯಾಕೆ ಸರಿಯಾಗಿ
ಳೆಯಲೊಲ್ಲರೆಂದು ಕಳವಳಬಡುವದೂ, ಕೀಳು ಆಹಾರವನ್ನು ಉಂಡ ಕೂಲಿಯು
ಾಕೆ ಹೆಚ್ಚು ಜಟುವಟಿಕೆಯಿಂದ ಕೆಲಸಮಾಡಲೊಲ್ಲನೆಂದು ರೇಗುವದೂ,
ರಿಯಲ್ಲೆಂದು ನಮಗೆ ತಟ್ಟನೆ ಹೊಳೆಯದಿರಲಾರದು.

ಾಗಾದರೆ ಮನುಷ್ಯನು ಹೆಚ್ಚು ಚಟುವಟಿಕೆಯಿಂದಲೂ ಉತ್ಸಾಹ
ಂದಲೂ ತತ್ಪರತೆಯಿಂದಲೂ ಕೆಲಸಮಾಡಬೇಕಾದರೆ ಅವನು ಹೆಚ್ಚು ಪ್ರಮಾಣ
ದ ಯೋಗ್ಯವಾದ ಮತ್ತು ಯೋಗ್ಯಪ್ರಮಾಣದ ಆಹಾರವನ್ನು ಪೂರೈಸಿ
ಳ್ಳುವದು ಅವಶ್ಯಕರ್ತವ್ಯವಲ್ಲವೆ?

ಇನ್ನು ಯೋಗ್ಯವಾದ ಮತ್ತು ಯೋಗ್ಯಪ್ರಮಾಣದ ಆಹಾರಪದಾರ್ಥಗ
ಯಾವವೆಂಬದನ್ನು ನಾವು ಅವುಗಳಿಂದ ಹೊರಡುವ ಸೆಕೆಯ ಪ್ರಮಾಣದಿ
ಕಂಡು ಹಿಡಿಯುತ್ತೇವೆ. ಯಾವನೊಬ್ಬ ಮನುಷ್ಯನಿಗೆ ತಾನು ತೆಗೆದುಕ್ಕೊ
ಆಹಾರದಿಂದ ಸೆಕೆಯ ರೂಪವಾಗಿ ಸಾಕಷ್ಟು ಶಕ್ತಿಯು ಸಿಗದಿದ್ದರೆ ಆ
ಸ್ವಾಭಾವಿಕವಾಗಿ ತೀವ್ರ ದಣಿಯಲಾರಂಭಿಸುವನು.

ಸಾಧಾರಣವಾಗಿ ನಮ್ಮ ದೇಶದೊಳಗಿನ ಸುಮ್ಮನೆ ಒಂದೆಡೆ ಕು
ಕಳೆಯುವ ಪ್ರೌಢ ವಯಸ್ಕನಿಗೆ ದಿನಾಲು ಸುಮಾರು ೩೧೫೦ ಕ್ಯಾಲರಿ ಉ
ತೆಯ ರೂಪದ ಶಕ್ತಿ ಬೇಕಾಗುತ್ತದೆ. ಒಕ್ಕಲತನ ಮಾಡುವವನಿಗೆ ಸುಮಾ
೨೫೦೦–೨೬೦೦ ಕ್ಯಾಲರಿ ಶಕ್ತಿ ಬೇಕಾಗುವದು. ಇನ್ನೂ ಹೆಚ್ಚು ಶ್ರಮದ ಕೆ
ಮಾಡುವವರಿಗೆ ಸುಮಾರು ೨೮೦೦–೩೦೦೦ ಕ್ಯಾಲರಿ ಶಕ್ತಿ ಬೇಕಾಗುತ್ತದೆಂ
ಕಂಡು ಹಿಡಿದಿರುವರು. ಆದರೆ ಈ ಅಂಕಿಗಳು ಜನರ ಮೈಕಟ್ಟು, ಅವರ ಚಟಗಳ
ಇರುವ ಪ್ರದೇಶದ ಹವಾಮಾನ ಮುಂತಾದ ಸಂಗತಿಗಳ ಮೇಲೆಯೂ ಅವಲಂ
ಸಿರುತ್ತವೆ. (ಕ್ಯಾಲರಿ ಎಂದರೆ ಸೆಕೆಯನ್ನು ಅಳೆಯುವ ಒಂದು ಅಳತೆ.) ದೊ
ದೊಡ್ಡ ಮನೆಗಳಲ್ಲಾಗಲಿ ಬೋರ್ಡಿಂಗುಗಳಲ್ಲಾಗಲಿ ಅಡಿಗೆಗೆ ಸಾಮಾನುಗಳನ
ತೂಕ ಮಾಡಿಕೊಡುವಾಗ ಈ ಆಹಾರಗಳಿಂದ ಎಷ್ಟು ಸೆಕೆ ಉತ್ಪನ್ನವಾಗಬಹುದ
ಮತ್ತು ಬೋರ್ಡಿಂಗಿನಲ್ಲಿಯ ಜನರಿಗೆ ಬೇಕಾಗುವ ಶಕ್ತಿ ಎಷ್ಟು? ಎಂಬ ಸಂಗ
ಗಳನ್ನು ಎಲ್ಲ ಚಾಲಕರು ಲಕ್ಷದಲ್ಲಿ ಇಡಬೇಕು. ಸಣ್ಣ ಮಕ್ಕಳ ವಸತಿ ಸಂಸ್ಥೆಗಳ
ಅನ್ನಛತ್ರಗಳು, ಸದಾವರ್ತಗಳು ಇಂತಹ ಸ್ಥಳಗಳಲ್ಲಿ ಇದರ ಮಹತ್ವವು ಇನ
ಹೆಚ್ಚಿಗೆ ಇರುವದು.

ಸಸಾರಜನಕ ದ್ರವ್ಯಗಳು— ಎಲ್ಲ ದೃಷ್ಟಿಯಿಂದಲೂ ಸಮತೋಲವಾ
ಆಹಾರವನ್ನು ನಿರ್ದಿಷ್ಟ ಮಾಡುವಾಗ ಆಹಾರದಿಂದ ಉಂಟಾಗುವ ಶಕ್ತಿಯ
ಕಡೆಗಷ್ಟೇ ಲಕ್ಷ್ಯವನ್ನು ಪೂರೈಸಿದರೆ ಸಾಲದು. ನಿರ್ಮಾಣ ಸಾಮಗ್ರಿಗಳನ್ನ
ತಯಾರಿಸುವಂಥ ಮತ್ತು ತುಸುಮಟ್ಟಿಗೆ ಸವಕಳಿಯನ್ನು ಹೋಗಲಾಡಿಸುವದಕ್ಕೆ
ಬೇಕಾಗುವ ಶಕ್ತಿಯನ್ನು ಹುಟ್ಟಿಸುವಂಥ ಸಸಾರಜನಕ ದ್ರವ್ಯಗಳುಳ್ಳ ಆಹಾರ
ಕಡೆಗೆ ಮುಖ್ಯವಾಗಿ ನೋಡತಕ್ಕದ್ದು. ಬೆಳಿಗೆಯ ಸಣ್ಣ ಮಕ್ಕಳಿಗೂ ಗರ್ಭಿಣಿ
ಯರಿಗೂ ಇವು ಹೆಚ್ಚಾಗಿ ಬೇಕಾಗುವವು. ೧೮–೬೦ ವರುಷ ವಯಸ್ಸಿನ ಪ್ರೌಢ
ವಯಸ್ಕರಿಗೆ ದಿನಾಲು ಸುಮಾರು ೬೫ ಗ್ರಾಮುಗಳಷ್ಟು ಸಸಾರಜನಕ ದ್ರವ್ಯ
ಗಳು ಬೇಕಾದರೆ ೧೦–೧೫ ವರುಷ ವಯಸ್ಸಿನ ಹುಡುಗರಿಗೆ ಸುಮಾರು ೪೦ ಗ್ರಾಂ
ಬೇಕಾಗುವವೆಂದು ಆಹಾರ ಶಾಸ್ತ್ರತಜ್ಞರು ಕಂಡುಹಿಡಿದಿದ್ದಾರೆ. ನಾವು ದಿನಾಲ

ಪಡುಕೊಳ್ಳುವ ಆಹಾರದಲ್ಲಿ ಟ್ಟಿ ದಷ್ಟು ಈ ದ್ರವ್ಯವು ಇರುವದು ವಿಹಿತವೆಂದು ಪೇಮಬರುತ್ತದೆ. ಪ್ರಾಣಿಜ ಪದಾರ್ಥಗಳಲ್ಲಿ ಅಡಕವಾಗಿರುವ ಪ್ರೋಟೀನುಗಳು ವಸ್ತುತಿಜನ್ಯವಾದವುಗಳಿಗಿಂತ ಹೆಚ್ಚು ಯೋಗ್ಯವಾದಂಧವು. ಯಾಕಂದರೆ ಅವು ಶರೀರದಲ್ಲಿಯ ನಿರ್ಮಾಣಸಾಮಗ್ರಿಗಳಲ್ಲಿ ತೀವ್ರವಾಗಿಯೂ ಸುಲಭವಾಗಿಯೂ ರೂಪಾಂತರವನ್ನು ಹೊಂದುತ್ತವೆ. ಅಂತರರಾಷ್ಟ್ರೀಯ ಸಂಘಡಣೆಯ ಪರವಾಗಿ ಸಂಶೋಧಿಸಲಿಕ್ಕೆಂದು ನೇಮಿಸಲ್ಪಟ್ಟ ಕಮಿಟಾಶನ್ನಿನ ಸದಸ್ಯರೂ ಇದೇ ರೀತಿಯಾಗಿ ನಿರ್ಣಯಪಟ್ಟಿರುವರು.

ಪ್ರೋಟೀನಯುಕ್ತ ಆಹಾರವನ್ನು ಹೆಚ್ಚಾಗಿ ಸೇವಿಸಿದರೆ ರೂಪಾಂತರ ವಾಗದೆ ಎಷ್ಟೋ ಆಹಾರವು ಕರುಳಿನಲ್ಲಿ ಉಳಿದು ಕೊಳೆಯುಹತ್ತುವದು. ಹೀಗಾಗುವದರಿಂದ ಅನೇಕ ವಿಷಯುಕ್ತ ವಾಯುಗಳು ಉತ್ಪನ್ನವಾಗಿ ರಕ್ತದಲ್ಲಿ ಬೆರೆತುಕೊಳ್ಳುವವು. ಇದರಿಂದ ತಲೆಶೂಲಿ, ದಣಿವು, ಬಾವು ಮುಂತಾದ ರೋಗ ಗಳು ಉದ್ಭವಿಸುವವು. ಅದೇ ಪ್ರೋಟೀನಯುಕ್ತ ಆಹಾರದ ಪ್ರಮಾಣವು ಕಮ್ಮಿಯಾದರೆ ನಮ್ಮ ದೇಹದ ಬೆಳೆವಣಿಗೆಯು ಯೋಗ್ಯವಾಗಿ ಸಾಗಲಾರದು. ಸಕಳೆಯು ಪೂರ್ಣವಾಗಿ ತುಂಬಿ ಬರಲಾರದು. ಹೀಗಾಗುವದರಿಂದ ಬೆಳೆವಣಿ ಗೆಯು ಕುಗ್ಗುವದು. ಸ್ನಾಯುಗಳು ಬಲಹೀನವಾಗುವವು. ಸಹನಶೀಲತೆಯು ಕಮ್ಮಿಯಾಗುವದು. ಮಾನಸಿಕ ಮತ್ತು ಶಾರೀರಿಕ ಶ್ರಮಗಳನ್ನು ಮಾಡಲು ಸಾಧ್ಯವಾಗಲೂ ನಿರುತ್ಸಾಹವು ತಲೆದೋರುವದು. ಮುಪ್ಪು ತೀವ್ರಗತಿಯಿಂದ ಬರುವದು. ಇದಲ್ಲದೆ ಮನುಷ್ಯನಲ್ಲಿಯ ರೋಗ ಪ್ರತೀಕಾರಕ ಶಕ್ತಿಯು ಸಹ ಕಡಿಮೆಯಾಗುವದು.

ಪ್ರೋಟೀನ ದ್ರವ್ಯವು ಮುಖ್ಯವಾಗಿ ಬೇಳೆ ಕಾಳುಗಳಲ್ಲಿಯೂ ಮಾಂಸದ ಜಾತಿಯಲ್ಲಿಯೂ ಹೆಚ್ಚು ಪ್ರಮಾಣದಲ್ಲಿರುತ್ತದೆ. ಹೆಸರಿನಲ್ಲಿ ೨೩.೯೬,* ಕಡಲೆ ಯಲ್ಲಿ, ಉದ್ದು ೨೩.೯೫, ಸೋಯಾಬೀನ ೪೩.೨೨, ಇವುಗಳು ಮುಖ್ಯವಾದ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಬೇಳೆಕಾಳುಗಳು.

ಗೋಮಾಂಸದಲ್ಲಿ ೨೨.೬೧, ಮೀನ ೨೨.೬, ತತ್ತಿ ೧೩.೩೩, ಮುಖ್ಯ ವಾದವುಗಳು. ಎಮ್ಮೆಯ ಹಾಲಿನಲ್ಲಿ ಪ್ರೋಟೀನ ದ್ರವ್ಯವು ೪.೭೫, ಗಿಣ್ಣದಲ್ಲಿ ೧೩ ಇರುತ್ತದೆ. ಕೆಲವು ಮಸಾಲೆ ಸಾಮಾನುಗಳಲ್ಲಿ ಇದು ತುಸು ಹೆಚ್ಚು ಪ್ರಮಾಣದಲ್ಲಿದ್ದುದು ಕಂಡುಬರುತ್ತದೆ. ಸಾಸಿವೆಯಲ್ಲಿ ೨೨.೦೪ ಜೀರಿಗೆ ೧೫.೪೧, ಮೆಣಸು ೧೧.೫೩, ಅರಿಷಣ ೬.೩೩, ಇವು ಸಾಮಾನ್ಯವಾಗಿ ಉಪಯೋಗಿಸುವಂಥ ಸಾಮಾನುಗಳು.

---

* ಇಲ್ಲಿ ಮುಂದಿನ ಅಂಕಿಗಳು ಪರ್ಸೆಂಟ ಅಂದರೆ ೧೦೦ ಕ್ಕೆ ಎಂದು ತಿಳಿಯಬೇಕು.

ಎಣ್ಣೆಯ ಕಾಳುಗಳಲ್ಲಿ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಕಾಣಬ
ಮುಖ್ಯವಾಗಿ ಬದಾಮು ೨೦.೭೫, ಹುರಿದ ನೆಲಗಡಲೆ ೩೧.೫೪, ಗೋ
೨೧.೧೯, ಎಳ್ಳು ೧೮.೩೩,

ತೃಣಧಾನ್ಯಗಳಲ್ಲಿ ಹೆಚ್ಚಿನ ಪ್ರಮಾಣವೆಂದರೆ ಗೋದಿಯಲ್ಲಿ
ಜೋಳ ೧೦.೪೨, ಸೆಜ್ಜೆ, ೧೧.೭೯, ಅಕ್ಕಿ ೬.೮೫, ಇವು ಮುಖ್ಯವಾದ
ಕಾಯಿಪಲ್ಯಗಳಲ್ಲಿಯೂ ಹಣ್ಣುಹಂಪಲಗಳಲ್ಲಿಯೂ ಪ್ರೋಟೀನ ದ್ರ
ತುಸು ಪ್ರಮಾಣದಲ್ಲಿರುವದು.

ಒಟ್ಟಿನ ಮೇಲೆ ಹೇಳಬೇಕಾದರೆ ಹಾಲಿನಲ್ಲಿ ಪ್ರೋಟೀನದ ಪ್ರಮಾ
ಕಡಿಮೆಯಿದ್ದರೂ ಈ ಆಹಾರವು ಎಲ್ಲರಿಗೂ ಆದರಲ್ಲಿ ಬೆಳಿಗೆಯ ಸಣ್ಣ ಮ
ಗಂತೂ ತೀರ ಯೋಗ್ಯ ಆಹಾರವೆಂದು ಎಣಿಸಲ್ಪಟ್ಟಿರುತ್ತದೆ.

ನೆಣ— ನೆಣಯುಕ್ತ ಆಹಾರಗಳು ನಮ್ಮ ಶರೀರದ ಸಪಕಳೆಯ
ಪೂರೈಸುವ ಶಕ್ತಿಯನ್ನು ತುಂಬಿಕೊಡುತ್ತವೆ. ಇವು ಪ್ರೋಟೀನ ಮ
ಕಾರ್ಬೋ ಹಾಯಡ್ರೇಟುಗಳಿಗಿಂತ ಇಮ್ಮಡಿ ಶಕ್ತಿಯನ್ನು ಉಂಟುಮಾಡು
ದೇಹದ ಕೆಲವು ಭಾಗಗಳಲ್ಲಿ ನೆಣವು ಉಳಿದು ಅಲ್ಲಿ ದೇಹಕ್ಕೆ ಬೇಕಾಗುವ
ಯನ್ನು ತನ್ನಲ್ಲಿ ಕಾದಿಟ್ಟುಕೊಂಡಿರುತ್ತದೆ. ನೆಣಗಳು ನಿರ್ಮಾಣ ಸಾಮ
ಗಳನ್ನು ಹೆಚ್ಚು ಪುಷ್ಟೀಕರಿಸುತ್ತವೆ. ದೇಹದಲ್ಲಿಯ ಕ್ಷಾರಗಳನ್ನು ರೂಪಾ
ಸಲು ಸಹಾಯಮಾಡುತ್ತವೆ. ನೆಣಗಳು ಯೋಗ್ಯಪ್ರಮಾಣದಲ್ಲಿದ್ದರೆ ಆ
ಕೂಡ ಇದ್ದ ವಿಟಾಮಿನ್ (ಅ) ಎಂಬ ಜೀವಸತ್ವದ ಮೂಲಕವಾಗಿ ರೋಗಗಳ
ಪ್ರತಿಬಂಧಿಸುವ ಶಕ್ತಿಯುಂಟಾಗುವದು. ಇವುಗಳು ದೊಡ್ಡವರಿಗಿಂತ ಬೆಳೆ
ಚಿಕ್ಕ ಮಕ್ಕಳಿಗೆ ಹೆಚ್ಚು ಅವಶ್ಯವಾಗಿವೆ. ಇವುಗಳ ಪ್ರಮಾಣವು ಮಿತಿಮೀ
ಅಪಚನವೂ ಮಲಬದ್ಧತೆಯೂ ಉಂಟಾಗುವವು. ಅವು ಪೂರ್ಣವಾಗಿ ರೂಪಾ
ಹೊಂದದೆ ಉಳಿದರೆ ದೇಹದಲ್ಲಿ ಉಳಿದು ನಿಷ್ಕಾರಣವಾಗಿ ಮನುಷ್ಯರು ಗಡ
ವಾಗಿ ಜಡದೇಹಿಗಳಾಗುವರು.

ನಾವು ದಿನಾಲು ಸುಮಾರು ೪೫.೬೦ ಗ್ರಾಮುಗಳಷ್ಟು ಎಂದರೆ ಸುಮ
೧½–೨ ಔಂಸ ನೆಣವನ್ನು ಸೇವಿಸಬೇಕು.

ಹಾಲು, ತತ್ತಿ, ಗಿಣ್ಣ, ಬೆಣ್ಣೆ ಅಥವಾ ತುಪ್ಪ ಇವುಗಳಂಥ ಪ್ರಾಣಿಜ ಪದ
ಗಳಲ್ಲಿ ನೆಣವು ತೀರ ಹೆಚ್ಚು ಪ್ರಮಾಣದಲ್ಲಿರದಿದ್ದರೂ ವಿಟಾಮಿನ್ 'ಅ'
ಜೀವಸತ್ವವನ್ನೊಳಗೊಂಡಿದ್ದರಿಂದ, ಅವು ದೇಹದಲ್ಲಿ ರೂಪಾಂತರಿಕೆಯ ಕ
ಯಿಂದ ಹೆಚ್ಚು ಮಹತ್ವದ್ದಿರುತ್ತವೆ.

ತತ್ತಿಯಲ್ಲಿ ನೆಣದ ಪ್ರಮಾಣವು ೧೩.೩ಗ್ರಿ, ಮಾಂಸ ೧೩.೩ಗ್ರಿ, ಕುರಿಯು ೃತ ೭.೪ಗ್ರಿ, ಇದರಲ್ಲಿ ವ್ಹಿಟಾಮಿನ್ (ಅ) ದ ಪ್ರಮಾಣವು ಮಿತಿಮೀರಿ ವದರಿಂದ ಹೆಚ್ಚು ಉಪಯುಕ್ತ. ಎಮ್ಮೆಯಹಾಲಿನಲ್ಲಿ ನೆಣವು ೭.೭,೧೦೦ಗ್ರಿದಲ್ಲಿ ೧ ವ್ಹಿಟಾಮಿನ್ (ಅ) ದ ಪ್ರಮಾಣವಾದರೂ ಸಾಕಷ್ಟು ಇರುವದು.

ಇನ್ನು ಮಸಾಲೆ ಸಾಮಾನುಗಳಲ್ಲಿ ನೆಣವು ತುಸು ಹೆಚ್ಚು ಪ್ರಮಾಣದಲ್ಲಿ ಗ್ಯೂ ವ್ಹಿಟಾಮಿನ್ (ಅ) ದ ಅಂಶವು ತೀರ ಕಡಿಮೆ ಇರುವದರಿಂದ ಅವುಗಳ ಯೋಗವು ಸಾಕಷ್ಟಿಲ್ಲ. ಆದರೂ ಕೋತಂಬ್ರಿಯು ಕಾಳುಗಳಲ್ಲಿ ಇದರ ಪ್ರಮಾ ೧೪ ಇದ್ದರೂ ಅದರ ಗೂಡ ವ್ಹಿಟಾಮಿನ್ (ಅ) ದ ಅಂಶವು ಹೆಚ್ಚಿರು ೩ದ ಅದನ್ನು ನಮ್ಮ ಆಹಾರದಲ್ಲಿ ಸೇವಿಸುವದು ಒಳ್ಳೆಯದು. ಒಣಹೆಣ ಕಾಯಿಯನ್ನು ಇದೇ ಕಾರಣದಿಂದ ತುಸು ಸೇವಿಸಲು ಅಡ್ಡಿ ಇಲ್ಲ.

ತೆಂಗು ನೆಲಗಡಲೆ ಸಾಸಿವೆ ಗೋಡಂಬಿ ಎಳ್ಳು ಮುಂತಾದವುಗಳಲ್ಲಿ ನೆಣದ ಾಣವು ಸುಮಾರು ೪೦-೬೦ ಇದ್ದಾಗ್ಯೂ ಅವುಗಳಲ್ಲಿ ವ್ಹಿಟಾಮಿನ್ ಅ ದ ಾಣವು ತೀರ ಕನಿಷ್ಠವಿರುವದರಿಂದ ನಮ್ಮ ದೇಹಕ್ಕೆ ಅವುಗಳ ಉಪಯೋ ಸಾಕಷ್ಟು ಆಗುವದಿಲ್ಲ.

ಬೇಳೆಕಾಳುಗಳ ಬಗ್ಗೆ ಹೇಳಬೇಕಾದರೆ ಸೋಯಾಬೀನದಲ್ಲಿ ಮಾತ್ರ ್ಯ ವ್ಹಿಟಾಮಿನ್ ಅ ದ ಅಂಶವೂ ಸಾಕಷ್ಟು ತೃಪ್ತಿಕರ ಪ್ರಮಾಣದಲ್ಲಿರುತ್ತದೆ. ವುಗಳಲ್ಲಿ ನೆಣವು ತೀರ ಕಡಿಮೆ. ಆದ್ದರಿಂದಲೇ ಶಾಕಾಹಾರಿಗಳಿಗೆ ಅನೇಕ ಯಿಂದ ಸೋಯಾಬೀನುಗಳು ಹೆಚ್ಚು ಉಪಯುಕ್ತವೆಂದು ಈಗೀಗ ಕಂಡು ತ್ತಿರುವದು. ಸೋಯಾಬೀನ ೧೯.೫ ಆದ್ದರಿಂದ ಅದನ್ನು ಹೆಚ್ಚಾಗಿ ಬೇಕು.

ಉಳಿದ ಎಲ್ಲ ತರದ ಆಹಾರದಲ್ಲಿ ನೆಣವು ತೀರ ಕಡಿಮೆ ಪ್ರಮಾಣದಲ್ಲಿರುವದ ನೆಣದ ಪೂರೈಕೆಯನ್ನು ಹೆಚ್ಚಾಗಿ ಹಾಲು ಸೇವಿಸುವದರಿಂದ ತುಂಬ ಕು. ಎಳ್ಳೆಣ್ಣೆ ಕೊಬ್ಬರಿಎಣ್ಣೆ ಕುಸಿಬಿಯು ಎಣ್ಣೆಯಂಥ ಶುದ್ಧವಾದ ಮತ್ತು ಾ ಇರುವ ತೈಲಗಳನ್ನು ಸೇವಿಸುವಾಗ ಅವುಗಳಲ್ಲಿಯು ವ್ಹಿಟಾಮಿನ್ ಅ ದ ತೆಯನ್ನು ತುಂಬ ತರಲಿಕ್ಕೆ ಯಾವಾಗಲೂ ತಾಜಾ ಹಸಿಪಲ್ಯಗಳನ್ನು ಾಗಿ ಸೇವಿಸಬೇಕು.

ಕಾರ್ಬೊ ಹಾಯಡ್ರೇಟುಗಳು— ಇವು ನಮ್ಮ ಶರೀರಕ್ಕೆ ಮುಖ್ಯವಾಗಿ ುನ್ನು ಪೂರೈಸುವಂಥ ದ್ರವ್ಯಗಳು. ಇವು ಉಳಿದವುಗಳ ಕೂಡ ಯೋಗ್ಯ

ಪ್ರಮಾಣದಲ್ಲಿದ್ದರೆ ಪಚನಕ್ರಿಯೆಯು ಚೆನ್ನಾಗಿ ಸಾಗುತ್ತದೆ. ಆದ್ದರಿಂದ ಇ
ಳ್ಳು ಆಹಾರಗಳ ಸಮಾವೇಶವು ನಮ್ಮ ಪ್ರತಿದಿನದ ಆಹಾರದಲ್ಲಿ ಪ್ರಾಮುಖ್ಯ
ವಾಗಿ ಆಗಬೇಕು. ಸಾಮಾನ್ಯವಾಗಿ ನೋಡಲಾಗಿ ಈಗ ನಾವು ದಿನಾಲು ತೆಗೆ
ಕೊಳ್ಳುವ ಆಹಾರದಲ್ಲಿ ಇವು ಬಹಳ ಹೆಚ್ಚಿನ ಪ್ರಮಾಣದಲ್ಲಿದ್ದುದು ಕಂ
ಬರುತ್ತದೆ. ಹೀಗಾಗುವದರಿಂದ ಪಚನವಾಗದೆ ಉಳಿದ ಕಾರ್ಬೋ ಹಾಯಡ್ರೇಟ
ಯುಕ್ತವಾದ ಆಹಾರವು ಕರುಳಿನಲ್ಲಿ ಉಳಿದು ಹುಳಿಯಹತ್ತುತ್ತದೆ. ಮ
ಅಪಾಯಕಾರಕ ವಾಯುಗಳನ್ನೂ ಆಮ್ಲಗಳನ್ನೂ ಅಲ್ಲಿ ಸಿದ್ಧಪಡಿಸಿ ಬೇರೆ ದ್ರ
ಗಳಿಂದಾಗುವ ಯೋಗ್ಯ ಪೋಷಣವನ್ನು ಪ್ರತಿಬಂಧಿಸುತ್ತದೆ. ಕಾರ್ಬೋ
ಹಾಯಡ್ರೇಟಗಳುಳ್ಳ ಆಹಾರವನ್ನು ಮಿತಿಮೀರಿ ಸೇವಿಸುವದರಿಂದ ಹಲ್ಲು
ಬೇಗ ಕೆಡುತ್ತವೆಂದು ತಜ್ಞರ ಮತ. ನಮ್ಮಲ್ಲಿ ಅನೇಕರ ಆಹಾರವನ್ನು ಈ
ಪರೀಕ್ಷಿಸಿ ನೋಡಲಾಗಿ ಅದು ಸಮತೋಲವಾಗಿ ಪರಿಣಮಿಸಿರುವದಿಲ್ಲೆಂಬ
ಕಂಡುಬರುತ್ತದೆ.

ಈ ದೋಷನಿವಾರಣೆಗಾಗಿ ನಾವು ನಮ್ಮ ಆಹಾರದಲ್ಲಿ ಸಸಾರಜನಕ ದ್ರ
ಸೆಣ ಮತ್ತು ಕ್ಷಾರಗಳ ಪ್ರಮಾಣವನ್ನು ಮೊದಲು ನಿರ್ದಿಷ್ಟಮಾಡಿಕೊ
ಆ ಮೇಲೆ ಒಟ್ಟಿಗೆ ನಮಗೆ ಅವಶ್ಯವಿರುವ ಶಕ್ತಿಗೆ ಬೇಕಾಗುವದಕ್ಕೆ ಕಾರ್ಬೋ
ಹಾಯಡ್ರೇಟಗಳುಳ್ಳ ಆಹಾರವನ್ನು ಮಿಶ್ರಮಾಡಿಕೊಳ್ಳುವದು ಯಾವಾಗ
ಹಿತವು.

ಕಾರ್ಬೋ ಹಾಯಡ್ರೇಟುಗಳು ಶಕ್ತಿಯ ಮುಖ್ಯ ಉತ್ಪಾದಕಗಳ
ಮೇಲೆ ಹೇಳಿದೆ. ಆದ್ದರಿಂದ ನಮ್ಮ ಸಮತೋಲವಾದ ಆಹಾರದಲ್ಲಿ ಈ ದ್ರ
ವುಳ್ಳ ಆಹಾರವನ್ನು ಯೋಗ್ಯ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಹೀಗೆ ಸ
ಲಾಗಿ ಅವರ ಪ್ರಮಾಣವು ನಮ್ಮ ಸಮತೋಲವಾದ ಆಹಾರದ ಶ್ಲಾಘನೆ
ಇರುತ್ತದೆ.

ಇನ್ನು ನಾವು ಸಾಮಾನ್ಯವಾಗಿ ತೆಗೆದುಕೊಳ್ಳುವ ಆಹಾರದಲ್ಲಿಯ ಕಾರ್ಬೋ
ಹಾಯಡ್ರೇಟಿನ ಪ್ರಮಾಣವನ್ನು ನೋಡುವಾ.

ಇದರ ಪ್ರಮಾಣವು ಬೆಲ್ಲ ಸಕ್ಕರೆಗಳಲ್ಲಿ ೧೦೦ಕ್ಕೆ ೯೫.೯ ಪಾಲು ಇರು
ತೃಣಧಾನ್ಯಕ್ಕೆ ಸೇರಿದ ಅಕ್ಕಿಯಲ್ಲಿ ೭೯.೧ಳ, ಸಾಬುಅಕ್ಕಿಯಲ್ಲಿ ೮೭.೦೯, ಜೋ
೭೩.೯೯, ಗೋದಿಯಲ್ಲಿ ೭೧.೩, ಇರುವದು. ಇವು ಮುಖ್ಯವಾವುಗ

ಬೇಳೆಕಾಳುಗಳಲ್ಲಿ ಈ ದ್ರವ್ಯದ ಪ್ರಮಾಣವು ಸುಮಾರು ೫೦.೬೦
ತ್ತದೆ. ಆದರೆ ಸೋಯಾಬೀನದಲ್ಲಿ ಮಾತ್ರ ಅದು ಕಡಿಮೆ ಎಂದರೆ ೨೦

ಮಾಣದಲ್ಲಿರುತ್ತದೆ. ಸಾಮಾನ್ಯವಾಗಿ ನಾವು ಸೇವಿಸುವ ಹಸಿ ಕಾಯಿಪಲ್ಯ
ಲ್ಲಿ ಇದರ ಪ್ರಮಾಣವು ೨೦ ಕ್ಕಿಂತ ಹೆಚ್ಚಿಗೆ ಕಂಡುಬರುವದಿಲ್ಲ. ಆದರೆ ಬಟಾಟಿ
ಪ್ಪ ಗೆಣಸುಗಳಂಥ ಗಡ್ಡೆಗಳಲ್ಲಿ ಮಾತ್ರ ೨೦ರಿಂದ ೩೦ ರ ವರೆಗೆ ಕಾಣಬಹುದು.
ಣಸಾಪಾರದಲ್ಲಿಯಂತೂ ಇದರ ಪ್ರಮಾಣವು ೫ ಕ್ಕಿಂತ ಕಡಿಮೆ ಎಂದು ಹೇಳ
ಬಹುದು. ಎಮ್ಮೆಯ ಹಾಲಿನಲ್ಲಿ ೪·೪೫, ತಾಯಿಯ ಹಾಲಿನಲ್ಲಿ ೭·೨, ಮೊಸರಿ
ನಲ್ಲಿ ೫·೩ ಕಾಣಬಹುದು. ಹಣ್ಣುಗಳಲ್ಲಿ ಸುಮಾರು ೧೫–೨೦ ಪ್ರಮಾಣದಲ್ಲಿ
ಣಬಹುದು. ಆದರೆ ಕೆಲವುಗಳಲ್ಲಿ ಮಾತ್ರ ವಿಶೇಷ ಪ್ರಮಾಣದಲ್ಲಿಯೂ ಕೂಡ
ಇರುತ್ತದೆ. ಉದಾ:— ಉತ್ತುತ್ತಿ ೬೭·೩೧, ಬಾಳೆಯಹಣ್ಣು ೫೬·೪೧, ಹುಣಸೆ
೫೫, ಮಸಾಲೆಯ ಸಾಮಾನುಗಳಲ್ಲಿ ಕಾರ್ಬೋ ಹಾಯಡ್ರೇಟದ ಪ್ರಮಾಣ
ಸ್ವಲ್ಪ ೫೦·೬೦ ಪ್ರಮಾಣದಲ್ಲಿ ಕಾಣುತ್ತೇವೆ. ಉದಾ— ಅರಿಷಣ ೬೯·೩೮,
ಮೆಣಸು ೬೭·೩೮, ಲವಂಗ ೪೭·೪೩, ಬಳ್ಳೊಳ್ಳಿ ೭೪·೯೫, ಸಾಸಿವೆ ೨೩·೪೭,
ಸ್ಪೇಗಡ್ಡಿ ೧೩·೨೪, ಮೆಣಸು ೪೯·೫, ಕೊತಂಬರಿ ಬೀಜ ೩೬·೭೬,

(ಮುಂದೆಸಾಗುವದು)

ಪ್ರಾಥಮಿಕ ಶಿಕ್ಷಣದ ಇನಸ್ಪೆಕ್ಟಿಂಗ ಆಫೀಸರರ ಬಗ್ಗೆ ಪುಣೆಯಲ್ಲಿ ನೆರೆದ ರಿಫ್ರೇಶರ ಕೋರ್ಸ.

ಲೇ:-ಶ್ರೀ. ಕೆ. ಬಿ. ತೇರಗಾಂವಕರ ಬಿ. ಎಸ್. ಸಿ. ಬಿ. ಟಿ. ಅಸಿ. ಮಾ. ಟ್ರೇ. ಕಾ. ಧಾರವಾಡ

ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂಥವರಿಗೋಸ್ಕರವಾಗಿ ನಮ್ಮ
ರಾಜ್ಯದ ವಿದ್ಯಾಖಾತೆಯ ಡಾಯರೆಕ್ಟರರಾದ ಮೆ. ಗ್ರೀವ್ಹ್ಸ ಸಾಹೇಬರು ತಮ್ಮ
ಅಧ್ಯಕ್ಷತೆಯ ಕೆಳಗೆ ಹೋದ ಅಕ್ಟೋಬರ ೩೫ರಿಂದ ೩೦ರ ವರೆಗೆ ಪುಣೆಯಲ್ಲಿ ಒಂದು
ರಿಫ್ರೇಶಣವರ್ಗವನ್ನು ಸಾಗಿಸಿದರು. ಈ ವರ್ಗಕ್ಕೆಂದು ಇಲಾಖೆಯಲ್ಲಿಯ ಬೇರೆ ಬೇರೆ
ಭಾಗಗಳಿಂದ ಡಿ. ಸ್ಕೂ. ಬೋರ್ಡುಗಳ ಎ. ಓ. ರವರೂ ಸುಪರವಾಯಿಜರರೂ
ಜಿಲ್ಲೆಗಳ ಟ್ರೇನಿಂಗಶಾಲೆಗಳ ಶಿಕ್ಷಕರೂ ಕೂಡಿ ಸುಮಾರು ೨೦೦ ಕ್ಕೆ ಮಿಕ್ಕು
ಪ್ಪಟ್ಟ ಜನರು ನೆರೆದಿದ್ದರು. ವಿದ್ಯಾಖಾತೆಯಲ್ಲಿಯ ವರಿಷ್ಠ ಅನುಲದಾರರೂ
ಮುಂಬಯಿ ಇಲಾಖೆಯಲ್ಲಿಯ ಸೆಕಂಡರಿ ಟ್ರೇನಿಂಗ ಕಾಲೇಜದ ಶಿಕ್ಷಣಜ್ಞರೂ
ಶಿಕ್ಷಣಸಂಸ್ಥೆಗಳಲ್ಲಿ ಸುರಿತ ಅನುಭವಿಕರೂ ತಮ್ಮ ಅಧಿಕಾರಯುಕ್ತ ಅಸ್ಖಲಿತವಾಣಿ
ಯಿಂದ ನೆರೆದ ಜನರಿಗೆ ತಿಳಿಯುವಂತೆಯೂ ಬೋಧಪ್ರದವಾಗುವಂತೆಯೂ ಅವರಲ್ಲಿ

ನವಚೈತನ್ಯವನ್ನು ಹುಟ್ಟಿಸುವಂತೆಯೂ ವ್ಯಾಖ್ಯಾನಗಳನ್ನು ಕೊಟ್ಟ
ಆದ್ದರಿಂದ ಅಲ್ಲಿ ಕೂಡಿದ ಜನರಿಗೆ ತಾವು ಹೊತ್ತ ಮಹತ್ವವಾದ ತಮ್ಮ ಕರ್ತವ್ಯ
ಬಗ್ಗೆ ಮತ್ತು ಬೇರೆ ಅನೇಕ ವಿಷಯಗಳ ಬಗ್ಗೆ ಹೊಸ ವಿಚಾರಗಳನ್ನು ಕ್ಷ
ಅವುಗಳ ಸದುಪಯೋಗವನ್ನು ಮಾಡಿಕೊಳ್ಳಬೇಕೆಂಬ ವಿಚಾರವು ಅನ
ಹೊಳೆದಿರಲಿಕ್ಕೆ ಸಾಕು.

ಪ್ರಾಥಮಿಕ ಶಿಕ್ಷಣದ ಬಗ್ಗೆ ಅದರ ಆರ್ಥಿಕಸಮಸ್ಯೆ, ಮೇಲ್ವಿಚಾರ
ಚಿತ್ರಕಲೆ, ಗಣಿತ, ಭಾಷೆ, ಇತಿಹಾಸ, ಭೂಗೋಲ, ಭೂಮಿತಿ, ಪ್ರಕೃತಿವಿಮರ್ಶ
ಕೈಕೆಲಸ, ಶಾಸ್ತ್ರೀಯವಿಜ್ಞಾನ ಇವೆಲ್ಲವುಗಳ ಬಗ್ಗೆ ವ್ಯಾಖ್ಯಾನಗಳಾದ
ಇದಲ್ಲದೆ ಒಂದೆರಡುಸಾರೆ ವಾದವಿವಾದಗಳೂ ಆದವು. ಮೇಲ್ವಿಚಾರಣೆಗ
ಪರೀಕ್ಷೆಗೂ ಇರುವ ಸಂಬಂಧ, ಪರೀಕ್ಷೆಯನ್ನು ತೆಗೆದುಕೊಳ್ಳುವ ಕಾಲ, ಮತ್ತ
ಆ ಕೆಲಸದಲ್ಲಿ ಪ್ರಾಥಮಿಕ ಶಾಲೆಯ ಹೆಡ್‌ಮಾಸ್ತರರ ಸಹಕಾರ, ಇತರ ಅಡ
ಇವುಗಳ ಬಗ್ಗೆ ಚರ್ಚೆಗಳಾದವು. ಆಗ ಪುಣೆಯಲ್ಲಿಯ ಕೆಲವು ಮುಖ್ಯ ಪ್ರಾಥಮಿ
ಶಾಲೆಗಳ ಶಿಕ್ಷಕರನ್ನೂ ಬರಮಾಡಿಕೊಂಡಿದ್ದರು. ಒಂದೆರಡು ದಿನ ಸಾಯಂಕಾ
ಮ್ಯಾಜಿಕ್‌ಲ್ಯಾಂಟರ್ನ ಮತ್ತು ಸಿನೇಮಾಗಳ ಮುಖಾಂತರ ಉಪಯುಕ್ತವಾ
ವ್ಯಾಖ್ಯಾನಗಳೂ ಆದವು. ಈ ಮೇರೆಗೆ ಈ ಶಿಕ್ಷಣವರ್ಗವು ೬ನೆಯ ದಿನ ಕೊ
ಗಂಡಿತು. ಕಡೆಯ ದಿವಸ ಗ್ರೀವ್ಹ್ಸ ಸಾಹೇಬರು ಅಲ್ಲಿ ಬಂದ ಜನರಿಗೆ
ಉಪಹಾರವನ್ನು ಕೊಟ್ಟು ತಾವಾದರೂ ಎಲ್ಲರ ಕೂಡ ಕೂಡಿ ಭಾಗಿಗಳಾ
ಅವರನ್ನು ಬೀಳ್ಕೊಟ್ಟರು. ಶಿಕ್ಷಣ ವರ್ಗವು ಅತಿ ಯಶಸ್ವಿಯಾಗಿಯೂ ಮಾದರಿ
ದಾಗಿಯೂ ಸಂಭವಿಸಿತೆಂದು ಬೇರೆ ಹೇಳಬೇಕಿಲ್ಲ. ಅಲ್ಲಿ ಕಾರ್ಯವನ್ನ
ಕೈಕೊಂಡ ಮಹನೀಯರ ಕರ್ತವ್ಯದಕ್ಷತೆ, ಅವರು ತಮ್ಮ ಕರ್ತವ್ಯದ ಬ
ತೋರಿಸಿದ ಕಳವಳ ಇವುಗಳ ವಿಷಯವಾಗಿ ಅಲ್ಲಿ ಕೂಡಿದ ನಮ್ಮೆಲ್ಲರ ಮನಸ್ಸಿನ
ಸದಭಿಪ್ರಾಯಗಳು ಉಂಟಾಗಿರುವವು. ಇಂಥ ಶಿಕ್ಷಣ ವರ್ಗಗಳೂ ಶಿಕ್ಷ
ಸಪ್ತಾಹಗಳೂ ಆಗಾಗ ಆಗುತ್ತಿದ್ದರೆ ಶಿಕ್ಷಣದ ಹೊಸ ಹೊಸ ವಿಚಾರಗಳ
ಮತ್ತು ಹೊಸ ಹೊಸ ಪದ್ಧತಿಗಳೂ ಇವುಗಳ ಬಗ್ಗೆ ಪ್ರಖರವಾದ ಬೆಳಕುಬೀಳ
ಈಗ ಕೆಲಸಮಾಡುತ್ತಿದ್ದ ಅನೇಕರಿಗೆ ಯೋಗ್ಯದಾರಿಯನ್ನು ತೋರಿಸುವನೆಂಬು
ರಲ್ಲಿ ಸಂದೇಹವಿಲ್ಲ.

ಶಾಲೆಯಲ್ಲಿ ಕಲಿಸಬಹುದಾದ
ಪದ್ಯಗಳ ಸಂಗ್ರಹ

ಭಾರತ ರಾಮಾಯಣಗಳ ವಿಷಯವಾಗಿ ಮೊದಲಿನ ಪ್ರಾಸಾದಿಕ ಕನ್ನಡ ಗಳು ಬರೆದ, ಪದ್ಯಗಳು ಹೇರಳವಾಗಿ ದೊರೆಯುವವು. ಪದ್ಯಗಳನ್ನು ಕಲಿಸು ಗ ವಿಶೇಷವಾಗಿ ಹುಡುಗರಲ್ಲಿ ಭಾವನೆಗಳ ಬೆಳವಣಿಗೆಯ ವಿಷಯವಾಗಿಯೇ ಉದ್ದೇಶವನ್ನಿಟ್ಟುಕೊಂಡಿರುವದರಿಂದ ಈ ಉದ್ದೇಶವು ಇಂಥ ಪದ್ಯಗಳ ಂಪುಗಳಿಂದ ಈಡೇರುವದು, ಕೆಳಗೆ ಒಸೆಯ ಇಯತ್ತಿಗೆ ಅಥವಾ ಒಸೆಯ ಇಯ ಗೆ ಕಲಿಸಬಹುದಾದ ಒಂದು ವಿಷಯವನ್ನು ಪೂರ್ಣವಾಗಿ ವರ್ಣಿಸಿದ ಪದ್ಯಗಳ ೂರು ಗುಂಪು ಆವೆ.

ಈ ಕವಿತೆಗಳ ಪೂರ್ವಾಪರ ಸಂಬಂಧ

ಪಾಂಡವರು ತಮ್ಮ ವನವಾಸವನ್ನು ಮುಗಿಸಿದ ಬಳಿಕ ವಿರಾಟರಾಜನ ಜಧಾನಿಯಲ್ಲಿ ಒಂದು ವರ್ಷ ಅಜ್ಞಾತವಾಸವನ್ನು ಮಾಡಬೇಕೆಂದು ಅಲ್ಲಿಗೆ ಚ್ಛನ್ನ ವೇಷದಿಂದ ದ್ರೌಪದಿಯೊಂದಿಗೆ ಬಂದು ನಿಂತರು. ಪಾಂಡವರನ್ನು ಈ ನು ವರ್ಷದ ಅವಧಿಯಲ್ಲಿ ಕೌರವರು ಕಂಡುಹಿಡಿದದ್ದಾದರೆ. ಪಾಂಡವರು ತ್ತೆ ೧೨ ವರ್ಷ ವನವಾಸಕ್ಕೆ ತೆರಳಬೇಕೆಂದು ಮೊದಲೇ ಗೊತ್ತಾಗಿತ್ತು. ರವರು ಮೊದಲೇ ದುರುಳರು, ಪಾಂಡವರನ್ನು ಪರಿಪರಿಯಿಂದ ಹಿಂಸಿಸುವದೇ ರ ಉದ್ದೇಶವಾಗಿತ್ತು; ಆದುದರಿಂದ ಭೀಮನ ಪರಾಕ್ರಮದ ಪರಿಚಯಕ್ಕಾಗಿ ಶದೇಶಗಳಿಗೆಲ್ಲ ಜಟ್ಟಿಗಳನ್ನು ಕಳುಹಿದ್ದರು. ಇಷ್ಟರಲ್ಲಿ ಕೀಚಕನ ವಿಚಿತ್ರ ರಣದ ಸುದ್ದಿಯೂ ದೇಶದಲ್ಲೆಲ್ಲ ಹರವಿತು. ಈ ಎಲ್ಲ ಸಂಗತಿಗಳಿಂದ ವಿರಾಟ ದಲ್ಲಿ ಪಾಂಡವರಿರಬಹುದೆಂಬ ಸಂಶಯದಿಂದ ಸೈನ್ಯದೊಡನೆ ತ್ರಿಗರ್ತ ಕಡೆಗಳಿಂದ ಾಟನಗರಕ್ಕೆ ಕೌರವರು ಮುತ್ತಿಗೆ ಹಾಕಿದರು. ತ್ರಿಗರ್ತ ದೇಶಾಧಿಪತಿಯು ರ್ಯೋಧನನ ಪರವಾಗಿ ಯುದ್ಧಮಾಡಿ ವಿರಾಟರಾಜನನ್ನು ಸೆರೆಹಿಡಿದನು. ನ್ನಿಂದೆಡೆಗೆ ವಿರಾಟನ ಸೇನಾಪತಿಗಳು ಹೋಗಿ ಹೆಣಗಾಡಿ ಸೋತುಬಂದರು. ಗೆ ಎಲ್ಲೆಡೆಗಳಲ್ಲಿಯೂ ಕೌರವವೀರರ ರಣದುಂದುಭಿಯು ಮೊಳಗಲು ವಿರಾಟ ಜನ ಮಗನಾದ ಉತ್ತರನೆಂಬ ಸುಖಿಕುಮಾರನು ತಾನೇ ಯುದ್ಧಕ್ಕೆ ಹೊರಡ ಕೆಂದು ಅರಮನೆಯ ಹೆಂಗಳೆಯರ ಮುಂದೆ ತನ್ನ ಪರಾಕ್ರಮವನ್ನೂ ವಿಜಯ ನ್ನು ಕುರಿತು ಮೊದಲೇ ಆಡಿಕೊಳ್ಳಲಾರಂಭಿಸಿದನು. ಉತ್ತರನು ಯುದ್ಧಕ್ಕೆ

ಹೊರಡಲನುವಾದಾಗ ಸಾರಥಿಗಳೆಲ್ಲ ತೀರಿದ್ದರಿಂದ ಯಾರು ಸಾರಥಿಯಾ
ಕೆಂದು ಗಡಬಿಡಿಯು ಎದ್ದಾಗ ಬೃಹನ್ನಳೆಯು ತನ್ನ ವಿದ್ಯಾರ್ಥಿನಿಯಾದ ಉತ್ತ
ಸೈರಂಧ್ರಿಯಿಂದ ಸೂಚಿಸಿ ತಾನು ಸಾರಥಿಯಾಗುವೆನೆಂದು ಉತ್ತರನಿಗೆ ಪ್ರ
ತ್ಯಾನೆ. ಆ ಬಳಿಕ ಉತ್ತರನು ಬೃಹನ್ನಳೆಯನ್ನು ಅನೇಕಬಗೆಯಾಗಿ ಪರಿಷ
ಮಾಡಿ ನಿರ್ವಾಹವಿಲ್ಲದೆ ಒಪ್ಪಿ ಯುದ್ಧಕ್ಕೆ ಸಜ್ಜಾಗಿ ಹೊರಡುವ ಪೂರ್ವ
ಅರಮನೆಯ ಹೆಂಗುಸರ ಮುಂದೆ ಹೊಡಲು ಹೇಳಿದಂತೆ ತನ್ನ ಪೌರುಷ
ಕೊಚ್ಚಿಕೊಂಡ ಸಂಗತಿಯು ಬಳ್ಳೆಯ ಮನೋಹರವಾಗಿದೆ. ಈ ಪ್ರಸಂಗ
ಬಾಯ್ಬಡಕರ ಮಾತುಗಾರಿಕೆಯೂ ಇಂಥವರ ಪರಾಕ್ರಮದ ಕೊನೆಯ ಹುಡ
ನಿದರ್ಶನಕ್ಕೆ ಬರುವಂತೆ ಅವೆ.

ಕೌರವರ ಸೇನೆಯ ಅಬ್ಬರವನ್ನೂ ತಮ್ಮ ಸೈನಿಕರ ಪರಾಜಯ
ಕುರಿತು ಉತ್ತರನ ಮುಂದೆ ಸೇವಕನು ಬಿನ್ನಯಿಸುವಾಗ ಹೆಂಗಳೆಯ
ಖದಲ್ಲಿ ಉತ್ತರನ ವಚನಗಳು– ಕೌರವ ಸೈನ್ಯವನ್ನು ಅನುಲಕ್ಷಿಸಿ–

ನೂಕು ಕುನ್ನಿಯ ನಾಹವದ ಭೀ ।
ತಾಕುಲನ ತಾನೀಗ ಹೆಂಡಿರ ।
ಸಾಕಿ ಬದುಕುವ ಲವಲವಿಕೆಯಲಿ ಜಾರಿಬಂದೀಗ ।

ಕಾಕ ಬಳಸುವನಿವನು ನಾನು ।
ದ್ರೋಕಿಸಲು ಸಮರದಲಿ ನಿಲುವರೆ ।
ನಾಕದವರಿಗೆ ನೂಕದೆಂದನು ಸತಿಯರಿದಿರಿನಲಿ ॥

ಕೌರವರ ಸೈನ್ಯದಲ್ಲಿ ನನ್ನೊಡನೆ ಯುದ್ಧಮಾಡತಕ್ಕವರು ಯಾರಿದ್ದಾ

ಆರೊಡನೆ ಕಾದುವೆನು ಕೆಲಬರು ।
ಹಾರುವರು ಕೆಲರಂತಕನ ನೆರೆ ।
ಯೂರವರು ಕೆಲರಧಮಕುಲದಲಿ ಜನಿಸಿ ಬಂದವರು ॥

ವೀರರೆಂಬವರಿವರು ಮೇಲಿ ।
ನ್ನಾರ ಹೆಸರುಂಟವರೊಳಂದು ಕು- ।
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳೆದುರಿನಲಿ ॥ ೨ ॥

ಅರಿಯೆನೇ ಗಾಂಗೇಯನನು ತಾ- ।
ನರಿಯದವನೇ ದ್ರೋಣ ಕುಲದಲಿ ।
ಕೊರತೆಯಾಗಿಹ ಕರ್ಣನೆಂಬುವನೆನಗೆ ಸರಿಯಹನೆ ॥

ಬರಿಯ ಬಯಲಾಡಂಬರದಿ ತುರು ।
ಸೆರೆಯ ಹಿಡಿದರೆ ತಮ್ಮ ಹೆಂಡಿರ ।
ಸೆರೆಯ ತಾರದೆ ಮಾಣೆನೆಂದುತ್ತರನು ಗರ್ಜಿಸಿದ ॥ ೩ ॥

೨ನೆಯ ಗುಂಪು

(ಉತ್ತರನ ಪೌರುಷ)

ಬಲವ ಮುರಿನೆನು ಹಸ್ತಿನಾಪುರ ।
ದೊಳಗೆ ತಾಣಾಂತರವ ನಿಕ್ಕುವೆ ।
ತೊಲಗಿಸುವೆ ಕೌರವನ ಸೇನೆಯ ಧೂಳಿಪಟವಮಾಡಿ ॥
ಗೆಲವ ತಹೆನೆಂದುತ್ತರನು ಕೋ– ।
ಮಲೆಯರಿದಿರಿನಲಿ ಬಾಯ್ಗೆ ಬಂದುದ ।
ಗಳಹುತಿರ್ದನು ಬೀಕುಬೀಡೆಂಬರನು ನಾಕಾಣೆ ॥ ೧ ॥

ಪರರು ನಿಜಸಾಹಸವ ಹೊಗಳಿದೊ ।
ಡಿರದೆ ಲಜ್ಜಿಸಬೇಕು ತನ್ನಯ ।
ಹಿರಿದು ಪೌರುಷತನವ ತಾನಾಡಿದರೆ ಫಲವೇನು ॥
ಇರವಿದನೆ ಗಹಿಗಹಿಸಿ ಮನದಲಿ ।
ತರಳೆಯರು ನಗಲಾ ವಿರಾಟನ ।
ವರ ಕುಮಾರಕ ನಿರದೆ ನುಡಿದನು ಹೆಂಗಳಿದಿರಿನಲಿ ॥ ೨ ॥

ಯಾವ ಲಕ್ಷ್ಯವೂ ಇಲ್ಲದ ಉತ್ತರನು, ಸಾರಥಿಯಾಗಲು ಅಂಜಿದಂತೆ ನಟಿಸಿ ತ ಬೃಹನ್ನಳೆಗೆ ಧೈರ್ಯಹೇಳುತ್ತಾನೆ.

ಅಂಜದಿರು ಸಾರಥಿಯೆ ತನ್ನಯ ।
ರಂಜಕನ ನುಡಿಯಲ್ಲ ಕಾವಳ ।
ವಂಜಿಸುವದೇ ಇನನ ತನ್ನ ಪರಾಕ್ರಮವನರಿಯೆ ॥
ಭಂಜಿಸುವೆನಹಿತರನು ನಾಕಡ ।
ಕಂಜಪದನೆಯರಪ್ಪುವೊಲು ನಿನ ।
ಗಂಜಿಕೆಯದೇಕೆನಲು ನಗುತಂತೆಂದನಾಪಾರ್ಥ ॥ ೩ ॥

೩ನೆಯ ಗುಂಪು

ಬೃಹನ್ನಳೆಯು ರಥವನ್ನು ಬೇಗನೆ ಕೌರವರ ಸೇನೆಯ ಎದುರಿಗೆ ತಂದನು. ಉತ್ತರನ ಭಯ—

ಏಕೆ ಸಾರಥಿ ರಥವ ಮುಂದಕೆ ।
ನೂಕಿ ಗಂಟಲಕೊಯ್ವೆ ಸುಡುಸುಡು ।

ಕಾಕಲಾ ಕಣ್ಣೊಡೆಯುತಿದೆ ಕಾಣಾ ಮಹಾಬಲವ |
ನಾಕ-ನಿಳಯರಿಗರಿದು ನಿನಗೆ ಖಿ- |
ವೇಕವೆಳ್ಳಿನಿತಿಲ್ಲಲಾ ತೆಗೆ |
ಸಾಕು ವಾಘೆಯ ಮರಳಿ ಸೆಳೆ ತೇಜಿಗಳ ತಿರುಹೆಂದ ॥ ೧ ॥

ನುಡಿಯ ಕೇಳದೆ ಮುಂದೆ ನಾಲ್ಕೆಂ |
ಟಡಿಯನರ್ಜುನ ರಥವ ನಡಿಸಲು |
ಹಿಡಿದ ಜಿಲ್ಲಂಬುಗಳು ಬಿದ್ದುವು ಕೈಯನರ ತೆಗೆದು ॥
ಹಿಡಿಹಯವ ನಿರಿಗಾರ ಸಾರಥಿ |
ನುಡಿವವರು ನಾವು ಹಗೆಗಳಿ ನಿ |
ನ್ನೊಡೆಯರಲ್ಲಾ ಸ್ವಾಮಿದ್ರೋಹಿತೆ ಲೇಸುಲೇಸೆಂದ ॥ ೨ ॥

[ಬೃಹನ್ನಳೆಯು (ಅರ್ಜುನನು) ನಗುತ್ತ ರಥವನ್ನು ಮತ್ತಿಷ್ಟು ವೇಗದಿಂದ ನಡೆಯಿಸುತ್ತಾ.

ಎಂದೊಡರ್ಜುನ ನಗುತೆ ರಥವನು |
ಮುಂದೆ ನಾಲ್ಕೆಂಟಡಿಯ ನೂಕಲು |
ಕೊಂದನ್ನೆ ಸಾರಥಿಯೆನುತೆ ಸಂವರಿಸಿ ಮುಂಜೆರಗ |
ನಿಂದು ಮೆಲ್ಲನೆ ರಥದ ಮೊದಲಿಗೆ |
ಬಂದು ಭುಮ್ಮಿಕ್ಕಿದನು ಬಡುಕಿದೆ |
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮುಂಡೆಯಲಿ ॥ ೩ ॥

ಸರ ಜಗದೀಶಚಂದ್ರ ಬೋಸರ ನಿಧನವಾರ್ತೆ

ಬಿ. ಜಿ. ಎಮ್. ಸಾತೇನಹಳ್ಳಿ

ವಿಜ್ಞಾನಶಾಸ್ತ್ರದಲ್ಲಿ ಪಾರಂಗತರಾಗಿ ಅನೇಕಾನೇಕ ನೂತನ ಶೋಧನಗಳ ಗಟುಮಾಡಿ ವಿಜ್ಞಾನಶಾಸ್ತ್ರದ ಬೆಳಕನ್ನು ಹೆಚ್ಚಿಸಿ ಜಗತ್ತಿನ ವೈಜ್ಞಾನಿಕರಿಗೆ ಹಕಾರಿಗಳೆನಿಸಿ ಹಿಂದುಸ್ತಾನಕ್ಕೆ ಅಲಂಕಾರಪ್ರಾಯವಾಗಿದ್ದ ಒಂದು ವ್ಯಕ್ತಿ ಯರೆ ಸರ ಜಗದೀಶಚಂದ್ರ ಬೋಸರೇ ಸರಿ, ಎಂದು ಹೇಳಿದರೆ ಅತಿಶಯೋಕ್ತಿ ಾಗದು. ಈ ಮಹನೀಯರು ನವಂಬರ ತಿಂಗಳ ೨೩ನೆಯ ತಾರೀಖಿನ ದಿವಸ ೃದಯವಿಕಾರದಿಂದ ಒಮ್ಮೆಲಿ ದಿವಂಗತರಾದರೆಂದು ತಿಳಿಸಲು ವಿಷಾದವೆನಿಸು ದೆ. ಈ ದುಃಖದ ವಾರ್ತೆಯು ಹೊರಬಿದ್ದ ಕೂಡಲೆ ದೇಶದ ವಿದ್ವಾಂಸರೆಲ್ಲರು ಮ್ಮ ದುಃಖೋದ್ಗಾರಗಳನ್ನು ಪ್ರಕಟಿಸತೊಡಗಿದ್ದಾರೆ. ವೈಜ್ಞಾನಿಕ ಶ್ರೇಷ್ಠರಾದ ಸಿ. ವಿ. ರಾಮನ್ನರು ಬೋಸರಿಗಾಗಿ ದುಃಖಾಶ್ರುಗಳನ್ನು ಪ್ರಕಟಿಸಿ ಭಾರತ ಮಿಯ ಒಂದು ಅಲೌಲಿಕ ವ್ಯಕ್ತಿಯು ಮಾಯವಾಯಿತೆಂದು ಹಳಹಳಿಸಿದ್ದಾರೆ. ಾಗೆಯೇ ಕವಿರತ್ನ ರವೀಂದ್ರನಾಥ ಟಾಗೋರರವರೂ ತಮಗಾದ ದುಃಖವನ್ನು ಕಟಿಸಿದರು. ಜಗತ್ತಿಗೆಲ್ಲ ಕೇವಲ ತಮ್ಮ ವಿದ್ಯೆಯಿಂದ ಪರಿಚಯಿಸಿಕೊಂಡ ಸಫ ಅಮೂಲ್ಯ ವ್ಯಕ್ತಿಯ ಪರಿಚಯವು ಪ್ರತಿಯೊಂದು ಕುಟುಂಬದ ಮಾತಾ ಕ್ಕಳಿಗೂ ಸಹ ಆಗಲಿಕ್ಕೆಬೇಕು.

ಬಾಬು ಭಗವಾನ ಬೋಸರೆಂಬವರು ಇವರ ತಂದೆಗಳು. ಈ ಮನೆತನವ್ರ ಾರಣ ಶ್ರೀಮಂತವರ್ಗಕ್ಕೆ ಸೇರಿದುದು. ಬಾಬು ಭಗವಾನ ಬೋಸರು ಸರ ೀ ದೊಡ್ಡ ಅಧಿಕಾರಿಗಳಾಗಿದ್ದರು. ಇವರಿಗೆ ೧೮೫೮ನೆ ಇಸವಿಯ ನವಂಬರ ೩೦ನೆಯ ತಾರೀಖಿನ ದಿವಸ ದೈವವಶದಿಂದ ಢಾಕಾ ಜಿಲ್ಲೆಗೆ ಸೇರಿದ ಮು ಪುರದಲ್ಲಿ ಬಾಬು ಜಗದೀಶಚಂದ್ರ ಬೋಸರು ಪುತ್ರರತ್ನವಾಗಿ ಲಭಿಸಿದರು. ಇವರು ತಮ್ಮ ೪ನೆಯ ವರ್ಷದಿಂದಲೇ ಪ್ರಾಥಮಿಕ ಶಿಕ್ಷಣದ ಶಾಲೆಗೆ ನರು. ಅಲ್ಲಿಯೇ ಇವರ ತೀವ್ರತರ ಬುದ್ಧಿಯು ಪ್ರಕಟವಾಯಿತು. ಚಿಕ್ಕ ್ಯಾಗಲೇ ತಮ್ಮ ಮನೆಯ ಹಾಗೂ ಶಾಲೆಯ ಆವಾರದಲ್ಲಿಯ ಪುಷ್ಪಗಳನ್ನು ು ಹರಿದು ಪರೀಕ್ಷಿಸುತ್ತಿದ್ದರಂತೆ! ಪ್ರಾಥಮಿಕ ಶಿಕ್ಷಣ ಮುಗಿದ ಬಳಿಕ

ಕಲಕತ್ತೆಯ ಸೆಂಟರ್ಹುವಿಯರ ಕಾಲೇಜಿಕ್ಕೆ ಸೇರಿದರು. ಅಲ್ಲಿ ಶ್ರದ್ಧೆ
ವಿದ್ಯಾಭ್ಯಾಸಮಾಡಿ ಅಲ್ಲಿಯ ಗುರುವರ್ಗಕ್ಕೂ ವಿದ್ಯಾರ್ಥಿಗಳ ಸಮೂಹ
ಬೇಕಾದವರಾಗಿದ್ದರು. ಕಾಲೇಜದಲ್ಲಿದ್ದ ಭೌತಿಕಶಾಸ್ತ್ರದ ಉಪಕರಣ
ನೋಡಿದಂದಿನಿಂದಂತೂ ಅತ್ತ ಅವರ ಒಲವು ಹೆಚ್ಚಾಗಿ ಗಮನಿಸತೊಡ
ಕಾಲೇಜದ ರೆ. ಫಾದರ ಇಲೆಫ್ರಾಂಟ ಎಂಬ ಗುರುಗಳು ವಿಜ್ಞಾನಶಾಸ್ತ್ರ
ಮುಖ್ಯವಾಗಿ ನೀವು ಕಲಿಯಬೇಕೆಂದು ಜಗದೀಶಚಂದ್ರ ಬೋಸರಿಗೆ ಪ್ರೋ
ಹಿಸುತ್ತಿದ್ದರಂತೆ !

ಇವರು ಮೇಧಾವಿಗಳಾದುದರಿಂದ ದೊಡ್ಡ ಅಧಿಕಾರಿಗಳಾಗಿ ಬರಲೆ
ಇವರ ಮಿತ್ರರಲ್ಲಿ ಕೆಲವರು ಆಯ್. ಸಿ. ಎಸ್. ಪರೀಕ್ಷೆಯ ಅಭ್ಯಾಸಕ್ಕ
ಇಂಗ್ಲಂಡಕ್ಕೆ ತೆರಳಬೇಕೆಂದು ಅಭಿಪ್ರಾಯಪಟ್ಟರು ಇವರ ತಂದೆಗಳಿಗೆ
ಆಲೋಚನೆಯು ಸರಿಬೀಳದೆ ಮಗನ ಒಲವೇ ಪ್ರಧಾನವಾಗಿದ್ದ ವಿಜ್ಞಾನಶಾ
ವನ್ನೇ ಅಭ್ಯಾಸಿಸಲು ಇಂಗ್ಲಂಡಕ್ಕೆ ಜಗದೀಶಚಂದ್ರ ಬೋಸರನ್ನು ಕಳಿಸಿಕೊಟ್ಟ
ಅಲ್ಲಿ ಅವರು ಚನ್ನಾಗಿ ಅಭ್ಯಾಸಿಸಿ ಪಂಡಿತರಾದರು.

ಮುಂದೆ ಇವರು ಇಲ್ಲಿಗೆ ಬಂದನಂತರ ತಮ್ಮ ಪ್ರಯೋಗಶಾಲೆಯ
ಸ್ಥಾಪಿಸಿ ಅನೇಕ ಪ್ರಯೋಗಗಳನ್ನು ಮಾಡಿ ನೋಡಿ ಪ್ರಸಿದ್ಧಿಸಿದರು. ಮು
ಅರಿವಯಸ್ಸಾದ ಬಳಿಕ ವಿಜ್ಞಾನಶಾಸ್ತ್ರದ ಭಾಗವಾದ ಸಸ್ಯಶಾಸ್ತ್ರ
ಕಡೆಗೆ ಅವರ ಇಚ್ಛೆಯಾಯಿತು. ತತ್ಸಂಬಂಧವಾದ ಪ್ರಯೋಗಗಳನ್ನು ಮ
ಅವುಗಳ ತಕ್ಕ ಉಪಕರಣಗಳನ್ನು ರಚಿಸಿದರು. ಸಸ್ಯಗಳಿಗೆ ನಮ್ಮಂತೆ ಜೀವ
ವದೆಂದೂ ಅವಕ್ಕೆ ಸಹ ನಮ್ಮಂತೆ ಉತ್ತೇಜಕಗಳಿಗೆ ಪ್ರತಿಕ್ರಿಯೆ ಕೊಡ
ನಾಮರ್ಥ್ಯವಿರುವದೆಂದೂ ಪ್ರತಿಪಾದಿಸಿದ್ದಾರೆ. ಸೂಕ್ಷ್ಮವಸ್ತುವು ಲಕ್ಷ
ಪಟ್ಟು ದೊಡ್ಡದಾಗಿ ಕಾಣಿಸುವಂಥ ಸೂಕ್ಷ್ಮದರ್ಶಕ ಯಂತ್ರವನ್ನು ರಚಿಸಿದ
ಈ ಎಲ್ಲ ಉಪಕರಣಗಳೊಂದಿಗೆ ದೇಶವಿದೇಶಗಳಿಗೆ ಗಮಿಸಿ ಅಲ್ಲಿಯ ವಿಜ್ಞಾನಶ
ಜ್ಞರ ಎದುರಿಗೆ ತಮ್ಮ ಶೋಧನೆಗಳನ್ನು ಮಂಡಿಸಿ ಅವರು ತಲೆದೂಗುವಂತೆ ಮ
ದರು. ಆಗಾಗ ಹೋದ ಹೋದ ದೇಶವಿದೇಶಗಳ ಜನರು ಇವರನ್ನು ಭಕ್ತಿ, ಶ್ರ
ಗಳಿಂದ ಬರಮಾಡಿಕೊಂಡು ಮನ್ನಿಸುತ್ತಿದ್ದರು. ಅವರ ಸಿರಿವಂತಿಕೆಯು ಈ
ಪ್ರಯೋಗಕ್ಕಾಗಿ ಮತ್ತೊಬ್ಬರನ್ನು ಬಾಯ್ದೆರೆಯುದಂತೆ ಸಹಾಯಮಾಡಿ
ಜೋಸರಿಗೆ ಸಿರಿವಂತ ಮನೆತನವು ಮಾತೃಸ್ಥಾನವಾದದ್ದು ಅವರ ಸುದೈವವೆಂ
ತಿಳಿಯಬೇಕು. ಇವರ ಆಯುಷ್ಯದಲ್ಲಿ ತಕ್ಕ ವಿಷಯವನ್ನು ಆರಿಸಿ ಅವ
ಅಭ್ಯಾಸಿಸಲಿಕ್ಕಾಗಿ ಅನುಕೂಲತೆ ಮಾಡಿಕೊಟ್ಟ ಇವರ ತಂದೆಯವರ ಸ್ವತ್ಸ್ಯೈಕ

ಸ್ಯ ಮಹತ್ವದ್ದಾಗಿದೆ. ತಂದೆಯವರು ಮಗನ ಭಾಗ್ಯೋದಯದ ಬೀಜವನ್ನು ಗುರುತಿಸಿದ್ದರ ಪರಿಣಾಮವು ಘನವ್ಯಕ್ತವಾಗಿ ಬೆಳೆದು ಮನೆತನಕ್ಕಷ್ಟೇ ಅಲ್ಲ, ಶಕ್ಕೂ, ಕಲಿತ ಶಾಸ್ತ್ರಕ್ಕೂ ಸಹ ನೆರಳನ್ನೂ ಘನತೆಯನ್ನೂ ಕೊಟ್ಟಿತೆಂದು ಳಬಹುದು. ಹಣಗಳಿಸಿ ಸಿರಿವಂತರಾಗಬೇಕೆಂದು ಇಚ್ಛಿಸದೆ ವೈಜ್ಞಾನಿಕ ಸ್ತ್ರದ ಬೆಳವಣಿಗೆಯಾಗಬೇಕೆಂದು ತತ್ಸಂಬಂಧವಾದ ಸಂಸ್ಥೆಯನ್ನು ಲಕ್ಷಾವಧಿ ಪಾಯ ವೆಚ್ಚಮಾಡಿ ಸ್ಥಾಪಿಸಿದ್ದಾರೆ.

ಬಂಗಾಲಕ್ಕೂ ಬಿಹಾರಕ್ಕೂ ಸೌಹಾರ್ದಭಾವವು ಬೆಳೆಯಬೇಕೆಂದು ದಿವಂ ಸರ್ ಜೆ. ಸಿ. ಬೋಸರು ತಮ್ಮ ಮೃತ್ಯುಪತ್ರದಲ್ಲಿ ಲಕ್ಷ ರೂಪಾಯಿಗಳನ್ನು ನಾಪದೊಂದು ರಾಷ್ಟ್ರೀಯ ಕಾರ್ಯಕ್ಕೆ ವೆಚ್ಚಮಾಡಬೇಕೆಂದು ದಯಪಾಲಿಸಿ ದ್ದಾರೆ. ಅದುದರಿಂದ ಬೋಸರು ಬರಿ ಶಾಸ್ತ್ರಜ್ಞರಲ್ಲದೆ ಉದಾರಧೀಗಳೂ ಆಗಿದ್ದ ದು ಪ್ರಕಟವಾಗುತ್ತದೆ. ಈ ಹಣವು ಬಾಬು ರಾಜೇಂದ್ರಪ್ರಸಾದರ ಕೈಯಲ್ಲಿ ಸೆ. ಇಂಥ ಉದಾರ ಮಹನೀಯರ, ಶಾಸ್ತ್ರಜ್ಞರ ಆತ್ಮಕ್ಕೆ ದೇವರು ಶಾಂತಿ ನ್ನೀಯಲಿ.

ಬ್ರಹ್ಮದೇಶ

(ಕಳೆದ ಸಂಚಿಕೆಗಳಿಂದ ಮುಂದುವರಿದದ್ದು.)

ಬರ್ಮೀಯರ ವರ್ಣಮಾಲೆಯು ಬರಹವು ನಮ್ಮಲ್ಲಿಯ ಪದ್ಧತಿಯಂತೆ ಎಡ ಯ ಬಲಕ್ಕೆ ಬರೆಯುವಂಥದು ಇರುತ್ತದೆ. ಶಬ್ದಗಳು ಬಹುತರ ಏಕಾಕ್ಷರವುಳ್ಳವು ರುತ್ತವೆ. ಎಲ್ಲ ಅಕ್ಷರಗಳು ದುಂಡಗೆ ಇದ್ದು ಏಂಗಡಿಸದೆ ಉದ್ದಕ್ಕೆ ಬರೆಯು ಥವು. ಬೌದ್ಧಮತದ ಗ್ರಂಥಗಳೆಲ್ಲ ಪಾಲಿ, ಮಾಗಧಿಭಾಷೆಯಲ್ಲಿ ಬರೆಯಲ್ಪಟ್ಟಿ ತ್ತವೆ. ಬರ್ಮೀಯರು ಬಿದಿರಿನಿಂದ ಕಾಗದ ಮಾಡಿ ಬರೆಯುತ್ತಾರೆ. ನಮ್ಮ ಯ ಪೂರ್ವಪದ್ಧತಿಯಂತೆ ಓಲೇಗರಿಯ ಮೇಲೆಯೂ ಬರೆಯುವರು.

ಬರ್ಮೀಯರು ಬೌದ್ಧಮತಾವಲಂಬಿಗಳಾಗಿದ್ದರೂ ಆ ಮತದ ತತ್ವಗಳಿಗೆ ನೀತವಾಗಿ ಭೂತಗಳ ಆರಾಧನೆಮಾಡುವರು. ಇವುಗಳಿಂದಲೇ ರೋಗವು ಸುವದೆಂದು ತಿಳಿದು ಅವುಗಳ ಪ್ರೀತ್ಯರ್ಥವಾಗಿ ಮದ್ಯಮಾಂಸಯುಕ್ತಬಲಿ ನ್ನು ಕೊಡುವರು. ಆರೋಗ್ಯದ ನಿಯಮಗಳನ್ನರಿಯದೆ ಬೌದ್ಧಮತದ

ತತ್ವಗಳಿಗೆ ವಿಪರೀತವಾಗಿ ಭೂತಾರಾಧನೆ, ಭೂತಬಲಿ, ಪ್ರಾಣಿಗಳ ಕಾಡ
ಹಚ್ಚಿಕೊಚ್ಚಿಸಿಕೊಳ್ಳುವದು ಇತ್ಯಾದಿ ಕೆಲಸಗಳು ಮೂಢಭಾವಕ್ಕೆ ಇ
ಕೊಟ್ಟ ಪದ್ಧತಿಗಳಾಗಿವೆ. ಇವನ್ನೆಲ್ಲ ತೆಗೆದುಹಾಕಿದರೆ ಬೌದ್ಧರು ಸುಧ
ದಂತಾಗುವರು.

ಸಿಲೋನ, ಬ್ರಹ್ಮದೇಶ, ಜಪಾನ, ಮುಂತಾದ ಪೂರ್ವದ ದೇಶಗಳಲ್ಲಿ ಬ
ಮತವಿದೆ. ಅಲ್ಲೆಲ್ಲ ಬುದ್ಧನ ಮೂರ್ತಿಗಳಿವೆ. ಜಪಾನದೇಶದ ಬು
ಮೂರ್ತಿಯು ೩೨ ಮೊಳ ಎತ್ತರವಾಗಿ ಒಳ್ಳೇ ಭವ್ಯವಾಗಿದೆ. ಇವರು ಅನ
ಸುವದು ಬೌದ್ಧಮತವಾಗಿದ್ದರೂ ಮತಕ್ಕಿಂತಲೂ ಹೆಚ್ಚಾಗಿ ಭೂತಾರಾಧನೆ
ಮತಕ್ಕೆ ಸಮಾನವೆನಿಸಿ ಅವರಲ್ಲಿ ಬಳಕೆಯಾಗಿರುವದು. ಏಶಿಯದ ಪೂರ್ವ
ಗಳಲ್ಲೆಲ್ಲ ಬಹುತರವಾಗಿ ಭೂತಾರಾಧನೆಯು ವಾಡಿಕೆಯಾಗಿದೆ. ಅದರಂತೆ
ಬರ್ಮಾದೇಶದಲ್ಲಿಯೂ ಭೂತಾರಾಧನೆಯು ನಡೆಯುತ್ತಿರುವದು ಆಶ್ಚರ್ಯ
ಸಂಗತಿಯಲ್ಲ. ಬರ್ಮೀಯರು ತಾವು ಸಂಬರತಕ್ಕ ಪಿಶಾಚಿಗಳನ್ನು ಸಮಾ
ಪಡಿಸುವದಕ್ಕಾಗಿ ಅವುಗಳ ಆರಾಧನೆಯನ್ನು ನಿರಂತರ ನಡೆಯಿಸುವರು.
ಮೃತ್ಯುಗಳಿಗೆ ಈಡಾದವರೂ ಜೀವಿಸಿದಾಗ ಭಯಂಕರ ಕೆಲಸಗಳನ್ನು ಮಾಡಿದ
ಭೂತಗಳ ಜನ್ಮತಾಳುವರೆಂದು ಇವರು ನಂಬುವರು. ಇಂಥ ಭೂತಗಳಿಲ್ಲ ಪ
ಗಳಲ್ಲಿಯೂ ಅವಕ್ಕೆ ಸಂಬಂಧಿಸಿದ ಮನೆಗಳ ಕಂಬಗಳಲ್ಲಿಯೂ ಕಟ್ಟಡವಿಯ
ಗೊಂದಿಗಳಲ್ಲಿಯೂ ವಾಸಿಸುವವೆಂದು ತಿಳಿಯುವರು. ಭೂತಗಳು ಮನೆಯ
ಸೇರದೆ ದಾರಿಯುದ್ದಕ್ಕೂ ಅಂಡೊಲೆಯಬೇಕೆಂದು ಅಲ್ಲಲ್ಲಿ ಅವುಗಳ ಪ್ರೀತಿ
ಪೇಯವಾದ ಸರಾಯಿಯ ಬಿಂದಿಗೆಗಳನ್ನೂ ಬಲಿಕೊಟ್ಟ ಮೃಗಗಳ ಅ
ಗಳನ್ನೂ ಕಟ್ಟುವರು. ಪ್ರತಿಯೊಂದು ಹಳ್ಳಿಯ ಕೊನೆಯ ಭಾಗದಲ್ಲಿ ಭೂತ
ವಾಸಕ್ಕೋಸ್ಕರ ಒಂದು ಗುಡಿಯನ್ನು ಕಟ್ಟುವರು. ಕೆಲವೆಡೆಯಲ್ಲಿ ಬಿದಿ
ಹೋಳುಗಳಿಂದ ಡೋಲಿಯಾಕಾರದ ಮನೆಯನ್ನು ರಚಿಸಿ ಅವನ್ನು ಊರಹೊ
ಅರಳಿಯ ಮರಕ್ಕೆ ಭೂತಗಳ ವಾಸಕ್ಕಾಗಿ ತೂಗಹಾಕುವರು. ಭೂತಗಳಿಗೋಸ್ಕ
ಕಟ್ಟಿದ ಮನೆಗಳಲ್ಲಿ ಒಂದು ವಿಗ್ರಹವು ಇರುವದು. ವರ್ಷಕ್ಕೊಮ್ಮೆ ಭೂ
ರಾಧನೆ ಮಾಡುವಾಗ ಈ ವಿಗ್ರಹಕ್ಕೆ ಸಂತರ್ಪಣೆಯು ಅರ್ಪಿಸಲ್ಪಡುವ
ಸುಂಕುರೋಗವು ಹಬ್ಬಿದಾಗ, ಗ್ರಾಮವನ್ನು ತ್ಯಜಿಸುವರು. ಮುಂದೆ ಗ್ರಾ
ಪ್ರವೇಶದ ಕಾಲದಲ್ಲಿ ಭೂತಾರಾಧನೆ ಮಾಡಿ ತದನಂತರ ಬೌದ್ಧ ಸನ್ಯಾಸಿಗಳ
ಹೇರಳ ದಕ್ಷಿಣೆಕೊಟ್ಟು ಕರೆತರುವರು. ಅವರು ಪೀತಾಂಬರಧಾರಿಗಳಾಗಿ ಪ
ಗ್ರಂಥವನ್ನು ಓದುತ್ತ ಊರತುಂಬಾ ಓಡಾಡುವರು. ಬಳಿಕ ಜನರು ಗ್ರಾ
ಪ್ರವೇಶ ಮಾಡುವರು.

ಗ್ರಾಮದಲ್ಲಿ ಮುಖ್ಯ ಮನುಷ್ಯನಿಗೆ ಅಸ್ವಸ್ಥತೆಯುಂಟಾದರೆ ಅಥವಾ
ಕುಟುಂಬದಲ್ಲಿ ಸುಂಕುರೋಗವು ಉದ್ಭವಿಸಿದರೆ ಊರಹೊರಗೆ ಅನ್ನವನ್ನು ಕೋಳಿಯ
ಮಾಂಸದೊಡನೆ ಬೆರಿಸಿ ಒತ್ತಟ್ಟಿಗೆ ರಾಶಿಮಾಡುವರು. ಈ ಕೆಲಸದಲ್ಲಿ ಊರ
ಮುಖ್ಯ ಮನೆತನಗಳು ಭಾಗತಕ್ಕೊಳ್ಳದೇಕು. ಕಡೆಗೆ ಎಡೆಮಾಡಬೇಕು.
ಇವರು ಭಯಂಕರ ಉಡುಪು ಧರಿಸಿ ಭೂತಗಳಂತೆ ಕುಣಿಯುವರು. ಇನ್ನು
ಕೆಲವರು ನಾಯಿಗಳ ವೇಷಧರಿಸಿ ಓಣಿಗುಂಟ ಕೂಗುತ್ತ ಕೈಕಾಲೂರಿ ಅಂಬೇ
ಹಿಡುತ್ತ ಬೊಗಳುತ್ತ ಓಡಾಡುವರು. ಮತ್ತೆ ಕೆಲವರು ಪಂದಿಗಳ ವೇಷಧರಿಸಿ
ಸುತ್ತ ತಿರುಗುವರು. ಬಳಿಕ ಯಾವನೊಬ್ಬನಿಗೆ ಮೈದುಂಬಿದಕೂಡಲೆ
ಸ್ಯವಾದ ಬಗ್ಗೆ ಕೇಳಿಕೊಳ್ಳುವರು. ಮಂತ್ರಗಾರರು ಊರಲ್ಲಿ ಅಲ್ಲಲ್ಲಿ ಇದ್ದೇ
ಇರುತ್ತಾರೆ. ಅವರು ಮೈದುಂಬಿದಾಗ ಊರಜನರು ಬಂದು ತಮ್ಮ ತಮ್ಮ
ರೋಗ, ಕಷ್ಟ, ತಾಪತ್ರಯ ಇವುಗಳ ನಿವಾರಣೋಪಾಯಗಳನ್ನು ಕೇಳಿಕೊಳ್ಳು
ವರೆ. ಬೌದ್ಧಧರ್ಮದಲ್ಲಿ ಜನ್ಮಾಂತರದ ಕರ್ಮದ ಫಲಗಳೇ ಈ ಜನ್ಮದಲ್ಲಿ
ಸುಖ, ಕಷ್ಟಗಳಾಗಿ ಪರಿಣಮಿಸುವವೆಂದು ಹೇಳಿರುವದುಂಟು. ಹೀಗಿರಲು
ಮ್ಯೀಯರು ತದ್ವಿಪರೀತವಾಗಿ ದೆವ್ವ, ಭೂತ, ಪಿಶಾಚಿಗಳು ಕಷ್ಟಗಳನ್ನೂ
ಷ್ಟಗಳ ನಿವಾರಣೆಗಳನ್ನೂ ಮಾಡುತ್ತಿರುವವೆಂದು ತಿಳಿಯುವದು ತಪ್ಪಾಗಿದೆ.

ಬರ್ಮಾ ದೇಶದಲ್ಲಿ ಬೌದ್ಧಮತವು ಆಚರಿಸಲ್ಪಡುವದೆಂದು ಮೊದಲೇ
ಕಿನೆ. ಅವರಲ್ಲಿ ಸನ್ಯಾಸಿಗಳಿಗೆ ಮನ್ನಣೆ ಹೆಚ್ಚು. ಅರಸನು ಸಹ ಅವರಿಗೆ
ಾಗಿ ನಮಿಸಬೇಕು. ಅವರು ಊರಲ್ಲಿ ಅಲೆದಾಡಿ ಭಿಕ್ಷಾನ್ನವನ್ನು ಸಂಗ್ರಹಿಸಿ
ಕ್ಕೆ ತಂದು ಕೆಲಭಾಗವನ್ನು ತೆಗೆದಿಟ್ಟು ಉಳಿಕ್ಕದ್ದನ್ನು ಉಣ್ಣಬೇಕು. ಪ್ರಸಿದ್ಧ
ನ್ಯಾಸಿಗಳು ತೀರಿದರೆ ಅವರ ಅಂತ್ಯವಿಧಿಯು ಬಹು ಚಮತ್ಕಾರವಾಗಿ ಜರು
ವದು ಹೇಗಂದರೆ--ಅವನ ಶವವನ್ನು ಶೀಳಿ ಕರುಳುಗಳನ್ನು ತೆಗೆದುಹಾಕಿ
ಗೆ ಕೊಳೆಯಗೊಡದಂಥ ದ್ರವ್ಯಗಳನ್ನಿರಿಸಿ ಮೇಲೆ ಅರಿವೆಗಳನ್ನು ಸುತ್ತಿ ಮೇಲೆ
ದುಬಿಡದಂತೆ ವಾರ್ನಿಶ್‌ವನ್ನು ಸವರಿ ಪೆಟ್ಟಿಗೆಯಲ್ಲಿ ಅದನ್ನಿಟ್ಟು ಭದ್ರಪಡಿಸಿ
ತದ ಬಂಡು ಕಟ್ಟಿಯಮೇಲೆ ಅದನ್ನಿಡುವರು. ಆ ಮೃತವು ಪಟ್ಟಣದಲ್ಲಿದ್ದಾದರೆ
ಸ್ಸು ಶ್ರೇಷ್ಠ ಕುಟುಂಬಗಳ ೧೬ ರಿಂದ ೨೦ ರ ವರೆಗೆ ಯುವತಿಯರು ತಮ್ಮ
ೀಳಿದೊಂದಿಗೆ ಬಂದು ರಾಗದೊಂದಿಗೆ ನಾಟ್ಯವಾಡಿ ಶವಸಂಸ್ಕಾರ ವಿಧಿಯಲ್ಲಿ
ಗತಕ್ಕೊಳ್ಳುವರು. ಈ ವಿಧಿಗೆ ಬೇಕಾಗುವ ಹಣವನ್ನು ಪಂತಿಗೆಯಿಂದ
ಬ್ರಮಸ್ಥರು ಸಂಚಯಿಸುವರು.

ಸನ್ಯಾಸಿಗಳು ವಾಸಮಾಡುವ ಕಟ್ಟಡಗಳಿಗೆ ಕೌಂಗಶಾಲೆಗಳೆನ್ನುವರು.
ಸನ್ಯಾಸಿಗಳು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಮಾಡಿಸುವರು. ಮಂಡಲೆ

ಪಟ್ಟಣದಲ್ಲಿ ಕಟ್ಟಿದ ಈ ಶಾಲೆಯು ಒಳ್ಳೆ ರಮಣೀಯವಾಗಿರುವದು. ಅದ
ರಾಜಸನ್ಯಾಸಾಶ್ರಮವೆನ್ನುವರು. ಇದು ಸ್ವರ್ಣಮಯವಾಗಿದೆ. ಬಂ
ವಿಧವಾದ ರಾಳದಲ್ಲಿ ಕುಂದಣಮಾಡಿರುವ ಕನ್ನಡಿಗಳಿಂದ ಗೋಡೆಯ ಭಾಗಗ
ಮುಚ್ಚಿಹೋಗಿವೆ. ಮಾಳಿಗೆಗೆ ಬಿಳಿಯ ತಗಡು ಹೊದಿಸಿದ್ದಾರೆ. ಕಳಸವೂ
ಬಂಗಾರದ್ದು. ಸೂರುಗಳಿಗೆ ಗಂಟೆಗಳು ಸಹ ಅರಿಶಿನದ ವರ್ಣದಿಂದ ಕಂಗೊ
ಸುತ್ತವೆ. ಈ ಮಠದ ಮೇಲೆ ಸೂರ್ಯಪ್ರಕಾಶವು ಬಿದ್ದೊಡನೆಯೇ ಜಗ್ಗ
ಕಂಗೊಳಿಸುತ್ತದೆ. ಪ್ರಾತಃಕಾಲದ ಮಂದಮಾರುತದಲ್ಲಿ ಈ ಗಂಟೆಗಳ ನಿನಾದ
ಎತ್ತರವಾದ ಭಾಗದಿಂದ ಸುತ್ತಲೂ ಹಬ್ಬಲು ಬಹುದೂರದವರೆಗೂ ಇಂಪಾ
ಸ್ಪಷ್ಟವಾಗಿ ಕೇಳಬರುತ್ತದೆ. ಈ ಮಠದ ಒಳಭಾಗದ ಅಪರಿಮಿತವಾದ ಕಂಬಗ
ಚಿನ್ನದ ಬಣ್ಣವನ್ನು ಬಳೆದಿದ್ದಾರೆ. ಈ ಪಾಠಶಾಲೆಗಳಂತೆಯೇ ಬುದ್ಧನ, ಇ
ಪ್ರಸಿದ್ಧ ಸಾಧುಸಂತರ ಅವಶಿಷ್ಟಗಳನ್ನು ಮುಚ್ಚಿ ಇಟ್ಟಂಥ ಪಗೋಡಾಗ
ಅವುಗಳ ಶಿಖರಗಳೂ ದೂರದಿಂದ ಝಗಝಗನೆ ಝಗಿಸುತ್ತ ಚಿತ್ರವಿಚಿತ್ರವಾ
ಗೋಪುರಗಳ ಪಂಕ್ತಿಗಳಿಂದ ಕಂಗೊಳಿಸುತ್ತವೆ. ರಂಗೂನಿನಲ್ಲಿರುವ ಇ
ಮಹಾಗೋಪುರವು ಒಳ್ಳೇ ಪ್ರಸಿದ್ಧವಾಗಿದೆ. ಅದು ೩೭೦ ಅಡಿ ಎತ್ತರವಾಗಿದೆ.

ಬುದ್ಧನವಶೇಷಗಳನ್ನಲ್ಲದೆ ಬೌದ್ಧಮತದ ಗ್ರಂಥಗಳನ್ನು ಕಾದಿಟ್ಟ ಪಾ
ಬುದ್ಧನ ವಿಗ್ರಹಗಳಿಂದ ಕಂಗೊಳಿಸುವ ಮಂದಿರಗಳೂ ಕೆಲವೆಡೆ ಇರುವ
ಇವಕ್ಕೆ ದೇವಸ್ಥಾನಗಳೆನ್ನುವರು. ಆರಾಕಾನ ಗೋಪುರವೆಂಬ ಹೆಸರಿನ
ಪ್ರಸಿದ್ಧವಡೆದ ಇಂಥ ದೇವಸ್ಥಾನವು ಮಂಡಲೆಯಲ್ಲಿದೆ. ಇದರಲ್ಲಿ ಹಿತ್ತಾಳೆಯ
ಮಾಡಿದ ಬುದ್ಧನ ಮೂರುತಿಯು ಕಂಗೊಳಿಸುತ್ತದೆ. ಈ ಮೂರ್ತಿಯು ಕು
ಗರ್ಭಗುಡಿಯ ಸೌಂದರ್ಯವನ್ನು ಎಷ್ಟು ಬಣ್ಣಿಸಿದರೂ ತೀರದು. ಈ ಮೂ
ಯನ್ನು ಅಕ್ಯಾಬ ಊರಿನಿಂದ ೧೭೮೪ ರಲ್ಲಿ ಇಲ್ಲಿಗೆ ತಂದರೆಂದು ಹೇಳುತ್ತಾರೆ.
ಪಟ್ಟಣದಲ್ಲಿ ಗರ್ಭಗುಡಿಗೆ ಹೋಗುವ ಮಾರ್ಗದುದ್ದಕ್ಕೂ ಕಂಬಗಳ ಸಾಲುಗಳ
ಹಾಗು ದೇವಾಲಯಕ್ಕೆ ಪ್ರವೇಶಿಸುವ ಮಾರ್ಗದಲ್ಲಿ ಸಹ ಕಟ್ಟಡವಿ
ಕಂಬಗಳಿವೆ. ಒಟ್ಟಿಗೆ ೭೫೨ ದೊಡ್ಡ ಕಂಬಗಳಿವೆ. ಅವೆಲ್ಲ ಕೆತ್ತಿದವುಗಳ
ಒಪ್ಪಕೊಟ್ಟಂಥವಿರುತ್ತವೆ. ಅಲ್ಲಿರುವ ಬುದ್ಧನವಿಗ್ರಹಗಳಿಗೆ ನೆಲೆಯೇ ಇಲ್ಲ. ಸ
ವಸ್ತುಗಳಿಂದಲೂ (ಲೋಹ, ಸ್ಫಟಿಕ, ಕಲ್ಲು ಇತ್ಯಾದಿ.) ಮಾಡಲ್ಪಟ್ಟಿವೆ. ಬುದ್ಧ
ಆರಾಧನೆಯನ್ನು ತಾವು ಮಾಡಿ ಮುಗಿಸಿದೆವೆಂದು ಸೂಚಿಸುವದಕ್ಕಾಗಿ ಬೌದ್ಧ
ಗಂಟೆಯನ್ನು ಬಾರಿಸುತ್ತಾರೆ. ಆದರೆ ಕ್ರೈಸ್ತಾದಿಗಳು ಈಶ ಪ್ರಾರ್ಥನೆಗೆ ಸಮ
ವನ್ನು ಕರೆಯುವದಕ್ಕಾಗಿ ಘಂಟಾನಿನಾದವನ್ನು ಗೈಯುತ್ತಾರೆ.

ಗೌತಮನು ಕಡೆಯ ಜನ್ಮದಲ್ಲಿ ಬಿಳಿ ಆನೆಯಾಗಿ ಹುಟ್ಟಿದನೆಂದು ತಿಳಿದು ಸರು ಬಿಳೀ ಆನೆಯನ್ನು ಪೂಜಿಸುತ್ತಾರೆ. ಇಂದ್ರನ ಆನೆಯಾದ ಐರಾವತನ ಪಾದಿಂದಲೇ ಅಲ್ಲಿರುವ ಪ್ರಸಿದ್ಧ ನದಿಗೆ ಇರಾವತಿ ಎಂಬ ಹೆಸರುಂಟಾಯಿತೆಂದು ಳುತ್ತಾರೆ. ಮೊದಲಿಗೆ ಬ್ರಹ್ಮದೇಶದಲ್ಲಿ ಬೌದ್ಧಮತವೇ ಪ್ರಬಲವಾಗಿದ್ದರೂ ಂದೆ ಅಲ್ಲಿಯಾದರೂ ಕ್ರೈಸ್ತಮತವು ಹಬ್ಬಿದೆ.

ಅಲ್ಲಿ ಕ್ರೈಸ್ತಮತವನ್ನು ಪಸರಿಸಿದ ಜಡ್ಸನ್‌ಪಾದ್ರಿಯು ಚರಿತ್ರೆಯಾದರೂ ಪಾಸ್ ಬುದ್ಧನ ಚರಿತ್ರೆಯಂತೆಯೇ ಅದೆ. ಆತನು ಗಲಾಟೆ ಇಸವಿಯಲ್ಲಿ ಸಾರಕ್ಕೆ ಬೇಸತ್ತು ಕ್ರಿಸ್ತಸ್ವಾಮಿಯು ಪಾಪವಿಮೋಚಕನೂ ರಕ್ಷಕನೂ ರುವನೆಂದರಿತು ದೇವರ ಸೇವೆಯ ವ್ರತವನ್ನು ಕೈಕೊಂಡನು. ಮುಂದೆ ಮತ ಸಾರದ ಪವಿತ್ರಕಾರ್ಯವನ್ನು ಕೈಕೊಂಡು ಕಲಕತ್ತಾ, ಮಾರಿಶಸ್ ದ್ವೀಪಗಳ ಗೆ ಸಂಚರಿಸಿ ರಂಗೂನ ಪಟ್ಟಣಕ್ಕೆ ಬಂದನು. ಅಲ್ಲಿ ಅವನು ನಾನಾವಿಧವಾದ ತಸಗಳನ್ನು ಸೆರೆಮನೆಯಲ್ಲಿ ಅನುಭೋಗಿಸುವ ಪ್ರಸಂಗವು ಬಂದಿತು. ಆತನು ಮನೆಯಲ್ಲಿ ಭಾರವಾದ ಬೇಡಿಗಳಿಂದಿಗೆ ಬಳಲುತ್ತಿರುವಾಗ ಪ್ರಿಯ ಪತ್ನಿಯು ಿ ಅನಾಥವಾದ ಕೂಸೊಂದು ಉಳಿಯಿತು. ಅಷ್ಟೊತ್ತಿಗೆ ಬರ್ಮಾದೇಶವು ಗ್ಲಿಷರ ವಶವಾದುದರಿಂದ ಆತನ ಕಷ್ಟವೆಲ್ಲ ಹಿಂಗಿತು. ಮುಂದೆ ಆತನ ಹೀನಾ ಸ್ಥಿಯನ್ನು ಕುರಿತು ಕರುಣಿಸಿ ಇಂಗ್ಲಿಷ ಅಧಿಕಾರಿಯು "ನೀನು ದುಭಾಷಿ ತನು, ತಿಂಗಳೊಂದಕ್ಕೆ ಬೇಕಾದಷ್ಟು ರೂಪಾಯಿ ಸಂಬಳವನ್ನು ಕೊಡುವೆನು" ದು ಹೇಳಿದರೂ ಸಮ್ಮತಿಸದೆ ಕ್ರೈಸ್ತಮತ ಪ್ರಚಾರಕಾರ್ಯಕ್ಕೇ ಉದ್ಯುಕ್ತ ನಾಗಿ ಬೈಬಲನ್ನು ಬರ್ಮೀಯ ಭಾಷೆಯಲ್ಲಿ ಬರೆದು ಪ್ರಕಟಿಸಿದನು. ಈಬಗೆಯು ಹವಾದ ಮನಸ್ಸಿನವರಿಂದಲೇ ಘನವಾದ ಕಾರ್ಯಗಳು ಕೈಗೂಡುವವೆಂಬದಕ್ಕೆ ಜಡ್ಸನ್ ಪಾದ್ರಿಯೇ ಸಾಕ್ಷಿಯಾಗಿದ್ದಾನೆ. ತನ್ನ ಕಾರ್ಯವನ್ನೇ ಮಾಡುತ್ತ ಳಂ ರಲ್ಲಿ ಜ್ವರದ ಉಪದ್ರವದಿಂದ ಈ ಆತ್ಮಸಂಯಮಿಯು ಇಹಲೋಕಯಾತ್ರೆ ನ್ನು ಮುಗಿಸಿದನು! ಅಲ್ಲಿದ್ದ ಕಾರೆನ್ ಎಂಬ ಜನರನ್ನು ಎಂದಿನಿಂದಲೂ ಬರ್ಮೀ ರು ಬಹುವಾಗಿ ಹಿಂಸಿಸುತ್ತಿದ್ದರು. ಸಮುದ್ರದಾಚೆ ಬಹುದೂರದಿಂದ ಬಂದ ನಿದ ಈ ಹಿಂಸೆಯು ತಪ್ಪುವದೆಂದು ಅವರಲ್ಲಿ ವಾಡಿಕೆಯಾದ ಪರಂಪರೆಯು ಾತಾಗಿತ್ತಂತೆ! ಅದೇ ಮುಂದೆ ನಿಜವಾಯಿತು. ಅವರೇ ಮೊದಲು ಕ್ರೈಸ್ತ ತಾವಲಂಬಿಗಳಾದರು. ಆ ಬಳಿಕ ಅವರು ಜೆನ್ನಾಗಿ ಸುಧಾರಿಸಿದರು. ವಿವಸದಿಂದ ದಂತಕಥೆಯಂತೆ ಬಂದಿದ್ದ ಪರಂಪರೆಯು ಮಾತು ನಿಜವಾಯಿತು. ಕಾರೆನ್ ಜಾತಿಯ ಜನಾಂಗವೆಂದರೆ ಕೇವಲ ಕಾಡು ಎಂಬವಾಗಿ ಬರ್ಮಾ ಳು ತಿಳಿದಿದ್ದರು. ಶಿಕ್ಷಣವು ಎಲ್ಲರನ್ನು ಪವಿತ್ರರನ್ನಾಗಿ ಮಾಡುವದು ಎಂಬ

ಸಂಗತಿಯು ಕೆಳಗೆ ಉದಾಹರಿಸಿದ ಒಬ್ಬ ಕಾರೆನ್ ಮನುಷ್ಯನ ಇತಿಹಾಸದಿ
ಗೊತ್ತಾಗುವಂತೆ ಅದೆ. ಕೊಥಾಬ್ಯೂ ಎಂಬ ಕಾರೆನ್ ಜಾತಿಯವನು ಬ
ಬರ್ಮೀಯನಿಗೆ ಕೊಡತಕ್ಕ ಸಾಲದ ದೆಸೆಯಿಂದ ಒಬ್ಬನಲ್ಲಿ ಗುಲಾಮನಾ
ಬೇಕಾಗಿತ್ತು. ಜಡ್ಸನ್ ಪಾದ್ರಿಯು ತನ್ನ ಕೈಯಿಂದ ಹಣಕೊಟ್ಟು ಆ ಕಾ
ನನ್ನು ದಾಸ್ಯವಿಸೋಚನನನ್ನಾಗಿಮಾಡಿ ತನ್ನ ಹತ್ತರ ಇಟ್ಟುಕೊಂಡ
ಪಾದ್ರಿಯು ಬರೆದ ಕ್ರೈಸ್ತಮತದ ಬರ್ಮೀಯ ಭಾಷೆಯ ಪುಸ್ತಕವನ್ನು ಆ
ಕೊಡಿಸುತ್ತ ಅವನು ಓದತೊಡಗಲು ಜಡ್ಸನ್ ಪಾದ್ರಿಯು ಸಂತೋಷಪ
ಅವನಿಗೆ ಓದುಬರಹದ ವಿಷಯವಾಗಿ ಮತ್ತಿಷ್ಟು ಸಹಾಯವಮಾಡಿದನು. ಕೆಲ
ಗಳಲ್ಲಿ ಕ್ರೈಸ್ತನಾಗಿ ತಾನೇ ಬೋಧಕನಾದನು. ಮಾದರಿಗಾಗಿ ಅವನ ಬೋಧ
ತೀರ ಸಾರಾಂಶವನ್ನು ಇದರ ಅಡಿಯಲ್ಲಿ ಕೊಟ್ಟಿದೆ.

"ಅಪಾರ ಸಂಸಾರದ ಆಶೆಯು ಎಂದೆಂದೂ ತೃಪ್ತಿಯಾಗದಂಥಾ
ಸಾಂಸಾರಿಕನಿಗೆ ಭೂಮಿ, ದ್ರವ್ಯ ಹೆಂಡಿರು ಮಕ್ಕಳು, ಧಾನ್ಯಾದಿಗಳು, ಹಂಡ
ಎಮ್ಮೆ ಆಕಳುಗಳು, ಇವೆಲ್ಲವೂ ಬೇಕೇಬೇಕು. ಅದರಲ್ಲಿಯೂ ಪ್ರತಿಯೆ
ನಿಗೂ ಬೇಕೇಬೇಕು. ಸಕಲೈಶ್ವರ್ಯವೂ ಬಿಳಿಯುತ್ತಲೇ ಇರಬೇಕು; ಆ
ದೇವರ ವಿಷಯದಲ್ಲಿ ಮಾತ್ರ ಅಷ್ಟಕ್ಕಷ್ಟೇ! ಅಂದರೆ ಅನಾದರವೆಂದು ಕ
ದರೂ ಹೇಳಬಹುದು. ಇಂಥ ಮನುಷ್ಯನ ವಿಷಯವಾಗಿ ನೋಡುತ್ತ ಇ
ಆಕಸ್ಮಿಕವಾಗಿ ಅವನ ಪ್ರಾಣವು ಹೋಗಿಬಿಡುವಾಗ ಮೇಲೆ ವಿವರಿ
ವನ್ನುಗಳೆಲ್ಲಿ? ನಾನು ಒಂಟಿಗನಾಗಿ ಇವೆಲ್ಲವನ್ನು ಬಿಟ್ಟು ಹೇಗುಪೆನಲ್ಲಾ
ಎಲ್ಲಿಗೆ ಹೊರಟೆನು? ನನ್ನ ದೇಹವು ಕಿಚ್ಚಿನ, ಮಣ್ಣಿನ ಪಾಲಾಗುವದಲ್ಲವೆ
ನಾನೆಂಥ ಹುಚ್ಚನು! ನಿತ್ಯ ಶಾಂತತೆಯನ್ನು ದಯಪಾಲಿಸುವ ಪರಮಾತ್ಮನ
ಸುಮ್ಮನೆ ಬಿಟ್ಟುಕೊಟ್ಟೆನಲ್ಲ! ಎಲ್ಲೆಲ್ಲಿ ನೋಡಿದರೂ ರೋಗ, ತಾಪತ್ರಯ, ಸಂಕ
ಯುದ್ಧ, ಕೊಲೆ, ಭಯ. ಇವನ್ನೇ ಕಂಡೆನಲ್ಲವೆ? ಇದರಿಂದ ನನ್ನ ಮನಸ
ವಿಪರೀತವಾಗಿ ಪರಿಣಮಿಸಿತಲ್ಲವೇ? ಇದಕ್ಕೆ ವಿಪರೀತವಾಗಿ ಈಗ ಸ್ವಲ್ಪ ನಿಮಾ
ನೀವರು ಹೇಳುವದನ್ನು ಕೇಳಿರಿ.

ಮಕ್ಕಳಿರಾ ಮರ್ತ್ಯಲೋಕದಲ್ಲಿಯೇ ಸುಖ ಸಂತೋಷಗಳು ದೊರ
ವೆಂದು ಯಾಕೆ ಭಾವಿಸುತ್ತೀದ್ದೀರಿ, ಮರ್ತ್ಯಲೋಕದ ತುಂಬ ಮುಳ್ಳುಗಳೇ
ನನ್ನಕಡೆಗೆ ನೋಡಿರಿ. ನಾನು ನಿಮ್ಮನ್ನು ಬಿಡುಗಡೆಮಾಡಿ ಏಶಾಂತಿಯನ್ನೀ
ನೆನು. ನೀವು ಎಂದೆಂದಿಗೂ ಸುಖಶಾಂತಿಯಿಂದ ಬದುಕುವಿರಿ ಇತ್ಯಾದಿ.

ಗಲಗರ ಸುಮಾರಕ್ಕೆ ಕಾರೆನ್ ಜನಗಳೆಲ್ಲ ಬಹುತರ ಕ್ರೈಸ್ತರಾ
ಂದಿನಿಂದ ಅವರಲ್ಲಿ ಶಿಕ್ಷಣಾಭಿವೃದ್ಧಿಯಾಗಿ ಅವರ ಆಕಾಂಕ್ಷೆಗಳು ಬೆ
ಉದ್ಯೋಗಾವಲಂಬಿಗಳಾದರು.

ಬ್ರಹ್ಮೀಯರಲ್ಲಿ 'ಮಹಾರಾಜನೆಂಗ್' ಎಂಬದೊಂದು ಚರಿತ್ರ ಪುಸ್ತಕವಿದೆ. ಲ್ಲಿ ಭೂಲೋಕದ ಆದಿ ಮನುಷ್ಯರನ್ನು ಸೂಚಿಸುವದಕ್ಕೆ 'ಬ್ರುಹ್ಮ' ಎಂಬ ಪನ್ನು ಉಪಯೋಗಿಸಿದ್ದಾರೆ. ಇದೇ ಪದವನ್ನೇ ಬರ್ಮಾ ಜನರು ತಮ್ಮ ರನ್ನಾಗಿ ತೆಗೆದುಕೊಂಡಿದ್ದಾರೆ. ಈ ಪುಸ.ಕವಾದರೂ ಬೌದ್ಧಧರ್ಮವು ಗೆ ಹೋದಬಳಿಕ ಪ್ರಕಟವಾದದ್ದೇ. ಅದಕ್ಕೂ ಪೂರ್ವದಲ್ಲಿ ಆರ್ಯಸಂತತಿಯು ಲಿಕ್ಕೆ ಬೇಕೆಂದು ಅಲ್ಲಿಯ ನದಿಗಳ ಹೆಸರುಗಳಿಂದಲೂ ಊರುಗಳ ಹೆಸರು ಂದಲೂ ಅನುಮಾನಿಸಬಹುದು.

ಫಿಟ್‌ಚ್ ಎಂಬೊಬ್ಬ ಪಾಶ್ಚಾತ್ಯ ಪಂಡಿತನು ಬ್ರಹ್ಮದೇಶದ ವಿಷಯವಾಗಿ ಳುವದೇನೆಂದರೆ– ಮುಸಲ್ಮಾನರು ದಂಡೆತ್ತಿಬಂದ ಭಾಗವೊಂದನ್ನು ಬಿಟ್ಟು ಕ್ಕ ವಿಷಯಗಳಲ್ಲಿ ಬರ್ಮಾದೇಶಕ್ಕೂ ಹಿಂದುಸ್ಥಾನಕ್ಕೂ ಹೊಂದಿಕೆ ಕಂಡು ತ್ತದೆ. ಹಿಂದುಸ್ಥಾನದಂತೆ ಅಲ್ಲಿಯೂ ಚಿಕ್ಕಚಿಕ್ಕ ಅನೇಕ ರಾಜ್ಯಗಳಿದ್ದವು. ಲ್ಲಾ ತಮ್ಮತಮ್ಮೊಳಗಿನ ಬಡದಾಟಗಳಿಂದ ಶಿಥಿಲವಾಗುವ ಸ್ಥಿತಿಯಲ್ಲಿದ್ದವು. ರ್ಮೀಯರ ಚರಿತ್ರಪುಸ್ತಕಗಳಲ್ಲಿ ಚರಿತ್ರಾಂಶವೂ ಕಲ್ಪನಾಂಶವೂ ವಿಶ್ರವಾಗಿ ಗಿರುವದರಿಂದ ನಿಜವನ್ನು ತಿಳಿಯುವದು ಅಸಾಧ್ಯವಾಗಿದೆ. ಪೌರ್ವಾತ್ಯದೇಶ ಲ್ಲಿ ಇತಿಹಾಸ ಬರೆದಿಡುವ ಪರಿಪಾಠವಿಲ್ಲದ್ದರಿಂದಲೂ ಹಿಂದುಸ್ಥಾನದಂತೆ ಅಲ್ಲಿ ನ್ಯುಪಟ, ಶಿಲಾಶಾಸನ, ಉಚ್ಚ್ರ ಗ್ರಂಥಗಳು ಇಲ್ಲದಿರುವದರಿಂದಲೂ ನಿಜವಾದ ಹಾಸ ಮುಂತಾದವುಗಳನ್ನು ತಿಳಿಯುವದು ಬಲುಕಠಿಣವೇ ಸರಿ. ಅವರೂ ಕಾನರು ಅಥವಾ ಟಲಾಯಂಗರು, ಬರ್ಮೀಯರು, ಶಾನರು ಮುಂತಾದ ತಿಗಳು ಪರಸ್ಪರರಲ್ಲಿ ಯುದ್ಧಾಸಕ್ತರಾಗಿದ್ದರು. ಪೂರ್ವದಲ್ಲಿ ಅತ್ಯಂತ ಖ್ಯಾತವಾಗಿದ್ದ ಪಗನ್‌ನಗರವು ಈಗ ಹಾಳುಬಿದ್ದಿದೆ. ೧೩ನೆಯ ಶತಮಾನದಲ್ಲಿ ದ ಚಕ್ರವರ್ತಿ ಕುಬ್ಲಾಯಿಖಾನನು (ಮೊಂಗೋಲ ವಂಶದವನು) ಬ್ರಹ್ಮದೇಶ ಕಪ್ಪಬಯಸಿ ಕೇಳಲು, ಕಳುಹಿದನು. ಅವರು ಕೊಡಲಿಲ್ಲವಾದ್ದರಿಂದ ಗೊಲಿಗಳು ಬರ್ಮಾ ದೇಶವನ್ನು ಹೊಕ್ಕು ಬಲಾತ್ಕಾರದಿಂದ ಪೊಯ್ದರು. ಬಹುತರವಾಗಿ ಬೌದ್ಧ ಧರ್ಮವು ಅಲ್ಲಿ ಆರಂಭವಾದ ಬಳಿಕ ರು ಇತಿಹಾಸವು ಉಂಟಾದಂತೆ ತೋರುತ್ತದೆ. ಆದರೆ ಪಗನ್ ನಗರದಲ್ಲಿ ೀನಕಟ್ಟಡಗಳು ಈಗಲೂ ಸೂರಾರು ನೋಡಲಿಕ್ಕೆ ತಕ್ಕಂಥವು ಉಳಿದಿವೆ. ಪ್ರಾಚೀನ ಇತಿಹಾಸವು ಮಾತ್ರ ಉಪಲಬ್ಧವಿಲ್ಲ.

ಕ್ರೀಡಾ-ಪ್ರವೃತ್ತಿ

ಶ್ರೀ. ಕೊಪ್ಪಳ ಗುಂಡೇಕಾಯರು ಬಿ. ಎ., ಅ. ಪೂ. ಟ್ರೇ. ಕಾ. ಧಾರವಾಡ

ಬಾಲಕರ ಶಿಕ್ಷಣವೆಲ್ಲ ಸಹಜಪ್ರವೃತ್ತಿಗಳಿಗನುಸಾರವಾಗಿರಬೇಕು. ಪ್ರವೃತ್ತಿಗಳನ್ನು ನಿಗ್ರಹಿಸಲಾಗದು; ಅವು ನಾಶಗೊಳ್ಳಲಾರವು. ಈ ಪ್ರವೃಗಳೇ ಎಲ್ಲ ಕಾರ್ಯಗಳ ಪ್ರವೃತ್ತಿಗೆ ಬಲವಾದ ಸಾಧನ ಎಂಬ ವಿಷಯವ ಹಿಂದಿನ ಸಂಚಿಕೆಯಲ್ಲಿ ವರ್ಣಿಸಿರುವದು. ಇದೇಮೇರೆಗೆ ಪ್ರಾಣಿಗಳಲ್ಲಿ ವಿಶೇಷವಾಗಿ ಮನುಷ್ಯರಲ್ಲಿಯೂ ಸಹಾನುಭೂತಿ, ಸೂಚನೆ, ಅನುಕರಣ, ಕ್ರೀ ಮೊದಲಾದ ಸಾಮಾನ್ಯಪ್ರವೃತ್ತಿಗಳು ಇರುವವು. ಕಾರ್ಯಗಳಲ್ಲಿ ಯಾವ ದರೂ ಪ್ರವೃತ್ತರನ್ನಾಗಿ ಮಾಡಲು ಇವು ಕೂಡ ಒಳ್ಳೆಯ ಬಲವಾದ ಸಾ ಸಾಮಾನ್ಯಪ್ರವೃತ್ತಿಗಳಲ್ಲಿಯೂ ಸಹಜಪ್ರವೃತ್ತಿಗಳಲ್ಲಿಯೂ ಒಂದೇ ಸಂಗತಿಯಲ್ಲಿ ಹೆಚ್ಚು ಕಡಿಮೆ ಇರುವದು. ಸಹಜಪ್ರವೃತ್ತಿಗಳಲ್ಲಿ ಒಂದೊ ಪ್ರವೃತ್ತಿಗೆ ಒಂದೊಂದು ವಿಶಿಷ್ಟಪ್ರೇರಣೆಯು ಇರುವದು; ಅಂಥ ಪ್ರೇ ಯಿಲ್ಲದೆ ಅಷ್ಟೇ ಬಲವಾಗಿ ಕಾರ್ಯಗಳಲ್ಲಿ ಪ್ರವೃತ್ತರಾಗುವ ಕಾರಣ ಇವುಗಳ ಸಾಮಾನ್ಯಪ್ರವೃತ್ತಿಗಳೆಂದು ಹೇಳುವದುಂಟು.

ಕೆಲವು ಪ್ರಾಣಿಗಳು ಹುಟ್ಟಿದಕೂಡಲೆ ತಮ್ಮ ಆಹಾರ ಸಂಪಾದನ ಮೆ ಲಾದ ಕಾರ್ಯಗಳನ್ನು ಮಾಡಲು ಸಮರ್ಥವಿರುವವು. ಉದಾ:— ಇ ಜೇನ್ನೊಣ. ಆದಕಾರಣ ಇಂಥ ಪ್ರಾಣಿಗಳಲ್ಲಿ ಕ್ರೀತಾಪ್ರವೃತ್ತಿಯು ಕಡಿಮೆ. ಬೆಕ್ಕು-ನಾಯಿ ಮೊದಲಾದ ಪ್ರಾಣಿಗಳ ಮರಿಗಳು ಹುಟ್ಟಿದಾಗ ಬಲಹೀನವುಳ್ಳವು ಇರುವವು. ಆದೇ ಮೇರೆಗೆ ಮನುಷ್ಯನು ಕೂಡ ತೀರ ಗುಂದಿದ ಪ್ರಾಣಿಯು. ಇವುಗಳ ಆಹಾರ ಸಂಪಾದನ, ಸ್ವಸಂರಕ್ಷಣಕಾರ್ಯಗಳ ಇವುಗಳ ತಾಯ್ತಂದೆಗಳು ಮಾಡುವದುಂಟು. ಆದಕಾರಣ ಇವುಗಳಲ್ಲಿ ಕ್ರೀ ಪ್ರವೃತ್ತಿಯು ವಿಶೇಷವಾಗಿರುವದು. ಬೇರೆ ಬೇರೆ ಮಾನಸಶಾಸ್ತ್ರಜ್ಞರು ಪ್ರವೃತ್ತಿಯ ಮೂಲಕಾರಣಗಳ ವಿಷಯವಾಗಿ ಬೇರೆ ಬೇರೆ ರೀತಿಯ ಹೇಳಿರುತ್ತಾರೆ.

ಶಕ್ತ್ಯಧಿಕ್ಯ ತತ್ವ:— ಮೇಲೆ ಹೇಳಿದ ಮೇರೆಗೆ ಬಾಲಕರು ಆ ಸಂಪಾದನ ಮೊದಲಾದ ಕಾರ್ಯಗಳನ್ನು ಎಷ್ಟೋವರ್ಷಗಳ ವರೆಗೆ ಮಾಡಿಕೆ

ಕ್ಕಾಗುವದಿಲ್ಲ. ಅವರಲ್ಲಿ ಆ ಕಾಲದಲ್ಲಿ ಶಕ್ತಿ ಇಲ್ಲವೆ ಉತ್ಸಾಹವು ಅತಿಶಯ ವಾಗಿ ಇರುವದು. ಒಂದು ಎಂಜಿನಿನಲ್ಲಿ ಹೆಚ್ಚಾದ ಉಗಿಯನ್ನು ಅದರ ಚಾಲಕನು ಖರ್ಚುಹಾಕುವಂತೆ ತಮ್ಮ ಹೆಚ್ಚಾದ ಉತ್ಸಾಹವನ್ನು ಬಾಲಕರು ಸ್ವಚ್ಛಂದ ತೆಯ ಕ್ರೀಡೆಗಳಲ್ಲಿ ಹೊರಗೆಹಾಕುವರೆಂಬ ತತ್ವವನ್ನು ಮಟ್ಟುಗೊಡಲು ಸ್ಪೂನ ದೇಶದ **ಶಿಲ್ಲರ**ನೆಂಬ ಮಾನಸಶಾಸ್ತ್ರಜ್ಞನು ಸಾರಿದನು. ಅದೇ ಸಂಗತಿ ಯನ್ನು ಹೆಚ್ಚು ಸ್ಪಷ್ಟವಾಗಿ ಇಂಗ್ಲಂಡದೇಶದ **ಹರ್ಬಾರ್ಟ ಸ್ಪೆನ್ಸರ**ನೆಂಬವನು ಬರೆಸಿಕೊಟ್ಟನು.

ಆದರೆ, ಉತ್ಸಾಹಾತಿಶಯವಿದ್ದರೆ ಈ ತತ್ವವು ಸರಿಯಾಗಬಹುದು; ಎಷ್ಟೋ ಳಿ ನಮ್ಮಲ್ಲಿ ಹೆಚ್ಚಿನ ಶಕ್ತಿಯಿರುವದಿಲ್ಲ. ಅಲ್ಲದೆ ದಿನವೆಲ್ಲ ದುಡಿದು ದಣಿದಿರು ಗ ಕೂಡ ಆಟಗಳಲ್ಲಿ ಉದ್ಯುಕ್ತರಾಗಿರುವ ಬಾಲವೃದ್ಧರಲ್ಲಿಯ ಪ್ರವೃತ್ತಿ ಯನ್ನು ನೋಡಿದರೆ ಈ ತತ್ವವು ಆ ಪ್ರವೃತ್ತಿಯ ಸಂಪೂರ್ಣ ಚಿಕಿತ್ಸೆಯನ್ನು ಳಲಾರದೆಂದು ತೋರುತ್ತದೆ. ಶಾರೀರಿಕ-ಮಾನಸಿಕಶ್ರಮವಾಗಿ ಬೇಸರಿಕೆ-ಸರಿಕೆಗಳು ಉಂಟಾದಾಗ್ಯೂ ಎಲ್ಲರೂ ಕ್ರೀಡೆಯಲ್ಲಿ ಪ್ರವೃತ್ತರಾಗುವದುಂಟು. ಕ್ರೀಡೆಗಳಲ್ಲಿಯೇ ಇನ್ನೊಂದು ವಿಶಿಷ್ಟ ಗುಣವಿರುವಂತೆ ತೋರುತ್ತದೆ. ಹೆಚ್ಚಾದ ಶಕ್ತಿಯನ್ನು ವ್ಯರ್ಥವಾಗಿ ಹೊರಗೆ ಹೋಗಗೊಡದೆ ಯಂತ್ರಾಗಾರನು ಯಾವ ಅದರೊಂದು ಹೊಸ ಉಪಯುಕ್ತವಾದ ಮಾರ್ಗದಲ್ಲಿ ಅದನ್ನು ಬಿಡುವಂತೆ ಸೃಷ್ಟಿಯಲ್ಲಿ ಪ್ರಾಣಿಗಳಲ್ಲಿಯು ಈ ಉತ್ಸಾಹವನ್ನು ಕ್ರೀಡೆಯಲ್ಲಿ ಉಪಯೋಗಿಸುವ ಂಬೆಂದು ಹೇಳುವರು. ಅದು ಶಾರೀರಿಕ-ಮಾನಸಿಕ ಬೇಸರಿಕೆಗಳನ್ನೂ ದಣಿ ವನ್ನು ಕಳೆಯುವದಲ್ಲದೆ ಅದೇ ಕ್ಷಣದಲ್ಲಿ ಹೊಸ ಹುರುಪನ್ನು ಹುಟ್ಟಿಸಲು ಬಲವಾದ ಸಾಧನವೆಂದು ಹೇಳುವರು. ದಣಿದುಬಂದ ಮನುಷ್ಯನು ಅಲ್ಪಶ್ರಮವ ವಾದರೊಂದು ಕರ್ತವ್ಯದಲ್ಲಿ ತೊಡಗಲು ಒಪ್ಪದಿದ್ದರೂ ಬಹುಶ್ರಮವುಳ್ಳ ಟಗಳಲ್ಲಿ ಸೇರಲು ಪ್ರೀತಿಯುಳ್ಳವನಿರುವನು. ಇದೇ ಕ್ರೀಡೆಯ ವೈಶಿಷ್ಟ್ಯವೆಂದು ುವರು.

೨. ಮುಂದೆ ಮಾಡಬಹುದಾದ ಕರ್ತವ್ಯಗಳ ಪೂರ್ವಸಿದ್ಧತೆ ಇಲ್ಲವೆ ತಾಲೀಮು ತತ್ವ:— ಬೆಕ್ಕು ಚಿಕ್ಕದಿದ್ದಾಗ ಯಾವದಾದರೊಂದು ವರ್ತುಲಾ ವವುಳ್ಳ ಒಡವೆ ದೊರಕಿದ ಕೂಡಲೆ ಅದರ ಕೂಡ ಚಿನ್ನಾಟವಾಡುವದು. ದು ನಾಯಿಯು ಕುನ್ನಿಯು ಒಂದು ಎಲುವಿನ ತುಣುಕು ಸಿಕ್ಕಾಗ ಮತ್ತೊಂದು ನ್ನಿಯ ಕೂಡ ಗುರುಗುಟ್ಟುವದು; ಅದರ ಕೂಡ ಕದನಕ್ಕೆ ನಿಲ್ಲುವದು. ಈ ರ್ಯಗಳೆಲ್ಲ ಅವುಗಳ ಮುಂದಿನ ಆಯುಷ್ಯದ ಕಾರ್ಯಗಳ ತಂಗತಾಲೀಮು ನು **ಕಾರ್ಲಗ್ರೂಸ**ನೆಂಬ ಮಾನಸಶಾಸ್ತ್ರಜ್ಞನು ಸಾರಿರುವನು. ಅದೇಮೇರೆಗೆ

ಬಾಲಕರು ತಾವು ಮುಂದೆ ಆಯುಷ್ಯದಲ್ಲಿ ಮಾಡಬಹುದಾದ ಕಾರ್ಯಗಳ ತಾಲೀಮು ಮಾಡುವರೆಂದು ಹೇಳುವರು. ಚಿಕ್ಕಬಾಲೆಯರು ಗೊಂಬೆಗಳನ್ನು ಬಾಲಕರ ಪೋಷಣೆಮಾಡುವಂತೆ ನಟನೆಮಾಡುವರು ಎಳೆಯ ಬಾಲಕ ಕುದುರೆಯ ಮೇಲೆ ಕುಳಿತುಕೊಂಡು ಸವಾರಿಮಾಡುವದೂ ಉದೇಶ ದೃಷ್ಟಾಂತಗಳು.

ಇರುವೆ-ಜೇನ್ನೊಣಗಳು ಹುಟ್ಟಿದ ಕೂಡಲೆ ಸಹಜಪ್ರವೃತ್ತಿಗಳ ಸೇವೆಗ ಆಹಾರ ಸಂಪಾದನ-ಆತ್ಮರಕ್ಷಣ ನೊದಲಾದ ಕಾರ್ಯಗಳನ್ನು ಮಾಡಬಲ್ಲವ ಕಾರಣ ಅವುಗಳಲ್ಲಿ ಕ್ರೀಡಾಪ್ರವೃತ್ತಿ ಇರುವದಿಲ್ಲ. ಮೇಲುಬುದ್ಧಿಯ ಪ್ರಾ ಗಳು ಎಳೆಯತನದಲ್ಲಿ ಆತ್ಮರಕ್ಷಣ ಮೊದಲಾದವುಗಳನ್ನು ಮಾಡಿಕೊಳ್ಳಲಾ ಇಂಥ ಪ್ರಾಣಿಗಳಲ್ಲಿಯೇ ಕ್ರೀಡಾಪ್ರವೃತ್ತಿಯು ಕಂಡುಬರುವದು. ಜೀವಶಾಸ್ತ್ರ (Bi-ology) ತತ್ವವನ್ನೂ ಈ ಪ್ರವೃತ್ತಿಯು ಒಳಗೊಂಡಿರುವದೆಂದು ಕಾ ಗ್ರೂಸನು ಹೇಳಿರುವನು. ಮುಂದಿನ ಆಯುಷ್ಯದಲ್ಲಿ ಬೇಕಾಗಿರುವ ಕಾಯ ಕೌಶಲ್ಯವನ್ನು ಪಡೆಯಲು ಎಳೆಯತನವು ಉತ್ಕೃಷ್ಟಸಮಯವೆಂದು ಶಾಸ್ತ್ರಜ್ಞನು ಕಂಠೋಕ್ತವಾಗಿ ಹೇಳಿರುವನು. ಪ್ರಾಣಿಗಳ ಮುಂದಿನ ಆಯುಷ್ಯ ಅಗತ್ಯಗಳ ಭವಿಷ್ಯವನ್ನು ಸೂಚಿಸುವ ಸಾಧನವೆಂದರೆ ಕ್ರೀಡೆಗಳಲ್ಲಿಯ ಕಾಯ ಗಳು. ಆದಾಗ್ಯೂ ಕ್ರೀಡೆಗಳಲ್ಲಿ ವೈವಿಧ್ಯವಿದ್ದು ಎಲ್ಲಕಾರ್ಯಗಳ ವಿಷಯವ ಅಷ್ಟೇ ಬಲವಾಗಿ ಈ ತತ್ವವು ಖಂಡಿತವಾಗಿ ಹೇಳಲಾರದು.

೩. **ಆವರ್ತನ ತತ್ವ:**— ಈ ತತ್ವವು ಹೇಳುವದೇನಂದರೆ— ಮನುಷ್ಯ ಮೊದಲು ವನಚರನಿದ್ದನು: ಮುಂದೆ ಅವನು ನಾಡಾಡಿಯಾದನು; ಒಳಿಕ ಸು ರಣೆಯ ಮೆಟ್ಟಲುಗಳನ್ನು ಏರುತ್ತೇರುತ್ತ ಅವನು ಇಂದಿನ ಸ್ಥಿತಿಯ ಹೊಂದಿದನು. ಅವನ ಕಾರ್ಯಪ್ರವೃತ್ತಿಯೆಲ್ಲ ಸಹಜಪ್ರವೃತ್ತಿಗಳ ಸ ಗಾಗಿಯೇ ಇದ್ದಿತು. ಅವನಲ್ಲಿ ಜಾತಿಗತವಾಗಿ ಎಷ್ಟೋ ಬಲಗಳು ಆನುವಂ ವಾಗಿ ಬಂದಿರುವವು. ಇಂಥ ಸ್ಥಿತ್ಯಂತರಗಳನ್ನು ಬಾಲಕರು ಕ್ರೀಡಾರೂಪದಿ ನಾಡಿನೋಡುವರೆಂದು ಈ ತತ್ವವು ಹೇಳುವದು. ಬಾಲಕರು ಬೇಟೆಯ ಆಡುವರು; ಕದನಗಳನ್ನು ಹೂಡುವರು; ನಾಡಾಡಿಗಳಾಗುವರು. ಇ ಕಾರ್ಯಗಳು ಮಾನವನು ಎಂದಿನಿಂದ ಮಾಡಿದ ಕಾರ್ಯಗಳ ಆವರ್ತನವೆ ವೆಂದು **ಸ್ಟ್ಯಾನ್ಲೆಹಾಲ**ನೆಂಬ ಶಾಸ್ತ್ರಜ್ಞನು ಡಂಗುರಹೊಯ್ದಿರುವನು.

೪. **ರೇಚಕ ತತ್ವ:**— ಮನುಷ್ಯಮಾತ್ರರಲ್ಲಿ ಪಲಾಯನ-ಯುಯುತ್ಸ ಮೊದಲಾದ ಪ್ರವೃತ್ತಿಗಳಿರುವವು. ಸುಸಂಘಟಿತಸಮಾಜಕ್ಕೆ ಈ ಪ್ರವೃತ್ತಿಗಳ

ದ್ಧವಾಗಿರುವವು. ಇಂಥ ಪ್ರವೃತ್ತಿಗಳನ್ನು ನಿಗ್ರಹಿಸಲಾಗದು; ನಾಶಪಡಿಸ
ಗದು ಅವುಗಳನ್ನು ಕ್ರೀಡೆಯಲ್ಲಿ ಉಪಯೋಗಿಸಲು ಆ ಹೀನಪ್ರವೃತ್ತಿಗಳು
ಗಿ ಉಚ್ಚತರ ಭಾವನೆಗಳು ಬಾಲಕರಲ್ಲಿ ನೆಲೆಗೊಳ್ಳುವವು. ಕ್ರೀಡೆಗಳಲ್ಲಿ
ಪ-ಕಲಹ ಪ್ರೀತಿಗಳು ಹೋಗಿ ತಮ್ಮ ಪಕ್ಷ, ತಮ್ಮ ಶಾಲೆ, ತಮ್ಮ
ಾಜ ಈ ಮೊದಲಾದವುಗಳಿಗೋಸುಗ ಸ್ವಾರ್ಥವನ್ನು ತ್ಯಜಿಸಿ, ಹಿರಿಯ
ರಿಗೆ ವಿಧೇಯರಾಗಿರಬೇಕೆಂಬ ಮೇಲ್ತರದ ಭಾವನೆಗಳು ಉಂಟಾಗುವವು.
ರದಲ್ಲಿ ಬೇಡಾದ ಪದಾರ್ಥಗಳು ಉಂಟಾಗಲು ರೇಚಕ ಔಷಧವನ್ನು ಕೊಟ್ಟು
ಸ್ಯನು ಆ ಶರೀರವನ್ನು ಶುದ್ಧೀಕರಿಸುವಂತೆ, ಮನಸ್ಸಿನಲ್ಲಿಯ ಅಸೂಯೆ-
ಪ ಮೊದಲಾದ ಹೀನತರ ಪ್ರೇರಣೆಗಳನ್ನು ಹೋಗಲಾಡಿಸಲು ಕ್ರೀಡೆಗಳೇ
ವಾದ ಸಾಧನ.

ಇದುವರೆಗೆ ಕ್ರೀಡೆಗಳ ವಿಷಯವಾಗಿ ವಿವರಣೆ ಮಾಡಿದಾಗ್ಯೂ ಕ್ರೀಡೆ
ುದರೆ ಏನು? ಯಾವುಗಳಿಗೆ ಕ್ರೀಡೆಗಳೆನ್ನಬೇಕು? ಕ್ರೀಡೆಗೂ ಕರ್ತವ್ಯಕ್ಕೂ
ಪ ಭೇದವೇನು? ಎಂಬದನ್ನು ನಾವು ವಿಚಾರಿಸಲಿಲ್ಲ. ಅದನ್ನು ಮೊದಲು
ುಕೊಳ್ಳುವದು ತೀರ ಅವಶ್ಯ. ಯಾವುದನ್ನು ನಾವು ಮಾಡಲೇಬೇಕು;
ಡದಿದ್ದರೆ ನಮಗೆ ಅಪಾಯ ತಟ್ಟಬಹುದು; ಹಾನಿಯಾಗಬಹುದು; ಯಾರಾ
ನಮಗೆ ಹೆಸರಿಡಬಹುದು; ಇಂಥದು ನಮ್ಮ ಕರ್ತವ್ಯ; ಯಾವುದನ್ನು
ಮ್ಮ ಮನಸ್ಸಿಗೆ ಬಂದರೆ ಮಾತ್ರ ನಾವು ಮಾಡಬಹುದು; ಇಲ್ಲವಾದರೆ ಬಿಡ
ುದು; ಅದು ಕ್ರೀಡೆ ಎಂದು ಹೇಳಬಹುದು. ಕರ್ತವ್ಯದಲ್ಲಿ ಯಾವುದಾದ
ುದು ಉದ್ದೇಶವು ಅಡಕವಾಗಿರುವದು; ಅಂಥದೇನೂ ಇಲ್ಲದ್ದು ಕ್ರೀಡೆ
ನು ಹೇಳುವದೂ ಉಂಟು. ಈ ವಾಕ್ಯಗಳು ಕ್ರೀಡೆ-ಕರ್ತವ್ಯಗಳನ್ನು ಸರಿಯಾಗಿ
ಳಾರವು. ಯಾಕಂದರೆ, ಒಬ್ಬ ಬಾಲಕನಿಗೆ ಯಾವುದೊಂದು ಆಟದಲ್ಲಿ
ರುಚಿಯಿಲ್ಲದಿದ್ದರೆ ಅದು ಅವನಿಗೆ ಕರ್ತವ್ಯಕ್ಕಿಂತ ಹೆಚ್ಚು ಬೇಸರಿಕೆಯನ್ನು
ುವದು; ಅವನ ಮನಸ್ಸು ಆ ಆಟವನ್ನು ಕುರಿತು ಒಪ್ಪುವದಿಲ್ಲ. ಆ ಆಟದ
ಿಯಾವಾಗ ಅಳಿದುಹೋಗುವದೋ ಎಂದು ಅವನು ಚಿಂತಿಸುವನು. ಅದೇ
ುವುದೊಂದು ಕರ್ತವ್ಯವನ್ನು ಮಾಡುವಾಗ ಕೇವಲ ಆನಂದದಿಂದ ವೇಳೆಯು
ೋದರೆ ಅವನಿಗೆ ಆಗ ಬೇಸರಿಕೆ ಬರುವದಿಲ್ಲ. ಅಂದಬಳಿಕ ವ್ಯವಸಾಯಭೇದದಿಂದ
ಡೆ-ಕರ್ತವ್ಯಗಳೆಂದು ಭೇದಮಾಡಲಾಗದೆಂದು ಹೇಳಿದ ಹಾಗಾಯಿತು.
ಡುವವನ ಮನೋವೃತ್ತಿಯನ್ನು ಅದು ಅವಲಂಬಿಸಿರುವದು. ಇಷ್ಟು ತಿಳಿದ
ಈ ಅಧ್ಯಾಪನಕಾರ್ಯದಲ್ಲಿ ಪ್ರತಿಪ್ರತಿ ಕ್ರಮಗಳಲ್ಲಿ ಬಾಲಕರು ಆನಂದ
ಿಯನ್ನು ಹೊಂದಿ ವೇಳೆಕಳೆಯುವಂತೆ ಮಾಡಬೇಕು. ಆನಂದವೆಂದರೆ

ಕೇವಲ ಹಾಸ್ಯ, ಚೇಷ್ಟೆ, ನಗಚಾಟಿಕೆ ಎಂದು ತಿಳಿಯಬಾರದು. ಯಾವುದೊ
ಕಾರ್ಯವು ಬೇಸರಿಕೆಯನ್ನುಂಟುಮಾಡದೆ ಜಿಜ್ಞಾಸೆಪೂರ್ವಕವಾಗಿ ಮ
ಮಾಡುವಾಗಲು ಒಂದುತರದ ಆನಂದವನ್ನು ಬಾಲಕರು ಹೊಂದುತ್ತಿದ್ದರೆ
ಕ್ರೀಡೆಯೆಂದು ಹೇಳಬೇಕು. ಗಣಿತ ವಿಷಯದಲ್ಲಿ ಕೇವಲ ಸಂಖ್ಯೆಗಳ ವ್ಯಾ
ನನ್ನೇ ಮಾಡುವ ಬದಲು ಪ್ರತ್ಯಕ್ಷ ಅಂಗಡಿಯಲ್ಲಿ ನಡೆಯುವ ಹಾಗೆ ಬೇರೆ
ಋಣಿಕೆಗಳ ವ್ಯವಹಾರವನ್ನು ಬಾಲಕರು ತಮ್ಮೊಳಗೆ ನಡೆಯುವುದನ್ನು ನೋ
ಅವರ ಮನಸ್ಸಿಗೆ ಸೊಗಸಾಗಿ ವಿಷಯದಲ್ಲಿ ಅಭಿರುಚಿ ಹುಟ್ಟಿ ಕೇಂದ್ರೀ
ಅವಧಾನದಿಂದ ಕಾರ್ಯಗಳಲ್ಲಿ ಪ್ರವೃತ್ತರಾಗುವರು. ಭಾಷಾ-ಕಥಾ ಭೂಗೋ
ಇತಿಹಾಸ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಈ ಆಟಗಳನ್ನು ರೂಪಾಂ
ಬಹುದು. ಹೀಗಾಗುವಾಗ ಶಿಕ್ಷಕರು ತಮ್ಮ ವೇಳೆಯು ವ್ಯರ್ಥ ಕ್ರೀಡೆ
ಹೋಯಿತೆಂದು ಭಾವಿಸುವ ಕಾರಣವಿಲ್ಲ.

ಇನ್ನು ಕ್ರೀಡೆಗಳಲ್ಲಿ ಅನಿರ್ಬಂಧ ಇಲ್ಲವೆ ಸ್ವಚ್ಛಂದ ಕ್ರೀಡೆ, ಸುಸಂಘ
ಕ್ರೀಡೆ, ಉತ್ಸಾಹೋತ್ಪಾದಕ ಇಲ್ಲವೆ ಶ್ರಮಪರಿಹಾರಕ ಕ್ರೀಡೆ ಎಂದು ಬೇರೆ
ಭೇದಗಳನ್ನು ಮಾಡುವಷ್ಟುಂಟು. ತೀರ ಚಿಕ್ಕ ಬಾಲಕನು ಒಂಟಿಗನಾಗಿ ಆ
ಶೀಲವುಳ್ಳವನಿರುವನು. ಅವನದು ಸ್ವಚ್ಛಂದವೃತ್ತಿಯು. ಮನಬಂದಂತೆ ಆಡುವ
ಅವನಿಗೆ ಮನೆಯೊಳಗೆ ಬಾಲಕರಿದ್ದರೆ ಬೇಡವೆಂತಲ್ಲ. ಅವರಿದ್ದರೂ ಸರಿ
ದಿದ್ದರೂ ಸರಿ. ಅವನ ಆಟಗಳಿಗೆ ಮೇರೆ ಇಲ್ಲ; ನಿಯಮಗಳಿಲ್ಲ. ಶೈಶವಾವಸ್ಥೆ
ಬಾಲಕರಿಗೆ ಕ್ರೀಡಾ-ಕರ್ತವ್ಯಗಳಲ್ಲಿ ಭೇದವಿಲ್ಲ. ಬಾಲಕರ ಪೋಷಣ-ಸಂರಕ್ಷ
ಗಳು ಹಿರಿಯರಿಂದ ಆಗುವದರಿಂದ ಕರ್ತವ್ಯಭಾರವು ಅವರಮೇಲಿಲ್ಲ.
ಮೇರೆಗೆ ಕೆಲವು ಪ್ರಾಣಿಗಳ ಚಿಕ್ಕಮಕ್ಕಳಿಗೂ ಇದೇ ತತ್ವವು ಅನ್ವಯಿಸುವ
ಚಿಕ್ಕ ಬಾಲಕರು ಸುತ್ತುಮುತ್ತಲಿನ ಪ್ರಪಂಚವೆಲ್ಲ ತಮ್ಮ ಸೇವೆಗಾಗಿ
ಇರುವದೆಂದು ಭಾವಿಸಿರುವರು. ಏಳೆಂಟುವರ್ಷದ ಬಾಲಕನು ಒಂಟಿಗನ
ಆಡಲಾರನು. ಅವನಿಗೆ ತನ್ನ ಆಟಗಳಲ್ಲಿ ಗೆಳೆಯರೂ ಪಾಲುಗಾರರೂ ಬೇ
ಅಲ್ಲದೆ ಬಣಗಟ್ಟಿಕೊಂಡು ಬಣದಹಿತಕ್ಕಾಗಿ ಆಡಬೇಕೆಂದು ಅವನ ಭಾವನೆ.
ಅವಸ್ಥೆಯ ಬಾಲಕನಲ್ಲಿ ಕಲ್ಪನಾಸಾಮರ್ಥ್ಯವು ವಿಶೇಷವಿರುವದರಿಂದ ಕಾಲ್ಪನಿ
ಆಟಗಳು ಅವನ ಪ್ರೀತಿಯ ವಿಷಯ. ಚಿಕ್ಕ ಹುಡುಗಿಯು ತನ್ನ ಗೊಂಬೆಯ
ತನ್ನ ಮಗುವೆಂದೇ ಭಾವಿಸುವಳು. ಆ ಮಗುವಿನ ಪೋಷಣ,-ಸಂರಕ್ಷಣಗಳನ್ನ
ಮಾಡುವಳು.

ಬೆಳೆದ ಬಾಲಕರಲ್ಲಿ ನಿಯಮಗಳನ್ನು ಪಾಲಿಸಬೇಕು, ನಿಯಮಬದ್ಧ
ಗಳನ್ನು ಹಿಂಡುಗಟ್ಟಿಕೊಂಡು ಆಡಬೇಕು, ತನಗಿಂತ ಹಿರಿಯರನ್ನು ತ

ಗಟ್ಟಬೇಕು, ಈ ಮೊದಲಾದ ತಿಳುವಳಿಕೆಗಳು ನೆಲೆಗೊಳ್ಳುವವು. ತಮ್ಮ
ದ ಹಿತಕ್ಕಾಗಿ ತಮ್ಮ ಸ್ವಾರ್ಥವನ್ನು ಸೂರೆಮಾಡಿ ಬಿಡುವರು. ಬಾಲಕರಲ್ಲಿ
ಸ್ಮತಮ್ಮ ಸಾಲೆಗಳ ವಿಷಯವಾಗಿ ಸುಸಂಘಟಿತ ಭಾವನೆಗಳನ್ನು ನೆಲೆಗೊಳ್ಳಿಸಲು
ಪ ತಕ್ಕ ಸಮಯ.

ಪ್ರಸಿದ್ಧ ಶಿಕ್ಷಣಶಾಸ್ತ್ರಜ್ಞನಾದ ಫ್ರೋಬೆಲ್ಲನು ಕ್ರೀಡೆಗಳ ಮರ್ಮವನ್ನು
ನ್ನಾಗಿ ಅರಿತವನಾದಕಾರಣ ಚಿಕ್ಕ ಬಾಲಕರಿಗಾಗಿ ತನ್ನ ಕಿಂಡರಗಾರ್ಟನ
ದ್ಧತಿಯನ್ನು ಬಳಕೆಯಲ್ಲಿ ತಂದನು. ಅವನ ಪದ್ಧತಿಯಲ್ಲಿ ಬಾಲಕರ ವ್ಯವಸಾಯ
ಲ್ಲ ಕ್ರೀಡಾ ರೂಪವಾಗಿ ಇದ್ದವು. ವಿಷಯಜ್ಞಾನವೆಲ್ಲ ತೋಟಗಳಲ್ಲಿ ಆಟಗಳ
ಬಾಂತರವಾಗಿಯೇ ದೊರಕುವಂತೆ ಅವನು ಮಾಡಿದ್ದನು. ಕ್ರೀಡೆಗಳಲ್ಲಿಯ
ಹಜವೃತ್ತಿಯನ್ನು ಅವನು ಅನುಸರಿಸಿದಾಗ್ಯೂ ಸ್ವಾತಂತ್ರ್ಯತೆಯನ್ನು ಬಾಲಕರಿಗೆ
ಟ್ಟಿರಲಿಲ್ಲ. ಶಿಕ್ಷಕರ ನೇತೃತ್ವ-ನಿರ್ಬಂಧಗಳನ್ನು ಅವನು ಬಾಲಕರಿಂದ
ಸಿರಲಿಲ್ಲ.

ಆದರೆ ಮಾಂಟೀಸೂರಿಯವರು ಕ್ರೀಡೆಯಲ್ಲಿರುವ ಸ್ವಾತಂತ್ರ್ಯ-ಆನಂದ
ಹಜವಾದ ವೃತ್ತಿಗಳನ್ನು ತಮ್ಮ ಪದ್ಧತಿಯಲ್ಲಿ ಸಂಪೂರ್ಣಸ್ಥಾಪಿಸಿರುವರು.
ರಡೂ ಪದ್ಧತಿಗಳು ತೀರ ಚಿಕ್ಕಬಾಲಕ-ಬಾಲಿಕೆಯರಿಗಾಗಿ ಉಂಟಾಗಿರುವವು,
ಕ್ರೀಡೆಗೆ 'ಕಾಲ್ಡವೆಲ್ಲ ಕುಕ್' ಎಂಬವರು ಎಲ್ಲ ವಿಷಯಗಳಲ್ಲಿಯೂ ಜೆಳೆದ ಬಾಲಕ
ನೂ ಕೂಡ ಕ್ರೀಡನ ಮಾರ್ಗವನ್ನು ಅನುಸರಿಸಿರುವರು. ಎಲ್ಲ ರೀತಿಯಿಂದಲೂ
ಡನ ಮಾರ್ಗವು ಅನುಸರಿಸಲು ತಕ್ಕದ್ದಾಗಿರುವದೆಂಬುದಕ್ಕೆ ಸಂದೇಹವಿಲ್ಲ.

ನಮ್ಮ ಶಾಲೆಗಳಲ್ಲಿಯೂ ಇಂಥ ಮಾರ್ಗವನ್ನು ಶಿಕ್ಷಕರು ಅನುಸರಿಸಿದರೆ
ಶ್ರಮವು ಹೆಚ್ಚು ಬಲಕಾರಿಯಾಗುವದು. ಇಂದಿನ ಶಿಕ್ಷಣಕ್ರಮದಲ್ಲಿದ್ದ ಒಂದು
ಕೊರತೆಯನ್ನು ಅವರು ದೂರ ಮಾಡಿದಂತೆ ಆಗುವದು.

ವ್ಹ. ಘಾ. ಪರೀಕ್ಷೆಯ ವಿದ್ಯಾರ್ಥಿಗಳ ಉತ್ತರ ಪೇಪರುಗಳ ಬರಹದ ಸುಧಾರಣೆ

೧೯೩೭ನೆಯ ಇಸವಿಯಲ್ಲಿ ಆದ ವ್ಹ. ಘಾ. ಪರೀಕ್ಷೆಯಲ್ಲಿ ಉಮೇದವಾರ ಉತ್ತರದ ಕಾಗದಗಳಲ್ಲಿ ಕಂಡುಬಂದ ತಪ್ಪುಗಳನ್ನು ಪರೀಕ್ಷಕರು ತೋರಿಸಿ ಮೇರೆಗೆ ಈ ಮೊದಲು ಪ್ರಾಥಮಿಕ ಶಿಕ್ಷಣದ ಅಕ್ಟೋಬರದ ಸಂಚಿಕೆಯಲ್ಲಿ ಪ್ರಕಟಿಸಿದೆ. ಈ ಸೂಚನೆಗಳು ಪ್ರಾಥಮಿಕ ಶಿಕ್ಷಣದ ಸುಧಾರಣೆಗೆ ಅನುಕೂಲ ವಾಗಿರುವವು. ವಿಶೇಷವಾಗಿ ಭಾಷಾವಿಷಯದಲ್ಲಿ ವಿದ್ಯಾರ್ಥಿಗಳು ಮಾಡುವ ತಪ್ಪುಗಳು ಶಿಕ್ಷಕರ ಅನುಭವಕ್ಕೂ ಬಂದಿವೆ, ಹಾಗು ಬರುತ್ತಲಿರುವವು ಭಾಷಾವಿಷಯದ ಪ್ರಶ್ನಪೇಪರಿನಲ್ಲಿರುವ ವಾಕ್ಯವಿಭಜನ ಕ್ರಮವು ವಾಕ್ಯರಚನ ಜ್ಞಾನಕ್ಕೆ ಅತ್ಯಾವಶ್ಯಕವಾದುದರಿಂದಲೂ ಪರೀಕ್ಷೆಯಲ್ಲಿ ಹುಡುಗರು ಈ ವಿಷಯವನ್ನು ಮನಸ್ಸಿಗೆ ಬಂದಂತೆ ಬಿಡಿಸಿದ್ದರೆಂದು ತಿಳಿದುದರಿಂದಲೂ ಈ ವಿಷಯ ಸುಧಾರಣೆಗಾಗಿ ಸ್ವಲ್ಪ ಯತ್ನಿಸಿದೆ. ವಾಕ್ಯವಿಭಜನಾಕ್ರಮವು ಸಾಮಾನ್ಯವಾ ಸಂಯೋಜಿತವಾಕ್ಯಗಳ ವಿಷಯದಲ್ಲಿ ಸುಲಭವಾಗಿ ತೋರುವದು; ಆದರೆ ವಿ ವಾಕ್ಯಗಳ ವಿಷಯವಾಗಿ ಯತ್ನಿಸಿದರೆ ಇನ್ನುಳಿದ ವಾಕ್ಯಗಳ ವಿಷಯವಾಗಿ ತೊಂ ಯತ್ನಿಸಿದಂತಾಗುವದು ಎಂದು ವಿಚಾರಿಸಿ ಮಿಶ್ರವಾಕ್ಯಗಳ ವಿಭಜನಾಕ್ರಮವನ್ನು ಕೆಳಗೆ ತೋರಿಸಿದೆ.

ಒಂದು ಉದಾಹರಣವನ್ನು ತೆಗೆದುಕೊಂಡು ಬಿಡಿಸಿತೋರಿಸಿ ಆ ಮೇ ಸಾಮಾನ್ಯವಾಗಿ ಹೇಳಿ ೧೯೩೭ನೆಯ ಇಸವಿಯಲ್ಲಿಯ ಪ್ರಶ್ನಪೇಪರಿನಲ್ಲಿ ವಾಕ್ಯವನ್ನು ವಿಭಜಿಸಿ ತೋರಿಸಿದೆ.

ಉದಾಹರಣೆಗಾಗಿ ಆರಿಸಿದ ವಾಕ್ಯವು

ಅನಾವೃಷ್ಟಿಯೇ ಬರದ ಮೂಲಕಾರಣವೆಂದು ಹೇಳುವದು ಅವಶ್ಯವಿಲ್ಲ ಇಲ್ಲಿ ಅವಶ್ಯವಿಲ್ಲ ಎಂಬದು ಕ್ರಿಯಾಪದವಾಗಿದೆ. ಯಾವದು ಅವಶ್ಯವಿಲ್ಲ ಎಂದ ಪ್ರಶ್ನ ಮಾಡಿದರೆ ಹೇಳುವದು ಅವಶ್ಯವಿಲ್ಲ ಎಂದು ಉತ್ತರವು ಬರುತ್ತದೆ. ಏನೆಂ ಹೇಳುವದು ಎಂಬ ಆಕಾಂಕ್ಷೆಯು ಮತ್ತೆ ಉತ್ಪನ್ನವಾಗುತ್ತದೆ. ಅದನ್ನು ಪೂರೈ ಗೊಳಿಸುವದಕ್ಕಾಗಿ ಏನೆಂದು ಹೇಳುವದು ? ಎಂಬದಾಗಿ ಪ್ರಶ್ನ ಮಾಡಿದರೆ ಅ ವೃಷ್ಟಿಯೇ ಬರದ ಮೂಲಕಾರಣವು ಎಂದು ಹೇಳುವದು ಎಂಬದಾಗಿ ಉತ್ತ

ಬರಬೇಕಾಗುತ್ತದೆ. ಆದುದರಿಂದ ಅನಾವೃಷ್ಟಿಯೇ.... ಹೇಳುವದು ಎಂಬ ಸಣ್ಣ ವಾಕ್ಯವೇ ಅವಶ್ಯವಿಲ್ಲ ಎಂಬ ಕ್ರಿಯೆಗೆ ಕರ್ತೃವಾಯಿತು, ಹೀಗೆ ಬಂದು ವಾಕ್ಯವು ತ್ರಿಖಂಡು ವಾಕ್ಯದ ಕಾರಕದ ಸ್ಥಳದಲ್ಲಿ ಬಂದಾಗ ಮುಖ್ಯವಾದ ವಾಕ್ಯಕ್ಕೆ ಧಾನವಾಕ್ಯವೆಂದೂ ಕಾರಕದ ಸ್ಥಳದಲ್ಲಿ ಬಂದ ವಾಕ್ಯಕ್ಕೆ ಅಂಗವಾಕ್ಯವೆಂದೂ ಳೆಯವದು ಸಹಜ. ಪ್ರಧಾನವಾಕ್ಯದಲ್ಲಿ ಕರ್ತೃ, ಕ್ರಿಯಾಪದ, ಹೀಗೆ ಎರಡೇ ಬರಬವು. ಇನ್ನು ಉಪವಾಕ್ಯದ ವಿಷಯವಾಗಿ ವಿಚಾರಿಸುವದು ಉಳಿಯಿತು. ಆದರಿಂದ ಆ ವಾಕ್ಯದ ಕ್ರಿಯೆಯನ್ನು ಕುರಿತು ಆಲೋಚಿಸೋಣ–ಏನೆಂಬದಾಗಿ ಳುವದು ಎಂದು ಪ್ರಶ್ನಮಾಡಿದರೆ ಅನಾವೃಷ್ಟಿಯೇ ಬರದ ಮೂಲಕಾರಣ ಬದಾಗಿ ಉತ್ತರವು ಹೊರಡುವದು. ಆದ್ದರಿಂದ ಅಂಗವಾಕ್ಯದ ಕ್ರಿಯೆ ನ್ನು ಕ್ರಿಯಾಪದದ ಸ್ಥಳದಲ್ಲಿ ಬರೆದಾಗ "ಅನಾವೃಷ್ಟಿಯು ಬರದ ಮೂಲ ರಣವಿರುತ್ತದೆ ಎಂಬದಾಗಿ" ಇಷ್ಟೆಲ್ಲ ಪದಸಮೂಹವು ಹೇಳುವದು ಈ ಯೆಯನ್ನು ಬಣ್ಣಿಸಿದ್ದರಿಂದ ಈ ಕ್ರಿಯೆಗೆ ಅದು ಕ್ರಿಯಾವಿಶೇಷಣಸ್ಥಾನದಲ್ಲಿ ಯಿತು. ಹೇಳುವದು ಈ ಕ್ರಿಯೆಗೆ ನಾವು ಅಥವಾ ಅಸ್ಮರು ಎಂಬದಾಗಿ ವ್ಯಾಹಾರ ಕರ್ತವ್ಯಗಳಿರುವವು. ಬಳಿಕ ಅನಾವೃಷ್ಟಿಯೇ ಬರದ ಮೂಲಕಾರಣವು ುತ್ತದೆ ಎಂಬ ವಾಕ್ಯದ ವಿಷಯವಾಗಿ ವಿಚಾರಮಾಡುವದು ಉಳಿಯಿತು. ುತ್ತದೆ ಎಂಬದು ಅಧ್ಯಾಹಾರ ಕ್ರಿಯಾಪದವು. ಇದಕ್ಕೆ ಅನಾವೃಷ್ಟಿಯು ಬದು ಕರ್ತೃವೂ ಆಗಿರುವದು. ಇದರ ಮುಂದೆ ಸೇರಿದ 'ಏ' ಎಂಬದಕ್ಕೆ ರ್ಥಾರ್ಥಕ ನಿಪಾತಾವ್ಯಯ ಎನ್ನಬೇಕು. ಬರದ ಮೂಲಕಾರಣವು ಎಂಬ ನು ಅನಾವೃಷ್ಟಿಯು ಈ ಪದದ ಉತ್ತರ ವಿಶೇಷಣವು. ಆದುದರಿಂದ ಇದು ೃಏನ ವಿಶೇಷಣಸ್ಥಾನದಲ್ಲಿ ಬರುತ್ತದೆ. ಅಥವಾ ಅನಾವೃಷ್ಟಿಯು ಏನಾ ುತ್ತದೆ ಎಂದು ವಿಚಾರಿಸಿದರೆ ಬರದ ಮೂಲಕಾರಣವಾಗಿ ಎಂಬದಾಗಿ ಕ್ರಿಯೆ ನ್ನು ವರ್ಣಿಸಿದ್ದರಿಂದ ಇದು ಕ್ರಿ.ವಿ. ಆಗಿರುತ್ತದೆ. ಇದನ್ನು ಕ್ರಿಯೆಯ ಹಿಂದೆ ುಗೆ ಸಂಬುಧಿಸಿನ ಪದ ಎಂಬದರಲ್ಲಿ ಕ್ರಿ. ವಿ. ಎಂದು ಸೇರಿಸಿಕೊಳ್ಳಬಹುದು.

ಹೀಗೆ ಮೊದಲು ಪ್ರಧಾನ ವಾಕ್ಯದ ವಿಚಾರ, ಬಳಿಕ ಅದರೊಳಗಿನ ಮುಖ್ಯ ಪವಾಕ್ಯದ ವಿಚಾರ ಮತ್ತೆ ಅದರ ಉಪವಾಕ್ಯದ ವಿಚಾರ ಈ ರೀತಿಯಾಗಿ ಾರಮಾಡಬೇಕಾದ್ದರಿಂದ ಪರೀಕ್ಷೆಗಾಗಿ ಕೊಟ್ಟಿದ್ದ ವಾಕ್ಯದ ಕೆಳಗೆ ಪ್ರಧಾನ ಕ್ಯ, ಅಂಗವಾಕ್ಯಗಳನ್ನು ಸಂಕ್ಷಿಪ್ತವಾಗಿ ಬರೆಯಬೇಕು. ಅಂಗವಾಕ್ಯಗಳಲ್ಲಿ ಬ, ಎಂಬದಾಗಿ ಬರೆದು ಅವನ್ನು ಸಹ ಸಂಕ್ಷಿಪ್ತವಾಗಿ ಬರೆಯಬೇಕು. ಮುಂದೆ ಬರೆದು ತೋರಿಸಿದೆ.)

ವಾಕ್ಯವಿಭಜನೆಮಾಡುವಾಗ ಕರ್ತೃ, ಕ್ರಿಯಾಪದ, ಕರ್ಮವಿದ್ದರೆ ಕರ್ಮ ಬಳಿಕ ಅವುಗಳ ವಿಶೇಷಣ ಈ ರೀತಿಯಾಗಿ ಹೇಳಿದರೆ ಆ ವಾಕ್ಯದ ಅರ್ಥ ವಿಷಯವಾಗಿ ಏನೂ ಆಕಾಂಕ್ಷೆ ಉಳಿಯುವದಿಲ್ಲ. ಆದ್ದರಿಂದ ಮುಂದೆ ತೋರಿದಂತೆ ಕೋಷ್ಟಕವನ್ನು ಹಾಕಿಕೊಂಡು ಬಿಡಿಸಿತೋರಿಸಬೇಕು.

೧೯೩೭ ನೆಯ ಇಸವಿಯ ಪರೀಕ್ಷೆಯಲ್ಲಿ ವಿಭಜನೆಗಾಗಿ ಕೊಟ್ಟ ವಾಕ್ಯವನ್ನ ಕೃಷ್ಣಾನದಿಯು ಸಹ್ಯಗಿರಿಯ ಉನ್ನತಶಿಖರದಲ್ಲಿ ಉಗಮಹೊಂದಿ ಅನೇಕ ಶಾಖೆಗಳನ್ನೊಳಗೊಂಡು ಪೂರ್ವಜಲನಿಧಿಯನ್ನು ಪ್ರವೇಶಿಸುತ್ತದೆ.

ಪ್ರಧಾನವಾಕ್ಯ :— ಕೃಷ್ಣಾನದಿಯು.....ಪೂರ್ವಜಲನಿಧಿಯನ್ನು ಸೇರುತ್ತದೆ

ಅಂಗವಾಕ್ಯ:—(ಅ) ಕೃಷ್ಣಾನದಿಯು.....ಅನೇಕ ಶಾಖೆಗಳನ್ನೊಳಗೊಂಡ

(ಬ) ಕೃಷ್ಣಾನದಿಯು.....ಉಗಮಹೊಂದಿ

ಎಂತಹ ವಾಕ್ಯ	ಕರ್ತೃವಿಗೆ ಸಂಬಂಧಿಸಿದ ಪದ	ಕರ್ತೃ	ಕರ್ಮಕ್ಕೆ ಸಂಬಂಧಿಸಿದ ಪದ	ಕರ್ಮ	ಕ್ರಿಯೆಗೆ ಸಂಬಂಧಿಸಿದ ಪದ	ಕ್ರಿಯಾಪ
ಪ್ರಧಾನ ವಾಕ್ಯ	...	ಕೃಷ್ಣಾ ನದಿಯು	..	ಪೂರ್ವ ಜಲ ನಿಧಿಯನ್ನು	(ಅ) ಅಂಗ ವಾಕ್ಯ ಕ್ರಿ. ವಿ.	ಸೇರುತ್ತದೆ
(ಅ) ಅಂಗ ವಾಕ್ಯ	...	,,	ಅನೇಕ	ಶಾಖೆಗಳನ್ನು	ಸಹ್ಯಗಿರಿಯ ಉನ್ನತ ಶಿಖರದಲ್ಲಿ ಉಗಮ ಹೊಂದಿ ಕ್ರಿ. ವಿ.	ಒಡಗೊಂ
(ಬ) ಅಂಗ ವಾಕ್ಯ		,,	....	....	ಸಹ್ಯಗಿರಿಯ ಉನ್ನತ ಶಿಖರದಲ್ಲಿ (ಅಧಿಕರಣ)	ಉಗಮ ಹೊಂದಿ

ವಾಕ್ಯಗಳನ್ನು ವಿಭಜಿಸುವಾಗ ವಿದ್ಯಾರ್ಥಿಗಳಿಗೆ ಹೇಳಬೇಕಾದ ಸಂಗತಿಗಳು.

ಕೊಟ್ಟ ವಾಕ್ಯವು ಎಂತಹ ವಾಕ್ಯವೆಂಬದನ್ನು ಮೊದಲು ವಿಚಾರಿಸಬೇಕು. ಾನ್ಯವಾಕ್ಯ. ಸಂಯುಕ್ತವಾಕ್ಯಗಳಿದ್ದರೆ ಸುಲಭವಾಗಿ ವಿಂಗಡಿಸಿಕೊಳ್ಳಲಿಕ್ಕೆ ತ್ತದೆ. ಕರ್ತೃ ಕರ್ಮ ಕ್ರಿಯಾಪದಗಳನ್ನು ಗೊತ್ತುಹಿಡಿದು ಅವುಗಳ ಷಣಗಳು ಸಿಕ್ಕದ್ದಾದರೆ ಅವುಗಳಿಗಾಗಿ ಕಾದಿಟ್ಟ ಸ್ಥಳದಲ್ಲಿ ತುಂಬಿದರೆ ತೀರಿತು.

ಮಿಶ್ರವಾಕ್ಯ ಸಮ್ಮಿಶ್ರವಾಕ್ಯಗಳಿದ್ದರೆ ಮುಖ್ಯ ಕ್ರಿಯಾಪದವನ್ನು ಹುಡುಕಿ ಕರ್ತೃ ಕರ್ಮಗಳನ್ನು ಗೊತ್ತುಹಚ್ಚಬೇಕು. ಒಮ್ಮೊಮ್ಮೆ ಅಂಗವಾಕ್ಯಗಳೇ ಕರ್ಮಕಾರಕಗಳಾಗಲಿ ಅಥವಾ ಆ ಕಾರಕಗಳ ವಿಶೇಷಣಗಳಾಗಲಿ ಇರ ದು. ಅಂಗವಾಕ್ಯಗಳ ಕೊನೆಯಲ್ಲಿ ಕ್ರಿಯಾಪದವಿರಬಹುದು. ಇಲ್ಲದಿದ್ದರೆ ತಗಳಿರಬಹುದು. ಕೃದಂತಗಳು ಕ್ರಿಯಾವಾಚಕಗಳಾದದರಿಂದ ಅವಕ್ಕೂ ಮೊದಲಾದ ಕಾರಕಗಳು ಇರುವವು. ಕೃದಂತಗಳಿಗೆ ಸಂಬಂಧಿಸಿದ ಆ ಪದಗಳು ಸೇರಿ ವಾಕ್ಯದಂತೆ ಇರುವದರಿಂದ ಅದಕ್ಕೆ ಖಂಡವಾಕ್ಯವೆಂದು ಬಹುದು. ಇಂಥ ಖಂಡವಾಕ್ಯಗಳ ಕೊನೆಯಲ್ಲಿ ಕೃನ್ನಾಮಗಳಾಗಲಿ ತ್ಪನನಾಮಗಳಾಗಲಿ ಕೃದಂತಾವ್ಯಯಗಳಾಗಲಿ ಇರಬಹುದು. ಅಂಗವಾಕ್ಯವು ರ್ಥ ವಾಕ್ಯವಿದ್ದರೆ ಅದು ತನ್ನ ಕೊನೆಯಲ್ಲಿ ಇಟ್ಟ ಎಂತಹ, ಎಂಬುದನ್ನು, ಎಂಬ ತು, ಎಂಬ ಮಾತನ್ನು ಇತ್ಯಾದಿಗಳಿಂದ ಪ್ರಧಾನವಾಕ್ಯಕ್ಕೆ ಕೂಡಿಸಲ್ಪಟ್ಟಿರು . ಹೀಗೆ ಅಂಗವಾಕ್ಯಗಳನ್ನು ಗೊತ್ತುಹಿಡಿದು ಅದಕ್ಕೂ ಮುಖ್ಯ ವಾಕ್ಯಕ್ಕೂ ಕ್ಕ ಸಂಬಂಧವನ್ನು ತಿಳಿದುಕೊಳ್ಳಬೇಕು.

ಉಪವಾಕ್ಯವು ಕ್ರಿಯಾವಿಶೇಷಣದ ಸ್ಥಾನದಲ್ಲಿದ್ದಾಗ ಅದು ಮುಖ್ಯ ವಾಕ್ಯದ ಣವನ್ನಾಗಲಿ, ರೀತಿಯನ್ನಾಗಲಿ, ಉದ್ದೇಶವನ್ನಾಗಲಿ ಕಾಲವನ್ನಾಗಲಿ ಹೇಳು ಬಹುದು.

ಈ ರೀತಿಯಾಗಿ ಉಪವಾಕ್ಯಗಳನ್ನೂ ಅವುಗಳಿಗೂ ಮುಖ್ಯ ವಾಕ್ಯಗಳಿಗೂ ಕ್ಕ ಸಂಬಂಧವನ್ನೂ ಕಂಡುಹಿಡಿದು ಅಂಗವಾಕ್ಯಗಳನ್ನು ಕ್ರಿಯೆಗೆ ಸಂಬಂಧಿ ಎಂಬ ಸದರಿನ ಕೆಳಗೆ ಬರೆದು ಉದ್ದೇಶಾರ್ಥ, ಕಾರಣ, ರೀತಿ ಇತ್ಯಾದಿ ದ್ದನ್ನು ಅದರ ಮುಂದೆ ಬರೆಯಬೇಕು.

ಉದಾಹರಣಾರ್ಥವಾಗಿ— "ನೀನು ಮೊದಲು ಆಲೋಚಿಸಿದಂತೆ
ಸ್ಥಿತಿಯು ಆಯಿತು". ಇಲ್ಲಿ ಅಂಗವಾಕ್ಯವನ್ನು ಮುಖ್ಯ ವಾಕ್ಯದ ಕ್ರಿ
ಸಂಬಂಧಿಸಿದ ಪದ ಎಂಬ ಸದರಿನಲ್ಲಿ ಬರೆದು ಅದರ ಮುಂದೆ ಇದು ಕ್ರಿ
ರೀತಿಯನ್ನು ವ್ಯಕ್ತಪಡಿಸುವದು ಎಂದು ಬರೆಯಬೇಕು. ನೀನು ಇಲ್ಲಿ
ದೆಂದು ನಾನು ಇಲ್ಲಿಗೆ ಬಂದೆನು. ಇಲ್ಲಿ ಅಂಗವಾಕ್ಯವು ಪ್ರಧಾನವಾಕ್ಯ
ಉದ್ದೇಶವಾಗಿದೆ. ಆದುದರಿಂದ ಉಪವಾಕ್ಯದ ಮುಂದೆ 'ಉದ್ದೇಶ' ಪ
ಬರೆಯಬಹುದು. ಅಥವಾ ನಿನಗಿಂತ ಮೊದಲು ನಾನು ಇಲ್ಲಿಗೆ ಬಂದಾಗ ಶಾ
ಬಾಗಿಲು ತೆರೆಯಲ್ಪಟ್ಟಿತ್ತು. ಈ ವಾಕ್ಯದಲ್ಲಿ ಉಪವಾಕ್ಯವು ಮುಖ್ಯ ಕ್ರಿಯೆ
ಕಾಲವನ್ನು ಸೂಚಿಸುವದು. ಆದುದರಿಂದ ಉಪವಾಕ್ಯದ ಮುಂದೆ 'ಕಾಲಸೂಚ
ಎಂದು ಬರೆಯಬಹುದು.

ಒಮ್ಮೊಮ್ಮೆ ಎರಡು ಸಂಯೋಜಿತ ವಾಕ್ಯಗಳು ಯಾವದೊಂದು ಮು
ಕ್ರಿಯೆಯಲ್ಲಿ ಅಂಗವಾಗಿರಬಹುದು.

ನಮ್ಮ ಹುಡುಗನು ಪರೀಕ್ಷೆ ಪಾಸಾಗಿರುವನು; ಹಾಗು ಬೇಗ ಊ
ಬರುವನು ಎಂಬದನ್ನು ಈ ಮೊದಲೇ ಊಹಿಸಿದ್ದೆನು.

ಇಲ್ಲಿ ಮುಖ್ಯ ಕ್ರಿಯೆಗೆ ಪರೀಕ್ಷೆ ಪಾಸಾಗಿರುವನು, ಊರಿಗೆ ಬರು
ಎಂಬ ಉಪವಾಕ್ಯಗಳು ಕರ್ಮಕಾರಕಗಳಾಗಿ ಸಂಬಂಧಿಸಿವೆ. ಅವನ್ನು ಈ
ಸದರಿನಲ್ಲಿ ಬರೆಯಬೇಕು. ಕಡೆಗೆ ಆ ಎರಡೂ ವಾಕ್ಯಗಳನ್ನು ಸಂಯೋಜಿತ ವಾ
ಗಳನ್ನು ಬಿಡಿಸುವ ರೀತಿಯಿಂದ ಬರೆಯಬೇಕು. ಇನ್ನೂ ತರತರದ ರೀತಿಯ
ಸಮ್ಮಿಶ್ರ ವಾಕ್ಯಗಳಿರುವವು.

ಉದಾ— ಯಾವನು ನಿನ್ನೆ ರಾತ್ರಿ ನಿಮ್ಮ ಸಂಬಂಧಿಕನಿರುವೆನೆಂದು ಹೇ
ದನೋ ಅವನೇ ಈ ಮನುಷ್ಯನಾಗಿದ್ದಾನೆ.

ಇಲ್ಲಿ ಈ ಮನುಷ್ಯನಾಗಿದ್ದಾನೆ ಎಂಬ ಮುಖ್ಯ ಕ್ರಿಯೆಗೆ ಯಾವನು ಹೇಳಿ
ಎಂಬ ಉಪವಾಕ್ಯವು ಕರ್ತೃವಿನ ವಿಶೇಷಣವಾಗಿ ಸಂಬಂಧಿಸಿದ್ದು ಅದಕ್ಕೆ ನಿ
ಸಂಬಂಧಿಕನಿರುವೆನೆಂಬ ವಾಕ್ಯವು ಕರ್ಮವಾಚಕವಾಗಿ ಕ್ರಿಯೆಗೆ ಜೋಡಿಸಲ್ಪಟ್ಟಿ
ಆದುದರಿಂದ ಇಲ್ಲಿ ವಾಕ್ಯಗಳನ್ನು ಹೀಗೆ ವಿಂಗಡಿಸಬಹುದು.

ಪ್ರಧಾನವಾಕ್ಯ—ಅವನೇ ಈ ಮನುಷ್ಯನಾಗಿದ್ದಾನೆ

(ಅ) ಮುಖ್ಯ ಅಂಗವಾಕ್ಯ—ಯಾವನು ಹೇಳಿದನು
ಈ ಅಂಗವಾಕ್ಯಕ್ಕೆ
ಮತ್ತೆ ಅಂಗವಾಕ್ಯ ಅಂದರೆ

(ಬ) ಉಪವಾಕ್ಯ— ನಿಮ್ಮ ಸಂಬಂಧಿಕನಿರುವೆನು, ಇದು ಯಾವನು ಹೇಳಿದನು ಎಂಬ ಕ್ರಿಯೆಯಲ್ಲಿ ಕರ್ಮವಾಗಲಿ ಅಥವಾ ಕ್ರಿಯೆಯನ್ನು ವರ್ಣಿಸಿದ್ದರಿಂದ ಕ್ರಿಯಾವಿಶೇಷಣವಾಗಲಿ ಇರುತ್ತದೆ. 'ಹೇಳು' ಎಂಬದು ಸಕರ್ಮಕಧಾತುವಾದ್ದರಿಂದ ಕರ್ಮಕಾರಕವೆಂದು ತಿಳಿಯುವದು ಹೆಚ್ಚು ನೆಟ್ಟಗೆ.

ಈ ಪ್ರಕಾರ ವಾಕ್ಯವನ್ನು ವಿಂಗಡಿಸಿಕೊಂಡು ಮೊದಲು ತೋರಿಸಿದಂತೆ ನಾಕ್ರಮ ಕೋಷ್ಟಕವನ್ನು ತುಂಬಿಕೊಳ್ಳಬೇಕು.

ವಾಕ್ಯರಚನೆ

ಲೇಖಕರು:— ಚಿದಂಬರ ಶ್ರೀಪಾದರಾವ ಕುಲಕರ್ಣಿ
(ಶಿಕ್ಷಕ, ಕೆ. ಇ. ಬೋರ್ಡ್ಸ ಎ. ವ್ಹಿ. ಸ್ಕೂಲ ಮಾಳಮಡ್ಡಿ, ಧಾರವಾಡ.)

೧. ಲೇಖನ ಚಿಹ್ನಗಳು.

ಚಿಹ್ನಗಳಿಲ್ಲದ ಲೇಖನವು ಅರ್ಥವಿಲ್ಲದ ಶಬ್ದಗಳಂತೆಯೇ ಸರಿ. ಚಿಹ್ನಗಳ ರುದಿಂದಲೇ ಲೇಖನಗಳನ್ನು ಓದಲು ಸಾಧ್ಯವಾಗುವದು. ಆದರೆ ಕನ್ನಡ ಸುಲ್ಲಿ ಇದಕ್ಕೆ ಕೊಡಬೇಕಾದಷ್ಟು ಮಹತ್ವವನ್ನು ಕೊಟ್ಟಿಲ್ಲ. ಯಾಕಂದರೆ ವಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಮನಸ್ಸುಗೊಟ್ಟು ವದು ಕಡಿಮೆ. ಇಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ (ವಿರಾಮ) ಲೇಖನ ಚಿಹ್ನ ಗ್ಗೆ ವಿಚಾರಮಾಡಲಾಗಿದೆ.

, **ಅಲ್ಪವಿರಾಮ:—** ಇದು ಸ್ವಲ್ಪ ನಿಲ್ಲುವದನ್ನು ತೋರಿಸುವದು. ೨-(೧) ದಾನದಲ್ಲಿ ಕರ್ಣನೂ, ಸತ್ಯದಲ್ಲಿ ಹರಿಶ್ಚಂದ್ರನೂ, ಧರ್ಮದಲ್ಲಿ ರಾಜನೂ ಹೆಸರಾದರು. (೨) ರಾಮಾ, ಬೇಗ ಬಾ. (೩) ರಾಮು, ಣ, ಭರತ, ಶತ್ರುಘ್ನ ಇವರು ದಶರಥನ ಮಕ್ಕಳು. (೪) ಯೋಗ್ಯತೆವಿಲ್ಲದೆ ಮಾಡಿದರೆ, ಕೈಯಲ್ಲಿ ಪರಟೆ ಬರುವದು ನಿಜವ್ರ. (೫) ರಾಮನೂ, ವಿಂದನೂ, ಕೃಷ್ಣನೂ ಜಾತ್ರೆಗೆ ಹೋದರು. (೬) ರಾಮನು ಲಕ್ಷ್ಮಣನಿಗೆ

ತಮ್ಮಾ ನೀನು ಸೀತೆಯ ಸಂರಕ್ಷಣಮಾಡು, ನಾನು ಜಿಂಕೆಯನ್ನು ಕೊಂಡು ಬರುವೆನು.

ನೆನಪಿನಲ್ಲಿಡಬೇಕಾದ ಮಾತುಗಳು :— ವಾಕ್ಯದ ಆರಂಭದಲ್ಲಾ ನಡುವೆಯಾಗಲಿ ಸಂಬೋಧನವಿದ್ದರೆ ಅದರಮುಂದೆ **ಅಲ್ಪವಿರಾಮ** ಕೊಡಬೆ ಯಾವದೊಂದು ವಾಕ್ಯದಲ್ಲಿ ಎರಡನೆಯ ವಾಕ್ಯಗಳು ಇಲ್ಲವೆ **ವಾಕ್ಯಾಂಗಳು**, ಆ ವಾಕ್ಯಗಳ ಇಲ್ಲವೆ ವಾಕ್ಯಾಂಗಗಳ ಮುಂದೆ **ಅಲ್ಪವಿರಾಮವನ್ನು** ಕೊಡಬ ವಾಕ್ಯದಲ್ಲಿ ಎರಡಕ್ಕಿಂತ ಹೆಚ್ಚು **ಕರ್ತೃಗಳು, ಕರ್ಮಗಳು, ಕ್ರಿಯಾಪದಗಳು** ಅವು ಒಂದರಮುಂದೊಂದು ಬಂದರೆ ಕಡೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಅಲ್ಪವಿರಾಮ ಕೊಡಬೇಕು.

ಅಪವಾದ :— ಶಬ್ದಗಳ ಮುಂದೆ ಆದರೆ, ಮತ್ತು, ಮೊದಲಾದ ಸಮು ಯಕ (ಪದಗಳನ್ನು ಕೂಡಿಸುವ) ಅವ್ಯಯಗಳಿದ್ದರೆ ಆಗ ಆ ಶಬ್ದಗಳ ಮುಂದೆ ವಿರಾಮವನ್ನು ಕೊಡಬಾರದು.

; ಅರ್ಧವಿರಾಮ :—ಅಲ್ಪವಿರಾಮಕ್ಕಿಂತ ಹೆಚ್ಚಿಗೆ ನಿಲ್ಲುವುದನ್ನು ತಿ ಸುವುದು.

ಉದಾ— (೧) ಮಾತಾಡುವದು ಸುಲಭ ; ಆದರೆ ಮಾಡುವದು ಕ (೨) ಮಿತವ್ಯಯದಿಂದ ಇರಬೇಕು ; ಯಾಕಂದರೆ ಅದರಿಂದ ಸಂಸಾರದಲ್ಲಿ ತೊ ಗಳು ಕಡಿಮೆ.

ನೆನಪಿಡತಕ್ಕ ಮಾತು :— ಇದರಲ್ಲಿ ಒಂದೊಂದು ಭಾಗವು ಅರ್ಥಪೂ ವಿರಬೇಕಾಗುತ್ತದೆ. ಎರಡನೆಯ ಭಾಗವು ಒಂದನೆಯ ಭಾಗದ ಅರ್ಥ ಪೂರ್ಣಮಾಡುವದಕ್ಕಾಗಿ ಉಪಯೋಗಿಸಲ್ಪಟ್ಟಿದೆ.

ಪೂರ್ಣವಿರಾಮ :— ಪೂರ್ಣ ನಿಲ್ಲುವದನ್ನು ತೋರಿಸುವುದು. ಉ (೧) ಕಲ್ಲನು ಬಂದನು. (೨) ನೀನು ಬೇಗನೆ ಬಾ.

ನೆನಪಿಡತಕ್ಕ ಮಾತು :— ಇದರಲ್ಲಿ ಮುಂದಿನ ಹಿಂದಿನ ವಾ ಸಂಬಂಧವೇನೂ ಇರುವುದಿಲ್ಲ.

? ಪ್ರಶ್ನಚಿಹ್ನ :—ಪ್ರಶ್ನಗಳನ್ನು ಕೇಳುವಾಗ ಪ್ರಶ್ನವುಳ್ಳ ವಾಕ್ಯದಕೆ ಈ ಚಿಹ್ನವನ್ನು ಉಪಯೋಗಿಸುವರು. (೧) ರಂಗನು ಯಾಕೆ ಬರಲಿಲ್ಲ? ನೀನು ಬರುತ್ತೀಯಾ?

ಭಾವಚಿಹ್ನ ಅಥವಾ ಉದ್ಗಾರವಾಚಕ ಚಿಹ್ನ:— ಮಾತಾಡುವವನ
ಸ್ಸಿನೊಳಗಿನ ಹರ್ಷ, ಶೋಕ, ಆಶ್ಚರ್ಯಗಳನ್ನು ತೋರಿಸುವಾಗ ಉಪಯೋ
ಎದರು. (೧) ಅಯ್ಯೋ! ದೈವವೇ, ಏನುಮಾಡಿ ಬಿಟ್ಟೆ!! (೨) ಅಹಹ!
ಹ ಚಂದವಾದ ಬೆಳದಿಂಗಳು!

ವಿವರಣ ಚಿಹ್ನಗಳು :— ಇವನ್ನು ವಿವರಿಸುವಾಗ ಉಪಯೋಗಿ
ಸುವರು.

ಉದಾ:— ಈ ದಿನ ಪೇಟೆಯಲ್ಲಿ ಕೊಂಡ ವಸ್ತುಗಳು:— ೨ ರೂ.
ಟೊಪ್ಪಿಗೆ ೩ ರೂ. ರುಮಾಲು, ೪ ರೂ.ಶಲ್ಲೆ ಇ.

‘ ’
“ ” **ಅವತರಣ ಚಿಹ್ನಗಳು:—** ಪರರ ವಾಕ್ಯಗಳನ್ನು ತನ್ನ ಬರಹದಲ್ಲಿ
ಡಿಸಿ ಬರೆಯಬೇಕಾದರೆ, ಅದನ್ನು ಅವತರಣಚಿಹ್ನಗಳ ನಡುವೆ ಬರೆಯುತ್ತಾರೆ.
ಉದಾಹರಣೆ:— ಭೀಮನು ದುಃಶಾಸನನ್ನು ನೋಡಿ “ದುರುಳಾ,
ನಿಲ್ಲು” ಎಂದು ಒದರಿದನು.

- ಸಂಯೋಜಕ ಚಿಹ್ನ :— ಎರಡು ಶಬ್ದಗಳನ್ನು ಕೂಡಿಸಿ ಬರೆಯುವ
ಾಗಾಗಲಿ, ಅಥವಾ ಒಂದೇಶಬ್ದದ ಕೆಲವೊಂದು ಭಾಗವನ್ನು ಒಂದು ಕಡೆಗೆ
ದ ಭಾಗವನ್ನು ಮತ್ತೊಂದು ಕಡೆಗೆ ಬರೆಯುವದಿದ್ದಾಗಾಗಲಿ ಈ ಚಿಹ್ನವನ್ನು
ಯೋಗಿಸುವರು.

ಉದಾ:— ರಾಮನೂ ಕೃಷ್ಣನೂ ಬಂದರು.
ರಾಮ–ಕೃಷ್ಣರು ಬಂದರು.

**ಯಾವದೊಂದು ಶಬ್ದವನ್ನು ಸಂಕ್ಷೇಪವಾಗಿ ಬರೆಯುವದಿದ್ದಾಗ ಆ
ಸ್ತರೂಪದ ಮುಂದೆ ಪೂರ್ಣವಿರಾಮವನ್ನು ಕೊಡುವ ಪದ್ಧತಿ
ಂಟು.**

ಉದಾ:— ಇಸವಿ ಸನ್ = ಇ. ಸ. ; ರೂಪಾಯಿ = ರೂ. ರಾಜಮಾನ್ಯ
ರಾಜಶ್ರೀ = ರಾ. ರಾ.

ಕೆಳಗಿನ ವಾಕ್ಯಗಳಲ್ಲಿ ವಿರಾಮ ಚಿಹ್ನಗಳನ್ನು ತುಂಬಿರಿ.

ಗೋವಿಂದ ರಂಗಾ ಈ ಹೊತ್ತು ಯಾಕೆ ಬಹಳ ಸಿಂಗಾರಾಗಿದ್ದೀ ರಂಗ
ಹುಟ್ಟಿದದಿವಸ ನೀನು ಈ ಹೊತ್ತು ನಮ್ಮ ಮನೆಗೆ ಊಟಕ್ಕೆ ಬರಬೇಕು
ನ್ನ ಕರಕೊಂಡು ಹೋಗಲಿಕ್ಕೆ ಬಂದಿದ್ದೇನೆ ಗೋವಿಂದ ನಮ್ಮ ಅವ್ವನನ್ನು
ಆಕೆ ಅಪ್ಪಣೆಕೊಟ್ಟರೆ ಬರುತ್ತೇನೆ ರಂಗ ನಿಮ್ಮ ಅವ್ವ ಎಲ್ಲಿ ಇದ್ದಾಳೋ
ವುದಿಲ್ಲ ಗೋವಿಂದ ಇದೇ ಈಗ ನೆರಮನೆಗೆ ಹೋಗಿದ್ದಾಳೆ ಈಗ ಬಂದಾಳು

ಉತ್ತರ

ಗೋವಿಂದ:— ರಂಗಾ, ಈ ಹೊತ್ತು ಯಾಕೆ ಬಹಳ ಸಿಂಗಾರಾಗಿದ್ದೀ?

ರಂಗ:— ನನ್ನ ಹುಟ್ಟಿದದಿವಸ. ನೀನು ಈ ಹೊತ್ತು ನಮ್ಮ ಮನೆ ಊಟಕ್ಕೆ ಬರಬೇಕು. ನಿನ್ನನ್ನು ಕರಕೊಂಡು ಹೋಗಲಿಕ್ಕೆ ಬಂದಿದ್ದೇ

ಗೋವಿಂದ:—ನಮ್ಮ ಅವ್ವನನ್ನು ಕೇಳು. ಆಕೆ ಅಪ್ಪಣೆ ಕೊಟ್ಟರೆ ಬರುತ್ತೇ

ರಂಗ:— ನಿಮ್ಮ ಅವ್ವ ಎಲ್ಲಿ ಇದ್ದಾಳೋ ಕಾಣುವುದಿಲ್ಲ?

ಗೋವಿಂದ:— ಇದೇ ಈಗ ನೆರಮನೆಗೆ ಹೋಗಿದ್ದಾಳೆ, ಈಗ ಬಂದಾಳು.

ಅಭ್ಯಾಸಕ್ಕಾಗಿ

ಕೆಳಗಿನ ವಾಕ್ಯಗಳನ್ನು ವಿಂಗಡಿಸಿ, ವಿರಾಮ ಚಿಹ್ನಗಳನ್ನು ತುಂಬಿರಿ.

(೧) ವಿರೂಪಾಕ್ಷ ಅಣ್ಣಾ ಇಂದು ಚಾವಡಿಯ ಮುಂದೆ ಇಷ್ಟು ಜನ ಕೆ ನೆರದಿರುವರು ಬಸವಂತ ತಮ್ಮಾ ಗೌಡರು ಹೊಲದ ತೆರಿಗೆಯನ್ನು ಎಷ್ಟ ಬ್ಬರೆ ನೋಡು ರೈತರು ಹಣವನ್ನು ಕಟ್ಟಿಕೊಂಡು ಬಂದು ಕುಳಿತಿರುವ ವಿರೂಪಾಕ್ಷ ತೆರಿಗೆ ಅಂದರೇನು ನನಗೆ ಗೊತ್ತಿಲ್ಲ ನಾವು ಹೊಲಾಮಾಡುತ್ತೇವ ಅವು ಸರಕಾರದವು ಅದರಿಂದ ಅವುಗಳಿಗಾಗಿ ಸರಕಾರಕ್ಕೆ ಹಣಕೊಡಬೇಕಾ ತ್ತದೆ ಅದಕ್ಕೆ ತೆರಿಗೆಯನ್ನುವರು ಗೌಡರ ಕೈಯಲ್ಲಿ ಹಣಕೊಟ್ಟರೆ ಅವ ಸರಕಾರಕ್ಕೆ ಮುಟ್ಟಿಸುವರು.

(೨) ಗೋವಿಂದ ಹಿಡಿ ಉಪ್ಪು ತಿನ್ನುವದಾದೀತೇ ಅದು ನನಗೆ ಸೇರುವದಿ ತಂದೆ ಹೌದು ನೀನು ಅದನ್ನು ಬರಿ ಬಾಯಿಲೆ ತಿನ್ನಲಾರೆ ಆದರೆ ಊಟದ ಒಡ ಗಳ ಕೂಡ ದಿನಾ ಹಿಡಿ ಉಪ್ಪು ತಿಂದೇ ತಿನ್ನುತ್ತೀ ಗೋವಿಂದ ಛೇ ಛೇ ಹಿ ಉಪ್ಪು ಎಲ್ಲಿ ತಿನ್ನುತ್ತೇನೆ.

(೩) ಕರ್ಣ ದ್ರೋಣಪುತ್ರಾ ಹೆಮ್ಮೆಯ ಮಾತು ಆಡಲಿಕ್ಕೆ ಸುಲ ವಾಗಿದೆ. ಆದರೆ ನಿಸ್ತರಿಸುವದು ಕಷ್ಟವದೆ ಕೌರವರ ಸೇನೆಯಲ್ಲಿ ಇಂಥ ಕೆಲಸ ಬಹುಮಂದಿ ಸಮರ್ಥರಿದ್ದಾರೆ ಅಶ್ವತ್ಥಾಮ ಹೌದು ಅಂಗರಾಜಾ ಹೌ ಕೌರವರ ಬಲದಲ್ಲಿ ಇಂಥ ಸಮರ್ಥರು ಬಹು ಮಂದಿ ಇದ್ದಿದ್ದಾರು ಹೌದು ಜನ ದುಃಖ ಶೋಕದ ಆವೇಶದಿಂದ ನಾನು ಮಾತಾಡಿದೆನು ವೀರಜನರಿಗೆ ಅಪಮಾ ಮಾಡಬೇಕೆಂದಲ್ಲ ಕರ್ಣ ಮೂಢಾ ದುಃಖಿತನಾದವನು ಬೇಕಾದರೆ ಕಣ್ಣೀರು ಸುರಿಸಬೇಕು. ಹೀಗೆ ಸುಮ್ಮನೆ ಬಡಬಡಿಸಿದರೆ ಏನಾಗುತ್ತದೆ. ಅಶ್ವತ್ಥಾಮ ಕುಪಿತನಾಗಿ ಎಲಾ ನೀಚಾ ರಾಧೆಯ ಬಸುರಿಗೆ ಹೊರೆಯಾದವನೇ ಸೂತಕುಲ ಧಮಾ ಹೀಗೆ ನೀನು ನನ್ನನ್ನು ನಿಂದಿಸುತ್ತಿಯಾ.

(೯) ದುರ್ಗುಣವು ಇಲ್ಲದಿರುವುದೊಂದು ಸದ್ಗುಣವೇ ಆಗಿರುವುದು ಸತ್ಸಹವಾಸದಿಂದ ಆನಂದಪಡಬೇಕು ಯಾಕೆಂದರೆ ಕೇವಲ ಅವರ ಅನುಕರಣ ಮಾಡುವದರಿಂದಲೇ ನಮ್ಮ ಕಲ್ಯಾಣವಾಗುತ್ತದೆ

(೫) ಬಸಂತ ಎಲ್ಲಿಯವಾತೇ ಅವಶ್ಯವಾಗಿ ಬರುವೆನು ಸ್ವಯಂಭೂ ಸಂತೋಷ ಪ್ರಸಾದರೆ ಏನಾಗಿದೆ ನಿಮಗೆ ಗುರುತುಕೂಡ ಸಿಕ್ಕದಂತಾಗಿದೆ ಸ್ವರೂಪ ಜೀವಕ್ಕೆ ಕುತ್ತು ಬಹಳ ಎಬಂತೆ ನಾಲ್ಕು ಜನರಿಗೆ ನೀವು ಬೇಕಾದವರಿದ್ದರೆ ಈ ಫಲವೋ .

(೬) ಸಂತೋಷ ಪ್ರಸಾದ ಸರಿಸರಿ ನಾನಿನ್ನೂ ನಾಳೆಯಿಂದ ವಕ್ಯತ್ವೋ ತ್ಪಾದಕ ಸಂಘಕ್ಕೆ ಸೇರಿ ವಾಕ್ಪಟುತ್ವವನ್ನು ಕಲಿತುಕೊಳ್ಳಬೇಕಾಯಿತು. ಸ್ವಯಂಭೂ ನಗೆಯೆಲ್ಲ ಶ್ರೀಮಿಗಳೇ ನೀವು ಹಾಗೆ ಮಾಡಲೇಬೇಕು ಬಾಲ ಸನ್ಯಾಸಿನಿಯೊಬ್ಬಳೇ ಮೌನವನ್ನು ಆಚರಿಸಬೇಕು.

೨. ಶುದ್ಧಬರಹ

ಕೆಳಗಿನ ವಾಕ್ಯಗಳನ್ನು ತಿದ್ದಿ ಕಾರಣ ಬರೆಯಿರಿ.

(೧) ಚನ್ನಾಗಿ ಪ್ರಜಗಳನ್ನೂ ಧಾರ್ಮಿಕನಾದ ಅರಸನು ಕಾಪಾಡುತ್ತಾನೆ.

(೨) ದಶರಥನು ರಾಮನ ಪಟ್ಟಾಭಿಷೇಕವನ್ನು ವಿಜೃಂಭಣೆಯಿಂದ ಜರುಗಿಸಿದನು.

(೩) ನಾನೀ ವರ್ತಮಾನ ಮೊದಲೇ ಹೇಳಲಿಲ್ಲೇ?

(೪) ರಂಗನು ತೋಟದಲ್ಲಿ ಆಡುತ್ತೇನೆ.

(೫) ರಾಮನು ಬರುತ್ತಾಳೆ.

(೬) ರಾಮನೂ, ಸೀತೆಯೂ ಹೋಗುತ್ತಾನೆ.

ಮೇಲಿನ ವಾಕ್ಯಗಳನ್ನು ಚನ್ನಾಗಿ ಓದಿನೋಡಿರಿ.

ಮೊದಲನೇ ವಾಕ್ಯದಲ್ಲಿ ಎಲ್ಲಶಬ್ದಗಳು ಸರಿಯಾಗಿವೆ. ಕರ್ತೃವಿನ ಮುಂದೆ ಕ್ರಿಯಾಪದವಿದೆ. ಹಾಗೂ ಕ್ರಿಯಾಪದವು ಕೊನೆಗೆ ಇರುತ್ತದೆ. ಹೀಗಿದ್ದರೂ ಅರ್ಥ ಸರಿಹೋಗುವುದಿಲ್ಲ. ಇದರಲ್ಲಿ ಕರ್ಮವು ಕರ್ತೃವಿನ ಮುಂದೆ ಬೇಕಿತ್ತು ಮತ್ತು ಅವ್ಯಯವು ಕ್ರಿಯಾಪದದ ಹಿಂದೆ ಬೇಕು. ಆದುದರಿಂದ ಆ ವಾಕ್ಯವು ಬೇಕು. ಧಾರ್ಮಿಕನಾದ ಅರಸನು ಪ್ರಜಗಳನ್ನು ಚನ್ನಾಗಿ ಕಾಪಾಡು

ಎರಡನೆಯ ವಾಕ್ಯವು ವ್ಯಾಕರಣ ದೃಷ್ಟಿಯಿಂದ ಸರಿ ಇದೆ. ಆದರೆ
ಥನು ರಾಮನ ಪಟ್ಟಾಭಿಷೇಕದ ಕಾರ್ಯವನ್ನು ಜರುಗಿಸಿದನೆಂದು ಅದೆ. ರ
ಪಟ್ಟಾಭಿಷೇಕದ ಕಾಲಕ್ಕೆ ದಶರಥನು ಮರಣಹೊಂದಿ ೧೪ ವರ್ಷಕ್ಕೆ ಮೆ
ದ್ದವು. ಕಾರಣ ಇದರಲ್ಲಿ **ಅರ್ಥ**ವು ತಪ್ಪಿದೆ. ಈ ವಾಕ್ಯವನ್ನು ಹೀಗೆ ಬ
ಹುದು. ವಸಿಷ್ಠನು ರಾಮನ ಪಟ್ಟಾಭಿಷೇಕವನ್ನು ವಿಜೃಂಭಣೆಯಿಂದ
ಸಿದನು.

ಇನ್ನು ೩ನೆಯ ವಾಕ್ಯದಲ್ಲಿ **ಕಾಲ**ವು ತಪ್ಪಿರುತ್ತದೆ. ಮೊದಲೇ ಈ ಕ್ಷ
ಮೇಲಿಂದ ಕ್ರಿಯೆಯು ಭೂತಕಾಲದಲ್ಲಿ ಜರುಗಿರಬೇಕೆಂದು ಗೊತ್ತಾಗುವದು.
ಭವಿಷ್ಯತ್ಕಾಲದ ಕ್ರಿಯಾಪದವನ್ನು ಉಪಯೋಗಿಸಿದ್ದಾರೆ. ಕಾಲಸಾಮಿಪ್ಯವ
ತೋರಿಸುವಾಗ ಮಾತ್ರ ಭೂತಕಾಲದ ಕ್ರಿಯಾಪದವು ಭವಿಷ್ಯತ್ಕಾಲದ ಹಾ
ವರ್ತಮಾನಕಾಲದ ಕ್ರಿಯಾಪದಕ್ಕೆ ಬದಲಾಗಿ ಬರುತ್ತದೆ. ಮೇಲಿನ ವಾಕ್ಯವ ಕ
ರೂಪವು–ನಾನು ಈ ವರ್ತಮಾನ ಮೊದಲೇ ಹೇಳಲಿಲ್ಲೇ ?

ಮುಂದಿನ ವಾಕ್ಯದಲ್ಲಿ ಕರ್ತೃವಿನ **ಪುರುಷ ಪ್ರಥಮಪುರುಷ,** ಆದರೆ ಕ್ರಿ
ಪದದ **ಪುರುಷ**–'ಉತ್ತಮ ಪುರುಷ' ಕರ್ತೃ **ಕ್ರಿಯಾಪದಗಳಿಗೆ** ಒಂದೇ **ಪುರ**
ವಿರಬೇಕು. ಆದುದರಿಂದ ಮೇಲಿನ ವಾಕ್ಯವನ್ನು ಹೀಗೆ ಬರೆಯಬಹುದು. ರಾ
ತೋಟದಲ್ಲಿ ಆಡುತ್ತಾನೆ. ಆದರೆ ಉತ್ತಮ ಪುರುಷದ ಕರ್ತೃವೂ, ಬೇರೆ ಪು
ಗಳ ಕರ್ತೃಗಳೂ ಒಂದೇ ವಾಕ್ಯದಲ್ಲಿದ್ದರೆ ಕ್ರಿಯಾಪದವು ಉತ್ತಮಪುರುಷದ್ಲಾ
ವದು. ಉದಾ–ರಾಮನೂ, ಗೋವಿಂದನೂ, **ನೀನೂ ನಾನೂ** ಹೋಗಿದ್ದೆ
ಇದರಂತೆ ಮಧ್ಯಮಪುರುಷದ ಕರ್ತೃವೂ ಪ್ರಥಮ **ಪುರುಷದ ಕರ್ತೃ**ಗಳೂ ಬ
ವಾಕ್ಯದಲ್ಲಿದ್ದರೆ ಕ್ರಿಯಾಪದವು ಮಧ್ಯಮಪುರುಷದ್ಲಾಗುವುದು. ನೀನ
ರಂಗನೂ ಬಂದಿರಿ.

ಮೇಲಿನಂತೆ ಕರ್ತೃವಿಗೆ ಇದ್ದ **ಲಿಂಗವೇ** ಕ್ರಿಯಾಪದಕ್ಕೆ ಇರಬೇ
ಆದುದರಿಂದ ರಾಮನು ಬರುತ್ತಾನೆ. ಇದು ಶುದ್ಧ ವಾಕ್ಯ. ಆದರೆ ಬೇರೆ
ಲಿಂಗಗಳುಳ್ಳ ಕರ್ತೃಗಳು ಹಲವು ಇದ್ದರೆ ಕ್ರಿಯಾಪದಕ್ಕೆ ಕೊನೆಯ ಕರ್ತೃಪ
ಲಿಂಗವು ಬರುತ್ತದೆ. **ಉದಾ**–ರಾಮನೂ, ಸೀತೆಯೂ, ಮಂಗಗಳೂ ಬಂ
ಮಂಗಗಳೂ ರಾಮನೂ, ಸೀತೆಯೂ ಬಂದರು.

ಕಡೆಯದು **ವಚನದ** ದೋಷ. ಕರ್ತೃವಿಗೆ ಇದ್ದ ವಚನವೇ ಕ್ರಿಯಾಪ
ಇರಬೇಕು. ಆದುದರಿಂದ ಆ ವಾಕ್ಯವನ್ನು 'ರಾಮನೂ, ಸೀತೆಯೂ ಹೊ
ತ್ತಾರೆ. ಹೀಗೆ ತಿದ್ದಿ ಬರೆಯಬಹುದು. **ಅಪವಾದ**— ಜಾತಿವಾಚಕ ಕ

ದವನ್ನು ಏಕವಚನದಲ್ಲಿ ಉಪಯೋಗಿಸಿದರೂ ಕ್ರಿಯಾಪದವನ್ನು ಬಹುವಚನ ಲ್ಲಿ ಉಪಯೋಗಿಸುವರು. ಉದಾ—ಆನೆ ಬಂದವು, ಮುಳ್ಳು ಚುಚ್ಚಿದವು; ಗರೆ ಓಡಿದವು.

ವಾಕ್ಯದಲ್ಲಿ ಮೊದಲು ಕರ್ತೃ, ಆ ಮೇಲೆ ಕರ್ಮ, ಕಡೆಗೆ ಕ್ರಿಯಾಪದಗಳು ುತ್ತವೆ. ಮತ್ತು ಅವುಗಳ ವಿಶೇಷಣಗಳು ಅವವುಗಳ ಹಿಂದೆ ಬರುವವು. ಆದರೆ ಟ್ಟಿಗೆ ವಿಶೇಷಣಗಳುಳ್ಳ ಪದಗಳನ್ನು ಮೊದಲು ಪ್ರಯೋಗಿಸುವ ವಾಡಿಕೆ ುಂಟು.

ಉದಾ—ಕ್ರೂರನೂ, ನೀಚನೂ, ಮದಾಂಧನೂ, ತಾಮಸಿಯೂ, ಅಹಂ ಿಯೂ, ಸ್ತ್ರೀಲೋಲುಪನೂ ಆದ ರಾವಣನನ್ನು ಶೂರನೂ, ವೀರನೂ ಆದ ುಮನು ಕೊಂದನು.

ಪ್ರ ಕ ಟ ನೆ

ಉರ್ದು ಬುಕ್ ಕಮಿಟಿಯವರು ಮುಂಬಯಿಯಲ್ಲಿ ೨-೧೦-೧೯೩೭ ನೆಯ ದಿವಸ ನೆರೆದ ಕಮಿಟಿಯಲ್ಲಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

ಟಿಕ್ಸ್ಚ = T ಲಾಯಬ್ರರಿ L ಪ್ರಾಥಮಿಕ ಶಾಲೆ = ಪ್ರಾ. ಶಾ. ಮಾಧ್ಯಮಿಕ ಶಾಲೆ = ಮಾ. ಶಾ. ಶಿಕ್ಷಕರು = ಶಿ; ವಿದ್ಯಾರ್ಥಿಗಳು ವಿ.

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ನುಂ. ಮಾಡಿದೆ
೧	ಜದೀದ ಜೊಗ್ರಾಫಿಯಾ ಜಿಲ್ಹಾ ಕುಲಾಬಾ	ಶೇಖ ಅಬ್ದುಲ್‌ಕರೀಮ ಡಿ ಉರ್ದು ಸು. ಪ. ಸ್ಕೂ. ಬೋರ್ಡ ಕುಲಾಬಾ	ಅಜ್ಮಲ್ ಪ್ರೆಸ್ ಮುಂಬಯಿ	೦-೪-೦	ಪ್ರಾ. ಶಾ. ಗಳ ಶಿ. ರ L ಬುಕ್ಕು
೨	ಜದೀದ ಜಮಾಖರ್ಚು ಭಾ. ೧	ಮುನಸಿ ಅಬ್ದುರ್ರಹಮಾನ ಅಹ್ಮದಸಾಬ ಪೂನಾ	ಮುಫೀದ ಎ-ಆಮ್ ಪ್ರೆಸ್ ಲಾಹೋರ	೦-೪-೦	ಪ್ರಾ. ಶಾ. ಗಳ T ಬುಕ್ಕು
೩	ತಾರೀಖೆ-ಹಿಂದ	ಸೈಯದ ಅಹ್ಮದಸಾಬ	ಹಮ್ದರ್ದ ಬುಕ್‌ಡಿಪೋ ಬೆಂಗಳೂರು ಸಿಟಿ	೧-೦-೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು
೪	ಜೊಗ್ರಾಫಿಯಾ ಜಿಲ್ಹಾ ನಾಶಿಕ	ಮಹಮ್ಮದ ಸಿದ್ದೀಕ್ ಮುಸ್ಲಿಮ ಮಾಲೇಗಾಂವ	ಮುಫೀದ ಎ-ಆಮ್ ಪ್ರೆಸ್ ಲಾಹೋರ	೦-೪-೦	ಪ್ರಾ. ಶಾ. ಗಳ ಶಿ. ರ L ಬುಕ್ಕು
೫	ದೀನ ಇಸ್ಲಾಮ	ಮುನಸಿ ಮಹಮ್ಮದ	ಆಫ್ತಾರ ಬುಕ್‌ಡಿಪೋ	೧-೧-೦	ಪ್ರಾ. ಶಾ. ವಿ.ಗಳ L ಬುಕ್ಕು

		ಜವ್ಹರ ಚಾಂಡೋರೆ	ಮುದ್ರಾಸ	L ಬುಕ್ಕು
೭	ಮುಕ್ಕಾರ ಲೋಮಡಿ	ಹಕೀಮುಲ್ಲಾ ಸಿದ್ದೀಕಿ	ಉರ್ದು ಬುಕ್‌ಡಿಪೋ ದಿಲ್ಲಿ ೦–೧–೬	ಪ್ರಾ. ಶಾ. ಗಳ ವಿ. ಗಳ L ಬುಕ್ಕು
೮	ಉರ್ದುಕಾ ಜದೀದ ದಿಲ್‌ಚಸ್ಪಕಾಯದಾ	ಅನ್ವರ ಖಾನ	ಲಾಲಾಮಿಯ್ಯಾ ಕುತುಬ ೦– ೧–೩ ಖಾನ ಭೆಂಡಿಬಝಾರ ಬಾಂಬೆ	ಪ್ರಾ. ಶಾ. ಗಳ T ಬುಕ್ಕು
೯	ಜುಲೆಯಸ್ ವಾರ್ ಆಫ್ ದಿ ಹುವಾನ್ಸ್ ಆ್ಯಂಡ ದಿ ಮೊಸ್ಕು ಟೋಸ್		ಮ್ಯಾಕ್ಮಿಲನ್ ಆ್ಯಂಡ್ ಕಂಪನಿ ಬಾಂಬೆ ೦– ೮–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು
೧೦	ಮಾಲೂಮಾತಿ ಜದೀದ	ಪ್ರೊ. ಫೆರೋಜಹಸನ ಬುಟ್ ಎಮ್. ಎ.	ಬುಟ್ ಬುಕ್‌ಡಿಪೋ ವೋ ೦–೧೦–೫ ಹಸಲಾಲ ರೋಡ ಲಾಹೋರ	ಪ್ರಾ. ಶಾ. ಗಳ ವಿ. ಗಳ ಶಿ. ರ L ಬುಕ್ಕು

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬಿಲೆ	ಯಾತಕ್ಕೋಸ್ಕರ ಮಂಜೂರ ಮಾಡಿದೆ.	ಟಿಪ್ಪಣಿ.
೧೧	ಉರ್ದುಕಿ ಆಸಾನ ಸರಫ ನಹೂ ಭಾ. ೩ ೧ನೆ ಆ. ೧೯೩೭	ಶೇಖ ಉಸ್ತಾಕ ಅಹಮ್ಮದ	ಮದೀನಾ ಬರ್ಕಿ ಪ್ರೆಸ್ ಬಿಜನೂರ	೦– ೫–೦	ಮಾ. ಶಾ. ಗಳ T ಬುಕ್ಕು	
೧೨	ಹೈಸ್ಕೂಲ ಜೊಗ್ರಾಫಿಯಾ ಉರ್ದು ಆವೃತ್ತಿ ೧೯೩೭	L ಡುಡ್ಲಿಸ್ಟ್ಯಾಂಪ	ಲಾಂಗಮೆನ್ಸ ಗ್ರೀನ ಮತ್ತು ಲಿಮಿಟೆಡ್ ಮುಂಬಯಿ	೧–೧೨–೦	ಸದರ	
೧೩	ಬುರ್ಹಾನೆ ಮುಬೀನ	ಅಬುಲ್‌ಹುದಾ	ಹಮ್ಮದರ್ದ ಎಲೆಕ್ಟ್ರಿಕ್ ಪ್ರೆಸ್ ಲಾಹೋರ	೧– ೦–೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಮತ್ತು ಟ್ರೇನಿಂಗ ಸಂ. ಗಳ ಶಿ. ರ L ಬುಕ್ಕು	ಪ್ರಿಪಿಟಿಷನ್

೧೩೭ನೆಯ ಮಾರ್ಚ ತಿಂಗಳಿನಲ್ಲಿ ಆದ ಹೆಣ್ಣುಮಕ್ಕಳ ವ್ಹ. ಘಾ. ಪರೀಕ್ಷೆಯಲ್ಲಿ ಜಾರ್ಡನ್ ಪ್ರಾಯಿಝು ಪಡೆದ ಉಮೇದವಾರರ ಹೆಸರುಗಳು

ಹೆಸರು	ಜಾತಿ	ಸೆಂಟರ	ಇನಾಮಿನ ರಕಮು
ಜನರಲ್ ಪ್ರಾಯಿಝು			
ಚಂದ್ರಾಬಾಯಿ ಹನಮಂತಪ್ಪ ಕಟ್ಟೀಮನಿ	ವಾಲ್ಮೀಕಿ	ಗದಗ	೫
ಅಣ್ಣಪ್ಪ ಜೀವಪ್ಪ ಉಜೋಜಿ	ಕ್ರಿಸ್ತಿಯನ್	ಹುಬ್ಬಳ್ಳಿ	೫
ಯಶೋದಾ ಆನಂದಪ್ಪ ಕುಂಡರಗಿ	ಕ್ರಿಸ್ತಿಯನ್	ಗದಗ	೫
ಇಂಟರಮಿಜಿಯೆಟ್ ಪ್ರಾಯಿಜ			
ಗಂಗವ್ವ ವಿರುಪಾಕ್ಷಯ್ಯ ಹಿರೇಮಠ	ಲಿಂಗಾಯಿತ	ಗದಗ	೫
ಗ್ರೇಸಾ ದೇವಪುತ್ರಪ್ಪ ನಿರಂಜನ	ಕ್ರಿಸ್ತಿಯನ್	ಹುಬ್ಬಳ್ಳಿ	೫
ಬ್ಯಾಕ್‌ವರ್ಡ ಕ್ಲಾಸಿನ ಪ್ರಾಯಿಜ			
ಎಲ್ಲವ್ವ ಪೀರಾಜಪ್ಪ ಢೋರ	ಢೋರ	ಹುಬ್ಬಳ್ಳಿ	೫
ಮುಸ್ಲೀಮು ಪ್ರಾಯಿಜ			
ಅಹ್ಮದಬಿ ಮುಹ್ಯೆಮುದ್ದೀನ ಸಾ|| ಮುಲ್ಲಾ	ಮುಸಲ್ಮಾನ	ಸದರ	೫

ಪ್ರ ಕ ಟ ನೆ

ಕನ್ನಡ ಬುಕ್ಕ ಕವಿಂಟೆ ಧಾರವಾಡ ಇವರು ೮ ನೇ ಅಕ್ಟೋಬರ ೧೯೩೭ ನೇ ದಿವಸದ ವಿಂಟಿಂಗಿನಲ್ಲಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

ಪ್ರಾ. ಶಾ. = ಪ್ರಾಥಮಿಕ ಶಾಲೆ ಮಾ. ಶಾ. = ಮಾಧ್ಯಮಿಕ ಶಾಲೆ T = ಟಿಕ್ಸ್ಟ L=ಲಾಯಬ್ರರಿ ಬುಕ್ಕು
ವಿ. = ವಿದ್ಯಾರ್ಥಿಗಳು ವ್ಹ. ಟ್ರೇ. ಸ. = ವ್ಹರ್ನಾಕ್ಯೂಲರ ಟ್ರೇ. ಸಂಸ್ಥೆಗಳು.

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂ. ಮಾಡಿದೆ.	ಮೈ. ಇ. ಸಾ. ಮಂ. ನಂಬರು
೧	ಕನ್ನಡ ಮೂಲಾಕ್ಷರ	ವಿ. ಶಿವಯೋಗಪ್ಪ ಸಂಗಪ್ಪ ಗುರಿಕಾರ ಲಕ್ಷ್ಮೇಶ್ವರ	ಗ್ರಂಥಕರ್ತರು	೦– ೦–೯	ಪ್ರಾ.ಶಾ. ಗಳ ವಿ.ಗಳ L ಬುಕ್ಕ್ಯಾಗಿ	47/P 5380
೨	ಮಕ್ಕಳ ಭೂಗೋಲ ೧೯೩೭	ಮ್ಯಾನೇಜರ, (ಪ್ರೇವಿ) ಯರ ಕಂಪನಿ Premier ಮದ್ರಾಸ	,,	೦– ೪–೦	ಸದರ	5382
೩	ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳ ಗಣಿತ ಸಂಗ್ರಹ, ಸುಧಾರಿಸಿದ ಆವೃತ್ತಿ ೪, ೧೯೩೭	ವಿ. ಸಿ. ಎಸ್. ಕುಲಕರ್ಣಿ ಮಾಸ್ತರ ಮಾಳಗುಡ್ಡ ಕೆ. ಇ. ಸೊಸೈಟಿ, ಧಾರವಾಡ.	ಆಯ್. ಆರ್. ಆಕಳಂ–೧೦–೦ ವಾಡಿ ಬುಕ್ ಸೇಲರ ಧಾರವಾಡ		ಸದರ	5384

		ಮಂಗಳೂರ	ಮುಂಬಯಿ.			L ಬುಕ್ಕು.	
						ಮಾಧ್ಯಮಿಕ ಶಾಲೆಗಳ ವಿ. ಗಳ L ಬುಕ್ಕು	S-68-C-754-C 1-9-1937
೫	ಕನ್ನಡ ೫ನೆಯ ಪುಸ್ತಕ ೧೯೩೬	ಸದರ	ಸದರ	೦- ೬-೦	ಸದರ		47/P 5388
						ಮಾ. ಶಾ. ವಿ. ಗಳ L	S-86-C-754-C 5-9-1937
೬	ಕನ್ನಡ ೬ನೆಯ ಪುಸ್ತಕ ೧೯೩೬	ದಿ. ಮ್ಯಾನೇಜರ ಬಾ. ವಿ. ಬುಕ್‌ಡಿಪೋ, ಮಂಗಳೂರ.	ಮೆ॥ ಮ್ಯಾಕ್ಮಿಲನ್ ಲ್ಯಂಡ ಕಂ। ಲಿ। ಬಾಂಬೆ	೦- ೮-೦	ಪ್ರಾ. ಶಾ. ವಿ. ಗಳ ಹಾಗು ವ್ಹ. ಟ್ರೇ. ಸಂ. ಗಳ L ಬುಕ್		47/P 5390
						ಮಾ. ಶಾ. ವಿ. ಗಳ L ಬುಕ್ಕಾಗಿ	5-86.c.784Sc 1-9-37
	ಕನ್ನಡ ೩ನೆಯ ಪುಸ್ತಕ ೧೯೩೬ ಹಾಗು ನೋಟ ೧೯೩೬	,,	,,	೦- ೪-೦	ಪ್ರಾ. ಶಾ. ಗಳ T ಬುಕ್		47/ P. 5392 586-c-754 1-9-37

೮	ಕನ್ನಡ ತನೆಯ ಪುಸ್ತಕವು ೧೯೩೭	,,	,,	೦—೩–೦	ಸದರ	5394–ಸದರ
೯	ಕನ್ನಡ ಳನೆಯ ಪುಸ್ತಕವು ೧೯೩೭	,,	,,	೦—೫–೦	ಸದರ	5396–ಸದರ
೧೦	ಬಾಲಶಿಕ್ಷಣ ೧೯೩೭	ಮ್ಯಾನೇಜರಬಾ. ವಿ. ಬುಕ್ ಡಿಪೋ ಮುಂಗಳೂರ.	ಮೆ। ಮ್ಯಾಕ್ಮಿಲನ್ ಲ್ಯಾಂಡ ಕಂ. ಲಿ. ಮುಂಬಯಿ.	೦– ೨–೦	ಪ್ರಾ. ಶಾ. ಗಳ T ಬುಕ್ಕು	5398 S 86 c 754c ೧–೯–೧೯೩೭
೧೧	ಕನ್ನಡ ಮೊದಲನೆಯ ಪುಸ್ತಕ	ಸದರ	ಸದರ	೦– ೨–೦	ಸದರ	5400 ಸದರ
೧೨	ಕನ್ನಡ ಗುಣಿತಾಕ್ಷರ ಪುಸ್ತಕ ಳನೆ ಆ. ೧೯೩೭	ಶಿವಯೋಗಪ್ಪ ಸಂಗಪ್ಪ ಗುರಿಕಾರ	ಗ್ರಂಥಕರ್ತರು	೦– ೧–೩	ಪ್ರಾ.ಶಾ. ವಿ.ಗಳ L ಬುಕ್ಕು.	5402 ,,
೧೩	ಕನ್ನಡ ಒತ್ತಕ್ಷರ ಪುಸ್ತಕ ಳನೆ ಆ. ೧೯೩೭	ಸದರ	ಸದರ	೦– ೧–೬	ಸದರ	5404

ಬಿಡಿಸಿ ಕಟ್ಟಿಸಿಕೊಳ್ಳಿರಿ

	ಪ್ರಾಚೀನ ಇತಿಹಾಸ ಎನೆ ಆ. ೧೯೩೭	ಮೋಡಕ ಹೆ. ಮಾ. ಶಾಳಾ, ಹಳ್ಳಿಕೇರಿ.	ಕಮಲಾಪೂರ ಗದಗ		ಮಾ. ಶಾ. ಗಳ T ಬುಕ್ಕಾಗಿ	22-11-37	28-10-37
೧೫	ಹಿಂದುಸ್ತಾನ ದಲ್ಲಿಯ ಮುಸಲ್ಮಾನರ ಆಳಿಕೆ ಳನೆ ಆ. ೧೯೩೭	ಸದರ	ಸದರ	೦- ೮-೦	ಪ್ರಾ. ಶಾ. ಗಳ T ಬುಕ್ಕಾಗಿ	ಸದರ 6352 22-11-37	ಸದರ 759 30-10-37
೧೬	ಮಹಾರಾಷ್ಟ್ರರ ಇಂಗ್ಲಿಷರ ಆಳಿಕೆ ಸೆನೆ ಆ. ೧೯೩೭	ಸದರ	ಸದರ	೦-೧೦-೦	ಪ್ರಾ.ಶಾ. ಗಳ ಹಾಗು ಮಾ.ಶಾ. ಗಳ ವ್ಹ. ಟ್ರೇ. ಸಂಸ್ಥೆಗಳ T ಬುಕ್ಕಾಗಿ	ಸದರ 6350 22-11-37	ಸದರ 760 30-10-37
೧೭	ಪಾಂಡವರ ಕಥೆ ಭಾಗ ೧ ೧ನೆ ಆ. ೧೯೩೭	ವಿ. ಆರ್. ಕೆ. ಸುಬ್ರಾಯಪ್ಪ ಹೆ. ಮಾ. ಗ. ಮಿಡಲ್‌ಸ್ಕೂಲು ಮೈಸೂರು ಲಕ್ಷ್ಮೀಪುರಂ	ಸದರ	೦-೧೫-೦	ಮಾ. ಶಾ. ಗಳ ಹಾಗು ವ್ಹ. ಟ್ರೇ. ಸಂಸ್ಥೆಗಳ T ಬುಕ್ಕಾಗಿ.	ಸದರ 6348 22-11-37	ಸದರ 757 30-10-37

೧೮	ಅರುಣೋದಯ ೧ನೆ ಆ. ೧೯೩೭	ಮು. ಡಿ. ಗುರು ರಾಜ c/o ಎಮ್. ಆರ್. ಮೂಳಾವೂರ ವಕೀಲ	ರಾಧಾಮೋಹನ ಮೇಳಾ ಶುಕ್ರವಾರಪೇಠ ಧಾರವಾಡ	೦– ೪–೦	ಪ್ರಾ. ಶಾ. ಗಳ ಹಾಗು ಮೂ. ಶಾ. ಗಳ ಹಾಗು ವ್ಹ. ಟ್ರೇ- ಸಂ. ಗಳ L ಬುಕ್ಕಾಗಿ	ಸದರ 6346 22–11–37	ಸದರ 756 c 30–10–37
೧೯	ಜಮಾಖರ್ಚು ಭಾಗ ೧ ೨ನೆ ಆ. ೧೯೩೭	ವಿ. ಎಚ್. ಬಿ. ಉಮಡಿ ಅಸಿ. ಮೂ.ಟ್ರೇ.ಸ್ಕೂ. ಧಾರವಾಡ	ಮು. ಆರ್. ಆರ್. ಕುಲಕರ್ಣಿ ಕಿಲ್ಲೆ,ಧಾರವಾಡ	೯–೧೦–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ T ಬುಕ್ಕಾಗಿ	ನಂ. 6344 22–11–37	ಸದರ 758 30–1೦–37
೨೦	ಅಶೋಕ ಚಕ್ರ ವರ್ತಿ ೨ನೆ ಆ. ೧೯೩೭	ವಿ. ಡಿ. ಆರ್. ಚನ್ನಗೌಡ ಶಾಂತಿನಿವಾಸ ಬೆಂಗಳೂರ ಸಿಟಿ	ವಿ. ಡಿ. ಆರ್. ಬಸವನಗುಡಿ ಬೆಂಗಳೂರ ಸಿಟಿ	೦– ೮–೦	ಮೂ.ಶಾ. ಗಳ T ಬುಕ್.	6387 28–11–37	S. 86–c 762 28–10–37

ಮುಂದಿನ ಪುಟಕ್ಕೆ ತಿರುಗಿಸಿ

೬೯

ಸರಕ್ಯೂಲರ

ಪಿ॥ ಡಾಯರೆಕ್ಟರ ಸಾ॥ ಪಬ್ಲಿಕ್ ಇನಸ್ಪೆಕ್ಟರ ಬಾಂಬೆ ಪ್ರೆಸಿಡೆನ್ಸಿ
ರವರ ಸರಕ್ಯೂಲರ ನಂ. 5898 ಪ್ರಕಾರ ಪ್ರಕಟಿಸುವದೇನಂದರೆ—

ಗಂಜುಮಕ್ಕಳ ಹಾಗು ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗಳು ಮತ್ತು
ಜುಮಕ್ಕಳ ಹಾಗು ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಸರ್ಟಿಫಿಕೇಟಿನ
ೀಕ್ಷೆಗಳ ಉಮೇದವಾರರ ಉತ್ತರದ ಕಾಗದಗಳನ್ನು ಪರೀಕ್ಷೆ ಪರಿಣಾಮ
ನ್ನು ಪ್ರಸಿದ್ಧಿಸಿದ ನಂತರ ೧ ವರ್ಷದ ಮಟ್ಟಿಗೆ ಕಾದಿಡಲಾಗುವದು. ಆದ್ದರಿಂದ
ತ್ತರದ ಕಾಗದಗಳ ಇಲ್ಲವೆ ಪರೀಕ್ಷೆಯ ಪರಿಣಾಮದ ವಿಷಯವಾಗಿ
ಾದರೂ ಕೇಳತಕ್ಕದ್ದಿದ್ದರೆ ಪ್ರಾಥಮಿಕ ಶಿಕ್ಷಕರಾಗಲಿ ಪರೀಕ್ಷೆಯ ಉಮೇದ
ವರಾಗಲಿ ಪರೀಕ್ಷೆಯ ಪರಿಣಾಮವಾದನಂತರ ೬ ತಿಂಗಳ ಒಳಗಾಗಿ
॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ದ. ಭಾ. ಧಾರವಾಡರವರ ಕಡೆಗೆ ವಿನಂತಿ
ರ್ಜಿಮಾಡಿಕೊಳ್ಳತಕ್ಕದ್ದು. ಆನಂತರ ಬಂದ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ.

. ಇ. ಸಾ॥ ರವರ
ಕಚೇರಿ
೫-೧೧-೧೯೩೭

ಸೈಯದ ನೂರುಲ್ಲಾ
ಎ. ಇ. ದ. ಭಾಗ

ಪ್ರಕಟನೆ

ದಕ್ಷಿಣಭಾಗದ ಜಿಲ್ಲೆಗಳ ಓಪನ್ ಹಾಗು ಮಿಡಲ್‌ಸ್ಕೂಲು ಸ್ಕಾಲರಸಿಪ್ಪು
ಪರೀಕ್ಷೆಗಳು ಶುಕ್ರವಾರ ತಾ. ೪-೨-೧೯೩೮ ಮತ್ತು ಶನಿವಾರ ೫-೨-೩೮
ದಿವಸ ನಡೆಯುವವು. ಧಾರವಾಡ ಜಿಲ್ಲೆಯಲ್ಲಿ ಮಾತ್ರ ವೆಂಕಾಸಾನಿ ಹಾಗು
ಹಮ್ಮಡನ್ ಬರ್ಸರೀ ಫಂಡ ಸ್ಕಾಲರಶಿಪ್ ಪರೀಕ್ಷೆಗಳು ಸಹ ನಡೆಯುವವು.

೨. ಈ ಪರೀಕ್ಷೆಗೆ ಕೂಡಲಿಚ್ಚಿಸುವ ಉಮೇದವಾರರ ಅರ್ಜಿಗಳು ಒಂದು
ಆಣೆ ಫೀ ಸಹಿತವಾಗಿ ಪರೀಕ್ಷಾ ಕಮೀಟಿ ಪ್ರೆಸಿಡೆಂಡರಿಗೆ ತಾ. ೩-೧-೩೮
ನೆ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟಬೇಕು. ವೆಂಕಾಸಾನಿ ಹಾಗು

ಮಹಮ್ಮಡನ್ ಬರ್ಸರಿ ಫಂಡ ಸ್ಕಾಲರಶಿಪ್ ಪರೀಕ್ಷೆಗಳ ಬಗ್ಗೆ ಫೀ ತುಂಬಬೇಕಾಗಿಲ್ಲ. ಆದರೆ ಈ ಪರೀಕ್ಷೆಯ ಉಮೇದವಾರರು ಅರ್ಜಿಗಳನ್ನು ಆ ತಾರೀಖಿನಿಂದಾಗಿ ಕಳಿಸಬೇಕು.

೩. ಓಪನ್ ಹಾಗು ಸ್ಪೆಶಲ್ ಮಿಡಲ್‌ಸ್ಕೂಲು ಸ್ಕಾಲರಶಿಪ್ ಪರೀಕ್ಷೆಯ ನಿಯಮಗಳ ೩ನೆ ಕಲಮಿನಲ್ಲಿ ಹೇಳಿರುವ ಸಂಗತಿಗಳನ್ನು ಕುರಿತು ಎಲ್ಲ ಪ್ರಾಥಮಿಕ ಶಿಕ್ಷಕರು ಮುಂಚಿತವಾಗಿಯೇ ಎಚ್ಚರಪಡತಕ್ಕದ್ದು.

(೧) ಒಂದು ವರ್ಷದ ವರೆಗೆ ಕ್ರಮವಾಗಿ ಸಾಲೆಯಲ್ಲಿ ಹಾಜರಿ ಇರದೆ ನಡುವೆ ಕೆಲವು ಅವಧಿಯ ವರೆಗೆ ಸಾಲೆಯನ್ನೆ ಬಿಟ್ಟಿರುವ ಪ್ರಸಂಗದಲ್ಲಿ ;

(೨) ಕಲಿಯುತ್ತಿರುವ ಸಾಲೆಯನ್ನು ಬದಲಿಸಿರುವ ಪ್ರಸಂಗದಲ್ಲಿ ಅಥವಾ ಬೇರೆ ಯಾವದಾದರೂ ವಿಷಯದ ಬಗ್ಗೆ ಮೈಸೂರು ಎಜುಕೇಶನಲ್ ಇನಸ್ಪೆಕ್ಟರ ಸಾಹೆಬರವರ ಅಪ್ಪಣೆಯು ಅವಶ್ಯವಿರುವ ಪ್ರಸಂಗದಲ್ಲಿ ಸಕಾಲದಲ್ಲಿಯೇ ಅಪ್ಪಣೆ ಪಡೆದುಕೊಂಡು ಆದ ಮೂಲ ಪ್ರತಿಯನ್ನೇ ಪರೀಕ್ಷೆಯ ಅರ್ಜಿಯಲಗತ ಇಡತಕ್ಕದ್ದು

ಯಾವದೇ ಅಂಶದಲ್ಲಿ ಅರ್ಜಿಯು ಅಪೂರ್ಣವಾಗಿದ್ದರೆ ಅಥವಾ ವೇಳೆಗೆ ಸರಿಯಾಗಿ ಫೀ ಮುಟ್ಟದಿದ್ದರೆ ಯಾವ ಕಾರಣವನ್ನು ಲಕ್ಷಿಸದೆ ಅರ್ಜಿಯನ್ನು ನಿರಾಕರಿಸಲಾಗುವದು.

೪. ಈ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಕಟನೆಯು ಪದ್ಧತಿಗನುಸಾರ ಮುಂಬಯಿ ಗವರ್ಮೆಂಟ ಗ್ಯಾಝಿಟಿನಲ್ಲಿ ಶೀಘ್ರವಾಗಿ ಪ್ರಕಟಿಸಲ್ಪಡುವದು.

ಸೈಯ್ಯದ ನೂರುಲ್ಲಾ
ಎ. ಇ. ದ. ಭಾ.

ನೋಡಿರಿ ! ಜಿಲೆ ತೀರ ಕಡಿಮೆ !! ಹತ್ತೇ ಆಣೆಗಳು !!!

ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ

(ಶ್ರೀ. ಜಿ. ಶ್ರೀ. ಕುಲಕರ್ಣಿ ಕೃತ)

ಗಣಿತ ಸಂಗ್ರಹ

(ಸುಧಾರಿಸಿದ ೨ನೇ ಆವೃತ್ತಿ)

ಇದು ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳ ಕಾಮಧೇನು. ಇದರಲ್ಲಿ ಲ್ಕೀಪರೀಕ್ಷೆಯ ಎಲ್ಲ ಮಾದರಿಯ ಲೆಕ್ಕಗಳನ್ನು ಸುಲಭರೀತಿಗಳಿಂದ ಬಿಡಿಸಿ ರಿದೆ. ಹಾಗೂ ಅಭ್ಯಾಸಕ್ಕೆಂದು ಹೇರಳವಾಗಿ ಉದಾಹರಣೆಗಳನ್ನು ಟ್ಟಿದೆ. ಲ. ಸಾ. ಭಾ. ದೃ. ಭಾ ದಿಂದ ಆರಂಭಮಾಡಿಕೊಂಡು ಎಲ್ಲ ವಿಷಯ ಸಮಾವೇಶವಾಗಿದೆ. ಕಡೆಗೆ ಮಾದರಿಯ ಪ್ರಶ್ನೆಗಳನ್ನೂ, ಶ ವ. ದ ಮುಲ್ಕೀ ಕ್ಷೆಯ ಪ್ರಶ್ನೆಗಳನ್ನೂ ಸೇರಿಸಲಾಗಿದೆ. ಈ ಗ್ರಂಥದ ಉಪಯೋಗವನ್ನು ಾಗಿ ಮಾಡುವದರಿಂದ ಗಣಿತಪರೀಕ್ಷೆಯಲ್ಲಿ ನಾಪಾಸ ಆಗುವವರ ಸಂಖ್ಯೆಯು ಮೆಯಾಗುವದೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ೭ನೇ ಇಯತ್ತಿಗೆ ಿತವಾದ ಇಂಥ ಗ್ರಂಥ ಬೇರೊಂದಿಲ್ಲ. ಕಾರಣ ಇದರ ಉಪಯುಕ್ತತೆಯ ಬಗೆಯುವ ಕಾರಣವಿಲ್ಲ. ತರಿಸಿಕೊಂಡು ಅನುಭವ ಪಡೆಯಿರಿ.

ಪ್ರಕಾಶಕರು— ಆಯ್. ಆರ್. ಆಕಳವಾಡಿ ಎಂಡ ಸನ್ಸ,

ರಾಮಾಶ್ರಯ ಬುಕ್‌ಡಿಪೋ, ಧಾರವಾಡ

ಶ್ರೀ॥ ಕಟ್ಟಿಮನೆಕೃತ

ನ್ನಡ ಬಾಲಬೋಧೆ ಮತ್ತು ಕನ್ನಡ ಶಿಶುಬೋಧೆ

ಈ ಬಾಲಕ ಪಠ್ಯಪುಸ್ತಕಗಳು

ಸರಕಾರದಿಂದ ಮಂಜೂರಾಗಿವೆ. ತಕ್ಷಣ ಬೇಕಾದಲ್ಲಿ ಗ್ರಾಹಕರು ಕೆಳಗಿನ ಸಕ್ಕೆ ಬರೆದು ತರಿಸಿಕೊಳ್ಳಬೇಕು. ರೋಖ ವ್ಯವಹಾರ. ಸಾಕಷ್ಟು ಕಮಿಶನ್.

ಕನ್ನಡ ಬಾಲಬೋಧೆ— ತಜ್ಞರು ಇದನ್ನು ಹಾಡಿ ಹೊಗಳಿದ್ದಾರೆ-

ಬೆಲೆ:— ೭ ಬಿಲ್ಲಿ.

ಕನ್ನಡಶಿಶುಬೋಧೆ (೨ನೇ. ಆ.)— ಗುಂಪಿನ ಪದ್ಧತಿಯಿಂದ ಬರೆದ ೈಮ ಪುಸ್ತಕ.

ಬೆಲೆ:—೫ ಬಿಲ್ಲಿ ಹಾಗೂ ೧ ಆಣೆ.

ಮ್ಯಾನೇಜರ,

ತೋಂಟದಾರ್ಯ ಮುದ್ರಣಾಲಯ, ಧಾರವಾಡ.

Reg. No. B. 3691

ಕನ್ನಡ ವ್ಯಾಕರಣ ಮತ್ತು ಲೇಖನ

ಕ್ರಯ ೦-೪-೦

ಈ ಪುಸ್ತಕವು, ನುರಿತ ಶಿಕ್ಷಕರಾದ ಶ್ರೀ. ಎಸ್. ವ್ಹಿ. ಕಾಮತ, ಬಿ. ಎ. (ಆನ
ಎಸ್. ಟಿ. ಸಿ. ಡಿ. ಇವರಿಂದ ಬರೆಯಲ್ಪಟ್ಟಿತು. ಇದು ಮೆ|| ಡಾಯರೆಕ್ಟರ
ರವರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಬಗ್ಗೆ ಪಠ್ಯಪುಸ್ತ
ಮಂಜೂರಾಗಿದೆ. ಇದರಲ್ಲಿ ಉತ್ತಮವಾದ ಪದ್ಧತಿ ಮತ್ತು ಅಂದವಾದ ಅಚ್ಚ
ತನ ಅಡಕವಾಗಿವೆ. ಬೇಕಾದವರು ಕೆಳಗಿನ ಪತ್ತೆಗೆ ಬರೆಯುವುದು.

ರಾಮರಾವ ಸುಬ್ರಾವ ಕಾಮತ
ಶಿರ್ಸಿ, ಉ. ಕಾನಡಾ

ಪ್ರ ಕ ಟ ನೆ

ಎಲ್ಲ ಕಡೆಗೆ ಬಳಕೆಯಲ್ಲಿರುವ ಪಂ. ಪೂಜಾರಕೃತ ಕನ್ನಡ ವ್ಯಾಕರಣ ಪುಸ್ತಕಗಳು.

೧ನೆಯ ಭಾಗ ನುಡಿಗನ್ನಡಿ. ಪ್ರಾಥಮಿಕ ೩-೪ನೆಯ ಇಯತ್ತೆಗಳಿಗೆ ಬೆಲೆ೦

೨ನೆಯ ಭಾಗ ನುಡಿಗನ್ನಡಿ. ಪ್ರಾಥಮಿಕ ೫ನೆಯ ಇಯತ್ತೆಗೆ ಬೆಲೆ ೦

೩ನೆಯ ಭಾಗ ನುಡಿಗನ್ನಡಿ. ಪ್ರಾಥಮಿಕ ೬-೭ನೆಯ ಇ. ಗಳಿಗೆ ಬೆಲೆ ೦-

ಕವಿಶಿಕ್ಷಣ—೧ನೆಯ ೨ನೆಯ ಭಾಗಗಳಿಗೆ ಚಿಲ್ಲರೆ ೨೦/ರಂತೆ, ರೋಕ
ರಂತೆ, ೩ನೆಯ ಭಾಗಕ್ಕೆ ಚಿಲ್ಲರೆ ೧೫/ರಂತೆ ತೋಕು ೨೦/ರಂತೆ

ಪುಸ್ತಕಗಳು ಎಲ್ಲ ಬುಕ್ ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯ ದೊರೆಯುವವು.

ನವರಿ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಪ್ರಾಥಮಿಕ ಶಿಕ್ಷಣದ ಹೊಸಯೋಜನೆ	೧
೨.	ಅಂತರ್ಮನಸ್ಸಿನ ಅಂತಃಕಲಹ	೧೫
೩.	ಪ್ರಾಥಮಿಕ ಶಾಲೆಗಳಲ್ಲಿಯ ಅಂಕಗಣಿತ ಶಿಕ್ಷಣವು	೨೫
೪.	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆ ೧೯೩೮	೩೨
೫.	೧೯೩೮ನೆಯ ಇಸ್ವಿಯ ಮಾರ್ಚ ತಿಂಗಳಿನಲ್ಲಿ ಆಗುವ ಹೆ. ಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ ಕವ್ಹರಪೇಜ	೨
೬.	೧೯೩೮ನೆಯ ಇಸ್ವಿಯ ಫೇಬ್ರುವರಿ ತಿಂಗಳಿನಲ್ಲಾಗುವ ಮಿಡಲ್ ಸ್ಕೂಲು ಸ್ಕಾಲರಶಿಪ್ ಪರೀಕ್ಷೆಯ ವೇಳಾಪತ್ರಿಕೆ ಕವ್ಹರಪೇಜ	೪

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master
Training, School, Dharwar at his Office.

೧೯೩೭ನೆಯ ಇಸ್ವಿಯ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆ

ತಾರೀಖು	ಸ್ಟಾ. ಇಂದ	ಟಾಯಿಮು ವರೆಗೆ	ವಿಷಯಗಳು	ಗುಣಗಳು
ಸೋಮವಾರ ೭–೩–೩೫ ಸದರ	೧೧	೧೦–೩೫ ಪೂರ್ವಾಹ್ಣ	ಉಮೇದವಾರರ ಹಾಜರಿ ತೆಗೆದುಕೊಳ್ಳುವರು	
ಸದರ	೧೧	೧ ಪರಾಹ್ಣ	೧ನೆಯ ಸದರ (ಬ) ಹಾಗು (ಕ) ದೇಶಭಾಷೆ	ಬ. ೪೫ ಹಾಗು ಕ. ೩೦
ಸದರ	೨	೪ ,,	೨ನೆಯ ಸದರ (ಬ) ಹಾಗು (ಅ) ಉಕ್ತಲೇಖನ ನಿಬಂಧ	ಬ. ೧೫ ಹಾಗು (ಅ) ೬೦
ಮಂಗಳವಾರ ೮–೩–೩೫ ಸದರ	೧೧	೧	೫ನೆಯ ಸದರ ಇತಿಹಾಸ [ಕೈಬರಹ	೭೫
ಸದರ	೨	೪	೬ನೆಯ ಸದರ ಆರೋಗ್ಯಶಾಸ್ತ್ರ	೭೫
ಬುಧವಾರ ೯–೩–೩೫ ಸದರ	೧೧	೨	೩ನೆಯ ಸದರ (ಅ) ಮತ್ತು (ಬ) ಗಣಿತ ಹಾಗು ಮನೆಯ ಜಮಾ ಖರ್ಚು	(ಅ) ೮೦ ಹಾಗು (ಬ) ೨೦
ಸದರ	೩	೫	೪ನೆಯ ಸದರ ಭೂಗೋಲ	೭೫
ಗುರುವಾರ ೧೦–೩–೩೫ ಸದರ	೧೧	೨	೭ನೆಯ ಸದರ ಹೊಲಿಗೆ ಕೆಲಸ	೧೦೦
	೩	೫ ,,	೮ನೆಯ ಸದರ ಐಚ್ಛಿಕ ವಿಷಯಗಳು ಡಾಯಿಂಗ ಪ್ರಕೃತಿವಿಮರ್ಶೆ ಅಥವಾ ಗಾಯನ	೭೫ ಬಾಯಿ ಪರೀಕ್ಷೆ (ಅ) ೩೦ (ಬ) ೨೦

ಸೂಚನೆ:— ೧ನೆಯ ಸದರ (ಅ) ಹಾಗು (ಬ) ಭಾಗದ ಬಾಯಿ ಪರೀಕ್ಷೆಯು ಪ್ರತಿದಿನ ಬರಹದ ಪರೀಕ್ಷೆಯು ಮುಗಿದಬಳಿಕ ಸಾಯಂಕಾಲ ಯೋಗ್ಯ ಕಾಲಾವಧಿಯ ವರೆಗೆ ತೆಗೆದುಕೊಳ್ಳಲಾವೀತು. ಪರೀಕ್ಷೆಗೆ ಬರುವ ಉಮೇದವಾರರ ಸಂಖ್ಯೆಯನ್ನು ಅನುಲಕ್ಷಿಸಿ ಹೊರಗಿನಿಂದ ಬಂದ ವಿದ್ಯಾರ್ಥಿನಿಯರ ಪರೀಕ್ಷೆಯು ಮೊದಲು ತೆಗೆದುಕೊಳ್ಳಲ್ಪಡುವದು; ಆಯಾಸ್ಥಳದ ಸ್ಥಳಿಕ ವಿದ್ಯಾರ್ಥಿನಿಯರು ಅವಶ್ಯಕಂಡರೆ ೧ನೆ ತಾರೀಖು ಶುಕ್ರವಾರ ದಿವಸ ಪರೀಕ್ಷೆಗೆ ಬರಬೇಕು.

ಉಮೇದವಾರರು ಐಚ್ಛಿಕ ೩ ವಿಷಯಗಳಲ್ಲಿ ಒಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಬೇಕು. [illegible]

– संतः स्वयं परहितेषु कृताभियोगाः